ಸಂಪಾದಕ ಮಂಡಲ

ಸಂಚಾಲಕರು. ಶ್ರೀ ಬಿ. ಎಮ್. ಮೀಮಾಂಸಿ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ

ಪ್ರಧಾನ ಸಂಪಾದಕರು: ಶ್ರೀ. ಕೆ. ಜಿ. ಕುರ್ತಕೋಟಿ, ಬಿ.ಎ., ಬಿ.ಟಿ. ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು :

ಶ್ರೀ. ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೬೦	ಅಕ್ಟೋಬರ ೧೯೫೦	ಸಂಚಿಕೆ ೫

– ಪರಿವಿಡಿ –

ಗುಣದಿಂದ ಹೊಲೆಯ .... ಶ್ರೀ. ಪುರಂದರದಾಸರು ೨
ಸಂಪಾದಕೀಯ ೩
ಪಾಳಯಗಾರರು .... ಶ್ರೀ. ಶಿಂತ್ರಿ ಬಸಪ್ಪನವರು ೫
ಅಂಕಗಣಿತ ಶಿಕ್ಷಣದಲ್ಲಿ ಸುಧಾರಣೆ .... ಶ್ರೀ. ತಟ್ಟಿ ಶ್ಯಾಮರಾಯರು ೧೦
ಸೇವಾನಿವೃತ್ತ ಶ್ರೀ. ದೇಸಾಯಿ ರಾಮರಾಯರು ೨೧
ಸೇವಾನಿರತ ಶ್ರೀ. ಕುರ್ತಕೋಟಿ ಕೇಶವರಾಯರು ಜೋಗು ೨೩
ಪ್ರಗತಿ-ಪತ್ರಿಕೆಗಳನ್ನು ತುಂಬುವ ರೀತಿ ೨೫
ಮೂಲಶಿಕ್ಷಣ ಸಾಹಿತ್ಯ ೨೮
ಗಂ. ಟ್ರೇ. ಕಾ. ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರಪರೀಕ್ಷೆಯಲ್ಲಿ ಬಹುಮಾನವಪಡೆದವರು (೧೯೪೯–೫೦) ೩೦
ಹರಿಜನ ದಿನಾಚರಣೆ ಮತ್ತು ಗ್ರಾಮಸುಧಾರಣಾ ಸಪ್ತಾಹ, ಗಂ. ಟ್ರೇ. ಕಾ. ಧಾರವಾಡ ೩೧

ಗುಣದಿಂದ ಹೊಲೆಯರು

ರಾಗ: ಕೇದಾರಗೌಳ. ತಾಳ: ಝಂಪೆ

[ಮಾನ್ಯ ದಿವಾಕರರು ಹರಿಭಕ್ತಿಸುಧೆಯಲ್ಲಿ ಬರೆದಿದ್ದಾರೆ— 'ನಮ್ಮ ಸಮಾಜದಲ್ಲಿ ಈಗ ನೀಚೋಚ್ಚ ಭಾವ, ದ್ವೇಷಾಸೂಯೆಗಳು ಕಂಡುಬರುವವು. ದಾಸರು ವಚನಕಾರರಂತೆಯೇ ಜನ್ಮಕ್ಕೆ, ಜಾತಿಗೆ, ಕುಲಕ್ಕೆ ಮಹತ್ವಕೊಡಬೇಡಿರಿ, ಅವರವರ ಗುಣಕರ್ಮಗಳನ್ನು ನೋಡಿರಿ ಎಂದು ಮಾರ್ಮಿಕವಾಗಿ ಹೇಳುವರು.' ಪುರಂದರದಾಸರ ಈ ಪದ್ಯವು ಉದ್ಬೋಧಕವಾಗಿದೆಯಾದುದರಿಂದ ಇದನ್ನು ಇಲ್ಲಿ ಸ್ಥಳಾಭಾವದ ಮೂಲಕ ಒಂದು ನುಡಿ ಬಿಟ್ಟು ಕೊಟ್ಟಿದೆ]

—ಸಂಪಾದಕರು

ಹೊಲೆಯ ಹೊರಗಿಳಿಹನೆ ಊರೊಳಗಿಲ್ಲವೇ || ಪ ||
ಹೊಲಗೇರಿಯೊಳು ಹೊಲೆಯ ಹೊಲೆತಿಲ್ಲವೇ || ಅ. ಪ ||

ಶೀಲವನು ಕೈಕೊಂಡು ನಡೆಸದಾತನೆ ಹೊಲೆಯ |
ಕೇಳಿ ಸಚ್ಛಾಸ್ತ್ರಗಳ ಹೇಳದವ ಹೊಲೆಯ ||
ಆಳಾಗಿ ಅರಸನೊಳು ಮುನಿವವನೆ ಹೊಲೆಯ |
ಸೂಳೆಯರ ಹೋಗುವವ ಶುದ್ಧ ಹೊಲೆಯಾ || ೧ ||

ಇದ್ದಾಗ ದಾನ-ಧರ್ಮವ ಮಾಡದವ ಹೊಲೆಯ |
ಕದ್ದು ತನ್ನೊಡಲು ಪೊರೆವವನೆ ಹೊಲೆಯ ||
ಪದ್ಧತಿಯ ಬಿಟ್ಟು ನುಡಿಗಳಾಡುವವ ಹೊಲೆಯ |
ಮದ್ದಿಕ್ಕಿ ಕೊಲ್ಲುವವ ಮಾರಿ ಹೊಲೆಯ || ೨ ||

ಆಸೆಯನು ಹುಟ್ಟಿಸಿ ಭಾಷೆ ತಪ್ಪುವವ ಹೊಲೆಯ |
ಲೇಸು ಉಪಕಾರವನು ಅರಿಯದವ ಹೊಲೆಯ ||
ವೀಸ ಕೊಟ್ಟು ಬಹಳ ಕೊಟ್ಟೆನೆಂಬುವ ಹೊಲೆಯ |
ಹೇಸದಲೆ ಹುಸಿಯಾಡುವವ ಹುಚ್ಚುಹೊಲೆಯ | || ೩ ||

ಅರಿತು ಅನ್ಯಾಯವನು ಮರೆಮಾಳ್ಪನೇ ಹೊಲೆಯ |
ಗುರುಹಿರಿಯರೆನ್ನದವ ಹಿರಿಯ ಹೊಲೆಯ ||
ಪರನಿಂದೆ ಆತ್ಮಸ್ತುತಿ ಮಾಡುವವನತಿ ಹೊಲೆಯ |
ಪುರಂದರ ವಿಠಲನೆನ್ನದವ ಪಾಪಿ ಹೊಲೆಯ || ೪ ||

ಸಂಪಾದಕೀಯ

ಹರಿಜನ ದಿನಾಚರಣೆ

ಹಿಂದೂ ಸಮಾಜವು ಅಂತ್ಯಜರನ್ನು ಅತ್ಯಂತ ಕೀಳು ದೃಷ್ಟಿಯಿಂದ ನೋಡುತ್ತಿತ್ತು. ರಾಷ್ಟ್ರಪಿತ ಗಾಂಧೀಜಿಯವರಿಗೆ ಇದು ತೀರ ಅಸಹ್ಯವೆನಿಸಿತು. ಗ್ರಾಮದ, ನಗರದ ಮಾನವಕುಲದ ನೈರ್ಮಲ್ಯವನ್ನು ಕಾಪಾಡುವ ಅಂತ್ಯಜರನ್ನೇ ತುಚ್ಛೀಕರಿಸುವದು, ಅವರನ್ನು ಅಸ್ಪೃಶ್ಯರನ್ನಾಗಿ ಗಣಿಸುವದು ಗಾಂಧೀಜಿಯವರಿಗೆ ವೇದನೆಯನ್ನುಂಟುಮಾಡಿತು. ಇಡಿ ಮಾನವಕುಲದ ಆರೋಗ್ಯವನ್ನು ಕಾಪಾಡುವ ಈ ಜನರ ಮಟ್ಟವನ್ನು ಹೆಚ್ಚಿಸಲು, ಸರ್ವರಿಂದಲೂ ಆದರಣೀಯರನ್ನಾಗಿ ಮಾಡಲು ಅವರು ಪಣತೊಟ್ಟರು. ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮಗಳಲ್ಲಿ ಅಂತ್ಯಜೋದ್ಧಾರವನ್ನು ಸೇರಿಸಿದರು. ಅಂತ್ಯಜರಿಗೆ ಒಂದು ಪರಿಶುದ್ಧವಾದ ಹೆಸರನ್ನು ಕೊಟ್ಟರು. ಅಂತ್ಯಜರು ಹರಿಯಕೃಪೆಗೆ ಪಾತ್ರರಾದವರು ಎಂಬ ವಿಚಾರವನ್ನು ಜನತೆಯಲ್ಲಿ ಮೂಡಿಸುವುದಕ್ಕಾಗಿ ಅವರಿಗೆ **ಹರಿಜನರು** ಎಂದು ಹೆಸರಿರಿಸಿದರು. ಅವರ ಪ್ರಯತ್ನ ಹಾಗೂ ತಪಸ್ಸಿನ ಫಲವಾಗಿ ಇಂದು ಸ್ವತಂತ್ರವಾಗಿರುವ ಭಾರತವು ಅವರ ಈ ಹರಿಜನೋದ್ಧಾರ ಕಾರ್ಯವನ್ನು ಮುಂದುವರಿಸುತ್ತಿದೆ. ಇಡಿ ಭಾರತದಲ್ಲಿ ಹರಿಜನ ದಿನಾಚರಣೆಯನ್ನು ಸಾಂಗಗೊಳಿಸಲಾಗುತ್ತಿದೆ. ಹರಿಜನರು ನಮ್ಮವರು, ಅವರು ಜನತೆಯ ಒಂದು ಅಂಗ. ಅವರು ಸುಖಿಗಳಾಗದ ಹೊರತು ನಮ್ಮ ಭಾರತೀಯ ಸಮಾಜ—ವಿಶೇಷತಃ ಹಿಂದೂಸಮಾಜ ಸುಖಿಯಾಗಲಾರದು. ಅಂತೆಯೇ ಸರಕಾರವೂ ಈ ಹರಿಜನೋದ್ಧಾರ ಕಾರ್ಯಕ್ಕೆ ಪ್ರೋತ್ಸಾಹನೆಯನ್ನೀಯುತ್ತಿದೆ. ತಮ್ಮಲ್ಲಿ ಮನೆಮಾಡಿಕೊಂಡಿರುವ ಅನೈರ್ಮಲ್ಯ, ದುಃಶ್ಚಟಗಳನ್ನು ಹೊಡೆದೋಡಿಸಿಕೊಳ್ಳಬೇಕು, ತಾವೂ ಸರ್ವರಿಗೂ ಸಮಾನರು, ತಮ್ಮ ಕಾಯಕವು ಕೀಳವಲ್ಲ, ತಮ್ಮ ಉದ್ಧಾರಕ್ಕಾಗಿ ಇತರ ಸಮಾಜದವರೂ ಸರಕಾರದವರೂ ಹೆಣಗುತ್ತಿದ್ದಾರೆ, ತಾವು ಎಚ್ಚೆತ್ತು ಶುಚಿತ್ವವುಳ್ಳವರಾಗಬೇಕು, ವಿದ್ಯಾವಂತರಾಗಿ ಬಾಳಬೇಕು ಎಂಬ ಮಾತುಗಳನ್ನು ಅವರ (ಹರಿಜನರ) ಮನದಲ್ಲಿ ಮೂಡಿಸುವದೇ ಈ ಹರಿಜನ ದಿನಾಚರಣೆಯ ಮುಖ್ಯ ಧ್ಯೇಯವಾಗಿದೆ. ಈ ಧ್ಯೇಯವು ಬರಿ ಮಾತಿನಿಂದ ಸಾಧಿಸಲ್ಪಡದೆ ಕೃತಿಯಿಂದ ಸಾಧಿಸಲ್ಪಡಬೇಕು ಎಂಬುದೇ ಈ ಹರಿಜನ ದಿನಾಚರಣೆಯ ಇಂಗಿತ. ಈ ಇಂಗಿತವನ್ನು ಅರಿತು ನಮ್ಮ ಶಿಕ್ಷಕ ಬಂಧುಗಳು ಈ ಹರಿಜನ ದಿನಾಚರಣೆಯ ಒಂದೇ ದಿನ ಹರಿಜನರೊಡನೆ ಚೆನ್ನಾಗಿ ವರ್ತಿಸಬೇಕು ಎಂದು ಅರ್ಥ ಮಾಡಿಕೊಳ್ಳದೇ ಇಂದು ನಡೆದುಕೊಂಡಂತೆಯೇ ದಿನಾಲು ನಡೆದುಕೊಳ್ಳಬೇಕು ಎಂದು ಸೂಚಿಸಬಯಸುತ್ತೇವೆ. ನಿಶ್ಚಿತ ದಿನದ ಹರಿಜನ ದಿನಾಚರಣೆಯು ಕೇವಲ ಮಾರ್ಗದರ್ಶಕ ಮಾತ್ರ ಎಂದು ಬೇರೆ ಹೇಳಬೇಕಾಗಿಲ್ಲ.

ಗ್ರಾಮಸುಧಾರ ಸಪ್ತಾಹ

೧೯೫೦–೧೦–೧ನೆಯ ತಾರೀಖಿನ ದಿನ ಆಚರಿಸಲಾದ ಹರಿಜನೋದ್ಧಾರ ಕಾರ್ಯದಿಂದಲೇ ಒಂದು ಬಗೆಯಿಂದ ಗ್ರಾಮೋದ್ಧಾರ ಸಪ್ತಾಹದ ಪ್ರಾರಂಭವಾಯಿತೆಂದು ಹೇಳಬಹುದು. ಈ ಗ್ರಾಮಸುಧಾರಸಪ್ತಾಹವು ಗಾಂಧೀಜಯಂತಿ ಸಪ್ತಾಹದ ಪ್ರತೀಕ. ಗಾಂಧೀಜಿಯವರಿಗೆ ಹರಿಜನರು ಪ್ರಿಯರಾಗಿದ್ದಂತೆಯೆ ಹಳ್ಳಿಗಳೂ ಪ್ರಿಯವಾಗಿದ್ದವು. ನಿಜವಾದ ಭಾರತವು ಹಳ್ಳಿಯಲ್ಲಿದೆ ಎಂದು ಅವರಿಗೆ ಮನವರಿಕೆಯಾಗಿದ್ದಿತು. ಆದುದರಿಂದ ಭಾರತದ ಮೇಲ್ಮೆಯು ಪ್ರಕಾಶಮಾನವಾಗಬೇಕಾದರೆ ಹಳ್ಳಿಗಳಲ್ಲಿ ವಾಸಿಸುವ ಜನತೆಯ ಜೀವನವು ಸುಸಂಸ್ಕೃತವಾಗುವುದು ಅತ್ಯವಶ್ಯ. ಸುಸಂಸ್ಕೃತಿಗೆ ಶುಚಿಯು ಅಗತ್ಯ. ಯಾವುದೇ ಕೆಲಸವನ್ನು ಕೈಕೊಂಡರೂ ಮೊದಲು ಶುಚಿತ್ವವು ಬೇಕು. ಬಾಹ್ಯಶುಚಿಯು ಅಂತರಂಗದ ಶುಚಿಗೆ ನೆರವಾಗುವುದು. ಆದುದರಿಂದ ಗ್ರಾಮದ ಸ್ವಚ್ಛತೆಯು ಮೊದಲನೆಯ ಹೆಜ್ಜೆ. ಇದು ಮನದ ಸ್ವಚ್ಛತೆಯನ್ನು ಮಾಡು-

ವುದಲ್ಲದ ಮಾನವನ ಆರೋಗ್ಯಕ್ಕೂ ಆಹಾರಕ್ಕೂ ನೆರವಾಗುತ್ತದೆ. ಅದಕ್ಕೋಸ್ಕರವೇ ಗ್ರಾಮದ ಕಸಕಡ್ಡಿಗಳನ್ನು, ಸಗಣಿಯನ್ನು ಕುಣಿ ತೆಗೆದು ಅದರಲ್ಲಿ ಹಾಕಬೇಕು. ಕಸವು ಗೊಬ್ಬರವಾಗಿ ಹುಲುಸಾದ ಪೌಷ್ಟಿಕ ಆಹಾರಧಾನ್ಯಗಳ ಬೆಳೆಗೆ ನೆರವಾಗುವುದು. ಕಸದ ಸದುಪಯೋಗದಿಂದ ಬಂದ ಹುಲುಸಾದ ಬೆಳೆಯು ಮನಸ್ಸನ್ನೂ ಹರುಷಗೊಳಿಸುವದು, ದೇಹವನ್ನೂ ನೆಮ್ಮದಿಯಾಗಿರಿಸುವುದು. ಮನಸ್ಸು ಹಾಗೂ ದೇಹಗಳು ಸರಿಯಾಗಿದ್ದರೇನೇ ಧರ್ಮಸಾಧನೆಯು ಸಫಲವಾಗಬಲ್ಲದು. ಈ ಮಾತು ಗ್ರಾಮಸುಧಾರಣೆಯ ಹಿನ್ನೆಲೆಯಲ್ಲಿದೆ. ಈ ಹಿನ್ನೆಲೆಯನ್ನು ಅರಿತುಕೊಂಡು ನಮ್ಮ ಪ್ರಾಥಮಿಕ ಶಿಕ್ಷಕರು ಈ ಸಪ್ತಾಹದಲ್ಲಿ ಅಷ್ಟೇ ಅಲ್ಲ, ದಿನಾಲು ಸ್ವಲ್ಪ ವೇಳೆಯಾದರೂ ಗ್ರಾಮಸುಧಾರಣೆಯ ಕಾರ್ಯವನ್ನು ಕೈಕೊಳ್ಳುವರೆಂದು ಆಶಿಸಲಾಗಿದೆ.

ಸಾದರ ಸ್ವೀಕಾರ

ಶ್ರೀ. ಗುರುನಾಥ ಜೋಶಿ ಅವರ **ಹಿಂದೀ-ಕನ್ನಡ ಕೋಶ.** (೨೭೦೦೦ ಸಾವಿರಕ್ಕೆ ಮೇಲ್ಪಟ್ಟು ಶಬ್ದಸಂಗ್ರಹ, ೭೦೦ ಪುಟ) ಬೆಲೆ ೫ ರೂಪಾಯಿ.

ಪ್ರಕಾಶಕರು :

ಬಸವೇಶ್ವರ ಪುಸ್ತಕ ಭಾಂಡಾರ,

ಹುಬ್ಬಳ್ಳಿ

ಹೊಸ ಅಭ್ಯಾಸಪತ್ರಿಕೆಗಳು

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ **ಹೊಸ** ಅಭ್ಯಾಸಪತ್ರಿಕೆ. ಬೆಲೆ: ೦-೩-೦. ಶಾರೀರಿಕ ಶಿಕ್ಷಣದ ಅಭ್ಯಾಸಪತ್ರಿಕೆ (೧ರಿಂದ ೭ನೆಯ ಇಯತ್ತೆಯ ವರೆಗೆ) ಬೆಲೆ : ೦-೪-೦ ಸ್ವಲ್ಪ ಪ್ರತಿಗಳು ಮಾತ್ರ ಇವೆ. ಬೇಕಾದವರು ಮುಂಗಡ ಹಣ ಕಳುಹಿಸಿ ತರಿಸಿಕೊಳ್ಳಬೇಕು.

ಕನ್ನಡ : ಪ್ರಾಥಮಿಕ ಶಿಕ್ಷಣ ಕಾರ್ಯಾಲಯ, ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಮಾರಾಟಕ್ಕೆ ಸಿದ್ಧವಾಗಿವೆ! **೧೯೫೬ರ ಹೊಸ ಅಭ್ಯಾಸಪತ್ರಿಕೆಯಂತೆ ರಚಿಸಿದೆ !!**

ಪ್ರಾ. ಶಾ. ಪ್ರ. ವಿದ್ಯಾರ್ಥಿಗಳಿಗೆ ಹಾಗೂ ಟ್ರೇ. ಕಾ. ವಿದ್ಯಾರ್ಥಿಗಳಿಗೆ

ಭಾರತದ ಹೊಸ ರಾಜ್ಯಘಟನೆಯ ರೂಪರೇಷೆಗಳು

ಲೇ: **ಶ್ರೀ. ಬಿ. ಡಿ. ಕರಜಗಿ** B. A. (Hons) B. T.

ಬೆಲೆ: ೦—೮—೦

ಪ್ರಕಾಶಕರು : **ಭಾರತ ಬುಕ್-ಡಿಪ್ಪೊ, ಧಾರವಾಡ.**

★ ಪಾಳೆಯಗಾರರು. ★

(ಕರ್ನಾಟಕದ ಇತಿಹಾಸದಲ್ಲಿ ಅವರಿಗೆ ಸಲ್ಲತಕ್ಕ ಸ್ಥಾನಮಾನಗಳು.)

ಲೇಖಕರು :

ಶ್ರೀಯುತ ಶಿಂತ್ರಿ ಬಸಪ್ಪನವರು, ಬಿ. ಎ. ಬಿ. ಟಿ. ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣ ಭಾಗ ಧಾರವಾಡ.

—

‘ ಪಾಳೆಯಗಾರ ’ ಅಂದರೇನು ?

ಪಾಳೆಯಗಾರರು ಚಿಕ್ಕ ಚಿಕ್ಕ ಸಂಸ್ಥಾನಗಳ ಇಲ್ಲವೆ ಪ್ರಾಂತಗಳ ಒಡೆಯರು. ಇವರು ತಮ್ಮ ಒಡೆತನದ ಪ್ರದೇಶದ ಕಂದಾಯವನ್ನು ಎತ್ತಿ ಅದರಲ್ಲಿ ಬಹುಭಾಗವನ್ನು ತಮ್ಮ ಸಂಸ್ಥಾನದ ಖರ್ಚಿಗಾಗಿ ಇಟ್ಟುಕೊಂಡು ನಿರ್ದಿಷ್ಟ ಪಡಿಸಿದ ಉಳಿದ ಭಾಗವನ್ನು ವರುಷಕ್ಕೊಮ್ಮೆ ಕಪ್ಪ-ಕಾಣಿಕೆಯ ರೂಪದಿಂದ ತಾವು ಅಧೀನರಾಗಿರತಕ್ಕ ಅರಸನಿಗೆ ಸಲ್ಲಿಸುತ್ತಿದ್ದರು. ಇವರ ಹತ್ತರ ಯಾವಾಗಲೂ ಸುಸಜ್ಜಿತವಾದೊಂದು ಸೈನ್ಯವಿರುತ್ತಿತ್ತು. ಯುದ್ಧದ ವೇಳೆಯಲ್ಲಿ ಇಲ್ಲವೆ ಬೇರೆ ಯಾವದಾದರೂ ಪ್ರಸಂಗಗಳಲ್ಲಿ ಚಕ್ರಾಧಿಪನ ಕರೆಯು ಬಂದ ಕೂಡಲೆ ಇವರು ತಮ್ಮ ಸೈನ್ಯದೊಂದಿಗೆ ರಾಜಧಾನಿಗೆ ಹೋಗಿ ಊರ ಹೊರಗೆ ಪ್ರಶಸ್ತವಾಗಿ ಮತ್ತು ನೀರು-ಆಶ್ರಯಗಳ ಸೌಕರ್ಯಗಳುಳ್ಳದ್ದೊಂದು ಬೈಲಿನಲ್ಲಿ ಪಾಳೆಯವನ್ನು ಹಾಕುತ್ತಿದ್ದರು. ಆದುದರಿಂದಲೇ ಇವರಿಗೆ ಪಾಳೆಯಗಾರರೆಂದು ಕರೆಯುವ ರೂಢಿಯು ಬಳಕೆಯಲ್ಲಿ ಬಂದು ಬಿಟ್ಟಿತು. ಯುದ್ಧದಲ್ಲಿ ತಮ್ಮ ಚಕ್ರಾಧಿಪತಿಯ ಆಜ್ಞೆಯ ಮೇರೆಗೆ ಅವರು ನಿಯಮಿಸಿಕೊಟ್ಟ ಸ್ಥಳದಲ್ಲಿ ನಿಂತು ಕಾದಾಡುತ್ತಿದ್ದರು. ರಾಜನಿಷ್ಠೆಯಲ್ಲಿ ಇವರು ಒಳ್ಳೇ ಹೆಸರಾಗಿದ್ದರು. ಯುದ್ಧಗಳಲ್ಲಿ ತಮ್ಮ ತಮ್ಮ ಪರಾಕ್ರಮಗಳನ್ನು ತೋರಿಸಿ ಸಾರ್ವಭೌಮನ ಕಡೆಯಿಂದ ಮೆಚ್ಚುಗೆಗಳನ್ನೂ, ಬಿರುದುಗಳನ್ನೂ, ಇನಾಮುಗಳನ್ನೂ ಪಡೆಯುತ್ತಿದ್ದರು. ಚಕ್ರೇಶ್ವರನು ದುರ್ಬಲನಿದ್ದಿದ್ದರೆ, ಸಮಯ ಸಾಧಿಸಿ ಸ್ವತಂತ್ರರಾಗಿ ತಾವೇ ಅರಸರಂತೆ ಆಳುವ ಹವಣಿಕೆಯಲ್ಲಿರುತ್ತಿರುತ್ತಿದ್ದರು. ಅವನು ಬಲಿಷ್ಠನಿದ್ದರೆ, ಅವನ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಒಳ್ಳೇ ರಾಜನಿಷ್ಠೆಯಿಂದ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು. ವಿಜಯನಗರದ ಅರಸರು ಈ ಪಾಳೆಯಗಾರರನ್ನು ತಮ್ಮ ರಾಜ್ಯದ ಎಲ್ಲೆಡೆಗಳಲ್ಲಿ ಹಮ್ಮಿದ್ದರು. ಅವರ ಕಾಲದಲ್ಲಿಯೇ ಈ ಪಾಳೆಯಗಾರ ಸಂಸ್ಥೆಗೆ ಒಳ್ಳೇ ಪುಷ್ಟಿಯು ದೊರೆಯಿತು. ಹೀಗೆ ಮಾಡುವದರಲ್ಲಿ ಅವರ ಉದ್ದೇಶಗಳು ಎರಡು ತೆರನಾಗಿದ್ದವು. ಮೊದಲನೆಯದು ತಮ್ಮ ರಾಜ್ಯದ ಆಡಳಿತೆಯು ಸುಗಮವಾಗಿಯೂ ಸುಸೂತ್ರವಾಗಿಯೂ ಸಾಗಬೇಕೆಂದಿತ್ತು. ಈ ಪಾಳೆಯಗಾರರು ತಮ್ಮ ತಮ್ಮ ಸಂಸ್ಥಾನಗಳ ರಾಜ್ಯಭಾರವನ್ನು ಉತ್ತಮ ರೀತಿಯಿಂದ ಮಾಡುತ್ತಿದ್ದರು. ಎರಡನೆಯ ಉದ್ದೇಶವು ರಾಜ್ಯದ ಸುಭದ್ರತೆಯು. ಪ್ರತಿಯೊಬ್ಬ ಪಾಳೆಯಗಾರನಲ್ಲಿ ಸುಶಜ್ಜಿತವಾದ ಸೈನ್ಯವಿರುತ್ತಿತ್ತು. ಪರರಾಜರ ದಾಳಿಗಳಾದಲ್ಲಿ ಇವರ ಸಹಾಯವು ಅಮೌಲ್ಯವಾದದ್ದಾಗಿತ್ತು. ಕೆಲವು ಪಾಳೆಯಗಾರರ ಮನೆತನಗಳು ವಿಜಯನಗರದ ರಾಜ್ಯದ ಸ್ಥಾಪನೆಗಿಂತ ಮೊದಲೇ ಇದ್ದವೆಂದು ಅವುಗಳ ಚರಿತ್ರದ ಮೇಲಿಂದ ಗೊತ್ತಾಗುತ್ತದೆ. ಆದಾಗ್ಯೂ ಇವರು ಹೆಚ್ಚಾಗಿ ಬೆಳೆದದ್ದು ವಿಜಯನಗರದವರ ಕುಲದಲ್ಲಿಯೇ ಎಂದು ಹೇಳಬಹುದಾಗಿದೆ.

ಇವರನ್ನು ಬಹುಮಟ್ಟಿಗೆ ಹೋಲುವ ಬೇರೆ ಸಂಸಾನಿಕರು.

ಪಾಳೆಯಗಾರರು ಹೆಚ್ಚಾಗಿ ದಕ್ಷಿಣ ಕರ್ನಾಟಕದಲ್ಲಿದ್ದುದು ಕಂಡುಬರುತ್ತದೆ. ಈಗಿನ ಮೈಸೂರ ಸಂಸ್ಥಾನದಲ್ಲಿ ಆಗಿನ ಕಾಲಕ್ಕೆ ಅಸಂಖ್ಯ ಪಾಳೆಯಗಾರರು ಇದ್ದರು. ಚಿತ್ರದುರ್ಗ, ದಾವಣಗೆರೆ, ಹಾಗಲವಾಡಿ ಮತ್ತು

ಇಕ್ಕೇರಿ (ಕೆಳದಿ) ಇವುಗಳ ಪಾಳಯಗಾರರು ಇವರಲ್ಲಿ ಮುಖ್ಯರು. ಇವರೆಲ್ಲರೂ ತಮ್ಮ ಸಂಸ್ಥಾನಗಳಲ್ಲಿ ಒಂದು ಕೇಂದ್ರ ಸ್ಥಳವನ್ನು ಆಯ್ದುಕೊಂಡು ಅದನ್ನೇ ತಮ್ಮ ಮುಖ್ಯ ಪಟ್ಟಣವನ್ನಾಗಿ ಮಾಡಿಕೊಂಡಿದ್ದರು. ಚಿತ್ರದುರ್ಗ (ಚಿತ್ರಕಲ್ಲದುರ್ಗ), ಹಾಗಲವಾಡಿ ಮತ್ತು ಇಕ್ಕೇರಿ ಇಲ್ಲವೆ ಕೆಳದಿ ಇವೆಲ್ಲ ಮೇಲೆ ಹೇಳಿದಂತೆ ಆಯ್ದುಕೊಂಡ ಕೇಂದ್ರ ಪಟ್ಟಣಗಳೇ ಆಗಿವೆ. ಆ ಪಟ್ಟಣಗಳ ಹೆಸರುಗಳಿಂದಲೇ ಆಯಾ ಪಾಳಯಗಾರರನ್ನು ಕರೆಯಲಿಕ್ಕೆ ಹತ್ತಿದರು. ಈ ಪಟ್ಟಣಗಳೆಲ್ಲ ಈಗಿನ ಮೈಸೂರು ಸಂಸ್ಥಾನದಲ್ಲಿವೆ. ಉತ್ತರ ಕರ್ನಾಟಕದಲ್ಲಿಯೂ ಇಂತಹ ಚಿಕ್ಕ ಚಿಕ್ಕ ಸಂಸ್ಥಾನಿಕರಿದ್ದರು. ಇವರಿಗೆ ದೇಶಾಯಿ (ದೇಸಾಯಿ), ದೇಶಪಾಂಡೆ, ದೇಶಮುಖರೆಂದು ಹೆಸರುಗಳಿದ್ದವು. ಇವರು ದೇಶದ ಒಡೆಯರಿದ್ದುದರಿಂದ ಇವರಿಗೆ ಈ ಹೆಸರುಗಳು ಬಂದಿವೆ. ದೇಶವೆಂದರೆ ಹತ್ತಿಪ್ಪತ್ತು ಹಳ್ಳಿಗಳದೊಂದು ಗುಂಪು. ದೇಶವು ದೊಡ್ಡದಿದ್ದಿದ್ದರೆ, ಅಲ್ಲಿಯ ಒಡೆಯನಿಗೆ ಸರ-ದೇಸಾಯಿ, ಸರದೇಶಪಾಂಡೆ ಇಲ್ಲವೆ ಸರದೇಶಮುಖನೆಂದು ಕರೆಯುತ್ತಿದ್ದರು. ಇವರಾದರೂ ಪಾಳಯಗಾರರಂತೆ ಚಿಕ್ಕ ಸಂಸ್ಥಾನ ಒಡೆಯರಾಗಿ ಯಾವನಾದರೊಬ್ಬ ಬಲಿಷ್ಠ ಅರಸನಿಗೆ ಮಾಂಡಲಿಕರಾಗಿರುತ್ತಿದ್ದರು. ಇವರಲ್ಲಿಯೂ ಸುಸಜ್ಜಿತವಾದೊಂದು ಸೈನ್ಯವಿರುತ್ತಿತ್ತು. ಬಹುತರವಾಗಿ ಪಾಳಯಗಾರರು ಮಾಡುತ್ತಿದ್ದ ಎಲ್ಲ ಕೆಲಸಗಳನ್ನು ಇವರು ಮಾಡುತ್ತಿದ್ದರು. ಬಂಗಾಲದಲ್ಲಿಯ ಜಮೀನದಾರರೂ, ಸಂಯುಕ್ತ ಪ್ರಾಂತದೊಳಗಿನ ತಾಲೂಕದಾರರೂ ಗುಜರಾತ ಮಹಾರಾಷ್ಟ್ರಗಳಲ್ಲಿಯ ಜಹಗೀರದಾರರೂ ಈ ವರ್ಗಕ್ಕೆ ಹೆಚ್ಚುಕಡಿಮೆ ಪ್ರಮಾಣದಿಂದ ಸೇರಿದವರು. ಇವರಾದರೂ ಪಾಳಯಗಾರರಂತೆ ಯುದ್ಧಕಾಲದಲ್ಲಿ ತಮ್ಮ ಚಕ್ರಾಧಿಪತಿಗೆ ತಮ್ಮ ಸೈನ್ಯದೊಂದಿಗೆ ರಾಜನಿಷ್ಠೆಯಿಂದ ಸಹಾಯವನ್ನೀಯುತ್ತಿದ್ದರು. ಯುರೋಪಖಂಡದಲ್ಲಿಯೂ ಸಹ ಇಂತಹದೊಂದು ರಾಜ್ಯಭಾರದ ಯಂತ್ರವು ಆಗಿನ ಕಾಲಕ್ಕೆ ಜಾರಿಯಲ್ಲಿತ್ತು. ಅದಕ್ಕೆ ಫ್ಯೂಡಲ್ ಪದ್ಧತಿಯೆಂಬ ಹೆಸರು. ನಮ್ಮ ಸಂಸ್ಥಾನಿಕರು ಮಾಡುತ್ತಿದ್ದ ಕೆಲಸಗಳನ್ನೆಲ್ಲ ಆ ಫ್ಯೂಡಲ್ ಸರದಾರರು ಮಾಡುತ್ತಿದ್ದರು. ಒಟ್ಟಿನಲ್ಲಿ, ಆ ಕಾಲಕ್ಕೆ ಈ ತರಹದ ಪದ್ಧತಿಯು ಜಗತ್ತಿನ ಎಲ್ಲ ಭಾಗಗಳಲ್ಲಿ ಹರಡಿಕೊಂಡಿತ್ತು.

ಪಾಳಯಗಾರರ ಆಡಳಿತೆ.

ಪ್ರತಿಯೊಬ್ಬ ಪಾಳಯಗಾರನು ತನ್ನ ಚಿಕ್ಕ ಸಂಸ್ಥಾನದಲ್ಲಿ ಒಡೆಯನಂತೆ ಅಥವಾ ಚಿಕ್ಕ ಅರಸನಂತೆ ಆಳುತ್ತಿದ್ದನು. ಇವನಿಗೆ ಜನರು ದೊರೆ ಎಂದು ಕರೆಯುತ್ತಿದ್ದರು. ಮಂತ್ರಾಲೋಚನೆಗಾಗಿ ತನ್ನ ಸಂಸ್ಥಾನದಲ್ಲಿಯ ಪಂಡಿತರನ್ನೂ ಮುಖಂಡರನ್ನೂ ತನ್ನ ಉಪದೇಶಕರನ್ನಾಗಿ ನಿಯಮಿಸಿಕೊಳ್ಳುತ್ತಿದ್ದನು. ಇವರ ಆಪ್ತಾಲೋಚನೆ-ಸಹಾಯ-ಸಹಕಾರಗಳಿಂದ ತನ್ನ ಚಿಕ್ಕ ರಾಜ್ಯದೊಳಗಿನ ದೊಡ್ಡ ದೊಡ್ಡ ಫೌಜದಾರಿ ಮತ್ತು ದಿವಾಣಿ ಖಟ್ಲೆಗಳನ್ನು ತೀರಿಸುತ್ತಿದ್ದನು. ರಾಜಕಾರಣದ ಗಹನ ವಿಷಯಗಳಲ್ಲಿ ಉಪದೇಶಕರ ಅಭಿಮತವನ್ನು ತಕ್ಕೊಳ್ಳದೆ ಒಂದೂ ಕೆಲಸ ಮಾಡುತ್ತಿರಲಿಲ್ಲ. ಬೇರೆ ಬೇರೆ ಖಾತೆಗಳನ್ನು ಮಾಡಿ ಒಂದೊಂದು ಖಾತೆಗೆ ಒಬ್ಬೊಬ್ಬ ಮುಖ್ಯಾಧಿಕಾರಿಯನ್ನು ನಿಯಮಿಸುತ್ತಿದ್ದನು. ಈ ಮುಖ್ಯಾಧಿಕಾರಿಗಳೇ ತಮ್ಮ ತಮ್ಮ ಖಾತೆಗಳಲ್ಲಿಯ ಸಣ್ಣ ಪುಟ್ಟ ದೂರುಗಳನ್ನು ಬಗೆಹರಿಸುತ್ತಿದ್ದರು. ತಮಗೆ ನೀಗದಂಥವುಗಳನ್ನು ಮಾತ್ರ ದೊರೆಯ ಕಡೆಗೆ ಕೊನೆ ನಿರ್ಣಯಕ್ಕಾಗಿ ಕಳಿಸಿ ಕೊಡುತ್ತಿದ್ದರು. ನಿರ್ದಿಷ್ಟಪಡಿಸಿದಷ್ಟೇ ಕಂದಾಯವನ್ನು ಎತ್ತುತ್ತಿದ್ದರು. ಇವರಿಂದ ರೈತರು ಸಂತುಷ್ಟರಾಗಿರುತ್ತಿದ್ದರು. ಕಂದಾಯವನ್ನು ಗೊತ್ತುಪಡಿಸುವಲ್ಲಿ ಇಕ್ಕೇರಿಯ ಶಿವಪ್ಪನಾಯಕನು ಹಾಕಿಟ್ಟ ಪದ್ಧತಿಯನ್ನು ಎಷ್ಟು ಹೊಗಳಿದರೂ ಕಡಿಮೆಯೇ. ತೋಡರಮಲ್ಲನಿಗೂ ಮಿಕ್ಕಿದವನಾಗಿದ್ದನು. ಇಂಗ್ಲೀಷರು ಕೂಡಾ ಅವನ ಪದ್ಧತಿಯನ್ನು ಹೊಗಳಿದುದು ಅಷ್ಟಿಷ್ಟಲ್ಲ. ಪ್ರತಿಯೊಂದು ಊರಲ್ಲಿ ಓಲೇಕಾರರು (ಬೇಹುಗಾರರು) ಇರುತ್ತಿದ್ದರು. ಇವರು ಆ ಊರಿನ ಅಂಚೇಕೆಲಸವನ್ನೂ ಬಂದೋಬಸ್ತಿನ ಕೆಲಸವನ್ನೂ ಮಾಡುತ್ತಿದ್ದರು. ಸರಕಾರದ ಕಾಗದಪತ್ರಗಳನ್ನು ತರುವ ಮತ್ತು ಒಯ್ಯುವ ಜವಾಬುದಾರಿಯು ಇವರ ಮೇಲೆಯೇ ಇರುತ್ತಿತ್ತು. ಈಗಿನ ಪೋಲೀಸರ ಕೆಲಸವನ್ನು ಇವರೇ ಮಾಡುತ್ತಿದ್ದರು. ತನ್ನ ಸಂಸ್ಥಾನದ ಭದ್ರತೆಗಾಗಿ ಬೇಕಾಗುವಷ್ಟು ಸೈನ್ಯವನ್ನು ಯಾವಾಗಲೂ ಇಟ್ಟುಕೊಳ್ಳುತ್ತಿದ್ದನು. ಶೌರ್ಯ-ಸಾಹಸಗಳನ್ನು ತೋರಿಸಿದವರಿಗೆ ಬಹುಮಾನಗಳನ್ನೂ ಉಂಬಳಿ

ಗಳನ್ನೂ ಕೊಡುತ್ತಿದ್ದನು. ನಮ್ಮ ಉತ್ತರ ಕರ್ನಾಟಕ ದೊಳಗಿನ ಸಂಸ್ಥಾನಿಕರೂ ಸಹ ಇದೇ ತರಹದ ರಾಜ್ಯ ಭಾರವನ್ನು ಮಾಡುತ್ತಿದ್ದರೆಂಬ ಮಾತನ್ನು ಹೇಳುವದೇ ಬೇಡ. ಪಾಳಯಗಾರರಲ್ಲಿಯೂ ನಮ್ಮ ಸಂಸ್ಥಾನಿಕ ರಲ್ಲಿಯೂ ಬಹಳಷ್ಟು ಸಾಮ್ಯಗಳಿದ್ದದ್ದು ಕಂಡು ಬರು-ತ್ತವೆ. ಪಶ್ಚಿಮ ಸಮುದ್ರತೀರದ ಪಾಳಯಗಾರರು ಪರದೇಶದವರ ಹಾವಳಿಯನ್ನು ತಡೆಯಲು ಯುದ್ಧದ ಪಡಸುಪಡೆಯನ್ನಿಟ್ಟಿದ್ದರು. ಉದಾಹರಣಾರ್ಥವಾಗಿ ಇಕ್ಕೇರಿಯ ಪಾಳಯಗಾರರು ಮತ್ತು ಜಾಮೋರಿನ್ ಇವರ ಹೆಸರುಗಳನ್ನು ಇಲ್ಲಿ ಕೊಡಬಹುದಾಗಿದೆ. ಇವ-ರಲ್ಲಿ ತಲೆತಲಾಂತರಗಳಿಂದ ನಡೆದುಬಂದ ಒಂದು ವಿಲಕ್ಷಣವಾದ ಪದ್ಧತಿಯಿತ್ತು. ಅದನ್ನು ಇಲ್ಲಿ ಹೇಳಿ-ದರೆ ಅಪ್ರಸ್ತುತವೆನಿಸಬಾರದು. ಯಾವನಾದರೊಬ್ಬ ಪಾಳಯಗಾರನು ಒಬ್ಬನೂ ವಾರಸದಾರನಿಲ್ಲದೆ ತೀರಿ ಕೊಂಡರೆ, ಪಟ್ಟಕ್ಕೆ ಒಬ್ಬನನ್ನು ಆರಿಸಲು ಆನೆಯ ಸೊಂಡಿಗೆ ಒಂದು ಹೂವಿನ ಮಾಲೆಯನ್ನು ಕಟ್ಟಿ ಅದನ್ನು ಹೊರಗೆ ಬಿಟ್ಟುಬಿಡುತ್ತಿದ್ದರು. ಅದು ಯಾರ ಕೊರಳಲ್ಲಿ ಮಾಲೆಯನ್ನು ಹಾಕುವದೋ ಅವನನ್ನು ಪಟ್ಟಕ್ಕೆ ಕುಳ್ಳಿರಿಸಿ ದೊರೆಯನನ್ನಾಗಿ ಮಾಡುತ್ತಿದ್ದರು. ಇಂತಹ ಪ್ರಸಂಗವು ಚಿತ್ರದುರ್ಗದಲ್ಲಿ ಸಂಭವಿಸಿತು. ಮತ್ತಿ ವಂಶದವನು ಮಕ್ಕಳಿಲ್ಲದೆ ಸಾಯಲು, ಆನೆಗೆ ಹೂವಿನ ಮಾಲೆಯನ್ನು ಕೊಟ್ಟರು. ಅದು ಅಡವಿಯಲ್ಲಿ ಕುರಿ ಕಾಯುತ್ತಿದ್ದ ಭರಮಪ್ಪನ ಕೊರಳಲ್ಲಿ ಮಾಲೆಯನ್ನು ಹಾಕಿತು. ಕುರಿ ಕಾಯುತ್ತಿದ್ದ ಭರಮಪ್ಪನು ಸಿಂಹಾಸನ ವೇರಿ ಭರಮಪ್ಪನಾಯಕನಾದನು. ಈ ಸಂದರ್ಭದಲ್ಲಿ 'ತಿರುಕನ ಕನಸು' ಎಂಬ ಪದ್ಯವು ವಾಚಕರ ಜ್ಞಾಪಕಕ್ಕೆ ತಟ್ಟನೆ ಹೊಳೆಯದೆ ಹೋಗಲಾರದು. ಭರಮಪ್ಪ ನಾಯಕನ ಆಳಿಕೆಯಲ್ಲಿ ಚಿತ್ರದುರ್ಗವು ಒಳ್ಳೇ ಪ್ರಸಿ-ದ್ಧಿಗೆ ಬಂದಿತು. ಈತನು ಕೈಹಾಕಿದಲ್ಲೆಲ್ಲ ಜಯದ ಮೇಲೆ ಜಯ !!

ಜನಹಿತದ ಕಾರ್ಯಗಳು.

ಇವರಷ್ಟು ಜನಹಿತದ ಕಾರ್ಯಗಳನ್ನು ಸಾರ್ವಭೌಮ ರನೇಕರು ಮಾಡಿಲ್ಲೆಂದು ಧೈರ್ಯದಿಂದ ಹೇಳಬಹುದು. ಇವರು ಕಟ್ಟಿಸಿದ ದೊಡ್ಡ ದೊಡ್ಡ ಕೆರೆಗಳು ಅಸಂಖ್ಯ ವಾಗಿವೆ. ಇವೆಲ್ಲ ಈಗಿನ ಮೈಸೂರು ಸಂಸ್ಥಾನದಲ್ಲಿವೆ. ಭೀಮ ಸಮುದ್ರದ ಕೆರೆ, ಅಬ್ಬನಾಯಕನಹಳ್ಳಿ ಕೆರೆ, ಭರಮಸಾಗರದ ಕೆರೆ, ನಾಯಕನಹಟ್ಟಿ ಹಿರಿಕೆರೆ, ಇವು ಮುಖ್ಯವಾದವುಗಳು. ಇಂತಹ ಕೆರೆಗಳನ್ನು ಕಟ್ಟಿಸಿ ಪ್ರಜರಿಗೂ ಕೃಷಿಕರ್ಮಕ್ಕೂ ಅವರು ಸಲ್ಲಿಸಿದ ಸೇವೆಯು ಅಪಾರವಾದುದಾಗಿದೆ. ಅಲ್ಲಿಯ ರೈತರು ಇನ್ನೂ ವರೆಗೂ ಅವರನ್ನು ಹಾಡಿಹರಸುತ್ತಾರೆ. ಅದರಂತೆಯೇ ನಮ್ಮಲ್ಲಿಯ ಶಿರಸಂಗಿಯ ದೇಸಾಯಿಣಿಯರು ತಮ್ಮ ತಮ್ಮ ಹೆಸರಿನಿಂದ ಕಟ್ಟಿಸಿದ ಎರಡು ಮೂರು ದೊಡ್ಡ ದೊಡ್ಡ ಕೆರೆಗಳು ನವಲಗುಂದದ ಬಳಿಯಲ್ಲಿವೆ. ನವಲ ಗುಂದದಂತಹ ನಿರ್ಜಲ ಪ್ರದೇಶದಲ್ಲಿ ಕೆರೆಗಳನ್ನು ಕಟ್ಟಿಸಿ ಅವರು ಯಶೋಭಾಗಿಗಳಾಗಿದ್ದಾರೆ. ನವಲಗುಂದದ ದೊಡ್ಡ ಸೀ ನೀರಿನ ಹೊಂಡವು ಒಬ್ಬ ದೇಸಾಯಿಣಿಯು ಕಟ್ಟಿಸಿದ್ದಾಗಿದೆ. ಆದರೂ, ಮೈಸೂರು ಸಂಸ್ಥಾನದಲ್ಲಿ ದ್ದಷ್ಟು ಕೆರೆಗಳು ಬೇರೆ ಯಾವ ಪ್ರಾಂತದಲ್ಲಿಯೂ ಇಲ್ಲ. ಆ ಸಂಸ್ಥಾನವು ಬರಗಾಲಕ್ಕೆ ತುತ್ತಾಗದೆ ಸಮೃ-ದ್ಧವಾಗಿರುವದರ ಮೂಲ ಕಾರಣವು ಇದುವೇ ಆಗಿದೆ ಯೆಂದು ತೋರುತ್ತದೆ. ಇದರ ಶ್ರೇಯಸ್ಸೆಲ್ಲ ಈ ನಮ್ಮ ಈ ಪಾಳಯಗಾರರಿಗೇ ಹೋಗಬೇಕಲ್ಲವೇ ? ವ್ಯಾಪಾರ ವನ್ನು ಹೆಚ್ಚಿಸುವದಕ್ಕಾಗಿ ಮತ್ತು ಸೈನ್ಯದ ಓಡಾಟದ ಸಲುವಾಗಿ ಮಾರ್ಗಗಳನ್ನು ಮಾಡಿಸಿ ಎರಡೂ ಬದಿಗೆ ಗಿಡಗಳನ್ನು ಹಚ್ಚಿಸಿದರು. ಗುಡಿ-ಗುಂಡಾರಗಳನ್ನೂ ಧರ್ಮಶಾಲೆಗಳನ್ನೂ, ಅನ್ನಛತ್ರಗಳನ್ನೂ ಕಟ್ಟಿಸಿದರು. ಊರೂರಿಗೆ ಕೋಟೆ-ಕೊತ್ತಲಗಳನ್ನೂ ಬುರುಜು ಗಳನ್ನೂ ಗುಡ್ಡಗಳಿದ್ದಲ್ಲಿ ದುರ್ಗಗಳನ್ನೂ ಕಟ್ಟಿಸಿದರು. ಚಿತ್ರದುರ್ಗದ ಮೂರು ಸುತ್ತಿನ ಕೋಟೆಯು ವನಕೆ ಕಿಂಡಿ ಬಾಗಿಲೂ ಅರಮನೆಯೂ ನೋಡತಕ್ಕಂತಹವು ಇವೆ. ಅದರಂತೆಯೇ ನಮ್ಮಲ್ಲಿಯ ಸಂಸ್ಥಾನಿಕರು ಕಟ್ಟಿಸಿದ ಕಿತ್ತೂರ ಕಿಲ್ಲೆ, ನರಗುಂದ ಗುಡ್ಡದ ಮೇಲಿನ ಕೋಟೆ, ಗಜೇಂದ್ರಗಡದ ಕೋಟೆ ಇವೂ ಸಹ ನೋಡ ತಕ್ಕಂತಹವು ಇವೆ. ಮೈಸೂರು ಸಂಸ್ಥಾನದಲ್ಲಿ ಈಗ ಅಲ್ಲಲ್ಲಿ ಕಂಡುಬರುವ ಗಿಡಗಳ ತೋಪುಗಳು ಪಾಳಯ ಗಾರರಿಂದ ನೆಟ್ಟು ಬೆಳೆಯಿಸಿದವುಗಳಾಗಿವೆ. ಕನ್ನಡ ನಾಡಿನ ಸೇವೆ ಮಾಡಿದಂತೆ ನುಡಿಯ ಸೇವೆಯನ್ನೂ ಯಥೇಚ್ಛವಾಗಿ ಎಷ್ಟೋ ಪಾಳಯಗಾರರು ಮಾಡಿ-ದ್ದಾರೆ. ತಮ್ಮ ಸಂಸ್ಥಾನದಲ್ಲಿಯ ವಿದ್ವಾಂಸರಿಗೆ ರಾಜಾ-

ಶ್ರಯುವನ್ನು ಕೊಟ್ಟಿದ್ದಾರೆ. ಕೆಲವರಂತೂ ತಾವೇ ವಿದ್ವಾಂಸರಿದ್ದು ಎಷ್ಟೋ ಗ್ರಂಥಗಳನ್ನು ಬರೆದಿದ್ದಾರೆ.

ಕೆಲ ನಾಮಾಂಕಿತ ಪಾಳೆಯಗಾರರ ಅಲ್ಪ ಪರಿಚಯ

ಇಲ್ಲಿಯ ವರೆಗೆ ಸ್ಥೂಲಮಾನದಿಂದ ಪಾಳೆಯಗಾರರ ಸಂಸ್ಥೆಯ ಬಗೆಗೆ ಬರೆದದ್ದಾಯಿತು. ಇನ್ನುಮೇಲೆ ಕೆಲವು ಗಣ್ಯ ವ್ಯಕ್ತಿಗಳ ವಿಷಯವಾಗಿ ನಮಗೆ ದೊರೆತ ಅಲ್ಪಸ್ವಲ್ಪ ಸಂಗತಿಗಳನ್ನು ವಿವರಿಸುವೆವು:—

ಹಾಗಲವಾಡಿಯ ರಾಜರ್ಷಿ:— ಈತನ ಹೆಸರು ಇಮ್ಮಡಿ ಮುದಿಯಪ್ಪನಾಯಕ. ಈತನು ಘನ ವಿದ್ವಾಂಸನು. ತನ್ನ ಓಲಗಕ್ಕೆ ಬಂದ ಎಲ್ಲ ಮತಗಳ ವಿದ್ವಾಂಸರಿಗೆ ಉಂಬಳಿ ಗ್ರಾಮಗಳನ್ನು ಕೊಟ್ಟನು. ವೇದಾಂತ ಮತ್ತು ತಾತ್ವಿಕ ವಿಷಯಗಳ ಬಗೆಗೂ ಕಾಲ ಜ್ಞಾನ ಸೂಚನೆಗಳ ಬಗೆಗೂ ಒಟ್ಟಿಗೆ ಏಳು ನೂರು ಗ್ರಂಥಗಳನ್ನು ಬರೆದಿದ್ದಾನೆ. ಪ್ರಜೆಗಳ ನೈತಿಕ ಮಟ್ಟ ವನ್ನು ಎತ್ತರಿಸಲು ನುರಿತ ವಿದ್ವಾಂಸರನ್ನು ನಿಯಮಿಸಿ ತನ್ನ ರಾಜ್ಯದಲ್ಲಿ ಜನರಿಗೆ ಉಪದೇಶ ಮಾಡುತ್ತ ಸಂಚಾರ ಮಾಡಲು ಅವರಿಗೆ ಅಪ್ಪಣೆ ವಿಧಿಸಿದ್ದನು. ನುಡಿಯ ಬಲುವಾಗಿ ಈತನು ಸಲ್ಲಿಸಿದ ಸೇವೆಯು ಅಷ್ಟಿಷ್ಟಲ್ಲ. ತನ್ನ ರಾಜ್ಯದಲ್ಲಿ ಸಂಗೀತ ವಿದ್ಯೆಯನ್ನು ಹೆಚ್ಚಿಸಲು ಹೆಸರಾದ ಸಂಗೀತಗಾರರನ್ನು ನಿಯಮಿಸಿ ಜನರಿಗೆ ಸಂಗೀತ ವಿದ್ಯೆಯನ್ನು ಕಲಿಸುತ್ತ ಸಂಚಾರ ಮಾಡಲು ಆಜ್ಞೆ ಮಾಡಿದ್ದನು. ಮೈಸೂರು ಸಂಸ್ಥಾನವು ಸಂಗೀತ ಕಲೆಯಲ್ಲಿ ಮುಂದುವರಿದುದರ ಶ್ರೇಯಸ್ಸಿನ ಬಹು ಭಾಗವು ಈ ರಾಜರ್ಷಿಗೆ ಸಲ್ಲುತ್ತದೆಂದರೆ ಅದು ಅತಿ ಶಯೋಕ್ತಿಯಾಗಲಾರದೆಂದು ನಮ್ಮ ನಂಬುಗೆ. ಅನೇಕ ತೋಪುಗಳನ್ನೂ ಕೆರೆ-ಬಾವಿಗಳನ್ನೂ ಕಟ್ಟಿಸಿದನು. ಬಂದೀಖಾನೆಯಲ್ಲಿದ್ದ ಕೈದಿಗಳಿಗೆ ದಿನಾಲು ಎಮ್ಮೆ ಮೊಸರು, ಘಮ್ಮಕ್ಕಿ ಅನ್ನ ಊಟಕ್ಕೆ ಹಾಕು ವಂತೆಯೂ, ಹಾಸಲೊಂದು ಹೊತ್ತು ಕೊಳ್ಳ ಲೊಂದು ಹೀಗೆ ಎರಡು ಕಂಬಳಿಗಳನ್ನು ಪ್ರತಿಯೊಬ್ಬ ನಿಗೆ ಕೊಡುವಂತೆಯೂ ವ್ಯವಸ್ಥೆ ಮಾಡಿದ್ದನು. ಶಿಕ್ಷೆಯ ಅವಧಿಯು ಮುಗಿದ ಮೇಲೆ ಪ್ರತಿಯೊಬ್ಬ ಕೈದಿಯನ್ನು ಮಂತ್ರಿಗಳು ಕರೆಯಿಸಿಕೊಂಡು ಅವನಲ್ಲಿ ವಿವೇಕವು ಹುಟ್ಟುವಂತೆ ಚನ್ನಾಗಿ ಬುದ್ಧಿ ಹೇಳಿ ಬಿಡುಗಡೆ ಮಾಡಲು ಕಟ್ಟಪ್ಪಣೆ ಮಾಡಿದ್ದನು. ಈಗಿನ ಜೇಲು ಗಳಲ್ಲಿ ಕಂಡುಬರುವ ಸುಧಾರಣೆಗಳನ್ನು ಮಿಕ್ಕುವಂತವು ಗಳನ್ನು ಈತನು ಹದಿನೇಳನೆಯ ಶತಮಾನದಲ್ಲಿಯೇ ಬಳಕೆಯಲ್ಲಿ ತಂದಿದ್ದನು. ಕಾಶಿಯಿಂದ ಮುದ್ದು ವೀರಸ್ವಾಮಿಗಳೆಂಬ ಜಂಗಮ ಶ್ರೇಷ್ಠರನ್ನು ಕರೆಯಿಸಿ ಕೊಂಡು ಅವರಿಂದ ಮಂತ್ರೋಪದೇಶವನ್ನು ಹೊಂದಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದನು. ಇಪ್ಪತ್ತು ವರುಷ ಗಳ ವರೆಗೆ ಎಲ್ಲರೂ ತಲೆದೂಗುವಂತೆ ಒಳ್ಳೇ ಪ್ರಜಾ ರಂಜಕನಾಗಿ ಆಡಳಿತೆಯನ್ನು ಸಾಗಿಸಿದನು. ರಾಜ್ಯ ಭಾರವನ್ನು ತನ್ನ ಹಿರಿ ಮಗನಿಗೆ ಒಪ್ಪಿಸಿ ತಾನು ಸನ್ಯಾಸಿ ಯಾಗಿ ಸಂಚಾರ ಮಾಡುತ್ತ ಹೋದಲ್ಲೆಲ್ಲ ಜನರ ಮನ ವನ್ನು ನೈತಿಕ ಮಾರ್ಗದತ್ತ ಎಳೆಯುತ್ತ ಯಾತ್ರಾರ್ಥ ವಾಗಿ ಹೊರಟುಹೋದನು. ಇದರ ಮೇಲಿಂದ ಇವ- ನೆಂತಹ ರಾಜರ್ಷಿಯಾಗಿದ್ದಾನೆಂಬದನ್ನು ವಾಚಕರೆ ಊಹಿಸಬೇಕು. ರಾಮ, ನಳ, ಧರ್ಮರಾಜ, ಹರಿಶ್ಚಂದ್ರ ಮೊದಲಾದ ರಾಜಯೋಗಿಗಳ ಮಾಲಿಕೆಯಲ್ಲಿ ರಾರಾ- ಜಿಸಲು ಈತನು ತುಂಬಾ ಯೋಗ್ಯನೆಂದೇ ನಮ್ಮ ಅಭಿ ಮತವು.

ಇಕ್ಕೇರಿ (ಕೆಳದಿ)ಯ ದೊಡ್ಡ ಸಂಕಣ್ಣನಾಯಕ:— ಈತನು ಒಳ್ಳೇ ಪರಾಕ್ರಮಿಯು. ಒಳ್ಳೇ ದರ್ಪದಿಂದಲೂ ವೈಭವದಿಂದಲೂ ರಾಜ್ಯವಾಳಿದನು. ತೀರ್ಥಯಾತ್ರೆ ಮಾಡಬೇಕೆಂಬ ಹಂಬಲವು ಈತನಲ್ಲಿ ಹುಟ್ಟಿತು. ರಾಜ್ಯ ಭಾರವನ್ನೆಲ್ಲ ತನ್ನ ತಮ್ಮನಿಗೆ ಒಪ್ಪಿಸಿ ತನ್ನಗೂಡ ಕೆಲವು ಪರಿವಾರದವರನ್ನು ಕರಕೊಂಡು ಪಾದಚಾರಿಯಾಗಿ ಸನ್ಯಾಸಿಯಂತೆ ಕೆಂಪು ಬಟ್ಟೆಗಳನ್ನು ಹೊದ್ದುಕೊಂಡು ಕಾಶಿಗೆ ನಡೆದನು. ಸಂಚಾರ ಮಾಡುತ್ತ ಮಾಡುತ್ತ ದಿಲ್ಲಿಗೆ ಹೋದನು. ಅಲ್ಲಿ ಆಗ ಅಕಬರ ಬಾದಶಹನು ಆಳುತ್ತಿದ್ದನು. ಸುಂದರವಾದ ಕಟ್ಟಡಗಳನ್ನು ನೋಡುತ್ತ ನೋಡುತ್ತ ಅರಮನೆಯ ಹೆಬ್ಬಾಗಿಲಿಗೆ ಬಂದನು. ಅಲ್ಲಿ ಒಂದು ಹತ್ಯಾರವನ್ನು ಕಟ್ಟಿಟ್ಟಿದ್ದರು. ಅದನ್ನು ಯಾವಾತನು ಕಿತ್ತು ತೆಗೆಯುವನೋ ಅವನು ಬಾದಶಹನಲ್ಲಿದ್ದ ಅಂಕುಶಖಾನನೆಂಬ ಶೂರನೆಗೂಡ ದ್ವಂದ್ವ ಯುದ್ಧ ಮಾಡಬೇಕೆಂದು ಕರಾರು ಇತ್ತು. ಸಂಕಣ್ಣನು ಹುಟ್ಟಾ ಪರಾಕ್ರಮಿಯು. ತಾನು ಸನ್ಯಾ- ಸಿಯ ವೇಷದಲ್ಲಿದ್ದದ್ದನ್ನು ಮರೆತುಬಿಟ್ಟನು. ಈ ಪಣ-

ವನ್ನು ಕೇಳಿದ ಕೂಡಲೆ ಅವನ ತಲೆ ತಿರುಗಿತು. ಕೂಡಲೆ ತನ್ನ ಪರಿವಾರದವರಿಂದ ಆ ಕತ್ತಿಯನ್ನು ಕಿತ್ತಿಸಿಬಿಟ್ಟನು. ಕಾಳಗದ ಸಲುವಾಗಿ ಒಂದು ದಿನವು ನಿಯಮಿಸಲ್ಪಟ್ಟಿತು. ಇಬ್ಬರೂ ಖಡ್ಗ ಹಿಡಿದುಕೊಂಡು ನಿಯಮಿತ ವೇಳೆಗೆ ಸರಿಯಾಗಿ ಮಲ್ಲಯುದ್ಧಕ್ಕೆ ಸಜ್ಜಾಗಿ ನಿಂತರು. ಬಾದಶಹನು ನೋಡಲು ಬಂದನು. ಊರೊಳಗಿನ ಜನರಂತೂ ಕಿಕ್ಕಿರಿದು ನೆರೆದಿದ್ದರು. ಇಬ್ಬರೂ ಕತ್ತಿಯನ್ನು ಹೇಗೆ ತಿರುಗಿಸಿದರೋ ಹೇಗೆ ಹೊಡೆದಾಡಿದರೋ ಎಂಬುದು ಅಲ್ಲಿ ನೋಡಲು ನೆರೆದವರಲ್ಲಿ ಒಬ್ಬರ ಕಣ್ಣಿಗೂ ಕಾಣದೇ ಹೋಯಿತು. ಅಷ್ಟು ರಭಸದಿಂದ ಕತ್ತಿಯನ್ನು ತಿರುಗಿಸುವದೂ ಹೊಡೆದಾಡುವದೂ ನಡೆದಿತ್ತು. ಹೀಗೆ ಹೊಡೆದಾಡುತ್ತಿರುವಾಗ ಇಬ್ಬರೂ ಗಕ್ಕನೆ ಸುಮ್ಮನೆ ನಿಂತುಬಿಟ್ಟರು. ಬಾದಶಹನು ಇದನ್ನು ನೋಡಿ "ಯಾಕೆ, ಸುಮ್ಮನೆ ನಿಂತುಬಿಟ್ಟೆಯಲ್ಲ? ಖಾನನಗೂಡ ಕಾದುವದು ನಿನ್ನ ಕೈಯಿಂದ ಆಗುವದಿಲ್ಲವೋ" ಎಂದು ಸಂಕಣ್ಣನಿಗೆ ಜರಿದು ನುಡಿದನು. ಅದಕ್ಕೆ ಕನ್ನಡ ವೀರನು "ನಾನು ಸತ್ತ ಹೆಣದಗೂಡ ಯುದ್ಧ ಮಾಡುವ ಹೇಡಿಯಲ್ಲ" ಎಂದು ಮಾರುನುಡಿದು ಕಣ್ಣುಬಿಟ್ಟುಗೊಂಡು ಸುಮ್ಮನೆ ನಿಂತಿದ್ದ ಖಾನನ ಮೃತದೇಹವನ್ನು ತನ್ನ ಕತ್ತಿಯ ತುದಿಯಿಂದ ತಿವಿದನು. ಕೂಡಲೆ ಇಭ್ಭಾಗವಾಗಿ ಖಾನನ ಮುಂಡವು ಧಪ್ಪೆಂದು ನೆಲಕ್ಕೆಬಿದ್ದಿತು. ಟೊಂಕದಲ್ಲಿ ಕೊಯ್ದು ಎರಡು ಭಾಗವಾಗಿದ್ದರೂ, ಖಾನನ ಮೃತ ದೇಹವು ಒಂದೇ ಶರೀರದಂತೆ ನಿಂತುಬಿಟ್ಟಿತು! ಕತ್ತಿಯನ್ನು ತಿರುಗಿಸುತ್ತ ಹೊಡೆದಾಡುವದರಲ್ಲಿ ಅವನು ಎಂತಹ ನೈಪುಣ್ಯವನ್ನು ಪಡೆದಿದ್ದನೋ ಏನೊ ದೇವರೇ ಬಲ್ಲ!! ನೆರೆದ ಜನರೆಲ್ಲ ಹೌಹಾರಿ ಬೆರಳು ಕಚ್ಚಿದರು. ಬಾದಶಹನು ದಂಗುಬಡಿದು ಕುಳಿತನು. ಸಂಕಣ್ಣನ ಪರಾಕ್ರಮವನ್ನು ಬಾಯಿತುಂಬ ಹೊಗಳಿ ಹೆಚ್ಚಿನ ಬಹುಮಾನವನ್ನು ಕೊಟ್ಟು ಅವನ ಆತ್ಮರಕ್ಷಣೆಗೆ ಸಾಕಷ್ಟು ಸೈನ್ಯವನ್ನೂ ಹೇರಳ ಸಾಮಗ್ರಿಗಳನ್ನೂ ಹಣವನ್ನೂ ಕೊಟ್ಟು ಬಾದಶಹನು ಅವನನ್ನು ಕಾಶಿಗೆ ಬೀಳ್ಕೊಟ್ಟನು.

ಸಂಕಣ್ಣನು ಖಡ್ಗದಲ್ಲಿ ನೈಪುಣ್ಯವನ್ನು ದೊರಕಿಸಿದಂತೆ ಚಿತ್ರದುರ್ಗದ ಮೂಲಪುರುಷನಾದ ತಿಮ್ಮಣ್ಣನಾಯಕನು ಬಿಲ್ಲು-ಬಾಣಗಳಲ್ಲಿ ಒಳ್ಳೇ ಕೌಶಲ್ಯವನ್ನು ಸಂಪಾದಿಸಿದ್ದನು. ಕೆಳದಿ (ಇಕ್ಕೇರಿ)ಯ ಚನ್ನಮ್ಮಾಜಿಯ ಧೈರ್ಯ-ಸಾಹಸಗಳು ವಾಚಕರಿಗೆ ಈ ಮೊದಲೇ ಗೊತ್ತಿರಲು ಸಾಕು. ಇಂತಹ ಪರಾಕ್ರಮಗಳನ್ನು ವಿವರಿಸುತ್ತ ಹೋದರೆ, ಅದೊಂದು ದೊಡ್ಡ ಪುರಾಣವೇ ಆಗಬಹುದು. ಸ್ಥಳಾಭಾವದ ಮೂಲಕ ಇದನ್ನು ಇಷ್ಟಕ್ಕೇ ವಿರಮಿಸಿ ಬಿಡುತ್ತೇವೆ. ನಮ್ಮ ಉತ್ತರ ಕರ್ನಾಟಕದ ಸಂಸ್ಥಾನಿಕರಲ್ಲೂ ಸಹ ಇಂತಹ ಪರಾಕ್ರಮಗಳ ಮತ್ತು ಪ್ರಜಾನುರಾಗದ ಆಡಳಿತೆಗಳ ಪರಂಪರೆಯು ಅವ್ಯಾಹತವಾಗಿ ನಡೆದಿತ್ತೆಂಬದನ್ನು ಈ ಸಂದರ್ಭದಲ್ಲಿ ಹೇಳುವದೇ ಬೇಡ.

ಕೊನೆಯ ಮಾತು

ದಕ್ಷಿಣ ಕರ್ನಾಟಕದೊಳಗಿನ ಪಾಳಯಗಾರರೂ ದೇಸಾಯಿ ಮೊದಲಾದವರೂ ಚಿಕ್ಕ ಚಿಕ್ಕ ಸಂಸ್ಥಾನಿಕರಂತೆ ಆಳಿದುದು ನಿಜ. ಸಂಸ್ಥಾನಗಳು ಚಿಕ್ಕವಾದರೂ, ಸಂಸ್ಥಾನಿಕರು ತೋರಿದ ಪರಾಕ್ರಮಗಳು ಚಿಕ್ಕವಾಗಬಲ್ಲವೇ? ಅವರ ಲೋಕಪ್ರಿಯ ಆಡಳಿತೆಗಳನ್ನು ಕಡೆಗಣಿಸಲು ಒಪ್ಪುವದೇ? ಅವರು ಮಾಡಿದ ಜನಹಿತದ ಕಾರ್ಯಗಳನ್ನು ಕೀಳೆಂದು ಭಾವಿಸಬಲ್ಲೆವೇ? ಕನ್ನಡ ನಾಡು-ನುಡಿಗಳಿಗಾಗಿ ಅವರು ಸಲ್ಲಿಸಿದ ಸೇವೆಯು ಕಿರಿದಾಗಬಹುದೇ? ದೊಡ್ಡ ದೊಡ್ಡ ಸಮ್ರಾಟರು ಮಾಡದಂತಹ ಸುಧಾರಣೆಗಳನ್ನು ಈ ಚಿಕ್ಕ ಸಂಸ್ಥಾನಿಕರು ಮಾಡಿ ತೋರಿಸಿದ್ದಾರೆ. ಮೂರ್ತಿಯು ಸಣ್ಣದಿದ್ದರೂ ಕೀರ್ತಿಯು ದೊಡ್ಡದಿದೆಯಲ್ಲವೆ? ಆಕಳು ಕಪ್ಪಾದರೆ, ಹಾಲು ಕಪ್ಪೇ? ಈ ಚಿಕ್ಕ ಸಂಸ್ಥಾನಿಕರು ನಮ್ಮ ತಾಯ್ನಾಡಿನ ಸರ್ವತೋಮುಖವಾದ ಸಂಸ್ಕೃತಿಯನ್ನು ಹೆಚ್ಚಿಸಿದ್ದಕ್ಕಾಗಿ, ನಮ್ಮ ಕನ್ನಡ ನಾಡಿನ ಇತಿಹಾಸದಲ್ಲಿ ಸಮ್ರಾಟರಿಗಿಂತಲೂ ಅವರಿಗೆ ಹೆಚ್ಚಿನ ಸ್ಥಾನಮಾನಗಳು ಮೀಸಲಾಗಿರಬೇಕು.

ನಾಲ್ಕನೆಯ ಇಯತ್ತೆಗೆ ಕರ್ನಾಟಕದ ಇತಿಹಾಸವನ್ನು ಕಲಿಸುವ ಶಿಕ್ಷಕ-ಶಿಕ್ಷಕಿಯರಿಗೆ ಉಪಯುಕ್ತವಾದ ವಿಷಯಗಳು ಇದರಲ್ಲಿ ಅಡಕವಾಗಿವೆ. ಕ್ರಮಿಕ ಪುಸ್ತಕಗಳಲ್ಲಿ ಕಾಣದ ಸಂಗತಿಗಳನ್ನಷ್ಟೇ ಎತ್ತಿ ಈ ಲೇಖದಲ್ಲಿ ಕೊಡಲಾಗಿದೆ. ಶಿಕ್ಷಕ-ಶಿಕ್ಷಕಿಯರು ಈ ಲೇಖವನ್ನು ಓದಿ ಇದರಲ್ಲೊಳಗೊಂಡ ಸಂಗತಿಗಳ ಜ್ಞಾನವನ್ನು ತಮ್ಮಲ್ಲಿ ಕಲಿಯುವ ಮಕ್ಕಳಿಗೆ ಮಾಡಿಕೊಡಬೇಕೆಂಬುದು ಈ ಲೇಖದ ಉದ್ದೇಶವು.

ಈ ವಿಷಯದ ಬಗೆಗೆ ಇದಕ್ಕೂ ಹೆಚ್ಚಿನ ಮಾಹಿತಿ ಬೇಕಾದವರು ಶ್ರೀಯುತ ಎಂ. ಎಸ್. ಪುಟ್ಟಣ್ಣ ಬಿ.ಎ. ಅವರ ಐದು ಉಪನ್ಯಾಸಗಳ ಹೊತ್ತಿಗೆಯಲ್ಲಿ ಕಾಣಬಹುದು.

ಅಂಕಗಣಿತ ಶಿಕ್ಷಣದಲ್ಲಿ ಸುಧಾರಣೆ

ಲೇಖಕರು:
ಶ್ರೀ. ತಟ್ಟಿ ಶಾಮರಾಯರು.

ಯಾವದೇ ಒಂದು ಸಾಮಾಜಿಕ ಕಾರ್ಯಾಚರಣೆಯಲ್ಲಿ ಕಾಲಕಾಲಕ್ಕೆ ಸುಧಾರಣೆಯಾಗುತ್ತಿರುವದು ವಿಹಿತವು. ಜ್ಞಾನದಾನ ಪದ್ಧತಿಯಲ್ಲಿಯೂ ಹೀಗೆ ಸುಧಾರಣೆಯಾಗುತ್ತಿರಬೇಕು. ಮನುಷ್ಯನು ಜೀವಂತ ಉಳಿಯುವದಕ್ಕೆ ಹೇಗೆ ಪ್ರತಿನಿತ್ಯವೂ ಹೊಸ ಅನ್ನವನ್ನು ಸೇವಿಸಬೇಕಾಗುವದೋ ಹಾಗೆ ಶಿಕ್ಷಣವು ಕಾರ್ಯಕಾರಿಯಾಗಿ ಉಳಿಯಬೇಕಾದರೆ ಅದರಲ್ಲಿ ಹೊಸ ವಿಚಾರವು ನಡೆಯುತ್ತಿರಬೇಕು. ಇಲ್ಲದಿದ್ದರೆ ಕಲಿಸುವ ಪದ್ಧತಿಗಳು ನೀರಸವಾಗುವವು. ಶಿಕ್ಷಣದ ಪ್ರತಿಯೊಂದು ಅಂಗೋಪಾಂಗದಲ್ಲಿಯೂ ಆಗಾಗ್ಗೆ ಪ್ರಗತಿಯು ತೋರುತ್ತಿರಬೇಕು. ಶಾಸ್ತ್ರಜ್ಞರು ಹೊಸ ಸಂಶೋಧನೆಯನ್ನು ಮಾಡಿ ಹೊಸ ಹೊಸ ವಿಚಾರಗಳನ್ನು ಜನರ ಮುಂದೆ ಇಡುತ್ತಲೇ ಇರುವರು. ನಾವು ಮಾಡುವ ಪ್ರತಿಯೊಂದು ಕಾರ್ಯದಲ್ಲಿ ಯಾವಾಗಲೂ ಸುಧಾರಣೆಗೆ ಅವಕಾಶವು ಇದ್ದೇ ಇರುವದು. ಇದು ಆ ಕೆಲಸದಲ್ಲಿ ಪ್ರತಿನಿತ್ಯ ದುಡಿಯುವವರಿಗೆ ಅಷ್ಟೊಂದು ಅನಿಸುವದಿಲ್ಲ. ಅವರಿಗೆ ಮೇಲಿನವರು ಕೆಲವೊಂದು ಮಾರ್ಗ, ಪದ್ಧತಿ, ಧೋರಣೆಯನ್ನೂ ಹಾಕಿಕೊಟ್ಟಿರುತ್ತಾರೆ. ಅದನ್ನು ಅನುಸರಿಸುವದೇ ತಮ್ಮ ಮುಖ್ಯ ಕರ್ತವ್ಯವೆಂದು ಅವರು ಬಗೆಯುವದು ಸ್ವಾಭಾವಿಕವಾದುದು. ಉದಾಹರಣೆಗಾಗಿ ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕರನ್ನು “ ನೀವು ಶಾಲೆಯಲ್ಲಿ ಅಂಕಗಣಿತವನ್ನು ಕಲಿಸುತ್ತಿರುವ ರೀತಿಯಲ್ಲಿ ಏನಾದರೂ ಸುಧಾರಣೆಯನ್ನು ಮಾಡಲು ಸಾಧ್ಯವಿದೆಯೊ ? ” ಎಂದು ಕೇಳಿದರೆ ಅವರು ಸಾಧಾರಣವಾಗಿ ಹೀಗೆ ಉತ್ತರ ಹೇಳುವರು: ನನ್ನ ಶಿಕ್ಷಕರು ಟ್ರೇಂಡ್ ಇದ್ದರೆ ಅವರು ಟ್ರೇನಿಂಗಿನಲ್ಲಿರುವಾಗ ಯೋಗ್ಯ ಪದ್ಧತಿಗಳ ಜ್ಞಾನವನ್ನು ಮಾಡಿಕೊಂಡಿರುತ್ತಾರೆ. ಅದರಂತೆ ಅವರು ಕಲಿಸಿದರೆ ಸಾಕು. ಹುಡುಗರು ವಿಷಯದಲ್ಲಿ ಚನ್ನಾಗಿ ತರಬೇತಾಗುವರು. ಹೆಚ್ಚಿನ ಸುಧಾರಣೆ ಏನು ಬೇಕಾಗಿಲ್ಲ. ತಾವು ಕಲಿತ ಪದ್ಧತಿಗಳನ್ನೇ ಶಿಕ್ಷಕರು ಕಾರ್ಯರೂಪದಲ್ಲಿ ತಂದರೆ ಸಾಕು ಎಂದು ಹೇಳುವರು. ಈಗ ಏಳೆಂಟು ವರ್ಷಗಳಿಂದ ಶಿಕ್ಷಣದಲ್ಲಿ ಹಲವು ಪ್ರಯೋಗಗಳನ್ನು ನಡೆಯಿಸಿ ಸಂಶೋಧನೆ ಮಾಡಿ ಹಲವರು ಪಂಡಿತರು ಪದವಿಗಳನ್ನು ಪಡೆಯುತ್ತಲಿದ್ದಾರೆ. ಅವರು ತಮ್ಮ ಸಂಶೋಧನೆಯ ಫಲವು ಶಿಕ್ಷಣದಮೇಲೆ ಆಗುವಂತೆ ಪ್ರಯತ್ನಿಸಬೇಕು, ಪ್ರಚಾರ ಮಾಡಬೇಕು; ಪುಸ್ತಕಗಳನ್ನು ಬರೆಯುವವರೂ ಲೇಖಗಳನ್ನು ಬರೆಯುವವರೂ ಸ್ವಲ್ಪಮಟ್ಟಿಗೆ ಸುಧಾರಣೆಯ ಬಗ್ಗೆ ಯೋಚಿಸುತ್ತಾರೆ. ಕನ್ನಡದಲ್ಲಿ ಬೇರೆ ಬೇರೆ ವಿಷಯಗಳ ಶಿಕ್ಷಣದ ಮೇಲೆ, ಇಂಗ್ಲೀಷಿನಲ್ಲಿರುವಂತೆ ಬಹುಮುಖವಾಗಿ ಚರ್ಚಿಸುವ, ಪುಸ್ತಕಗಳೇ ಇಲ್ಲವೆಂದರೂ ನಡೆಯುವದು.

ಈ ಲೇಖದಲ್ಲಿ ಅಂಕಗಣಿತವನ್ನು ಕಲಿಸುವ ಸಾಮಾನ್ಯ ಪದ್ಧತಿಗಳನ್ನು ಚರ್ಚಿಸಲಾಗುವದಿಲ್ಲ. ಅದನ್ನು ಎಲ್ಲ ಸಾಮಾನ್ಯ ಶಿಕ್ಷಣದ ಮೇಲಿನ ಪುಸ್ತಕಗಳಲ್ಲಿ

ಹೇಳಿಯೇ ಹೇಳಿರುತ್ತದೆ. ಉದಾಹರಣೆಗಾಗಿ ಪ್ರತ್ಯಕ್ಷ ವಸ್ತುಗಳನ್ನು ಕೈಯಲ್ಲಿ ಹಿಡಿದು ಕೆಲಸಮಾಡಿ ಜ್ಞಾನವನ್ನು ಪಡೆಯಬೇಕು. ರೀತಿಗಳ ತಿಳುವಳಿಕೆಯಾಗ್ಯನಂತೆ ಕಲಿಸಬೇಕು. ವಿಷಯವು ಸೇರಿ ಅವರಿಗೆ ಅದರಲ್ಲಿ ಪ್ರೀತಿಯುಂಟಾಗುವಂತೆ ಕಲಿಸಬೇಕು. ಪ್ರತಿಯೊಂದು ಮಾತನ್ನು ಕಲಿಯುದರ ವ್ಯಾವಹಾರಿಕ ಅಗತ್ಯವನ್ನು ಅಥವಾ ಉಪಯೋಗವನ್ನು ಹುಡುಗರಿಗೆ ತಿಳಿಸಬೇಕು, ಇತ್ಯಾದಿ.

ಮಕ್ಕಳ ಸಾಲೆಯಲ್ಲಿ ನಡೆಯುವ ಶಿಕ್ಷಣ ಕಾರ್ಯದ ಫಲವು ಒಡೆದುಕಾಣಿಸಬೇಕಾದರೆ ಮೂರು ಜನರು ಒಬ್ಬರಿಗೊಬ್ಬರು ನೆರವಾಗುವಂತೆ ದುಡಿಯಬೇಕು— ಅವರು ಯಾರೆಂದರೆ-ಕಲಿಸುವ ಪ್ರಾಥಮಿಕ ಶಿಕ್ಷಕನು, ಅವನಿಗೆ ತರಬೇತಿಯನ್ನು ಕೊಡುವ ಅಧ್ಯಾಪಕರು, ಅವರ ಕಾರ್ಯವನ್ನು ಸರಕಾರದ ವಿಮರ್ಶೆಯ ಕೋಲಿನಿಂದ ಅಳತೆ ಮಾಡುವ ಮೇಲ್ವಿಚಾರಕನು. ಮಕ್ಕಳ ಪಾಲಕರೂ ಈ ಪ್ರಶ್ನೆಯಲ್ಲಿ ಬರುವರು; ನಮ್ಮ ದೇಶದಲ್ಲಿ ಅಶಿಕ್ಷಿತರೇ ಬಹುಸಂಖ್ಯಾಕರಿರುವದರಿಂದ ಅವರನ್ನು ಸಧ್ಯದಲ್ಲಿ ಬಿಟ್ಟು ವಿಚಾರ ಮಾಡೋಣ. ಶಿಕ್ಷಕನು ತಾನು ಕಲಿತ ಪದ್ಧತಿಗಳನ್ನು ಜೀವಂತವಾಗಿಟ್ಟುಕೊಂಡು ಅವನ್ನು ತನ್ನ ನಿತ್ಯದ ಕೆಲಸದಲ್ಲಿ ಬಳಕೆಗೆ ತರಬೇಕು. ಇದರಲ್ಲಿ ಅವನಿಗೆ ಅನೇಕ ಕಷ್ಟಗಳಿರುತ್ತವೆ. ಅವನು ಎಲ್ಲರಂತೆ ತನ್ನ ಹೊಟ್ಟೆಯ ಪಾಡಿಗೆ ದುಡಿಯುತ್ತಾನೆ ಎಂಬುದನ್ನು ಮರೆಯಬಾರದು. ಎರಡು ಮೂರು ವರ್ಗದ ಐವತ್ತು ಅರವತ್ತು ಹುಡುಗರನ್ನು ಕಲೆಹಾಕಿಕೊಂಡು ಒಬ್ಬನೇ ಅವರ ಅಭ್ಯಾಸವನ್ನು ಶಾಂತರೀತಿಯಿಂದ ನಡೆಸಿಕೊಂಡು ಹೋಗಬೇಕಾಗಿರುತ್ತದೆ. ಕೆಲಸಕ್ಕೆ ಬೇಕಾಗುವ ಉಪಕರಣಗಳನ್ನು ತಾನೇ ಶ್ರಮದಿಂದ ಅಣಿಮಾಡಿಕೊಳ್ಳಬೇಕು. ಈ ಕಾರಣಗಳಿಂದ ಪ್ರಾ. ಶಿಕ್ಷಕನು ಟ್ರೇನಿಂಗ ಕಾಲೇಜದ ಪದ್ಧತಿಗಳನ್ನು ಸ್ವಲ್ಪ ಶಿಥಿಲ ಮಾಡಬೇಕಾಗುತ್ತದೆ. ಟ್ರೇನಿಂಗ ಕಾಲೇಜಿನ ಅಧ್ಯಾಪಕರಾದವರೂ ಪ್ರತಿಕೂಲ ಪರಿಸ್ಥಿತಿಯನ್ನು ಅನುಲಕ್ಷಿಸಿಯೇ ಪದ್ಧತಿಗಳನ್ನು ವಿಮರ್ಶಿಸುವರು. ಒಂದು ದೃಷ್ಟಿಯಿಂದ ಇದು ಯೋಗ್ಯವೇ; ಅತ್ಯುತ್ತಮವಾದವು ಹೀಗಿರಬೇಕು, ಎಂದು ಹೇಳಿ ಅದನ್ನು ಆದಷ್ಟು ಮಟ್ಟಿಗೆ ಬಳಕೆಯಲ್ಲಿ ತರುವದಕ್ಕೆ ಪ್ರಯತ್ನಿಸಿರಿ ಎಂದು ಹೇಳಿ ಬಿಡುವರು. ಸರಕಾರದವರ ಅಭ್ಯಾಸಪತ್ರಿಕೆಯಲ್ಲಿ ಪ್ರತಿಕೂಲ ವಾತಾವರಣವನ್ನು ಲಕ್ಷದಲ್ಲಿಟ್ಟುಕೊಂಡದ್ದು ಅಲ್ಲಲ್ಲಿ ಕಂಡುಬರುವದು. ಉದಾಹರಣೆಗಾಗಿ ಶಾರೀರಿಕ ಶಿಕ್ಷಣದಲ್ಲಿ “ ಆಟದ ಬೈಲು ಇಲ್ಲದ ಸ್ಥಳದ ಆಡಿಸತಕ್ಕ ಆಟಗಳು, ವಿಶೇಷ ಸಲಕರಣೆ ಇಲ್ಲದ ಪ್ರಸಂಗದಲ್ಲಿ ಆಡಿಸುವ ಆಟಗಳು ” ಎಂದು ಹೇಳಿರುವದನ್ನು ನೋಡಿರಿ. ಇದರಂತೆ ಶಿಕ್ಷಣದಲ್ಲಿ “ ಅನೇಕ ವರ್ಗಗಳನ್ನು ಕೂಡಿ ಕಲಿಸುವ ಪಾಠಗಳು ” ಎಂಬುದನ್ನು ಸೇರಿಸಿರುವ ಕಾರಣವಾದರೂ ಇದೇ. ಪದ್ಧತಿಯನ್ನು ಹೇಳಿಕೊಡುವ ಅಧ್ಯಾಪಕರು ಆದಷ್ಟು ಅಲ್ಪತಯಾರಿಯಿಂದ ಕಲಿಸಲಿಕ್ಕೆ ಬರುವ ಪದ್ಧತಿಗಳ ರೂಪರೇಷೆಗಳನ್ನು ವಿದ್ಯಾರ್ಥಿ ಶಿಕ್ಷಕರಿಗೆ ತೋರಿಸಬೇಕು. ಮೇಲ್ವಿಚಾರಣೆ ಮಾಡಲಿಕ್ಕೆ ಬಂದ ಅಧಿಕಾರಿಗಳು ಸಂಶೋಧನ ದೃಷ್ಟಿಯಿಂದ ಮಕ್ಕಳು ಕಲಿಯುತ್ತಿರುವ ಪದ್ಧತಿಯಲ್ಲಿಯೂ ಅವರು ಬರೆದುಕೊಳ್ಳುವ ರೀತಿಗಳಲ್ಲಿ ಕಂಡುಬರುವ ದೋಷಗಳನ್ನೂ ಶಿಕ್ಷಕರೊಡನೆ ಚೆನ್ನಾಗಿ ನಿಧಾನವಾಗಿ ಚರ್ಚಿಸಿ ತಿಳಿಸಿ ಹೇಳಬೇಕು. ಹಾಗೆ ಮಾಡದೆ ಸಾಮಾನ್ಯವಾಗಿ “ ರೀತಿಯನ್ನು ಅಚ್ಚುಕಟ್ಟಾಗಿ ಬರೆಯುವ ರೂಢಿ ಮಾಡಿಸಬೇಕು. ರೀತಿಯ ಮೆಟ್ಟಿಗಳನ್ನು ವಿವರಿಸಿ ಬರೆಯಬೇಕು. ಮನೆಯಲ್ಲಿ ಮಾಡಲಿಕ್ಕೆ ಕೊಟ್ಟ ಕೆಲಸವನ್ನು ನೋಡಿ ತಿದ್ದಬೇಕು” ಮುಂತಾಗಿ ಹೇಳಿಹೋಗುವರು ಈ ಎಲ್ಲ ಕಾರಣದಿಂದ ಕಲಿಸಿದ್ದರ ಪ್ರತ್ಯಕ್ಷ ಫಲವು ಎಷ್ಟು ನೋಡಲಿಕ್ಕೆ ಸಿಕ್ಕಬೇಕೋ ಅಷ್ಟು ಸಿಕ್ಕುವದಿಲ್ಲ.

ಹೊಸ ಶಿಕ್ಷಣದ ದೃಷ್ಟಿಯಿಂದ ನೋಡಿದರೆ ಅಂಕಗಣಿತದ ಶಿಕ್ಷಣದಲ್ಲಿ ಆಗಬೇಕಾದ ಮೊದಲನೆಯ ಸುಧಾರಣೆಯೆಂದರೆ ಅದನ್ನು ಯಾವದಾದರೊಂದು ಸಾಮಾಜಿಕ ಕಾರ್ಯಾಚರಣೆಯೊಡನೆ ಇಲ್ಲವೇ ಸೃಷ್ಟಿನಿರೀಕ್ಷಣೆಯೊಡನೆ ಇಲ್ಲವೇ ಮೂಲೋದ್ಯೋಗದೊಡನೆ ಸಂಬಂಧೀಕರಿಸಿ ಕಲಿಸಬೇಕು. ಇದರ ಒಟ್ಟು ತಾತ್ಪರ್ಯವೇನೆಂದರೆ-ಹುಡುಗನ ಪ್ರತ್ಯಕ್ಷ ಅನುಭವದಿಂದ ಅವನು ಗ್ರಹಿಸಬೇಕಾದ ಜ್ಞಾನವು ಬೆಳೆದು ಬರಲಿ. ಈ ಅನುಭವವು ಯಾವಾಗಲೂ ಚಟುವಟಿಕೆಯ ರೂಪವಾದದ್ದು ಇರಬೇಕೋ ಹೇಗೆ? ಒಂದು ಜ್ಞಾನವು apperception mass (ಅಭಿಗ್ರಾಹಕ ವಿಚಾರಪುಂಜ)

ಮತ್ತೊಂದು ಜ್ಞಾನಕ್ಕೆ ಸಹಾಯಕಾರಿಯಾಗಲಾರದೊ? ಚಟುವಟಿಕೆಯಿಂದಲೇ ಜ್ಞಾನವೆಂಬ ಮಾತು ಸಣ್ಣ ಮಕ್ಕಳಿಗೆ ಅನ್ವಯಿಸುವದೆಂಬುದನ್ನು ನಾವು ಮರೆಯ-ಬಾರದು. ವಿಶ್ವವಿದ್ಯಾಲಯಗಳಲ್ಲಿನ ಶಿಕ್ಷಣವನ್ನು ಸಹ ಉದ್ಯೋಗದ ಇಲ್ಲವೇ ಚಟುವಟಿಕೆಯ ಮುಖಾಂತರವೇ ಸಾಗಬೇಕೆಂದೂ ಯಾರಾದರೂ ಹೇಳಬಹುದೋ? ಇರಲಿ, ಅಂಕಗಣಿತವನ್ನು ಸಂಬಂಧೀಕರಣ ಮಾಡಿ ಕಲಿಸಿದರೆ ಲೆಕ್ಕದ ಪ್ರಸಂಗವು ಹುಡುಗರ ಕಣ್ಣುಮುಂದೆ ಕಟ್ಟಿದಂತಾಗಬೇಕು. ಕೆಲಸದಿಂದ ಹುಡುಗನ ವಿಚಾರ ಆರಂಭವಾಗಬೇಕು. ಆದರೆ ಚಟುವಟಿಕೆಯು ಮುಗಿದ ಮೇಲೆ ಮಾತ್ರ ಅಂಕಗಣಿತ ಪಾಠವು ವ್ಯವಸ್ಥಿತ ರೀತಿಯಿಂದ ಕಲಿಸುವ ಮೆಟ್ಟಿಲುಗಳನ್ನು ಹಿಡಿದು ಸಾಗಬೇಕು. ಹೊಸ ಪಾಠವು ಒಂದು ಕಾರ್ಯ ಯೋಜನೆಯಿಂದ ಆರಂಭವಾಗಬೇಕು. ಆದರೆ ಆವರ್ತನ ಪಾಠಗಳು, ರೂಢಿ ಪಾಠಗಳು ನಿತ್ಯದ ಪದ್ಧತಿಯಂತೆ, ನಡೆಯಬೇಕು. ವಿಷಯವಾರ ವೇಳಾಪತ್ರಿಕೆಯನ್ನು ಮಾಡಿಕೊಂಡಿದ್ದರೂ ಅವಶ್ಯವಿದ್ದಾಗ ಆ ತಾಸುಗಳನ್ನು ಚಟುವಟಿಕೆಗಳಿಗಾಗಿ ಉಪಯೋಗಿಸಿಕೊಳ್ಳಬಹುದು. ಚಟುವಟಿಕೆಯನ್ನು ಮುಗಿಸಿದ ಮೇಲೆ ಮಧ್ಯಾಹ್ನದಲ್ಲಿ ಯಾವ ವಿಷಯವನ್ನು ಅಥವಾ ವಿಷಯಗಳನ್ನು ಸಂಬಂಧೀಕರಣ ಮಾಡಿ ಕಲಿಸಬೇಕೆನ್ನುವೆವೋ ಆ ವಿಷಯಗಳನ್ನು ಆಯಾ ವಿಷಯದ ತಾಸುಗಳಲ್ಲಿಯೇ ವ್ಯವಸ್ಥಿತ ರೀತಿಯಿಂದ ಮನಃಶಾಸ್ತ್ರದಿಂದ ನಿರ್ಣೀತವಾದ ಸಹಜವಾದ ಮೆಟ್ಟಿಲುಗಳಿಂದ ಕಲಿಸಬೇಕು. ಟ್ರೇನಿಂಗ ಕಾಲೇಜುಗಳಲ್ಲಿ ಶಿಕ್ಷಣವನ್ನು ಕಲಿಸುವ ಅಧ್ಯಾಪಕರು ಸಾಮಾನ್ಯ ಶಿಕ್ಷಣವಿಧಾನ, ವಿಶೇಷ ಶಿಕ್ಷಣ ವಿಧಾನ (ಸ್ಪೆಶಲ್ ಮೆಥಡ್) ಎಂದು ತಮ್ಮ ವಿಷಯದ ಎರಡು ಅಂಗಗಳನ್ನು ಇಟ್ಟುಕೊಂಡಿರುವ ರೂಢಿ ಇದೆ. ಯಥಾರ್ಥ ಶಿಕ್ಷಣದ ಸಮವಾಯ ಪದ್ಧತಿಯು ಬಳಿಕೆಯಲ್ಲಿ ಬಂದಂದಿನಿಂದ ಈ ಸ್ಪೆಶಲ್ ಮೆಥೆಡ್ ಪ್ರತಿಪಾದಕ ವ್ಯಾಖ್ಯಾನಗಳಿಗೆ ಅವಕಾಶವೇ ಉಳಿಯದೆಂಬ ಭೀತಿಯಿಂದ ಅದನ್ನು ಗಂಟುಕಟ್ಟಿ ಚಲ್ಲಬೇಕಾದೀತು, ಎಂದು ಹೇಳಿದ ಹಾಗಾಗಲಿಕ್ಕಿಲ್ಲವಷ್ಟೇ? ನಮ್ಮ ಈ ಲೇಖಕ್ಕೆ ಮೂಲಶಿಕ್ಷಣದಲ್ಲಿ ಸ್ಥಾನವಿರುವದೋ? ವಾಚಕರು ಹೇಳಲಿ.

ಈಗಿದ್ದ ಅಭ್ಯಾಸ ಪತ್ರಿಕೆಯು-ಟ್ರೇನಿಂಗ ಕಾಲೇಜದ ಅಂಕಗಣಿತದ ಅಭ್ಯಾಸಪತ್ರಿಕೆಯು ಎಲ್ಲ ಬಗೆಯಿಂದಲೂ ಪರಿಪೂರ್ಣವಾಗಿದೆ, ಎಂದು ತಿಳಿಯಕೂಡದು. ಇದುವರೆಗೆ, ಬೀಜಗಣಿತದ ಆರಂಭಿಕ ಪರಿಚಯವು ಸ್ವಲ್ಪವಾದರೂ ವಿದ್ಯಾರ್ಥಿ ಶಿಕ್ಷಕರಿಗೆ ಬೇಕೆಂದು ಕಾಲೇಜದ ಅಧ್ಯಾಪಕರಿಗೆ ಅನಿಸಿದ್ದರೂ ಅದನ್ನು ಬಹಿರಂಗವಾಗಿ ಅವರು ಎನ್ನುತ್ತಿರಲಿಲ್ಲ. ಏಕೆಂದರೆ ಸರಕಾರವು ಹಾಕಿಕೊಟ್ಟ ನಿಯಮದಂತೆ ಹೋಗಬೇಕು; ಸುಮ್ಮನೇ ಹೊಸದನ್ನು ಸೇರಿಸಬೇಕು ಎಂದು ನಾವು ಹೇಳಿದರೆ ಅದನ್ನು ಕೇಳುವವರು ಯಾರು? ಎಂದು ಅಧೀರರಾಗಿ ಯಾರೂ ಸರಕಾರದವರ ಅಥವಾ ವಿದ್ಯಾಖಾತೆಯ ಅಧಿಕಾರಿಗಳ ಗಮನಕ್ಕೆ ಅದನ್ನು ತಂದು ಕೊಡುವ ಗೋಜಿಗೆ ಹೋಗಿದ್ದಿಲ್ಲ. ಈಗ ಯಾಕೋ ಏನೋ ಅಧಿಕಾರಿಗಳಿಗೆ ಸರಿ ಅನಿಸಿದ್ದರಿಂದ ಆ ವಿಷಯವನ್ನು ೨ನೆಯ ವರ್ಷದ ಅಭ್ಯಾಸದಲ್ಲಿ ಸೇರಿಸಲಾಗಿದೆ. ಇನ್ನು ೧ನೆಯ ವರ್ಷದ ಅಭ್ಯಾಸದಲ್ಲಿ ೧ರಿಂದ ೪ ಇಯತ್ತೆಯ ಅಂಕಗಣಿತದ ಹೆಚ್ಚು ಸೂಕ್ಷ್ಮವಾದ ಅಭ್ಯಾಸ ಎಂದು ಸಾಮಾನ್ಯವಾಗಿ ಹೇಳಿಬಿಟ್ಟಿರುವದರಿಂದ ಅಧ್ಯಾಪಕರಿಗೆ ಸಾಕಷ್ಟು ಅಸಂದಿಗ್ಧವಾದ ಮಾರ್ಗದರ್ಶನವಾಗುವದಿಲ್ಲ. ಹೆಚ್ಚು ಪರಿಶ್ರಮದ (Intensive) ಅಭ್ಯಾಸವೆಂಬುದನ್ನು ಅಧ್ಯಾಪಕರು ತಮ್ಮ ತಮ್ಮ ಬುದ್ಧಿ, ಅನುಕೂಲಕ್ಕೆ ತಕ್ಕಂತೆ ತಿಳುಕೊಳ್ಳಲಿಕ್ಕೆ ಬಿಟ್ಟುಬಿಟ್ಟಿರುವರು. ಹೀಗಿರಬಾರದು. ಈ ವಿಷಯವನ್ನು ಹೆಚ್ಚು ವಿವರವಾಗಿ ತಿಳಿಸಬೇಕು. ಉದಾಹರಣೆಗಾಗಿ ಅದು ಹೀಗೆ ಇರಬಹುದು.

ಸಂಖ್ಯಾ ಲೇಖನ ಪದ್ಧತಿಯ ಇತಿಹಾಸ—ಹಿಂದೀಯರು ಈ ವಿಷಯದಲ್ಲಿ ಜಗತ್ತಿಗೆ ಮಾಡಿದ ಉಪಕಾರ-ಕೃತಿಯ ಅರ್ಥವನ್ನು ಮಕ್ಕಳು ತಿಳಿದುಕೊಂಡು ತಾವೇ ಉತ್ತರವನ್ನು ತೆಗೆಯುವಂತೆ ಸಹಾಯ ಮಾಡುವ ಪ್ರತಿಯೊಂದು ವಿಷಯದ ಭಾಗಕ್ಕೂ ಬೇಕಾಗುವ ಸುಲಭದಿಂದ ಕಠಿಣ ಕ್ರಮದಂತೆ ರಚಿಸಿಕೊಂಡ ಬಾಯಲೆಕ್ಕಗಳ ಸಂಗ್ರಹದ ಮಹತ್ವ-ಪಾಟಿಯ ಮೇಲಿನ ಲೆಕ್ಕಕ್ಕೂ ಬಾಯಲೆಕ್ಕಕ್ಕೂ ಇರುವ ಮೂಲಭೇದ—ಬಾಯಿಲೆಕ್ಕಗಳ ಅನಂತವೈವಿಧ್ಯ—ಪಾಟಿಯಮೇಲೆ ಮಾಡಹೇಳುವ ಪ್ರತಿಯೊಂದು ನಮೂನೆಯ ವ್ಯವಹಾರದ ಪ್ರಶ್ನೆಗೆ

ಛಾಯೆಯಂತಿರುವ ಸಣ್ಣ ಸಂಖ್ಯೆಗಳಿಂದ ಕೂಡಿದ ಉದಾಹರಣೆಗಳೇ ಬಾಯಿಲೆಕ್ಕಗಳು— ಅಂಕಗಣಿತದ ಎಲ್ಲ ರೀತಿಗಳಿಗೆ ಇವುಗಳ ಉಪೋದ್ಘಾತರೂಪವಾದ ಉಪಯೋಗ—ಶುದ್ಧ ಅಂಕಗಣಿವ ಮುಖ್ಯ ವಿಷಯಗಳು—ಎಣಿಕೆ, ಸಂಕಲನ ಮೊದಲಾದ ಆರಂಭ ಕೃತಿಗಳು—ಬೇರೀಜಿನ ಪರೋಚಿಯನ್ನು ಅನಿಸುವದರ ಮಹತ್ವ—ವ್ಯವಹಾರಿ ಹಾಗೂ ದಶಾಂಶ ಅಪೂರ್ಣಾಂಕಗಳು—ಪ್ರತ್ಯಕ್ಷ ಅನುಭವದಿಂದ ತೂಕ, ಅಳತೆಯ ಕೋಷ್ಟಕಗಳು- ಅವಯುವಗಳು, ಭಾಜ್ಯ ಭಾಜಕಗಳು, ಅವಿಭಾಜ್ಯ ವಿಭಾಜ್ಯ ಸಂಖೆಗಳು. ವರ್ಗ ವರ್ಗಮೂಲಗಳು. ಸಮ, ವ್ಯಸ್ತಪ್ರಮಾಣಗಳು, ಏಕಮಾನ ಪದ್ಧತಿಯಿಂದಲೂ ಅಪೂರ್ಣಾಂಕ ಪದ್ಧತಿಯಿಂದಲೂ ಪ್ರಮಾಣದ ಲೆಕ್ಕಗಳನ್ನು ಬಿಡಿಸುವದು—ಇತ್ಯಾದಿ.

ಪ್ರಾರಂಭದಲ್ಲಿ ಎಣಿಕೆಯನ್ನು ಕಲಿಸುವ ಸಂಬಂಧದಿಂದ ಇನ್ನೂ ಹೆಚ್ಚು ವಿವರಗಳನ್ನು ಅಭ್ಯಾಸ ಪತ್ರಿಕೆಯಲ್ಲಿ ಸೇರಿಸಬಹುದು. ೧೦ರ ವರೆಗೆ ಎಣಿಕೆಯನ್ನು ಕಲಿಸುವದರೊಡನೆ ಪ್ರತಿಯೊಂದು ಸಂಖ್ಯೆಯ ಏಕೀಕರಣ ಪ್ರಥಕ್ಕರಣಗಳು—ಹೀಗೆ

೬ = ೧ + ೫ = ೨ + ೪ = ೩ + ೩ = ೨ + ೨ + ೨.

ಬೇರೀಜಿನ ಪರೋಚಿಯ ಕೋಷ್ಟಕಗಳನ್ನು ರಚಿಸಿಕೊಳ್ಳುವ, ಹಾಗೂ ಬಾಯಿಪಾಠ ಅನ್ವಯ ಕ್ರಮ—ಆರಂಭದ ನಾಲ್ಕು ಕೃತಿಗಳಲ್ಲಿರುವ ಪರಸ್ಪರ ಸಂಬಂಧ-ಭಾಗಾಕಾರಕ್ಕೂ ಅಪೂರ್ಣಾಂಕಕ್ಕೂ ಇರುವಸಂಬಂಧ-ಅಪೂರ್ಣಾಂಕಕ್ಕೆ ಸಾಮಾನ್ಯವಾಗಿ ಆಗುವ ಎರಡು ಎರಡು ಅರ್ಥಗಳು—ಅದನ್ನು ಬರೆಯುವ ಬೇರೆ ಬೇರೆ ಪ್ರಕಾರಗಳು: $\frac{೩}{೪}$, ೩/೪, ೩/೪, ೩÷೪ ಅಪೂರ್ಣಾಂಕಗಳ ಗುಣಾಕಾರ ಭಾಗಾಕಾರಗಳು; $\frac{೩}{೪}$ ದಿಂದ ಗುಣಿಸುವದು, ೪ರಿಂದ ಭಾಗಿಸುವದು, ೪ರಿಂದ ಗುಣಿಸುವದು, $\frac{೧}{೪}$ದಂತೆ ಕಳೆಯುತ್ತ ಹೋಗುವದು. ಇವು ಒಂದೇ ಅರ್ಥದ ಮಾತುಗಳು—ಇತ್ಯಾದಿ, - ಇತ್ಯಾದಿ. ಇಂಥ ಮಾತುಗಳನ್ನು ಪ್ರಾಥಮಿಕ ಸಾಲೆಯ ಅಭ್ಯಾಸಪತ್ರಿಕೆಯಲ್ಲಿ ಕಲಮಟ್ಟಿಗೆ ಸೇರಿಸುವರಾದರೂ ಟ್ರೇನಿಂಗ ಕಾಲೇಜದ ಅಂಕಗಣಿತದ ಅಭ್ಯಾಸದಲ್ಲಿಯೂ ಪುನರುಕ್ತಿಯಾದರೂ ಚಿಂತೆಯಿಲ್ಲ; ಹೆಚ್ಚು ಸ್ಥಳ ಹಿಡಿದರೂ ಚಿಂತೆ ಇಲ್ಲ, ಇನ್ನೊಮ್ಮೆ ಕೊಡುವದು ವಿಹಿತ; ನಮೂನೆಗೆ ಇತಿಹಾಸದ ಅಭ್ಯಾಸ ಪತ್ರಿಕೆಯನ್ನು ನೋಡಿರಿ.

ಶಿಕ್ಷಕನು ತನ್ನ ವಿಷಯದ ಕಡೆಗೆ ಹಾಗೂ ಹುಡುಗರ ಕಡೆಗೆ ಯಾವ ದೃಷ್ಟಿಯಿಂದ ನೋಡಬೇಕು? ತನ್ನ ಕೆಲಸದಲ್ಲಿ ಯಾವ ಗುರಿಯನ್ನು ಸಾಧಿಸಬೇಕಾಗಿದೆ ಎಂಬದರ ನಿಶ್ಚಳವಾದ ಮುನ್ನೋಟ ಆತನಿಗೆ ಬೇಕು. ಮೊದಲು ಪ್ರಾಥಮಿಕ ಶಿಕ್ಷಣವನ್ನು ಕೊಡುವದರ ಗುರಿಗಳು ಎರಡು: ಪ್ರಾಥಮಿಕ ಶಿಕ್ಷಣವನ್ನು ಪೂರ್ಣ ಮುಗಿಸಿ ಅಷ್ಟಕ್ಕೆ ಬಿಡುವವರಲ್ಲಿ (೧) ತನ್ನ ಗ್ರಾಮದಲ್ಲಿ ಮುಂದಾಳಾಗಿ ಊರ ಜನರ ಹಿತವನ್ನು ಮಾಡುವ ಯೋಗ್ಯತೆಯನ್ನು ತಂದು ಕೊಡುವದು. ಇನ್ನು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಮುಂದೆ ಕಲಿಯುವವರಲ್ಲಿ (೨) ಓದುಬರೆಹದಲ್ಲಿ ಒಳ್ಳೇ ಆಸಕ್ತಿಯುಂಟಾಗುವಂತೆ ಮಾಡಿ ಅಭ್ಯಾಸವನ್ನು ತಮ್ಮ ಒಲವಿಗನುಸರಿಸಿ ಮುಂದೆ ಸಾಗಿಸುವ ಯೋಗ್ಯತೆಯನ್ನು ತಂದು ಕೊಡುವದು, ಹೀಗೆ ಇಬ್ಬಗೆಯಾಗಿದೆ. ಅಂಕಗಣಿತವನ್ನು ಕಲಿಸುವ ಸಾಮಾನ್ಯ ಉದ್ದೇಶಗಳನ್ನು ಶಿಕ್ಷಕನು ಯಾವಾಗಲೂ ತನ್ನ ಕಣ್ಣುಮುಂದಿಟ್ಟುಕೊಳ್ಳಬೇಕು. ಅವು ಯಾವವೆಂದರೆ:

ಹುಡುಗರಲ್ಲಿ ಸ್ವತಂತ್ರವಾಗಿ ಚಿಕಿತ್ಸಕ ಬುದ್ಧಿ ಬರಬೇಕೆಂದು, ಅವರಿಗೆ ವಿಷಯದಲ್ಲಿ ಸ್ಥಿರವಾದ ಅನುರಾಗ ಉಂಟಾಗಬೇಕೆಂದೂ ಅಂದರೆ ವಿಷಯವು ಹೆಚ್ಚು ಸೇರುವಂತಾಗಬೇಕೆಂದು, ಮುಂದೆ ದೊಡ್ಡವರಾದ ಮೇಲೆ ವ್ಯವಹಾರದಲ್ಲಿ ಉಪಯೋಗವಾಗಬೇಕೆಂದು, ಶಾಸ್ತ್ರೀವಿಷಯದ ಅಭ್ಯಾಸಕ್ಕೆ ಸಹಾಯವಾಗಬೇಕೆಂದು, ಹೀಗೆ ಇರುತ್ತದೆ. ಇವು ಈಡೇರುವಂತೆ ತನ್ನ ಕಲಿಸುವ ಪದ್ಧತಿಗಳನ್ನು ಇಟ್ಟುಕೊಳ್ಳಬೇಕು. ಹಾಗಲ್ಲದೆ ತಾವೇ ಲೆಕ್ಕಗಳನ್ನು ಬೇಗ ಬೇಗನೆ ಮಾಡಿ ಮುಗಿಸಿ, ಗುಣಾಕಾರದಲ್ಲಿ ಮುಂದುಮುಂದಿನ ಸಾಲಷ್ಟು ಒಂದು ಅಂಕಿ ಹಿಂದೆ ಹಿಂದೆ ಸರಿಸಿ ಬರೆದುಕೊಳ್ಳಬೇಕು, ಭಾಗಾಕಾರದಲ್ಲಿ ಒಂದೊಂದೇ ಅಂಕೆಯನ್ನು ಕೆಳಗಿಳಿಸಿಕೊಳ್ಳಬೇಕು, ಅಪೂರ್ಣಾಂಕಗಳ ಗುಣಾಕಾರದಲ್ಲಿ ಎದುರುಬದುರು ಕಡಿತ ಹೊಡೆಯಬೇಕು, ಹೀಗೆ ತಾವು ಮಾಡಲಿಕ್ಕೆ ಕಲಿತ ಯಾಂತ್ರಿಕ ರೀತಿಗಳನ್ನಷ್ಟು ಅವರಿಗೆ ತೋರಿಸಿ ಕೊಟ್ಟು ಬಿಟ್ಟರಾಯಿತು. ಕಲಿಸಿದೆವು ಎಂದೇ ಇನ್ನೂ ವಿದ್ಯಾರ್ಥಿ ಶಿಕ್ಷಕರ ಭಾವನೆ (ಪರಿಕ್ಷೆಯಲ್ಲಿ ಅವರು ಬರೆದ

ಪಾಠಗಳ ಟಿಪ್ಪಣಿಗಳು ಇದರ ನಿದರ್ಶಕಗಳಾಗಿವೆ.) ಶಿಕ್ಷಕನು ಹುಡುಗರನ್ನು ಪ್ರೀತಿಸಬೇಕು. ಎಂದರೆ ಅವರ ಸುಖದುಃಖಗಳನ್ನು ಕೇಳಿಕೊಳ್ಳುತ್ತಿರಬೇಕು, ಇಷ್ಟೇ ಅಲ್ಲ, ಅವರಲ್ಲಿ ಹೆಚ್ಚು ಹುಡುಗರು ತನ್ನ ವಿಷಯಕ್ಕೆ ಮೆಚ್ಚುವಂತೆ; ಹೆಚ್ಚು ಹುಡುಗರು ತನ್ನ ವಿಷಯದಲ್ಲಿ ಪಾಸಾಗುವಂತೆ, ಹುರುಪಿನಿಂದ ಚೆಲುವಾಗಿ ಅವರ ಲಕ್ಷ್ಯವನ್ನು ತನ್ನ ಕಡೆಗೆ ಸೆಳೆದುಕೊಂಡು ಕಲಿಸಬೇಕು. ಪ್ರತಿಯೊಂದು ಲೆಕ್ಕದ ಉತ್ತರವನ್ನು (ಬಾಯಿಲೆಕ್ಕದ ಉತ್ತರವನ್ನು ಸಹ) ಎರಡು ಮೂರು ಬೇರೆ ಬೇರೆ ರೀತಿಯಿಂದ ತಂದು ತೋರಿಸಬೇಕು. ಅದರಲ್ಲಿ ಒಂದು ರೀತಿ ದಿನಾಲು ರೂಢಿ ಮಾಡಿಕೊಳ್ಳುವಂತಹದಾಗಿರಬೇಕು. ಉತ್ತರದ ಅಂದಾಜನ್ನು ಮುಂದಾಗಿ ಮಾಡುವ ರೂಢಿಯನ್ನು ಹಚ್ಚಬೇಕು. ಲೆಕ್ಕದ ಸುಲಭವಾದ ತಾಳೆಗಳನ್ನು ತೋರಿಸಿಕೊಡಬೇಕು. ಹೀಗೆ ಶಿಕ್ಷಕನು ಹುಡುಗರ ಶಿಕ್ಷಣವನ್ನು ಯಾವ ಧೋರಣೆಯಿಂದ ನೋಡುವನೋ ಅವನ ಕಲಿಸುವ ಫಲವು ಆ ಧೋರಣೆಯನ್ನು ಬಹಳಮಟ್ಟಿಗೆ ಅವಲಂಬಿಸಿರುತ್ತದೆ.

ಅಂಕಗಣಿತವನ್ನು ಹೆಚ್ಚಾಗಿ ವ್ಯವಹಾರೋಪಯುಕ್ತತೆಯ ಸಲುವಾಗಿಯೇ ಕಲಿಸಬೇಕು. ಆದರೆ ಪ್ರಾಥಮಿಕ ಅಭ್ಯಾಸವನ್ನು ಮುಗಿಸಿ ಮುಂದೆ ಹೋಗುವ ಅನೇಕ ವಿದ್ಯಾರ್ಥಿಗಳಿಗೆ ಅದು (ಗಣಿತದ ಸಾಮಾನ್ಯ ಸ್ವರೂಪವಾದ) ಬೀಜಗಣಿತಕ್ಕೆ ಉಪೋದ್ಘಾತವಾಗಬೇಕು; ಎಂದರೆ ಅಂಕಗಣಿತವನ್ನು ಸ್ವಲ್ಪ ಶಾಸ್ತ್ರೀಯ ದೃಷ್ಟಿಯಿಂದಲೂ ಕಲಿಸಬೇಕು. ಅದಕ್ಕಾಗಿ ಸುಲಭ ಬಾಯಿಲೆಕ್ಕಗಳಿಂದ ಮಕ್ಕಳು ಮಾಡುತ್ತಿರುವ ಕೃತಿಗಳ ಅರ್ಥವು ಅವರಿಗೆ ಚನ್ನಾಗಿ ಆಗುವಂತೆ ಮಾಡಬೇಕು; ಸಾಧ್ಯವಿದ್ದಷ್ಟು ರೀತಿಗಳನ್ನು ನಿಯಮಗಳನ್ನು ಹುಡುಗರೇ ಅನೇಕ ಉದಾಹರಣೆಗಳ ನಿರೀಕ್ಷಣೆಯಿಂದ ಊಹಿಸುವಂತೆ ಮಾಡಬೇಕು. ಹೈಸ್ಕೂಲನ್ನು ಸೇರುವ ವಿದ್ಯಾರ್ಥಿಗೆ ಅದಕ್ಕೂ ಮುಂದೆ ಕಾಲೇಜಿನಲ್ಲಿ ಗಣಿತ ವಿಷಯವನ್ನು ಅಭ್ಯಾಸಿಸಬೇಕೆನ್ನುವ ವಿದ್ಯಾರ್ಥಿಗೆ ಪ್ರಾಥಮಿಕ ಶಿಕ್ಷಕನು ಪ್ರಾಥಮಿಕ ಅಭ್ಯಾಸ ಮಾಡಿಸುವಾಗ ಉಪಯೋಗಿಸುವ ಕಲಿಸುವ ಪದ್ಧತಿಗಳು ಕನಿಷ್ಠ ಪಕ್ಷಕ್ಕೆ ಮುಂದಿನ ಬೀಜಗಣಿತದ ಅಭ್ಯಾಸಕ್ಕೆ ಪ್ರತ್ಯಕ್ಷ ಪ್ರಚೋದಕಗಳಾಗದಿದ್ದರೂ, ಅದಕ್ಕೆ ವಿಮುಖವಾಗುವಂತಹ ಮನೋವೃತ್ತಿಯನ್ನು ಹುಟ್ಟಿಸಬಾರದು. ಇದಕ್ಕಾಗಿ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ—ಅಂಕಗಣಿತದ ಮೂಲತತ್ವಗಳ ಸ್ವಲ್ಪಮಟ್ಟಿಗಿನ ಜ್ಞಾನವು ಇಷ್ಟವಾದದ್ದು—ಅಂಕಗಣಿತದ ಉಪಪತ್ತಿಯೆಂದ ಯಾವದಕ್ಕೆ ಅನ್ನುವರೋ ಅದು. ಉಪಪತ್ತಿ ಎಂಬ ಶಬ್ದಕ್ಕೆ ಯಾರೂ ಹೆದರುವ ಕಾರಣವಿಲ್ಲ. ಸಾಮಾನ್ಯ ವ್ಯವಹಾರದ ಉದಾಹರಣೆಗಳಿಂದ ಅಂಕಗಣಿತದ ಎಲ್ಲ ಕೃತಿಗಳಿಗೂ ಆಧಾರವಾದ ಹಲವು ನಿಯಮಗಳನ್ನು ತಿಳಿಸಿಹೇಳಬಹುದು. ಹೇಗಂದರೆ:—

೧೨೩ + ೯೯ = ೧೨೩ + ೧೦೦ − ೧ (ಕೇವಲ ಬೇರೀಜು ವಜಾಬಾಕಿಗಳಿಂದ ಕೂಡಿದ ಉದಾಹರಣೆ)

೧ನೆಯ ನಿಯಮ:— ಬಲಕ್ಕೆ ಬರೆದ ಲೆಕ್ಕವನ್ನು ಎರಡು ರೀತಿಯಿಂದ ಬಿಡಿಸಬಹುದು. ೧೨೩ರಲ್ಲಿ ೧೦೦ನ್ನು ಕೂಡಿಸಿ ೧ನ್ನು ಕಳೆಯಬಹುದು; ಅಥವಾ ಅಥವಾ ೧೨೩ರಲ್ಲಿ ೧ನ್ನು ಕಳೆದು ೧೦೦ನ್ನು ಕೂಡಿಸ ಬಹುದು. ವ್ಯಾವಹಾರಿ ಜಾಣತನವೂ ಇದರಲ್ಲಿ ಒಂದ ವ್ಯಕ್ತವಾಗುವದು. ಅದಾವದೆಂದರೆ ೯೯ನ್ನು ಕೂಡಿಸುವವದರ ಬದಲು ೧೦೦ನ್ನು ಕೂಡಿಸಿ ೧ನ್ನು ಕಳೆಯ ಬಹುದು ಎಂಬ ಮಾತು. ಅಂಕಗಣಿತದ ಶಾಸ್ತ್ರದಲ್ಲಿ ಇದಕ್ಕೆ ಬೇರೀಜು ವಜಾಬಾಕಿಗಳ ಕ್ರಮ ವ್ಯತ್ಯಾಸ ನಿಯಮ ಎಂದು ಹೇಳುವರು—ಮೊದಲಿನ ಸಂಖ್ಯೆಯಲ್ಲಿ ಮುಂದಿನ ಬೇಕಾದ ಸಂಖ್ಯೆಯನ್ನು ಅದ ಹಿಂದಿರುವ ಚಿಹ್ನದ ಅನುಸಾರವಾಗಿ ಕೂಡಿಸಬಹುದ ಅಥವಾ ಕಳೆಯಬಹುದು.

೨ನೆಯ ನಿಯಮ:— ೭೦೦ ÷ ೨೫ = ೭೦೦ ÷ ೧೦೦ × ೪ (ಕೇವಲ ಗುಣಾಕಾರ ಭಾಗಾಕಾರಗಳಿಂ ಕೂಡಿದ ಉದಾಹರಣೆ)

ಬಲಕ್ಕೆ ಬರೆದ ಲೆಕ್ಕವನ್ನು ಎರಡು ರೀತಿಯಿಂ ಬಿಡಿಸಬಹುದು. ೭೦೦ಕ್ಕೆ ೧೦೦ರಿಂದ ಭಾಗಿಸಿ ೪ರಿಂ ಗುಣಿಸಬಹುದು; ಅಥವಾ ೪ರಿಂದ ಮೊದಲು ಗುಣಿ ಆಮೇಲೆ ೧೦೦ರಿಂದ ಭಾಗಿಸಬಹುದು. ಈ ಉದಾ ಹರಣೆಯಲ್ಲಿ ಒಂದು ವ್ಯವಹಾರ ಚಾತುರ್ಯವು ಇರುವದು. ಅದಾವದೆಂದರೆ ೨೫ರಿಂದ ಭಾಗಿಸುವದರ ಬದಲಾಗಿ ೧೦೦ರಿಂದ ಭಾಗಿಸಿ ಬಂದುದಕ್ಕೆ ೪ರಿಂದ ಗುಣಿ ಬಹುದು. ಗಣಿತ ಶಾಸ್ತ್ರದಲ್ಲಿ ಇದಕ್ಕೆ ಗುಣಾಕಾರ ಭಾಗಾ

ಕಾರಗಳ ಕ್ರಮ ವ್ಯತ್ಯಾಸ ನಿಯಮವೆಂದು ಅನ್ನುವರು. ಅದನ್ನು ಹೀಗೆ ಸೂತ್ರಿಸಬಹುದು. ಮೊದಲನೆಯ ಸಂಖ್ಯೆಗೆ ಮುಂದಿನ ಬೇಕಾದ ಸಂಖ್ಯೆಯಿಂದ (ಅದರ ಹಿಂದಿರುವ ಚಿಹ್ನವನ್ನೂ ನೋಡಿ) ಗುಣಿಸಬಹುದು ಇಲ್ಲವೆ ಭಾಗಿಸಬಹುದು.

೩ನೆಯ ನಿಯಮ:— ೧೯೫೦ − ೭೮ = ೧೯೫೦ − ೧೦೦ + ೨೨ (ಕಂಸಗಳ ಉಪಯೋಗದ ನಿಯಮ)

೧೯೫೦ರಲ್ಲಿ ೭೮ನ್ನು ಕಳೆಯಬೇಕಾಗಿದ್ದರೆ ೧೯೫೦ರಲ್ಲಿ ೧೦೦ನ್ನು ಕಳೆದು ಬಂದದ್ದರಲ್ಲಿ ೨೨ನ್ನು ಕೂಡಿಸಬೇಕು. ಇದೊಂದು ಲೆಕ್ಕದ ವ್ಯಾವಹಾರಿಕ ಜಾಣತನ; ಅಲ್ಲದೆ ಈ ಗಣಿತವೊಡನೆ ಇತಿಹಾಸವನ್ನು ಸಂಬಂಧೀಕರಣ ಮಾಡಿದ್ದೇವೆ. ಶಾಲಿವಾಹನ ಶಕಾರಂಭವು ಕ್ರಿ. ಶಕದ ೭೮ನೆಯ ಇಸವಿ. ಆದ್ದರಿಂದ ಕ್ರಿಸ್ತಶಕದ ಇಸವಿಗೆ ಶಾಲಿವಾಹನ ಶಕ ವರ್ಷವನ್ನು ತೆಗೆಯಬೇಕಾಗಿದ್ದರೆ ಮೇಲೆ ಮಾಡಿದಂತೆ ಸುಲಭವಾಗಿ ೧೯೫೦ರಲ್ಲಿ ೧೦೦ನ್ನು ಕಳೆಯಲು ೧೮೫೦ ಬಂದಿತು; ಅದರಲ್ಲಿ ೨೨ನ್ನು ಕೂಡಿಸಲಾಗಿ ೧೮೭೨ನೆಯ ಶಾಲಿವಾಹನ ಶಕ ವರ್ಷವು ಬಂದಿತು; "೧೦೦ನ್ನು ಕಳೆದು ೨೨ನ್ನು ಕೂಡಿಸು" ಈ ಎರಡೂ ಕೃತಿಗಳನ್ನು ೭೮ನ್ನು ಕಳೆದು ಬಿಡುವ ಒಂದೇ ಒಂದು ಕೃತಿಯಲ್ಲಿ ಒಟ್ಟುಗೂಡಿಸಬಹುದು. ಈ ನಿಯಮಕ್ಕೆ ಬೇರೀಜು ವಜಾಬಾಕಿಗಳನ್ನು ಒಟ್ಟುಗೂಡಿಸಿಕೊಂಡು ಮಾಡುವ ನಿಯಮ ಅಥವಾ ಬೇರೀಜು ವಜಾಬಾಕಿ ಕೃತಿಗಳಲ್ಲಿ ಕಂಸಗಳನ್ನು ಹಾಕಿಕೊಳ್ಳುವ ನಿಯಮವೆಂದು ಎನ್ನಬಹುದು.

೧೯೫೦ − ೧೦೦ + ೨೨ = ೧೯೫೦ − (೧೦೦−೨೨)

೨೨ + ೧೯೫೦ − ೧೦೦ = ೨೨ + (೧೯೫೦ − ೧೦೦)

೪ನೆಯ ನಿಯಮ:— ೪೮ × ೨೫ = ೪೮×೧೦೦÷೪ (ಗುಣಾಕಾರ ಭಾಗಾಕಾರಗಳಿದ್ದಾಗ ಕಂಸದ ಉಪಯೋಗದ ನಿಯಮ)

ಈ ದೃಷ್ಟಾಂತವು ವ್ಯವಹಾರದ ಒಂದು ಸುಲಭ ರೀತಿಯನ್ನು ತಿಳಿಸುವದು. ೨೫ರಿಂದ ಗುಣಿಸಬೇಕಾದರೆ ೧೦೦ರಿಂದ ಗುಣಿಸಿ ೪ರಿಂದ ಭಾಗಿಸಿದರಾಯಿತು. ಗುಣಾಕಾರ ಭಾಗಾಕಾರಗಳನ್ನು ಕೂಡಿ ಕೂಡಿಸಿ ತಕ್ಕೊಳ್ಳಬಹುದು; ಈ ಕೃತಿಗಳಲ್ಲಿ ಅಲ್ಲಲ್ಲಿ ಕಂಸಗಳನ್ನು ಹಾಕಿಕೊಳ್ಳಬಹುದು.

೪೮ × ೧೦೦ ÷ ೪ = ೪೮ × (೧೦೦ ÷ ೪)

೨೦೦ ÷ ೧೦೦ × ೪ = ೨೦೦ ÷ (೧೦೦ ÷ ೪)

೫ನೆಯ ನಿಯಮ:—

೨೦ ಡಜನ್ನು + ೩ ಡಜನ್ನು = ೨೩ ಡಜನ್ನು

೨೩ × ೧೨ = ೨೦ × ೧೨ + ೩ × ೧೨

(೨೩ರಿಂದ ಗುಣಿಸಬೇಕಾಗಿದ್ದರೆ ಮೊದಲು ೨೦ರಿಂದ ಆಮೇಲೆ ೩ರಿಂದ ಗುಣಿಸಬಹುದು.)

೪೦ ಅರ್ಧ + ೮ ಅರ್ಧ = ೪೮ ಅರ್ಧ

೪೮/೨ = ೪೦/೨ + ೮/೨

(೪೦ ಎರಡನೆಯಂಶ ಮತ್ತು ೮ ಎರಡನೆಯಂಶ ಕೂಡಿಸಬೇಕಾಗಿದ್ದರೆ ೪೦ರಲ್ಲಿ ೮ನ್ನು ಕೂಡಿಸಿ ಬಂದದ್ದಕ್ಕೆ ೨ನೆಯಂಶ ಎಂಬ ಹೆಸರನ್ನು ತಗಲಿಸಿದರೆ ಆಯಿತು.)

ಹೀಗೆ ಗುಣಾಕಾರಗಳನ್ನು ಅಥವಾ ಭಾಗಾಕಾರಗಳನ್ನು ಹಂಚಿಹಾಕಿಕೊಳ್ಳಬಹುದು. ಇವಕ್ಕೆ ಗುಣಾಕಾರ ಭಾಗಾಕಾರಗಳನ್ನು ಹಂಚಿಹಾಕುವ ನಿಯಮವೆಂದು ಅನ್ನುವರು. ಗೋಖಲೆ ಹಾಗು ನಾಯಕರು ಹೈಸ್ಕೂಲ ವಿದ್ಯಾರ್ಥಿಗಳಿಗಾಗಿ ಬರೆದ ಅಂಕಗಣಿತದಲ್ಲಿ ಈ ಎಲ್ಲ ನಿಯಮಗಳನ್ನು ಬಹು ಚನ್ನಾಗಿ ವಿವರಿಸಿದ್ದಾರೆ. ನಮ್ಮ ಟ್ರೇನಿಂಗ ಕಾಲೇಜಿಗೆ ಬರುವ ವಿದ್ಯಾರ್ಥಿಗಳ ಮಟ್ಟವು ಎಷ್ಟು ಕೀಳಾಗಿರುವದು ಎಂಬುದು ಎಲ್ಲರಿಗೂ ತಿಳಿದದ್ದೇ. ಅಂಥವರಿಗೆ ಈ ಉಪಪತ್ತಿಯನ್ನು ಹೇಗೆ ಮನೋರಂಜಕವಾಗುವದೋಹಾಗೆ ಕಲಿಸಬಹುದುಎಂಬದನ್ನು ಸೂಚಿಸಿದ್ದೇವೆ.

ಹುಡುಗರು ಬರೆದುಕೊಳ್ಳುವ ರೀತಿಯಲ್ಲಿ ಮೇಲಿಂದ ಮೇಲೆ ಯಾವ ದೋಷಗಳು ಕಂಡುಬರುವವೋ ಅವುಗಳನ್ನು ಆಗಾಗ್ಗೆ ತಿದ್ದಿ ತಿದ್ದಿ ತಿಳಿಸಬೇಕು. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ತಿಳಿಸುವೆವು.

(೧) ರೀತಿಯ ವಿವರಣೆಯ ದೋಷ.

ಬರೆದ ರೀತಿಯ ವಾಕ್ಯಗಳನ್ನು ಓದುವಂತೆ, ಓದಲಿಕ್ಕೆ ಬರುವಹಾಗೆ ಸಾಲುಸಾಲಾಗಿ ಇರಬೇಕು.

ಒಬ್ಬ ಹುಡುಗನು ಬರೆದ ರೀತಿಯನ್ನು ಉದ್ದಕ್ಕೆ ಓದಿ ಹೇಳಿದಾಗ ಇನ್ನೊಬ್ಬನು ಅವನ್ನು ಬರೆದುಕೊಂಡರೆ ಅವನು ಅದರ ಬರೋಬರಿ ನಕಲನ್ನು ಮಾಡಿದಂತಾಗಿರಬೇಕು. ಹುಡುಗರು ಸಾಧಾರಣವಾಗಿ ಬರೆ-

ಯುವ ರೀತಿಯಲ್ಲಿ ಬರಿಯ ಸಂಖ್ಯೆಗಳೇ ಇರುವವೇ ಹೊರತು ಒಂದಾದರೂ ಶಬ್ದವಿರುವದಿಲ್ಲ. ಆಸಂಖ್ಯೆಗಳು ಯಾವ ಪರಿಮಾಣಗಳಿಗೆ ಸಂಬಂಧಿಸಿರುವವು ಎಂಬುದನ್ನು ತಿಳಿಯುವದೂ ಕಷ್ಟ. ಯಾವದೊಂದು ಕೃತಿಯ ಲಬ್ಧವು ಪೂರ್ಣ ಬಂದಮೇಲೆ ಅದರ ಹೆಸರು **ನೆನಸಾದರೆ** ಅದರ ಮುಂದೆ ಅದನ್ನು ಹಚ್ಚಲಾಗುವದು. ಇಲ್ಲವೆ ಹೋದರೆ ಬಂದ ಬಡ್ಡಿ, ಠೇವು, ಲಾಭ, ಹಾನಿ ಯಾವುದರ ಮುಂದೆಯೂ ರೂಪಾಯಿ, ಆಣೆ ಮೊದಲಾದ ನಾಮನಿರ್ದೇಶವೇ ಇರುವದಿಲ್ಲ. ಸರಿಗುರ್ತು ನೋಡಲಿಕ್ಕೆ ಸಿಕ್ಕಬೇಕಾಗಿದ್ದರೆ ಅಪೂರ್ಣಾಂಕಗಳ ಕೆಲಸವಿದ್ದರೆ ಮಾತ್ರ ನೋಡಲಿಕ್ಕೆ ಸಿಕ್ಕುವದು. ಇಲ್ಲದೆ ಇದ್ದರೆ ಅವರ ಉಪಯೋಗದ ಅಗತ್ಯವೇ ಹುಡುಗರಿಗೆ ಅನಿಸುವದಿಲ್ಲ.

(೨) $\frac{೩}{೪}$ ಹಾಗೂ $\frac{೫}{೬}$ ಈ ಅಪೂರ್ಣಾಂಕಗಳನ್ನು ಕೂಡಿಸುವದಿದ್ದರೆ ರೀತಿಯನ್ನು ಹೀಗೆ ತೋರಿಸುವದು.

$$\frac{೩}{೪}+\frac{೫}{೬}=\frac{೯+೧೦}{೧೨}=೧\frac{೭}{೧೨};$$

ಒಂದು ಸಂಖ್ಯೆಯ ತಲೆಯ ಮೇಲೆ ಇನ್ನೊಂದು ಸಂಖ್ಯೆಯನ್ನು ಇಡುವ ಪರಿಪಾಠವು ದೋಷಯುಕ್ತವಾದದ್ದು. ೩ರಕ್ಕೆ ೩ರಿಂದ ಗುಣಿಸಿ ಬಂದದ್ದು ಎಂದು ತಿಳಿಯಬೇಕಾಗಿದ್ದರೆ ೩×೩ ಹೀಗೆಯೇ ಬರೆಯಬೇಕು. $೩^{೩}$ ಹೀಗೆ ಬರೆದರ ೩ರ ವರ್ಗವೆಂದು ಅರ್ಥವು ಆಗುವದು. ಆದ್ದರಿಂದ ಮೇಲಿನ ಲೆಕ್ಕವನ್ನು ಬಿಡಿಸುವ ಮೆಟ್ಟಿಗಳನ್ನು ಹೀಗೆ ಬರೆಯಬೇಕು:

$$\frac{೩}{೪}=\frac{೩\times೩}{೧೨};\ \frac{೫}{೬}=\frac{೫\times೨}{೧೨};\ \frac{೩}{೪}+\frac{೫}{೬}=\frac{೯}{೧೨}+\frac{೧೦}{೧೨}=$$

$$\frac{೯+೧೦}{೧೨}=೧\frac{೭}{೧೨}$$

(೩) ಅಪೂರ್ಣಾಂಕಗಳ ಭಾಗಾಕಾರವನ್ನು ತೋರಿಸುವಾಗ ಮಾಡುವ ದೋಷ

$\frac{೩}{೪}\div\frac{೫}{೬}$ ಕೊಟ್ಟ ಲೆಕ್ಕ ಹುಡುಗರು ಮಾಡಿ ತೋರಿಸುವ ರೀತಿ

$$\frac{೩}{\cancel{೪}_{೨}}\div\frac{^{೩}\cancel{೬}}{೫}=\frac{೯}{೧೦}$$ ಹೀಗಾಗಲಿ

ಅಥವಾ $\frac{೩}{೪}\times\frac{೬}{೫}=\frac{೯}{೧೦}$ ಹೀಗಾ

ಬರೆದುಕೊಳ್ಳುವದು ಅಪರೂಪವಲ್ಲ.

$\frac{೫}{೬}$ ದಿಂದ ಭಾಗಿಸುವದನ್ನು ಬಿಟ್ಟು $\frac{೬}{೫}$ ಮಾಡಿಕೊಂಡ ಕೂಡಲೆ ಭಾಜಕಚಿಹ್ನವು ಗುಣಾಕಾರ ಚಿಹ್ನವಾಗಬೇಕೆಂಬದನ್ನು ಹುಡುಗರು ಮರೆಯಬಾರದು. ಹೇಸರಗತ್ತೆಯಂತಹ * ಇಂತಹ ಹೊಸ ಚಿಹ್ನವನ್ನು ಹುಡುಗರಿಗೆ ನಿರ್ಮಿಸಗೊಡಬಾರದು. ಕಾರ್ಯಪ್ರಕಾಶಕ ಚಿಹ್ನಗಳಲ್ಲಿ ಎರಡು ಚಿಹ್ನಗಳನ್ನು ಕೂಡಿ ಉಪಯೋಗಿಸುವ ಉದಾಹರಣೆಯೆಂದರೆ ±; ಆದರೆ ಇದರ ಅರ್ಥವು + ಅಧಿಕವಾಗಲಿ—ಉಣೆ ಆಗಲಿ ಎಂದು ಆಗುವದು. ಹೇಗೆಂದರೆ $\sqrt{೪}=\pm೨$. ಮೇಲಿನ ಬರೆಹದಲ್ಲಿ * ಹೀಗೆ ತಿಳಿಯುವದಕ್ಕೆ ಅವಕಾಶವಿರುವದಿಲ್ಲ.

(೪) ತ್ರೈರಾಶಿಕವನ್ನು ಹುಡುಗರು ಹಚ್ಚುವಾಗ ಆಗುವ ದೋಷ.

೧೦೦ ÷ ೨೦೦ = ೫ ಹೀಗೆ ಬರೆಯುವದು ಸರಿಯೋ? ಅಲ್ಲ. ಯಾಕೆಂದರೆ ೧೦೦ಕ್ಕೆ ೨೦೦ರಿಂದ ಭಾಗಿಸಿದರೆ ೫ ಬರುವದಿಲ್ಲ. ಆದರೂ ಎಲ್ಲ ಶಾಲೆಯ ಮಕ್ಕಳು ಹೀಗೆ:—

೧೦೦ : ೨೦೦ : : ೫ ಬರೆಯಲಿಕ್ಕೆ ಕಲಿಯುತ್ತಾರೆ. ನಾವೂ ಅದನ್ನು ನೋಡಿ ಸುಮ್ಮನೆ ಇರುವೆವು : ಇದು ÷ ಭಾಜಕಚಿಹ್ನವೇ; ಮತ್ತು :: ಇದು ಸರಿಗುರ್ತು.

ಎರಡನೆಯ ತಪ್ಪು :—

೧೦೦ : ೨೦೦ : : ೫ = ೧೦. ಚಿಹ್ನಗಳನ್ನು ಅರ್ಥದ ಪ್ರಕಾರ ರೂಪಾಂತರಿಸಿದರೆ ೧೦೦ ÷ ೨೦೦ = ೫ = ೧೦ ಹೀಗೆ ಅರ್ಥವಿಲ್ಲದ ಮಾತಾಗುವದು.

ಮೂರನೆಯ ತಪ್ಪು:—

$$೧೦೦ : ೨೦೦ : : ೫ : \frac{೨೦೦\times೫}{೧೦೦}=೧೦$$

ಇದನ್ನು ಭಾಷಾಂತರಿಸಿದರೆ

$$೧೦೦\div೨೦೦=೫\div\frac{೧೦೦೦}{೧೦೦}=೧೦$$ ಹೀಗಾಗುವದು.

ವಾಚಕರಿಗೆ ಈ ತಪ್ಪು ತಿಳಿಯಬಹುದಲ್ಲವೆ ?

ಸರಿಯಾದ ರೀತಿಯು ಹೀಗೆ : —

೧೦೦ : ೨೦೦ : : ೫ : ? ಅಥವಾ

೧೦೦ : ೨೦೦ : : ೫ : ಉತ್ತರ ಅಥವಾ

೧೦೦ : ೨೦೦ : : ೫ : ಇಚ್ಛಿತ ಸಂಖ್ಯೆ ಅಥವಾ

೧೦೦ : ೨೦೦ : : ೫ : ೧೦

(೫) ಸರಿಗುರ್ತನ್ನು ಉಪಯೋಗಿಸುವಾಗ ಆಗುವ ದೋಷ:—

ಲೆಕ್ಕ ೧೦−೯+೧

ರೀತಿ ೧೦−೯=೧+೧=೨ ಹೀಗೆ ರೀತಿಯನ್ನು ಬರೆದರೆ (ಉತ್ತರವು ಸರಿಯಾಗಿದ್ದರೂ) ಸುಮ್ಮನಿರಬಾರದು. ಏಕೆಂದರೆ ಇದರ ಅರ್ಥವು ೧೦ − ೯ = ೨ ಹೀಗಾಗುವದು.

ಲೆಕ್ಕ ೧೦ರೂ. ೫ಆ. ೪ಪೈ ಗಳಿಗೆ ರೂಪಾಯಿಯ ರೂಪಕೊಡಿರಿ.

ರೀತಿ ೪/೧ × ೧/೧೨ = ೫ ೧/೩ = ೧೬/೩ × ೧/೧೬ = ೧೦ ೧/೩ = ೩೧/೩

ಇದರಲ್ಲಿ ಕಂಡುಬರುವ ಸರಿಗುರ್ತಿನ ಉಪಯೋಗದ ಅಜ್ಞಾನವನ್ನು ನೋಡಿಯೂ ನೋಡಿ, 'ಹೋಗಲಿ ಬಿಡು' ಎಂದು ಸುಮ್ಮನೆ ಇರಬಾರದು.

ಅಂತೂ, ಹುಡುಗರು ಮೇಲಿಂದ ಮೇಲೆ ಮಾಡುವಂತಹ ದೋಷಗಳನ್ನು ಶಿಕ್ಷಕನು ಕಂಡುಹಿಡಿದು ಅವುಗಳನ್ನು ಅವಿಶ್ರಾಂತ ಪರಿಶ್ರಮದಿಂದ ತಿದ್ದುತ್ತಿರಬೇಕು. ಲೆಕ್ಕಗಳನ್ನು ಹಚ್ಚಿಕೊಳ್ಳುವ ರೀತಿಯಲ್ಲಿ ಮಾಡಬಹುದಾದ ಕೆಲವು ಬದಲಾವಣೆಗಳನ್ನೂ ಅಂಕಗಣಿತದಲ್ಲಿ ಸಾಮಾನ್ಯವಾಗಿ ಬಳಸುವ ಹಲವು ಪರಿಭಾಷೆಗಳಲ್ಲಿ ಆಗಬಹುದಾದ ಬದಲಾವಣಿಗಳಲ್ಲಿಯ ಕೆಲವನ್ನೂ ಇಲ್ಲಿ ಸೂಚಿಸುವೆವು.

(೧) ರೂಪಾಂತರದ ಲೆಕ್ಕಗಳನ್ನು ಬರೆದುಕೊಂಡು ಮಾಡುವ ರೀತಿ.

ಲೆಕ್ಕ ೩ರೂ. ೪೮. ೫ಪೈ. ಗೆ. ಇಳಿಕೆಯ ರೂಪ ಕೊಡಿರಿ.

ಲೆಕ್ಕ ೧೦೦೦ ಪೈಗಳಗ ಏರಿಕಯ ರೂಪ ಕೊಡಿರಿ.

ರೀತಿ:—

ರೂ. ಆ. ಪೈ.
೫ ೬೩ ೧೦೦೦
೩ ೪

ರೂ. ಆ. ಪೈ
೩ ೪
೪೬ ೬೨
೫೨ ೬೨

ರೂ
೩
×೧೬
೪೮ ಆ

೩ರೂ. × ೧೬ = ೪೮ ಆಣೆ ಹೀಗೆ ಬರೆಯುವದರ ತಪ್ಪು ಹುಡುಗರ ಲಕ್ಷಕ್ಕೆ ಬರಬೇಕು. ಇದರಂತೆ ೧೦೦೦ ಪೈಗಳಿಗೆ ೧೨ರಿಂದ ಭಾಗಿಸಿದರೆ ೮೩ ಆಣೆಗಳು ಬರುವವು ಎಂದು ಅನ್ನುವದು ತಪ್ಪು ಎಂದು ತಿಳಿಸಿ ಹೇಳಬೇಕು.

(೨) ಸಮುಚ್ಛೇದವಿರುವ ಅಪೂರ್ಣಾಂಕಗಳನ್ನು ಕೂಡಿಸುವದನ್ನು ತೋರಿಸುವ ರೀತಿ.

ಲೆಕ್ಕ ೧/೧೬ + ೩/೧೬ + ೫/೧೬

ರೀತಿ:—೧೬ನೇಯ ಅಂಶಗಳು

೧
೩
೫
೯

(೩) ಅಪೂರ್ಣಾಂಕವನ್ನು ಓದುವ ಪರಿಭಾಷೆ

ಮೂರಾಂಶ, ನಾಲ್ಕಾಂಶ ಎಂಬ ಅಪಪ್ರಯೋಗಗಳನ್ನು ಎಷ್ಟು ಎತ್ತಿ ತೋರಿಸಿದರೂ ಜನರು-ಶಿಕ್ಷಕರೂ ಸಹ— ಅವನ್ನು ಬಿಡಲೊಲ್ಲರು. ವ್ಯಾಕರಣದಿಂದ ಅಶುದ್ಧ ಪ್ರಯೋಗವೆಂದು ತೋರಿಸಿಕೊಟ್ಟರೂ "ಶಾಸ್ತ್ರಾದ್ರೂಢಿರ್ಬಲೀಯಸೀ" ಎಂದು ಸಮಾಧಾನ ಹೇಳುವರು. ವೃತ್ತಪತ್ರಕಾರರ ಕನ್ನಡದಿಂದಲೂ ಮೂರಾಂಶ, ಹತ್ತಾಂಶ,ಎಂಬ ದೋಷಗಳು ತೊಲಗಿಲ್ಲ. ಇತರ ದೃಷ್ಟಿಯಿಂದ ವೃತ್ತಪತ್ರಗಳ ಕನ್ನಡವು ಈಗ ಬಹಳ ಮಟ್ಟಿಗೆ ಚೆಲುವಾಗಿದೆ. ಮೂರಾಂಶ, ಎಂಬದು ೩ನೆಯಭಾಗ ಎಂಬ ಅರ್ಥದಲ್ಲಿ ರೂಢಿಯಲ್ಲಿ ಬಂದಿದೆ- ಇದ್ದುಕೊಂಡುಹೋಗಲಿ — ಎನ್ನುವ ಹಾಗಿದ್ದರೆ ಹೊಸ ವ್ಯಾಕರಣವನ್ನು ಬರೆಯುವ ತಜ್ಞರಿಂದ ವ್ಯಾಕರಣದಲ್ಲಿ

ಒಂದು ಹೊಸ ನಿಯಮವನ್ನು ಸೇರಿಸಿಬಿಡಬಹುದು. ಹೀಗೆ :—

ಮೂರನೆಯ + ಅಂಶ, ಈ ಸಮಾಸ ಮಾಡುವಾಗ ಪೂರ್ವಪದದ ಅಂತ್ಯದಲ್ಲಿರುವ 'ಅನೆಯ' ಎಂಬ ಪ್ರತ್ಯಯಕ್ಕೆ 'ಆ' ಎಂಬ ಆದೇಶವಾಗುವದು, ಎಂದು ಮಾಡಿಬಿಟ್ಟರಾಯಿತು. ಓದುಗರಿಗೆ ಸರಿದೋರಿದರೆ ಹೀಗೆ ಶಾಸ್ತ್ರವನ್ನು ನಿರ್ಮಿಸಿಕೊಳ್ಳಬಹುದು. ಇಂಗ್ಲಿಷಿನಲ್ಲಿ "ಟೂಥರ್ಡ್ಸ್", ಎಂದು ಹೇಳುವರು. ಅಲ್ಲಿ ಥರ್ಡ್ ಎಂದರೆ ಕ್ರಮವಾಚಕ ಶಬ್ದವನ್ನೇ ಭಾಗಾರ್ಥದಲ್ಲಿ ಉಪಯೋಗಿರುವರು. ಇದರಂತೆ ಮೈಸೂರವರೂ "ಮೂರನೆಯ ಒಂದು ಅಂಶ" ಎಂದು ಹೇಳುವರು. ಆದಕಾರಣ ಮೂರಾಂಶ, ನಾಲ್ಕಾಂಶ ಎಂಬ ಪ್ರಯೋಗಗಳನ್ನು ಜನರ ಬಾಯಿಂದ ಕಿತ್ತಿ ಹಾಕಲಿಕ್ಕೆ ಪ್ರಚಾರ ಮಾಡಬೇಕು.

(೪) ಮೇಲಿಂದ ಮೇಲೆ ಬಳಸುವ ಪರಿಭಾಷೆಯು ಚಿಕ್ಕದಾಗಿದ್ದಷ್ಟು ಒಳ್ಳೆಯದು. ಲಘುತಮಸಾಧಾರಣ ಭಾಜ್ಯ ಎಂಬ ವಿಷಯದ ಅಗತ್ಯವೇ ಸಣ್ಣಮಕ್ಕಳ ಅಂಕ ಗಣಿತದಲ್ಲಿ ಇಲ್ಲ. ೨, ೪, ೮ ಇಲ್ಲವೆ ೪, ೬, ೮ ಈ ಸಂಖ್ಯೆಗಳ ಲಘುತಮ ಸಾಧಾರಣ ಭಾಜ್ಯವನ್ನು ಯಾಕೆ ಮಕ್ಕಳಿಂದ ತೆಗೆಯಹಚ್ಚಬೇಕು ? ೮ರಿಂದಲೂ ಭಾಗ ಹೋಗುವ ಸಂಖ್ಯೆ ಯಾವದು ಎಂಬದನ್ನು ಹುಡುಗರು ನೋಡಿ, ಮಗ್ಗಿಗಳನ್ನು ಅಂದು—ನೋಡಿ ಹೇಳಿದರಾಗುವದಿಲ್ಲವೆ? ೧೨ರಿಂದ, ೮ರಿಂದ ಭಾಗಿಸಿಕೊಳ್ಳುವ ಸಂಖ್ಯೆಯನ್ನು ೧೨ರ ಮಗ್ಗಿಯನ್ನು ೮ರ ಮಗ್ಗಿಯನ್ನು ಅಂದು ಕೊಂಡು ಹೇಳಬಹುದು.

೨ | ೪, ೬, ೮
೨ | ೨, ೩, ೪
೧, ೩, ೨

ಹೀಗೆ 'ಮಂತ್ರ' ದಿಂದ ಮಾಡುವ ರೀತಿಯನ್ನು ದೊಡ್ಡ ದೊಡ್ಡ ಬಹಳ ಸಂಖ್ಯೆಗಳಿದ್ದರೆ ಮಾತ್ರ ಉಪಯೋಗಿಸಬಹುದು. ಲ. ಸಾ. ಭಾ. ವಿಷಯವೇ ಬೇಕಾಗಿಲ್ಲವೆಂದ ಮೇಲೆ ಲಘುತಮ ಸಾಧಾರಣ ಭಾಜ್ಯವೆಂಬ, ಬಾಯಲ್ಲಿ ಚೆಂಡು ತುರುಕಿದಂತಹ ಮೊಳಉದ್ದ ಪರಿಭಾಷೆಯಲ್ಲಿ ಕಡಿತವನ್ನು ಮಾಡುವದು ಒಳಿತು. ಮಹತ್ತಮ ಸಾಧಾರಣ ಭಾಜಕದ ಬದಲಾಗಿ ಹೇಗೆ ದೃಢಭಾಜಕವೆಂಬ ಮಾಟಮಾತು ಬಳಕೆಯಲ್ಲಿದೆಯೋ ಹಾಗೆ ಲಘುತಮ ಸಾಧಾರಣ ಭಾಜ್ಯವೆಂಬುದಕ್ಕೆ ಲಘು (ತಮ) ಭಾಜ್ಯ ಇಲ್ಲವೆ ಕನಿಷ್ಠಭಾಜ್ಯವೆಂದು ನಾವು ಕರಣ ಮಾಡಬಹುದು. ಎರಡೂ ಪರಿಭಾಷೆಯಲ್ಲಿಯೂ ಸಾಧಾರಣವೆಂಬ ಕಲ್ಪನೆಯ. ಅಧ್ಯಾಹಾರವಿರುವದು.

(೫) "ಗುಣಿಲೆ" "ಭಾಗಿಲೆ" ಎಂಬ ಮರಾಠಿ ಶಬ್ದಗಳನ್ನು ಬಿಟ್ಟು ಗುಣಕ, ಭಾಜಕ ಎಂದು ಕಾರ್ಯ ಸೂಚಕ ಚಿಹ್ನೆಗಳನ್ನು ಓದುವ ಹಾಗು ಓದಿಸುವ ಪ್ರಚಾರವಮಾಡಬೇಕು ಅಥವಾ ಗುಣಭಾಗ ಎಂದೂ ಉಪಯೋಗಿಸಬಹುದು.

(೬) ಮೂರು ಪೂರ್ಣಾಂಕ ಎರಡು ಐದನೆಯಂಶ ಎಂಬದರ ಬದಲಾಗಿ ಮೂರು ಪೂರ್ಣ ಎರಡು ಐದನೆಯಂಶ ಎಂದು ಹೇಳುವದು ಹಗುರಾಗಿರುವದು. ಅದನ್ನು ಬಳಕೆಯಲ್ಲಿ ತರಬೇಕು.

ಅಂಕಗಣಿತ ಶಿಕ್ಷಣದಲ್ಲಿ ಇನ್ನೊಂದು ಪದ್ಧತಿಯ ಅಂಶವನ್ನು ವಾಚಕರ ಅವಗಾಹನೆಗೆ ತರಬೇಕಾಗಿದೆ. ಅದೇನೆಂದರೆ, ಪ್ರತ್ಯಕ್ಷವಸ್ತುಗಳಉಪಯೋಗ. ಜ್ಞಾನವು ಅನುಭವ ಗೋಚರವಾದ ವಿಷಯಗಳಿಂದ ಹುಟ್ಟುತ್ತದೆ. ಆದ್ದರಿಂದ ಮಕ್ಕಳ ಹೊಸಜ್ಞಾನವು—ಆರಂಭದ ಜ್ಞಾನವು ಅವರಿಗೆ ಪ್ರಪಂಚದ ಎಲ್ಲ ವಸ್ತುಗಳು ಎಲ್ಲ ಸಂಗತಿಗಳು ಹೊಸವೇ ಆಗಿರುವದರಿಂದ—ಅವರ ಶಿಕ್ಷಣವು ಕೈಗಳಿಂದ ಹಿಡಿದಾಡಿ ನೋಡುವ ವಸ್ತುಗಳಿಂದ ಸಾಗಬೇಕು. ಅವರು ದೊಡ್ಡವರಾದಂತೆ ಇಂದ್ರಿಯ ಗೋಚರವಾಗಿರುವ ಅನೇಕ ವಸ್ತುಗಳಿಗೆ ಮಕ್ಕಳು ತೋರಿಸುವ ಪ್ರತಿಕ್ರಿಯೆಯಿಂದ ಅನುಭವಗಳ ಸ್ಮೃತಿಗಳು, ಸಂಸ್ಕಾರಗಳು ಅನುಭವ ಶೇಷಗಳು ಕೂಡಿ ಬೀಳುವವು. ಈ ಅನುಭವದಿಂದುಂಟಾದ ಸಂಸ್ಕಾರಗಳಿಂದಲೇ ಮುಂದಿನ ಜ್ಞಾನದ ಬೆಳವಣಿಗೆಯು ನಡೆಯುವದು. ಅನುಭವಕ್ಕೆ ಬಾರದ ಹೊಸ ಸಂಗತಿಗಳು ಕ್ರಮೇಣ ಕಡಿಮೆಯಾಗುವವು. ವಾರ್ಧಕ್ಯದಲ್ಲಿ ಅವು ಅಪರೂಪವಾಗುವವು. ಪ್ರತಿಯೊಂದು ಬಗೆಯ ಕೆಲಸಕ್ಕೂ ಬಂದು ಅನುಭವ ವಿಶೇಷವಿರುವದು. ಒಬ್ಬ ಮನುಷ್ಯನು ತನ್ನ ಜೀವಮಾನದಲ್ಲಿ ಎಲ್ಲ ಕೆಲಸಗಳ ಅನುಭವವನ್ನೂ ಪಡೆಯುವೆನೆಂಬ ಆಸೆ ವ್ಯರ್ಥವಾದದ್ದು. ಒಬ್ಬನೇ ವ್ಯಕ್ತಿಯು ಅಂಬಿಗನ ಕೆಲಸವನ್ನೂ, ಒಕ್ಕಲತನದ ಕೆಲಸವನ್ನೂ,

ನೇಕಾರನ ಕೆಲಸವನ್ನೂ, ಬಡಗಿಯ ಕೆಲಸವನ್ನೂ, ಕಲಿಯಲಾರನು. ಪ್ರತಿಯೊಂದನ್ನು ಪ್ರತ್ಯಕ್ಷ ಮಾಡಿ ಅನುಭವವನ್ನು ಪಡೆಯುವೆನೆಂದರೆ ಅಸಾಧ್ಯವಾದ ಮಾತು. ೧೦೦ ವರ್ಷಗಳ ಆಯುಷ್ಯವು ಅದಕ್ಕೆ ಸಾಲದು. ಸಾಲೆಯಲ್ಲಿ ಕಳೆಯುವ ೧೦, ೧೫ ವರ್ಷಗಳಂತೂ ಅತ್ಯಲ್ಪವಾಗಿರುವವು. ಆದ್ದರಿಂದ ಕಂಣು ಕಿವಿ ಕೈಕಾಲುಗಳ ಚಟುವಟಿಕೆಯಿಂದ ತಿಳಿಯತಕ್ಕ ವಸ್ತುಗಳ ಅನೇಕಾನೇಕ ಗುಣಗಳ ಪ್ರತ್ಯಕ್ಷ ಅನುಭವಗಳು ಬಂದನಂತರ ಅವುಗಳ ಅವಶೇಷಗಳೇ ಮುಂದಿನ ಜ್ಞಾನ ಬೆಳವಣಿಗೆಗೆ ನೆಟ್ಟಲಾಗಿರುವವು. ಪ್ರತ್ಯಕ್ಷ ಸಂವೇದನೆಗಳು ಆ ಅನುಭವಗಳ ಪ್ರತಿಬಿಂಬಗಳು, ಅವುಗಳ ತುಲನೆಯಿಂದ ಉಂಟಾದ ಸಾಮಾನ್ಯ ವಿಚಾರಗಳು ಹೀಗೆ ಮನುಷ್ಯನ ಬುದ್ಧಿಯ ಬೆಳವಣಿಗೆಯು ಮೆಟ್ಟಲಾಗಿರುತ್ತವೆ. ಆದ್ದರಿಂದ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿಯೇ ಅನುಭವದಿಂದ ಜ್ಞಾನವು ಹೆಚ್ಚಾಗಿ ಬರಬೇಕೆಂಬ ಶಾಸ್ತ್ರವಿದೆ. ಮನುಷ್ಯನ ತುಂಬುಜೀವನಕ್ಕೆ ಬೇಕಾಗಿರುವ ಎಲ್ಲ ಜ್ಞಾನವೂ ...ಯಗಳ ಚಟುವಟಿಕೆಯಿಂದಲೇ ಉಂಟಾಗುವದು, ...ಉಂಟಾಗಬೇಕು, ಎಂಬಮಾತು ಅರ್ಥವಿಲ್ಲದ ಮಾತು-...ಮನಃಶಾಸ್ತ್ರದ ತತ್ವಗಳಿಗೆ ವಿರುದ್ಧವಾದದ್ದು. ಈ ...ಉಪೋದ್ಘಾತವನ್ನು ಮಾಡುವ ಕಾರಣವಿಷ್ಟೇ. ಅಂಕಗಣಿ-...ತದ ಶಿಕ್ಷಣದಲ್ಲಿಯೂ ವಸ್ತುಗಳನ್ನು ಹಿಡಿದು ಆಡಿ-ನೋಡಿ ...ಮೊದಲಿಗೆ ಕಲಿಯಹಚ್ಚಿದರೂ ಮುಂದೆ ಕ್ರಮೇಣ ...ಅವುಗಳ ಸ್ಥಳವನ್ನು ಸ್ಮೃತಿಚಿತ್ರಗಳೂ, ಕಲ್ಪನಾ...ಶಕ್ತಿಯೂ, ಸಾಮಾನ್ಯ ವಿಚಾರಗಳೂ ತೆಗೆದುಕೊಳ್ಳುವಂತೆ ನೋಡಿಕೊಳ್ಳಬೇಕು.

...ದೃಷ್ಟಾಂತಗಳ ವಿಷಯವಾಗಿ ಒಂದೆರಡು ಮಾತನ್ನು ...ಳಿಸಿಹೇಳುವದು ಕ್ರಮ ಪ್ರಾಪ್ತವಾದುದು. ಇವುಗಳಲ್ಲಿ (೧) ಪ್ರತ್ಯಕ್ಷವಸ್ತುಗಳು (೨) ಮಾದರಿಗಳು (೩) ...ಚಿತ್ರಗಳು (೪) ಸಂಕೇತಗಳು (೫) ಸಾದೃಶ್ಯಗಳು ...ಅಥವಾ ಉಪಮೆಗಳು ಅಥವಾ ಉದಾಹರಣೆಗಳು ಹೀಗೆ ...ತರಗತಿಗಳಾಗುವವು. ಪ್ರತ್ಯಕ್ಷ ವಸ್ತುಗಳನ್ನು ಕೆಲಕಾಲ ...ಬಳಿಸಿದನಂತರ ಚಿತ್ರಗಳನ್ನು ಸಾದೃಶ್ಯಗಳನ್ನು ಸಂಕೇತಗಳನ್ನೂ ಕ್ರಮೇಣ ಉಪಯೋಗಿಸುತ್ತ ಹೋಗಬೇಕು. ...ಉದಾ:—(೩/೬+೧/೮) ಕಾಗದ ಈ ಲೆಕ್ಕವನ್ನು ಕಲಿಸಬೇಕಾಗಿದ್ದರೆ ಮೊದಲು ಯಾವದಾದರೊಂದು ಪ್ರತ್ಯಕ್ಷ ವಸ್ತುವನ್ನು-ಕಾಗದವನ್ನೋ ಸಬಕಾರವನ್ನೋ, ನಿಂಬೇಹಂಣನ್ನೋ—ಕೊಯ್ದು ಕತ್ತರಿಸಿ ಪ್ರತ್ಯಕ್ಷ ಕಣ್ಣಿಗೆ ಕಾಣುವ ಭಾಗಗಳಿಂದ ಮಕ್ಕಳು ಬೇರೀಜಿನ ಅರ್ಥ ಮಾಡಿಕೊಳ್ಳಲಿ. ಆಮೇಲೆ ಇನ್ನೊಂದು ಲೆಕ್ಕವನ್ನು ತೆಗೆದುಕೊಂಡು ಕಲಿಸುವಾಗ (೧/೧೦+೩/೧೦) ಚೌಕು ಇದನ್ನು ಕರಿಹಲಿಗೆಯ ಚಿತ್ರದಿಂದಾಗಲಿ, ಗ್ರಾಫ್ ಕಾಗದದ ಚೌಕುಗಳಿಂದಾಗಲಿ ಕಲಿಸಬಹುದು. ಅದಕ್ಕೆ ಮುಂದೆ ಕೆಲದಿನಗಳಾದ ಬಳಿಕ (೧/೧೬+೩/೧೬) ರೂಪಾಯಿ ಇಂಥ ಲೆಕ್ಕವನ್ನು ಹುಡುಗರು ಮಾಡುವಾಗ ರೂಪಾಯಿಯ ಹದಿನಾರನೆಯ ಭಾಗವೆಂಬದು ಆಣೆ ಎಂಬ ಹೆಸರಿನ **ಹಾಗೆ** ಇದೆ, ಎಂದರೆ ೧/೧೬ ರೂಪಾಯಿ +೩/೧೬ ರೂಪಾಯಿ ಎಂದರೆ ೧ಆಣೆ+೩ಆಣೆ ಇವುಗಳನ್ನು ಕೂಡಿಸಿದ **ಹಾಗೆ** ಇದೆ, ಎಂದು ಸಾದೃಶ್ಯದ ಸಹಾಯದಿಂದ ತಿಳಿದುಕೊಳ್ಳಬೇಕು. ಇದರಂತೆಯೇ (೨೩+೩೪) ಬೀಜಗಳು. ಇದನ್ನು ಮೊದಲು ಪ್ರತ್ಯಕ್ಷ ಬೀಜಗಳಿಂದ ಮಾಡುತ್ತ, ಬರಬರುತ್ತ

XXIII
XXXIIII ಹೀಗೆ ಚಿತ್ರಗಳ ಸಹಾಯ

ದಿಂದ ಅರ್ಥಮಾಡಿಕೊಳ್ಳುತ್ತ ಆಮೇಲೆ ಕೇವಲ ಸಂಕೇತಗಳಿಂದ ಎಂದರೆ ೨ಹ+೩ಹ=೫ಹ; ೩+೪=೭ ಅಂತೂ ೫ಹ, ೭ಬಿ (ಬಿಡಿಕಾಳು) ಹೀಗೆ ಕ್ರಮೇಣ ವಸ್ತುವಾಚಕದಿಂದ ಭಾವವಾಚಕಕ್ಕೆ ಸಾಗಬೇಕು. ಈ ಕ್ರಮವನ್ನು ಅನುಸರಿಸದೆ ಕಡೆಯವರೆಗೂ ಹತ್ತರಗಂಟು, ಬಿಡಿಕಾಳುಗಳು ಎನ್ನುತ್ತಲೇ ಕೂಡುವದರಿಂದ ಹುಡುಗರ ಕಲ್ಪನಾಶಕ್ತಿಯು ಬಾಡಿಹೋಗುವದು. ಸಾಮಾನ್ಯ ವಿಚಾರಗಳೂ ಹುಟ್ಟಲಾರವು. ಇದನ್ನು ಬಹುದಿನಗಳಿಂದ ಶಿಕ್ಷಣ ತಜ್ಞರು ಹೇಳುತ್ತ ಬಂದಿದ್ದರೂ ಶಿಕ್ಷಕರಿಗೆ ಇದರ ಮರ್ಮವು ಗೊತ್ತಾದಂತೆ ತೋರುವದಿಲ್ಲ. ಈಗಿನ ಮೂಲ ಶಿಕ್ಷಣದಲ್ಲಿಯೂ ಹಿಂದಿನ ಪುಸ್ತಕೀಯ ಶಿಕ್ಷಣಕ್ಕೆ ವಿರುದ್ಧವಾದ ಪ್ರತಿಕ್ರಿಯೆಯ ಅತಿರೇಕವೊಂದು ಹಣಿಕೆ ಹಾಕುತ್ತಲಿದೆ ಎಂದು ಎಚ್ಚರಿಕೆಯನ್ನು ಕೊಡಬಯಸುತ್ತೇನೆ.

ಒಂದು ಹೊಸ ನಿಯಮವನ್ನು ಸೇರಿಸಿಬಿಡಬಹುದು. ಹೀಗೆ :—

ನೂರನೆಯ + ಅಂಶ, ಈ ಸಮಾಸ ಮಾಡುವಾಗ ಪೂರ್ವಪದದ ಅಂತ್ಯದಲ್ಲಿರುವ 'ಅನೆಯ' ಎಂಬ ಪ್ರತ್ಯಯಕ್ಕೆ 'ಆ' ಎಂಬ ಆದೇಶವಾಗುವದು, ಎಂದು ಮಾಡಿಬಿಟ್ಟರಾಯಿತು. ಓದುಗರಿಗೆ ಸರಿದೋರಿದರೆ ಹೀಗೆ ಶಾಸ್ತ್ರವನ್ನು ನಿರ್ಮಿಸಿಕೊಳ್ಳಬಹುದು. ಇಂಗ್ಲಿಷಿನಲ್ಲಿ "ಟೂಥರ್ಡ್ಸ್", ಎಂದು ಹೇಳುವರು. ಅಲ್ಲಿ ಥರ್ಡ್ ಎಂದರೆ ಕ್ರಮವಾಚಕ ಶಬ್ದವನ್ನೇ ಭಾಗಾರ್ಥದಲ್ಲಿ ಉಪಯೋಗಿರುವರು. ಇದರಂತೆ ವೈಯಾಕರಣರೂ "ನೂರನೆಯ ಒಂದು ಅಂಶ" ಎಂದು ಹೇಳುವರು. ಆದಕಾರಣ ಮೂರಾಂಶ, ನಾಲ್ಕಾಂಶ ಎಂಬ ಪ್ರಯೋಗಗಳನ್ನು ಜನರ ಬಾಯಿಂದ ಕಿತ್ತಿ ಹಾಕಲಿಕ್ಕೆ ಪ್ರಚಾರ ಮಾಡಬೇಕು.

(೪) ಮೇಲಿಂದ ಮೇಲೆ ಬಳಸುವ ಪರಿಭಾಷೆಯು ಚಿಕ್ಕದಾಗಿದ್ದಷ್ಟು ಒಳ್ಳೆಯದು. ಲಘುತಮಸಾಧಾರಣ ಭಾಜ್ಯ ಎಂಬ ವಿಷಯದ ಅಗತ್ಯವೇ ಸಣ್ಣಮಕ್ಕಳ ಅಂಕ ಗಣಿತದಲ್ಲಿ ಇಲ್ಲ. ೨, ೪, ೮ ಇಲ್ಲವೆ ೪, ೬, ೮ ಈ ಸಂಖ್ಯೆಗಳ ಲಘುತಮ ಸಾಧಾರಣ ಭಾಜ್ಯವನ್ನು ಯಾಕೆ ಮಕ್ಕಳಿಂದ ತೆಗೆಯಹಚ್ಚಬೇಕು ? ೪ರಿಂದಲೂ ಭಾಗ ಹೋಗುವ ಸಂಖ್ಯೆ ಯಾವದು ಎಂಬದನ್ನು ಹುಡುಗರು ನೋಡಿ, ಮಗ್ಗಿಗಳನ್ನು ಅಂದು—ನೋಡಿ ಹೇಳಿದರಾಗುವದಿಲ್ಲವೆ? ೧೨ರಿಂದ, ೮ರಿಂದ ಭಾಗಿಸಿಕೊಳ್ಳುವ ಸಂಖ್ಯೆಯನ್ನು ೧೨ರ ಮಗ್ಗಿಯನ್ನು ೮ರ ಮಗ್ಗಿಯನ್ನು ಅಂದುಕೊಂಡು ಹೇಳಬಹುದು.

೨ | ೪, ೬, ೮
೨ | ೨, ೩, ೪
೧, ೩, ೨

ಹೀಗೆ 'ಮಂತ್ರ' ದಿಂದ ಮಾಡುವ ರೀತಿಯನ್ನು ದೊಡ್ಡ ದೊಡ್ಡ ಬಹಳ ಸಂಖ್ಯೆಗಳಿದ್ದರೆ ಮಾತ್ರ ಉಪಯೋಗಿಸಬಹುದು. ಲ. ಸಾ. ಭಾ. ವಿಷಯವೇ ಬೇಕಾಗಿಲ್ಲವೆಂದ ಮೇಲೆ ಲಘುತಮ ಸಾಧಾರಣ ಭಾಜ್ಯವೆಂಬ, ಬಾಯಲ್ಲಿ ಚಂಡು ತುರುಕಿದಂತಹ ಮೊಳಉದ್ದ ಪರಿಭಾಷೆಯಲ್ಲಿ ಕಡಿತವನ್ನು ಮಾಡುವದು ಒಳಿತು. ಮಹತ್ತಮ ಸಾಧಾರಣ ಭಾಜಕದ ಬದಲಾಗಿ ಹೇಗೆ ದೃಢಭಾಜಕವೆಂಬ ಮಾಟಮಾತು ಬಳಕೆಯಲ್ಲಿದೆಯೊ ಹಾಗೆ ಲಘುತಮ ಸಾಧಾರಣ ಭಾಜ್ಯವೆಂಬುದಕ್ಕೆ ಲಘ(ತಮ) ಭಾಜ್ಯ ಇಲ್ಲವೆ ಕನಿಷ್ಠಭಾಜ್ಯವೆಂದು ಸಾವ ಕರಣ ಮಾಡಬಹುದು. ಎರಡೂ ಪರಿಭಾಷೆಯಲ್ಲಿಯು ಸಾಧಾರಣವೆಂಬ ಕಲ್ಪನೆಯ ಅಧ್ಯಾಹಾರವಿರುವದು

(೫) "ಗುಣಿಲೆ" "ಭಾಗಿಲೆ" ಎಂಬ ಮರಾ ಶಬ್ದಗಳನ್ನು ಬಿಟ್ಟು ಗುಣಕ, ಭಾಜಕ ಎಂದು ಕಾಯ ಸೂಚಕ ಚಿಹ್ನಗಳನ್ನು ಓದುವ ಹಾಗು ಓದಿಸು ಪ್ರಚಾರಮಾಡಬೇಕು ಅಥವಾ ಗುಣಭಾಗ ಎಂದು ಉಪಯೋಗಿಸಬಹುದು.

(೬) ಮೂರು ಪೂರ್ಣಾಂಕ ಎರಡು ಐದನೆಯಂ ಎಂಬದರ ಬದಲಾಗಿ ಮೂರು ಪೂರ್ಣ ಎರಡು ಐದ ಯಂಶ ಎಂದು ಹೇಳುವದು ಹಗುರಾಗಿರುವದು ಅದನ್ನು ಬಳಕೆಯಲ್ಲಿ ತರಬೇಕು.

ಅಂಕಗಣಿತ ಶಿಕ್ಷಣದಲ್ಲಿ ಇನ್ನೊಂದು ಪದ್ಧತಿಯ ಅಂಶವನ್ನು ವಾಚಕರ ಅವಗಾಹನೆಗೆ ತರಬೇಕಾಗಿದೆ ಅದೇನೆಂದರೆ, ಪ್ರತ್ಯಕ್ಷವಸ್ತುಗಳಉಪಯೋಗ. ಜ್ಞಾನ ಅನುಭವ ಗೋಚರವಾದ ವಿಷಯಗಳಿಂದ ಹುಟ್ಟುತ್ತದೆ ಆದ್ದರಿಂದ ಮಕ್ಕಳ ಹೊಸಜ್ಞಾನವು—ಆರಂಭದ ಜ್ಞಾನ ಅವರಿಗೆ ಪ್ರಪಂಚದ ಎಲ್ಲ ವಸ್ತುಗಳು ಎಲ್ಲ ಸಂಗತಿಗಳ ಹೊಸವೇ ಆಗಿರುವದರಿಂದ—ಅವರ ಶಿಕ್ಷಣವು ಕೈಗಳಿಂ ಹಿಡಿದಾಡಿ ನೋಡುವ ವಸ್ತುಗಳಿಂದ ಸಾಗಬೇಕು ಅವರು ದೊಡ್ಡವರಾದಂತೆ ಇಂದ್ರಿಯ ಗೋಚರವಾ ರುವ ಅನೇಕ ವಸ್ತುಗಳಿಗೆ ಮಕ್ಕಳು ತೋರಿಸುವ ಪ್ರ ಕ್ರಿಯೆಯಿಂದ ಅನುಭವಗಳ ಸ್ಮೃತಿಗಳು, ಸಂಸ್ಕಾರಗಳ ಅನುಭವ ಶೇಷಗಳು ಕೂಡಿ ಬೀಳುವವು. ಈ ಅನುಭ ದಿಂದುಂಟಾದ ಸಂಸ್ಕಾರಗಳಿಂದಲೇ ಮುಂದಿನ ಜ್ಞಾನ ಬೆಳವಣಿಗೆಯು ನಡೆಯುವದು. ಅನುಭವಕ್ಕೆ ಬಾರ ಹೊಸ ಸಂಗತಿಗಳು ಕ್ರಮೇಣ ಕಡಿಮೆಯಾಗುವವು. ವಾರ್ಧಕ್ಯದಲ್ಲಿ ಅವು ಅಪರೂಪವಾಗುವವು. ಪ್ರ ಯೊಂದು ಬಗೆಯ ಕೆಲಸಕ್ಕೂ ಬಂದು ಅನುಭ ವಿಶೇಷವಿರುವದು. ಒಬ್ಬ ಮನುಷ್ಯನು ತನ್ನ ಜೀವ ಮಾನದಲ್ಲಿ ಎಲ್ಲ ಕೆಲಸಗಳ ಅನುಭವವನ್ನೂ ಪಡೆಯ ವೆನೆಂಬ ಆಸೆ ವ್ಯರ್ಥವಾದದ್ದು. ಒಬ್ಬನೇ ವ್ಯಕ್ತಿಯ ಅಂಬಿಗನ ಕೆಲಸವನ್ನೂ, ಒಕ್ಕಲತನದ ಕೆಲಸವನ್ನೂ

ನೇಕಾರನ ಕೆಲಸವನ್ನೂ, ಬಡಗಿಯ ಕೆಲಸವನ್ನೂ, ಕಲಿಯಲಾರನು. ಪ್ರತಿಯೊಂದನ್ನು ಪ್ರತ್ಯಕ್ಷಮಾಡಿ ಅನುಭವವನ್ನು ಪಡೆಯುವೆನೆಂದರೆ ಅಸಾಧ್ಯವಾದ ಮಾತು. ೧೦೦ವರ್ಷಗಳ ಆಯುಷ್ಯವು ಅದಕ್ಕೆ ಸಾಲದು. ಸಾಲೆಯಲ್ಲಿ ಕಳೆಯುವ ೧೦, ೧೫ ವರ್ಷಗಳಂತೂ ಅತ್ಯಲ್ಪವಾಗಿರುವವು. ಆದ್ದರಿಂದ ಕಣ್ಣು ಕಿವಿ ಕೈಕಾಲುಗಳ ಚಟುವಟಿಕೆಯಿಂದ ತಿಳಿಯತಕ್ಕ ವಸ್ತುಗಳ ಅನೇಕಾನೇಕ ಗುಣಗಳ ಪ್ರತ್ಯಕ್ಷ ಅನುಭವಗಳು ಬಂದನಂತರ ಅವುಗಳ ಅವಶೇಷಗಳೇ ಮುಂದಿನ ಜ್ಞಾನ ಬೆಳವಣಿಗೆಗೆ ಮೆಟ್ಟಿಲಾಗಿರುವವು. ಪ್ರತ್ಯಕ್ಷ ಸಂವೇದನೆಗಳು ಆ ಅನುಭವಗಳ ಪ್ರತಿಬಿಂಬಗಳು, ಅವುಗಳ ತುಲನೆಯಿಂದ ಉಂಟಾದ ಸಾಮಾನ್ಯ ವಿಚಾರಗಳು ಹೀಗೆ ಮನುಷ್ಯನ ಬುದ್ಧಿಯ ಬೆಳವಣಿಗೆಯ ಮೆಟ್ಟಿಲಾಗಿರುತ್ತವೆ. ಆದ್ದರಿಂದ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿಯೇ ಅನುಭವದಿಂದ ಜ್ಞಾನವು ಹೆಚ್ಚಾಗಿ ಬರಬೇಕೆಂಬ ಶಾಸ್ತ್ರವಿದೆ. ಮನುಷ್ಯನ ತುಂಬುಜೀವನಕ್ಕೆ ಬೇಕಾಗಿರುವ ಎಲ್ಲ ಜ್ಞಾನವೂ ಕೈಗಳ ಚಟುವಟಿಕೆಯಿಂದಲೇ ಉಂಟಾಗುವದು, ಉಂಟಾಗಬೇಕು, ಎಂಬಮಾತು ಅರ್ಥವಿಲ್ಲದ ಮಾತು- ಮನಃಶಾಸ್ತ್ರದ ತತ್ವಗಳಿಗೆ ವಿರುದ್ಧವಾದದ್ದು. ಈ ಉಪೋದ್ಘಾತವನ್ನು ಮಾಡುವ ಕಾರಣವಿಷ್ಟೇ. ಅಂಕಗಣಿತದಶಿಕ್ಷಣದಲ್ಲಿಯೂ ವಸ್ತುಗಳನ್ನು ಹಿಡಿದು ಆಡಿ-ನೋಡಿ ಮೊದಲಿಗೆ ಕಲಿಯಹಚ್ಚಿದರೂ ಮುಂದೆ ಕ್ರಮೇಣ ಅವುಗಳ ಸ್ಥಳವನ್ನು ಸ್ಮೃತಿಚಿತ್ರಗಳೂ, ಕಲ್ಪನಾಶಕ್ತಿಯೂ, ಸಾಮಾನ್ಯ ವಿಚಾರಗಳೂ ತೆಗೆದುಕೊಳ್ಳುವಂತೆ ನೋಡಿಕೊಳ್ಳಬೇಕು.

ದೃಷ್ಟಾಂತಗಳ ವಿಷಯವಾಗಿ ಒಂದೆರಡು ಮಾತನ್ನು ಳಿಸಿಹೇಳುವದು ಕ್ರಮ ಪ್ರಾಪ್ತವಾದುದು. ಇವುಗಳಲ್ಲಿ ೧) ಪ್ರತ್ಯಕ್ಷವಸ್ತುಗಳು (೨) ಮಾದರಿಗಳು (೩) ಚಿತ್ರಗಳು (೪) ಸಂಕೇತಗಳು (೫) ಸಾದೃಶ್ಯಗಳು ಅಥವಾ ಉಪಮೆಗಳು ಅಥವಾ ಉದಾಹರಣೆಗಳು ಹೀಗೆ ರಗತಿಗಳಾಗುವವು. ಪ್ರತ್ಯಕ್ಷ ವಸ್ತುಗಳನ್ನು ಕೆಲಕಾಲ ಳಿಸಿದನಂತರ ಚಿತ್ರಗಳನ್ನು ಸಾದೃಶ್ಯಗಳನ್ನು ಸಂಕೇತಳನ್ನೂ ಕ್ರಮೇಣ ಉಪಯೋಗಿಸುತ್ತ ಹೋಗಬೇಕು. ದಾ:—(೩/೬+೧/೮) ಕಾಗದ ಈ ಲೆಕ್ಕವನ್ನು ಕಲಿಸಬೇಕಾಗಿದ್ದರೆ ಮೊದಲು ಯಾವದಾದರೊಂದು ಪ್ರತ್ಯವಸ್ತುವನ್ನು-ಕಾಗದವನ್ನೋ ಸಬಕಾರವನ್ನೋ, ನಿಂಬೆಹಣ್ಣನ್ನೋ—ಕೊಯ್ದು ಕತ್ತರಿಸಿ ಪ್ರತ್ಯಕ್ಷ ಕಣ್ಣಿಕಾಣುವ ಭಾಗಗಳಿಂದ ಮಕ್ಕಳು ಬೇರೀಜಿನ ಅರ್ಥಮಾಡಿಕೊಳ್ಳಲಿ. ಆಮೇಲೆ ಇನ್ನೊಂದು ಲೆಕ್ಕವನ್ನು ತೆಗೆದುಕೊಂಡು ಕಲಿಸುವಾಗ (೧/೧೦+೩/೧೦) ಚೌಕ ಇದನ್ನು ಕರಿಹಲಿಗೆಯ ಚಿತ್ರದಿಂದಾಗಲಿ, ಗ್ರಾಫ್ ಕಾಗದದ ಚೌಕುಗಳಿಂದಾಗಲಿ ಕಲಿಸಬಹುದು. ಅದಕ್ಕೆ ಮುಂದೆ ಕೆಲದಿನಗಳಾದ ಬಳಿಕ (೧/೧೬+೨/೧೬) ರೂಪಾಯಿ ಇಂಥ ಲೆಕ್ಕವನ್ನು ಹುಡುಗರು ಮಾಡುವಾಗ ರೂಪಾಯಿಯ ಹದಿನಾರನೆಯ ಭಾಗವೆಂಬದು ಆಣೆ ಎಂಬ ಹೆಸರಿನ **ಹಾಗೆ** ಇದೆ, ಎಂದರೆ ೧/೧೬ ರೂಪಾಯಿ +೨/೧೬ ರೂಪಾಯಿ ಎಂದರೆ ೧ಆಣೆ+೨ಆಣೆ ಇವುಗಳನ್ನು ಕೂಡಿಸಿದ **ಹಾಗೆ** ಇದೆ, ಎಂದು ಸಾದೃಶ್ಯದ ಸಹಾಯದಿಂದ ತಿಳಿದುಕೊಳ್ಳಬೇಕು. ಇದರಂತೆಯೇ (೨೩+೩೪) ಬೀಜಗಳು. ಇದನ್ನು ಮೊದಲು ಪ್ರತ್ಯಕ್ಷ ಬೀಜಗಳಿಂದ ಮಾಡುತ್ತ, ಬರಬರುತ್ತ

XXIII
XXXIIII ಹೀಗೆ ಚಿತ್ರಗಳ ಸಹಾಯ

ದಿಂದ ಅರ್ಥಮಾಡಿಕೊಳ್ಳುತ್ತ ಆಮೇಲೆ ಕೇವಲ ಸಂಕೇತಗಳಿಂದ ಎಂದರೆ ೨ಹ+೩ಹ=೫ಹ; ೩+೪=೭ ಅಂತೂ ೫ಹ, ೭ಬಿ (ಬಿಡಿಕಾಳು) ಹೀಗೆ ಕ್ರಮೇಣ ವಸ್ತುವಾಚಕದಿಂದ ಭಾವವಾಚಕಕ್ಕೆ ಸಾಗಬೇಕು. ಈ ಕ್ರಮವನ್ನು ಅನುಸರಿಸದೆ ಕಡೆಯವರೆಗೂ ಹತ್ತರಗಂಟೆ, ಬಿಡಿಕಾಳುಗಳು ಎನ್ನುತ್ತಲೇ ಕೂಡುವದರಿಂದ ಹುಡುಗರ ಕಲ್ಪನಾಶಕ್ತಿಯು ಬಾಡಿಹೋಗುವದು. ಸಾಮಾನ್ಯ ವಿಚಾರಗಳೂ ಹುಟ್ಟಲಾರವು. ಇದನ್ನು ಬಹುದಿನಗಳಿಂದ ಶಿಕ್ಷಣ ತಜ್ಞರು ಹೇಳುತ್ತ ಬಂದಿದ್ದರೂ ಶಿಕ್ಷಕರಿಗೆ ಅದರ ಮರ್ಮವು ಗೊತ್ತಾದಂತೆ ತೋರುವದಿಲ್ಲ. ಈಗಿನ ಮೂಲ ಶಿಕ್ಷಣದಲ್ಲಿಯೂ ಹಿಂದಿನ ಪುಸ್ತಕೀಯ ಶಿಕ್ಷಣಕ್ಕೆ ವಿರುದ್ಧವಾದ ಪ್ರತಿಕ್ರಿಯೆಯ ಅತಿರೇಕವೊಂದು ಹಣಿಕೆ ಹಾಕುತ್ತಲಿದೆ ಎಂದು ಎಚ್ಚರಿಕೆಯನ್ನು ಕೊಡಬಯಸುತ್ತೇವೆ.

ಇನ್ನೊಂದು ಕೊನೆಯ ಮಾತು. ಸ್ಥಳಸಂಬಂಧಗಳನ್ನೊಳಗೊಂಡ (ಭೌಮಿತಿಕ) ದೃಷ್ಟಾಂತದಿಂದ ಸ್ಪಷ್ಟವಾದ ವಿಚಾರ ಸರಣಿಗೆ ಸಮಾಂತರವಾಗಿ ಸಂಖ್ಯೆಗಳ (ಅಂಕಗಣಿತದ) ವಿಚಾರ ಸರಣಿಯನ್ನು ಹಚ್ಚಲಿಕ್ಕೆ ಕಲಿಸಬೇಕು. ಉದಾ:—

ಭೂಮಿತಿಯ ವಿಚಾರ	ಅಂಕಗಣಿತದ ವಿಚಾರ
ಆಕೃತಿ ೧	೧ ಚೌಕೋನವು
 ಆಕೃತಿ ೨	೨/೩ ಚೌ; ೪/೬ ಚೌ (೨ನೆಯ ಆಕೃತಿ)
 ಆಕೃತಿ ೩	೨/೩ ಚೌಕೋನದಲ್ಲಿ ೪ ಸರಿಯಾದ ಭಾಗಮಾಡುವದು. (೩ನೆಯ ಆಕೃತಿ)
 ಆಕೃತಿ ೪	೪/೬ ಚೌ; ೨/೩ ಚೌ ೨/೩ ಚೌಕೋನದಲ್ಲಿ ೪ ಸರಿಯಾದ ಭಾಗ ಮಾಡುವದು. ೨/೩ ಚೌಕೋನಕ್ಕೆ ೪ರಿಂದ ಭಾಗಿಸುವದು. ೨/೩ ಚೌ ÷ ೪ = ೧/೬ ಚೌ (ಆಕೃತಿ ೪)
 ಆಕೃತಿ ೫	ಅಂಥ ೩ ಭಾಗ ತಕ್ಕೊಳ್ಳುವದು ೧/೬ ಚೌ × ೩ = ೩/೬ ಚೌ (ಆಕೃತಿ ೫) ∴ ೨/೩ ಚೌಕೋನದ ೩/೪ ಎಂದರೆ ೩/೬ ಚೌಕೋನ ಅಥವಾ ೧/೨ ಚೌಕೋನ.

ಸೇವಾನಿವೃತ್ತ

ಶ್ರೀ. ದೇಸಾಯಿ ರಾಮರಾಯರು

★

ಕನ್ನಡ ಪ್ರಾಥಮಿಕ ಶಿಕ್ಷಣದ ಪ್ರಧಾನಸಂಪಾದಕರೂ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರೂ ಆಗಿದ್ದ ಶ್ರೀ. ದೇಸಾಯಿ ರಾಮರಾಯರು ೩೧-೭-೧೯೫೦ಕ್ಕೆ ಸೇವಾನಿವೃತ್ತರಾದರು. ಅವರಿಗೆ ಅನೇಕ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಬೀಳ್ಕೊಡುವ ಸಮಾರಂಭಗಳು ನೆರವೇರಿದವು.

ಟ್ರೇನಿಂಗ ಕಾಲೇಜದ ಸಾಮೂಹಿಕ ಬೀಳ್ಕೊಡುವ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ. ಬಿ. ಎಂ. ಮೀಮಾಂಸಿ, ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ಧಾರವಾಡ ಅವರು ವಹಿಸಿದ್ದರು. ಆ ದಿನ ಶ್ರೀ. ರಾಮರಾಯರು ಕೊನೆಯಲ್ಲಿ ತಮ್ಮನ್ನು ಸತ್ಕರಿಸಿದ ಟ್ರೇನಿಂಗ ಕಾಲೇಜದ, ಪ್ರ್ಯಾಕ್ಟಿಸಿಂಗ ಸ್ಕೂಲಿನ ಅಧ್ಯಾಪಕ ಹಾಗೂ ನೌಕರ ವರ್ಗದ ಆಭಾರ ಮನ್ನಿಸಿ, ತಮ್ಮ ಸೇವಾವಧಿಯಲ್ಲಿ ನೆರವಾದ ಶ್ರೀಗಳಾದ ಮಾನ್ವಿ ದಿವಾಕರ, ಹುಕ್ಕೇರಿಕರ, ರ್ಯಾಂಗ್ಲರ ಪಾವಟೆ, ರಾಮಬ್ರಹ್ಮ, ಥಿಟೆ, ತಟ್ಟಿ, ಶಿಂತ್ರಿ, ಲಕ್ಕುಂಡಿ, ಕಾಳೆ, ಉಮಡಿ, ಬೈಚವಾಳ, ನಾಡಿಗೇರ, ಪಿ. ಬಿ. ದೇಸಾಯಿ, ಮೀಮಾಂಸಿ ಅವರೆಲ್ಲರ ಉಪಕಾರವನ್ನು ಸ್ಮರಿಸುತ್ತ ಶಿಕ್ಷಕ ವಿದ್ಯಾರ್ಥಿಗಳನ್ನು ಕುರಿತು ಹೇಳಿದ ಮಾತುಗಳು ಮನನೀಯವಾಗಿವೆ. ಅವನ್ನು ಇಲ್ಲಿ ಕೊಡಲಾಗಿದೆ:—

ನೀವು ಈ ತರಬೇತಿಯ ಅಲ್ಪಾವಧಿಯಲ್ಲಿಯೇ ಎಷ್ಟೋ ಮಹತ್ವದ ಸಂಗತಿಗಳನ್ನು ಅಧ್ಯಾಪಕರಿಂದ ಅರಿತುಕೊಳ್ಳಬೇಕಾಗಿದೆ. ಸ್ವತಃ ಸಂಶೋಧಕ ವೃತ್ತಿಯಿಂದ, ಪ್ರಯೋಗ ಮಾಡಿ ನೋಡಬೇಕಾಗಿದೆ. ಅನೇಕ ಶೈಕ್ಷಣಿಕ ಕಾರ್ಯಗಳನ್ನೂ, ಯೋಜನೆಗಳನ್ನೂ, ಕಾರ್ಯರೂಪಕ್ಕಿಳಿಸಿ, ಪ್ರತ್ಯಕ್ಷ ಅನುಭವ ಪಡೆಯಬೇಕಾಗಿದೆ. ನಿಮ್ಮ ಅಧ್ಯಾಪಕರ ಆದರ್ಶ ಜೀವನವನ್ನೂ, ನಿಮ್ಮೊಡನೆ ಬೆರೆತು ಸಮರಸವಾಗಿ ದುಡಿಯುತ್ತಿರುವದನ್ನೂ, ಮತ್ತು ಕಾಲಕಾಲಕ್ಕೆ ನಿಮಗೆ ಕೊಡುವ ಸ್ಫೂರ್ತಿಯನ್ನೂ, ನಿಮ್ಮ ಜೀವನದಲ್ಲಿ ಅರಗಿಸಿಕೊಂಡು, ನಿಮ್ಮ ದೇಹವನ್ನು ಸಮಾಜ-ಸೇವೆಯ ಕಾರ್ಯದಲ್ಲಿ ಸವೆಸಬೇಕಾಗಿದೆ. ಇಷ್ಟೇ ಅಲ್ಲದೆ ನಿಮ್ಮ ಜೀವಮಾನವಿರುವ ವರೆಗೂ, ಉತ್ಸಾಹ-ಭರಿತ ಎಳೆಮಕ್ಕಳನ್ನು ನವ-ಸಮಾಜದ ನೀತಿವಂತ ಘಟಕರನ್ನಾಗಿ ರೂಪಿಸುವದು ನಿಮ್ಮೆಲ್ಲರ ಆದ್ಯಕರ್ತವ್ಯ ಎಂಬ ಅರಿವು ನಿಮಗುಂಟಾಗಬೇಕು. ನೀವು ನಿಮ್ಮ ಶಿಕ್ಷಣ-ಕಾರ್ಯದಲ್ಲಿ, ಪ್ರತಿನಿತ್ಯ, ಹೊಸಹೊಸ ತತ್ತ್ವಗಳನ್ನು ಕಂಡುಹಿಡಿಯುವ ಸಾಮರ್ಥ್ಯವನ್ನು ಪಡೆಯಬೇಕು.

ಬಹುಕಾಲದಿಂದ ಬಂದ ಸಂಪ್ರದಾಯಗಳಿಗೆ ತಲೆಬಾಗಿ ನಡೆಯುವವರಾಗದೆ, ಪ್ರಗತಿ-ಪಥದಲ್ಲಿ ಮುನ್ನಡೆಯಿಡುತ್ತ, ಜಗತ್ತಿಗೆ ಮಾರ್ಗದರ್ಶಕರಾಗಲು ಹೆಣಗು-

ಶ್ರೀ. ದೇಸಾಯಿ ರಾಮರಾಯರು

ಪವರಾಗಬೇಕು. ಅಂದರೆ ಮಾತ್ರ ಈ ಹೊಸ ಶಿಕ್ಷಣ ಯೋಜನೆಯನ್ನವು ಒಂದು ಸುಂದರ ಸಮಾಜದ ರಚನೆಯನ್ನುಂಟುಮಾಡಿ, ಬಾಪೂಜಿಯವರ ರಾಮ-ರಾಜ್ಯದ ಕನಸು ನನಸಾಗುವಂತೆ ಮಾಡಬಲ್ಲಿರಿ, ಎಂದು ನಾನು ನಿಮಗೆ ಹೇಳಬಲ್ಲೆ. ಇಂತಹ ತೇಜೋಮಯರಾದ ನೀವು ನಿಮ್ಮ ಹಳ್ಳಿ-ಪಳ್ಳಿಗಳಲ್ಲಿ, ರಾಷ್ಟ್ರೀಯ ಶಿಕ್ಷಣದ ಜ್ಯೋತಿಯನ್ನು ಬೆಳಗುವ ದೀವಟಿಗೆಗಳಂತೆ. ಪರಮಾತ್ಮನು ನಿಮಗೆ ಆರೋಗ್ಯಬಲವನ್ನೂ, ತೇಜವನ್ನೂ, ಆಯುಷ್ಯವನ್ನೂ, ಕರುಣಿಸಲೆಂದು ಅನನ್ಯಭಾವದಿಂದ ಬೇಡಿಕೊಳ್ಳುವೆ.

ಇಂದು ನವಚೈತನ್ಯದಿಂದ ತುಂಬಿತುಳುಕುತ್ತಿರುವ, ನಮ್ಮ ಮೂಲ-ಶಿಕ್ಷಣ ಶಾಲೆಯ-ತಿದ್ದಿ-ತೀಡುವ ಕಾರ್ಯವನ್ನು ಕೈಕೊಂಡ ಉತ್ಸಾಹಭರಿತ-ಶಿಕ್ಷಕ-ವೃಂದವನ್ನೂ, ಜೀವನ-ಶಿಕ್ಷಣದಲ್ಲಿ ಸಮರಸರಾಗಿ ನನ್ನೊಡನೆ ಏಕಜೀವದಂತಿದ್ದ ಅಧ್ಯಾಪಕ-ವರ್ಗದವರೆಲ್ಲರನ್ನೂ ಅಗಲಿ ಹಿಡಿದುನಿಲ್ಲಲು ನನ್ನ ಹೃದಯಕ್ಕೆ ತೀವ್ರ ವೇದನೆಯಾಗುವದು, ಸಹಜ. ಆದರೂ ಅದು ಅನಿವಾರ್ಯವಾದುದು. ಅದು ಸಹಿಸಲೇಬೇಕಾದುದು.

ಇಷ್ಟು-ಹೊತ್ತಿನ ವರೆಗೆ ನೀವೆಲ್ಲರೂ, ನಿಃಶಬ್ದವಾಗಿ ಶಾಂತಚಿತ್ತದಿಂದ, ನನ್ನ ಈ ನಾಲ್ಕು ಕೊನೆಯ ಮಾತುಗಳನ್ನು ಕೇಳಿದುದಕ್ಕಾಗಿ, ನಾನು ನಿಮ್ಮೆಲ್ಲರ ಆಭಾರವನ್ನು ಹೃತ್ಪೂರ್ವಕವಾಗಿ ಮನ್ನಿಸುತ್ತೇನೆ. ಇದಲ್ಲದೆ ಈ ಸಂದರ್ಭವನ್ನು ಒದಗಿಸಿದ ಸತ್ಕಾರ-ಸಮಿತಿಯ ಸಂಚಾಲಕರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುವೆ. ಪುನಃ ನಿಮ್ಮೆಲ್ಲರಿಗೂ ನನ್ನ ಪ್ರೇಮಾದರ, ಕೃತಜ್ಞತೆಗಳನ್ನರ್ಪಿಸಿ, ನಾನು ಸೇವಾನಿವೃತ್ತನಾಗಬಯಸುವೆ.

— ಜಯ ಹಿಂದ —

ಸರಕಾರದಿಂದ ಟ್ರೇನಿಂಗ ಕಾಲೇಜುಗಳಿಗೆ '**ಪೂರಕವಾಚನ**'ವೆಂದು ಮಂಜೂರಾಗಿದೆ.

'ಶಾರೀರಿಕ ಶಿಕ್ಷಣ'

ಪ್ರಕಾಶಕರು :

ಶ್ರೀ. ಭೀ. ನ. ಮಣ್ಣೂರ
ಪ್ರ್ಯಾಕ್ಟಿಸಿಂಗ್,ಸ್ಕೂಲ ಟ್ರೇ. ಕಾಲೇಜ,
ಧಾರವಾಡ.

ಶ್ರೀ. ಜಿ. ಬಿ. ನವಲೂರ
ಫಿಜಕಲ್ ಟೀಚರ, ಬಾಸೆಲ್‌ಮಿಶನ್
ಹಾಯಸ್ಕೂಲ, ಧಾರವಾಡ.

ಶಾರೀರಿಕ ಶಿಕ್ಷಣದ ಹೊಸ ಅಭ್ಯಾಸಕ್ರಮಕ್ಕನುಸರಿಸಿ ಬರೆದ,
ನೂರಾರು ಚಿತ್ರಗಳಿಂದ ಕೂಡಿದ, ಸುಂದರ ಪುಸ್ತಕವು.

ಎಲ್ಲ ಶಿಕ್ಷಕರೂ ಇದರ ಲಾಭವನ್ನು ಪಡೆಯಲೇಬೇಕು.

ಬೆಲೆ: ೨—೦—೦

ಪುಸ್ತಕ ದೊರೆಯುವ ಸ್ಥಳ :

ರಾಮಾಶ್ರಯ ಬುಕ್-ಡಿಪೋ, ಧಾರವಾಡ.

ಭಾರತ ಬುಕ್-ಡಿಪೋ, ಧಾರವಾಡ.

ಸೇವಾನಿರತ

ಶ್ರೀ ಕುರ್ತಕೋಟಿ ಕೇಶವರಾಯರು

★

ಕನ್ನಡ ಪ್ರಾಥಮಿಕ ಶಿಕ್ಷಣದ ಪ್ರಧಾನ ಸಂಪಾದಕತ್ವ ದಿಂದಲೂ ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲತ್ವದಿಂದಲೂ ಸೇವಾ ನಿವೃತ್ತಿಯನ್ನು ಪಡೆದ ಶ್ರೀ. ದೇನಾಯಿ ರಾಮರಾಯರ ಸ್ಥಳಕ್ಕೆ ಶ್ರೀ. ಕುರ್ತಕೋಟಿ ಕೇಶವರಾಯರು ಮುಂಬಯಿ ರಾಜ್ಯದ ವಿದ್ಯಾಖಾತೆಯವರಿಂದ ನಿಯಮಿಸಲ್ಪಟ್ಟಿರುವುದು ಸಂತೋಷದ ಸಂಗತಿಯಾಗಿದೆ. ಶ್ರೀ. ಕುರ್ತಕೋಟಿ ಅವರಿಗೆ ಶಿಕ್ಷಣ ಕ್ಷೇತ್ರದ ಆಳವಾದ ಅನುಭವವಿದೆ. ಇವರ ಜೀವನವೇ ಇದಕ್ಕೆ ಸಾಕ್ಷಿಯಾಗಿದೆಯೆಂದ ಹೇಳಬಹುದು.

ಶ್ರೀ. ಕುರ್ತಕೋಟಿಯವರು ಧಾರವಾಡ ತಾಲೂಕ ಹೆಬ್ಬಳ್ಳಿ ಗ್ರಾಮದ ಒಂದು ಬಡ ಪರಿವಾರದಲ್ಲಿ ಸನ್ ೧೮೯೬–೧೨–೧೦ನೆಯ ದಿನ ಜನ್ಮವೆತ್ತಿದರು. ಇವರು ಆರು ತಿಂಗಳವರು ಇರುವಾಗಲೇ ತಂದೆಯನ್ನು ಕಳೆದುಕೊಂಡು ತಬ್ಬಲಿಯಾದರು. ಇವರ ತಾಯಿ ಇವರ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಇವರು ಪ್ರಾಥಮಿಕ ಶಿಕ್ಷಣವನ್ನು ಹೆಬ್ಬಳ್ಳಿ ಹಾಗೂ ಧುಮ್ಮವಾಡದಲ್ಲಿ ಮುಗಿಸಿಕೊಂಡು ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹಾಗೂ ನ್ಯೂ ಇಂಗ್ಲೀಷ್ ಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣ ಹೊಂದಿ ೧೯೧೩ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಪುಣೆಯ ಫರ್ಗ್ಯುಸನ್ ಕಾಲೇಜದಲ್ಲಿ ಅಧ್ಯಯನ ಮಾಡಿ ೧೯೧೮ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು ಮತ್ತು ೧೯೨೦ರಲ್ಲಿ ಮುಂಬಯಿ ಬಿ. ಟಿ. ಕಾಲೇಜದಲ್ಲಿ ಅಧ್ಯಯನ ಮಾಡಿ ಬಿ.ಟಿ. ಆದರು.

ಇವರು ಮೊಟ್ಟಮೊದಲು ೧೯೧೯ ಜನೆವರಿಯಲ್ಲಿ ಬೆಳಗಾವಿಯ ಸರದಾರ್ಸ ಹೈಸ್ಕೂಲದಲ್ಲಿ ಶಿಕ್ಷಕರಾಗಿ ನಿಯಮಿಸಲ್ಪಟ್ಟರು. ಅಲ್ಲಿಂದ ೧೯೩೮ರ ವರೆಗೆ ವಿಜಾಪುರ, ಕಾರವಾರ, ಧಾರವಾಡದ ಹೈಸ್ಕೂಲುಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. ನಂತರ ೧೯೩೮ರಲ್ಲಿ ಇವರನ್ನ ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿ[ಗೆ] ವರ್ಗಮಾಡಲಾಯಿತು. ೧೯೪೧–೪೨ರಲ್ಲಿ ಧಾರವಾಡ ಹಾಗೂ ಕಾರವಾದಲ್ಲಿ ಅಸಿಸ್ಟಂಟ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿಯೂ ಕಾರ್ಯ ಮಾಡಿದರು. ಹೀಗೆ ಒಂದೆರಡು ವರ್ಷ ಕೆಲಸ ಮಾಡುವಷ್ಟ[ರ]ಲ್ಲಿ ಯುದ್ಧವು ಸುರುವಾದ್ದರಿಂದ ಇವರು ಭಾಷಣ ಕಲೆಯಲ್ಲಿ ನುರಿತವರಾದುದರಿಂದ ಸರಕಾರವು ಇವರನ್ನು ೧೯೪೩ರಲ್ಲಿ ಕರ್ನಾಟಕ ವಿಭಾಗಕ್ಕೆ ಅಸಿಸ್ಟಂಟ ಪಬ್ಲಿಸಿಟಿ ಆಫೀಸರರನ್ನಾಗಿ ನಿಯಮಿಸಿತು. ಈ ಕಾರ್ಯವನ್ನು ಎರಡು ವರ್ಷ ಚೆನ್ನಾಗಿ ಮಾಡಿದ ನಂತರ ೧೯೪೫ರಲ್ಲಿ ಸ್ವಲ್ಪ ಸಮಯ ವಿಜಾಪುರ ಸ್ಕೂಲಬೋರ್ಡಿನ ಎ. ಓ. ಅವರಾಗಿ ಕಾರ್ಯ ಮಾಡಿದರು. ನಂತರ ೧೯೪೫ ಜೂನ್ ತಿಂಗಳಲ್ಲಿ ತಾಳೀಕೋಟಿಯ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾಗಿ ನಿಯಮಿಸಲ್ಪಟ್ಟರು. ಇದೇ ಕಾಲೇಜು ೧೯೪೭ರಲ್ಲಿ ವಿಜಾಪುರಕ್ಕೆ ಬಂದಿತು. ೧೯೪೭

ಶ್ರೀ. ಕುರ್ತಕೋಟಿ ಕೇಶವರಾಯರು

ರಿಂದ ೪೯ರ ವರೆಗೆ ವಿಜಾಪುರ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾಗಿ ಕಾರ್ಯ ಮಾಡಿದರು. ಬಳಿಕ ಜಮಖಂಡಿಯ ರಿಫ್ರೆಶರ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾಗಿ ನಿಯಮಿಸಲ್ಪಟ್ಟರು. ಹೊಸ ಹೊಸ ಟ್ರೇನಿಂಗ ಕಾಲೇಜುಗಳಿಗೆ ಇವರನ್ನು ಪ್ರಿನ್ಸಿಪಾಲರನ್ನಾಗಿ ನೇಮಿಸುವುದನ್ನು ನೋಡಿದರೆ ಇವರಲ್ಲಿರುವ ಕಾರ್ಯದಕ್ಷತೆ ಹಾಗೂ ಕಾರ್ಯಕುಶಲತೆಗಳು ಸರಕಾರವನ್ನು ಮುಗ್ಧಗೊಳಿಸಿರಬೇಕೆಂದು ಎನಿಸದಿರಲಾರದು. ಇಂತಹರನ್ನು ಉಜ್ವಲ ಐತಿಹಾಸಿಕ ಹಿನ್ನೆಲೆಯುಳ್ಳ ಧಾರವಾಡದ ಸರಕಾರೀ ಟ್ರೇನಿಂಗ ಕಾಲೇಜಿಗೆ ನಿಯಮಿಸಿದುದು ಸರಕಾರದ ನ್ಯಾಯಪ್ರಿಯತೆಯನ್ನು ವ್ಯಕ್ತಗೊಳಿಸುತ್ತದೆ.

ಇವರಿಗೆ ಇತಿಹಾಸ ಹಾಗೂ ಅರ್ಥಶಾಸ್ತ್ರ ಮೆಚ್ಚಿನ ವಿಷಯಗಳು. ಇವುಗಳ ಜೊತೆಗೆ ಭಾಷಣ ಕಲೆಯಲ್ಲಿಯೂ ಅಭಿರುಚಿಯುಂಟು. ಪುಣೆಯಲ್ಲಿರುವಾಗ ಫರ್ಗ್ಯೂಸನ್ ಕಾಲೇಜದ ;ಇತಿಹಾಸ ವಿಭಾಗದ ವಾದ-ವಿವಾದ ಸಂಘದ ಕಾರ್ಯದರ್ಶಿಗಳಾಗಿ ಕಾರ್ಯ ಮಾಡಿದುದು ಇದಕ್ಕೆ ಸಾಕ್ಷಿಯಾಗಿದೆ. ಇದರಂತೆಯೇ ಟೆನಿಸ್ ಹಾಗೂ ವ್ಹಾಲಿಬಾಲ್ ಆಟಗಳಲ್ಲಿಯೂ ಅಭಿರುಚಿಯುಂಟು.

ವಿದ್ಯಾರ್ಥಿಗಳ ನೈತಿಕ ಮಟ್ಟವನ್ನು ಏರಿಸಬೇಕೆಂಬ ಹಂಬಲ, ದಾಸರ ಹಾಡುಗಳ ಹಾಗೂ ಅಧ್ಯಾತ್ಮದ ಕಡೆಗೆ ಒಲವು, ಪ್ರಾರ್ಥನಾ-ಪ್ರೀತಿ ಇವರ ಜೀವನದ ವೈಶಿಷ್ಟ್ಯಗಳಾಗಿವೆ. ಈ ವೈಶಿಷ್ಟ್ಯಗಳಿಗೆ ಕಾಲೇಜದ ಅಧಿಕಾರ ಸೂತ್ರವನ್ನು ಕೈಗೆ ತೆಗೆದುಕೊಂಡ ದಿನವೇ 'ಪ್ರಾರ್ಥನೆಯಿಂದ ಮನಸ್ಸು ಪ್ರಫುಲಿತಗೊಂಡು ಜೀವನವು ಉಚ್ಚ ಮಟ್ಟಕ್ಕೆ ಹೋಗುವುದು, ಆದುದರಿಂದ ಎಲ್ಲ ಕೆಲಸಗಳನ್ನು ಪ್ರಾರ್ಥನೆಯಿಂದ ಪ್ರಾರಂಭಿಸುವುದು ವಿಹಿತವಾದುದು' ಎಂದು ಹೇಳಿದ ಮಾತುಗಳೇ ಪ್ರಮಾಣ. ಇವರ ಕಾಲಾವಧಿಯಲ್ಲಿ ಕನ್ನಡ ಪ್ರಾಥಮಿಕ ಶಿಕ್ಷಣವೂ ಟ್ರೇನಿಂಗ ಕಾಲೇಜೂ ಇನ್ನೂ ಊರ್ಜಿತಾವಸ್ಥೆಗೆ ಬರುವಂತಾಗಲೆಂದು ದೇವರಲ್ಲಿ ಪ್ರಾರ್ಥನೆ.

—ಜೋಗು

ಪ್ರತಿಯೊಬ್ಬ ವಿದ್ಯಾರ್ಥಿಯೂ ಅಗತ್ಯ ಓದಬೇಕಾದ ಪುಸ್ತಕಗಳು

● ಹೊಟ್ಟೆಯ ವಿಕಾರಗಳಿಂದ ಬಳಲಬೇಡಿ! ● ಶಕ್ತಿಹೀನರೆಂದು ಮರುಗಬೇಡಿ!

● ನೈಸರ್ಗಿಕ ಉಪಾಯ, ವ್ಯಾಯಾಮ ಮತ್ತು ಆಸನಗಳಿಂದ ನವತರುಣರಾಗಿರಿ!

೧೫೦ ಚಿತ್ರಗಳೊಂದಿಗೆ–ಸ್ವಾಮಿ ಶಿವಾನಂದರ ಪುಸ್ತಕ

ಉದರದ ಆರೋಗ್ಯ ಮತ್ತು ಸ್ನಾಯುಬಲ ಸಂವರ್ಧನ

ಬೆಲೆ: ಅಂಚೆವೆಚ್ಚ ಸೇರಿ ರೂ. ೨—೬—೦

ಬ್ರಹ್ಮಚರ್ಯವೇ ಜೀವನ

ಅರ್ಥಾತ್ ವೀರ್ಯನಾಶವೇ ಮೃತ್ಯು!

ವೀರ್ಯನಾಶದ ಕಾರಣ, ಲಕ್ಷಣ ಮತ್ತು ರಕ್ಷಣೆಯ ರಾಮಬಾಣ ಉಪಾಯಗಳು.

ಬೆಲೆ: ಅಂಚೆವೆಚ್ಚ ಸೇರಿ ರೂ. ೩—೮—೦

ಸಮಾಜ ಪುಸ್ತಕಾಲಯ, ಸುಭಾಸಬೀದಿ, ಧಾರವಾಡ.

ಪ್ರಗತಿ ಪತ್ರಿಕೆಗಳನ್ನು ತುಂಬಲು

ಶಿಕ್ಷಕರಿಗೆ ಸೂಚನೆಗಳು.

೧) ಅಧಿಕೃತ ನಗರ ಸಭೆಯ ಹಾಗು ಜಿಲ್ಲಾ ಸ್ಕೂಲಬೋರ್ಡುಗಳ ಅಧಿಕಾರದಲ್ಲಿಯ ಪ್ರಾಥಮಿಕ ಶಾಲೆಗಳ ಮೊದಲನೆಯ ಹಾಗು ಅದರ ಮೇಲಿನ ವರ್ಗಗಳ ವಿದ್ಯಾರ್ಥಿಗಳ ಪ್ರಗತಿ-ಪತ್ರಿಕೆ (ಇದರೊಡನಿರುವ ನಮೂನೆಯ ಪ್ರಗತಿಪತ್ರಿಕೆ) ಗಳನ್ನು ಪ್ರಯೋಗಾರ್ಥವಾಗಿ ಬಳಕೆಯಲ್ಲಿ ತರಬೇಕೆಂದು ಸರಕಾರವು ನಿರ್ಧರಿಸಿದೆ. ಪ್ರಗತಿಪತ್ರಿಕೆಗಳನ್ನು ಪುಕ್ಕಟೆಯಾಗಿ ಪೂರೈಸಲಾಗುವದು. ಅವುಗಳಿಗಾಗಿ ವಿದ್ಯಾರ್ಥಿಗಳ ಪಾಲಕರಿಂದ ಹಣವನ್ನು ವಸೂಲ ಮಾಡತಕ್ಕದ್ದಲ್ಲ.

೨) ಪ್ರಗತಿಪತ್ರಿಕೆಯಲ್ಲಿ ಸಂಬಂಧಿತ ಕೋಷ್ಟಕಗಳನ್ನು ವರ್ಗದ ಶಿಕ್ಷಕನು ಜಾಗರೂಕತೆಯಿಂದ ತುಂಬಬೇಕು. ಹಾಗು ಅದಕ್ಕೆ ವರ್ಗದ ಶಿಕ್ಷಕ ಮತ್ತು ಮುಖ್ಯಾಧ್ಯಾಪಕರಿಬ್ಬರೂ ಅಂಕಿತ ಹಾಕಬೇಕು.

೩) ಆರೋಗ್ಯ ಪರೀಕ್ಷೆಯು ಆದ ಶಾಲೆಯನ್ನು ಬಿಟ್ಟು, ಪ್ರತ್ಯಕ್ಷವಾಗಿ ಆರೋಗ್ಯ ಪರೀಕ್ಷೆ ಆಗದಿದ್ದಾಗ ಆರೋಗ್ಯ ಪರೀಕ್ಷೆಯ ವರದಿಯನ್ನು ತುಂಬವದು ಅಗತ್ಯವಿಲ್ಲ.

೪) ಪ್ರಗತಿಪತ್ರಿಕೆಗಳನ್ನು ವರುಷದಲ್ಲಿ ಎರಡು ಸಲ ತುಂಬಬೇಕು. (ಅರ್ಥಾತ್ ಷಾಣ್ಮಾಸಿಕ ಹಾಗು ವಾರ್ಷಿಕ ಪರೀಕ್ಷೆಗಳ ನಂತರ). ವರ್ಗದ ಶಿಕ್ಷಕನು ಅವುಗಳಿಗೆ ಪಾಲಕರಿಂದ ಅಂಕಿತ ಪಡೆದು ತನ್ನ ಅಭಿರಕ್ಷೆಯಲ್ಲಿ (ಕಾವಲ) ಇಟ್ಟುಕೊಳ್ಳಬೇಕು.*

* ಮುಂಬಯಿ ರಾಜ್ಯದ ವಿದ್ಯಾಖಾತೆಯ ಡೈರೆಕ್ಟರರ ನಂ. ಎಸ್. ೯೯/೬೨೧-ಡಿ (ಆರ್) ೧೧ ಜುಲೈ ೧೯೫೦ರ ಆದೇಶದ ಪ್ರಕಾರ ಪ್ರಸಿದ್ಧಪಡಿಸಲಾಗಿದೆ. —ಪ್ರ. ಸಂಪಾದಕರು.

ಜಿ. ಸ್ಕೂ. ಬೋ
ಮು. ಸ್ಕೂ. ಬೋ

ಶಾಲೆಯ ಕ್ರಮಾಂಕ________

ಪ್ರಗತಿಪತ್ರಿಕೆ

೧೯೫ —೧೯೫

ವಿದ್ಯಾರ್ಥಿಯ ಪೂರ್ಣ ಹೆಸರು____________________

ವರ್ಗ________________

ಪಾಲಕನ ಪೂರ್ಣ ಹೆಸರು____________________________________

ಪಾಲಕನ ಉದ್ಯೋಗ__________________________

ಪೂರ್ಣ ವಿಳಾಸ________________________

ಆರೋಗ್ಯ ಪರೀಕ್ಷೆಯ ವರದಿ

ತೂಕ	ಎತ್ತರ	ಎದೆ	ದೃಷ್ಟಿ	ಹಲ್ಲು	ಸಾಮಾನ್ಯ ಶರಾ
ಪೌಂ.	ಫೂ. ಇಂ.	ಇಂ.			

ಆರೋಗ್ಯ ವಿಷಯಕ ವಿಶೇಷ ಸೂಚನೆಗಳು.

ಪುಟ ೨

ಜನೆರಲ್ ರಜಿಸ್ಟರ ನಂ.__________________ ಜನ್ಮ ದಿನಾಂಕ__________

	ವಿಷಯ	ಪರೀಕ್ಷೆಯಲ್ಲಿ ಪಡೆದ ಗುಣಗಳು ಇಲ್ಲವೆ ತರಗತಿ	
		ಷಾಣ್ಮಾಸಿಕ	ವಾರ್ಷಿಕ
೧	ಮಾತೃಭಾಷೆ	ರಲ್ಲಿ	ರಲ್ಲಿ
೨	ಪ್ರಾದೇಶಿಕ ಭಾಷೆ		
೩	ಸಾಮಾನ್ಯ ಜ್ಞಾನ		
೪	ಸಾಮಾನ್ಯ ವಿಜ್ಞಾನ		
೫	ಅಂಕಗಣಿತ/ಗಣಿತ		
೬	ಸಮಾಜ ವಿಜ್ಞಾನ		
೭	ಮೂಲ ಉದ್ಯೋಗ		
೮	ಸಂಗೀತ (ಐಚ್ಛಿಕ)		
೯	ಕಲೆ		
೧೦	ಹಿಂದುಸ್ತಾನಿ		
೧೧	ಶಾರೀರಿಕ ಶಿಕ್ಷಣ		
	ಗುಣಗಳಿಗನುಗುಣವಾಗಿ ಶ್ರೇಣಿ	ರಲ್ಲಿ	ರಲ್ಲಿ
	ಹಾಜರ ಇದ್ದ ದಿನಗಳು	ರಲ್ಲಿ	ರಲ್ಲಿ

ಪ್ರಗತಿ

ನಡತೆ

ಶಿಕ್ಷಕರ ಅಂಕಿತ ಉತ್ತೀರ್ಣ/ಅನುತ್ತೀರ್ಣ

ಪಾಲಕರ ಅಂಕಿತ ಮುಖ್ಯಾಧ್ಯಾಪಕ

ಮೂಲಶಿಕ್ಷಣ—ಸಾಹಿತ್ಯ

ಮೂಲಶಿಕ್ಷಣ ಅಥವಾ ಜೀವನ ಶಿಕ್ಷಣದ ಬಗೆಗೆ ನಮ್ಮ ರಾಜ್ಯದಲ್ಲಿರುವ ಹಿಂದೀ, ಇಂಗ್ಲೀಷ, ಕನ್ನಡ, ಮರಾಠಿ, ಗುಜರಾಥಿ ಭಾಷೆಗಳಲ್ಲಿ ಇರುವ ಪುಸ್ತಕಗಳ ಸೂಚಿಯನ್ನು ಮುಂಬಯಿ ರಾಜ್ಯದ ವಿದ್ಯಾಖಾತೆಯ ಡೈರೆಕ್ಟರರು ತಮ್ಮ ೧೨ ಅಗಸ್ಟ ೧೯೫೦ರ ೧೭೩/೧೬೭—D. ಪತ್ರದ ಕೂಡ ಕಳುಹಿದ್ದಾರೆ. ಅದರೊಳಗಿಂದ ಕನ್ನಡದಲ್ಲಿ ಮೂಲಶಿಕ್ಷಣದ ಬಗೆಗೆ ಇರುವ ಪುಸ್ತಕಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ—

೧. **ಮೂಲಶಿಕ್ಷಣ** ಲೇಖಕರು ಶ್ರೀ. ಎಂ. ಜಿ. ಹಂದ್ರಾಳ
ಪ್ರಕಾಶಕರು: ಶ್ರೀ. ಎಸ್. ಬಿ. ಹರಿಹರ, ಕಿಲ್ಲೆ ಧಾರವಾಡ. ಬೆಲೆ ೩ ರೂ.

೨. **ವರ್ಧಾಶಿಕ್ಷಣ ಯೋಜನೆ** : ಪ್ರಕಾಶಕರು: ಶ್ರೀ. ಗೋವಿಂದರಾಯರು, ಮೈಸೂರ, ಬೆಲೆ ೧೨ ಆಣೆ.

೩. **ಮೂಲಶಿಕ್ಷಣ ಮೀಮಾಂಸೆ** : ಲೇಖಕರು ಶ್ರೀ. ಎಚ್. ಜಿ. ಜೋಶಿ
ಪ್ರಕಾಶಕರು: ಹಿಂದಮಾತಾ ಮುದ್ರಣಾಲಯ, ಧಾರವಾಡ, ಬೆಲೆ ೧ ರೂ. ೧೨ ಆಣೆ

೪. **ಶಿಕ್ಷಕರ ಕೈಪಿಡಿ** : ಲೇಖಕರು ಶ್ರೀ. ಜೆ. ಪಿ. ನಾಯಕ
ಪ್ರಕಾಶಕರು ಪ್ರ. ಶ್ರೀ. ರಾಮಾಶ್ರಯ ಬುಕ್ ಡಿಪೋ, ಧಾರವಾಡ. ಬೆಲೆ ೧ ರೂ.

೫. **ರಾಷ್ಟ್ರೀಯ ಶಿಕ್ಷಣ** : ಲೇಖಕರು ಶ್ರೀ. ದಿವಾಕರ
ಪ್ರಕಾಶಕರು: ಶ್ರೀ. ಎಚ್. ಆರ್. ಮೊಹರೆ, ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ, ಬೆಲೆ ೮ ಆಣೆ

೬. **ಜೀವನ ಶಿಕ್ಷಣ ಹೃದಯ** : ಲೇಖಕರು ಶ್ರೀ. ರಾ. ವಿ. ದೇಸಾಯಿ
ಪ್ರಕಾಶಕರು: ಶ್ರೀ. ಎನ್. ಎಲ್. ದೇಸಾಯಿ C/o ಗುರುನಾಥ ಜೋಶಿ,
ಲೈನಬಝಾರ, ಧಾರವಾಡ. ಬೆಲೆ ೨ ರೂ.

೭. **ಖಾದೀ ದರ್ಶನ** : ಲೇಖಕರು ಶ್ರೀ. ರಾಮಚಂದ್ರ ವಡವಿ
ಪ್ರಕಾಶಕರು: ಶ್ರೀ. ಆರ್. ವ್ಹಿ. ವಡವಿ, ಕರ್ನಾಟಕ ಚರಖಾ ಸಂಘ, ಹುಬ್ಬಳ್ಳಿ. ಬೆಲೆ ೬ ಆ.

೮. **ಬಡವರ ಭಾಗ್ಯ** : ಲೇಖಕರು, ಪ್ರಕಾಶಕರು: ಶ್ರೀ. ಆರ್. ವ್ಹಿ. ವಡವಿ
ಚರಖಾ ಸಂಘ, ಹುಬ್ಬಳ್ಳಿ. ಬೆಲೆ ೪ ಆಣೆ.

೯. **ವಸ್ತ್ರಸ್ವಾವಲಂಬನ ಕೈಪಿಡಿ** : ಅನುವಾದಕರು ಶ್ರೀ. ಆರ್. ಸಾವಕಾರ
ಪ್ರಕಾಶಕರು: ಶ್ರೀ. ವಡವಿ, ಚರಖಾ ಸಂಘ ಹುಬ್ಬಳ್ಳಿ. ಬೆಲೆ ೪ ಆಣೆ

೧೦. **ವಸ್ತ್ರಸ್ವಾವಲಂಬನ ಮಾರ್ಗ** : ಲೇಖಕರು ಹಾಗು ಪ್ರಕಾಶಕರು ಶ್ರೀ. ಆರ್. ವ್ಹಿ. ವಡವಿ
ಚರಖಾ ಸಂಘ, ಹುಬ್ಬಳ್ಳಿ. ಬೆಲೆ ೧೦ ಆಣೆ

೧೧. **ತಕಲಿ ನೂಲಬೇಕೆಂತು ?** : ,, ಬೆಲೆ ೬ ಆಣೆ

೧೨. **ನೂಲುವ ಗಣಿತ ಭಾಗ ೧, ೨** : ,, ಬೆಲೆ ೧ ರೂ.

೧೩. **ಕೈನೇಯಿಗೆಯ ಮಾರ್ಗದರ್ಶಿಕೆ** : ಲೇಖಕರು ಶ್ರೀ. ಎಂ. ಡಿ. ಮೇಲಗಿರಿ
ಪ್ರಕಾಶಕರು: ಶ್ರೀ. ಎನ್. ಎ. ಹೊಸಕೇರಿ,
ವಿಜಯ ಮುದ್ರಣಾಲಯ, ಧಾರವಾಡ. ಬೆಲೆ ೨ ರೂ., ೧೨ ಆ.

ಪ್ರಾಥಮಿಕ ಶಿಕ್ಷಣ

೧೪. ನೇಕಾರಿಕೆ : ಲೇಖಕರು ಶ್ರೀ. ದತ್ತೋಬಾ

ಪ್ರಕಾಶಕರು: ಸೆಕ್ರೇಟರಿ, ಕರ್ನಾಟಕ ಚರಖಾ ಸಂಘ, ಹುಬ್ಬಳ್ಳಿ. ಬೆಲೆ ೫ ರೂ.

೧೫. ಕೈತೋಟದ ಶಿಕ್ಷಕ : ಲೇಖಕರು ಮತ್ತು ಪ್ರಕಾಶಕರು ಶ್ರೀ. ಬಿ. ಎಂ. ಹೊನಗೋಡಿಮಠ

ಶಿಕ್ಷಕ. ಟಿ. ಸಿ. ಎಂ. ವಿಜಾಪೂರ, ಬೆಲೆ ೨॥ ರೂ.

೧೬. ತರಕಾರಿ ಬೆಳೆಗಳು : ಲೇಖಕರು ಶ್ರೀ. ಎಸ್. ಎಂ. ಮುನಿವೆಂಕಟಪ್ಪ

ಪ್ರಕಾಶಕರು: ವ್ಹಾನಿಕುಲ್ ಆ್ಯಂಡ ಕೊ. ೩೯–೪೪,

ಶ್ರೀ ಕೃಷ್ಣ ರಾಜೇಂದ್ರ ಮಾರ್ಕೆಟ, ಬೆಂಗಳೂರ ಸಿಟಿ. ಬೆಲೆ ೧ ರೂ.

೧೭. ಸಪ್ರಯೋಗ ಸಸ್ಯಶಾಸ್ತ್ರ : ಲೇಖಕರು ಶ್ರೀ. ವ್ಹಿ. ಸಿ. ಪಾವಟೆ

೧೮. ಆಧುನಿಕ ರೈತ, ಭಾಗ ೧, ೨ : ಲೇಖಕರು ಶ್ರೀ. ಎಲ್. ಆಯ್. ಆಕಳವಾಡಿ ಮತ್ತು

ನಾರಾಯಣ ಶರ್ಮಾ. ಪ್ರಕಾಶಕರು: ರಾಮಾಶ್ರಯ ಬುಕ್ ಡಿಪೊ, ಧಾರವಾಡ

ಬೆಲೆ ಪ್ರತಿಯೊಂದಕ್ಕೆ ೧೨ ಆಣೆ

ತ್ವರೆಮಾಡಿರಿ ! **ಶಿಕ್ಷಕರಿಗೆ ಸುಸಂಧಿ** **ಇಂದೇ ಬರೆಯಿರಿ !**

ಪ್ರ್ಯಾಕ್ಟಿಸಿಂಗ್‌ಸ್ಕೂಲ ಸರಕಾರೀ ಟ್ರೇನಿಂಗ ಕಾಲೇಜ, ಧಾರವಾಡ.
ಇಲ್ಲಿ ಪ್ರತಿಸಲದಂತೆ ಈ ಸಲವಾದರೂ

**ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪೂರ್ವಪರೀಕ್ಷೆಯ
ಪ್ರಶ್ನೆಪತ್ರಿಕೆಗಳು ಹೊರಡಲಿವೆ.**

ಬೆಲೆ: ೦—೮—೦ ಪ್ರತಿ ಸೆಟ್ಟಿಗೆ

ಬೇಕಾದವರು ಇದೇ ನವ್ಹಂಬರ ೫ನೆಯ ತಾರೀಖಿನೊಳಗಾಗಿ ಹಣವನ್ನು ಮುಂಗಡವಾಗಿ ಮ. ರಾ. ರಾ. ಹೆಡ್‌ಮಾಸ್ತರ ಪ್ರ್ಯಾ. ಸ್ಕೂಲ, ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ ಇವರ ಹೆಸರಿನಿಂದ ಕಳಿಸಬೇಕು. ಮನಿಯಾರ್ಡರ ಕೂಪನದಲ್ಲಿ ತಮ್ಮ ವಿಳಾಸವನ್ನು ಪೂರ್ಣವಾಗಿ ಬರೆಯಬೇಕು. ಮುಂಗಡ ಹಣ ಕಳಿಸಿದಲ್ಲಿ ಮಾತ್ರ ಪ್ರಶ್ನೆಪತ್ರಿಕೆಗಳನ್ನು ಕಳಿಸಲಾಗುವದು.

ಮೂಲೋದ್ಯೋಗವನ್ನು ಪರೀಕ್ಷೆಗೆಂದು ಕಲಿಸಿದ ಶಾಲೆಯ ಶಿಕ್ಷಕರು ತಾವು ಕಲಿಸಿದ ಉದ್ಯೋಗದ ಹೆಸರನ್ನು ತಿಳಿಸಿದಲ್ಲಿ, ಆಯಾ ಪ್ರಶ್ನೆಪತ್ರಿಕೆಗಳನ್ನೂ ಕಳಿಸಲಾಗುವದು.

—ಹೆ. ಮಾ. ಪ್ರ್ಯಾ. ಸ್ಕೂಲ, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನಲ್ಲಿ ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆಯಲ್ಲಿ ಬಹುಮಾನ ಪಡೆದವರು (೧೯೪೯-೫೦.)

ಅ. ನಂ.	ಬಹುಮಾನದ ಹೆಸರು	ಹಣ ರೂ.	ಆ.	ಪೈ.	ಬಹುಮಾನದ ಅರ್ಹತೆ	ಬಹುಮಾನ ಪಡೆದವರು
೧	ಗಾಯಿಲ್ಸ ಬಹುಮಾನ	೧೬	೮	೦	ಶಿಕ್ಷಣ ಕಲೆಯ ತಾತ್ವಿಕ ಹಾಗು ಪ್ರಾತ್ಯಕ್ಷಿಕೆಯಲ್ಲಿ ೧ನೇ ನಂ. ಪಡೆದವರು	ಶ್ರೀ ಜ. ಬ. ನವಾತಿ, ಡಿ.ಎಸ್.ಬಿ., ಧಾರವಾಡ
೨	ಸಾಮಾನ್ಯ ಬಹುಮಾನ	೧೨	೦	೦	– ಸದರ – ೨ನೇ ನಂ. ಪಡೆದವರು	ಶ್ರೀ. ಸೀ. ಗ. ಹೆಗಡೆ, ಡಿ.ಎಸ್.ಬಿ., ಕಾರವಾಡ ಮತ್ತು ಶ್ರೀ ಪಾ. ಸ. ಮುನಗೋಳಿ, ಎಂ.ಎಸ್.ಬಿ., ಸೊಲ್ಲಾಪೂರ
೩	ಸರ್ ಜೇಮ್ಸ ಮೊಂಟೇಥ ಬಹುಮಾನ ನಂ. ೧	೧೫	೦	೦	ಕನ್ನಡದಲ್ಲಿ ೧ನೇ ನಂ. ಪಡೆದವರು	ಶ್ರೀ. ಸಿ. ಗ. ಹೆಗಡೆ, ಡಿ.ಎಸ್.ಬಿ., ಕಾರವಾರ
೪	– ಸದರ – ನಂ. ೨	೧೩	೦	೦	– ಸದರ – ೨ನೇ ನಂ. ಪಡೆದವರು	ಶ್ರೀ. ಪ. ವಿ. ಮಠದ, ಖಾಸಗಿ ಸಂಸ್ಥೆ, ಧಾರವಾಡ
೫	ಸಾಮಾನ್ಯ ಬಹುಮಾನ ನಂ. ೨	೧೨	೦	೦	ಗಣಿತ ಹಾಗು ಶಾಸ್ತ್ರಿಯ ವಿಷಯಗಳಲ್ಲಿ ೧ನೇ ನಂ. ಪಡೆದವರು	ಶ್ರೀ. ಲಿಂ. ದ್ಯಾ. ತಿಪ್ಪಶೆಟ್ಟಿ, ಡಿ.ಎಸ್.ಬಿ., ಧಾರವಾಡ
೬	– ಸದರ – ನಂ. ೩	೧೨	೦	೦	ಚಿತ್ರಕಲೆ ಹಾಗು ಕೈಕೆಲಸದಲ್ಲಿ ೧ನೇ ನಂ. ಪಡೆದವರು	ಶ್ರೀ. ಮು. ಕ. ತಿಮ್ಮಾಪೂರ, ಡಿ.ಎಸ್.ಬಿ., ಧಾರವಾಡ ಮತ್ತು ಶ್ರೀ. ಶಂ. ಗು. ಕುಂಬಾರ, ಡಿ.ಎಸ್.ಬಿ., ಧಾರವಾಡ
೭	ಚಾಟಫೀಲ್ಡ ಸ್ಮಾರಕ ಬಹುಮಾನ	೧೬	೦	೦	ಅತ್ಯುಚ್ಚ ಪ್ರಗತಿಗಾಗಿ	ಶ್ರೀ. ಜ. ಬ. ನವಾತಿ, ಡಿ.ಎಸ್.ಬಿ., ಧಾರವಾಡ

ಧಾರವಾಡ
ತಾ. ೨೯-೯-೧೯೫೦

(ಸಹಿ) ಬಿ. ಎಂ. ಮೀಮಾಂಸಿ
ಎಜ್ಯುಕೇಶನಲ್ ಇನ್ಸಪೆಕ್ಟರ, ಧಾ. ಭಾ., ಧಾರವಾಡ

ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ
ಹರಿಜನ ದಿನಾಚರಣೆ ಮತ್ತು ಗ್ರಾಮ ಸುಧಾರಣಾ ಸಪ್ತಾಹದ ಕಾರ್ಯಕ್ರಮಗಳು

★

ದಿನಾಂಕ ೧-೧೦-೫೦
ಎಲ್ಲ ಶಿಕ್ಷಕ ವಿದ್ಯಾರ್ಥಿನಿಯರು ಹರಿಜನ ಕೇರಿಗೆ (ಮದಾರಮಡ್ಡಿಗೆ) ಹೋಗಿ ಹುಲ್ಲು ಸಣ್ಣಸಣ್ಣ ಕಂಟಿಗಳನ್ನು ಕಿತ್ತಿ ಓಣಿಯನ್ನು ಮುಂಜಾನೆ ೭-೩೦ ಘಂಟೆಯಿಂದ ೧೦ ಘಂಟೆಯ ವರೆಗೆ ಸ್ವಚ್ಛ ಮಾಡಿದರು. ೧೦-೩೦ ಘಂಟೆಗೆ ಹರಿಜನ ಬೋರ್ಡಿಂಗಿನ ಮುಂದಿನ ಬೈಲಿನಲ್ಲಿ ಧ್ವಜವಂದನೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಮಧ್ಯಾಹ್ನ ೪-೩೦ ಘಂಟೆಗೆ ನಗರ ಸಭೆಯ ಅಟ್ಟದ ಮೇಲೆ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದರು.

ದಿನಾಂಕ ೨-೧೦-೫೦
ಗಾಂಧೀ ಸಪ್ತಾಹದ ನಿಮಿತ್ತವಾಗಿ ಯಾವತ್ತು ಶಿಕ್ಷಕಿ ವಿದ್ಯಾರ್ಥಿನಿಯರು ಮತ್ತು ಪ್ರಾ. ಸ್ಕೂಲಿನ ವಿದ್ಯಾರ್ಥಿನಿಯರು ಹಾಗು ಶಿಕ್ಷಕಿಯರು, ಕಾಲೇಜ ಶಿಕ್ಷಕ ಶಿಕ್ಷಕಿಯರು ಇವರನ್ನು ಎರಡು ಗುಂಪುಗಳನ್ನಾಗಿ ಮಾಡಿತು. ಒಂದು ಸಪ್ತಾಪುರಕ್ಕೆ ಮತ್ತೊಂದು ಸೈದಾಪುರಕ್ಕೆ ಈ ಪ್ರಕಾರ ನಿಯಮಿಸಿದ ಭಾಗಗಳಿಗೆ ಆಯಾಗುಂಪಿನವರು ಹೋಗಿ ಅಲ್ಲಿನ ಸ್ಥಳಿಕ ಜನರೊಡನೆ ಕೂಡಿಕೊಂಡು ಅಲ್ಲಿ ಧ್ವಜವಂದನೆಮಾಡಿದರು.

ದಿನಾಂಕ ೩-೧೦-೫೦
ಪ್ರತಿ ಒಂದು ವರ್ಗದಿಂದ ೫ ವಿದ್ಯಾರ್ಥಿನಿಯರಂತೆ ಹೋಗಿ ಸೈದಾಪುರದಲ್ಲಿ ಸಾರ್ವಜನಿಕ ನಳದ ಸುತ್ತಲೂ ಇದ್ದ ಹುಲ್ಲನ್ನು ಕಿತ್ತಿ ನಿಂತನೀರು ಹೋಗಲಿಕ್ಕೆ ಹರಿಯನ್ನು ಮಾಡಿದರು. ಸಪ್ತಾಪುರದಲ್ಲಿ ಕುಡಿಯುವ ನೀರಿನ ಭಾವಿಯ ಸುತ್ತಲೂ ಸ್ವಚ್ಛಮಾಡಿದರು. ಮಧ್ಯಾಹ್ನ ೨ರಿಂದ ೫ರ ವರೆಗೆ ಸೂತ್ರಯಜ್ಞ ಹಾಗೂ ೫ರಿಂದ ೬ರ ವರೆಗೆ ಜೋಳದ ಹೊಲದಲ್ಲಿ ಕಳೆತೆಗೆಯುದು ಕಾಲೇಜ ಕಂಪೌಂಡದ ಸಫಾಯಿ ಕೆಲಸ ಮಾಡಿದರು.

ದಿನಾಂಕ ೪-೧೦-೫೦
ಸೂತ್ರಯಜ್ಞ ಹಾಗೂ ಬಟಾಟಿ ಹೊಲದಲ್ಲಿ ಕಳೆಕೀಳುವದು. ಆಟದ ಬೈಲಿನ ಸ್ವಚ್ಛತೆ.

ಸಾಮೂಹಿಕ ಸೂತ್ರಯಜ್ಞ ಮತ್ತು ಮೆಣಸಿನ ಹೊಲದಲ್ಲಿ ಕಳೆಕೀಳುವದು. ಆಟದ

ದಿನಾಂಕ ೫-೧೦-೫೦
ಬಯಲನ್ನು ಸಮಮಾಡುವದಕ್ಕಾಗಿ ಕಡಿದಿದ್ದ ಮಣ್ಣು ಕಲ್ಲು ಇವುಗಳನ್ನು ತೆಗೆದು ತಗ್ಗಿನಲ್ಲಿ ಹಾಕಿದರು.

ದಿನಾಂಕ ೬-೧೦-೫೦
ಬದನೆಯ ಗಿಡದಲ್ಲಿ ಕಳೆತೆಗೆದು ಕ್ಯಾಬೇಜ ಹಚ್ಚಲು ಮಡಿಗಳನ್ನು ತಯಾರಿಸುವದು.

ದಿನಾಂಕ ೭-೧೦-೫೦
ಸಾಮೂಹಿಕ ಸೂತ್ರಯಜ್ಞ. ಕಾಲೇಜ ಕಂಪೌಂಡದ ಸ್ವಚ್ಛತೆ.

ದಿನಾಂಕ ೮-೧೦-೫೦
ಸಾಮೂಹಿಕ ಸೂತ್ರಯಜ್ಞ ಮತ್ತು ಸಫಾಯಿ.

ದಿನಾಂಕ ೯-೧೦-೫೦
ಸಾಮೂಹಿಕ ಸೂತ್ರಯಜ್ಞ ಮತ್ತು ಸಫಾಯಿ.

ದಿನಾಂಕ ೧೦-೧೦-೫೦
ಶಿ. ವಿದ್ಯಾರ್ಥಿನಿಯರ ಮಹಾತ್ಮರ ಜೀವನ ಬಗ್ಗೆ ನಿಬಂಧ ಸ್ಪರ್ಧೆ.

ದಿನಾಂಕ ೧೧-೧೦-೫೦
ಮುಕ್ತಾಯ ಸಮಾರಂಭ:- ಮಹಾತ್ಮಾಗಾಂಧಿಯವರ ಜೀವನ, ಜಾತೀಯತೆಯ ನಿರ್ಮೂಲನ, ಖಾದೀ ಧಾರಣ ಮುಂತಾದವುಗಳ ಬಗ್ಗೆ ಹಾಡುಗಳು ಹಾಗೂ ಸಂಭಾಷಣೆಗಳು ಮುಂತಾದವುಗಳು.

ಸಪ್ತಾಹದಲ್ಲಿ ವಿದ್ಯಾರ್ಥಿನಿಯರಿಗೆ ಹಾಗು ಶಿಕ್ಷಕ-ಶಿಕ್ಷಿಕೆಯರಿಗೆ ಸಫಾಯಿ ಕೆಲಸ ಮಾಡಲು ಪ್ರತ್ಯೇಕವಾಗಿ ನಿರ್ದಿಷ್ಟ ಕ್ಷೇತ್ರಗಳನ್ನು ಗೊತ್ತುಮಾಡಿಕೊಡಲಾಗಿತ್ತು.

ಹೊಸ ಅಭ್ಯಾಸಪತ್ರಿಕೆಯಂತೆ ಬರೆದುದು—

ಶಾಲೋಪಯೋಗಿ ಸಚಿತ್ರ ಹಾಗೂ ಸಶಾಸ್ತ್ರ

ಹೊಲಿಗೆಯ ಶಿಕ್ಷಣ

ಭಾಗ ೧ ಮತ್ತು ಭಾಗ ೨

ಪ್ರತಿಯೊಂದು ಭಾಗದ ಬೆಲೆ ೧ ರೂಪಾಯಿ

ಶ್ರೀಮತಿ ಬಿ. ಕಮಲಾಬಾಯಿ, ಎಂ.ಎ.,ಬಿ.ಟಿ. ಲೇಡಿ ಸುಪರಿಂಟೆಂಡೆಂಟ್, ಕಸ್ತೂರಬಾ ವಿದ್ಯಾಲಯ ಅಮರಗೋಳ ಅವರು ಈ ಪುಸ್ತಕವನ್ನು ತುಂಬ ಪ್ರಶಂಶಿಸಿದ್ದಾರೆ. ಶ್ರೀಮತಿ ಉಮಾಬಾಯಿ ಕುಂದಾಪೂರ ಇವರೂ ಇದನ್ನು ಹೊಗಳಿದ್ದಾರೆ.

ಹೊಲಿಗೆಯ ಕಲೆಯನ್ನು ಕಲಿಯಬಯಸುವ ವಿದ್ಯಾರ್ಥಿ—ವಿದ್ಯಾರ್ಥಿನಿಯರಿಗೂ ಇತರರಿಗೂ ಅತ್ಯುಪಯುಕ್ತವಾದುದು, ಸಂಗ್ರಾಹ್ಯವಾದುದು.

ರಾಮಾಶ್ರಯ ಬುಕ್ ಡಿಪೋ, ಧಾರವಾಡ.

ಪುಟ ೨೭೫ ಬೆಲೆ ೨ ರೂ. ೧೨ ಆ.

ಕೈನೇಯಿಗೆಯ ಮಾರ್ಗದರ್ಶಿಕೆ

ಲೇಖಕರು : ಎಂ. ಡಿ. ಮೇಲಗಿರಿ

ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ್, ಧಾರವಾಡ ಭಾಗ, ಧಾರವಾಡ, ಅವರ ಪತ್ರ ನಂ. ೧೯೭೭/೩೦—೮-೫೦ ಅನ್ವಯ ಟ್ರೇ. ಕಾ.ದ ೧ನೆಯ ಹಾಗು ೨ನೆಯ ವರ್ಷದ ವಿದ್ಯಾರ್ಥಿಗಳಿಗೆ "ಪೂರಕ ಓದು" ಎಂದು ಸರಕಾರದಿಂದ ಮಂಜೂರಾಗಿದೆ. ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ.

— ಎಮ್. ಕೆ. ಮೇಲಗಿರಿ —

ಕಮಲಾಪುರ ಭಾಗ,
(ಈಶ್ವರದೇವರ ಗುಡಿ ಓಣಿ)
ಧಾರವಾಡ.

ಪುಟ ೨೨೫ ಬೆಲೆ ೨ ರೂ. ೪ ಆ.

ಕೈ ನೂಲು

ಲೇಖಕರು : ಎಂ. ಡಿ. ಮೇಲಗಿರಿ.
(ಮೂಲೋದ್ಯೋಗ ಶಿಕ್ಷಕ, ಕ. ಗಂ. ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ)

ಈ ಪುಸ್ತಕದಲ್ಲಿ ಪ್ರಾಥಮಿಕ ಶಾಲೆಗಳ ಎಲ್ಲ ವರ್ಗಗಳ ಹಾಗು ಟ್ರೇನಿಂಗ ಕಾಲೇಜುಗಳ ೧ನೆಯ ವರ್ಷದ ಹೊಸ ಅಭ್ಯಾಸಪತ್ರಿಕೆಯಂತೆ ನೂಲುಗಾರಿಕೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಂಗ್ರಹಿಸಿದೆ. ಹತ್ತಿಯ ಬಿತ್ತಿಗೆಯನ್ನು ಮೊದಲುಗೊಂಡು ನೂಲು ಸಿದ್ಧವಾಗುವ ವರೆಗಿನ ಎಲ್ಲ ಸಂಗತಿಗಳನ್ನು ಸಮಯೋಜಿತ ಚಿತ್ರಗಳಿಂದಲೂ ಉದಾಹರಣೆಗಳಿಂದಲೂ ತಾಂತ್ರಿಕ ವಿವರಣೆಗೆ, ನೂಲುಗಾರಿಕೆಗೆ ಸಂಬಂಧಿಸಿದ ಗಣಿತ ಹಾಗೂ ಲೆಕ್ಕಪತ್ರಿಕೆಗಳನ್ನೂ ಸೇರಿಸಿದೆ. ನೂಲುವ ವರ್ಗಗಳನ್ನು ಸ್ವತಂತ್ರವಾಗಿ ನಡೆಯಿಸುವ ಬಗ್ಗೆ ಶಿಕ್ಷಕ ಶಿಕ್ಷಕಿಯರಿಗೂ ಖಾದೀ ಕಾರ್ಯಕರ್ತರಿಗೂ ತುಂಬಾ ಉಪಯುಕ್ತವಾಗಿದೆ.

ಬಹು ಜನರಿಂದ ಮನ್ನಣೆ ಪಡೆದ ಹಿಂದೀ
ಕಲಿಯಲು ಅತಿ ಸುಲಭವಾದ
ಒಂದೇ ಒಂದು ಪುಸ್ತಕ

ಹಿಂದುಸ್ತಾನಿ
ಕನ್ನಡ ಬಾಲಬೋಧೆ

ಬೆಲೆ: ೦—೬—೦

ಲೇಖಕ: **ಎಸ್. ವ್ಹಿ. ಭಟ್ಟೆ**
ಬಿ. ಎ., ಎಸ್. ಟಿ. ಸಿ. ವಿಶಾರದ, ಸನದ

ಅಲ್ಲದೆ ನಮ್ಮಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ, ಮಾಧ್ಯಮಿಕ, ರಾಷ್ಟ್ರ ಭಾಷಾ ಮೊದಲಾದ ಪರೀಕ್ಷೆಯ ಎಲ್ಲ ಬುಕ್ಕುಗಳೂ ಹಿಂದೀ ಕಥೆ ಕಾದಂಬರಿಗಳೂ ಸಿಕ್ಕುತ್ತವೆ.

ಆಕಳವಾಡಿ ಬುಕ್ ಡಿಪೋ,
ವಿಜಯರೋಡ, ಧಾರವಾಡ

ವಿದ್ಯಾರ್ಥಿಗಳಿಗೆ ಹೊಸ ವರ್ಷದ ಕಾಣಿಕೆ

ಇದೀಗ ಪ್ರಕಟವಾಗಿದೆ! ತ್ವರೆ ಮಾಡಿರಿ!!

❖ ಪ್ರಶ್ನೋತ್ತರ ಇತಿಹಾಸ ❖

ಶ್ರೀ. ಗಲಗಲಿ ಬರೆದುದು

[ಮುಲ್ಕೀ, ಮ್ಯಾಟ್ರಿಕ್ ಸ್ಕಾಲರಶಿಪ್ ಪರೀಕ್ಷೆಗಳ ವಿದ್ಯಾರ್ಥಿಗಳಿಗಾಗಿ]

ಭಾರತದಲ್ಲಿ ಆರ್ಯರ ಆಗಮನದಿಂದ ಇಂದಿನ ವರೆಗೆ ನಡೆದ ಪ್ರತಿಯೊಂದು ಐತಿಹಾಸಿಕ ಘಟನೆಗಳನ್ನು ಪರೀಕ್ಷೆಯ ದೃಷ್ಟಿಯಿಂದ ಆಯ್ದು ಬರೆಯಲಾಗಿದೆ.

೧೭೦ ಪುಟಗಳು ಆದರೂ ಬೆಲೆ ೧ ರೂ. ಮಾತ್ರ

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್

ಆಕಳವಾಡಿ ಬುಕ್ ಡಿಪೋ,
ವಿಜಯರೋಡ, ಧಾರವಾಡ

ಆದರ್ಶ ಚಿತ್ರಕಲಾ
(IDEAL DRAWING)

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ಅತ್ಯುತ್ತಮವಾದ ಪುಸ್ತಕವು
ಕಡೆಗಣಿಸಲ್ಪಟ್ಟ ೧೦೦ ಗುಣಗಳ ವಿಷಯ.
ಲೇಖಕರು: ಶ್ರೀ. ಎಸ್. ಕೆ. ಜೋಶಿ
ಡ್ರಾಯಿಂಗ ಶಿಕ್ಷಕರು, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧುಳಿಯಾ.

- ಈ ಪುಸ್ತಕದಲ್ಲಿ ಅಬ್ಜಕ್ಟ, ಮೆಮರಿ, ಡಿಜೈನು, ನೇಚರ ಮತ್ತು ದೃಷ್ಟಾಂತ ಲೇಖನಕಲೆಯ ಒಂದು ಸಾವಿರಕ್ಕಿಂತ ಹೆಚ್ಚು ಚಿತ್ರಗಳಿವೆ. ಬಣ್ಣಗಳ ಮಿಶ್ರಣವನ್ನು ತೋರಿಸುವದಕ್ಕಾಗಿ ಮೂರು ಬಣ್ಣದ ನಾಲ್ಕು ಚಿತ್ರಗಳು. ನಾನಾಬಗೆಯ ಚಿತ್ರಗಗಳನ್ನು ಚಿತ್ರಿಸುವ ದಾರಿಯನ್ನು ವರ್ಣಿಸುವ ಪದ್ಧಗಳು.
- ಈ ಪುಸ್ತಕವು ಪ್ರಾಥಮಿಕ ಶಾಲೆಗಳ ಮೇಲಿನ ತರಗತಿಗಳ, ಹೈಸ್ಕೂಲುಗಳ ಮತ್ತು ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಅತ್ಯುಪಯುಕ್ತವಾಗಿದೆ. ಎಲಿಮೆಂಟರಿ ಮತ್ತು ಇಂಟರಮಿಜಿಯೆಟ್ ಡ್ರಾಯಿಂಗ ಪರೀಕ್ಷೆಗಳ ವಿದ್ಯಾರ್ಥಿಗಳಿಗಂತೂ ಇದು ವಿಶೇಷ ಉಪಯುಕ್ತವಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ನಡೆದ ವಿವಿಧ ಡ್ರಾಯಿಂಗ ಪರೀಕ್ಷೆಗಳ ಪ್ರಶ್ನಪತ್ರಿಕೆಗಳೂ ಇದರಲ್ಲಿ ಸೂಡಲ್ಪಟ್ಟಿವೆ.
- ಬೆಲೆ: ೦–೧೨–೦ ಅಂಚೆವೆಚ್ಚ ೦-೪-೦ ಅಂಚೆಯಿಂದ, ವ್ಹಿ. ಪಿ. ಯಿಂದ ೨-೪-೦ ನಿಮ್ಮ ಸಮೀಪದ ಪುಸ್ತಕ ವ್ಯಾಪಾರಿಗಳಿಂದ ತರಿಸಿಕೊಳ್ಳಿರಿ; ಅಥವಾ ಕೆಳಗಿನವರಿಗೆ ಬರೆದು ತರಿಸಿ ಕೊಳ್ಳಿರಿ.

ಜಿ. ನಾರಾಯಣ್. ರಾಜಡೆ
ಪ್ರಕಾಶಕರು, ೩೪೩, ಕಸಬಾಪೇಟೆ, ಪುಣೆ ೨.

Regd. No. B. 5375

ಸನ್ ೧೯೪೭—೪೮ ನೆಯ ಸಾಲಿನಲ್ಲಿ ಹೊರಟ ಹೊಸ ಅಭ್ಯಾಸಪತ್ರಿಕೆಗೆ
ಅನುಸರಿಸಿ ಬರೆದ ನಮ್ಮ ಪ್ರಕಟನೆಗಳು.

೪ನೆ ಇಯತ್ತೆಗಾಗಿ

ಭೂಮಂಡಲ ಪರಿಚಯ ಭಾಗ ೧

ಬೆಲೆ ೦—೧೨—೦

ಇದರಲ್ಲಿ ಮುಂಬಯಿಕರ್ನಾಟಕ, ಮಹಾರಾಷ್ಟ್ರ, ಗುಜರಾತ, ಕೊಂಕಣ ಮೊದಲಾದವುಗಳಲ್ಲಿಯ ಜನರ ಜೀವನ ಕ್ರಮವನ್ನು ಹವೆ ಮಳೆ, ಬೆಳೆ ಮೊದಲಾದವುಗಳನ್ನು ವಿವರವಾಗಿ ವರ್ಣಿಸಲ್ಪಟ್ಟಿದೆ; ಅಲ್ಲದೆ ವಿಶಾಲಕರ್ನಾಟಕದ ಸಂಕ್ಷಿಪ್ತ ಮಾಹಿತಿಯನ್ನು ಕೊಟ್ಟಿರುತ್ತದೆ. ವಿಲೀನೀಕೃತ ವಿಜಾಪುರ ಬೆಳಗಾಂವ ಜಿಲ್ಹೆಯ ನಕಾಶ ಹಾಗು ವಿಶಾಲ ಕರ್ನಾಟಕದ ನಕಾಶವನ್ನು ಸೇರಿಸಲಾಗಿದೆ. ಸುಮಾರು ೬೦ ಚಿತ್ರ ನಕಾಶಗಳು ಇರುತ್ತವೆ.

ಕನ್ನಡ ನಾಡಿನ ಚರಿತೆ

ಬೆಲೆ ೦—೧೪—೦

ಇದರಲ್ಲಿ ಕರ್ನಾಟಕದಲ್ಲಿ ಆಗಿಹೋದ ಶೂರ ಅರಸರ, ಕವಿಗಳ, ಧರ್ಮಗುರುಗಳ, ವೀರ ರಮಣಿಯರ ಜೀವನ ಚರಿತ್ರವನ್ನು ಸುಲಭ ಭಾಷೆಯಲ್ಲಿ ಕಥಾರೂಪವಾಗಿ ವಿವರಿಸಲಾಗಿದೆ.

ಸಾಮಾನ್ಯ ಜ್ಞಾನ

ಬೆಲೆ ೦—೮—೦

ಇದರಲ್ಲಿ ಮನೆಯಲ್ಲಿ ಸಾಕುವ ಪ್ರಾಣಿಗಳು, ಮುಖ್ಯ ಬೆಳೆಗಳು, ಬೇನೆಗಳು, ಹಳ್ಳಿಯ ಹಾಗೂ ನಗರದ ಆಡಳಿತೆ, ಪಂಚಾಗ ಮೊದಲಾದವುಗಳ ವಿಷಯವಾಗಿ ಸವಿಸ್ತಾರ ವರ್ಣನೆ,ಅದೆ. ಅನೇಕ ಚಿತ್ರಗಳು.

೫ನೆ ಇಯತ್ತೆಗಾಗಿ ಸಂಯುಕ್ತ ಅಭ್ಯಾಸ ಪತ್ರಿಕೆಗನುಸರಿಸಿ,

ಸಾಮಾನ್ಯ ವಿಜ್ಞಾನ ಭಾಗ ೧

ಬೆಲೆ ೦—೧೨—೦

ಇದರಲ್ಲಿ ಮಾನವನ ಹಾಗೂ ಪ್ರಾಣಿಗಳ ಶ್ವಾಸೋಚ್ಛ್ವಾಸ, ಪೋಷಣ, ಚಲನೆ, ಜ್ಞಾನ ಗ್ರಹಣ, ನೀರು ಹಾಗು ಪಂಚಾಂಗಗಳ ವಿಷಯ ಸವಿಸ್ತರವಾಗಿ ವರ್ಣಿಸಲಾಗಿದೆ.

ಭೂಮಂಡಲ ಪರಿಚಯ ಭಾಗ ೨

ಬೆಲೆ ೧—೨—೦

ಇದರಲ್ಲಿ ಪೃಥ್ವಿಯ ಆಕಾರ, ಪ್ರಾಯೋಗಿಕ ಹಾಗು ನಿರೀಕ್ಷಣೆಯ ಕೆಲಸ ಹಿಂದುಸ್ತಾನದ ಹವಾಮಾನ ಹಾಗು ಜಗತ್ತಿನ ಹಮಾನದ ಮುಖ್ಯ ಪ್ರಕಾರಗಳ ವಿಷಯಕ್ಕೆ ವಿಶದವಾಗಿ ವರ್ಣಿಸಲ್ಪಟ್ಟಿದೆ.

ಇದೇ ಪ್ರಕಾರ ೬ ನೆಯತ್ತೆಯ ಸಾಮಾನ್ಯ ವಿಜ್ಞಾನ ೦—೧೨—೦ ಭೂಮಂಡಲ ಪರಿಚಯ ಭಾಗ ೩ ಬೆಲೆ ೧—೮—೦

ಅಲ್ಲದೆ ಪ್ರಾಥಮಿಕ ಪ್ರಮಾಣಪತ್ರ ಅಭ್ಯಾಸ ಪತ್ರಿಕೆಯಂತೆ ಸಾಮಾನ್ಯ ವಿಜ್ಞಾನ ಬೆಲೆ ರೂ ೧—೪—೦ ಭೂಮಂಡಲ ಪರಿಚಯ ಭಾಗಗಳ ಬೆಲೆ ರೂ ೨—೦—೦

ಮೇಲೆ ಕಾಣಿಸಿದ ಎಲ್ಲ ಪುಸ್ತಕಗಳು ಎಲ್ಲ ವ್ಯಾಪಾರಸ್ಥರಲ್ಲಿ ದೊರೆಯುತ್ತವೆ.

ಇಲ್ಲವಾದರೆ

ಪ್ರಕಾಶಕರು:

ರಾಮಾಶ್ರಯ ಬುಕ್ ಡಿಪೋ ಧಾರವಾಡ

ಇವರಿಗೆ ಇಂದೇ ಪತ್ರ ಬರೆಯಿರಿ.

Printed by M. A. Kamat B. Sc. at Jai Hind Art Press, Javlipeth, Dharwar. Edited and Published by K. G. Kurtkoti, B. M Shintri, S. R. Tatti, & Y. D. Nadkarni jointly at the Kannada Prathamik Shikshan Office Govt. Training College for Men, Dharwar.

— ಪ್ರಧಾನ ಸಂಪಾದಕರು —

ಕೆ. ಜಿ. ಕುರ್ತಕೋಟಿ

ಕರ್ನಾಟಕ ವಿಶ್ವವಿದ್ಯಾಲಯದ
ಪ್ರಥಮ ಪದವಿದಾನ ಸಮಾರಂಭದ
ದೃಶ್ಯಗಳು.

ವಾರ್ಷಿಕ ಚಂದಾ
೪ ರೂಪಾಯಿ

ನವ್ಹೆಂಬರ
೧೯೫೦

— ಬಿಡಿ ಪ್ರತಿ —
೬ ಆಣೆ

ಫೋಟೋಗಳು: ಗುರುನಾಥ ಜೋಶಿ ಪಡಿಯಚ್ಚು: ಜಯ ಕರ್ನಾಟಕದ ಕೃಪೆಯಿ

ಕನ್ನಡ ಪ್ರಾಥಮಿಕ ಶಿಕ್ಷಣ, ಧಾರವಾಡ

ಹೊಸ ಸಂಪಾದಕ ಮಂಡಳ

ಎಡದಿಂದ ಬಲಕ್ಕೆ :— ಶ್ರೀ. ಎಸ್. ಆರ್. ತಟ್ಟಿ, ಶ್ರೀ. ಕೆ. ಜಿ. ಕುರ್ತಕೋಟಿ, ಶ್ರೀ. ಬಿ. ಎಂ. ಮೀಮಾಂ (ಎಜ್ಯುಕೇಶನಲ್ ಇನ್ಸ್‌ಪೆಕ್ಟರ ಮತ್ತು ಸಂಚಾಲಕರು), ಶ್ರೀ. ವಾಯ್. ಡಿ. ನಾಡಕರ್ಣಿ, ಶ್ರೀ. ಬಿ. ಎಂ. ಶಿಂತ್ರಿ.

— ಪರಿವಿಡಿ —

೧.	ಸಂಪಾದಕೀಯ	....	೩
೨.	ಬೀಜಗಣಿತದ ಅಭ್ಯಾಸದಿಂದಾಗುವ ಲಾಭಗಳು	ಶ್ರೀ. ಎಸ್. ಆರ್ ಶೆಟ್ಟಿ	೫
೩.	ನಮ್ಮ ಕಾರ್ಪೆಂಟರಿ ಸೆಂಟರ, ಔಂಧ ಕ್ಯಾಂಪ, ಪೂಣಾ	....	೧೦
೪.	ಸ್ವಾತಂತ್ರ್ಯಕ್ಕೆ ಗಂಡಾಂತರ (ವಿಮರ್ಶೆ)	ಶ್ರೀ. ವೀರೇಶ ಹಿರೇಮಠ	೧೧
೫.	ಪಾಳಯಗಾರರು	ಶ್ರೀ. ಶಿಂತ್ರಿ ಬಸಪ್ಪನವರು	೧೨
೬.	ಸಾಮಾಜಿಕ ಜೀವನಕ್ಕಾಗಿ ಶಿಕ್ಷಣ	ಶ್ರೀ. ಎ. ಕೊ. ಜವಳಿ	೧೫
೭.	ಪ್ರಾ. ಶಾ. ಪ್ರಮಾಣಪತ್ರ ಪರೀಕ್ಷೆಯ ಕಾರ್ಯಕ್ರಮ	....	೧೯
೮.	ಮೂಲ ಶಿಕ್ಷಣ ಪ್ರಾಯೋಗಿಕ ಕ್ಷೇತ್ರ, ಧಾರವಾಡ	ಶ್ರೀ. ಗೋ. ಗು. ನಾಡಗೀರ	೨೫
೯.	ಕನ್ನಡ ಸ್ಕೂಲ ಬುಕ್ಕ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು	....	೨೬

——— o ———

ಕನ್ನಡ ೭ನೆಯ ಇಯತ್ತೆಗಾಗಿ

ಆರೋಗ್ಯ ವಿಜ್ಞಾನದಲ್ಲಿ ಪೂರಕ ವಾಚನದ

— ಸಲುವಾಗಿ ಮಂಜೂರಾದದ್ದು —

ಹಳ್ಳಿಯ ಆರೋಗ್ಯ

ಬರೆದವರು: **ಶ್ರೀ. ಎಸ್. ಬಿ. ನಾಡಗೀರ**

ನಿವೃತ್ತ ಎ.ಓ.ಡಿ.ಎಸ್.ಬಿ., ಧಾರವಾಡ

ಬೆಲೆ—೮ ಆಣೆ

ಗ್ರಾಮಗಳ ಸ್ವಚ್ಛತೆ ಹಾಗು ಆರೋಗ್ಯಜೀವನದ ಬಗ್ಗೆ ಹೊಸ ವಿಚಾರಗಳನ್ನು ಬೀರುವ ಪುಸ್ತಕ. ಸಮಾಜ ಶಿಕ್ಷಣಕ್ಕಾಗಿಯೂ ತುಂಬಾ ಉಪಯುಕ್ತ ಪುಸ್ತಕ.

ಪ್ರಾ. ತಿ. ಟ್ರೇನಿಂಗ ಕಾಲೇಜಿಗಾಗಿ

ಹಾಗೂ

ಮಾಧ್ಯಮಿಕ ಶಾಲೆಗಳಿಗಾಗಿ

ಆರೋಗ್ಯವಿಜ್ಞಾನದಲ್ಲಿ ಪೂರಕ ವಾಚನವೆಂದು ಮಂಜೂರಾಗಿದೆ

ಆಹಾರ ವಿಜ್ಞಾನ

ಬರೆದವರು:- **ಶ್ರೀ. ಎಸ್. ಬಿ. ನಾಡಗೀರ**

ನಿವೃತ್ತ ಎ.ಓ.ಡಿ.ಎಸ್.ಬಿ. ಧಾರವಾಡ

ಪ್ರಕಾಶಕರು:- 'ಮಿಂಚಿನ ಬಳ್ಳಿ', ಧಾರವಾಡ

ಬೆಲೆ: ೧ ರೂ. ೪ ಆ.

ಆಹಾರಗಳ ಗುಣಾಂಶಗಳನ್ನೂ ಉಳಿತಾಯವನ್ನು ಸಮತೋಲ ಆಹಾರವನ್ನೊದಗಿಸುವ ವಿವಿಧ ಉಪಾಯಗಳನ್ನು ಚನ್ನಾಗಿ ವಿಶದ ಪಡಿಸುವ ಪುಸ್ತಕ. ಸಮಾಜ ಶಿಕ್ಷಣಕ್ಕೂ ತುಂಬಾ ಉಪಯುಕ್ತವಾಗಿದೆ.

ಚಿ. ಶ್ರೀ ಕುಲಕರ್ಣಿಯವರ ಕಥೆಯ ಪುಸ್ತಕಗಳು

೧. ಭಕ್ತ ಧ್ರುವ	೦	೨	೦
೨. ಶನಿ ಮಹಾತ್ಮೆ	೦	೨	೦
೩. ಮೊದಲನೇ ತರಗತಿಯ ಕಥೆ	೦	೩	೦
೪. ಸುದಾಮ ಚರಿತ್ರೆ	೦	೪	೦
೫. ಮಹಾತ್ಮಾ ಗಾಂಧಿ	೦	೪	೦
೬. ಸುಭಾಸಚಂದ್ರ ಭೋಸ	೦	೪	೯
೭. ಕುಮಾರ ರಾಮಣ್ಣ	೦	೬	೦
೮. ಭಕ್ತ ಹನುಮಾನ	೦	೬	೦
೯. ಶ್ರೀ ಕೃಷ್ಣ ಚರಿತ್ರೆ	೦	೮	೦
೧೦. ಬದರೀ ಚರಿತ್ರೆ	೦	೮	೦
೧೧. ೪ನೇ ತರಗತಿಯ ಕಥೆ	೦	೬	೦
೧೨. ಸಂಧ್ಯಾವಂದನೆ	೦	೩	೦
೧೩. ಚಿತ್ತೂರ ಪದ್ಮಿನಿ	೦	೩	೦

೧೪. ಭಕ್ತ ಪ್ರಲ್ಹಾದ	೦	೨	೦
೧೫. ಗಜೇಂದ್ರ ಮೋಕ್ಷ	೦	೨	೦
೧೬. ಎರಡನೇ ತರಗತಿಯ ಕಥೆ	೦	೪	೦
೧೭. ಮೂರನೇ ತರಗತಿಯ ಕಥೆ	೦	೫	೦
೧೮. ಜವಾಹರಲಾಲ ನೆಹರು	೦	೪	೬
೧೯. ಶ್ರೀ ರಾಮರಕ್ಷೆ	೦	೫	೦
೨೦. ಕುಮಾರ ಕಿಟ್ಟಣ್ಣ	೦	೪	೦
೨೧. ರಾಮಕೃಷ್ಣ ನೀತಿಯ ಕಥೆ	೦	೬	೦
೨೨. ಪುರಂದರ ಪದಗಳು	೦	೮	೦
೨೩. ಸತ್ಯವಾನ ಸಾವಿತ್ರಿ	೦	೮	೦
೨೪. ರಾಷ್ಟ್ರೀಯ ಮಹಾಪುರುಷರು	೦	೧೦	೦
೨೫. ಶಂಕರಾಚಾರ್ಯ	೦	೬	೦

(೧ ರೂಪಾಯಿಗಿಂತ ಕಡಿಮೆ ಕಿಮ್ಮತ್ತಿನ ಪುಸ್ತಕಗಳನ್ನು ವ್ಹಿ. ಪಿ. ಮಾಡಲಾಗುವುದಿಲ್ಲ.)

— ಕೆ. ಎಸ್. ಕುಲಕರ್ಣಿ ಬುಕ್ ಡಿಪೊ, ಹುಬ್ಬಳ್ಳಿ —



ಸಂಪಾದಕ ಮಂಡಲ

ಸಂಚಾಲಕರು. ಶ್ರೀ ಬಿ. ಎಮ್. ಮೀಮಾಂಸಿ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ
ಪ್ರಧಾನ ಸಂಪಾದಕರು: **ಶ್ರೀ. ಕೆ. ಜಿ. ಕುರ್ತಕೋಟಿ**, ಬಿ.ಎ., ಬಿ.ಟಿ. ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು :

ಶ್ರೀ. ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೪೦	ನವಂಬರ ೧೯೫೦	ಸಂಚಿಕೆ ೬

ಸಂಪಾದಕೀಯ

★

ಕರ್ನಾಟಕ ವಿಶ್ವವಿದ್ಯಾಲಯದ ಪ್ರಥಮ ಪದವೀದಾನ ಸಮಾರಂಭ

ಕರ್ನಾಟಕದ ವಿಶ್ವವಿದ್ಯಾಲಯದ ಪ್ರಥಮ ಸಮಾವರ್ತನ ಸಂಸ್ಕಾರವು ೧೯೫೦ ಅಕ್ಟೋಬರ ೧೭ ನೆಯ ತಾರೀಖಿನ ದಿನ ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಜನರಲ್ ಹಾಲ್‍ದಲ್ಲಿ ವಿಜೃಂಭಣೆಯಿಂದ ನೆರವೇರಿತು. ಮುಂಬಯಿ ರಾಜ್ಯದ ರಾಜ್ಯಪಾಲ (ಗವ್ಹರ್ನರ)ರೂ ಕರ್ನಾಟಕ ವಿಶ್ವವಿದ್ಯಾಲಯದ ಕುಲಗುರುಗಳೂ ಆಗಿರುವ ಸರ್ ಮಹಾರಾಜಾಸಿಂಗ ಅವರು ದೀಕ್ಷಾಂತ ಭಾಷಣವನ್ನಿತ್ತರು. ಈ ಸಮಾರಂಭಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಸಿನೆಟ್ ಹಾಗು ಸಿಂಡಿಕೇಟದ ಸದಸ್ಯರೂ ಇತರ ಸದ್ಗೃಹಸ್ಥರೂ ಮಹಿಳೆಯರೂ ಆಗಮಿಸಿದ್ದರು. ಸಮಾವರ್ತನ ಸಂಸ್ಕಾರ ಮಂದಿರವು ಕಿಕ್ಕಿರಿದು ತುಂಬಿತ್ತು. ಸಮಯಕ್ಕೆ ಸರಿಯಾಗಿ ಪದವೀಧರರನ್ನೊಳಗೊಂಡ ಮೆರವಣಿಗೆಯು ವಿಶ್ವವಿದ್ಯಾಲಯದ ಕಚೇರಿಯಿಂದ ಹೊರಟು ಸಭಾಭವನಕ್ಕೆ ಬಂದಿತು. ಮೊದಲು ಉಪಕುಲಗುರುಗಳಾದ ಶ್ರೀ. ಆರ್. ಎ. ಜಹಾಗೀರದಾರ ಅವರು ಕರ್ನಾಟಕ ವಿಶ್ವವಿದ್ಯಾಲಯವು ಸಾಧಿಸಿದ ಕಾರ್ಯಗಳನ್ನು ವಿವರಿಸಿ ಜನತೆಯಿಂದ

ಹಾಗೂ ಸರಕಾರದಿಂದ ಧನಸಹಾಯವನ್ನು ಕೋರಿ ಪದವೀಧರರಿಗೆ ಪದವಿಗಳನ್ನು ಕೊಡಲು ಬಿನ್ನವಿಸಿಕೊಂಡರು.

ಕುಲಗುರುಗಳು ಪದವೀಧರರಿಗೆ ಪದವಿಗಳನ್ನು ಕೊಟ್ಟರು ಮತ್ತು ಶ್ರೀ. ಆರ್. ಎ. ಜಾಗಿರದಾರರ ಚಿನ್ನದ ಪಾರಿತೋಷಕಗಳನ್ನು ಈ ವರುಷದ ಕರ್ನಾಟಕ ವಿಶ್ವವಿದ್ಯಾಲಯದ ಉಚ್ಚ ಹಾಗೂ ಉಚ್ಚತಮ ಪರೀಕ್ಷೆಗಳಲ್ಲಿ ಪ್ರಥಮ ಬಂದವರಿಗೆ ಸಲ್ಲಿಸಲಾಯಿತು.

ಕುಲಗುರುಗಳು ತಮ್ಮ ದೀಕ್ಷಾಂತ ಭಾಷಣದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪದವೀಧರರು ತಾವು ಪಡೆದ ಯೋಗ್ಯತೆಗೆ ತಕ್ಕಂತೆ ರಾಷ್ಟ್ರಕ್ಕೆ ಮತ್ತು ಶಿಕ್ಷಣದ ಪ್ರಗತಿಗೆ ಸೇವೆ ಸಲ್ಲಿಸಬೇಕೆಂದು ಉಪದೇಶಿಸಿದರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಜನತೆ ಧನಸಹಾಯ ಮಾಡಬೇಕು ಎಂದು ಹೇಳಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಏಳ್ಗೆಯನ್ನು ಕೋರಿದರು.

ಕರ್ನಾಟಕ ವಿಶ್ವವಿದ್ಯಾಲಯದ ಕಟ್ಟಡ

ಕರ್ನಾಟಕ ವಿಶ್ವವಿದ್ಯಾಲಯವು ಈಗ ಧಾರವಾಡದ ಸರಕಾರಿ ಗಂಡುಮಕ್ಕಳ ಟ್ರೇನಿಂಗ ಕಾಲೇಜದ ಒಂದು ಭಾಗದಲ್ಲಿ ತನ್ನ ಕಾರ್ಯಕಲಾಪಗಳನ್ನು ಸಾಗಿಸುತ್ತಿ[illegible] ಅದು ತನ್ನ ಸ್ವತಂತ್ರ ಕಟ್ಟಡವನ್ನು ಮುಂದಿನ ವರು[illegible]ದೊಳಗಾಗಿ ಸ್ಥಾಪಿಸಿಕೊಳ್ಳುವುದು ವಿಹಿತವಾದುದ[illegible] ಟ್ರೇನಿಂಗ ಕಾಲೇಜನ್ನು ಬಂದು ಮಾಡಿಸಿ ತಾನು ಕಾಲೇಜದ ಕಟ್ಟಡವನ್ನು ಆಕ್ರಮಿಸಿಕೊಳ್ಳುವುದು ಸೂಕ್ತವಾ[illegible]ಲಾರದು. ಟ್ರೇನಿಂಗ ಕಾಲೇಜುಗಳು ಉಚ್ಚ ವಿದ್ಯಾಭ್ಯಾಸಕ್ಕೆ ತಳಹದಿಯಾಗಿವೆ. ಇವನ್ನು ಬಂದು ಮಾಡು[illegible]ದೆಂದರೆ ಮರದ ಮೇಲೆ ಕುಳಿತು ಬೊಡ್ಡೆಯನ್ನು-ಬೇರ[illegible]ಗಳನ್ನು ಕತ್ತರಿಸಿದಂತೆಯೆ ಸರಿ ಎಂದು ಹೇಳಿದ[illegible] ತಪ್ಪಾಗಲಾರದು. ಇದರಿಂದ ನಾವು ಕರ್ನಾಟಕ ವಿ[illegible] ವಿದ್ಯಾಲಯಕ್ಕೆ ಸ್ಥಳವೀಯಲು ಅಪೇಕ್ಷಿಸುವುದಿಲ್ಲವೆಂದ[illegible] ಯಾರೂ ತಪ್ಪು ಭಾವಿಸಬಾರದಾಗಿ ಬಿನ್ನವಿಸಿಕೊಳ್ಳುತ್ತೇವೆ. ನಮ್ಮ ಕಟ್ಟಡದಲ್ಲಿ ವಿಶ್ವವಿದ್ಯಾಲಯವು ಇರಲಿ ಬೇಗನೇ ತನ್ನ ಸ್ವತಂತ್ರ ಕಟ್ಟಡಗಳನ್ನು ನಿರ್ಮಿಸಿಕೊಳ್ಳಲಿ ಮತ್ತು ಅತ್ಯಂತ ಹಳೆಯ ಟ್ರೇನಿಂ[illegible] ಸಂಸ್ಥೆಯನ್ನು ಇಲ್ಲಿಂದ ಬೇರೆಡೆಗೆ ಸ್ಥಳಾಂತ[illegible]ಸಲು ಕಾರಣೀಭೂತವಾಗದಿರಲಿ ಎಂದಿಷ್ಟೇ ನಮ್ಮ[illegible] ಹಾರೈಕೆ.

ಹೊಸ ಅಭ್ಯಾಸಪತ್ರಿಕೆಗಳು

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಹೊಸ ಅಭ್ಯಾಸಪತ್ರಿಕೆ. ಬೆಲೆ : ೦-೩-೦. ಶಾರೀರಿಕ ಶಿಕ್ಷಣದ ಅಭ್ಯಾಸಪತ್ರಿಕೆ. (೧ರಿಂದ ೭ನೆಯ ಇಯತ್ತೆಯ ವರೆಗೆ) ಬೆಲೆ : ೦-೪-೦. ಅಂಚೆ ವೆಚ್ಚ ಬೇರೆ. ಸ್ವಲ್ಪ ಪ್ರತಿಗಳು ಮಾತ್ರ ಇವೆ. ಬೇಕಾದವರು ಮುಂಗಡವಾಗಿ ಹಣವನ್ನೂ ಒಂದು ಪ್ರತಿಗೆ ಒಂದಾಣೆಯಂತೆ ಅಂಚೆ ವೆಚ್ಚವನ್ನೂ ಕಳುಹಿ ತರಿಸಿಕೊಳ್ಳಬೇಕು.

ಕನ್ನಡ ಪ್ರಾಥಮಿಕ ಶಿಕ್ಷಣ ಕಾರ್ಯಾಲಯ, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಬೀಜಗಣಿತದ ಅಭ್ಯಾಸದಿಂದಾಗುವ ಲಾಭಗಳು

ಲೇಖಕರು: ಶ್ರೀ. ಎಸ್. ಆರ್. ಶೆಟ್ಟಿ ಬಿ.ಎ.,ಬಿ.ಟಿ.

ಬೀಜ ಗಣಿತವನ್ನು ಕಲಿಯುವದರಿಂದ ಅಂಕಗಣಿತದಲ್ಲಿ ಹೊಸ ಹೊಸ ನಿಯಮಗಳನ್ನು ಹುಡುಕಿ ತೆಗೆಯಲಿಕ್ಕೆ ಬರುತ್ತದೆ. ಮೊದಲು ಕೆಲವು ಪ್ರಾಸ್ತಾವಿಕ ಮಾತುಗಳನ್ನು ತಿಳಿದುಕೊಳ್ಳೋಣ.

ಬೀಜಗಣಿತದ ಪರಿಭಾಷೆ

ಒಂದು ಅಂಕಿಯ ಗುರುತಿನ ಮುಂದೆ ಇನ್ನೊಂದು ಅಂಕಿಯನ್ನು ಬರೆದರೆ ಯಾವ ಅರ್ಥವಾಗುವದು ? ೨ರ ಮುಂದೆ ೩ನ್ನು ಹೀಗೆ ೨೩ ಬರೆದರೆ ಏನೆಂದು ಅರ್ಥ! ೨ ಹತ್ತು ಮೇಲೆ ೩ ಎಂದು ಅಥವಾ ೨೩ ಎಂದು. ಐದು ಎಂಬದರ ಗುರುತಾದ V ದ ಮುಂದೆ ಮೂರು ಎಂಬದರ ಗುರುತಾದ III ಇದನ್ನು ಬರೆದರೆ ಏನರ್ಥ ? VIII ಎಂದರೆ ೫+೩ ಅಥವಾ ೮ ಹೀಗೆ ಬರಿಯ ಬೇರೀಜು ಮಾಡಬೇಕೆಂಬ ಅರ್ಥವು ಇನ್ನೊಂದು ಕಡೆ ಅಂಕಗಣಿತದಲ್ಲಿ ಬರುವದು. ಹೇಗೆಂದರೆ ೨೭ ಇದರ ಅರ್ಥವು ೨ ಮತ್ತು ೭ ಅಥವಾ ೨+೭. ಈ ಉದಾಹರಣೆಗಳ ಮೇಲಿಂದ ನಾವು ತಿಳಿದುಕೊಳ್ಳಬೇಕಾದ ಮಾತೇನೆಂದರೆ ಎರಡು ಸಂಖ್ಯಾವಾಚಕ ಗುರುತುಗಳನ್ನು ಒಂದರಹತ್ತರ ಇನ್ನೊಂದನ್ನು ಇಡುವದರಿಂದ ಏನು ತಿಳಿದುಕೊಳ್ಳಬೇಕು ಅಥವಾ ಯಾವ ಅರ್ಥವನ್ನು ಮಾಡಬೇಕೆಂಬುದು ನಾವು ಅನುಸರಿಸುವ ವಿಶಿಷ್ಟ ಪದ್ಧತಿಯನ್ನು ಅವಲಂಬಿಸಿರುತ್ತದೆ. ಬೀಜಗಣಿತದಲ್ಲಿ ನಾವು ಮಾಡಿಕೊಂಡ ಗುಟ್ಟಿನ ಮಾತು (ಪರಿಭಾಷೆ) ಬೇರೆ ಇರುತ್ತದೆ. ಅ ಮತ್ತು ಬ ಎಂಬ ಎರಡು ಸಂಖ್ಯಾದ್ಯೋತಕ ಚಿಹ್ನಗಳನ್ನು ಒಂದರ ಸಮೀಪ ಒಂದನ್ನು ಬರೆದರೆ ಅವುಗಳ ಗುಣಾಕಾರ ಮಾಡಿ ಬಂದ ಫಲ ಎಂಬ ಅರ್ಥವಾಗುವದು. ಅ ಎಂಬುದು ಒಂದು ಲೆಕ್ಕದಲ್ಲಿ ೨೦ ಮತ್ತು ಬ ಎಂಬುದು ೩ ಅದೇ ಲೆಕ್ಕದಲ್ಲಿ ಆಗಿದ್ದರೆ ಅಬ ಎಂದರೆ ೨೦×೩ ಅಥವಾ ೬೦ ಆಗುವದು. ಒಂದು ಸಂಖ್ಯೆ ಮತ್ತು ಒಂದು ಸಾಮಾನ್ಯ ಸಂಖ್ಯಾವಾಚಕ ಅಕ್ಷರ ಇದ್ದರೂ ಹಾಗೆಯೇ ತಿಳಿದುಕೊಳ್ಳಬೇಕು. ಉದಾ ಒಂದು ಸಂದರ್ಭದಲ್ಲಿ 'ದ' ಎಂದರೆ ೨೪ ಎಂದು ಹಿಡಿದಿದ್ದರೆ ೨ ದ ಎಂದರೆ ೨×೨೪ ಅಥವಾ ೪೮ ಎಂದೂ ಅರ್ಥ ಮಾಡಬೇಕು. ೨ರೂಪಾಯಿ ಇದನ್ನು ೨ರೂ. ಎಂದು ಬರೆದಾಗಲೂ ಇದೇ ಅರ್ಥವಾಗುವದು. ೨ ರೂ. ಅಂದರೆ ೧ ರೂ × ೨; ರೂ ಎಂದರೆ ೧ ರೂಪಾಯಿ. ಬೀಜಗಣಿತದಲ್ಲಿಯೂ 'ಅ' ಎಂದರೆ ೧ ಅ, 'ಬ' ಎಂದರೆ ೧ ಬ. ಇನ್ನು ಅವಯವಗಳನ್ನು ಕಲಿಯುವಾಗ $೨^{೩}$ ಹೀಗೆ ಬರೆಯುವದರ ಅರ್ಥವು ನಿಮಗೆ ಗೊತ್ತಿದೆ. ೨ರ ೩ನೆಯ ಘಾತ ಅಥವಾ ಅಂತಸ್ತು ಎಂದರೆ ೨ನ್ನು ಮೂರುಸಾರೆ ಇಟ್ಟು **ಗುಣಿಸಿ ಬಂದ** ಫಲ; ಎಂದರೆ ೨×೨×೨=೮. ೮ ಇದು ೨ರ ೩ನೆಯ ಅಂತಸ್ತು. ೧೦×೧೦×೧೦=೧೦೦೦; ಆದ ಕಾರಣ ೧೦೦೦ ಇದು ೧೦ರ ಮೂರನೆಯ ಅಂತಸ್ತು. ಲಕ್ಷ, ಕೋಟಿ ಎಂಬ ಸಂಖ್ಯೆಗಳನ್ನು ಸ್ವಲ್ಪದರಲ್ಲಿ ಮುಟ್ಟಸವಾಗಿ ಬರೆಯಬಹುದು. ಹೀಗೆ $೧೦^{೫}$ ಇದು ಲಕ್ಷ; $೧೦^{೬}$ ಇದು ದಶಲಕ್ಷ ಇತ್ಯಾದಿ.

ನಾವು ೧೨೩೪ ಹೀಗೆ ಬರೆದ ಸಂಖ್ಯೆಯನ್ನು ಅರ್ಥವು ಪೂರ್ಣ ವಿಶದವಾಗುವಂತೆ ಬರೆಯಬೇಕಾಗಿದ್ದರೆ ಹೀಗೆ ಬರೆಯಬೇಕು.

$$೧೨೩೪=೧೦೦೦+೨೦೦+೩೦+೪$$
$$=೧\times೧೦೦೦+೨\times೧೦೦+೩\times೧೦+೪$$
$$=೧\times೧೦^{೩}+೨\times೧೦^{೨}+೩\times೧೦+೪$$

ಇದರಲ್ಲಿ ಧನ ಚಿಹ್ನದಿಂದ ವಿಂಗಡಿಸಲ್ಪಟ್ಟ ಭಾಗ ಗಳಿಗೆ ಪದಗಳೆಂಬ ಹೆಸರು.

೧೦+೬−೪×೩+೨×೬÷೩

ಈ ಉದಾಹರಣೆಯಲ್ಲಿ ಎಷ್ಟು ಪದಗಳಿವೆ? ಸಾಮಾನ್ಯವಾಗಿ ಧನ ಋಣ ಚಿಹ್ನಗಳಿಂದ ವಿಂಗಡಿಸಲ್ಪಟ್ಟ ಭಾಗಗಳಿಗೆ ಪದಗಳೆಂಬ ಹೆಸರು. ಆದ್ದರಿಂದ ೧೦; ೬; ೪×೩; ೨×೬÷೩ ಹೀಗೆ ನಾಲ್ಕು ಪದಗಳಾದವು. ಪದಗಳ ಸಂಕ್ತಿಗೆ ಪದಾವಳಿ ಎಂಬ ಹೆಸರು.

ಧನ, ಋಣ ಚಿಹ್ನಗಳ ಉಪಯೋಗ

ಒಂದು ಸಂಖ್ಯೆಯ ಹಿಂದೆ ಯಾವ ಚಿಹ್ನವೂ ಇರದಿದ್ದರೆ ಅಧಿಕ ಚಿಹ್ನವು ಇರುವವೆಂದು ಗ್ರಹಿಸಿ ಅರ್ಥ ಮಾಡಬೇಕು. +೨ ಇದರ ಅರ್ಥವು ೨ನ್ನು ಕೂಡಿಸು ಎಂದು; ಇದರಂತೆ −೨ ಇದರ ಅರ್ಥವು ೨ನ್ನು ಕಳೆ.

ಹಾಗಾದರೆ ೧೦+೧−೮ ಇಲ್ಲಿ ೧೦ರ ಹಿಂದೆ ಏನೂ ಚಿಹ್ನವಿಲ್ಲದ್ದರಿಂದ +೧೦ ೧೦ನ್ನು ಕೂಡಿಸು ಎಂಬ ಅರ್ಥವೇನೋ ಆಯಿತು. ಯಾವದರಲ್ಲಿ ೧೦ನ್ನು ಕೂಡಿಸಬೇಕು ಎಂಬ ಪ್ರಶ್ನೆಯು ಹೊರಡುವದು. ಅದಕ್ಕೆ ಉತ್ತರ '೦' ಶೂನ್ಯದಲ್ಲಿ. ಆದ್ದರಿಂದ ೧೦+೧−೮=೦+೧೦+೧−೮ ಎಂದರೆ ಶೂನ್ಯದಲ್ಲಿ ೧೦ನ್ನು ಕೂಡಿಸಿ ಒಂದನ್ನು ಕೂಡಿಸಿ, ಎಂಟನ್ನು ಕಳೆಯಬೇಕು. ಪ್ರಾಥಮಿಕ ಶಿಕ್ಷಣದ ಕಳೆದ ಸಂಚಿಕೆಯಲ್ಲಿ ಅಂಕಗಣಿತ ಶಿಕ್ಷಣದ ಸುಧಾರಣೆ ಎಂಬ ಲೇಖದಲ್ಲಿ ಹಲವು ನಿಯಮಗಳನ್ನು ಕೊಟ್ಟಿರುತ್ತದೆ. ಅವನ್ನು ಲಕ್ಷಪೂರ್ವಕವಾಗಿ ಓದಿರಿ. ೧ನೆಯ ನಿಯಮಕ್ಕೆ ಬೇರೀಜು ವಜಾಬಾಕಿಗಳ ಕ್ರಮವ್ಯತ್ಯಾಸನಿಯಮ ಎಂಬ ಹೆಸರು. ಆ ನಿಯಮವನ್ನು ಶಬ್ದಗಳಲ್ಲಿ ಹೀಗೆ ಸೂತ್ರಿಸಬಹುದು. "ಶೂನ್ಯದಲ್ಲಿ ಮುಂದೆ ಬಂದ ಬೇಕಾದ ಪದವನ್ನು ಅದರ ಹಿಂದಿನ ಚಿಹ್ನಕ್ಕನುಸಾರವಾಗಿ ಕೂಡಿಸಬಹುದು ಇಲ್ಲವೆ ಕಳೆಯಬಹುದು.

ಮೇಲಿನ ಲೆಕ್ಕವನ್ನು ಅನೇಕ ವಿಧವಾಗಿ ಮಾಡಲಿಕ್ಕೆ ಬರುವದು.

೦+೧೦=೧೦; ೧೦+೧=೧೧; ೧೧−೮=೩

೧೦−೮=೨; ೨+೧=೩

೦+೧=೧; ೧+೧೦=೧೧; ೧೧−೮=೩

ಇತ್ಯಾದಿ.

೨−೩ ಇದಕ್ಕೆ ಅಂಕಗಣಿತದಲ್ಲಿ ಅರ್ಥವಾಗುವದಿಲ್ಲ. ಕಳೆಯಲಿಕ್ಕೆ ಬರುವದಿಲ್ಲ ಎಂದು ಹೇಳಿಬಿಡುತ್ತೇವೆ ಹಾಗೆ ಹೇಳುವ ಕಾರಣವಿಲ್ಲ. ಏಕೆಂದರೆ ೨−೩= ೨−೨−೧= ೦−೧; ಶೂನ್ಯದಲ್ಲಿ ಎಂಬ ಮಾತನ್ನು ನಾವು ಅಧ್ಯಾಹೃತವಾಗಿ ಇಡುದರಿಂದ ಈ ಫಲಿತದ ಅರ್ಥವು ೧ನ್ನು ಕಳೆ ಎಂದಾಗಲಿಲ್ಲವೆ? ೧೦+೧−೮ ಈ ಲೆಕ್ಕವನ್ನು ಹೀಗೂ ಬಿಡಿಸಬಹುದು.

೦+೧=೧; ೧−೮= ೧−೧−೭= ೦−೭= −೭.

೧೦+೧−೮= +೧−೮+೧೦= ೦−೭+೧೦= ೧೦−೭=೩.

ಈ ಧನ ಋಣ ಚಿಹ್ನಗಳ ಪರಿಭಾಷೆಯಿಂದ ಅನೇಕ ಅನುಕೂಲಗಳು ಅವೆ.

ಉದಾ: $\frac{೩}{೪}-\frac{೫}{೬}+\frac{೧}{೨}$ ಇದನ್ನು ಹೀಗೆ ಬಿಡಿಸಬಹುದು.

$$\frac{೯}{೧೨}-\frac{೧೦}{೧೨}+\frac{೬}{೧೨}$$

$$=\frac{೯-೧೦+೬}{೧೨}=\frac{-೧+೬}{೧೨}=\frac{೫}{೧೨}.$$

ಬೀಜಗಣಿತದ ಆರಂಭದ ಕೃತಿಗಳು

ಬೇರೀಜು ಕೈಲಿ ಬಾರದ ಒಂದು ಲೆಕ್ಕವನ್ನು ತೆಗೆದುಕೊಂಡರೆ ಅದರ ನಿಜಸ್ವರೂಪವು ವ್ಯಕ್ತವಾಗುವದು

ಉದಾ:

೧ ೨ ೩

೨ ೩ ೧

೩ ೨ ೧

ಬೀಜಗಣಿತದ ರೀತಿಯನ್ನು ನೀವು ಪರಿಚಯ ಮಾಡಿಕೊಳ್ಳುವದಿದ್ದರೆ ಇದನ್ನು ಹೀಗೆ ಬರೆದುಕೊಂಡು ಮಾಡಬೇಕು.

೧×೧೦²+ ೨×೧೦+೩	೧ ೨ ೩
೨×೧೦²+ ೩×೧೦+೧	೨ ೩ ೧
೩×೧೦²+ ೧×೧೦+೧	೩ ೨ ೧
೬×೧೦²+ ೭×೧೦+೫	೬ ೭ ೫

ಕೈಲಿ ಬಾರದ ಬೇರೀಜು ಇರುವದರಿಂದ ಇದನ್ನು ಎಡಗಡೆಯಿಂದ ಮಾಡಿದರೂ ಅಷ್ಟೇ ಬಲಗಡೆಯಿಂದ ಮಾಡಿದರೂ ಅಷ್ಟೇ. ಅ ಎಂದರೆ ೧೦ ಎಂದು ನಾವು ಈ ಲೆಕ್ಕದಲ್ಲಿ ಹಿಡಿದರೆ ಈ ಲೆಕ್ಕವು ಹೀಗೆ ಕಾಣುವದು

$೧ಅ^{೨}+೨ಅ+೩$
$೨ಅ^{೨}+೩ಅ+೧$
$೩ಅ^{೨}+೨ಅ+೧$
———————
$೬ಅ^{೨}+೭ಅ+೫$

ವಜಾಬಾಕಿ

ಅಂಕಗಣಿತ	ವಿವರಣೆ	ಬೀಜಗಣಿತ
೩ ೨ ೧	$೩×೧೦^{೨}+೨×೧೦+೧$	೧೦=ಅ
−೧ ೨ ೦	$−೧×೧೦^{೨}+೨×೧೦+೦$	$೩ಅ^{೨}+೨ಅ+೦$
=೨ ೦ ೧	$=೨×೧೦^{೨}+೦×೧೦+೧$	$−ಅ^{೨}+೨ಅ+೦$
		$=೨ಅ^{೨}\ \ +೧$

'೦ ಅ' ಎಂದು ಬರೆಯುವ ಕಾರಣವಿಲ್ಲ. ಅದನ್ನು ಬಿಟ್ಟುಬಿಟ್ಟಿದ್ದೇನೆ.

ಗುಣಾಕಾರ: ೧೨×೪೩ ಈ ಗುಣಾಕಾರವನ್ನು ಮಾಡುವಾಗ ಎಷ್ಟು ಸಲ ಮಗ್ಗಿಯನ್ನು ಅನ್ನುತ್ತೇವೆ? ೩ರ ಮಗ್ಗಿಯನ್ನು ಎಷ್ಟು ಸಾರೆ ಅನ್ನುವೆವು, ೪ರ ಮಗ್ಗಿಯನ್ನುಎಷ್ಟು ಸಾರೆ ಅನ್ನುವೆವು? ಅಂತೂ ೪ ಸಾರೆ ಮಗ್ಗಿಯನ್ನು ಅನ್ನುವೆವಲ್ಲವೇ? ೩ ಎರಡಲೆ, ೩ ಒಂದಲೆ, ಎರಡಲೆ, ೪ ಒಂದಲೆ,ಈ ಗುಣಾಕಾರದ ಕೃತಿಯನ್ನು ಸ್ವಲ್ಪ ಪೃಥಕ್ಕರಿಸಿ ನೋಡೋಣ ಅದರಲ್ಲಿ ನಾಲ್ಕು ಭಾಗ ಆಗುವವು. **ಹೀಗೆ**

ಅಂಕಗಣಿತ	ವಿವರಣೆ	ಬೀಜಗಣಿತ
೧೦+೨	೩× ೨= ೬	ಅ=೧೦
೪೦+೩	೩×೧೦=೩೦	ಅ+ ೨
೩೦+೬	೪೦× ೨=೮೦	೪ಅ+ ೩
೪೦೦+೮೦	೪೦×೧೦=೪೦೦	೩ಅ+ ೬
೪೦೦+೧೧+೧೦+೬		$೪ಅ^{೨}+೮ಅ$
		$೪ಅ^{೨}+೧೧÷೬$

ನೆಯ ಉದಾಹರಣೆ.

೧೨×೭= (೧೦+೨) ×೭
=೧೦×೭+೨×೭ (ಅಂಕಗಣಿತದ ಮೂಲ ತತ್ವಗಳ ೫ನೆಯ ನಿಯಮವನ್ನು ನೋಡು)
=೧೦×(೧೦−೩)+೨×(೧೦−೩)
ಪ್ಟರಿಂದ (೧೦+೨)×(೧೦−೩) =೧೦×೧೦−೧೦×೩+
೨×೧೦−೨×೩.... ಅದೇನಿಯಮು. ಇಲ್ಲಿ ನಾವು ನಿರೀಕ್ಷಿಸಬೇಕಾದ ಸಂಗತಿ ಯಾವುದೆಂದರೆ

೨೦× (−೩)= −೧೦×೩
ಮತ್ತು ೨× (−೩)= − ೨×೩

೩ನೆಯ ಉದಾಹರಣೆ.

೮×೭= (೧೦−೨) ×೭
= ೧೦×೭−೨×೭ (೫ನೆಯ ನಿಯಮು)
= ೧೦× (೧೦−೩) − ೨× (೧೦−೩)
= ೧೦×೧೦−೧೦×೩− { ೨×೧೦−೨×೩ }

∴ (೧೦−೨)× (೧೦−೩) =೧೦×೧೦−೧೦×೩−೨×೧೦+೨×೩.

೨×(೧೦−೩) ಇದು ಒಂದೇ ಪದವೆಂದು ತೋರಿಸುವದಕ್ಕಾಗಿ ಅದನ್ನು ಆವರಣದಲ್ಲಿ (ಕಂಸದಲ್ಲಿ) ಹಾಕಿದೆ. [೧೦೦−೨೨ ಇದನ್ನು ಹೇಗೆ ಕಳೆಯಬೇಕೆಂಬುದನ್ನು ೨ನೆಯ ನಿಯಮದಲ್ಲಿ ತೋರಿಸಿದೆ; ಅಂಕಗಣಿತದ ಮೇಲಿನ ಹಿಂದಿನ ಸಂಚಿಕೆಯಲ್ಲಿಯ ಲೇಖ]

ಇಲ್ಲಿ ನಾವು ನಿರೀಕ್ಷಿಸಬೇಕಾದ ಸಂಗತಿ ಏನಂದರೆ

−೨× (−೩)= + ೨×೩= +೬

ಹಾಗೂ $\frac{+೬}{-೨}$ = −೩ ಮತ್ತು $\frac{+೬}{-೩}$ = −೨

ಭಾಗಾಕಾರ. ಅಂಕಗಣಿತ

೧೧) ೧೩೩೧ (೧೨೧
೧೧
೨೩
೨೨
೧೧
೧೧
೦೦

ವಿವರಣೆ

$೧೦+೧)\ ೧×೧೦^{೩}+೩×೧೦^{೨}+೩×೧೦+೧\ (೧×೧೦^{೨}+೨×೧೦+೧$
$೧×೧೦^{೩}+೧×೧೦^{೨}$
$೨×೧೦^{೨}+೩×೧೦$
$೨×೧೦^{೨}+೨×೧೦$
೧×೧೦+೧
೧×೧೦+೧
೦ ೦ ೦

ಅ ಎಂದರೆ ೧೦ ಎಂದು ಈ ಸಂದರ್ಭದಲ್ಲಿ ಹಿಡಿದರೆ ಬೀಜಗಣಿತದ ಭಾಗಾಕಾರದ ಕೃತಿಯು ಹೀಗೆ ಕಾಣುವದು.

$$ಅ+೧)\; ಅ^{೩}+೩ಅ^{೨}+೩ಅ+೧\; (\; ಅ^{೨}+೨ಅ+೧$$
$$\underline{ಅ^{೩}+ಅ^{೨}}$$
$$೨ಅ^{೨}+೩ಅ$$
$$\underline{೨ಅ^{೨}+೨ಅ}$$
$$ಅ+೧$$
$$\underline{ಅ+೧}$$
$$೦೦೦$$

ಅಂಕಗಣಿತದ ರೀತಿಗಳಿಗೆ ಸಹಾಯ

ಅಂಕಗಣಿತದ ಎಷ್ಟೋ ರೀತಿಗಳನ್ನು ಬೀಜಗಣಿತದ ಜ್ಞಾನದಿಂದಲೇ ತಿಳಿದುಕೊಳ್ಳಲು ಸಾಧ್ಯ. ವರ್ಗ ಮಾಡುವ ಕೃತಿಯಿಂದ ಈ ಮಾತಿನ ಸತ್ಯತೆಯನ್ನು ಸ್ಪಷ್ಟಮಾಡುವೆವು. ಎರಡು ಸಮಾನ ಸಂಖ್ಯೆಗಳ ಗುಣಾಕಾರಕ್ಕೆ ವರ್ಗವೆನ್ನುತ್ತಾರೆಂಬದು ನಿಮಗೆ ಗೊತ್ತಿದೆ. ಒಂದು ಸಂಖ್ಯೆಯ ವರ್ಗವನ್ನು ತೆಗೆಯಲಿಕ್ಕೆ ಬೀಜಗಣಿತವೇನು ಬೇಕಿಲ್ಲ. ಸಾದಾ ಗುಣಾಕಾರದ ರೀತಿಯಿಂದ ನಾವು ಅದನ್ನು ತೆಗೆಯಬಹುದು. ಒಮ್ಮೊಮ್ಮೆ ಒಂದು ವಿಶಿಷ್ಟ ಪ್ರಸಂಗವು ಹೀಗೆ ಬರುವದು: ಯಾವ ಸಂಖ್ಯೆಯ ವರ್ಗ ಮಾಡಬೇಕಾಗಿರುವದೋ ಅದನ್ನು ಹೇಳುವವರಲ್ಲಿ ವಿಲಂಬವಾದರೆ–ಎಂದರೆ "ಆ ಸಂಖ್ಯೆಯ ಮೊದಲನೆಯ ಅಂಕಿಯು ೧" ಎಂದು ಹೇಳಿಸ್ವಲ್ಪ ಹೊತ್ತು ತಡೆದು ಆ ಮೇಲೆ "ಅದರ ಎರಡನೆಯ ಅಂಕಿಯು ೧" ಎಂದು ಹೇಳಿ ಮತ್ತೆ ಸ್ವಲ್ಪ ತಡೆದು "ಅದರ ಕೊನೆಯ ಅಂಕಿಯೂ ೧" ಎಂದು ವಿಲಂಬವಾಗಿ ಒಂದೊಂದೇ ಅಂಕಿಯನ್ನು—ಹೆಚ್ಚಿನ ಸ್ಥಾನದ ಅಂಕಿಯಿಂದ ಆರಂಭ ಮಾಡಿ – ಹೇಳಿದರೆ ಏನು ಮಾಡಬೇಕು ? ಪೂರಾ ಸಂಖ್ಯೆಯು— ಅದರ ಎಲ್ಲ ಅಂಕಿಗಳು ಅನುಕ್ರಮದಿಂದ—ತಿಳಿಯುವ ತನಕ ಗುಣಾಕಾರ ಮಾಡಲಿಕ್ಕೆ ತೊಡಗುವದು ಹೇಗೆ? ಈ ವಿಲಕ್ಷಣ ಪ್ರಸಂಗದಲ್ಲಿ ಬೀಜಗಣಿತವು ನಮಗೆ ಅಮೂಲ್ಯವಾದ ಸಹಾಯವನ್ನು ಮಾಡುವದು: ಹೀಗೆ

ಮೊದಲನೆಯ ಅಂಕಿಯು ೧ ಎಂದು ಹೇಳಿದ ಕೂಡಲೆ ೧೦ ವರ್ಗವನ್ನು ಮಾಡಿಡಬೇಕು. ೧೦ರದುಪ್ಪಟ್ಟು ಮಾಡಿಡಬೇಕು. ಎರಡನೆಯ ಅಂಕಿಯು ೧ ಎಂದು ಹೇಳಿದ ಕೂಡಲೆ ೨೦ರಲ್ಲಿ ೧ನ್ನು ಕೂಡಿಸಬೇಕು ಬೇರೀಜಿಗೆ ೧ರಿಂದ ಗುಣಿಸಬೇಕು. ಗುಣಾಕಾರವನ್ನು ೧೦ರ ವರ್ಗದಲ್ಲಿ ಕೂಡಿಸಬೇಕು. ಮುಂದೆ ಎರಡು ಶೂನ್ಯಗಳನ್ನು ಕೊಟ್ಟರೆ ೧೧×೧೦ರ ವರ್ಗವು ಬರುವದು ಪುನಃ ೧೧೦ರ ೨ ಪಟ್ಟು ಮಾಡಬೇಕು. ಕೊನೆಯ ಅಂಕಿಯು ಕೂಡ ೧ ಎಂದು ತಿಳಿದಕೂಡಲೆ ೨೨೦ರಲ್ಲಿ ಅದನ್ನು ಕೂಡಿಸಬೇಕು. ೨೨೧ಕ್ಕೆ ೧ರಿಂದ ಗುಣಿಸಬೇಕು. ೧೧೦ರ ವರ್ಗವಾದ ೧೨೧೦೦ ರಲ್ಲಿ ೨೨೧ನ್ನು ಕೂಡಿಸಬೇಕು. ಎಂದರೆ ಇಡಿ ಸಂಖ್ಯೆಯ (೧೧೧ರ) ವರ್ಗವು ಬರುವದು. ೧೨೧೦೦ + ೨೨೧ = ೧೨೩೨೧ ಈ ನಿಯಮದ ವಿವರಣೆಯು ಹೀಗಿರುವದು.

೫೪ರ ವರ್ಗವು ಬೇಕಾದರೆ ೫೦ರ ವರ್ಗದಲ್ಲಿ ೧೦೪ ೪ ಪಟ್ಟನ್ನು ಕೂಡಿಸಬೇಕು.

$$(೫೦+೪)\times(೫೦+೪)= ೫೦^{೨}+೫೦\times೪$$
$$+೫೦\times೪+೪\times೪$$
$$= ೫೦^{೨}+೧೦೦\times೪+೪\times೪$$
$$= ೫೦^{೨}+೧೦೪\times೪$$

(ಗುಣಾಕಾರವನ್ನು ಹಂಚಿಹಾಕುವ ೫ನೇ ನಿಯಮ)

ಈ ನಿಯಮವನ್ನು ಸಂಕೇತಾಕ್ಷರಗಳಿಂದ ನೆನಪಿಡುವದು ಹೀಗೆ

$$(ಬ+ಕ)\times(ಬ+ಕ)= ಬ^{೨}+(೨ಬ+ಕ)\timesಕ$$

೧ರ ವರ್ಗದ ಮೇಲಿಂದ ೧೧ರ ವರ್ಗವನ್ನು ಮಾಡುವದು ಹೀಗೆ

$೧^{೨}=೧$, ೧೦೦; ೧೦×೨=೨೦; ೨೦+೧=೨೧; ೨೧× =೨೧

$\therefore ೧೧೧^{೨}=೧೨೧೦೦+೨೨೧\times೧=೧೨೩೨೧.$

ಅಂಕಗಣಿತದ ಸಂಕ್ಷಿಪ್ತ ರೀತಿಗಳನ್ನು ಹುಡಿಕಿ ತೆಗೆಯುವದು

ಹತ್ತರ ಅಂತಸ್ತಿನ ಸಮೀಪವಿರುವ ಎರಡು ಸಂಖ್ಯೆಗಳ ಗುಣಾಕಾರವನ್ನು ಹೇಗೆ ಸುಲಭವಾಗಿ ಮಾಡ ಬಹುದು ? ೯೮ಕ್ಕೆ ೯೭ರಿಂದ ಅಂಕಗಣಿತದ ಪದ್ಧತಿಯಿಂದ ಬಿಡಿಸಿದರೆ ಯಾವ ಹೊಸ ಯುಕ್ತಿಯೂ ಗೊತ್ತಾಗುವದಿಲ್ಲ. ಆದರೆ ಅದನ್ನೇ ಬೀಜಗಣಿತ

ಗುಣಾಕಾರದಂತೆ ಗುಣಾಕಾರ ಮಾಡಿದರೆ ಹೊಸದೊಂದು ಬಹು ಸೋಜಿಗವಾದ ರೀತಿಯು ಹೊರಡುವದು. ನೋಡಿರಿ·

೯೮×೯೭= (೧೦೦−೨)×೯೭

= ೧೦೦×೯೭−೨×೯೭

= ೧೦೦×(೧೦೦−೩)−೨×೯೭

= ೧೦೦×೧೦೦−೧೦೦×೩−{೨×೯೭}

= ೧೦೦×೧೦೦−೧೦೦×೩−{೨×(೧೦೦−೩)}

= ೧೦೦×೧೦೦−೧೦೦×೩−{೨×೧೦೦−೨×೩}

= ೧೦೦×೧೦೦−೧೦೦×೩−೨×೧೦೦+೨×೩........ ೨ನೆಯ ನಿಯಮ.

ಆದ್ದರಿಂದ ೯೮×೯೭=೧೦೦×(೧೦೦−೩−೨)+೨×೩ =೧೦೦×(೯೭−೨)+೬

ಅಥವಾ ೯೮×೯೭=೧೦೦×(೧೦೦−೨−೩)+೨×೩= ೧೦೦×(೯೮−೩)+೬

೯೮ − ೩
೯೭ − ೨

ಎಂದರೆ ೩ ಕಡಿಮೆ ೯೮ ನೂರಾ ೬=೯೫೦೬

ಅಥವಾ ೨ ಕಡಿಮೆ ೯೭ ನೂರಾ ೨×೩=೯೫೦೬

೯೮ ನೂರಕ್ಕೆ ಎಷ್ಟು ಕಡಿಮೆ ? ೨
೯೭ ,, ,, ೩

ಮೇಲೆ ತೋರಿಸಿದಂತೆ ೯೮ರಲ್ಲಿ ೩ನ್ನು ಕಳೆದು, ಅಥವಾ ೯೭ರಲ್ಲಿ ೨ನ್ನು ಕಳೆದು ಬಂದ ವಜಾಬಾಕಿಯಷ್ಟು ನೂರರ ಗಂಟಿನಲ್ಲಿ ೨×೩ ಕೂಡಿಸಿದರೆ ಗುಣಾಕಾರವು ಥಟ್ಟನೆ ಬಾಯಿಂದ ಹೇಳಲಿಕ್ಕೆ ಬರುವದು.

ಸಮೀಕರಣಗಳು

ಕೊಟ್ಟ ಒಂದು ಮಾತಿನಿಂದ ಬೇರೊಂದು ಮಾತನ್ನು ಹೇಗೆ ಊಹಿಸಬೇಕು ?

೮+೩=೧೧ ಈ ಮಾತಿನ ಮೇಲಿಂದ

೮=೧೧−೩ ಈ ಮಾತನ್ನು ಊಹಿಸಬಹುದು.

೧೦೦−೨೨=೭೮ ಈ ಮಾತಿನ ಮೇಲಿಂದ

೧೦೦=೭೮+೨೨ ಎಂಬ ಮಾತನ್ನು ಊಹಿಸಬಹುದು.

ಕೊ+ಲಾ=ಮಾ ಎಂದು ತಿಳಿದಿದ್ದರೆ

ಮಾ−ಲಾ=ಕೊ ಎಂದು ಊಹಿಸಬಹುದು.

ಕೊ−ಹಾ=ಮಾ ಎಂದು ತಿಳಿದಿದ್ದರೆ

ಮಾ+ಹಾ=ಕೊ ಎಂದು ಊಹಿಸಬಹುದು ಅಥವಾ

ಮಾ−ಕೊ=ಲಾ ಎಂದು ಊಹಿಸಬಹುದು.

ಈ ಮಾತುಗಳ ಊಹೆಗೆ ಸ್ವಲ್ಪ ಬುದ್ಧಿಯನ್ನು ಉಪಯೋಗಿಸಬೇಕಾಗುವದು. ಆದರೆ ಈ ಮೇಲಿಂದಮೇಲೆ ಮಾಡಬೇಕಾಗುವ ವಿಚಾರಸರಣಿಯನ್ನು ಯಂತ್ರದಂತೆ ಸುಲಭ ಮಾಡಬಹುದು. ಸರಿಗುರ್ತಿನಿಂದ ಕೂಡಿದ ಎರಡು ಪಕ್ಕಗಳಿಗೆ ಸಮೀಕರಣವೆನ್ನಬೇಕು. ಸಮೀಕರಣದ ಇಕ್ಕೆಲದ ಒಂದೇ ಸಂಖ್ಯೆಯನ್ನು ಕೂಡಿಸಬಹುದು ಅಥವಾ ಕಳೆಯಬಹುದು.

ನೋಡಿರಿ ಕೊ+ಲಾ=ಮಾ

ಎರಡೂ ಪಕ್ಕಗಳಿಂದ ಕೊ (=ಕೊಂಡ ಬೆಲೆ) ವನ್ನು ಕಳೆಯಲಾಗಿ

ಲಾ=ಮಾ−ಕೊ ಬಂದಿತು.

ಕೊ−ಹಾ=ಮಾ; ಇದರ ಇಕ್ಕೆಲದಲ್ಲಿಯೂ 'ಹಾ' ವನ್ನು ಕೂಡಿಸಿದರೆ, ಕೊ=ಮಾ+ಹಾ ಎಂಬ ಮಾತು ಸಿದ್ಧವಾಯಿತು.

ಇದರಂತೆ ಸಮೀಕರಣದ ಇಕ್ಕೆಲಕ್ಕೂ ಒಂದೇ ಸಂಖ್ಯೆಯಿಂದ ಗುಣಿಸಬಹುದು ಅಥವಾ ಭಾಗಿಸಬಹುದು. ಉದಾಹರಣೆಗಳು:

೩೭×೩=೧೧೧

೨ರಿಂದ ಇಕ್ಕೆಲಕ್ಕೆ ಗುಣಿಸಲು, ೩೭×೬=೨೨೨

೯ರಿಂದ ,, ,, ೨೭×೨೭=೯೯೯

ಇದರಂತೆ $\frac{೪}{೭}\times\frac{೭}{೪}$=೧

ಇಕ್ಕೆಲಕ್ಕೂ $\frac{೭}{೪}$ದಿಂದ ಭಾಗಿಸಲಾಗಿ ೧÷$\frac{೭}{೪}$=$\frac{೪}{೭}$ ಬಂದಿತು.

ಲೆಕ್ಕಗಳನ್ನು ಬೀಜಗಣಿತದಿಂದ ಬಿಡಿಸುವ ರೀತಿ

ಉದಾಹರಣೆ: ಎರಡು ಸಂಖ್ಯೆಗಳ ಬೇರೀಜು ೨೫ ಅದೆ. ಅವುಗಳ ಅಂತರವು ೭ ಅದೆ. ಆ ಸಂಖ್ಯೆಗಳು ಯಾವವು ?

ಒಂದು ಸಂಖ್ಯೆಯು ೧೦ ಇದ್ದರೆ—ಸಣ್ಣ ಸಂಖ್ಯೆಯು೧೦ ಇದ್ದರೆ—ದೊಡ್ಡ ಸಂಖ್ಯೆಯು ೧೦+೭ ಇರಬೇಕು. ಎರಡೂ ಸಂಖ್ಯೆಗಳ ಬೇರಿಜು ಎಂದರೆ ೧೦+ (೧೦+೭) ಇಪ್ಪತ್ತೈದು ಆಗಬೇಕು.

ನಮ್ಮ ಕಾರ್ಪೆಂಟರಿ ಸೆಂಟರ ಔಂಧಕ್ಯಾಂಪ ಪುಣಾ

[ಶ್ರೀ.ಸ.ಮ.ಪಡಗೇರಿ,ಮಾಸ್ತರ ಕೋಶವಾರ ಔಂಧಕ್ಯಾಂಪ ಪುಣಾ ಅವರು ಕೆಳಗಿನ ವರದಿಯನ್ನು ಕಳುಹಿದ್ದಾರೆ.--ಸಂಪಾದಕರು]

ಜನತಾ ಸರಕಾರವು ವಿದ್ಯೆಯ ಪುನರ್ರಚನೆಯ ಬಗ್ಗೆ ಇತ್ತಿತ್ತ ಬಹು ಪ್ರಯತ್ನ ಮಾಡಹತ್ತಿದೆ. 'ವರ್ಧಾ ಶಿಕ್ಷಣ'ದ ಮೇರೆಗೆ ಶಾಲೆಗಳಲ್ಲಿ ಕೇವಲ ಓದುಬರೆಹ ಇರದೆ ಅದರ ಅಂಗವಾಗಿ ಮಾನವನಿಗೆ ಮಹತ್ವವಾದ ಉದ್ಯೋಗಗಳು ಬರಲೆಂದು ತಿಳಿದು ಮೂಲ ಉದ್ಯೋಗಗಳಾದ ಬಡಿಗತನ, ನೇಕಾರಿಕೆ, ನೂಲುವದು, ಕಮ್ಮಾರಿಕೆ, ಒಕ್ಕಲುತನ ಮುಂತಾದ ವ್ಯವಸಾಯಗಳಿಗೆ ವ್ಯವಸ್ಥಿತ ರೀತಿ ಕೊಟ್ಟು ಕಾರ್ಯ ಕೈಕೊಂಡಿದೆ. ಅದೇ ಪ್ರಕಾರ ಅದರ ಅಂಗವಾಗಿ 'ಔಂಧ ಕಾರ್ಪೆಂಟರಿ ಸೆಂಟರ'ವು ೧೯೪೯ರಲ್ಲಿ ತೆರೆಯಲ್ಪಟ್ಟಿತು. ಇದು ಪುಣೆಯಿಂದ ವಾಯುವ್ಯಕ್ಕೆ ಏಳು ಮೈಲಿನ ಮೇಲೆ ಇದೆ.

ಕೋರ್ಸು ಸರಿಯಾಗಿ ಮುಂಜಾನೆ ಎಂಟು ಗಂಟೆಗೆ ಪ್ರಾರಂಭ. ಅದಕ್ಕೂ ಮೊದಲು ೧೫ ನಿಮಿಷ ಒಂದು ಗಂಟೆಯನ್ನು ಹೊಡೆಯುವರು. ಆಗ್ಗೆ ಭಾಷಾವಾರ ಜನರು ತಮ್ಮ ತಮ್ಮ ನಾಡಗೀತೆ ಅಂದಮೇಲೆ ರಾಷ್ಟ್ರಗೀತೆಯನ್ನು ತಮ್ಮತಮ್ಮ ವರ್ಗಗಳಲ್ಲಿಯೇ ಅನ್ನುವರು. ಅಲ್ಲಿಂದ ಕ್ಲಾಸು ಪ್ರಾರಂಭ. ಮೊದಲು ಎರಡು ತಾಸು ಕಟ್ಟಿಗೆ, ಕಟ್ಟಿಗೆಯ ಸಂಪೂರ್ಣ ಮಾಹಿತಿಯಬಗ್ಗೆ ಟೀಕೆ ಟಿಪ್ಪಣಿಗಳಾಗುವವು. ಮತ್ತು ಪ್ರತ್ಯಕ್ಷ ರೀತಿಯಿಂದಲೇ ಇದೆಲ್ಲ ಸಾಗುವದು; ಒಂದೊಂದು ದಿನ ಆ ವಸ್ತುವಿನ ಚಿತ್ರ ತೆಗೆಯುವದೂ ನಡೆಯುವದು. ಹತ್ತು ಗಂಟೆಗೆ ಬಡಿಗತನ ಕೆಲಸ ಪ್ರಾರಂಭ. ಬೆಂಚುಗಳ ಮೇಲೆ ಕೆಲಸ ನಡೆಯುವದು. ಮುಖ್ಯವಾಗಿ ಕೆಲಸಕ್ಕೆ ಬೇಕಾಗುವ ಆಯುಧಗಳೆಂದರೆ ಉಳಿ, ಕರಗಸ, ಉಜುಗೊರಡಗಳು. ಮತ್ತೆಷ್ಟೋ ಉಪಕರಣಗಳು ಇವುಗಳ ಸಹಾಯಕ್ಕಿವೆ. ಮೊದಲು ಕೆಲ ದಿನ ಕೇವಲ ಜೋಡಣೆ (ಜಾಯಿಂಟ) ಗಳನ್ನು ಮಾಡಿಸುವರು. ಕೈ ಕೂತಮೇಲೆ ವಸ್ತುಗಳನ್ನು ಮಾಡಲು ಪ್ರಾರಂಭ. ಹತ್ತರಿಂದ ದೈಹಿಕ ಶ್ರಮದ ಕೆಲಸ ಪ್ರಾರಂಭವಾಗಿದ್ದು ಅದು ಹನ್ನೆರಡಕ್ಕೆ ಬಂದಾಗುವದು. ಮತ್ತೆ ೧॥ ಗಂಟೆಯಿಂದ ೫ರ ವರೆಗೆ ಪೂರ್ಣ ಕೆಲಸವೇ ಕೆಲಸ. ೫ಕ್ಕೆ ಕ್ಲಾಸು ಬಿಡುವದು. ಈ ಉದ್ಯಮದಲ್ಲಿ ನಿಷ್ಣಾತರಾದವರು ಅಧ್ಯಾಪನ ಕಾರ್ಯ ಮಾಡುತ್ತಿದ್ದಾರೆ.

ಈ ಬಡಿಗತನ ಸೆಂಟರಕ್ಕೆ ಮುಂಬಯಿ ರಾಜ್ಯದ ಕರ್ನಾಟಕ, ಮಹಾರಾಷ್ಟ್ರ, ಗುಜರಾಥ, ಕೊಂಕಣ ನಾಡುಗಳಿಂದ ಬಂದ ೨ನೆಯ ವರ್ಷದ ಮಾಧ್ಯಮಿಕ ಶಾಲೆಗಳ ಶಿಕ್ಷಕರೂ,ಕೂಡಿ ೨೦೦ ಜನರಿದ್ದಾರೆ. ವಿದ್ಯಾಭ್ಯಾಸವು ಆಯಾಭಾಷೆಗಳಿಂದ ತಿಳಿಸಲ್ಪಡುವದು.ಕನ್ನಡ ಗ್ರೂಪಿಗೆಕನ್ನಡ ಇನಸ್ಟ್ರಕ್ಟರರೂ, ಮರಾಠಿ ಕ್ಲಾಸ ವಿದ್ಯಾರ್ಥಿಗಳಿಗೆ ಮಹಾರಾಷ್ಟ್ರಿ ಇನಸ್ಟ್ರಕ್ಟರರೂ ಹೇಳಿಕೊಡುವರು. ಇದರಂತೆ, ಗುಜರಾಥಿ ಗ್ರೂಪು ಮತ್ತು ಉರ್ದು ಗ್ರೂಪು ಭಾಷೆಯ ತೊಂದರೆ ಇಲ್ಲ.

ಶಿಕ್ಷಕ ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ಜಿಲ್ಹಾ ಸ್ಕೂಲ ಬೋರ್ಡು ಅಥವಾ ಮುನಸಿಪಾಲ್ಟಿಗಳಿಂದ ತಮ್ಮ ತಮ್ಮ ಪಗಾರ ಬರುತ್ತದೆ. ಅಲ್ಲದೆ ಸರಕಾರದವರು ತಿಂಗಳಿಗೆ ೨೦ ರೂಪಾಯಿಗಳನ್ನು ಹೆಚ್ಚಿಗೆ ಕೊಡುತ್ತಾರೆ. ಆದರೆ ಈ ೨೦ ರೂಪಾಯಿಗಳನ್ನು ಕೊಡದೆ ಸರಕಾರದವರೇ ನಮ್ಮ ಊಟದ ವ್ಯವಸ್ಥೆ, ವಸತಿಯ ವ್ಯವಸ್ಥೆ, ದೀಪದ ವ್ಯವಸ್ಥೆ, ಸ್ನಾನ ಇನ್ನಿತರ ವ್ಯವಸ್ಥೆ ಮಾಡುತ್ತಾರೆ. ಈ ನಮ್ಮ ಔದ್ಯೋಗಿಕ ಕೇಂದ್ರವನ್ನು ಮಧ್ಯವರ್ತಿ ಸರಕಾರವು ತೆರೆದಿದ್ದು ಮುಂಬಯಿ ಇಲಾಖೆಯ ಶಿಕ್ಷಕರಿಗೆ ತರಬೇತಿಗೊಳಿಸುವದಾದ್ದರಿಂದ ವರ್ಷದ ಕೊನೆಗೆ ಮಧ್ಯವರ್ತಿ ಸರಕಾರವು ಮುಂಬಯಿ ಸರಕಾರದಿಂದ ಆದ ವೆಚ್ಚವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳುತ್ತಾರೆ.

ಕೆಲಸವು ಈ ಸೆಂಟರಿನ ನಿಯಮ ನಿಬಂಧನೆಗಳಿಗೆ ಸರಿಯಾಗಿ ಸಾಗುತ್ತದೆ. ಎಲ್ಲರೂ ಈ ಕಟ್ಟುನಿಟ್ಟುಗಳನ್ನು ಕಡೆಗಣಿಸದೆ ಕೊನೆಗಾಣಿಸುತ್ತಾರೆ. ಶಿಕ್ಷಕ ವಿದ್ಯಾರ್ಥಿಗಳೂ ಆ ಕಟ್ಟುನಿಟ್ಟುಗಳಿಗೆ ಅಂಡಿಕೊಂಡು ನಡೆಯುತ್ತಿದ್ದು ಈಗ ಕೆಲಸ ಮುನ್ನಡೆಯುತ್ತಲಿದೆ.

ಈ ಲೆಕ್ಕದಲ್ಲಿ ಸ ಎಂದರೆ ೧೦ ಹಿಡಿಯೋಣ. ಮೇಲಿನ ಮಾತನ್ನು ಬೀಜಗಣಿತದ ರೀತಿಯಲ್ಲಿ ಬರೆದುಕೊಂಡರೆ

ಸ+(ಸ+೭)= ೨೫ ಆಗಬೇಕು

ಎಂದರೆ ಸ+ಸ+೭ = ೨೫ ,,

ಎಂದರೆ ೧ಸ+೧ಸ+೭=೨೫ ,,

ಎಂದರೆ ೨ಸ+೭=೨೫ ,,

ಆದ್ದರಿಂದ ೨ಸ=೨೫−೭ (ಒಂದನೆಯ ಪ್ರಕಾರದ ಊಹೆಯ ನಿಯಮ)

ಎಂದರೆ ೨ಸ =೧೮

ಎರಡರಿಂದ ಇಕ್ಕೆಲಕ್ಕೂ ಭಾಗಿಸಲಾಗಿ

$\frac{೨ \times ಸ}{೨}=\frac{೧೮}{೨}$ (ಎರಡನೆಯ ಊಹೆಯನಿಯಮ)

ಎಂದರೆ ಸ = ೯

೯ ಸಣ್ಣ ಸಂಖ್ಯೆಯಾಯಿತು ೯+೭ ಅಥವಾ ೧೬ ದೊಡ್ಡ ಸಂಖ್ಯೆಯಾಯಿತು.

ಗಣಿತದ ಎಲ್ಲ ವಿಚಾರ ಸರಣಿಯು ಸಮೀಕರಣದ ರೂಪದಲ್ಲಿ ನಡೆಯುವದು. ಗಣಿತದ ಎಲ್ಲ ಮಾತುಗಳು ರಾಮನು ಜಾಣನಿರುತ್ತಾನೆ ಎಂಬ ವಾಕ್ಯದಂತೆ ಇರುತ್ತವೆ. 'ರಾಮನು' ಕರ್ತೃ, 'ಜಾಣನು' ಅರ್ಥ ಪರಿಪೂರಕ 'ಇರುತ್ತಾನೆ' ಕ್ರಿಯಾಪದ. ಹೀಗೆಯೇ

೩೭×೩=೧೧೧

೩೭ರ ಮೂರು ಪಟ್ಟು ಕರ್ತೃ

೧೧೧ ಅರ್ಥ ಪೂರ್ಣಮಾಡುವ ಪದ

= ಕ್ರಿಯಾಪದ

ಸಂಗುರ್ತು 'ಇರುತ್ತಾನೆ', 'ಇರುತ್ತದೆ' ಎಂಬ ಇರ ಧಾತುವಿನ ಕ್ರಿಯಾಪದದಂತೆ ಬರುತ್ತದೆ.

ಇದರಿಂದ ಅಂಕಗಣಿತದಲ್ಲಿ ಸಮ ಚಿಹ್ನದ ಸರಿಯಾದ ಉಪಯೋಗವನ್ನು ಕಲಿಸುವದು ಎಷ್ಟು ಮಹತ್ವದ್ದೆಂಬದು ತಿಳಿಯುವದು.

ಸ್ವಾತಂತ್ರ್ಯಕ್ಕೆ ಗಂಡಾಂತರ

(ವಿಮರ್ಶೆ)

ಲೇಖಕರು: **ಶ್ರೀ. ಧೀರೇಂದ್ರಭಾಯಿ ಮುಜುಮುದಾರ** ಅನುವಾದಕರು: **ಶ್ರೀ. ರಾ. ಸಾವಕಾರ**

ಬೆಲೆ: ೮ ಆಣೆ

ಇಂಗ್ಲೀಷರು ಈ ದೇಶದಿಂದ ಹೋಗಿ ಎರಡು ವರ್ಷ ಗಳಾದವು. ಆದರೆ ನಮಗೆ ಸ್ವಾತಂತ್ರ್ಯ ದೊರಕಿದೆ ಯೆಂದು ಜನತೆಗೆ ಅನಿಸಲೊಲ್ಲದು. ಪಟ್ಟಣಗಳಿಗೆ ಹೋಗಿರಿ, ಇಲ್ಲವೆ ಹಳ್ಳಿಗಳಿಗೆ ಹೋಗಿರಿ. ಎಲ್ಲಿ ಹೋದರೂ "ಇಂದಿನ ಆಡಳತೆಗಿಂತ ಇಂಗ್ಲೀಷರ ಆಡಳಿತೆ ಒಳ್ಳೆತಾಗಿತ್ತು" ಎಂಬೀಮಾತೇ ಜನತೆಯ ಮುಖದಿಂದ ಹೊರಬೀಳುತ್ತದೆ. ಸ್ವಾತಂತ್ರ್ಯದ ಸುಖ ಸಿಗದ ಕಾರಣ ಗಳನ್ನು ಈ ಪುಸ್ತಕದಲ್ಲಿ ಬಹಳ ಮಾರ್ಮಿಕವಾಗಿ ಚರ್ಚಿಸಿದ್ದಾರೆ. ನಮ್ಮ ರಾಷ್ಟ್ರದ ಜೀವನದಲ್ಲಿಯ ಮೂರು ಅಂಶಗಳ ಕೂಲಂಕಷ ವಿವೇಚನೆ ಇದೆ. ರಾಜನೈತಿಕ ಆರ್ಥಿಕ ಹಾಗೂ ಸಾಮಾಜಿಕ ವಿಷಯಗಳ ಉಲ್ಲೇಖನವಿದೆ. ರಾಜಕೀಯ ಸ್ವಾತಂತ್ರ್ಯ ಸಿಕ್ಕಿದ್ದರೂ, ಆರ್ಥಿಕ ಹಾಗೂ ಸಾಮಾಜಿಕ ಸ್ವಾತಂತ್ರ್ಯ ಇನ್ನೂ ಸಿಕ್ಕಿಲ್ಲ. ಸಾಮಾಜಿಕಹಾಗೂ ಆರ್ಥಿಕ ಕ್ರಾಂತಿಯನ್ನು ಹೂಡಿನಾವು ಆ ದಿಶೆಯಲ್ಲಿ ಸ್ವಾತಂತ್ರ್ಯ ಪಡೆಯತಕ್ಕದ್ದಿದೆ. ಆರ್ಥಿಕ ಸಮಸ್ಯೆಗಳಲ್ಲಿ ನಾಗರಿಕ ಪೂರೈಕೆಯು ತೀರ ಜಟಿಲವಾಗಿದೆ.

ಗಾಂಧೀಜಿಯವರ ಕ್ರಾಂತಿಯನ್ನು ಕಾರ್ಯಕರ್ತರೇ ಪುರಸ್ಕರಿಸಬಲ್ಲರು, ಸರಕಾರವಲ್ಲ' ಎಂದು ಲೇಖಕರ ಅಭಿಪ್ರಾಯ. ಶೋಷಣರಹಿತವಾದ ಸಮಾಜವನ್ನು ನಿರ್ಮಾಣಮಾಡುವ ರೀತಿ ನೀತಿಗಳನ್ನು ಶ್ರೀ. ಮುಜುಮುದಾರರು ತಿಳಿಸಿದ್ದಾರೆ. ನಂತರ ಮಾರ್ಕ್ಸವಾದ ಹಾಗೂ ಗಾಂಧೀವಾದ ಇವೆರಡರಲ್ಲಿಯ ಅಂತರವನ್ನು ತೋರಿಸಿದ್ದಾರೆ. ಸರಕಾರ, ಸಹಕಾರ, ಹಾಗೂ ಇವುಗಳ ಪರಸ್ಪರ ಸಂಬಂಧವನ್ನು ಸೂಚಿಸಿದ್ದಾರೆ. ರಾಷ್ಟ್ರದ ತಳಹದಿಯನ್ನು ಗಟ್ಟಿಮುಟ್ಟಾಗಿ ಮಾಡಲು ಸೈನಿಕ ಸಂಘಟನೆಯ ನಿರ್ಮಾಣ ಎಷ್ಟರಮಟ್ಟಿಗೆ ಅವಶ್ಯವಿದೆ ಎಂಬುದನ್ನು ಎತ್ತಿ ತೋರಿಸಿದ್ದಾರೆ.

ಒಟ್ಟಾರೆ ಈ ಪುಸ್ತಕವು ಪ್ರತಿಯೊಬ್ಬ ಭಾರತೀಯನಿಗೆ ಅತಿ ಉಪಯುಕ್ತವಾಗಿದೆ. ಗಳಿಸಿದ ನಾಡನ್ನು ಉಳಿಸಿ, ಬೆಳಸಲು, ಉಪಯುಕ್ತ ಕೈಪಿಡಿಯಾಗಿದೆ.

— **ವೀರೇಶ ಹಿರೇಮಠ**

★ ಪಾಳಯಗಾರರು ★

ಲೇಖಾಂಕ ೨

(ಇವರ ಕಾಲದಲ್ಲಿದ್ದ ಕರ್ನಾಟಕದ ಜನಜೀವನವು)

[ಟೀಪು:—ಇಗಾಗಲೇ ಇದೇ ವರುಷದ ಅಕ್ಟೋಬರ ತಿಂಗಳ ಸಂಚಿಕೆಯಲ್ಲಿ 'ಪಾಳಯಗಾರರು' (ಕರ್ನಾಟಕ ಇತಿಹಾಸದಲ್ಲಿ ಅವರಿಗೆ ಸಲ್ಲತಕ್ಕ ಸ್ಥಾನಮಾನಗಳು) ಎಂಬ ತಲೆಬರಹದ ಕೆಳಗೆ ಒಂದು ಲೇಖವನ್ನು ಕೊಡಲಾಗಿದೆ. ಈ ಲೇಖವು ಅದರ ಪೂರಕವಾಗಿದೆ. ಇದನ್ನಾದರೂ ಹೋದಸಲದಂತೆ ಬೆಂಗಳೂರಿನ ಕೈಲಾಸವಾಸಿಗಳಾದ ಶ್ರೀಯುತ ಎಂ. ಎಸ್. ಪುಟ್ಟಣ್ಣ ಬಿ. ಎ. ಅವರು ಪಾಳಯಗಾರರ ಬಗೆಗೆ ಕೊಟ್ಟ ಐದು ಉಪನ್ಯಾಸಗಳ ಹೊತ್ತಿಗೆಯ ಆಧಾರದಿಂದಲೇ ಬಹುಮಟ್ಟಿಗೆ ಬರೆಯಲಾಗಿದೆ]

ಲೇಖಕರು:

ಶ್ರೀಯುತ ಶಿಂತ್ರಿ ಬಸಪ್ಪನವರು, ಬಿ.ಎ.ಬಿ.ಟಿ. ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣಭಾಗ, ಧಾರವಾಡ.

ಪೂರ್ವ ಪೀಠಿಕೆಯು

ಹೋದ ಲೇಖದಲ್ಲಿ ಪಾಳಯಗಾರರ ಬಗೆಗೆ ನಮಗೆ ಸಾಧ್ಯವಿದ್ದಷ್ಟು ವಿವರಗಳನ್ನು ಸ್ವಲ್ಪದರಲ್ಲಿ ಕೊಟ್ಟಿದೆ. 'ಪಾಳಯಗಾರ' ಶಬ್ದದ ಅರ್ಥವೇನು ಇವರನ್ನು ಬಹುಮಟ್ಟಿಗೆ ಹೋಲುವ ಬೇರೆ ಸಂಸ್ಥಾನಿಕರು, ಇವರು ತಮ್ಮ ಆಡಳಿತೆಯನ್ನು ಹೇಗೆ ಸಾಗಿಸುತ್ತಿದ್ದರು, ಇವರು ಸಲ್ಲಿಸಿದ ಜನಹಿತದ ಕಾರ್ಯಗಳಾವವು, ನಾಮಾಂಕಿತ ಪಾಳಯಗಾರರ ಅಲ್ಪಪರಿಚಯ, ಇವುಗಳ ಸಂಬಂಧವಾಗಿ ಸ್ಥೂಲಮಾನದಿಂದ ಹೇಳಿದುದು ವಾಚಕರ ನೆನಪಿನಲ್ಲಿರಲು ಸಾಕು. ಪಾಳಯಗಾರರ ಬಗೆಗೆ ಸಂಗತಿಗಳನ್ನು ವಿವರಿಸುವಾಗ, ಇವರಲ್ಲಿಯೂ ನಮ್ಮ ಉತ್ತರ ಕರ್ನಾಟಕದೊಳಗಿನ ಸಂಸ್ಥಾನಿಕರಲ್ಲಿಯೂ ಹುದುಗಿಕೊಂಡಿದ್ದ ಸಾಮ್ಯಗಳನ್ನು ಅಲ್ಲಲ್ಲಿ ಸಂದರ್ಭಾನುಸಾರವಾಗಿ ಬೈಲಿಗೆಳೆದು ತುಲನಾತ್ಮಕ ದೃಷ್ಟಿಯಿಂದ ವಿವೇಚಿಸಿದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ಪಾಳಯಗಾರರ ಬಗೆಗೆ ಕೈಕೊಂಡ ಸಂಶೋಧನದಲ್ಲಿಯೂ, ತಾಮ್ರಲಿಪಿ ಶಿಲಾಶಾಸನ ತಾಡಪತ್ರಿಯ ಓಲೆಗಳು ಹಳೆಯ ಕಾಗದಪತ್ರಗಳು ದಫ್ತರುಗಳು ಮೊದಲಾದವುಗಳನ್ನು ಕಲೆ ಹಾಕುದವರಲ್ಲಿಯೂ ಬೆಂಗಳೂರಿನ ಕೈಲಾಸವಾಸಿಗಳಾದ ಶ್ರೀಯುತ ಎಂ. ಎಸ್. ಪುಟ್ಟಣ್ಣನವರು ಸೋಸಿದ ಕಷ್ಟವನ್ನು ಅಷ್ಟಿಷ್ಟೆಂದು ಹೇಳಲಾಸಲ್ಲ. ಕರ್ನಾಟಕದ ಇತಿಹಾಸಕ್ಕೆ ಅವರು ಸಲ್ಲಿಸಿದ ಸೇವೆಯು ಅಪಾರವಾಗಿದೆ. ನಮ್ಮ ಉತ್ತರ ಕರ್ನಾಟಕದಲ್ಲಿಯೂ ಚಿಕ್ಕ ಚಿಕ್ಕ ಸಂಸ್ಥಾನಿಕರೆಷ್ಟೋ ಮಂದಿ ಆಳಿ ಹೋಗಿದ್ದಾರೆ. ಅವರೂ ನಮ್ಮ ಕನ್ನಡ ನಾಡಿನ ಸಂಸ್ಕೃತಿಯ ಸರ್ವತೋಮುಖವಾದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಆಯಾ ಕ್ಷೇತ್ರಗಳಲ್ಲಿ ಸಂಶೋಧನದತ್ತ ಒಲವುಳ್ಳ ಶಿಕ್ಷಕ-ಶಿಕ್ಷಕಿಯರು ಕೆಲಸ ಮಾಡುತ್ತಿದ್ದರೆ ಶ್ರೀಯುತ ಪುಟ್ಟಣ್ಣಾರವರಂತೆ ಅವರೂ ತಮ್ಮ ಬಿಡಿ ವೇಳೆಯಲ್ಲಿ ಶಿಲಾಶಾಸನಗಳನ್ನೂ ತಾಮ್ರಶಾಸನಗಳನ್ನೂ ತಾಡಪತ್ರಿಯ ಓಲೆಗಳನ್ನೂ ಹಳೆಯ ಕಾಗದಪತ್ರಗಳನ್ನೂ ದಫ್ತರುಗಳನ್ನೂ ಶಕ್ಯವಿದ್ದಷ್ಟು ಕಲೆಹಾಕಿ ಆಯಾ ಸಂಸ್ಥಾನದ ಬಗೆಗೆ ಒಂದು ಹೊತ್ತಿಗೆಯನ್ನೇ ಬರೆಯಬಹುದಾಗಿದೆಯೆಂಬ ಮಾತನ್ನು ವಾಚಕರ ಗಮನಕ್ಕೆ ತರಬಯಸುತ್ತೇನೆ. ಬೈಲಹೊಂಗಲದಲ್ಲಿ 'ಚನ್ನಮ್ಮ ರಾಣಿ ಇತಿಹಾಸ ಮಂಡಲ'ವೆಂಬದೊಂದು ಸಂಸ್ಥೆಯು ಹುಟ್ಟಿ ಕಿತ್ತೂರ ದೇಸಗತಿಯ ಬಗೆಗೆ ಸಾಕಷ್ಟು ಸಂಶೋಧನವನ್ನು ಶ್ರೀಯುತ ತಲ್ಲೂರ ರಾಯನಗೌಡರ ನೇತೃತ್ವದಲ್ಲಿ ಮಾಡಿದೆ ಮತ್ತು ಮಾಡುತ್ತಲಿದೆ. ಇದು ನಿಜಕ್ಕೂ ಅಭಿಮಾನ ಪಡತಕ್ಕ ಮಾತು. ಇಂತಹ ಸಂಸ್ಥೆಗಳು ಉತ್ತರ ಕರ್ನಾಟಕದಲ್ಲಿ ಸಂಸ್ಥಾನಗಳಿದ್ದಲ್ಲೆಲ್ಲ ಉದಯವಾಗಿ ಇಲ್ಲಿಯ ವರೆಗೆ ಅಡಗಿಕೊಂಡಿದ್ದ ಸಂಗತಿಗಳನ್ನು ಬೆಳಕಿಗೆ ತಂದು ನಮ್ಮ

ನಾಡಿನ ಇತಿಹಾಸಕ್ಕೊಂದು ಹೊಸ ರೂಪವನ್ನೂ ಮೆರುಗನ್ನೂ ಬೇಗನೆ ತರಲೆಂದು ಹಾರೈಸೋಣ. ಇಲ್ಲಿಯ ವರೆಗೆ ಇತಿಹಾಸವೆಂದರೆ ಅರಸು-ಅರಸಿಯರ ಹೆಸರುಗಳು, ಅವರು ಮಾಡಿದ ಯುದ್ಧಗಳು, ಇಸವಿಗಳು, ಗೆದ್ದ ರಾಜ್ಯಗಳು, ಅವರು ಹುಟ್ಟಿದ ಮತ್ತು ಸತ್ತ ಇಸವಿಗಳು ಇವುಗಳನ್ನಷ್ಟೇ ವಿವರಿಸುವದಾಗಿತ್ತು. ಅದರ ಈಗಿನ ಹೊಸ ದೃಷ್ಟಿಯು ಹಾಗಲ್ಲ. ಮೇಲೆ ಹೇಳಿದವುಗಳಲ್ಲದೆ ಅರಸು-ಅರಸಿಯರು ತಾಯ್ನಾಡಿನ ಸಂಸ್ಕೃತಿಯನ್ನು ಹೆಚ್ಚಿಸಲು ಯಾವ ಏರ್ಪಾಡುಗಳನ್ನು ಮಾಡಿದರು, ಜನಜೀವನದ ಮಟ್ಟವನ್ನು ಎತ್ತರಿಸಲು ಯಾವ ಮಾರ್ಪಾಡುಗಳನ್ನು ಕೈಕೊಂಡರು, ಪ್ರಜರ ಸುಖಕ್ಕಾಗಿ ಹೇಗೆ ಹೆಣಗಾಡಿದರು, ಜನತೆಯ ನೈತಿಕ ಮತ್ತು ಬೌದ್ಧಿಕ ಬೆಳವಣಿಗೆಯನ್ನು ಹೇಗೆ ಸಾಧಿಸಿಕೊಂಡರು, ಮೊದಲಾದ ಜನೋಪಯೋಗಿ ಕಾರ್ಯಗಳನ್ನು ಸುಸಂಬದ್ಧವಾಗಿ ವರ್ಣಿಸುವದು ಇತಿಹಾಸದ ಈಗಿನ 'ಹೊಸ ದೃಷ್ಟಿಯಾಗಿದೆ. ಅರಸು-ಅರಸಿಯರ ಯೋಗ್ಯತೆಯನ್ನು ಕಂಡುಹಿಡಿಯಲು ಈ ಹೊಸ ದೃಷ್ಟಿಯು ಉತ್ತಮವಾದೊಂದು ಅಳತೆಗೋಲಾಗಿದೆ ಎಂದು ಹೇಳಲು ಎಳ್ಳಷ್ಟೂ ಸಂದೇಹವಿಲ್ಲ. ಈ ಅಳತೆಗೋಲನ್ನು ಪಾಳೆಯಗಾರರಿಗೆ ಹಚ್ಚಿ ನೋಡುವದು ಈ ಲೇಖದ ಉದ್ದೇಶವು. ಆಗಿನ ಕಾಲದ ಜನಜೀವನವು ಹೇಗಿತ್ತೆಂಬದನ್ನು ಕಂಡುಹಿಡಿದರೆ, ಅಳತೆಗೋಲು ಎಷ್ಟರ ಮಟ್ಟಿಗೆ ಹತ್ತುವದೆಂಬುದು ನಮಗೆ ತಟ್ಟನೆ ಹೊಳೆಯುವದು. ಹೋದ ಲೇಖದಲ್ಲಿಯಂತೆ ಪ್ರಸ್ತುತ ಲೇಖದಲ್ಲಿಯೂ ಪಾಳೆಯಗಾರರ ಮತ್ತು ಉತ್ತರ ಕರ್ನಾಟಕದಲ್ಲಿಯ ಸಂಸ್ಥಾನಿಕರ ತುಲನಾತ್ಮಕ ವಿವೇಚನವು ಅಲ್ಲಲ್ಲಿ ಮಾಡಲ್ಪಡುವದು.

ರಾಜಕೀಯ ವ್ಯವಸ್ಥೆಯು

ಗ್ರಾಮಗಳಲ್ಲಿ ಈಗಿನಂತೆ ಆಗಲೂ ಗೌಡ-ಶಾನುಭೋಗರು ಇದ್ದರು. ಗೌಡನೇ ಮುಖ್ಯ ಅಧಿಕಾರಿಯಾಗಿರುತ್ತಿದ್ದನು. ಶಾನುಭೋಗನು ಕರಣಿಕನಾಗಿ ಕೆಲಸ ಮಾಡುತ್ತಿದ್ದನು. ಗೌಡನ ಕೈಕೆಳಗೆ ಕೆಲಸ ಮಾಡಲು ಬೇಹುಗಾರರು ಇರುತ್ತಿದ್ದರು. ಇವರು ಗ್ರಾಮದ ಅಂಚೇ ಕೆಲಸವನ್ನೂ ಗಸ್ತಿಯನ್ನೂ ಬಂದೋಬಸ್ತಿನ ಕೆಲಸವನ್ನೂ ಮಾಡುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಬೇಹುಗಾರರ ಕೆಲಸವನ್ನು ಓಲೀಕಾರರು ಮಾಡುತ್ತಿದ್ದರು. ಸಣ್ಣಪುಟ್ಟ ದಿವಾಣಿ ಮತ್ತು ಫೌಜದಾರಿ ವ್ಯಾಜ್ಯಗಳು ಗ್ರಾಮಗಳ ಮುಖಂಡರಿಂದಲೇ ತೀರಿಸಲ್ಪಡುತ್ತಿದ್ದವು. ಇವರಿಗೆ ನೀಗದ ಖಟ್ಲೆಗಳು ಆಯಾ ಖಾತೆಯ ಮುಖ್ಯಾಧಿಕಾರಿಯ ಕಡೆಗೆ ಹೋಗುತ್ತಿದ್ದವು. ಅಲ್ಲಿಯೂ ಬಗೆ ಹರಿಯದ ವ್ಯಾಜ್ಯಗಳು ಕೊನೆಯ ನಿರ್ಣಯಕ್ಕಾಗಿ ದೊರೆಯ ಕಡೆಗೆ ಹೋಗುತ್ತಿದ್ದವು. ಉತ್ತರ ಕರ್ನಾಟದಲ್ಲಿಯೂ ಸಹ ಇದೇ ಕ್ರಮವು ಜಾರಿಯಲ್ಲಿತ್ತು. ಸಾರ್ವಜನಿಕ ಹಿತದ ಕಾರ್ಯವಿದ್ದಲ್ಲಿ—ಉದಾಹರಣಾರ್ಥವಾಗಿ ಗ್ರಾಮಕ್ಕೆ ನೀರಿನ ಅರಬು ಇದ್ದರೆ ಇಲ್ಲವೆ ಪಿಡುಗಿನ ಉಪದ್ರವವಿದ್ದರೆ ಗ್ರಾಮದ ಮುಖಂಡರೆಲ್ಲ ಚಾವಡಿಯಲ್ಲಿ ನೆರೆದು ಅದನ್ನು ಚನ್ನಾಗಿ ಚರ್ಚಿಸಿ ನಿವಾರಣೋಪಾಯವೊಂದನ್ನು ನಿರ್ಣಯಿಸಿಕೊಂಡು, ಈಗಿನಹಾಗೆ ಕೂತಲ್ಲಿಂದಲೇ ರಿಪೋರ್ಟನ್ನು ಕಳಿಸದೆ, ಎಲ್ಲರೂ ಕೂಡಿಕೊಂಡು ದೊರೆಯ ಬಳಿಗೆ ಹೋಗಿ ಸವಿಸ್ತಾರವಾಗಿ ತಿಳಿಸಿಹೇಳುತ್ತಿದ್ದರು. ದೊರೆಯು ಅವರ ವೃತ್ತಾಂತವನ್ನೆಲ್ಲ ಕೇಳಿಕೊಂಡು ತನ್ನ ಉಪದೇಶಕರ ಅಭಿಮತವನ್ನು ತಕ್ಕೊಂಡು ತೀರ್ಪನ್ನು ಕೊಟ್ಟು ಕಳಿಸುತ್ತಿದ್ದನು. ಪರರಾಜರಗೂಡ ಯುದ್ಧ ಮಾಡುವ ಪ್ರಸಂಗವಿದ್ದಾಗ, ದೊರೆಯು ತನ್ನ ಸಂಸ್ಥಾನದ ಪ್ರಮುಖರನ್ನೆಲ್ಲ ಕರೆಯಿಸಿಕೊಂಡು ಅವರ ಅಭಿಮತವನ್ನು ತಕ್ಕೊಂಡೇ ಆ ಕೆಲಸಕ್ಕೆ ಕೈಹಾಕುತ್ತಿದ್ದನು. ನಮ್ಮಲ್ಲಿಯ ಸಂಸ್ಥಾನಿಕರು ಸಹ ಇದೇ ಕ್ರಮವನ್ನು ಪಾಲಿಸುತ್ತಿದ್ದರು. ಗ್ರಾಮಕ್ಕೊಂದು ಚಾವಡಿ ಮತ್ತು ಒಂದು ಕೊಂಡವಾಡೆ ಇರುತ್ತಿದ್ದವು. ಈಗಲೂ ಇವೆ. ವಿಜಯನಗರ ಸಾಮ್ರಾಜ್ಯವು ಹಾಳಾದ ಮೇಲೆ ನಮ್ಮ ನಾಡು ಗುರು ಇಲ್ಲದ ಮಠದಂತಾಗಿ ರಾಜಕೀಯ ವಾತಾವರಣವು ಕಲುಷಿತವಾಯಿತು. ಅರಾಜಕತೆಯು ಎಲ್ಲೆಡೆಗಳಲ್ಲಿ ಪಸರಿಸಿತು. ಲೂಟಿಗಾರರ ಮತ್ತು ಪುಂಡರ ಹಾವಳಿಯು ಹೆಚ್ಚಾಯಿತು. ಮೇಲಿಂದಮೇಲೆ ಮರಾಟಿಗರ ದಾಳಿಗಳಾಗುತ್ತಿದ್ದವು. ಪಾಳೆಯಗಾರರು ಸಹ ತಮ್ಮ ತಮ್ಮೊಳಗೆ ನಾ ಹೆಚ್ಚು ನಾ ಹೆಚ್ಚೆಂದು ಬಡಿದಾಡುತ್ತಿದ್ದರು. ಹೀಗಾಗಿ ಪರಿಸ್ಥಿತಿಯು ಬಲು ಅನಿಶ್ಚಿತವಿರುತ್ತಿತ್ತು. ಪುಂಡರ ಕಾಟವನ್ನು ತಪ್ಪಿಸುವದಕ್ಕೋಸ್ಕರ ಹಳ್ಳಿಗೊಂದು ಬುರುಜು ಇಲ್ಲವೆ ಮಂಚಿಕೆ

ಇರುತ್ತಿತ್ತು. ಅಲ್ಲಿ ಒಬ್ಬ ಕಾವಲುಗಾರನು ಇರುತ್ತಿದ್ದನು. ದೂರದಿಂದ ಪುಂಡರು ಬರುವದನ್ನು ನೋಡಿದ ಕೂಡಲೆ ಕಾಳಿಯನ್ನು ಊದುತ್ತಿದ್ದನು. ಇಲ್ಲವೆ ನಗಾರಿಯನ್ನು ಬಾರಿಸುತ್ತಿದ್ದನು. ಅದನ್ನು ಕೇಳಿದಕೂಡಲೆ ಜನರೆಲ್ಲ ಸುರಕ್ಷಿತವಾದದೊಂದು ಸ್ಥಳದಲ್ಲಿ ಕುಳಿತುಕೊಳ್ಳುತ್ತಿದ್ದರು.

ಸಾಮಾಜಿಕ ವ್ಯವಸ್ಥೆಯು

ಈಗಿನ ಹಾಗೆ ಆಗ ಪ್ರತ್ಯೇಕವಾಗಿ ಶಾಲೆಗಳಿದ್ದಿಲ್ಲ. ಅಯ್ಯನವರ ಮಠಗಳು ಶಾಲೆಗಳಾಗಿರುತ್ತಿದ್ದವು. ಮಠವೆಂದರೆ ಶಾಲೆಯೆಂದೇ ಆಗ ಜನರು ತಿಳಿದುಕೊಳ್ಳುತ್ತಿದ್ದರು. ಶಾಲಿಮಠ ಎಂತ ಅಡ್ಡ ಹೆಸರಿನವರು ನಮ್ಮ ಕರ್ನಾಟಕದಲ್ಲಿ ಅಸಂಖ್ಯರಿದ್ದಾರೆ. ಗ್ರಾಮಕ್ಕೊಬ್ಬ ಜೋಯಿಸನಿರುತ್ತಿದ್ದನು. ಅವನು ಮದುವೆ ಮುಂಜವೆ ಮೊದಲಾದ ಶುಭಕಾರ್ಯಗಳಿಗೆ ಮುಹೂರ್ತಗಳನ್ನೂ, ಶುಭಾಶುಭ ಫಲಗಳನ್ನೂ, ಮಳೆಗಾಲವು ಹೇಗೆ ಆಗುವದೆಂಬವನ್ನೂ, ಬಿತ್ತಲು ಮತ್ತು ಕೊಯ್ಯಲು ಮುಹೂರ್ತಗಳನ್ನೂ, ಇವೇ ಮೊದಲಾದ ಫಲ ಜ್ಯೋತಿಷ್ಯವನ್ನು ಹೇಳುತ್ತಿದ್ದನು. ಶಾಲೆಯ ಅಯ್ಯನನ್ನೂ ಜೋಯಿಸನನ್ನೂ ಜನರು ಪೂರ್ಣ ಭಕ್ತಿಯಿಂದಲೂ ವಿಶ್ವಾಸದಿಂದಲೂ ಕಾಣುತ್ತಿದ್ದರು. ಬಡಿಗರು, ಕಮ್ಮಾರರು, ಕುಂಬಾರರು, ಕ್ಷೌರದವರು, ಮಿಣಿ ಮಾಡುವ ಮಾದಿಗರು, ಸಮಗಾರರು ಮೊದಲಾದವರು ಗ್ರಾಮದೊಳಗಿನ ಎಲ್ಲ ಜನರಿಗೆ ತಮ್ಮ ತಮ್ಮ ಸೇವೆಯನ್ನು ಇಡಿಯ ವರುಷ ಬಿಟ್ಟೂಬಿಡದೆ ಸಲ್ಲಿಸುತ್ತಿದ್ದರು. ಇವರೆಲ್ಲರಿಗೆ ಆಯಗಾರರೆಂದು ಕರೆಯುತ್ತಿದ್ದರು. ಇವರಿಗೆ ವರುಷಕ್ಕೊಮ್ಮೆ ಕುಳದಮೇಲೆ ಇಂತಿಷ್ಟೇ ಆಯ (ಕಾಳು)ವನ್ನು ಕೊಡಬೇಕೆಂದು ಗೊತ್ತುಮಾಡುತ್ತಿದ್ದರು, ಎಲ್ಲರೂ ಅದರಂತೆ ಸುಗ್ಗಿಯಲ್ಲಿ ಮುಟ್ಟಿಸುತ್ತಿದ್ದರು. ನಗದು ಹಣವನ್ನು ಯಾರೂ ಕೊಡುತ್ತಿದ್ದಿಲ್ಲ. ಈ ಪದ್ಧತಿಯು ಇನ್ನೂವರೆಗೂ ಹಳ್ಳಿಗಳಲ್ಲಿ ಬಳಕೆಯಲ್ಲಿದೆ. ಜಾತ್ರೆ ಉರುಸುಗಳಲ್ಲಿಯೂ, ದಸರೆ-ಸಂಕ್ರಮಣಗಳಂತಹ ಸಾರ್ವಜನಿಕ ಹಬ್ಬಗಳಲ್ಲಿಯೂ ಎಲ್ಲರೂ ಒತ್ತಟ್ಟಿಗೆ ಕಲೆತು ಧಾರ್ಮಿಕ ಮತ್ತು ಸಾಮಾಜಿಕ ವ್ಯವಹಾರಗಳನ್ನು ಪರಸ್ಪರ ಪ್ರೇಮದಿಂದ ಮಾಡುತ್ತಿದ್ದರು. ಈಗಿನ ಹಾಗೆ ಆಗ ಜಾತಿ-ಮತಗಳ ಭೇದಭಾವನೆಗಳು ಎಂದೂ ಒಬ್ಬನಲ್ಲೂ ಒಡಮೂಡುತ್ತಿರಲಿಲ್ಲ. ಆ ದಿನಗಳು ಬೇಗನೆ ಪುನಃ ಬರಲೆಂದು ನಮ್ಮ ಹೆಬ್ಬಯಕೆ. ವಿದ್ಯೆಯತ್ತ ಜನರ ಲಕ್ಷ್ಯವು ಹೋಗಿರಲಿಲ್ಲ. ಯಾಕೆಂದರೆ, ಅವು ಪುಂಡಗಾರಿಕೆಯ ದಿನಗಳಾದುದರಿಂದ ಅಂಗಸಾಧನೆಗೆ ವಿಶೇಷ ಮಹತ್ವವನ್ನು ಕೊಡುತ್ತಿದ್ದರು. ಮನೆಯಿಂದ ದುಂಡಗಿದ್ದವರ ಮಕ್ಕಳಷ್ಟೇ ಮಠಕ್ಕೆ ಹೋಗಿ ಕಲಿಯುತ್ತಿದ್ದರು. ಜನಸಾಮಾನ್ಯರೆಲ್ಲ ಅಕ್ಷರಶತ್ರುಗಳಾಗಿ ಅಜ್ಞಾನದಲ್ಲಿ ಮುಳುಗೇಳುತ್ತಿದ್ದರು. ದೊರೆಗಳು ಸಹ ಬಹುತೇಕವಾಗಿ ಕಲಿಯದ ಹುಂಬರಾಗಿರುತ್ತಿದ್ದರು. ಆದರೆ ತಮ್ಮ ಸಂಸ್ಥಾನದಲ್ಲಿಯ ಪಂಡಿತರಿಗೂ ವಿದ್ವಾಂಸರಿಗೂ ಕವಿಗಳಿಗೂ ರಾಜಾಶ್ರಯವನ್ನು ಕೊಡುತ್ತಿದ್ದರು. ಇತ್ತ ಉತ್ತರ ಕರ್ನಾಟಕದಲ್ಲಿಯೂ ಇದೇ ಸ್ಥಿತಿಯು ಇತ್ತೆಂಬುದನ್ನು ಹೇಳುವದೇ ಬೇಡ.

ಆರ್ಥಿಕ ವ್ಯವಸ್ಥೆಯು

ಈಗಿನ ಹಾಗೆ ಆಗ ಭಾರತದಲ್ಲೆಲ್ಲ ಒಂದೇತರಹದ ನಾಣ್ಯ ಪದ್ಧತಿಯು ಇದ್ದಿದ್ದಿಲ್ಲ. ಯಾಕೆಂದರೆ ಈಗಿನ ಹಾಗೆ ಭಾರತವು ಒಂದೇ ಅಧಿಪತ್ಯದಲ್ಲಿ ಇರಲಿಲ್ಲ. ದೊಡ್ಡ ದೊಡ್ಡ ಅರಸು-ಅರಸಿಯರೆಲ್ಲ ತಮ್ಮ ತಮ್ಮ ಹೆಸರಿನ ನಾಣ್ಯಗಳನ್ನು ಹೊರಡಿಸುತ್ತಿದ್ದರು. ಅವರನ್ನು ನೋಡಿ ಅವರ ಕೈಕೆಳಗಿನ ಮಾಂಡಲೀಕರೂ ಸಮಯ ಸಾಧಿಸಿ ತಮ್ಮ ತಮ್ಮ ಸ್ವತಂತ್ರ ನಾಣ್ಯಗಳನ್ನು ಹೊರಡಿಸುತ್ತಿದ್ದರು. ಹೀಗಾಗಿ, ನಮ್ಮ ನಾಡಿನ ತುಂಬೆಲ್ಲ ನೂರೆಂಟು ತರಹದ ನಾಣ್ಯಗಳು ಬಳಕೆಯಲ್ಲಿದ್ದವು. ಉದಾಹರಣಾರ್ಥವಾಗಿ ಕೆಲವುಗಳ ಹೆಸರುಗಳನ್ನು ಇಲ್ಲಿ ಕೊಡಬಯಸುತ್ತೇವೆ. ಪ್ರಿಯ ಕಾವೇರಿ, ಗಬರು, ಮೊಹರು, ಧಾರವಾಡಿ, ಇಕ್ಕೇರಿ, ರಾಮರಾಯಿ, ದೇವರಾಯಿ, ಅಚ್ಯುತರಾಯಿ, ದುರ್ಗಿ, ಸಣ್ಣಗಿರಿ, ಪುತಲಿ, ಬಾದಶಾಹಿ ಹೊನ್ನು, ಶಿವರಾಯಿ ಹೊನ್ನು, ಆದವಾನಿ ಹೊನ್ನು, ಪಾವನಾಯಕಿ ಹೊನ್ನು; ತಾಡಪತ್ರಿ ಹೊನ್ನು ಚಪ್ಪರಿ, ಪಾಟೋಲಿ ಕವಲಿ, ಇತ್ಯಾದಿ. ಇವೆಲ್ಲ ಬಂಗಾರದ ನಾಣ್ಯಗಳು. ಇವಲ್ಲದೆ ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳಿರುತ್ತಿದ್ದವು. ಅವುಗಳಲ್ಲಿಯ ಒಂದು ವೈಶಿಷ್ಟ್ಯವೆಂದರೆ ಈಗಿನ ನಾಣ್ಯಗಳಂತೆ ಸಾಂಕೇತಿಕ (token) ವಿರದೆ ಅವುಗಳ ಬೆಲೆಯಷ್ಟೇ ಬಂಗಾರ, ಬೆಳ್ಳಿ ಇಲ್ಲವೆ ತಾಮ್ರವಿರುತ್ತಿತ್ತು. ಮೇಲಾಗಿ, ಈಗಿನ ಹಾಗೆ ಮಿಶ್ರಣವಿರದೆ ಅವು ಚೊಕ್ಕ ಬಂಗಾರ, ಬೆಳ್ಳಿ

ಅಥವಾ ತಾಮ್ರದವಿರುತ್ತಿದ್ದವು. ಆದುದರಿಂದ ವ್ಯಾಪಾರ-ಉದ್ದಿಮೆಗಳಿಗೆ ಅವುಗಳ ಚಲಾವಣೆಯಿಂದ ಯಾವ ತರಹದ ಬಾಧೆಯೂ ತಟ್ಟುತ್ತಿರಲಿಲ್ಲ. ಮಾಲಿನ ಸಾಗಾಟಕ್ಕೆ ಈಗಿನ ಹಾಗೆ ಆಗ ಮಾರ್ಗಗಳು ಅಷ್ಟೊಂದು ತೃಪ್ತಿಕರವಾಗಿದ್ದಿಲ್ಲ. ಎಷ್ಟೋ ಪಾಳಯಗಾರರು ತಮ್ಮ ತಮ್ಮ ಸಂಸ್ಥಾನದಲ್ಲಿ ಕಚ್ಚಾ ಮಾರ್ಗಗಳನ್ನು ಮಾಡಿಸಿದ್ದರು. ಆದರೆ, ಸರುವು, ಹಳ್ಳ, ನದಿ ಮೊದಲಾದ ಪ್ರವಾಹಗಳು ಅಡ್ಡ ಬಂದಲ್ಲಿ ಅವುಗಳಿಗೆ ಈಗಿನ ಹಾಗೆ ಪೂಲುಗಳನ್ನು ಕಟ್ಟಿಸಿರಲಿಲ್ಲ. ಆದುದರಿಂದ ಮಳೆಗಾಲದಲ್ಲಿ ಮಾಲುಗಳ ಸಾಗಾಟವು ಬಂದಾಗಿ ಬಿಡುತ್ತಿತ್ತು. ಚಳಿಗಾಲ ಬೇಸಿಗೆಕಾಲಗಳಲ್ಲಿ ವ್ಯಾಪಾರ ಉದ್ದಿಮೆಗಳು ಒಳ್ಳೇ ಭರಭರಾಟಿಯಿಂದ ನಡೆಯುತ್ತಿದ್ದವು. ಮೇಲಾಗಿ, ಒಂದು ಸಂಸ್ಥಾನದ ಮಾರ್ಗಕ್ಕೂ ಅದರ ನೆರೆಹೊರೆಯ ಸಂಸ್ಥಾನದ ಮಾರ್ಗಕ್ಕೂ ಸಂಬಂಧ (Connection) ವಿರುತ್ತಿರಲಿಲ್ಲ. ಪಶ್ಚಿಮ ಸಮುದ್ರ ತೀರದ ಪಾಳಯಗಾರರ ಸಂಸ್ಥಾನಗಳಲ್ಲಿ ಪರದೇಶದವರ ಕೂಡ ವ್ಯಾಪಾರವು ನಡೆಯುತ್ತಿತ್ತು. ಈಗಿನ ಹಾಗೆ ಆಗ ದೇಶದಲ್ಲಿ ಬಡತನವಿರಲಿಲ್ಲ. ಅದು ಒಳ್ಳೇ ಸಮೃದ್ಧಿಯ ಕಾಲವು. ಯಾಕೆಂದರೆ, ಪಾಳಯಗಾರರೂ ಉತ್ತರ ಕರ್ನಾಟಕದೊಳಗಿನ ಸಂಸ್ಥಾನಿಕರೂ ತಮ್ಮ ತಮ್ಮ ಪ್ರಜರನ್ನು ಸುಖದಲ್ಲಿಡಲು ಒಬ್ಬರಮೇಲೊಬ್ಬರು ಈರ್ಷೆಯಿಂದ ಹೆಣಗಾಡುತ್ತಿದ್ದರು. ಮೇಲಾಗಿ ಈಗಿನಂತೆ ಆಗ ನಮ್ಮ ದೇಶದ ದುಡ್ಡು ಹೊಳೆಯಂತೆ ಹರಿದು ಪರದೇಶಕ್ಕೆ ಹೋಗುತ್ತಿದ್ದಿಲ್ಲ. ಆದುದರಿಂದಲೇ ಆಗ ನಮ್ಮ ದೇಶದಲ್ಲಿ ಬಂಗಾರದ ಹೊಗೆಯು ಹಾಯುತ್ತಿತೆಂದು ಹೇಳುತ್ತಾರೆ. ಮಾರ್ಗಗಳ ಸೌಕರ್ಯಗಳು ಸಾಕಷ್ಟಿದ್ದಿಲ್ಲವಾದುದರಿಂದ, ಅಪ್ಪಿತಪ್ಪಿ ಎಲ್ಲಿಯಾದರೂ ದೊಡ್ಡ ಬರ ಬಿದ್ದಾಗ ಜನರು ಅನುಭೋಗಿಸುತ್ತಿದ್ದ ಬವಣೆಯನ್ನು ಅಷ್ಟಿಷ್ಟೆಂದು ಹೇಳಲಳವಲ್ಲ. ಬೆಳೆದ ಪ್ರಾಂತಗಳಿಂದ ಈಗಿನ ಹಾಗೆ ಕಾಳುಕಡಿಗಳನ್ನು ತಂದು ಪುರವಠೆ ಮಾಡಲು ಶಕ್ಯವಾಗುತ್ತಿದ್ದಿಲ್ಲ. ಕೂಳಿಲ್ಲದೆ ದಾರಿದಾರಿಗೆ ಎಷ್ಟೋ ಜನರು ಬಿದ್ದು ಸಾಯುತ್ತಿದ್ದರು. ಕಂದಾಯವನ್ನು ನಿರ್ದಿಷ್ಟಪಡಿಸಿದಷ್ಟೇ ಎತ್ತುತ್ತಿದ್ದರು. ಆದುದರಿಂದ ರೈತರು ಒಳ್ಳೇ ಸಂತುಷ್ಟರಾಗಿರುತ್ತಿದ್ದರು. ಬರದ ಕಾಟವನ್ನು ತಪ್ಪಿಸಲೋಸುಗ ಬಹಳಷ್ಟು ಕೆರೆಗಳನ್ನು ಕಟ್ಟಿಸಿದರಾದುದರಿಂದ ರೈತರ ಸಾಂಪತ್ತಿಕ ಸ್ಥಿತಿಯು ಚನ್ನಾಗಿರುತ್ತಿತ್ತು. ಇದುವೇ ಆಗ ಹಳ್ಳಿಗಳಲ್ಲಿ ನೆಲಸಿದ ಸಮೃದ್ಧಿಯ ಮೂಲ ಕಾರಣವು. ತೂಕದ ಕಲ್ಲುಗಳನ್ನೂ ಅಳತೆಯ ಮಾಪುಗಳನ್ನೂ ನಿರ್ದಿಷ್ಟಪಡಿಸಿದ್ದರು. ವ್ಯಾಪಾರಸ್ಥರೆಲ್ಲ ಅವುಗಳನ್ನೇ ಉಪಯೋಗಿಸುತ್ತಿದ್ದರು. ಮಾಲುಗಳಮೇಲೆ ಗೊತ್ತುಪಡಿಸಿದಷ್ಟೇ ಸುಂಕವನ್ನು ಇಲ್ಲವೆ ಕರವನ್ನು ಹೇರಿ ವಸೂಲ ಮಾಡುತ್ತಿದ್ದರು. ಉತ್ತರ ಕರ್ನಾಟಕದಲ್ಲಿಯೂ ಹೆಚ್ಚುಕಡಿಮೆ ಇದೇ ಸ್ಥಿತಿಯಿತ್ತು.

ಕೊನೆಯ ಮಾತು

ಪ್ರಾರಂಭದಲ್ಲಿ ಹೇಳಿದಂತೆ ಇತಿಹಾಸದ ಈಗಿನ ಹೊಸ ದೃಷ್ಟಿಯ ಒರೆಗಲ್ಲನ್ನು ಹಚ್ಚಿ ನೋಡಲಾಯಿತು. ರಾಜಕೀಯ ವ್ಯವಸ್ಥೆಯಲ್ಲಿ ನಮಗೆ ಕಂಡುಬಂದ ಹಿತಕರವಾದ ಮುಖ್ಯಾಂಶವೆಂದರೆ ಗ್ರಾಮಾಂತರಗಳಲ್ಲಿ ಕಂಡುಬರುತ್ತಿದ್ದ ಪ್ರಜಾಪ್ರಭುತ್ವ (Democracy)ದ ತಳಹದಿಯ ಮೇಲಿನ ಆಡಳಿತೆ ಈಗಿನ ಗ್ರಾಮಪಂಚಾಯತಿಗಳ ಹಾಗೆ ಆಗ ಚುನಾವಣೆಗಳು ಮಾತ್ರ ಆಗುತ್ತಿರಲಿಲ್ಲ. ಊರೊಳಗಿನ ಜನರ ವಿಶ್ವಾಸಕ್ಕೂ ಆದರಕ್ಕೂ ಪಾತ್ರರಾದ ಮುಖಂಡರು ಪಂಚರಾಗಿ ಎಲ್ಲ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಪ್ರಜಾಪ್ರಭುತ್ವದ ಕಲ್ಪನೆಯಿಲ್ಲದೆ ಅದರ ತತ್ವಗಳಂತೆ ಹಳ್ಳಿಗಳಲ್ಲಿಯ ಆಡಳಿತೆಯು ಮಾತ್ರ ಆಚರಣೆಯಲ್ಲಿ ನೆಲಸಿತ್ತು. ಪ್ರಜೆಗಳೆಲ್ಲರೂ ಅರಸು-ಅರಸಿಯರು ಹೇಳಿದ ಹಾಗೆ ಕೇಳುತ್ತಿದ್ದರು. ಅವರಲ್ಲಿ ಜನತೆಯ ಅಂಧಶ್ರದ್ಧೆಯು ಇರುತ್ತಿತ್ತು. 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಮನೋವೃತ್ತಿಯು ಜನದಲ್ಲಿ ಮನೆ ಮಾಡಿಕೊಂಡಿತ್ತು. ಹೀಗಿದ್ದಾಗ್ಯೂ, ಪಾಳಯಗಾರರು ತಮ್ಮ ಮನಸಿಗೆ ಬಂದಹಾಗೆ ಕಾರಭಾರವನ್ನು ಮಾಡದೆ, ತಮ್ಮ ಸಂಸ್ಥಾನದೊಳಗಿನ ಪ್ರಮುಖರನ್ನೂ ಪಂಡಿತರನ್ನೂ ತಮ್ಮ ಉಪದೇಶಕರನ್ನಾಗಿ ನಿಯಮಿಸಿಕೊಂಡು ಅವರ ನಿರ್ಣಯದಂತೆ ಒಳಾಡಳಿತವನ್ನೂ ರಾಜಕಾರಣದಂತಹ ಗಹನ ವಿಷಯಗಳನ್ನೂ ಬಗೆಹರಿಸುತ್ತಿದ್ದರು. ಹೊರಗಿನಿಂದ ನೋಡುವವರಿಗೆ ಏಕತಂತ್ರಾಧಿಕಾರ (dictator-ship) ವೆಂದು ಅನಿಸಿದರೂ, ನಿಜ ಸ್ವರೂಪದಲ್ಲಿ ಅದು ನಿಯಮಿತ (Limited) ವಾದದ್ದಾಗಿತ್ತು. ಆಗಿನ ಕಾಲದಲ್ಲಿ ಕೊನೆ

ಕೊನೆಗೆ ದೇಶದಲ್ಲೆಲ್ಲ ಹರಡಿಕೊಂಡಿದ್ದ ಅರಾಜಕತೆಯು ನಿಜಕ್ಕೂ ನಮ್ಮ ರಾಷ್ಟ್ರದ ದುರ್ದೈವವು. ಅದಕ್ಕೆ ಪಾಳಯಗಾರರಾಗಲೀ ಇಲ್ಲವೇ ಬೇರೆ ಚಿಕ್ಕ ಸಂಸ್ಥಾನಿಕರಾಗಲೀ ಜವಾಬುದಾರರಲ್ಲ. ಒಂದು ವೇಳೆ ಇವರೇ ಕಾರಣರೆಂದು ತಿಳಿದು ಇವರ ಕೊರಳಲ್ಲಿ ತಪ್ಪನ್ನು ಕಟ್ಟಿದರೆ, ಎತ್ತಿಗೆ ಜೇನೆ ಬಂದರೆ ಎಮ್ಮೆಗೆ ಬರೆ ಕೊಟ್ಟರೆಂಬಂತಾಗುತ್ತದೆ. ದಕ್ಷಿಣದಲ್ಲಿ ವಿಜಯನಗರ ಸಾಮ್ರಾಜ್ಯವೂ ಉತ್ತರದಲ್ಲಿ ಮೊಗಲ ಸಾಮ್ರಾಜ್ಯವೂ ಹಾಳಾಗಿ ಇಡಿಯ ಭಾರತದಲ್ಲಿ ಒಂದೇ ಆಧಿಪತ್ಯದ ಅಭಾವವೇ ಆ ಅರಾಜಕತೆಯ ಮುಖ್ಯ ಕಾರಣವು. ಇಂತಹ ಕಲುಷಿತ ರಾಜಕೀಯ ವಾತಾವರಣದಲ್ಲಿಯೂ ಕೂಡಾ, ನಮ್ಮ ತಾಯ್ನಾಡಿನ ಚಿಕ್ಕ ಸಂಸ್ಥಾನಿಕರೆಲ್ಲರೂ ತಮ್ಮ ತಮ್ಮ ಪ್ರಜರನ್ನು ಸುಖದಲ್ಲಿಡಲು ಹೆಣಗಿದರಲ್ಲವೇ? ಅದೆಷ್ಟೋ ಸಂಸ್ಥಾನಿಕರು ತಮ್ಮ ಪ್ರಜರ ಸುಖಕ್ಕಾಗಿ ಪ್ರಾಣಾರ್ಪಣವನ್ನೂ ಕೂಡಾ ಮಾಡಲಿಲ್ಲವೇ? ಆಗಿನ ಸಾಮಾಜಿಕ ವ್ಯವಸ್ಥೆಯಂತೂ ಅತಿ ತೃಪ್ತಿಕರವಾಗಿತ್ತು. ವಿದ್ಯೆಯ ಅಭಾವವೊಂದು ಮಾತ್ರ ಎದ್ದು ಕಾಣುತ್ತಿತ್ತು. ಅದು ಆಗಿನ ರಾಜಕೀಯ ವಾತಾವರಣದ ದುಷ್ಪರಿಣಾಮವು. ಆರ್ಥಿಕ ವ್ಯವಸ್ಥೆಯೂ ಆಗಿನ ಪರಿಸ್ಥಿತಿಗನುಸರಿಸಿ ಸಮಾಧಾನಕರವಿತ್ತು. ಎಲ್ಲರೂ ಸುಖಿಗಳಾಗಿದ್ದರು. ಈ ಎಲ್ಲ ನಿರ್ಣಯಗಳು ನಮ್ಮ ಉತ್ತರ ಕರ್ನಾಟಕದೊಳಗಿನ ಸಂಸ್ಥಾನಿಕರಿಗೂ ಅನ್ವಯಿಸುತ್ತವೆಂಬ ಮಾತನ್ನು ನಮ್ಮ ವಾಚಕರ ಗಮನಕ್ಕೆ ತರಬಯಸುತ್ತೇವೆ. ಪಾಳಯಗಾರರ ಬಗೆಗೆ ಲೇಖಗಳನ್ನು ಬರೆಯಬೇಕೆಂಬ ನಮ್ಮ ಮನೀಷೆಯು ಇಲ್ಲಿಗೆ ಪೂರ್ತಿಯಾದಂತಾಯಿತು.

|| ಜೈ ಹಿಂದ ||

ಸಾಮಾಜಿಕ ಜೀವನಕ್ಕಾಗಿ ಶಿಕ್ಷಣ*

ಲೇಖಕರು: ವಿ. ಕೋ. ಜವಳಿ

(ಧಾರವಾಡ ರೇಡಿಯೋ ಭಾಷಣ ೨೩-೯-೫೦)

ಅಕ್ಕತಂಗಿಯರೇ ಮತ್ತು ಅಣ್ಣಾತಮ್ಮಂದಿರೇ!

ಶಿಕ್ಷಣದ ಧ್ಯೇಯ:

ವೈಯಕ್ತಿಕವೂ ಅಹುದು ಸಾಮಾಜಿಕವೂ ಅಹುದು. ಮಗುವಿನ ಶಿಕ್ಷಣವು ಅವನು ಹುಟ್ಟಿದಾಗಿನಿಂದಲೇ ಪ್ರಾರಂಭವಾಗುತ್ತದೆ. ಮಗುವು ತನ್ನ ಬೆಳವಣಿಯ ಬೇರೆ ಬೇರೆ ಮೆಟ್ಟುಗಳನ್ನು ದಾಟುತ್ತ ನಡೆದ ಹಾಗೆ ಅವನ ಶಿಕ್ಷಣದ ಸ್ವರೂಪವೂ ಬದಲಾಗುತ್ತ ಹೋಗುವದು. ಮಗುವಿನಲ್ಲಿ ಅನೇಕ ಶಕ್ತಿಗಳು ಹುದುಗಿಕೊಂಡಿರುತ್ತವೆ. ಅವುಗಳನ್ನು ಅರಳಿಸಲು ನೆರವಾಗುವದೇ ಶಿಕ್ಷಣದ ಮುಖ್ಯ ಧ್ಯೇಯ. ಆದರೆ ಮಗ ಸಮಾಜದ ಆವರಣದಲ್ಲಿ ಬೆಳೆಯುತ್ತಾನೆ ಎಂಬುದನ ನಾವು ಮರೆಯಕೂಡದು. ಆದ್ದರಿಂದ ಅವನ ವ್ಯಕ್ತಿತ್ವ ಅವನು ಹುಟ್ಟಿ ಬೆಳೆಯುವ ಸಮಾಜದ ವಾತಾವರ ದಿಂದ ರೂಪಗೊಳ್ಳುತ್ತದೆ. ಈ ಸಾಮಾಜಿಕ ದೃಷ್ ಯಿಂದ ನೋಡಿದರೆ ಮಗುವನ್ನು ಉತ್ತಮ ನಾಗರಿ ನನ್ನಾಗಿ ಮಾಡುವದೇ ಶಿಕ್ಷಣದ ಗುರಿ. ಲೋಕಸತ್ತಾ ತತ್ವಗಳು (Democratic Principles) ಜಗ

*ಧಾರವಾಡ ಏ. ಆಯ್ ಆರ್. (ಬಾನುಲಿ ಕೇಂದ್ರ) ಅ ರಿಂದ ಅಪ್ಪಣೆ ಪಡೆದು ಪ್ರಕಟಿಸಲಾಗಿದೆ—ಸಂಪಾದಕರು.

ನಲ್ಲಿ ಹಬ್ಬಿದಂದಿನಿಂದ ಶಿಕ್ಷಣದ ಈ ಸಾಮಾಜಿಕ ಗುರಿಗೆ ಹೆಚ್ಚು ಮಹತ್ವವನ್ನು ಕೊಡಲಾಗಿದೆ.

ಶಿಕ್ಷಣ ಸಂಸ್ಥೆಗಳು:

ವ್ಯಾಪಕವಾದ ಅರ್ಥದಲ್ಲಿ ನೋಡಿದರೆ ಮನೆ ಮಠ, ಮತ್ತು ಸಾಲೆ ಇವು ಮೂರೂ ಶಿಕ್ಷಣ ಸಂಸ್ಥೆಗಳು. ಇವೆಲ್ಲವುಗಳ ಪ್ರಭಾವವು ಮಗುವಿನ ವ್ಯಕ್ತಿತ್ವದ ಬೆಳವಣಿಗೆಯ ಮೇಲೆ ಆಗದೇ ಇರದು. ಆದರೆ ಸಾಲೆ ಯೆಂಬದು ಒಂದು ಸಾಮಾಜಿಕ ಸಂಸ್ಥೆ. ಆದ್ದರಿಂದ ಮಗುವಿನ ಸಾಮಾಜಿಕ ಜೀವನಕ್ಕೆ ಬೇಕಾಗುವ ಎಲ್ಲ ವಿಷಯಗಳನ್ನು ಸಾಲೆಯಲ್ಲಿ ಕಲಿಸುವದು ಅವಶ್ಯ.

ಮಗುವಿನ ನಡೆನುಡಿಗಳು ಮೃದುವಾದ ಅವನ ಚಿಕ್ಕ ವಯಸ್ಸಿನಲ್ಲಿಯೇ ರೂಪಗೊಳ್ಳಲಿಕ್ಕೆ ಪ್ರಾರಂಭವಾಗುವದರಿಂದ ಅವು ಮನೆಯ ವಾತಾವರಣವನ್ನೇ ಅವಲಂಬಿಸಿವೆ. ಅಂತೆಯೇ "ತಂದೆಯಂತೆ ಮಗ" ಎಂಬ ನಾಣ್ಣುಡಿ ಉಂಟಾಗಿರುವದು. ಮನೆಯಲ್ಲಿ ತಾಯಿಯು ಸಮಾಜದ ರೂಢಿಗಳಂತೆ ಮಗುವನ್ನು ಬೆಳೆಸುವಳು. ಅವನಿಗೆ ಲಾಲನೆ ಪಾಲನೆಗಳನ್ನು ಮಾಡು ವಳು; ತಾನಾಡುವ ಭಾಷೆಯನ್ನು ಕಲಿಸುವಳು. ಅವನ ಉಡಿಗೆ ತೊಡಿಗೆ ಊಟ ಉಪಚಾರಗಳನ್ನು ಸಮಾಜದ ಪದ್ಧತಿಯಂತೆಯೇ ನಡೆಸುವಳು. ಮಗುವು ಒಲ್ಲೆ ನೆಂದರೂ ತಾಯಿಯು ಒತ್ತಾಯದಿಂದ ಅವನ ಜಳಕ ಮಾಡಿಸುವಳು; ಮಣ್ಣಿನೊಳಗೆ ಆಡುತ್ತಿದ್ದ ಮಗುವನ್ನು ತಂದು ಜಬರಿಸಿ ಕೈಕಾಲು ತೊಳೆಯುವಳು; ಹೊಲಸು ಬಟ್ಟೆಗಳನ್ನು ತೆಗೆದು ಹಸನಾದ ಬಟ್ಟೆಗಳನ್ನು ತೊಡಿಸು ವಳು. ಓರಿಗೆಯ ಗೆಳೆಯರೊಡನೆ ಜಗಳಾಡಿದರೆ ಮಗುವು ಯಾವದು ಸರಿ ಯಾವದು ತಪ್ಪು ಯೆಂಬದನ್ನು ತಂದೆ ತಾಯಿಗಳಿಂದ ಕಲಿಯುವನು.ಮಗುವು ಯಾವಾಗಲೂ ಸ್ವತಂತ್ರವಾಗಿ ತನ್ನ ಇಚ್ಛೆಯಂತೆ ನಡೆಯುವದು ಸಾಧ್ಯವಿಲ್ಲ. ಅವನು ಸಮಾಜದ ಒಂದು ಪಡಿಯಚ್ಚಿನಲ್ಲಿ ಸಿಕ್ಕು ಅದರಂತೆಯೇ ರೂಪಗೊಳ್ಳುತ್ತಾನೆ. ಅವನು ಕ್ರಮೇಣ ಸಮಾಜದ ಆಚಾರ ವಿಚಾರಗಳನ್ನೂ ನೀತಿ ನಿಯಮಗಳನ್ನೂ ಜಾತಿ ಕಲ್ಪನೆಗಳನ್ನೂ ಸಹಜವಾಗಿ ಸ್ವೀಕರಿಸುತ್ತಾನೆ. ಸಮಾಜದಲ್ಲಿ ರೂಢವಾಗಿರುವ ನಂಬುಗೆಗಳೂ ನಡಾವಳಿಗಳೂ ಸರಿಯೋ ತಪ್ಪೋ ಎಂಬುದನ್ನು ಬುದ್ಧಿಪರಿತು ವಿಚಾರಿಸುವ ಮಕ್ಕಳು ಅತಿ ವಿರಳ. ಸಮಾಜದಲ್ಲಿ ಇದ್ದುದೆಲ್ಲ ಸಹಜವೆಂದು ಬಗೆದು ಸೌಮ್ಯಮನೋವೃತ್ತಿಯನ್ನು ತಾಳಿ ಪ್ರವಾಹದಗುಂಟ ಹೋಗುವವರೇ ಹೆಚ್ಚು.

ಮಗು ಆರನೇ ವಯಸ್ಸಿಗೆ ಬಂದ ಮೇಲೆ ತಂದೆ ತಾಯಿಗಳು ಅವನನ್ನು ಸಾಲೆಗೆ ಹಾಕುತ್ತಾರೆ. ಮುಂದು ವರಿದ ಅಮೇರಿಕೆ, ಇಂಗ್ಲಂಡ ಮೊದಲಾದ ದೇಶಗಳು ಪ್ರತಿಯೊಬ್ಬ ಮಗುವಿಗೂ ೬ರಿಂದ ೧೬ ಮತ್ತು ೧೮ ವಯಸ್ಸಿನ ವರೆಗೂ ಶಿಕ್ಷಣವು ಉಚಿತವಾಗಿ ದೊರೆಯು ವಂತೆ ಏರ್ಪಾಡು ಮಾಡಿರುವವು. ಆದರೆ ನಮ್ಮ ಭಾರತ ದಲ್ಲಿ ಶಿಕ್ಷಣದ ಮಹತ್ವವೂ ಅವಶ್ಯಕತೆಯೂ ಜನಸಾಮಾನ್ಯರಿಗೆ ಗೊತ್ತಿರುವದಿಲ್ಲ. ಇದಕ್ಕೆ ಮುಖ್ಯವಾದ ಕಾರಣಗಳು ಎರಡು:

ಬಡತನ ಮತ್ತು ಅಜ್ಞಾನ. ನಾವು ಮೊನ್ನೆ ಗಳಿಸಿದ ಲೋಕಸತ್ತೆಯು ಸ್ಥಿರವಾಗಿ ಉಳಿಯಬೇಕಾದರೆ ಪ್ರತಿ ಯೊಬ್ಬನು ಸಾಮಾನ್ಯ ಶಿಕ್ಷಣವನ್ನು ಪಡೆಯುವದು ಅವಶ್ಯ.

ಸಾಲೆಗಳಲ್ಲಿ ದೊರೆಯುವ ಶಿಕ್ಷಣವು ಎಷ್ಟರಮಟ್ಟಿಗೆ ಸಮಾಜದ ಪ್ರತಿಬಿಂಬವಾಗಿರಬೇಕು ಮತ್ತು ಯಾವ ರೀತಿಯಲ್ಲಿ ಸಮಾಜಕ್ಕೆ ಪೋಷಕವಾಗಿರಬೇಕು ಎಂಬು ದನ್ನು ಪಾಲಕರೂ ಶಿಕ್ಷಣ ತಜ್ಞರೂ ಕೂಡಿಯೇ ವಿಚಾರಿಸುವ ಮಾತಾಗಿದೆ. ಶಿಕ್ಷಣದ ಪ್ರಕಾರಗಳು ಯಾವೇ ಇರಲಿ ಇಡಿ ಶಿಕ್ಷಣ ಪದ್ಧತಿಯು ಮೂರು ಮುಖ್ಯ ತಳಹದಿಯಮೇಲೆ ಕಟ್ಟಲ್ಪಡಬೇಕು. ಅವು ಯಾವವೆಂದರೆ ೧. ಜ್ಞಾನ. ೨. ನಾಗರಿಕತೆ. ೩. ಕೆಲಸ. ಜ್ಞಾನದ ಮೇಲೆಯೇ ಸಂಸ್ಕೃತಿಯ ಮನ್ನಣೆಯೂ ನಾಗರಿಕತೆಯಮೇಲೆ ಸಾಮಾಜಿಕ ನೀತಿಯೂ, ಕೆಲಸದ ಮೇಲೆ ಆರ್ಥಿಕ ಯೋಜನೆಯೂ ನಿಂತಿವೆ. ಈ ಮೂರು ತತ್ವಗಳಮೇಲೆ ಹೆಣೆಯಲ್ಪಟ್ಟ ಪ್ರಗತಿಶೀಲ ಶಿಕ್ಷಣವು ಜೀವನವನ್ನು ಸುಖಮಯವಾಗಿಯೂ ಸೌಂದರ್ಯಮಯ ವಾಗಿಯೂ ಮಾಡಬಲ್ಲದು. ಜೀವನದ ಪೂರ್ವ ತಯಾರಿಯು ಶಿಕ್ಷಣ ಸಂಸ್ಥೆಗಳಾದ ಸಾಲೆ ಕಾಲೇಜುಗಳಲ್ಲಿ ನಡೆಯಬೇಕಾಗುತ್ತದೆ. ಜೀವನವು ಸಾಮಾಜಿಕವಾಗಿ ರುತ್ತದೆ. ಸಮಾಜವು ಲೋಕಸತ್ತೆಯ ತತ್ವಗಳ ಮೇಲೆ ಕಟ್ಟಲ್ಪಡಬೇಕಾಗುತ್ತದೆ. ಪ್ರತಿಯೊಬ್ಬ ಮನುಷ್ಯನನ್ನು ಗೌರವದಿಂದ ಕಾಣುವದು, ಪ್ರತಿಯೊಬ್ಬನಿಗೆ ಸಮಾನ

ಸಂದರ್ಭಗಳನ್ನು ಒದಗಿಸುವದು, ಪ್ರತಿಯೊಬ್ಬನಿಗೆ ಸಾಕಷ್ಟು ಅನ್ನ, ಅರಿವೆ, ಮನೆ, ಔಷಧ, ಶಿಕ್ಷಣ, ಉದ್ಯೋಗ, ಸ್ವಾತಂತ್ರ್ಯ ಮತ್ತು ಪೂಜೆಯ ಸ್ವಾತಂತ್ರ್ಯಗಳು ದೊರೆಯುವಂತೆ ನೋಡಿಕೊಳ್ಳುವದು, ಪ್ರತಿಯೊಬ್ಬನು ಸಂಘಜೀವನದಲ್ಲಿ ತನ್ನ ನಾಗರಿಗತೆಯ ಹೊಣೆಯನ್ನು ಅರಿಯುವಂತೆ ಮಾಡುವದು ಇವೇ ಮೊದಲಾದವು ಲೋಕಸತ್ತೆಯ ಮುಖ್ಯ ತತ್ವಗಳು. ಎಲ್ಲ ಬಗೆಯ ಸಾಲೆ ಕಾಲೇಜುಗಳು ಈ ತತ್ವಗಳನ್ನು ಅಂಗೀಕರಿಸಿ ವಿದ್ಯಾರ್ಥಿಗಳಿಗೆ ಲೋಕಸತ್ತೆಯ ಜೀವನ ಕ್ರಮದಲ್ಲಿ ತರಬೇತು ಮಾಡಿದರೆ ಹೊಸ ಸಮಾಜವು ಬೇಗನೆ ನಿರ್ಮಾಣವಾಗಲು ಅನುಕೂಲವಾಗುತ್ತದೆ.

ಶಿಕ್ಷಣದಲ್ಲಿ ಮುಖ್ಯವಾಗಿ ಮೂರು ಭಾಗಗಳನ್ನು ಮಾಡಬಹುದು: ಸಾಮಾನ್ಯಶಿಕ್ಷಣ, ಉದ್ಯೋಗ ಶಿಕ್ಷಣ ಮತ್ತು ಉಚ್ಚ ಶಿಕ್ಷಣ. ಇವು ಕ್ರಮೇಣ ಪ್ರಾಥಮಿಕ ಸಾಲೆ, ಮಾಧ್ಯಮಿಕ ಸಾಲೆ ಮತ್ತು ಕಾಲೇಜುಗಳಲ್ಲಿ ಕೊಡಲ್ಪಡುವವು. ಪ್ರಾಥಮಿಕ ಮತ್ತು ಮಾಧ್ಯಮಿಕ ಸಾಲೆಗಳ ಅಭ್ಯಾಸ ಪತ್ರಿಕೆಗಳು ನಾಗರಿಕ ಜೀವನಕ್ಕೆ ಹೊಂದಿಕೆಯಾಗಿರಬೇಕೆಂಬುದು ಸಹಜ. ಶಿಕ್ಷಣದ ಸಾಧನಗಳಾದ ಓದು, ಬರಹ ಮತ್ತು ಲೆಕ್ಕ ಇವುಗಳನ್ನು ಮಕ್ಕಳಿಗೆ ಪ್ರಾರಂಭದಲ್ಲಿ ಕಲಿಸುವದು ಅವಶ್ಯ. ಆದರೆ ಇವುಗಳ ಜೊತೆಗೆ ಜ್ಞಾನಕ್ಕೆ ಮೂಲವಾದ ಕುತೂಹಲ ಪ್ರವೃತ್ತಿಯನ್ನೂ ಸಮಸ್ಯೆಗಳನ್ನೂ ಎದುರಿಸಿ ಬಿಡಿಸುವ ಧೈರ್ಯ ಸಾಹಸಗಳನ್ನೂ ನಾಗರಿಕತೆಗೆ ಮೂಲವಾದ ಸಮಾನತೆ, ಸಹಕಾರ, ನೀತಿ, ನ್ಯಾಯಗಳನ್ನೂ, ಕೆಲಸಕ್ಕೆ ಮೂಲವಾದ ಉದ್ದೇಶಪೂರಿತ ಚಟುವಟಿಕೆ ಮತ್ತು ಶ್ರಮ ಗೌರವವನ್ನೂ ಕಲಿಸುವದು, ಪ್ರಾಥಮಿಕ ಶಿಕ್ಷಣದ ಕಾರ್ಯಕ್ರಮವಾಗಿರತಕ್ಕದ್ದು. ಈ ಪ್ರಾಥಮಿಕ ಶಿಕ್ಷಣವು ಮಗುವಿನ ೬ನೇ ವಯಸ್ಸಿನಿಂದ ೧೦ ಅಥವಾ ೧೧ನೇ ವಯಸ್ಸಿನ ವರೆಗೆ ಕೊಡಲ್ಪಡುವದು. ಮಗುವು ದೊಡ್ಡವನಾಗಿ ಸಾಮಾಜಿಕ ಜೀವನದಲ್ಲಿ ಅವನು ಯಾವದೇ ಪಾತ್ರವನ್ನು ವಹಿಸಲು ಅವನಿಗೆ ಪ್ರತಿನಿತ್ಯವೂ ಅವಶ್ಯವೆನಿಸಿದ ಸಾಮಾನ್ಯ ಶಿಕ್ಷಣವನ್ನು (Liberal education) ಕೊಡುವದೇ ಪ್ರಾಥಮಿಕ ಸಾಲೆಗಳ ಕರ್ತವ್ಯವು. ಲೋಕಸತ್ತೆಯ ಮೊದಲನೇ ತತ್ವವಾದ ಸಮಾನತೆಯ ಬೀಜವನ್ನು ಚಿಕ್ಕ ಮಕ್ಕಳ ಮೃದುವಾದ ಮನೋಭೂಮಿಕೆಯಲ್ಲಿ ನಾಟಿದರೆ ಮಾತ್ರ ಅದು ಮುಂದೆ ಮರವಾಗಿ ಬೆಳೆದು ಫಲವನ್ನು ಕೊಡುವದು. ದ್ವೇಷ, ಅಸೂಯೆ, ಸಂಕುಚಿತ ದೃಷ್ಟಿ, ಸ್ವಾರ್ಥ, ಶೋಷಣೆಗಳಿಗೆ ತವರುಮನೆಯಾದ ವರ್ಣವಿಚಾರಗಳೂ ವರ್ಣಪದ್ಧತಿಯಿಂದಲೇ ಹುಟ್ಟಿದ ಜಾತಿಯ ಕಲ್ಪನೆಗಳೂ ಮಕ್ಕಳ ಮನಸ್ಸನ್ನು ಕಲಕಿಸದಂತೆ ಶಿಕ್ಷಣದ ಯೋಜನೆಯು ಆಗತಕ್ಕದ್ದು. ಉದಾಹರಣೆಗಾಗಿ— ವರ್ಣಸೂಚಕ ಮತ್ತು ಜಾತಿಸೂಚಕ ಶಬ್ದಗಳಾಗಲಿ, ಸಂಗತಿಗಳಾಗಲಿ; ಮೇಲು ಕೀಳೆಂಬ ಭಾವನೆಗಳನ್ನು ಹುಟ್ಟಿಸುವ ಸಂದರ್ಭಗಳಾಗಲಿ ಮಕ್ಕಳು ಓದುವ ಪುಸ್ತಕಗಳಲ್ಲಿ ಇರಕೂಡದು. ಕೆಲವು ಪಠ್ಯ ಪುಸ್ತಕಗಳಲ್ಲಿ ಇಂಥ ಅನುಚಿತ ಪಾಠಗಳು ಕಂಡುಬರುತ್ತವೆ. ಸರಕಾರದವರು ಈ ಪಾಠಗಳನ್ನು ಕೂಡಲೇ ರದ್ದುಗೊಳಿಸಬೇಕು. ಶಿಕ್ಷಣ ಸಾಹಿತ್ಯದಲ್ಲಿಯೂ ಕೂಡ ಒಂದು ವಿಶಿಷ್ಟ ಜಾತಿಯ ಸಂಸ್ಕೃತಿಯನ್ನು ಪ್ರಚೋದಿಸುವ ಪದಗಳನ್ನು ಉದಾ: ಸೂತ್ರಯಜ್ಞ, ಸ್ನಾತಕ, ಆಚಾರ್ಯ ಕುಲಪತಿ, ಮೊದಲಾದವುಗಳನ್ನು ಬಳಸುವದು ಅಯೋಗ್ಯವೆನಿಸುವದು. ಇಂಥ ಪ್ರಸಂಗಗಳಲ್ಲಿ ಇಂಗ್ಲೀಷಿನಿಂದ ಬಂದ ಪಾರಿಭಾಷಿಕ ಶಬ್ದಗಳನ್ನು ಹಾಗೆಯೇ ಇಟ್ಟುಕೊಳ್ಳಬಹುದು ಇಲ್ಲವೆ ಮತಾತೀತ ಭಾಷೆಯಲ್ಲಿ ಅವುಗಳನ್ನು ಪರಿವರ್ತಿಸಬಹುದು.

[ಮುಂದಿನ ಸಂಚಿಕೆಗೆ ಮುಂದುವರಿದಿದೆ.]

೧೯೫೧ ಜನೇವರಿಯಲ್ಲಿ ಜರುಗಲಿರುವ ಗಂಡು ಮತ್ತು ಹೆಣ್ಣುಮಕ್ಕಳ

ಸಾರ್ವಜನಿಕ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ

ಕಾರ್ಯಕ್ರಮ

ದಿನ ಮತ್ತು ದಿನಾಂಕ	ವೇಳೆ ಇಂದ	ವೇಳೆ ವರೆಗೆ	ವಿಷಯ	ಗುಣಗಳು
ಸೋಮವಾರ ೨೨-೧-೧೯೫೧	೧೦-೩೦	೧೧-೧೫	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	
	೧೧-೩೦	೨-೦	**೧ನೆಯ ಸದರು:** ಪ್ರಾದೇಶಿಕಭಾಷೆ. (೨ನೆಯ ಕಾಗದ: ಪ್ರಬಂಧ ಮತ್ತು ಕೈಬರಹ)	೧೦೦
	೩-೦	೬-೦	**೪ನೆಯ ಸದರು:** ವಿಜ್ಞಾನ (ಸಾಯನ್ಸ)	
			(೧) ಶರೀರ ಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ. ಸಸ್ಯ ಮತ್ತು ಪ್ರಾಣಿಗಳ ಅಭ್ಯಾಸ. ಮತ್ತು ಸಾಮಾನ್ಯ	೧೦೦
			(೨) ಶರೀರ ಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಮತ್ತು ಗೃಹ ವಿಜ್ಞಾನ—ಹೆಣ್ಣುಮಕ್ಕಳಿಗಾಗಿ (ಸಾಮಾನ್ಯ ಶಾಲೆಗಳು.)	೧೦೦
			(೩) ಕೃಷಿವಿಜ್ಞಾನ (ಒಕ್ಕಲುತನದ ಶಾಲೆಗಳಿಗಾಗಿ).	೧೦೦
			(೪) ಶರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಹಾಗು ಪ್ರಾಣಿಶಾಸ್ತ್ರ ಮತ್ತು ಸಾಮಾನ್ಯ ವಿಜ್ಞಾನ-ನೂಲುವ ಮತ್ತು ನೇಯುವ ಯಾಂತ್ರಿಕ ಜ್ಞಾನವನ್ನೊಳಗೊಂಡು (ಬೇಸಿಕ್ ಶಾಲೆಗಳು).	೧೦೦
			(೫) ಶರೀರಶಾಸ್ತ್ರ ಮತ್ತು ಆರೋಗ್ಯವಿಜ್ಞಾನ-ಪ್ರಾಣಿ ಮತ್ತು ಸಸ್ಯಗಳ ಅಭ್ಯಾಸ ಹಾಗು ಕಟ್ಟಿಗೆ ಕೆಲಸಕ್ಕೆ ಸಂಬಂಧಿಸಿದ ಸಾಮಾನ್ಯವಿಜ್ಞಾನ.	
ಮಂಗಳವಾರ ೨೩-೧-೧೯೫೧	೧೧-೦	೨-೦	**೨ನೆಯ ಸದರು:** ಗಣಿತ. (೧ನೆಯ ಕಾಗದ—ಅಂಕಗಣಿತ)	೧೦೦
	೩-೦	೬-೦	**೩ನೆಯ ಸದರು:** ಇತಿಹಾಸ ಮತ್ತು ಭೂಗೋಲ	೧೦೦

ಬುಧವಾರ ೨೪-೧-೧೯೫೧	೧೧-೦	೨-೦	**೧ನೆಯ ಸದರು:** ಪ್ರಾದೇಶಿಕ ಭಾಷೆ. (೧ನೆಯ ಕಾಗದ—ಗದ್ಯ, ಪದ್ಯ ಮತ್ತು ವ್ಯಾಕರಣ.)	೧೦೦
	೩-೦	೬-೦	**೨ನೆಯ ಸದರು:** ಗಣಿತ. (೨ನೆಯ ಕಾಗದ—ಭೂಮಿತಿ ಮತ್ತು ಸಾದಾ ಜಮಾಖರ್ಚು).	೧೦೦
ಗುರುವಾರ ೨೫-೧-೧೯೫೧	೧೧-೦	೨-೦	**೭ನೆಯ ಸದರು:** (ಐಚ್ಛಿಕ) ಹಿಂದಿ	೧೦೦
	೩-೦	೬-೦	**೫ನೆಯ ಸದರು:** ಸೂಜಿಗೆಲಸ, ಲೇಖನ ಕಲೆ (ಡ್ರಾಯಿಂಗು) ಪ್ರಾಯೋಗಿಕ ಕೃಷಿ ಮತ್ತು ನೂಲುವದು ಹಾಗೂ ನೇಯುವದು, ಕಟ್ಟಿಗೆಯ ಕೆಲಸ.	೧೦೦
ಶುಕ್ರವಾರ ೨೬-೧-೧೯೫೧			ಸೂಟಿ, (ಗಣರಾಜ್ಯದಿನ)	
ಶನಿವಾರ ೨೭-೧-೧೯೫೧	೧೧-೦	೨-೦	**೭ನೆಯ ಸದರು:** (ಐಚ್ಛಿಕ): ಸಂಗೀತ, ಹೊಲಿಗೆ ಮುಂತಾದವು.	
	೩-೦	೫-೦	**೧ನೆಯ ಸದರು:** ೩ನೆಯ ಕಾಗದ—(ಐಚ್ಛಿಕ) ಸ್ಥಾನಿಕ ಪ್ರಾದೇಶಿಕ ಭಾಷೆ.	೫೦

ಟೀಪು:—ಪರೀಕ್ಷೆಯ ಮೊದಲನೆಯ ದಿನ ಎಲ್ಲ ಉಮೇದವಾರರು ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತ ಒಂದು ಗಂಟೆ ಮೊದಲು ಪರೀಕ್ಷಾ-ಸ್ಥಳದಲ್ಲಿ ಹಾಜರ ಇರತಕ್ಕದ್ದು.

ಧಾರವಾಡ
೨೬-೧೦-೧೯೫೦

ಬಿ. ಎಂ. ಮೀಮಾಂಸಿ
ಎಜ್ಯುಕೇಶನಲ್ ಇನಸ್ಪೆಕ್ಟರ ಧಾ. ಭಾ

ಪ್ರಕಟನೆ

೧೯೫೧ನೆಯ ಇಸವಿಯಲ್ಲಿಯ ಗಂಡು ಮತ್ತು ಹೆಣ್ಣು ಮಕ್ಕಳ

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ

ಈ ಮೂಲಕ ಕೆಳಗಿನಂತೆ ಜಾಹೀರ ಮಾಡಲಾಗಿದೆ—

ಗಂಡು ಮತ್ತು ಹೆಣ್ಣು ಮಕ್ಕಳ ಸಲುವಾಗಿ ಸಾಮಾನ್ಯ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯು ಧಾರವಾಡ ಭಾಗದಲ್ಲಿ ಕೆಳಗೆ ಕಾಣಿಸಿರುವ ಕೇಂದ್ರಗಳಲ್ಲಿ -ಪ್ರತಿಯೊಂದರಲ್ಲಿ- ಸೋಮವಾರ ದಿನಾಂಕ ೧೯೫೧ನೇ ಇಸವಿ ಜಾನೇವರಿ ೨೨ನೆಯ ತಾರೀಖಿಗೆ ಪ್ರಾರಂಭವಾಗಿ (೨೬ ಜನೇವರಿ ೧೯೫೧, ಪ್ರಜಾತಂತ್ರ ದಿನದ ಹೊರತಾಗಿ) ಮುಂದೆ ನಾಲ್ಕು ದಿನ ನಡೆಯುವದು.

ಜಿಲ್ಲೆ	ಕೇಂದ್ರ
೧) ಧಾರವಾಡ	೧) ಧಾರವಾಡ
	೨) ಹುಬ್ಬಳ್ಳಿ
	೩) ಗದಗ
	೩) (ಅ) ಶಿರಹಟ್ಟಿ (ಉಪಕೇಂದ್ರ)
	೪) ಹಾವೇರಿ
	೪) (ಅ) ಸವಣೂರ (ಉಪಕೇಂದ್ರ)
೨) ಬೆಳಗಾಂವ	೫) ಬೆಳಗಾಂವ
	೫) (ಅ) ಶಹಾಪೂರ (ಉಪಕೇಂದ್ರ)
	೫) (ಬ) ಗೋಕಾಕ (ಉಪಕೇಂದ್ರ)
	೬) ಬೈಲ-ಹೊಂಗಲ
	೭) ಚಿಕ್ಕೋಡಿ
	೭) (ಅ) ನಿಪ್ಪಾಣಿ (ಉಪಕೇಂದ್ರ)
	೮) ಅಥಣಿ
	೮) (ಅ) ಜಮಖಂಡಿ (ಉಪಕೇಂದ್ರ)
೩) ವಿಜಾಪುರ	೯) ವಿಜಾಪುರ
	೯) (ಅ) ಇಂಡಿ (ಉಪಕೇಂದ್ರ)
	೧೦) ಬಾಗಲಕೋಟ
	೧೦) (ಅ) ಮುದ್ದೇಬಿಹಾಳ (ಉಪಕೇಂದ್ರ)
	೧೦) (ಬ) ರಾಮದುರ್ಗ (,,)

೧೧) ಬಾಗೇವಾಡಿ

೪) ಕಾರವಾರ — ೧೨) ಕಾರವಾರ

೧೩) ಕುಮಟಾ

೧೩) (ಅ) ಶಿರಶಿ (ಉಪಕೇಂದ್ರ)

೨. ಮೇಲ್ಕಾಣಿಸಿದ ಪ್ರತಿಯೊಂದು ಕೇಂದ್ರದಲ್ಲಿ ಪರೀಕ್ಷಾಮಂಡಲವೊಂದರಿಂದ ಪರೀಕ್ಷೆಯನ್ನು ನಡೆಸಲಾಗುವದು. ಮುಖ್ಯ ಮತ್ತು ಉಪಕೇಂದ್ರಗಳ ಪರೀಕ್ಷಾಮಂಡಲಗಳ ಅಧ್ಯಕ್ಷರು ಕೆಳಗೆ ಕಾಣಿಸಿದಂತೆ ಇರುವರು:—

ಕೇಂದ್ರ	ಅಧ್ಯಕ್ಷ
೧. ಧಾರವಾಡ	೧. ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
೨. ಹುಬ್ಬಳ್ಳಿ	೨. ಪ್ರಿನ್ಸಿಪಾಲ, ಗಂಡುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
೩. ಗದಗ	೩. ೧ನೇ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ಧಾ. ಭಾಗ ಧಾರವಾಡ
೪. ಶಿರಹಟ್ಟಿ (ಉಪಕೇಂದ್ರ)	೪. ,,
೫. ಹಾವೇರಿ	೫. ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ
೬. ಸವಣೂರ (,,)	೬. ,, ,,
೭. ಬೆಳಗಾವ	೭. ಹೆಡ್‌ಮಾಸ್ತರ, ಸರದಾರ್ಸ ಹೈಸ್ಕೂಲ, ಬೆಳಗಾವ
೮. ಶಹಾಪೂರ (,,)	೮. ,, ,,
೯. ಗೋಕಾಕ (,,)	೯. ,, ,,
೧೦. ಬೆಲಹೊಂಗಲ	೧೦. ೨ನೇ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ಧಾ. ಭಾಗ, ಧಾರವಾಡ
೧೧. ಚಿಕ್ಕೋಡಿ	೧೧. ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ
೧೨. ನಿಪ್ಪಾಣಿ	೧೨. ,, ,,
೧೩. ಅಥಣಿ	೧೩. ಪ್ರಿನ್ಸಿಪಾಲ, ಗಂಡುಮಕ್ಕಳ ಟ್ರೇನಿಂಗ ಕಾಲೇಜ, ಜಮಖಂಡಿ
೧೪. ಜಮಖಂಡಿ (,,)	೧೪. ,, ,,
೧೫. ವಿಜಾಪೂರ	೧೫. ಹೆಡ್‌ಮಾಸ್ತರ, ಸರಕಾರಿ ಅಗ್ರಿಕಲ್ಚರಲ್ ಹೈಸ್ಕೂಲ್, ವಿಜಾಪುರ
೧೬. ಇಂಡಿ (,,)	೧೬. ,, ,,
೧೭. ಬಾಗಲಕೋಟೆ	೧೭. ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರ, ವಿಜಾಪುರ
೧೮. ಮುದ್ದೇಬಿಹಾಳ (,,)	೧೮. ,, ,,
೧೯. ರಾಮದುರ್ಗ (,,)	೧೯. ,, ,,
೨೦. ಬಾಗೇವಾಡಿ	೨೦. ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ವಿಜಾಪುರ
೨೧. ಕಾರವಾರ	೨೧. ಹೆಡ್‌ಮಾಸ್ತರ, ಗವ್ಹರ್ನಮೆಂಟ ಹೈಸ್ಕೂಲ, ಕಾರವಾರ
೨೨. ಕುಮಟಾ	೨೨. ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರ, ಕಾರವಾರ
೨೩. ಶಿರಶಿ (,,)	೨೩. ,,

೩. ಪ್ರಿನ್ಸಿಪಾಲ, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ ಇವರು ಬೇಸಿಕ್ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಅಧ್ಯಕ್ಷರಿರುವರು. ಬೇಸಿಕ್ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರು ಪ್ರಿನ್ಸಿಪಾಲ್ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ ಇವರ ಕಡೆಗೆ

ಪ್ರಕಟನೆ

ಗೊತ್ತುಪಡಿಸಿದ ಅಚ್ಚಾದ ಅರ್ಜಿಗಳನ್ನು ತುಂಬಿ ಕಳುಹತಕ್ಕದ್ದು. ಆದಾಗ್ಯೂ ಧಾರವಾಡ ಕೇಂದ್ರದ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಅಧ್ಯಕ್ಷರಾದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಲೇಡೀ ಸುಪರಿಂಟೆಂಡೆಂಟರೆ ಪರೀಕ್ಷೆಯನ್ನು ನಡೆಯಿಸುವರು.

೪. ಧಾರವಾಡ ಭಾಗದಲ್ಲಿ ನಡೆಯುವ ಉರ್ದು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗೆ ಸೆಂಟ್ರಲ್ ಕಮೀಟಿಯ ಹೆಡ್‌ಮಾಸ್ತರ, ಆಂಗ್ಲೊ ಉರ್ದು ಹೈಸ್ಕೂಲ್, ಹುಬ್ಬಳ್ಳಿ, ಅವರು ಅಧ್ಯಕ್ಷರಿರುವರು.

೫. ಉಪಕೇಂದ್ರಗಳಲ್ಲಿ ಪರೀಕ್ಷೆಯು ಮುಖ್ಯ ಕೇಂದ್ರಗಳ ಅಧ್ಯಕ್ಷರಿಂದ ನಡೆಸಲ್ಪಡುವದು. ಆದ್ದರಿಂದ ಬೇರೆ ಬೇರೆ ಉಪಕೇಂದ್ರಗಳಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಬಯಸುವ ಉಮೇದವಾರರು ತಮ್ಮ ಅರ್ಜಿಗಳಲ್ಲಿ ಉಪ ಕೇಂದ್ರಗಳ ಹೆಸರುಗಳನ್ನು ನಮೂದಿಸಬೇಕು ಮತ್ತು ಅರ್ಜಿಗಳನ್ನು ಆಯಾ ಮುಖ್ಯ ಕೇಂದ್ರಗಳ ಅಧ್ಯಕ್ಷರ ಕಡೆಗೇ ಕಳುಹಬೇಕು. ಉರ್ದು ಉಮೇದವಾರರು ತಾವು ಪರೀಕ್ಷೆಗೆ ಕುಳಿತುಕೊಳ್ಳಲಿರುವ ಕೇಂದ್ರಗಳ ಅಧ್ಯಕ್ಷರ ಕಡೆಗೆ ತಮ್ಮ ಅರ್ಜಿಗಳನ್ನು ಮತ್ತು ಫೀಯನ್ನು ಕಳುಹಬೇಕು.

೬. ಈ ವರುಷ ತೆರೆಯಲಾದ ಅನೇಕ ಹೊಸ ಕೇಂದ್ರಗಳಿಗೆ ಜೋಡಿಸಿದ ಶಾಲೆಗಳನ್ನು ಕುರಿತು ಸಂಬಂಧಿಸಿದ ಏ. ಓ. ಅವರಿಗೆ ಸೂಚನೆಗಳನ್ನು ಕೊಡಲಾಗಿದೆ.

೭. ಪರೀಕ್ಷೆಗೆ ಕುಳಿತುಕೊಳ್ಳುವದಕ್ಕಾಗಿ ಪರವಾನಗಿ ದೊರಕಿಸಿಕೊಳ್ಳಲು ಪರೀಕ್ಷೆಗೆ ಕುಳಿತುಕೊಳ್ಳಬಯಸುವ ಉಮೇದವಾರರು ನಿರ್ದಿಷ್ಟ, ಅಚ್ಚಾದ ಅರ್ಜಿ ಫಾರ್ಮುಗಳನ್ನು ತುಂಬಿ ತಾವು ಕುಳಿತುಕೊಳ್ಳಬಯಸುವ ಮುಖ್ಯ ಕೇಂದ್ರಗಳ ಅಧ್ಯಕ್ಷರ ಕಡೆಗೆ ಕಳುಹತಕ್ಕದ್ದು ಮತ್ತು ಇಂಥ ಅರ್ಜಿಗಳು **೧೯೫೦ ಡಿಸೆಂಬರ ೧ನೆಯ ತಾರೀಖಿನ ದಿನ ಅಥವಾ ಅದಕ್ಕೂ ಮೊದಲು ಅಧ್ಯಕ್ಷರಿಗೆ ತಲ್ಪಬೇಕು.** ಆ ತಾರೀಖಿನ ನಂತರ ಬಂದ ಅರ್ಜಿಗಳಿಗೆ ಮಾನ್ಯತೆಯನ್ನು ಕೊಡಲಾಗುವದಿಲ್ಲ.

೮. ಪ್ರತಿಯೊಂದು ಅರ್ಜಿಯಲ್ಲಿ ಉಮೇದವಾರನ ಹೆಸರು (ಪೂರ್ಣ) ಮತ್ತು ಮುದ್ರಿತ ಅರ್ಜಿಯ ಫಾರ್ಮಿನಲ್ಲಿಯ ಇತರ ಎಲ್ಲ ಆವಶ್ಯಕ ಸಂಗತಿಗಳನ್ನು ತುಂಬಿ ಮೂರು ರೂಪಾಯಿ ಫೀ ಸಮೇತವಾಗಿ ಅದನ್ನು ಕಳಿಸಬೇಕು. ಹಿಂದುಳಿದ ವರ್ಗದ ಉಮೇದವಾರರಿಗೆ ಪರೀಕ್ಷಾ ಫೀ ಒಂದೇ ರೂಪಾಯಿ ಇರುವದು.

ಫೀ ಸಮೇತವಿಲ್ಲದ ಅರ್ಜಿ ಅಥವಾ ಅರ್ಜಿರಹಿತ ಫೀ ಇವುಗಳು ಅರ್ಜಿಗಳ ಅಮಾನ್ಯತೆಗೆ ಗುರಿಯಾಗುವವು.

೯. ಅರ್ಜಿಯ ಫಾರ್ಮುಗಳನ್ನು ಪರೀಕ್ಷಾ ಕೇಂದ್ರಗಳ ಅಧ್ಯಕ್ಷರಿಂದ ಪುಕ್ಕಟೆಯಾಗಿ ಪಡೆಯಬಹುದು.

೧೦. ಪ್ರತಿಯೊಬ್ಬ ಉಮೇದವಾರನು ೧೯೫೧ ಜನೇವರಿ ೧ನೆಯ ತಾರೀಖಿಗೆ ೨೫ ವರ್ಷಕ್ಕೆ ಮಿಕ್ಕಿ ವನು ಇರಕೂಡದು ಮತ್ತು ಪರೀಕ್ಷೆಯ ದಿನಕ್ಕಿಂತ ಮುಂಚಿತವಾಗಿ ಆರು ತಿಂಗಳಾದರೂ ತಾನು ಕುಳಿತು ಳ್ಳುವ ಪರೀಕ್ಷೆಯ ಜಿಲ್ಹೆಯಲ್ಲಿ ವಾಸಿಸಿದವನಾಗಿಲೇರಬೇಕು. ಹೆಣ್ಣುಮಕ್ಕಳ ಸಂಬಂಧವಾಗಿ ವಾಸ ಮತ್ತು ಯಸ್ಸಿನ ನಿರ್ಬಂಧವು ಇರುವದಿಲ್ಲ. ಮಾಧ್ಯಮಿಕ (ಹೆಸ್ಕೂಲು) ಶಾಲೆಗಳಿಂದ ಪರೀಕ್ಷೆಗೆ ಕುಳಿತುಕೊಳ್ಳುವ ಮೇದವಾರರು ತಮ್ಮ ಶಾಲೆಯ ಮುಖ್ಯಾಧ್ಯಾಪಕರ ಮುಖಾಂತರವಾಗಿ ಅರ್ಜಿಗಳನ್ನು ಕಳುಹಬೇಕು. ುಖ್ಯಾಧ್ಯಾಪಕರು ಅರ್ಜಿಯಲ್ಲಿ ಉಮೇದವಾರನು ಅಧ್ಯಯನ ಮಾಡುತ್ತಿರುವ ವರ್ಗವನ್ನೂ ಅವನ ಜನ್ಮ ಾರೀಖನ್ನೂ ನಮೂದಿಸಬೇಕು.

ಪ್ರಾಥಮಿಕ ಶಾಲಾ ಪಮಾಣ ಪತ್ರ ಪರೀಕ್ಷೆಗೆ ಕುಳಿತು ಒಮ್ಮೆ ನಪಾಸಾಗಿ ಪುನಃ ಪರೀಕ್ಷೆಗೆ ಕುಳಿತು ೊಳ್ಳುವ ಉಮೇದವಾರರು ತಮ್ಮ ಅರ್ಜಿಫಾರ್ಮಿನಲ್ಲಿ ತಾವು ಕುಳಿತ ಕೇಂದ್ರ, ವರುಷ ಹಾಗೂ ಕಳೆದ ಪರೀಕ್ಷೆ ಯಲ್ಲಿಯ ತಮ್ಮ ಸ್ಥಾನದ ನಂಬರು ತುಂಬಬೇಕು. ಮತ್ತು ತಾವು ಅಧ್ಯಯನ ಮಾಡುತ್ತಿದ್ದ ಕೊನೆಯ ಶಾಲೆಯ ಬಿಟ್ಟಿಂಗ ಸರ್ಟಿಫಿಕೇಟುಗಳನ್ನು ಅರ್ಜಿಯೊಂದಿಗೆ ಕಳುಹಬೇಕು.

ಪ್ರಾಥಮಿಕ ಶಿಕ್ಷಣ

೧೧. ಉಮೇದವಾರರಿಗೆ ಅರ್ಜಿಯ ಫಾರ್ಮುಗಳನ್ನು ಬಹಳ ಲಕ್ಷ್ಯಕೊಟ್ಟು ತುಂಬಬೇಕೆಂದು ಹೇಳಬೇಕು ಮತ್ತು ಉಮೇದವಾರರು ವಿಷಯಗಳನ್ನು ಆರಿಸುವಾಗ ಯಾವ ತಪ್ಪು ತಡೆ ಆಗದಂತೆ ಹೆಡ್ ಮಾಸ್ತರರು ಜಾಗರೂಕತೆಯಿಂದ ನೋಡಿಕೊಳ್ಳತಕ್ಕದ್ದು ಮತ್ತು ಲೀವ್ಹಿಂಗ್ ಸರ್ಟಿಫಿಕೆಟದಲ್ಲಿ ಉಮೇದವಾರನ ಹೆಸರು ತುಂಬಿದೆಯೋ ಇಲ್ಲವೋ ಮತ್ತು ಅದು ಉಮೇದವಾರನ ಸಹಿ ಹೆಸರಿಗೆ ಸರಿಯಾಗಿದೆಯೊ ಇಲ್ಲವೋ ಎಂಬುವನ್ನು ನೋಡಿ ಅರ್ಜಿಗಳ ಕೂಡ ಫೀ, ಅರ್ಜಿಯ ವಿವರಗಳನ್ನು ತುಂಬಿದ ಒಂದು ಪತ್ರವನ್ನು ಕಳುಹಬೇಕು. ಆಗಾಗ್ಗೆ ಈ ಕಚೇರಿಯಿಂದ ಹೊರಡುವ ನಿಯಮಗಳನ್ನು ನೋಡುತ್ತಿರಬೇಕು.

೧೨. ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯು ಡಿ.ಪಿ.ಆಯ್. ಅವರ ನಂ. ಎಸ್. ೬೨-(ಜಿ)-೨೫೯-ಡಿ, ತಾರೀಖು ೧೯೫೦ ಜುಲೈ ೨೭ರ ಮೇರೆಗೆ ಹೊಸ ಅಭ್ಯಾಸಪತ್ರಿಕೆಯಂತೆ ಮತ್ತು ಈ ಬಗ್ಗೆ ಆಗಾಗ್ಗೆ ವಿದ್ಯಾಖಾತೆಯ ಡೈರೆಕ್ಟರರಿಂದ ಹೊರಡಿಸಿದ ಸೂಚನೆಗಳ ಮೇರೆಗೆ ನಡೆಯುವದು.

೧೩. ಅಗ್ರಿಕಲ್ಚರ ಬಾಯಸ್ ಅಭ್ಯಾಸಕ್ರಮವನ್ನು ತೆಗೆದುಕೊಂಡ ಅಥವಾ ೪ ಮತ್ತು ೫ನೆಯ ಸದರಿನ ಕೆಳಗೆ ಅಗ್ರಿಕಲ್ಚರ (ಒಕ್ಕಲುತನ) ತೆಗೆದುಕೊಂಡ ಉಮೇದವಾರರ ಪರೀಕ್ಷೆಯು ತಾ. ೬-೭-೧೯೨೫ರ ಜಿ. ಆರ್. ಇ. ಡಿ. ನಂಬರ ೧೧೯೯ರ ಪ್ರಕಾರ ಆಗಾಗ್ಗೆ ತಿದ್ದುಪಡೆ ಹೊಂದಿದ ಮೇರೆಗೆ ಧಾರವಾಡ, ಬೆಳಗಾಂವ, ವಿಜಾಪುರ ಮತ್ತು ಕಾರವಾರ ಈ ನಾಲ್ಕು ಜಿಲ್ಹಾ ಸ್ಥಳಗಳಲ್ಲಿ ನಡೆಯುವದು ಮತ್ತು ಅಗ್ರಿಕಲ್ಚರ ಬಾಯಸ್ ಅಭ್ಯಾಸ ಕ್ರಮ ತೆಗೆದುಕೊಂಡ ಉಮೇದವಾರರು ತಾವು ಮೂರು ವರ್ಷಗಳ ಅಗ್ರಿಕಲ್ಚರಲ್ ಬಾಯಸ್ ಅಭ್ಯಾಸಕ್ರಮದಂತೆ ಅಭ್ಯಾಸವನ್ನು ಮಾಡಿ ಮುಗಿಸಿರುವರೆಂಬ ಬಗ್ಗೆ ಸರ್ಟಿಫಿಕೇಟನ್ನು ಅರ್ಜಿಯೊಂದಿಗೆ ಹಾಜರು ಪಡಿಸಬೇಕಾಗುವದು.

೧೯೫೦ರಲ್ಲಿ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗೆ ಕುಳಿತುಕೊಂಡು ೫ನೆಯ ಸದರಿನ ಕೆಳಗೆ ನೂಲುವದು ಮತ್ತು ನೇಯುವದು ವಿಷಯದಲ್ಲಿ ಪರೀಕ್ಷೆ ಕೊಡುವ ಉಮೇದವಾರನು (೧) ಧಾರವಾಡ (೨) ಹಾವೇರಿ (೩) ಬೆಳಗಾವಿ (೪) ಅಥಣಿ (೫) ಬೈಲಹೊಂಗಲ (೬) ವಿಜಾಪುರ (೭) ಇಂಡಿ (ಉಪಕೇಂದ್ರ) (೮) ಬಾಗಲಕೋಟೆ (೯) ಕಾರವಾರ ಈ ಕೇಂದ್ರಗಳಲ್ಲಿಯೇ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಬೇರೆ ಕೇಂದ್ರಗಳಲ್ಲಿ ನೂಲುವದು ಮತ್ತು ನೇಯುವದು ಈ ವಿಷಯದಲ್ಲಿ ಪರೀಕ್ಷೆ ತೆಗೆದುಕೊಳ್ಳುವ ಏರ್ಪಾಡು ಆಗಲಾರದು.

೫ನೆಯ ಸದರಿನ ಕೆಳಗೆ 'ಕಟ್ಟಿಗೆಯ ಕೆಲಸ ತೆಗೆದುಕೊಳ್ಳುವ ಉಮೇದವಾರರು' (೧) ಧಾರವಾಡ (೨) ಬೆಳಗಾವ (೩) ವಿಜಾಪುರ (೪) ಕಾರವಾರ ಈ ನಾಲ್ಕೇ ಕೇಂದ್ರಗಳಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಲೇಬೇಕು.

೧೪. ಮರಾಠಿ ಮತ್ತು ಉರ್ದು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರು ಆಯಾ ಕೇಂದ್ರಗಳಲ್ಲಿ ಕನ್ನಡ ಉಮೇದವಾರರ ಜೊತೆಯಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಬೇಕು.

ಅಗ್ರಿಕಲ್ಚರಲ್ ಬಾಯಸ್ ಮತ್ತು ಬೇಸಿಕ್ ಉಮೇದವಾರರ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗಳು ಕನ್ನಡ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಜೊತೆಯಲ್ಲಿ ಏಕಕಾಲಕ್ಕೆ ಮೇಲ್ಕಾಣಿಸಿದ ಮೊದಲನೆಯ ಪ್ಯಾರಾದಲ್ಲಿ ಹೇಳಿದ ದಿನಾಂಕಗಳಲ್ಲಿ ನಡೆಯುವವು.

೧೫. ಪರೀಕ್ಷೆಯ ಕಾರ್ಯಕ್ರಮವನ್ನು ಇದರೊಡನೆ ಕೊಡಲಾಗಿದೆ. ಅದರ ಪ್ರಚಾರವು ಆದಷ್ಟು ಹೆಚ್ಚು ಆಗತಕ್ಕದ್ದು.

ಧಾರವಾಡ
No. E/Exam./16425
೨೬-೧೦-೧೯೫೦

(ಸಹಿ) ಬಿ. ಎಮ್. ಮೀಮಾಂಸಿ
ಎಜ್ಯುಕೇಶನಲ್ ಇನ್ಸಪೆಕ್ಟರ್, ಧಾ. ಭಾ.

ಮೂಲಶಿಕ್ಷಣ ಪ್ರಾಯೋಗಿಕ ಕ್ಷೇತ್ರ ಧಾರವಾಡ

(೮೨ನೆಯ ಚರಖಾ ಜಯಂತಿ)

[ಮೂಲೋದ್ಯೋಗ ಮೇಲ್ವಿಚಾರಕರಾದ ಶ್ರೀ. ಗೋ. ಗು. ನಾಡಗೀರ ಅವರು ಈ ಕೆಳಗಿನಂತೆ ಚರಖಾ ಜಯಂತಿ ನಡೆಯಿತೆಂದು ತಿಳಿಸುತ್ತಾರೆ. — ಸಂಪಾದಕರು]

ಪ್ರಾಯೋಗಿಕ ಶಿಕ್ಷಕ-ಶಿಕ್ಷಕಿಯರೊಂದಿಗೆ ಮತ್ತು ಊರವರೊಂದಿಗೆ ಮಹಾತ್ಮಾಜಿಯವರ ೮೨ನೆಯ ಚರಖಾ ಜಯಂತಿಯನ್ನು ಶಾಲೆಯಲ್ಲಿ ಹೇಗೆ ಆಚರಿಸಬೇಕು ಎನ್ನುವದರ ಬಗೆಗೆ ವಿಚಾರವಿನಿಮಯ ಮಾಡಿದೆವು. ಸ್ವಯಂಸ್ಫೂರ್ತಿಯಿಂದ ಕೆಳಗಿನಂತೆ ಕಾರ್ಯಕ್ರಮವನ್ನು ನೆರವೇರಿಸುವ ನಿರ್ಧಾರವನ್ನು ಮೂಲಶಿಕ್ಷಣದ ಮೇಲ್ವಿಚಾರಕರಾದ ಶ್ರೀ. ಬಿದರಿಯವರ ಹಿರಿಯತನದಲ್ಲಿ ಮಾಡುವವು.

[ಚರಖಾ ಜಯಂತಿಯ ಕಾರ್ಯಕ್ರಮ]

೧. ೨೮ ೯-೫೦ನೆಯ ಸಂಜೆಯ ೮ ಘಂಟೆಯಿಂದ ೨-೧೦-೫೦ನೆಯ ಬೆಳಗಿನ ೬ ಘಂಟೆಯುವರೆಗೆ ೮೨ ತಾಸಿನ ಅಖಂಡ ಸೂತ್ರಯಜ್ಞ ಮಾಡುವದು.

೨ ಸದರ ಯಜ್ಞದಲ್ಲಿ ಬಾಪೂಜಿಯವರ ಭಾವಚಿತ್ರದ ಸಮ್ಮುಖದಲ್ಲಿ ೪ ಅಥವಾ ೨ ಚರಖಾಗಳು ಇಲ್ಲವೆ ೪ ಅಥವಾ ೨ ತಕಲಿಗಳು ಸದಾ ತಿರುಗುವದು ೨ ನಂದಾದೀವಿಗೆಗಳನ್ನು ಇಡುವದು.

೩. ೧ ೧೦-೫೦ನೆಯ ದಿನ ಹರಿಜನ ದಿನಾಚರಣೆಯನ್ನು ಆಚರಿಸುವದು.

೪. ೨-೧೦-೫೦ನೆಯ ಬೆಳಗಿನ ೬ರಿಂದ ಪ್ರಭಾತಫೇರಿ, ಧ್ವಜವಂದನೆ, ನೂಲುವ ಪಂದ್ಯಾಟ, ಸಾರ್ವಜನಿಕ

೫. ಸ್ಪರ್ಧೆಯಲ್ಲಿ ಮೇಲು ನಂಬರು ಪಡೆದವರಿಗೆ ಇನಾಮು ಹಂಚುವದು.

ಸಭೆಗಳನ್ನು ನೆರವೇರಿಸುವದು.

ಮೇಲಿನ ಕಾರ್ಯಕ್ರಮಗಳು ಎಲ್ಲ ಶಾಲೆಗಳಲ್ಲಿ ಒಳ್ಳೇ ಯಶಸ್ವಿಯಾಗಿ ಜರುಗಿದವು. ಊರಜನರೂ ಈ ಕಾರ್ಯಕ್ರಮಗಳಲ್ಲಿ ಒಳ್ಳೇ ಆಸ್ಥೆಯಿಂದ ಭಾಗವಹಿಸಿದರು. ಇದರ ಅಂಗವಾದ ಅಖಂಡ ಸೂತ್ರಯಜ್ಞದ ಸವಿಸ್ತಾರ ವರದಿಯು ಕೆಳಗಿನಂತಿದೆ.

ಊರು	ಸಾಧನ	ತಯಾರಾದ ನೂಲು ಪೌ. ತೊ.	ಗುಂ. ಲ.	ಸರಾಸರಿ ನಂಬರು	೧ ತಾಸಿನ ಸರಾಸರಿ ವೇಗ
ಎತ್ತಿನಗುಡ್ಡ	೨ ತಕಲಿ	೨--೧೮	೧೯—೧	೬	೬೫
ಮುಮ್ಮಿಗಟ್ಟಿ	೨ ರಾಟಿ	೫— ೦	೫—೦	೧೦	೧೯೯
ಗರಗ ಕ.ಗಂ.+ಕ.ಹೆ.	೪ ರಾಟಿ	೮— ೫	೯೯—೦	೧೨	೧೯೩
ತಡಕೋಡ	೪ ರಾಟಿ	೮—೧೨	೯೪—೦	೧೨	೧೮೩
ಕೊಟಬಾಗಿ	೨ ರಾಟಿ	೩ — ೪	೪೦—೦	೧೪	೧೫೬
ಅಮ್ಮಿನಭಾವಿ ಕ.ಗಂ.+ಕ.ಹೆ.	೧ ತಕಲಿ ೨ ರಾಟಿ	೩— ೯	೩೧—೦	೧೦	ತಕಲಿ ೪೦ ರಾಟಿ ೧೦೧
	೩ ತಕಲಿ ೧೨ರಾಟಿ	೩೦— ೯	೩೩೪—೧	೧೧	ರಾಟಿ ೧೬೬ ತಕಲಿ ೫೮

ಒಟ್ಟು ನೂಲಿನ ಬೆಲೆಯು ೬೭ ರೂ. ೧೪ ಆಣೆ ೩ ಪೈ ಆಯಿತು. ಸದರ ನೂಲನ್ನು ನೇಯಿಸಿ, ಅರಿವೆಯನ್ನು ಸೂತ್ರಯಜ್ಞದಲ್ಲಿ ಭಾಗ ವಹಿಸಿದವರಿಗೆ ಹಂಚುವ ವ್ಯವಸ್ಥೆ ಮಾಡಿದೆ.

— ಜಯ್-ಹಿಂದ —

ಕನ್ನಡ ಸ್ಕೂಲ್ ಬುಕ್ ಕಮೀಟಿಯುವರಿಂದ ಮಂಜೂರಾದ ಪುಸ್ತಕಗಳು, ತಾರೀಖು ೮, ೧೦ ಜುಲೈ ೧೯೫೦ ಧಾರವಾಡ.

ಅ. ನಂ.	ಇಯತ್ತೆ	ವಿಷಯ (ಮಂಜೂರಿ)	ಪುಸ್ತಕದ ಹೆಸರು	ಲೇಖಕರ ಹೆಸರು	ಪ್ರಕಾಶಕರ ಹೆಸರು	ಬೆಲೆ		
		ಭಾಷಾ						
೧	೫	ಪಠ್ಯ ಪುಸ್ತಕ	ಸೊಗಸಿನ ಓದು, ಆವೃತ್ತಿ ೧೯೫೦	ರಚನಾ ಮಂಡಲ	ಸ್ಟುಡಂಟ್ಸ್ ಓನ್ ಬುಕ್ ಡಿಪೊ ಧಾರವಾಡ	೦	೧೨	೬
೨	೫	,,	ಗೌರೀಶ ವಾಚನಮಾಲೆ, ಆವೃತ್ತಿ ೧೯೫೦	,,	ಶ್ರೀ ಎಸ್. ಎಸ್. ಕುಲಕರ್ಣಿ ಧಾರವಾಡ	೦	೧೦	೬
೩	೬	,,	ಸೊಗಸಿನ ಓದು, ,, ೧೯೪೮	,,	ಸ್ಟುಡಂಟ್ಸ್ ಓನ್ ಬುಕ್ ಡಿಪೊ ಧಾರವಾಡ	೧	೦	೦
೪	೬	,,	ಗೌರೀಶ ವಾಚನ ಮಾಲೆ, ಆವೃತ್ತಿ ೧೯೫೦	,,	ಶ್ರೀ ಎಸ್. ಎಸ್. ಕುಲಕರ್ಣಿ ಧಾರವಾಡ	೦	೧೪	೦
೫	೭	,,	ಸೊಗಸಿನ ಓದು, ,,	,,	ಸ್ಟುಡಂಟ್ಸ್ ಓನ್ ಬುಕ್ ಡಿಪೊ ಧಾರವಾಡ	೧	೮	೦
೬	೭	,,	ಗೌರೀಶ ವಾಚನ ಮಾಲೆ ಆವೃತ್ತಿ ೧೯೫೦	,,	ಶ್ರೀ ಎಸ್. ಎಸ್. ಕುಲಕರ್ಣಿ ಧಾರವಾಡ	೧	೮	೦
		ಭಾಷಾ						
೭	೬	ಪುರವಣಿ ಪುಸ್ತಕ	ಚಿತ್ರಮಯ ಮೈಸೂರು ಆವೃತ್ತಿ ೧೯೪೯	ಶ್ರೀ. ಸಿ. ಎ. ಪರಪುಸ್ತಕ	ಮ್ಯಾಕ್‌ಮಿಲನ್ ಆ್ಯಂಡ ಕಂಪನಿ ಮುಂಬಯಿ	೦	೩	೬
೮	೫	,,	ಮುಂಬೈ ಹಿಂದುಸ್ತಾನದ ಹೆಬ್ಬಾಗಿಲು, ಆವೃತ್ತಿ ೧೯೪೯	,,	,,	೦	೩	೬
೯	೫	,,	ನಾಡ ನೆಲೆಗಾರ, ಆವೃತ್ತಿ ೧೯೪೯	ಶ್ರೀ ದಿ. ಎಸ್. ಎಸ್. ಕುಲಕರ್ಣಿ	ಎಸ್. ಎಸ್. ಕುಲಕರ್ಣಿ, ಧಾರವಾಡ	೧	೦	೦

ಕ್ರ.ಸಂ.	ಇಯತ್ತೆ	(ಮಂಜೂರಿ)	ಪುಸ್ತಕಗಳ ಹೆಸರು	ಲೇಖಕರ ಹೆಸರು	ಪ್ರಕಾಶಕರ ಹೆಸರು	ಬೆಲೆ
೧೦	೫	ಪುರವಣಿ ಪುಸ್ತಕ	ಜಾದುಗಾರ, ಆವೃತ್ತಿ ೧, ೧೯೫೦	ಶ್ರೀ ಎಸ್. ವ್ಹಿ. ಗಲಗಲಿ	ಶ್ರೀ ಎಸ್. ಎಸ್. ವ್ಹಿ. ಗಲಗಲಿ, ಮುಂಬಯಿ	೦ ೧೧ ೦
೧೧	೬	,,	ಇತಿಹಾಸ ಕತೆಗಳು, ಆವೃತ್ತಿ ೧, ೧೯೫೦	ಶ್ರೀ ಪಿ. ಜಿ. ಕುಲಕರ್ಣಿ	ಶ್ರೀ ಕೆ. ಜಿ. ಜೋಶಿ	೦ ೬ ೦
೧೨	೬	,,	ದುರಂತ ದ್ರೌಪತಿ, ಆವೃತ್ತಿ ೧ ೧೯೫೦		ಶ್ರೀ ಎಸ್. ಎಸ್. ಕುಲಕರ್ಣಿ	೦ ೯ ೦
೧೩	೫, ೬ ಪ್ರಾ. ಪ್ರಾ. ಶಾಲೆ	,,	ಪತ್ರಗಳ ಪರಿಚಯ, ಆವೃತ್ತಿ ೧, ೧೯೫೦	,,	,,	೦ ೧೦ ೦
೧೪	,,	,,	ಬಡವ ಭಾಗ್ಯಶಾಲಿಯಾದ, ಆವೃತ್ತಿ ೧, ೧೯೫೦	,,	,,	೦ ೧೦ ೦
೧೫	೫,೬,೭, ಪ್ರಾ. ಪ್ರಾ. ಶಾಲೆ	,,	ಸತಿ ತಾರಾಮತಿ, ಆವೃತ್ತಿ ೧, ೧೯೫೦	,,	,,	೦ ೬ ೦
೧೬	೯ ನೆ. ಸ್ಟ್ಯಾಂಡ್ಡ್	,,	ಯದುಪತಿ, ಆವೃತ್ತಿ ೧, ೧೯೫೦	ಶ್ರೀ ಸಾಲಿ ರಾಮಚಂದ್ರರಾಯರು	ಕರ್ನಾಟಕ ಪ್ರಾಗತಿಕ ಶಿಕ್ಷಣ ಸಂಘ, ಮುಂಬಯಿ	೧ ೮ ೦ ಕ್ಕೆ ಕಡಿಮೆ ಮಾಡಬೇಕು
೧೭	೯, ೧೦ ಪ್ರಾ. ಟ್ರೈ. ಕಾ. ೧, ೨ನೇ ವ.	,,	ಮಹಾತ್ಮಾ ಗಾಂಧಿ, ಆವೃತ್ತಿ ೧	ಶ್ರೀ ಎಸ್. ವ್ಹಿ. ಹಂಜಿ	ಶ್ರೀ ಎಸ್. ಎಸ್. ಹಂಜಿ	೧ ೮ ೦ ಕ್ಕೆ ಕಡಿಮೆ ಮಾಡಬೇಕು
೧೮	,,	,,	ಬಾ, ಆವೃತ್ತಿ ೧, ೧೯೫೦	ಪಂಡಿತ ಕೇಶವ ಶರ್ಮಾ ಗಲ್ಗಲಿ	ಶ್ರೀ ಬಾಲಚಂದ್ರ ಘಾಣೇಕರ, ಧಾರವಾಡ	೨ ೦ ೦
೧೯	೫ ಪ್ರಾ. ಮಾ. ಶಾ.	ವ್ಯಾಕರಣ ಪಠ್ಯ ಪುಸ್ತಕ	ಕನ್ನಡ ಚನ್ನುಡಿ, ಭಾಗ ೨, ಆವೃತ್ತಿ, ೧೯೫೦	ಶ್ರೀ ಎಸ್. ಎಸ್. ಬಸವನಾಳ, ಪಂಡಿತ ಕವಲಿ	ಶ್ರೀ ಎಸ್. ಎಸ್. ಕುಲಕರ್ಣಿ	೦ ೮ ೦
೨೦	೬ ,,	,,	,, ಭಾಗ ೩, ಆವೃತ್ತಿ ೧೯೫೦	,,	,,	೦ ೮ ೦
೨೧	೬ ,,	,,	ಕನ್ನಡ ನುಡಿಗನ್ನಡಿ, ಭಾಗ ೨ ಆವೃತ್ತಿ ೧೯೫೦	ಶ್ರೀ ಎಮ್. ಪಿ. ಪೂಜಾರ	ಶ್ರೀ ಎಂ. ಪಿ. ಪೂಜಾರ, ಧಾರವಾಡ	೦ ೮ ೦

ಕನ್ನಡ ಸ್ಕೂಲ್ ಬುಕ್ ಕಮೀಟಿಯವರಿಂದ ಮಂಜೂರಾದ ಪುಸ್ತಕಗಳು, ತಾರೀಖು ೮, ೧೦ ಜುಲೈ ೧೯೫೦ ಧಾರವಾಡ.

ನಂ.	ಇಯತ್ತೆ	ವಿಷಯ (ಮಂಜೂರಿ)	ಪುಸ್ತಕದ ಹೆಸರು	ಲೇಖಕರ ಹೆಸರು	ಪ್ರಕಾಶಕರ ಹೆಸರು	ಬೆಲೆ
		ಭಾಷಾ				
೧	೫	ಪಠ್ಯ ಪುಸ್ತಕ	ಸೊಗಸಿನ ಓದು, ಆವೃತ್ತಿ ೧೯೫೦	ರಚನಾ ಮಂಡಲ	ಸ್ಟುಡಂಟ್ಸ್ ಓನ್ ಬುಕ್ ಡಿಪೊ ಧಾರವಾಡ	೦ ೧೨ ೬
೨	೫	,,	ಗೌರೀಶ ವಾಚನಮಾಲೆ, ಆವೃತ್ತಿ ೧೯೫೦	,,	ಶ್ರೀ ಎಸ್. ಎಸ್. ಕುಲಕರ್ಣಿ ಧಾರವಾಡ	೦ ೧೦ ೬
೩	೬	,,	ಸೊಗಸಿನ ಓದು, ,, ೧೯೪೮	,,	ಸ್ಟುಡಂಟ್ಸ್ ಓನ್ ಬುಕ್ ಡಿಪೊ ಧಾರವಾಡ	೧ ೦ ೦
೪	೬	,,	ಗೌರೀಶ ವಾಚನ ಮಾಲೆ, ಆವೃತ್ತಿ ೧೯೫೦	,,	ಶ್ರೀ ಎಸ್. ಎಸ್. ಕುಲಕರ್ಣಿ ಧಾರವಾಡ	೦ ೧೪ ೦
೫	೭	,,	ಸೊಗಸಿನ ಓದು, ,,	,,	ಸ್ಟುಡಂಟ್ಸ್ ಓನ್ ಬುಕ್ ಡಿಪೊ ಧಾರವಾಡ	೧ ೮ ೦
೬	೭	,,	ಗೌರೀಶ ವಾಚನ ಮಾಲೆ ಆವೃತ್ತಿ ೧೯೫೦	,,	ಶ್ರೀ ಎಸ್. ಎಸ್. ಕುಲಕರ್ಣಿ ಧಾರವಾಡ	೧ ೮ ೦
		ಭಾಷಾ				
೭	೪	ಪುರವಣಿ ಪುಸ್ತಕ	ಚಿತ್ರಮಯ ಮೈಸೂರು ಆವೃತ್ತಿ ೧೯೪೯	ಶ್ರೀ. ಸಿ. ಎ. ಪರಪುರ್ಸ್ಟ	ಮ್ಯಾಕ್‌ಮಿಲನ್ ಆ್ಯಂಡ ಕಂಪನಿ ಮುಂಬಯಿ	೦ ೩ ೬
೮	೫	,,	ಮುಂಜೈ ಹಿಂದುಸ್ಥಾನದ ಹೆಬ್ಬಾಗಿಲು, ಆವೃತ್ತಿ ೧೯೪೯	,,	,,	೦ ೯ ೬
೯	೫	,,	ನಾಡ ನೆಲೆಗಾರ, ಆವೃತ್ತಿ ೧೯೪೯	ಶ್ರೀ ಬಿ. ಎಸ್. ಎಸ್. ಕುಲಕರ್ಣಿ	ಎಸ್. ಎಸ್. ಕುಲ್ಕರ್ಣಿ, ಧಾರವಾಡ	೧ ೦ ೦

ನಂ.	[illegible]	(ಸಂಜಂ೦)	[illegible]	[illegible]	[illegible]	ಬೆಲೆ
೧೦	೫	ಪುರವಣಿ ಪುಸ್ತಕ	ಜಾದುಗಾರ,ಆವೃತ್ತಿ ೧, ೧೯೫೦	ಶ್ರೀ ಎಸ್. ವ್ಹಿ. ಗಲಗಲಿ	ಶ್ರೀ ಎಸ್.ಎಸ್.ವ್ಹಿ.ಗಲಗಲಿ, ಮುಂಬಯಿ	೦ ೧೧ ೦
೧೧	೬	,,	ಇತಿಹಾಸ ಕತೆಗಳು,ಆವೃತ್ತಿ ೧, ೧೯೫೦	ಶ್ರೀ ಪಿ. ಜಿ. ಕುಲಕರ್ಣಿ	ಶ್ರೀ ಕೆ. ಜಿ. ಜೋಶಿ	೦ ೬ ೦
೧೨	೬	,,	ದುರಂತ ದ್ರೌಪತಿ,ಆವೃತ್ತಿ ೧ ೧೯೫೦		ಶ್ರೀ ಎಸ್. ಎಸ್. ಕುಲಕರ್ಣಿ	೦ ೯ ೦
೧೩	೫, ೬ ಪ್ರಾ. ಮಾ. ಶಾಲೆ	,,	ಪತ್ರಗಳ ಪರಿಚಯ, ಆವೃತ್ತಿ ೧, ೧೯೫೦	,,	,,	೦ ೧೦ ೦
೧೪	,,	,,	ಬಡವ ಭಾಗ್ಯಶಾಲಿಯಾದ, ಆವೃತ್ತಿ ೧, ೧೯೫೦	,,	,,	೦ ೧೦ ೦
೧೫	೫,೬,೭,ಪ್ರಾ.ಮಾ. ಶಾಲೆ	,,	ಸತಿ ತಾರಾಮತಿ, ಆವೃತ್ತಿ ೧, ೧೯೫೦	,,	,,	೦ ೬ ೦
೧೬	೯ ನೆ. ಸ್ಕೂಲ್ಸ	,,	ಯದುಪತಿ, ಆವೃತ್ತಿ ೧, ೧೯೫೦	ಶ್ರೀ ಸಾಲಿ ರಾಮಚಂದ್ರರಾಯರು	ಕರ್ನಾಟಕ ಪ್ರಾಗತಿಕ ಶಿಕ್ಷಣ ಸಂಘ, ಮುಂಬಯಿ	೧ ೮ ೦ಕ್ಕೆ ಕಡಿಮೆ ಮಾಡಬೇಕು
೧೭	೯,೧೦ ಪ್ರಾ. ಟ್ರೈ. ಕಾ. ೧, ೨ನೇ ವ.	,,	ಮಹಾತ್ಮಾ ಗಾಂಧಿ, ಆವೃತ್ತಿ ೧	ಶ್ರೀ ಎಸ್. ವ್ಹಿ. ಹಂಜಿ	ಶ್ರೀ ಎಸ್. ಎಸ್. ಹಂಜಿ	೧ ೮ ೦ಕ್ಕೆ ಕಡಿಮೆ ಮಾಡಬೇಕು
೧೮	,,	,,	ಬಾ, ಆವೃತ್ತಿ ೧, ೧೯೫೦	ಪಂಡಿತ ಕೇಶವ ಶರ್ಮಾ ಗಲ್ಗಲಿ	ಶ್ರೀ ಬಾಲಚಂದ್ರ ಘಾಣೇಕರ, ಧಾರವಾಡ	೨ ೦ ೦
೧೯	೫ ಪ್ರಾ. ಮಾ. ಶಾ.	ವ್ಯಾಕರಣ ಪಠ್ಯ ಪುಸ್ತಕ	ಕನ್ನಡ ಚಿನ್ನುಡಿ, ಭಾಗ ೨, ಆವೃತ್ತಿ, ೧೯೫೦	ಶ್ರೀ ಎಸ್. ಎಸ್. ಬಸವನಾಳ, ಪಂಡಿತ ಕವಲಿ	ಶ್ರೀ ಎಸ್. ಎಸ್. ಕುಲಕರ್ಣಿ	೦ ೮ ೦
೨೦	,,	,,	,, ಭಾಗ ೩, ಆವೃತ್ತಿ ೧೯೫೦	,,		೦ ೮ ೦
೨೧	,,	,,	ಕನ್ನಡ ನುಡಿಗನ್ನಡಿ, ಭಾಗ ೨ ಆವೃತ್ತಿ ೧೯೫೦	ಶ್ರೀ ಎಮ್. ಪಿ. ಪೂಜಾರ	ಶ್ರೀ ಎಂ. ಪಿ. ಪೂಜಾರ, ಧಾರವಾಡ	೦ ೮ ೦

ಅ. ನಂ.	ಇಯತ್ತೆ	ವಿಷಯ (ಮಂಜೂರಿ)	ಪುಸ್ತಕಗಳ ಹೆಸರು	ಲೇಖಕರ ಹೆಸರು	ಪ್ರಕಾಶಕರ ಹೆಸರು	ಬೆಲೆ
೨೨	೭	ಪಠ್ಯ ಪುಸ್ತಕ	ಕನ್ನಡ ಚನ್ನುಡಿ, ಭಾಗ ೪ ೧೯೫೦	ಶ್ರೀ ಎಸ್. ಎಸ್. ಬಸವನಾಳ, ಪಂಡಿತ ಕವಲಿ	ಶ್ರೀ ಎಸ್. ಎಸ್. ಕುಲಕರ್ಣಿ ಧಾರವಾಡ	೧ ೪ ೦
		ವ್ಯಾಕರಣ				
೨೩	೪ ಪ್ರಾ. ಮಾ. ಶಾಲೆ	ಪುರವಣಿ ಪುಸ್ತಕ	ಮಾತಿನ ಮುನ್ನಡೆ, ಆವೃತ್ತಿ ೧೯೫೦	ಶ್ರೀ ಮಾಳ್ಕೈ, ಎಸ್. ಎಚ್.- ಹುಣಶ್ಯಾಳ, ಪಂಡಿತ ಕವಲಿ	,,	೦ ೧ ೦
೨೪	೫ ,,	,,	,,	,,	,,	೧ ೦ ೦
೨೫	೬ ,,	,,	,,	,,	,,	೧ ೪ ೦
೨೬	೬ ,,	,,	ಕನ್ನಡ ನುಡಿಗನ್ನಡಿ, ಭಾಗ ೨ ಆವೃತ್ತಿ ೧೯೫೦	ಶ್ರೀ ಎಮ್. ಪಿ. ಪೂಜಾರ	ಶ್ರೀ ಎಂ. ಪಿ. ಪೂಜಾರ	೦ ೬ ೦
೨೭	೭ ,,	,,	ಮಾತಿನ ಮುನ್ನಡೆ, ಭಾಗ ೨ ೧೯೫೦	,,	ಶ್ರೀ ಎಸ್. ಎಸ್. ಕುಲಕರ್ಣಿ, ಧಾರವಾಡ	೧ ೬ ೦
೨೮	೬, ೭ ,,	,,	ನುಡಿಗಟ್ಟು, ಆವೃತ್ತಿ ೧೯೪೯	ದಿ. ಧೊಂಡೊ ನಾರಾಯಣ ಮುಳಬಾಗಿಲ	,,	೧ ೨ ೦
೨೯	,, ,,	,,	ಪ್ರಭಂದ ಕುಸುಮಾವಲಿ ಭಾಗ ೧ ಆವೃತ್ತಿ ೨, ೧೯೫೦	ಶ್ರೀ ಎಸ್. ವ್ಹಿ. ಕಲ್ಮಠ	ಶ್ರೀ ಸಿ. ಸಿ. ಶಾಬಾದಿಮಠ	೧ ೮ ೦
೩೦	,, ,,	,,	ಪ್ರಭಂದ ಕುಸುಮಾವಲಿ ಭಾಗ ೨ ಆವೃತ್ತಿ ೧೯೫೦	,,	,,	೧ ೮ ೦
		ಇತಿಹಾಸ				
೩೧	೫ ಪ್ರಾ. ಮಾ. ಶಾಲೆ	ಪಠ್ಯ ಪುಸ್ತಕ	ಭಾರತ ಇತಿಹಾಸ ಭೋದಿನಿ ಭಾಗ ೧	,,	ಶ್ರೀ ಎಸ್. ಎಸ್. ಕುಲಕರ್ಣಿ, ಧಾರವಾಡ	೦ ೧೪ ೦
೩೨	೬ ,,	,,	,, ,, ೨	,,	,,	೧ ೪ ೦
೩೩	೭ ,,	,,	,, ,, ೩	,,	,,	೧ ೮ ೦

ಕ್ರ. ನಂ.	ಇಯತ್ತೆ	ವಿಷಯ (ಮಂಜೂರಿ)	ಪುಸ್ತಕಗಳ ಹೆಸರು	ಲೇಖಕರ ಹೆಸರು	ಪ್ರಕಾಶಕರ ಹೆಸರು	ಬೆಲೆ
೩೪	೫, ೬, ೭, ಪ್ರಾ. ವಗಾ. ಶಾಲೆ	ಪಠ್ಯ ಪುಸ್ತಕ	ಭಾರತ ಇತಿಹಾಸ ಬೋಧಿನಿ ೩ ಭಾಗ ಕೂಡಿದ್ದು		ಶ್ರೀ ಎಸ್. ಎಸ್. ಕುಲಕರ್ಣಿ ಧಾರವಾಡ	೩ ೦ ೦
೩೫	೬ ,,	,,	ಕನ್ನಡ ನಾಡಿನ ಚರಿತ್ರೆ ಆವೃತ್ತಿ ೧೯೫೦	ಶ್ರೀ ಎಲ್. ಆಯ್. ಆಕಳವಾಡಿ	ರಾಮಾಶ್ರಯ ಬುಕ್ ಡಿಪೋ, ಧಾರವಾಡ	೦ ೧೪ ೦
೩೬	೪ ಪ್ರಾ. ಶಾಲೆ	ಪುರವಣಿ ಪುಸ್ತಕ	ಕನ್ನಡ ಇತಿಹಾಸ ಬೋಧಿನಿ ಸುಧಾರಿಸಿದ ಆವೃತ್ತಿ ೧೧, ೧೯೫೦	ಶ್ರೀ ನಾರಾಯನ ಶರ್ಮಾ	ಶ್ರೀ ಎಸ್. ಎಸ್. ಕುಲಕರ್ಣಿ, ಧಾರವಾಡ	೦ ೧೪ ೦
೩೭	೧೦, ೧೧ ಸೆ.ಸ್ಕೂ. ಪ್ರಾ.ಟ್ರೇ.ಕಾಲೇಜ	,,	ಭಾರತ ಹೊಸ ರಾಜ್ಯ ಘಟನೆ ೧೯೫೦	ಶ್ರೀ ಬಿ. ಡಿ. ಕರಜಗಿ	ಶ್ರೀ ಬಿ. ಡಿ. ಕರಜಗಿ	೧ ೨ ೦
೩೮	೮, ೯, ೧೦ ಸೆ. ಸ್ಕೂ. ಪ್ರಾ.ಟ್ರೆ.ಕಾಲೇಜ ೧, ೨ನೇ ವ. ವಿದ್ಯಾರ್ಥಿಗಳಿಗಾಗಿ	,,	ಭರತ ಖಂಡದ ಜೀವನ ಜ್ಯೋತಿಗಳು, ಭಾಗ ೧ ಆವೃತ್ತಿ ೪	ಶ್ರೀ ಹೊಸಕೇರಿ ಚಿದಂಬರಯ್ಯ	ಶ್ರೀ ಎಂ. ಗೋವಿಂದರಾವ	೧ ೦ ೦
೩೯	,,	,,	,, ಭಾಗ ೨	,,	,,	೧ ೪ ೦
		ಭೂಗೋಲ				
೪೦	೨	ಪಠ್ಯ ಪುಸ್ತಕ	ಭೂಮಂಡಲ ಬೋಧಿನಿ, ಸುಧಾರಿಸಿದ ಆವೃತ್ತಿ ೧೯೫೦	ದಿ. ಎಸ್. ಎಸ್. ಕುಲಕರ್ಣಿ	ಶ್ರೀ ಎಸ್. ಎಸ್. ಕುಲಕರ್ಣಿ	೦ ೧೪ ೦
೪೧	೪	,,	ಭೂಮಂಡಲ ಪರಿಚಯ ಭಾಗ ೧ ಆವೃತ್ತಿ ೧, ೧೯೫೦	ಶ್ರೀ ಎಲ್. ಆಯ್. ಆಕಳವಾಡಿ	ರಾಮಾಶ್ರಯ ಬುಕ್. ಡಿಪೋ, ಧಾರವಾಡ	೦ ೧೨ ೦
೪೨	೭	,,	ಭೂಮಂಡಲ ಪರಿಚಯ ಭಾಗ ೪ ಆವೃತ್ತಿ ೧, ೧೯೫೦	,,	,,	೨ ೦ ೦
		ಗಣಿತ ಶಾಸ್ತ್ರ ಅಂಕಗಣಿತ				
೪೩	೫	ಪಠ್ಯ ಪುಸ್ತಕ	ನೂತನ ಗಣಿತ ಆವೃತ್ತಿ ೨ ೧೯೫೦	ಶ್ರೀ ಕೆ. ಕೆ. ಗಲಗಲಿ	ಶ್ರೀ ಎಚ್. ಬಿ. ನವಲೂರ	೧ ೦ ೦

ಕ್ರ. ನಂ.	ಇಯತ್ತೆ	ಮಂಜೂರಿ (ಮಂಜೂರಿ)	ಪುಸ್ತಕಗಳ ಹೆಸರು	ಲೇಖಕರ ಹೆಸರು	ಪ್ರಕಾಶಕರ ಹೆಸರು	ಬೆಲೆ
೪೪	೬	ಪಠ್ಯ ಪುಸ್ತಕ	ನೂತನ ಗಣಿತ, ಆವೃತ್ತಿ ೨ ೧೯೫೦	ಶ್ರೀ ಕೆ. ಕೆ. ಗಲಗಲಿ	ಶ್ರೀ. ಎಚ್. ಬಿ. ನವಲೂರ	೧ ೪ ೦
೪೫	೬	,,	ಹೊಸ ಗಣಿತ, ಆವೃತ್ತಿ ೧ ೧೯೫೦	ಶ್ರೀ. ಎಸ್. ಎಲ್. ಬಾಪಟ ಮತ್ತು ಸಿ. ಎಸ್. ಕುಲ್ಕರ್ಣಿ		೧ ೮ ೧
೪೬	೫	**ಭೂಮಿತಿ** ಪಠ್ಯ ಪುಸ್ತಕ	ಪ್ರಾಥಮಿಕ ಭೂಮಿತಿ, ಆವೃತ್ತಿ ೨ ೧೯೫೮	ಶ್ರೀ. ಆರ್. ಆರ್. ಶೇಲಾರ	ಶ್ರೀ. ಎಂ. ಆರ್. ಶೆಟ್ಟರ	೧ ೪ ೦
೪೭	೬	,,	,, ಆವೃತ್ತಿ ೨, ೧೯೫೦	,,	,,	೦ ೧೨ ೦
೪೮	೭	,,	,, ,,	,,	,,	೦ ೧೪ ೦
೪೯	೫,೬,೭ ಪ್ರಾ. ಶಾಲೆ	**ಜಮಾಖರ್ಚು** ಪುರವಣಿ ಪುಸ್ತಕ	ದೇಶಿ ಜಮಾಖರ್ಚಿನ ಪದ್ಧತಿ ೧೯೫೦	ದಿ. ವ್ಹಿ. ಸಿ. ಹೂಲಿ	ಶ್ರೀ, ಎಸ್. ಎಸ್. ಕುಲಕರ್ಣಿ	೧ ೬ ೦
೫೦	೬, ೭	,,	ಹೊಸ ಪದ್ಧತಿಯ ಹಿಂದಿ ಜಮಾಖರ್ಚು, ಆವೃತ್ತಿ ೫, ೧೯೫೦	ಶ್ರೀ. ಆರ್. ಎಸ್. ಸಜ್ಜನ	ಶ್ರೀ. ಆರ್. ಎಸ್. ಸಜ್ಜನ	೧ ೪ ೦
೫೧	೪	**ವಿಜ್ಞಾನ** ಪಠ್ಯ ಪುಸ್ತಕ	ಸಾಮಾನ್ಯ ವಿಜ್ಞಾನ, ಆವೃತ್ತಿ ೧, ೧೯೫೦	ಶ್ರೀ. ಎಂ. ಆರ್. ಮಲ್ಯ	ಶ್ರೀ. ಎಂ. ಆರ್. ಮಲ್ಯ	೦ ೭ ೦
೫೨	೪	,,	ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ, ಆವೃತ್ತಿ ೧, ೧೯೪೮	ಶ್ರೀ. ಎಲ್. ಆಯ್. ಆಕಳವಾಡಿ	ರಾಮಾಶ್ರಯ ಬುಕ್ ಡಿಪೊ, ಧಾರವಾಡ	೦ ೮ ೦
೫೩	೫	,,	,,	,,	,,	೦ ೧೨ ೦
೫೪	೬	,,	ಸಾಮಾನ್ಯ ವಿಜ್ಞಾನ, ಆವೃತ್ತಿ ೧ ೧೯೫೦	ಎಂ. ಆರ್. ಮಲ್ಯ	ಎಂ. ಆರ್. ಮಲ್ಯ	೦ ೧೨ ೦
೫೫	೬,೭ ಪ್ರಾ. ಸೆಕೆಂಡರಿ ಸ್ಕೂಲ	,,	,, ಆವೃತ್ತಿ ೪, ೧೯೫೦	,,	,,	೧ ೮ ೦

ಅ. ನಂ.	ಇಯತ್ತೆ	ವಿಷಯ (ಮಂಜೂರಿ)	ಪುಸ್ತಕಗಳ ಹೆಸರು	ಲೇಖಕರ ಹೆಸರು	ಪ್ರಕಾಶಕರ ಹೆಸರ	ಬೆಲೆ
೫೬	೬. ೭ ವಗ. ಶಾಲೆ	ಪಠ್ಯ ಪುಸ್ತಕ	ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ, ಆವೃತ್ತಿ ೧, ೧೯೫೦	ಶ್ರೀ ಎಲ್. ಆಯ್. ಆಕಳವಾಡಿ	ರಾಮಾಶ್ರಯ ಬುಕ್ ಡಿಪೋ, ಧಾರವಾಡ	೧ ೧ ೦
೫೭	೬,೮,೯,೧೦,೧೧ ಸೆ. ಸ್ಕೂಲ್ಸ	,,	ನೂತನ ಪ್ರಾಥಮಿಕ ವಿಜ್ಞಾನ ಪದಾರ್ಥ, ಆವೃತ್ತಿ ೪, ೧೯೪೦	ಶ್ರೀ ಎಂ. ಆರ್. ಮಲ್ಯ	ಶ್ರೀ ಎಮ್. ಆರ್. ಮಲ್ಯ	೩ ೮ ೦
೫೮	೭ ಪ್ರಾ. ಶಾಲೆ	ಪುರವಣಿ ಪುಸ್ತಕ	ಹಳ್ಳಿಯ ಆರೋಗ್ಯ, ಆವೃತ್ತಿ ೧ ೧೯೫೦	ಶ್ರೀ ಎನ್. ಬಿ. ನಾಡಿಗೇರ	ಎನ್. ಬಿ. ನಾಡಿಗೇರ	೦ ೮ ೦
೫೯	೮,೯,೧೦,೧೧ ಸೆ. ಸ್ಕೂಲ್ಸ	,,	ಆಹಾರ ವಿಜ್ಞಾನಸಾರ, ಆವೃತ್ತಿ ೧ ೧೯೪೦	,,	ಮಿಂಚಿನ ಬಳ್ಳಿ, ಧಾರವಾಡ	೧ ೪ ೦
೬೦	೧, ೨ನೇ ವರ್ಷದ ಶಿಕ್ಷಕರಿಗಾಗಿ	**ಸಂಗೀತ** ಪುರವಣಿ ಪುಸ್ತಕ	ಶಾಸ್ತ್ರೀಯ ರಾಗ ಗೀತ, ೧೯೪೬	ಶ್ರೀ ಜಿ. ಎಸ್. ಜುಕ್ತಿಮಠ	ಶ್ರೀ ಜಿ. ಎಸ್. ಜುಕ್ತಿಮಠ	೧ ೦ ೦
೬೧	,,	**ಶಾರೀರಿಕ ಶಿಕ್ಷಣ** ಪುರವಣಿ ಪುಸ್ತಕ	ಶಾರೀರಿಕ ಶಿಕ್ಷಣ, ಆವೃತ್ತಿ ೧, ೧೯೫೦	ಶ್ರೀ ಬಿ.ಎಸ್.ಮಣ್ಣೂರ ಮತ್ತು ಶ್ರೀ ಜಿ. ಬಿ. ನವಲೂರ	ಶ್ರೀ ಎಸ್. ವ್ಹಿ. ಹರಿಹರ, ಧಾರವಾಡ	೨ ೦ ೦
೬೨	,,	**ಶಾರೀರಿಕ ಶಿಕ್ಷಣ** ಪುರವಣಿ ಪುಸ್ತಕ	ಕೈನೇಯಿಗೆಯ ಮಾರ್ಗದರ್ಶಿಕೆ, ಆವೃತ್ತಿ ೧ ೧೯೫೦	ಶ್ರೀ ಎಂ. ಡಿ. ಮೆಲಗಿರಿ	ಶ್ರೀ ಎಂ. ಎ. ಹೊಸಕೇರಿ	೨ ೧೨ ೦
೬೩	ಅಗ್ರಿಕಲ್ಚರ ಬಾಯಿಸ್ ಶಾಲೆ ವ ಟ್ರೇನಿಂಗ ಕಾಲೇಜ	**ಒಕ್ಕಲುತನ** ಪುರವಣಿ ಪುಸ್ತಕ	ಮಣ್ಣು, ಆವೃತ್ತಿ ೧, ೧೯೫೦	ಶ್ರೀ ಎಲ್. ಬಿ. ದೇಸಾಯಿ	ಶ್ರೀ ಬಿ. ಡಿ. ಕುಲಕರ್ಣಿ. ಮನೋಹರ ಗ್ರಂಥ ಭಾಂಡಾರ, ಧಾರವಾಡ	೦ ೧೦ ೦

(ಸಹಿ) **ಬಿ. ಎಮ್. ಮೀಮಾಂಸಿ**
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ

ಪುಟ ೨೭೫ ಬೆಲೆ ೨ ರೂ. ೧೨ ಆ.

ಕೈನೇಯಿಗೆಯ ಮಾರ್ಗದರ್ಶಿಕೆ

ಲೇಖಕರು : ಎಂ. ಡಿ. ಮೇಲಗಿರಿ

ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ್,
ಧಾರವಾಡ ಭಾಗ, ಧಾರವಾಡ, ಅವರ ಪತ್ರ
ನಂ. ೧೯೬೬/೭೦–೮-೫೦ ಅನ್ವಯ
ಟ್ರೇ. ಕಾ.ದ ೧ನೆಯ ಹಾಗು ೨ನೆಯ
ವರ್ಷದ ವಿದ್ಯಾರ್ಥಿಗಳಿಗೆ "ಪೂರಕ ಓದು"
ಎಂದು ಸರಕಾರದಿಂದ ಮಂಜೂರಾಗಿದೆ.
ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ.

— ಎಮ್. ಕೆ. ಮೇಲಗಿರಿ —

ಕಮಲಾಪುರ ಭಾಗ,
(ಈಶ್ವರದೇವರ ಗುಡಿ ಓಣಿ)
ಧಾರವಾಡ.

ಪುಟ ೨೨೫ ಬೆಲೆ ೨ ರೂ. ೪ ಆ.

ಕೈ ನೂಲು

ಲೇಖಕರು : ಎಂ. ಡಿ. ಮೇಲಗಿರಿ.
(ಮೂಲೋದ್ಯೋಗ ಶಿಕ್ಷಕ, ಕ. ಗಂ. ಸರಕಾರಿ
ಟ್ರೇನಿಂಗ ಕಾಲೇಜ, ಧಾರವಾಡ)

ಈ ಪುಸ್ತಕದಲ್ಲಿ ಪ್ರಾಥಮಿಕ ಶಾಲೆಗಳ ಎಲ್ಲ ವರ್ಗಗಳ ಹಾಗು ಟ್ರೇನಿಂಗ ಕಾಲೇಜುಗಳ ೧ನೆಯ ವರ್ಷದ ಹೊಸ ಅಭ್ಯಾಸಪತ್ರಿಕೆಯಂತೆ ನೂಲುಗಾರಿಕೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಂಗ್ರಹಿಸಿದೆ. ಹತ್ತಿಯ ಬಿತ್ತಿಗೆಯನ್ನು ಮೊದಲುಗೊಂಡು ನೂಲು ಸಿದ್ಧವಾಗುವ ವರೆಗಿನ ಎಲ್ಲ ಸಂಗತಿಗಳನ್ನು ಸಮಯೋಜಿತ ಚಿತ್ರಗಳಿಂದಲೂ ಉಧಾಹರಣೆಗಳಿಂದಲೂ ತಾಂತ್ರಿಕ ವಿವರಣೆಗೆ, ನೂಲುಗಾರಿಕೆಗೆ ಸಂಬಂಧಿಸಿದ ಗಣಿತ ಹಾಗು ಲಕ್ಕಪತ್ರಗಳನ್ನೂ ಸೇರಿಸಿದೆ. ನೂಲುವ ವರ್ಗಗಳನ್ನು ಸ್ವತಂತ್ರವಾಗಿ ನಡೆಯಿಸುವ ಬಗ್ಗೆ ಶಿಕ್ಷಕ ಶಿಕ್ಷಕಿಯರಿಗೂ ಖಾದೀ ಕಾರ್ಯಕರ್ತರಿಗೂ ತುಂಬಾ ಉಪಯುಕ್ತವಾಗಿದೆ.

— ಎಮ್. ಕೆ. ಮೇಲಗಿರಿ —

ಕಮಲಾಪುರ ಭಾಗ, ಈಶ್ವರದೇವರ ಗುಡಿ ಓಣಿ,
— — ಧಾ ರ ವಾ ಡ — —

ಸರಕಾರದಿಂದ ಟ್ರೇನಿಂಗ ಕಾಲೇಜುಗಳಿಗೆ '**ಪೂರಕವಾಚನ**'ವೆಂದು ಮಂಜೂರಾಗಿದೆ.

'ಶಾರೀರಿಕ ಶಿಕ್ಷಣ'

ಪ್ರಕಾಶಕರು :

ಶ್ರೀ. ಭೀ. ಸ. ಮಣ್ಣೂರ
ಪ್ರ್ಯಾಕ್ಟಿಸಿಂಗ್,ಸ್ಕೂಲ ಟ್ರೇ. ಕಾಲೇಜ,
ಧಾರವಾಡ.

ಶ್ರೀ. ಜಿ. ಬಿ. ನವಲೂರ
ಫಿಜಿಕಲ್ ಟೀಚರ, ಬಾಸೆಲ್‌ಮಿಶನ್
ಹಾಯಸ್ಕೂಲ, ಧಾರವಾಡ.

ಶಾರೀರಿಕ ಶಿಕ್ಷಣದ ಹೊಸ ಅಭ್ಯಾಸಕ್ರಮಕ್ಕನುಸರಿಸಿ ಬರೆದ,
ನೂರಾರು ಚಿತ್ರಗಳಿಂದ ಕೂಡಿದ, ಸುಂದರ ಪುಸ್ತಕವು.

ಎಲ್ಲ ಶಿಕ್ಷಕರೂ ಇದರ ಲಾಭವನ್ನು ಪಡೆಯಲೇಬೇಕು.

ಬೆಲೆ : ೨—೦—೦

ಪುಸ್ತಕ ದೊರೆಯುವ ಸ್ಥಳ :

ರಾಮಾಶ್ರಯ ಬುಕ್-ಡಿಪೋ, ಧಾರವಾಡ.

ಭಾರತ ಬುಕ್-ಡಿಪೋ, ಧಾರವಾಡ.

ತ್ವರೆ ಮಾಡಿರಿ ! ಮುಲ್ಕೀ ವಿದ್ಯಾರ್ಥಿಗಳಿಗೆ ಸುಸಂಧಿ ! ಇಂದೇ ಬರೆಯಿರಿ !

ಮುಲ್ಕೀ ಪರೀಕ್ಷೆಯನ್ನು ಪಾಸಾಗಲು ಊರುಗೋಲಾದ ಬಹುಜನ ವಿದಾರ್ಥಿ ವ ಶಿಕ್ಷಕರಿಂದ ಮನ್ನಣೆ ಪಡೆದ ಕೆಳಗಿನ ಬುಕ್ಕುಗಳನ್ನು ಇಂದೇ ಸಂಗ್ರಹಿಸಿರಿ

ನೂತನ ಪ್ರಶ್ನೋತ್ತರಮಾಲೆ

(೧) **ಇತಿಹಾಸ** ೧—೦—೦ (೩) **ಭೂಮಿತಿ** ೧—೦—೦
(೨) **ಭೂಗೋಲ** ೧—೦—೦ (೪) **ಭಾಷಾಭ್ಯಾಸ ಕೈಪಿಡಿ** ೧—೦—೦

ನೂತನ ಕಿಸೆಯ ಕೈಪಿಡಿಮಾಲೆ

(೧) **ಆರೋಗ್ಯಶಾಸ್ತ್ರ** ೦—೬—೦ (೨) **ಶಾಸ್ತ್ರೀಯವಿಷಯ** ೦—೬—೦

ಅಲ್ಲದೆ

(೧) **ಸಚಿತ್ರ ಶಾಸ್ತ್ರೀಯವಿಷಯ** ೦-೧೨—೦ (೨) **ಸಾ. ವಿಜ್ಞಾನಸಾರ** ೦—೬—೦

ಅಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಬಗೆಯ ಹಿಂದೀ, ಇಂಗ್ಲೀಷ, ಕನ್ನಡ ಬುಕ್ಕುಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಆಕಳವಾಡಿ ಬುಕ್ಕಡಿಪೋ, ಧಾರವಾಡ
ವಿಜಯ ರೋಡ.

ಆದರ್ಶ ಚಿತ್ರಕಲಾ

(IDEAL DRAWING)

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ಅತ್ಯುತ್ತಮವಾದ ಪುಸ್ತಕವು
ಕಡೆಗಣಿಸಲ್ಪಟ್ಟ ೧೦೦ ಗುಣಗಳ ವಿಷಯ.

ಲೇಖಕರು: **ಶ್ರೀ. ಎಸ್. ಕೆ. ಜೋಶಿ**
ಡ್ರಾಯಿಂಗ ಶಿಕ್ಷಕರು, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧುಳಿಯಾ.

- ಈ ಪುಸ್ತಕದಲ್ಲಿ ಅಬ್ಜಕ್ಟ, ಮೆಮರಿ, ಡಿಸೈನು, ನೇಚರ ಮತ್ತು ದೃಷ್ಟಾಂತ ರೇಖನಕಲೆಯ ಒಂದು ಸಾವಿರಕ್ಕಿಂತ ಹೆಚ್ಚು ಚಿತ್ರಗಳಿವೆ. ಬಣ್ಣಗಳ ಮಿಶ್ರಣವನ್ನು ತೋರಿಸುವದಕ್ಕಾಗಿ ಮೂರು ಬಣ್ಣದ ನಾಲ್ಕು ಚಿತ್ರಗಳು. ನಾನಾಬಗೆಯ ಚಿತ್ರಗಳನ್ನು ಚಿತ್ರಿಸುವ ದಾರಿಯನ್ನು ವರ್ಣಿಸುವ ಪದ್ಧಗಳು.
- ಈ ಪುಸ್ತಕವು ಪ್ರಾಥಮಿಕ ಶಾಲೆಗಳ ಮೇಲಿನ ತರಗತಿಗಳ, ಹೈಸ್ಕೂಲುಗಳ ಮತ್ತು ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಅತ್ಯುಪಯುಕ್ತವಾಗಿದೆ. ಎಲಿಮೆಂಟರಿ ಮತ್ತು ಇಂಟರಮಿಜಿಯೆಟ್ ಡ್ರಾಯಿಂಗ ಪರೀಕ್ಷೆಗಳ ವಿದ್ಯಾರ್ಥಿಗಳಿಗಂತೂ ಇದು ವಿಶೇಷ ಉಪಯುಕ್ತವಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ನಡೆದ ವಿವಿಧ ಡ್ರಾಯಿಂಗ ಪರೀಕ್ಷೆಗಳ ಪ್ರಶ್ನಪತ್ರಿಕೆಗಳೂ ಇದರಲ್ಲಿ ಕೊಡಲ್ಪಟ್ಟಿವೆ.
- ಬೆಲೆ: ೦-೧೨-೦ ಅಂಚೆವೆಚ್ಚ ೦-೪-೦ ಅಂಚೆಯಿಂದ, ವ್ಹಿ. ಪಿ. ಯಿಂದ ೨-೪-೦. ನಿಮ್ಮ ಸಮೀಪದ ಪುಸ್ತಕ ವ್ಯಾಪಾರಿಗಳಿಂದ ತರಿಸಿಕೊಳ್ಳಿರಿ; ಅಥವಾ ಕೆಳಗಿನವರಿಗೆ ಬರೆದು ತರಿಸಿ ಕೊಳ್ಳಿರಿ.

ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾಪೇಟೆ, ಪುಣೆ ೨.

Regd. No. B. 5375

ಸನ್ ೧೯೪೭—೪೮ ನೆಯ ಸಾಲಿನಲ್ಲಿ ಹೊರಟ ಹೊಸ ಅಭ್ಯಾಸಪತ್ರಿಕೆಗೆ ಅನುಸರಿಸಿ ಬರೆದ ನಮ್ಮ ಪ್ರಕಟನೆಗಳು.

೪ನೆ ಇಯತ್ತೆಗಾಗಿ

ಭೂಮಂಡಲ ಪರಿಚಯ ಭಾಗ ೧

ಬೆಲೆ ೦—೧೨—೦

ಇದರಲ್ಲಿ ಮುಂಬಯಿಕರ್ನಾಟಕ, ಮಹಾರಾಷ್ಟ್ರ, ಗುಜರಾತ, ಕೊಂಕಣ ಮೊದಲಾದವುಗಳಲ್ಲಿಯ ಜನರ ಜೀವನ ಕ್ರಮುವನ್ನು ಹವೆ ಮಳೆ, ಬೆಳೆ ಮೊದಲಾದವುಗಳನ್ನು ವಿವರವಾಗಿ ವರ್ಣಿಸಲ್ಪಟ್ಟಿದೆ; ಅಲ್ಲದೆ ವಿಶಾಲಕರ್ನಾಟಕದ ಸಂಕ್ಷಿಪ್ತ ಮಾಹಿತಿಯನ್ನು ಕೊಟ್ಟಿರುತ್ತದೆ. ವಿಲೀನೀಕೃತ ವಿಜಾಪುರ ಬೆಳಗಾಂವ ಜಿಲ್ಲೆಯ ನಕಾಶ ಹಾಗು ವಿಶಾಲ ಕರ್ನಾಟಕದ ನಕಾಶವನ್ನು ಸೇರಿಸಲಾಗಿದೆ. ಸುಮಾರು ೬೦ ಚಿತ್ರ ನಕಾಶಗಳು ಇರುತ್ತವೆ.

ಕನ್ನಡ ನಾಡಿನ ಚರಿತೆ

ಬೆಲೆ ೦—೧೪—೦

ಇದರಲ್ಲಿ ಕರ್ನಾಟಕದಲ್ಲಿ ಆಗಿಹೋದ ಶೂರ ಅರಸರ, ಕವಿಗಳ, ಧರ್ಮಗುರುಗಳ, ವೀರ ರಮಣಿಯರ ಜೀವನ ಚರಿತ್ರವನ್ನು ಸುಲಭ ಭಾಷೆಯಲ್ಲಿ ಕಥಾರೂಪವಾಗಿ ವಿವರಿಸಲಾಗಿದೆ.

ಸಾಮಾನ್ಯ ಜ್ಞಾನ

ಬೆಲೆ ೦—೮—೦

ಇದರಲ್ಲಿ ಮನೆಯಲ್ಲಿ ಸಾಕುವ ಪ್ರಾಣಿಗಳು, ಮುಖ್ಯ ಬೆಳೆಗಳು, ಬೇನೆಗಳು, ಹಳ್ಳಿಯ ಹಾಗೂ ನಗರದ ಆಡಳಿತೆ, ಪಂಚಾಗ ಮೊದಲಾದವುಗಳ ವಿಷಯವಾಗಿ ಸವಿಸ್ತಾರ ವರ್ಣನೆ,ಅದೆ. ಅನೇಕ ಚಿತ್ರಗಳು.

೫ನೆ ಇಯತ್ತೆಗಾಗಿ ಸಂಯುಕ್ತ ಅಭ್ಯಾಸ ಪತ್ರಿಕೆಗನುಸರಿಸಿ,

ಸಾಮಾನ್ಯ ವಿಜ್ಞಾನ ಭಾಗ ೧

ಬೆಲೆ ೦—೧೨—೦

ಇದರಲ್ಲಿ ಮಾನವನ ಹಾಗೂ ಪಾಣಿಗಳ ಶ್ವಾಸೋಚ್ಛ್ವಾಸ, ಪೋಷಣ, ಚಲನೆ, ಜ್ಞಾನ ಗ್ರಹಣ, ನೀರು ಹಾಗು ಪಂಚಾಂಗಗಳ ವಿಷಯ ಸವಿಸ್ತರವಾಗಿ ವರ್ಣಿಸಲಾಗಿದೆ.

ಭೂಮಂಡಲ ಪರಿಚಯ ಭಾಗ ೨

ಬೆಲೆ ೧—೨—೦

ಇದರಲ್ಲಿ ಪ್ರಥ್ವಿಯ ಆಕಾರ, ಪ್ರಾಯೋಗಿಕ ಹಾಗು ನಿರೀಕ್ಷಣೆಯ ಕೆಲಸ ಹಿಂದುಸ್ತಾನದ ಹವಾಮಾನ ಹಾಗು ಜಗತ್ತಿನ ಹವಾನದ ಮುಖ್ಯ ಪ್ರಕಾರಗಳ ವಿಷಯಕ್ಕೆ ವಿಶದವಾಗಿ ವರ್ಣಿಸಲ್ಪಟ್ಟಿದೆ.

ಇದೇ ಪ್ರಕಾರ ೬ ನೆಯತ್ತೆಯ **ಸಾಮಾನ್ಯ ವಿಜ್ಞಾನ ೦—೧೨—೦ ಭೂಮಂಡಲ ಪರಿಚಯ ಭಾಗ ೩ ಬೆಲೆ ೧—೮—೦**

ಅಲ್ಲದೆ ಪ್ರಾಥಮಿಕ ಪ್ರಮಾಣಪತ್ರ ಅಭ್ಯಾಸ ಪತ್ರಿಕೆಯಂತೆ **ಸಾಮಾನ್ಯ ವಿಜ್ಞಾನ ಬೆಲೆ ರೂ ೧—೪—೦ ಭೂಮಂಡಲ ಪರಿಚಯ ಭಾಗಗಳ ಬೆಲೆ ರೂ ೨—೦—೦**

ಮೇಲೆ ಕಾಣಿಸಿದ ಎಲ್ಲ ಪುಸ್ತಕಗಳು ಎಲ್ಲ ವ್ಯಾಪಾರಸ್ಥರಲ್ಲಿ ದೊರೆಯುತ್ತವೆ.

ಇಲ್ಲವಾದರೆ

ಪ್ರಕಾಶಕರು:

ರಾಮಾಶ್ರಯ ಬುಕ್ ಡಿಪ್ಪೊ ಧಾರವಾಡ

ಇವರಿಗೆ ಇಂದೇ ಪತ್ರ ಬರೆಯಿರಿ.

Printed by M. A. Kamat B. Sc. at Jai Hind Art Press, Javlipeth, Dharwar. Edited and Published by K. G. Kurtkoti, B. M. Shintri, S. R. Tatti, & Y. D. Nadkarni jointly at the Kannada Prathamik Shikshan Office Govt. Training College for Men, Dharwar.

ಕನ್ನಡ ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು

ಶ್ರೀ. ಕೆ. ಜಿ. ಕುರ್ತಕೋಟಿ

ಪದವೀಧರರ ಜೀವನ-ಶಿಕ್ಷಣ ಕೇಂದ್ರ, ಧಾರವಾಡ



ಇದರಲ್ಲಿ ಕರ್ನಾಟಕದ ಎಲ್ಲ ಸರಕಾರಿ ಮತ್ತು ಗೈರ ಸರಕಾರಿ ಟ್ರೇನಿಂಗ ಕಾಲೇಜುಗಳ ಪ್ರಿನ್ಸಿಪಾಲರು ಜೀವನ-ಶಿಕ್ಷಣದಲ್ಲಿ ಅಲ್ಪಾವಧಿ ತರಬೇತಿಯನ್ನು ಹೊಂದಿದರು.

ಬಿಡಿ ಪ್ರತಿ
೦—೬—೦

ಡಿಸೆಂಬರ ೧೯೫೦

ವಾರ್ಷಿಕ ಚಂದಾ
೪—೦—೦

ಪ್ರಾಥಮಿಕ ಟ್ರೇನಿಂಗ ಕಾಲೇಜುಗಳ ಮುಖ್ಯಾಧ್ಯಾಪಕರ ಅಲ್ಪಾವಧಿ ತರಬೇತಿಯ ಮುಕ್ತಾಯ ಸಮಾರಂಭದ ಕಾಲದಲ್ಲಿ ತೆಗೆದ ಭಾವಚಿತ್ರ.



ಕೆಳಗಿನಿಂದ ಮೇಲಕ್ಕೆ—ಎಡದಿಂದ ಬಲಕ್ಕೆ :—

ಕುಳಿತವರು : (೧) ಶ್ರೀ. ಹುನಗುಂದ. (೨) ಶ್ರೀ. ಕಾಳೆ. (೩) ಶ್ರೀ. ಎಸ್. ಆರ್. ಜೋಶಿ. [ಅ
(೪) ಶ್ರೀ. ಅರವಿಂದ ಜೋಶಿ.

ಕುರ್ಚಿಯ ಮೇಲೆ : (೧) ಶ್ರೀ. ಕುರ್ತಕೋಟಿ. (೨) ಶ್ರೀ. ರಾಯಣ್ಣನವರ. (೩) ಶ್ರೀ. ತಟ್ಟಿ. (೪) ಭಾಗವತ ಮುಖ್ಯ (ಅತಿಥಿಗಳು). (೫) ಶ್ರೀ. ಶೇರಗಾಂವಕರ (ಜಿ. ಪಿ. ಟಿ. ಸಿ. ಯ ಪ್ರಿನ್ಸಿ
(೬) ಶ್ರೀ. ಯಮುನಾಬಾಯಿ ನಾಡಕರ್ಣಿ. (೭) ಶ್ರೀ. ಹಂಚಿನಾಳ. (೮) ಶ್ರೀ. ಪ
(೯) ಶ್ರೀ. ಬ್ಯಾಹಟ್ಟಿ.

ನಿಂತವರು : (೧) ಶ್ರೀ. ಸಿಂದಗಿ (ಲೆಕ್ಚರರ). (೨) ಶ್ರೀ. ಸವಣೂರ. (೩) ಶ್ರೀ. ಕೌಲಗಿ.
(೪) ಶ್ರೀ. ಹುಲಕೋಟಿ. (೫) ಸರಸಾಪೂರ. (೬) ಶ್ರೀ. ಕುಲಕರ್ಣಿ. (೭) ಶ್ರೀ. ಪಾ
(ಲೆಕ್ಚರರ). (೮) ಶ್ರೀ. [illegible] (ಲೆಕ್ಚರರ).

ನಿಂತವರು : (೧) ಶ್ರೀ. ಮೆಂಚ. (೨) ಶ್ರೀ. ಇಂಚಲ. (೩) ಶ್ರೀ. ಸ್ವಾಮಿಮಠ (ಲೆಕ್ಚರರ).

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು. **ಶ್ರೀ ಬಿ. ಎನ್. ಮೀಮಾಂಸಿ**, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ.

ಪ್ರಧಾನ ಸಂಪಾದಕರು: **ಶ್ರೀ. ಕೆ. ಜಿ. ಕುರ್ತಕೋಟಿ**, ಬಿ.ಎ.,ಬಿ.ಟಿ. ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ,ಧಾರವಾಡ.

ಸಹಸಂಪಾದಕರು :

ಶ್ರೀ. ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.

ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೦	ಡಿಸೆಂಬರ ೧೯೫೦	ಸಂಚಿಕೆ ೭

ಪರಿವಿಡಿ

೧.	ಜನಹಿತವ ಗೈಸಿ ಬಾಳಿಸೊ	ಶ್ರೀ. ಕೆ. ಜಿ. ಕುರ್ತಕೋಟಿ	೩
೨.	ಸಂಪಾದಕೀಯ	....	೪
೩.	ಗಾಂಧಿಜಿಯವರ ಅರ್ಥಶಾಸ್ತ್ರ ಹಾಗೂ ಆಧುನಿಕ ಯಂತ್ರಯುಗ	ಶ್ರೀ. ತಟ್ಟಿ ಶ್ಯಾಮರಾಯರು	೫
೪.	ಜೀವನ ಶಿಕ್ಷಣ	ಆಚಾರ್ಯ ಭಾಗವತ	೧೦
೫.	ಸಾಮುದಾಯಕ ಜೀವನದ ಸಂಘಟನೆ	ಶ್ರೀ. ಎಸ್. ಡಿ. ಇಂಚಲ	೧೫
೬.	ಮೂಲಶಿಕ್ಷಣದಲ್ಲಿ ನಾಲ್ಕು ವಾರಗಳ ತರಬೇತಿ	....	೨೨
೭.	ಪ್ರಾಥಮಿಕ ಜೀವನಶಿಕ್ಷಣ	ಶ್ರೀ. ಪಿ. ಸಿ. ಬ್ಯಾಹಟ್ಟಿ	೩೦
೮.	ಅಂಧಃಕಾರದ ನಂದಾದೀಪ	ಶ್ರೀ. ಎಚ್. ಎಂ. ಕಾಳೆ	೩೨
೯.	ಶಿಕ್ಷಣದಲ್ಲಿ ಮೂಲೋದ್ಯೋಗ	ಶ್ರೀಮತಿ. ಸುಲಭಾ ಪಾಣಂದೀಕರ	೩೪

ಪುಟ ೨೭೫ ಬೆಲೆ ೨ ರೂ. ೧೨ ಆ.

ಕೈನೇಯಿಗೆಯ ಮಾರ್ಗದರ್ಶಿಕೆ

ಲೇಖಕರು : ಎಂ. ಡಿ. ಮೇಲಗಿರಿ

ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ್,
ಧಾರವಾಡ ಭಾಗ, ಧಾರವಾಡ, ಅವರ ಪತ್ರ
ನಂ. ೧೯೭೭/೩೦-೮-೫೦ ಅನ್ವಯ
ಟ್ರೇ. ಕಾ.ದ ೧ನೆಯ ಹಾಗು ೨ನೆಯ
ವರ್ಷದ ವಿದ್ಯಾರ್ಥಿಗಳಿಗೆ "ಪೂರಕ ಓದು"
ಎಂದು ಸರಕಾರದಿಂದ ಮಂಜೂರಾಗಿದೆ.
ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ.

— ಎಮ್. ಕೆ. ಮೇಲಗಿರಿ —
ಕಮಲಾಪುರ ಭಾಗ,
(ಈಶ್ವರದೇವರ ಗುಡಿ ಓಣಿ)
ಧಾರವಾಡ.

ಪುಟ ೨೩೫ ಬೆಲೆ ೨ ರೂ. ೪ ಆ

ಕೈ ನೂಲು

ಲೇಖಕರು : ಎಂ. ಡಿ. ಮೇಲಗಿರಿ.
(ಮುಖ್ಯೋದ್ಯೋಗ ಶಿಕ್ಷಕ, ಕ. ಗಂ. ಸರಕಾರಿ
ಟ್ರೇನಿಂಗ ಕಾಲೇಜ, ಧಾರವಾಡ)

ಈ ಪುಸ್ತಕದಲ್ಲಿ ಪ್ರಾಥಮಿಕ ಶಾಲೆಗಳ ಎಲ್ಲ ವರ್ಗಗ[illegible] ಹಾಗು ಟ್ರೇನಿಂಗ ಕಾಲೇಜುಗಳ ೧ನೆಯ ವರ್ಷ[illegible] ಹೊಸ ಅಭ್ಯಾಸಪತ್ರಿಕೆಯಂತೆ ನೂಲುಗಾರಿಕೆಗೆ ಸಂಬಂ[illegible] ಸಿದ ಎಲ್ಲ ವಿಷಯಗಳನ್ನು ಸಂಗ್ರಹಿಸಿದೆ. ಹತ್ತಿಯ[illegible] ಬಿತ್ತಿಗೆಯನ್ನು ಮೊದಲುಗೊಂಡು ನೂಲು ಸಿದ್ಧವಾಗು[illegible] ವರೆಗಿನ ಎಲ್ಲ ಸಂಗತಿಗಳನ್ನು ಸಮಯೋಚಿತ ಚಿತ್ರ[illegible] ಗಳಿಂದಲೂ ಉದಾಹರಣೆಗಳಿಂದಲೂ ತಾಂತ್ರಿಕ ವಿ[illegible] ರಣೆಗೆ, ನೂಲುಗಾರಿಕೆಗೆ ಸಂಬಂಧಿಸಿದ ಗಣಿತ ಹಾಗ[illegible] ಲೆಕ್ಕಪತ್ರಗಳನ್ನೂ ಸೇರಿಸಿದೆ. ನೂಲುವ ವರ್ಗಗಳನ್ನು[illegible] ಸ್ವತಂತ್ರವಾಗಿ ನಡೆಯಿಸುವ ಬಗ್ಗೆ ಶಿಕ್ಷಕ ಶಿಕ್ಷಕಿಯರಿಗೂ[illegible] ಖಾದೀ ಕಾರ್ಯಕರ್ತರಿಗೂ ತುಂಬಾ ಉಪಯುಕ್ತ ವಾಗಿದೆ.

— ಎಮ್. ಕೆ. ಮೇಲಗಿರಿ —
ಕಮಲಾಪುರ ಭಾಗ, ಈಶ್ವರದೇವರ ಗುಡಿ ಓಣಿ,
— — ಧಾ ರ ವಾ ಡ — —

ಸರಕಾರದಿಂದ ಟ್ರೇನಿಂಗ ಕಾಲೇಜುಗಳಿಗೆ '**ಪೂರಕವಾಚನ**'ವೆಂದು ಮಂಜೂರಾಗಿದೆ.

' ಶಾರೀರಿಕ ಶಿಕ್ಷಣ '

ಪ್ರಕಾಶಕರು :

ಶ್ರೀ. ಭೀ. ನ. ಮಣ್ಣೂರ	**ಶ್ರೀ. ಜಿ. ಬಿ. ನವಲೂರ**
ಪ್ರ್ಯಾಕ್ಟಿಸಿಂಗ್‌ಸ್ಕೂಲ, ಟ್ರೇ. ಕಾಲೇಜ,	ಫಿಜಿಕಲ್ ಟೀಚರ, ಬಾಸೆಲ್‌ಮಿಶನ್
ಧಾರವಾಡ.	ಹಾಯಸ್ಕೂಲ, ಧಾರವಾಡ.

ಶಾರೀರಿಕ ಶಿಕ್ಷಣದ ಹೊಸ ಅಭ್ಯಾಸಕ್ರಮಕ್ಕನುಸರಿಸಿ ಬರೆದ,
ನೂರಾರು ಚಿತ್ರಗಳಿಂದ ಕೂಡಿದ, ಸುಂದರ ಪುಸ್ತಕವು.

ಎಲ್ಲ ಶಿಕ್ಷಕರೂ ಇದರ ಲಾಭವನ್ನು ಪಡೆಯಲೇಬೇಕು.

ಬೆಲೆ : ೨—೦—೦

ಪುಸ್ತಕ ದೊರೆಯುವ ಸ್ಥಳ :

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಭಾರತ ಬುಕ್-ಡಿಪೊ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪುಟ ೯೦ | ಡಿಸೆಂಬರ ೧೯೫೦ | ಸಂಚಿಕೆ

ಜನಹಿತವ ಗೈಸಿ ಬಾಳಿಸೊ

ಪ್ರತಿಯೊಂದು ಕಾರ್ಯವನ್ನೂ ದೇವರ ಪ್ರಾರ್ಥನೆಯಿಂದ ಪ್ರಾರಂಭಿಸುವದು ಭಾರತೀಯ ಸಂಸ್ಕೃತಿಯ ಪ್ರತೀಕ. ಆದುದರಿಂದ ಜೀವನ ಶಿಕ್ಷಣದಲ್ಲಿಯೂ ಪ್ರಾರ್ಥನೆಗೆ ಅಗ್ರ ಸ್ಥಾನವಿದೆ. ನಮ್ಮ ಪ್ರಾರ್ಥನೆಯಾದರೂ ಎಂಥದಿರಬೇಕು ? ತನ್ನ ವೈಯಕ್ತಿಕ ಉನ್ನತಿಗಾಗಿ ಪ್ರಾರ್ಥಿಸಬೇಕೇ ? ಹಾಗೆ ಪಾರ್ಥಿಸಿದಲ್ಲಿ ಅದೂ ಒಂದು ಸ್ವಾರ್ಥದ ಕೆಲಸವೇ ಆಗುವುದು. ನಿಸ್ವಾರ್ಥದ ಪ್ರಾರ್ಥನೆಯೇ ದೇವರಿಗೆ ಪ್ರಿಯವಾದುದು. ಜನಹಿತವನ್ನು ಮಾಡಿಸುವ ಶಕ್ತಿಯನ್ನು ದಯಪಾಲಿಸೆಂದು ದೇವರನ್ನು ಬೇಡುವುದೇ ನಿಜವಾದ ಪ್ರಾರ್ಥನೆ. ದೇವರಿಂದ ಜನಹಿತ ಸಾಧಿಸುವ ಶಕ್ತಿಯನ್ನು ಬೇಡಿಕೊಂಡು, ಅದನ್ನು ಪಡೆದು, ಅದರಿಂದ ಜನಹಿತ ಮಾಡಿ ಸವೆಯುವುದರಲ್ಲಿಯೇ ಸಾಯುಜ್ಯವಿದೆ. ಜನಹಿತ ಮಾಡಿ ಸತ್ತರೇನೇ ಜನರು ಅಳುವರು, ಇಲ್ಲದಿದ್ದರೆ ಹೋಯಿತು ಪೀಡಾ ಎಂದು ತಿರಸ್ಕರಿಸಿ ನಗುವರು. ಸತ್ತಮೇಲೆಯೂ ನಾಚಿಕೆಗೇಡಾಗುವುದು ಮಾನವತೆಯಲ್ಲ. ಆದುದರಿಂದ ನಾವು ಸದಾ ದೇವರನ್ನು ಜನಹಿತ ಗೈಸಿ ಬಾಳಿಸೆಂದು ಪಾರ್ಥಿಸುವದು ವಿಹಿತವಾದುದು. ಅದಕ್ಕಾಗಿ ಕೆಳಗಿನ ನುಡಿಯು ನಮ್ಮ ಪ್ರಾರ್ಥನೆಯಾದರೆ ಒಳಿತೆಂದು ತೋರುತ್ತದೆ.

ಜನರೆಲ್ಲ ನಗುತಿರಲು ।
ಜನನದಲಿ ನಾನತ್ತೆ ॥
ಜನಹಿತವ ಗೈಸಿ ಬಾಳಿಸೊ; ಮಡಿವಲ್ಲಿ
ಜನರಳಲಿ ನನಗೆ ಸರ್ವೇಶ ॥

—ಕೆ. ಜಿ. ಕುರ್ತಕೋಟಿ

ಸಂಪಾದಕೀಯ

ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳ ಮುಖ್ಯಾಧ್ಯಾಪಕರ ತರಬೇತಿ

ಮುಂಬಯಿ ರಾಜ್ಯದಲ್ಲಿ ವೃತ್ತಿಮೂಲ ಶಿಕ್ಷಣ, ವರ್ಧಾ ರಾಷ್ಟ್ರೀಯ ಶಿಕ್ಷಣ ಅಥವಾ ಜೀವನ ಶಿಕ್ಷಣವು ಸಾರ್ವತ್ರಿಕವಾಗಬೇಕೆಂಬ ಧೋರಣೆಯನ್ನು ಮುಂಬಯಿ ಸರಕಾರವು ತನ್ನ ಮುಂದೆ ಇಟ್ಟುಕೊಂಡು ಕಾರ್ಯ ಪ್ರವೃತ್ತವಾಗಿದೆಯೆಂಬ ಸಂಗತಿ ಸರ್ವರಿಗೂ ತಿಳಿದ ವಿಷಯವಾಗಿದೆ. ಜೀವನ ಶಿಕ್ಷಣವು ಸಾರ್ವತ್ರಿಕವಾಗಬೇಕಾದರೆ ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳಲ್ಲಿ ತರಬೇತಿಯನ್ನು ಹೊಂದುತ್ತಿರುವವರಿಗೆ ಅದರ ನಿಜವಾದ ತತ್ವಗಳು ಮನವರಿಕೆಯಾಗಬೇಕಾದುದು, ಜೀವನ ಶಿಕ್ಷಣದ ಬಗೆಗೆ ಅವರಲ್ಲಿ ಶ್ರದ್ಧೆಯುಂಟಾಗಬೇಕಾದುದು ಆವಶ್ಯಕ. ಇದಕ್ಕೋಸ್ಕರ ಟ್ರೇನಿಂಗ ಸಂಸ್ಥೆಗಳಲ್ಲಿ ವಿದ್ಯಾದಾನ ಮಾಡುವದಕ್ಕಾಗಿ ಜೀವನ ಶಿಕ್ಷಣದಲ್ಲಿ ತರಬೇತಿಯನ್ನು ಹೊಂದಿದ ಪದವೀಧರರನ್ನೇ ವಿಶೇಷತಃ ನಿಯಮಿಸಲಾಗುತ್ತಿದೆ. ಈ ಸಂಗತಿಯೂ ಅನೇಕರಿಗೆ ಗೊತ್ತಿದ್ದ ವಿಷಯ.

ಜೀವನ ಶಿಕ್ಷಣಲ್ಲಿ ತರಬೇತಿ ಹೊಂದಿದ ಪದವೀಧರ ಅಧ್ಯಾಪಕರ ಕಾರ್ಯದ ಮೇಲ್ವಿಚಾರಣೆಯನ್ನು ಸರಿಯಾಗಿ ಮಾಡುವುದಕ್ಕಾಗಿ ಟ್ರೇನಿಂಗ ಸಂಸ್ಥೆಗಳ ಮುಖ್ಯಾಧ್ಯಾಪಕರಿಗೂ ಜೀವನ ಶಿಕ್ಷಣದ ತತ್ತ್ವಗಳು ಹಾಗು ಅವುಗಳ ಕಾರ್ಯಾಚರಣೆ ತಿಳಿದಿರುವುದು ಅವಶ್ಯವೆಂದು ಕಂಡುಬಂದುದರಿಂದ ಮುಂಬಯಿ ರಾಜ್ಯದ ವಿದ್ಯಾಖಾತೆಯು ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳ ಮುಖ್ಯಾಧ್ಯಾಪಕರಿಗಾಗಿ ಜೀವನ ಶಿಕ್ಷಣದಲ್ಲಿ ಅಲ್ಪಾವಧಿ ತರಬೇತಿಯ ಯೋಜನೆಯನ್ನು ಮಾಡಿತು. ಆ ಮೇರೆಗೆ ಧಾರವಾಡದಲ್ಲಿ ಜೀವನ ಶಿಕ್ಷಣ ಕೇಂದ್ರದಲ್ಲಿ ಕನ್ನಡ ನಾಡಿನ ಎಲ್ಲ ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳ ಮುಖ್ಯಾಧ್ಯಾಪಕರ ಅಲ್ಪಾವಧಿ ತರಬೇತಿಯು ಪ್ರಾರಂಭವಾಗಿ ಮುಕ್ತಾಯವಾಯಿತು. ಅದರ ವರದಿಯು ಈಸಂಚಿಕೆಯಲ್ಲಿ ಬೇರೆಡೆಯಲ್ಲಿ ಕೊಡಲ್ಪಟ್ಟಿದೆ. ಇದೂ ಅಲ್ಲದೆ ಈ ಅಲ್ಪಾವಧಿ ತರಬೇತಿಯನ್ನು ಪಡೆದಕೆಲವರು ಮುಖ್ಯಾಧ್ಯಾಪಕರ ಜೀವನ ಶಿಕ್ಷಣ ವಿಷಯಕ ಲೇಖಗಳನ್ನೂ ಕೊಡಲಾಗಿದೆ. ಅವುಗಳನ್ನು ನೋಡಲಾಗಿ ಟ್ರೇನಿಂಗ ಸಂಸ್ಥೆಗಳ ಮುಖ್ಯಾಧ್ಯಾಪಕರು ಪಡೆದ ತರಬೇತಿಯ ಪರಿಚಯವೂ ಅವರ ವಿಚಾರ ಸರಣಿಯೂ ಓದುಗರಿಗೆ ಗೊತ್ತಾಗುವವು ಮತ್ತು ವಿಶೇಷತಃ ಪ್ರಾಥಮಿಕ ಶಿಕ್ಷಕರಿಗೆ ಅವು ಮಾರ್ಗದರ್ಶಕವೂ ಆಗುವವು ಎಂದು ನಮ್ಮ ಭಾವನೆ.

ಈ ಸಂಚಿಕೆಯಲ್ಲಿ ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳ ಮುಖ್ಯಾಧ್ಯಾಪಕರು ವ್ಯಕ್ತಗೊಳಿಸಿದ ವಿಚಾರಗಳನ್ನು ಕಾರ್ಯರಂಗಕ್ಕೆ ಶ್ರದ್ಧೆಯಿಂದ ಇಳಿಸುವರೆಂದು ನಂಬಲಾಗಿದೆ ಮತ್ತು ಪ್ರಾಥಮಿಕ ಶಿಕ್ಷಕರು ತಮ್ಮ ಸಂಸ್ಥೆಗಳ ಮುಖ್ಯಾಧ್ಯಾಪಕರಿಂದ ಹಾಗೂ ಅವರ ಸಹಾಧ್ಯಾಪಕ ವರ್ಗದಿಂದ ಜೀವನ ಶಿಕ್ಷಣವನ್ನು ಶ್ರದ್ಧೆಯಿಂದ ಪಡೆದು ಅದನ್ನು ಯಶಸ್ವಿಯಾಗಿಸಲು ಸಹಕರಿಸುವರೆಂದೂ ನಂಬಲಾಗಿದೆ.

ಕೃತಜ್ಞತೆ:

ನಮ್ಮ ಬಿನ್ನಹಕ್ಕೆ ಓಗೊಟ್ಟು ಲೇಖಗಳನ್ನು ಬರೆದು ಕಳುಹಿದ ಟ್ರೇನಿಂಗ ಕಾಲೇಜದ ಮುಖ್ಯಾಧ್ಯಾಪಕರಿಗೂ ಈ ವಿಶಿಷ್ಟ ಸಂಚಿಕೆಯನ್ನು ಹೊರಡಿಸಲು ನೆರವಾದ ಜೀವನ ಶಿಕ್ಷಣ ಕೇಂದ್ರದ ಕುಲಪತಿ ಶ್ರೀ ತೇರಗಾಂವಕರ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

ಕಂಬನಿ:

ಟ್ರೇನಿಂಗ ಸಂಸ್ಥೆಗಳ ಮುಖ್ಯಾಧ್ಯಾಪಕರ ಅಲ್ಪಾವಧಿ ತರಬೇತಿಯನ್ನು ಪಡೆದು ಮರಳಿದ ಕೆಲದಿನಗಳಲ್ಲಿಯೇ ಶ್ರೀ. ಕೌಲಗಿ (ಕೆ. ಇ. ಬೋರ್ಡ ಟ್ರೇ. ಕಾ. ಧಾರವಾಡ) ಅವರು ಹೃದಯಕ್ರಿಯೆ ನಿಂತು 'ಮರಳಿ ಮಣ್ಣಿಗೆ' ಹೋದರು. ನಮ್ಮೋರ್ವ ಸಹಪಾಠಿ ಜೀವನ ಶಿಕ್ಷಣದ ಪ್ರಗತಿಯ ಕಾರ್ಯಕ್ಕೆ ಇಲ್ಲದಂತಾಗಿ ನಮಗೆ ಅತೀವ ದುಃಖವೆನಿಸುತ್ತದೆ. ಅವರ ಮನೆತನದವರಿಗಾದ ದುಃಖದಲ್ಲಿ ನಾವೂ ಸಮಭಾಗಿಗಳಾಗಿದ್ದೇವೆ. ದೇವರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಜೀವನ ಶಿಕ್ಷಣದ ಹಿನ್ನೆಲೆಯಾದ

ಗಾಂಧಿಯವರ ಅರ್ಥಶಾಸ್ತ್ರ

ಹಾಗೂ

ಆಧುನಿಕ ಯಂತ್ರ ಯುಗ

ಲೇಖಕರು : ಶ್ರೀ. ಕಟ್ಟಿ ಶ್ಯಾಮರಾಯರು

ವಿಷಯದ ಪ್ರಾರಂಭದಲ್ಲಿ ನಾಗಕರಿಕತೆ ಹಾಗೂ ಸಂಸ್ಕೃತಿ ಇವುಗಳ ಅರ್ಥವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವದು ಅಗತ್ಯವಿದೆ. ಆಹಾರ ಆಶ್ರಯ, ಆಚ್ಛಾದನ, ಗಂಡಾಂತರದಿಂದ ಸಂರಕ್ಷಣೆ. ಈ ಮೂಲಭೂತವಾದ ಬೇಡಿಕೆಗಳ ಸ್ವಾಭಾವಿಕ ಪೂರಯಿಕೆಗೆ ವ್ಯಯವಾಗುತ್ತಿರುವ ಮನುಷ್ಯನ ಶಕ್ತಿಯನ್ನು ಹೆಚ್ಚೆಚ್ಚು ಉಳಿಸಿಕೊಳ್ಳುವ ದಿಶೆಯಲ್ಲಿ ನಾಗರಿಕತೆಯ ಮುನ್ನಡೆಯುಂಟಾಗಿದೆ.

ಮೊಟ್ಟಮೊದಲಿಗೆ ಬೇಟೆಗಾರ ಮತ್ತು ಗುಳೇಕಾರನ ವೃತ್ತಿಯಲ್ಲಿ ಶಾರೀರಿಕ ಬೇಡಿಕೆಗಳನ್ನು ತೃಪ್ತಿಪಡಿಸುವದರೊಂದರ ಹೊರ್ತುಪಡಿಸಿ ಬೇರೆ ಯಾವದೊಂದು ವಿಷಯದ ಬಗ್ಗೆ ಆಲೋಚಿಸಲಿಕ್ಕೆ ಮನುಷ್ಯನಿಗೆ ಅತ್ಯಲ್ಪ ಸಮಯವೂ ಉತ್ಸಾಹವೂ ಉಳಿಯುತ್ತಿದ್ದವು. ಈ ಶಾರೀರಿಕ ಬೇಡಿಕೆಗಳನ್ನು ಸುಲಭವಾಗಿ ಪೂರ್ತಿ ಮಾಡಿಕೊಳ್ಳುವದಕ್ಕೆ ಮನುಷ್ಯನು ಮನೆಗಳನ್ನು ಕಟ್ಟುವದನ್ನೂ ಬಟ್ಟೆಗಳನ್ನು ನೇಯುವದನ್ನೂ ಆಹಾರ ಧಾನ್ಯಗಳನ್ನು ಬೆಳೆಯುವದನ್ನೂ ಅಡಿಗೆ ಮಾಡುವದನ್ನೂ ಕಲಿತನು. ಇದಕ್ಕಾಗಿಯೇ ಆತನು ಗಾಡಿ, ಸೊನ್ನೆ, ಗಡೆ, ನಿಚ್ಚಣಿಕೆ, ಪಾತ್ರ, ಪಡಗ, ರಂಟೆ ಕುಂಟೆ; ಮುಂತಾದ ಯುಕ್ತಿಗಳನ್ನು ಶೋಧಿಸಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಆಯಾಸವಿಲ್ಲದೆ ಹೋಗುವದಕ್ಕೂ ಆಳದಲ್ಲಿನ ಸೆಲೆಗಳಿಂದ ನೀರನ್ನು ಮೇಲಕ್ಕೆತ್ತುವದಕ್ಕೂ ಎತ್ತರದ ಸ್ಥಳಗಳನ್ನು ಹತ್ತುವದಕ್ಕೂ; ಭೂಮಿಯಲ್ಲಿ ಬೆಳೆಯನ್ನು ತೆಗೆದುಕೊಳ್ಳುವದಕ್ಕೂ ಅನುವು ಮಾಡಿಕೊಂಡನು.

ಈ ಎಲ್ಲ ಶೋಧಗಳ ಕಾರಣದಿಂದ ಹಾಗೂ ಅವೆಲ್ಲವುಗಳ ಒಟ್ಟು ಪರಿಣಾಮದ ಮೂಲಕ ಮನುಷ್ಯನಿಗೆ ಈ ಸೃಷ್ಟಿಯ ಅದ್ಭುತ ರಹಸ್ಯಗಳ ಬಗೆಗೂ ಮಾನವ ಜೀವನದ ಗುಟ್ಟಿನ ಬಗೆಗೂ ಆಲೋಚಿಸಲಿಕ್ಕೆ ಮತ್ತು ತನ್ನ ಭಾವನೆಗಳಿಗೆ ಒಂದಿಲ್ಲೊಂದು ರೀತಿಯಿಂದ ವ್ಯಕ್ತರೂಪವನ್ನು ಕೊಡಲಿಕ್ಕೂ ಅವಕಾಶವು ದೊರೆಯಿತು. ಈ ಅವಕಾಶದ ಯೋಗ್ಯವಾದ ವಿನಿಯೋಗವು ಕಲೆ; ಸಾಹಿತ್ಯ, ತತ್ವಜ್ಞಾನ, ಧರ್ಮ, ನೀತಿ ಮುಂತಾದ್ದರಲ್ಲಿ ಫಲಿಸಿತು. ಹೀಗೆ ಮಾನವನ ಉದ್ಯೋಗಗಳು ಬಹುಮುಖವಾಗಿ ಬೆಳೆದು ಮಾನವನ ಸಮಾಜ ಸಂಘಟನೆಯಲ್ಲಿ ಒಂದು ಬಗೆಯ ಶ್ರಮವಿಭಾಗದ ತತ್ವವು ನೆಲೆಸಿರಬಹುದು. ಒಂದೊಂದು ಗುಂಪಿನ ಜನರು ಪರಸ್ಪರ ಹಿತವನ್ನು ದಕ್ಷತೆಯಿಂದ ನೋಡಿಕೊಳ್ಳುತ್ತಿರಬಹುದು. ಈ ಸಂಘನಿಷ್ಠೆಯೇ ಮುಂದೆ ವ್ಯಕ್ತಿಯ ಹಿತವು ಸಮಾಜದ ಹಿತದಿಂದ ಬೇರೆಯಲ್ಲ ಎಂಬ ವಿಚಾರಕ್ಕೆ ಪೋಷಕವಾಗಬೇಕಿತ್ತು. ವ್ಯಕ್ತಿ ಸಮಾಜಗಳ ಸಮರಸವೇ ನಿಜವಾದ ಸಂಸ್ಕೃತಿಯ ಲಕ್ಷಣವೆಂದು ಹೇಳಬಹುದು. ಇಂತಹ ಸಂಸ್ಕೃತಿಯು ಇನ್ನೂ ಮಾನವನ ಸವಿಗನಸಾಗಿಯೇ ಉಳಿದಿರುವದಕ್ಕೆ ಪಾಶ್ಚಾತ್ಯ ಸಂಸ್ಕೃತಿಯ ಯಂತ್ರಗಳ ಅನಿರ್ಬಂಧ ಬೆಳವಣಿಗೆಯು ಒಂದು ಕಾರಣವಾಗಿದೆ. ನಾಗರಿಕತೆಯು ಪ್ರಥಮ ಪ್ರಯತ್ನಗಳಿಂದ ಬಿಡುಗಡೆ ಹೊಂದಿದ ಮಾನವನ ಆಚಾರ, ವಿಚಾರ, ಉಚ್ಚಾರಗಳ ಫಲವೇ ಸಂಸ್ಕೃತಿಯೆಂದು ಸಾಮಾನ್ಯವಾಗಿ ಹೇಳಬಹುದು.

ಮಾನವ ಜೀವನದಲ್ಲಿ ದುಡಿತಕ್ಕೆ ಯಾವ ಸ್ಥಾನವಿದೆ ? ನಾಗರಿಕತೆಯಲ್ಲಿ ದುಡಿತವು ಒಂದು ಬಿಡಲ್ಪಡಬಾರದ ಕರ್ಮ, ಅನಿವಾರ್ಯವಾದ ಆದರೆ ಅವಶ್ಯಕವಾದ ಒಂದು ಕೆಡಕು ಎಂದು ಗಣಿಸಲ್ಪಟ್ಟಿದೆ. ಸಾಮಾನ್ಯ ಮನುಷ್ಯನ ಕಣ್ಣಿಗೆ ವಿಲಾಸ ಜೀವನವೇ ಆಕರ್ಷಕವಾಗಿ ಆದರ್ಶಪ್ರಾಯವಾಗಿ ಕಾಣುವದು. ಪ್ರಾಚೀನ ನಾಗರಿಕತೆಯ ಕಾಲದಲ್ಲಿ ಜಗತ್ತಿನಲ್ಲಿ ಎಲ್ಲಿಡೆಗೂ ಈ ತರದ ಕಲ್ಪನೆಯು ರೂಢವಾಗಿತ್ತೆಂದರೂ ಅಡ್ಡಿ ಇಲ್ಲ. ದುಡಿತದ ಈ ಕಲ್ಪನೆಯನ್ನು ಟಾಲ್‌ಸ್ಟಾಯ್ ಅವರೂ ಅವರನ್ನು ಮೆಚ್ಚಿ ಗಾಂಧಿಯವರೂ ಸ್ಪಷ್ಟವಾಗಿ ಅಲ್ಲಗಳೆದರು. ನಿಷ್ಕ್ರಿಯವಾದ ವಿಲಾಸ ಜೀವನಕ್ಕಿಂತ ಸಕ್ರಿಯವಾದ ಕಷ್ಟ ಜೀವನವು ಶ್ರೇಷ್ಠವೆಂದು ಅವರ ಅಭಿಪ್ರಾಯ. ಏಕಂದರೆ ಮಾನವ ಜೀವನದ ಸಾರ್ಥಕ್ಯವು ಪ್ರಾಮಾಣಿಕವಾದ, ಮನಃಪೂರ್ವಕವಾದ ಈಶಾರ್ಪಿತವೆಂಬ ಭಾವನೆಯಿಂದ ಕೂಡಿದ ಸೃಜನಶೀಲ ನಿರಂತರವಾದ ಪ್ರಯತ್ನದಲ್ಲಿಯೇ ಇದೆ. ಬುದ್ಧಿ ಜೀವಿಯೂ ಈ ವಿಧದ ನಿರಂತರ ಪ್ರಯತ್ನವನ್ನೆಸಗಿದರೆ ಅವನ ಜೀವನವೂ ಸಾರ್ಥಕವೇ. ಉದ್ಯೋಗ ಮೂಲಕ ಶಿಕ್ಷಣದಲ್ಲಿ ಈ ಪ್ರಶಸ್ತವಾದ ಭಾವನೆಯು ಅಡಗಿದೆ. ಹಳ್ಳಿಗನ ಕೆಲಸವನ್ನು ಮೆಚ್ಚುವದರಿಂದ ಹಳ್ಳಿಗನ ಜೀವನವನ್ನು ಮೆಚ್ಚುವಂತಾಗಬೇಕು. ಗ್ರಾಮಕೈಗಾರಿಕೆಗಳು ಊರ್ಜಿತಕ್ಕೆ ಬರಬೇಕು. ಗ್ರಾಮ ಜೀವನವು ಭಾರತೀಯ ಸಂಸ್ಕೃತಿಯ ಪರಂಪರೆಗೆ ಹೊಂದಿಕೊಂಡು ಸರಳಜೀವನ, ಉದಾತ್ತ ದಾಸೋಹಭಾವ ಈ ಆದರ್ಶವನ್ನು ಪ್ರಪಂಚಕ್ಕೆಲ್ಲ ಎತ್ತಿ ಹಿಡಿಯುವಂತಾಗಬೇಕು. ಸತ್ಯ ಜೀವನ, ಸುಂದರ ಜೀವನ, ಕಲ್ಯಾಣಕರ ಜೀವನ ಇವು ನಮ್ಮ ಆದರ್ಶಗಳಾಗಬೇಕು. ಅಪ್ರಯೋಜಕವಾದ ನಿಷ್ಕ್ರಿಯಾತ್ಮಕವಾದ ವಿದ್ಯೆಯಿಂದ ಜನರ ಮನಸ್ಸನ್ನು ತಿರುಗಿಸಬೇಕಾದರೆ ಮೂಲಶಿಕ್ಷಣಕ್ಕೆಯೇ ಅದು ಸಾಧ್ಯ. ಈ ವಿಧದ ಗ್ರಾಮ ಜೀವನದ ಪುನರ್ಘಟನೆಗೆ, ಅತಿ ವ್ಯಾಪ್ತವಾದ ಯಂತ್ರೀಕರಣದ ನಿಯಂತ್ರಣವು ಅವಶ್ಯವಾದುದು.

ಇನ್ನು ಯಂತ್ರಗಳ ಪ್ರಯೋಜನವನ್ನು ಕುರಿತು ವಿಚಾರ ಮಾಡೋಣ. ರಂಟೆ, ಕುಂಟೆ, ಚಕ್ರ, ಸೂಜಿ, ಗಡೆ, ಇಳುಕಲಿನ ಘಟ್ಟ ಇವು ಸಹ ಯಂತ್ರಗಳೇ. ಮನುಷ್ಯನ ತೋಳಿನ ಬಲವನ್ನು ಹೆಚ್ಚಿಸುವ ಹೆಚ್ಚುಕಡಿಮೆ ಸೂಕ್ಷ್ಮವಾಗಿರುವ ಯಾವದೇ ಉಪಕರಣವು ಯಂತ್ರವೆನ್ನಿಸಿಕೊಳ್ಳುವದು. ಆದ್ದರಿಂದ ಮಾನವ ಜೀವನಕ್ಕೆ ಒಂದಿಲ್ಲೊಂದು ಬಗೆಯ ಹಲವು ಯಂತ್ರಗಳು ಬೇಕೇಬೇಕು. ಯಂತ್ರಗಳು ಮನುಷ್ಯನ ಶ್ರಮವನ್ನು ಉಳಿಸುತ್ತವೆ; ಉಳಿದ ಸಮಯದಲ್ಲಿ ಹೆಚ್ಚಿನ ಉದ್ಯೋಗದಲ್ಲಿ ತೊಡಗುವದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡುತ್ತವೆ. ಈ ಬಿಡುವಿನ ಸಮಯದ ಸದ್ವ್ಯಯ ಅಥವಾ ಅಪವ್ಯಯ ಮಾಡುವದರಲ್ಲಿ ಸಂಸ್ಕೃತಿಯ ಗುಣಾವಗುಣಗಳು ಸೇರಿಕೊಂಡಿವೆ. ಈ ಯಂತ್ರಗಳು ಪಾಶ್ಚಾತ್ಯ ದೇಶಗಳಲ್ಲಿ ಚಿತ್ರವಿಚಿತ್ರವಾದವುಗಳೂ ಸೂಕ್ಷ್ಮಸೂಕ್ಷ್ಮ ತರವಾಗಿಯೂ ಬೆಳೆದು ಬಂದಿವೆ; ಮಾನವನ ಬುದ್ಧಿಯ ಚಾತುರ್ಯವೂ ಅಗಾಧವಾಗಿ ಹೆಚ್ಚಿದೆ; ಅದರೊಂದಿಗೆ ಸಂಘಟಿತ ಜ್ಞಾನ ಇಲ್ಲವೆ ವಿಜ್ಞಾನದ ಅದ್ಭುತವಾದ ಬೆಳವಣಿಗೆಯಾಗಿದೆ. ಆದರೆ ಈ ಯಂತ್ರಗಳು ಕೈಗಾರಿಕೆಗಳನ್ನೂ ಮನೆಯಲ್ಲಿ ನಡೆಸುವ ಎಷ್ಟೋ ಉದ್ಯೋಗಗಳನ್ನೂ ಕೆಲಸಕ್ಕೆ ಬಾರದಂತೆ ಮಾಡಿವೆ. ಉಗಿಯ ಶಕ್ತಿ ಹಾಗು ವಿದ್ಯುತ್ತಿನ ಶೋಧದಿಂದ ಉದ್ಯೋಗಗಳಲ್ಲಿ ವಿಪರೀತ ಮಾರ್ಪಾಟಾಗಿ ಔದ್ಯೋಗಿಕ ಕ್ರಾಂತಿಯು ರೂಪುಗೊಂಡಿದೆ. ಸುಖ ಜೀವನಕ್ಕಾಗಿ ಬೇಕಾಗುವ, ಮನುಷ್ಯನು ಬೇಡುವ ನಾನಾ ವಿಧದ ಪದಾರ್ಥಗಳನ್ನು ಒದಗಿಸುವದರಲ್ಲಿ ಯಂತ್ರಗಳೂ ಕಾರಖಾನೆಗಳಲ್ಲಿ ಕಾರ್ಮಿಕರೂ ಹೆಚ್ಚೆಚ್ಚಾಗಿ ದುಡಿಯುವದೇ ಈ ಯುಗದ ಮಹಿಮೆಯಾಗಿದೆ. ಹೊಗೆಯನ್ನು ಕಾರುವ ಕಾರಖಾನೆಯ ಕೊಳವೆಗಳೇ ಎಲ್ಲೆಲ್ಲಿಯೂ ಕಾಣಿಸುವ ದೊಡ್ಡ ದೊಡ್ಡ ಶಹರಗಳು ಬೆಳೆಯುತ್ತಲಿವೆ; ವಿಶಾಲವಾದ ಸೃಷ್ಟಿಯ ಸುಂದರ ಸಹವಾಸವು ಅಪರೂಪವಾಗಿದೆ; ಹಳ್ಳಿಯ ಶಾಂತಿ ಸೌಖ್ಯಗಳು ಮಾಯವಾಗಿವೆ. ಸಾಮಾಜಿಕ ಜೀವನವು ಹೆಚ್ಚು ಸಾಂಕೇತಿಕವೂ ಕೃತ್ರಿಮವೂ ಜಟಿಲವೂ ಆಗಿದೆ; ಮಾನವನ ಬೇಕುಬೇಕೆಂಬ ವಿಷಯ ಸುಖದ ವಿಲಾಸ ಜೀವನದ ಬೇಡಿಕೆಗಳು ಮಿತಿಮೀರಿ ಬೆಳೆದಿವೆ. ಹೀಗಾಗುವದು ನಿಜವಾದ ಸಂಸ್ಕೃತಿಗೆ ಪೋಷಕವಾದೀತೆ ?

ನಾಗರಿಕತೆಯ ಸುಖಸಾಧನಗಳಿಂದ ಮನುಷ್ಯನಿಗೆ ಬಿಡುವು ದೊರೆತರೂ ಅದರ ಉಪಯೋಗವನ್ನು ಕೇವಲ

ಲಾಸ ಜೀವನದಲ್ಲಿ ಮಾಡಿಕೊಳ್ಳುವದರತ್ತ ಜನರ ಪ್ರವೃತ್ತಿಯಾಗತೊಡಗಿದೆ. ಭೌತಿಕ ಸುಖಸಾಧನಗಳು ತಿಮೀರಿ ಬೆಳೆಯುವದರಿಂದ ಮಾನವನಿಗೆ ಜೀವನದ ಜವಾದ ಧ್ಯೇಯವು ಕಣ್ಮರೆಯಾಗಹತ್ತುವದು. ಯಂತ್ರ ಳು ಬೇಕು; ಉಕ್ಕು, ಸಿಮೆಂಟು ಮುಂತಾದ ಉದ್ಯೋ ಗಳಿಗೆ ದೊಡ್ಡದೊಡ್ಡ ಕಾರಖಾನೆಗಳೂ ಬೇಕು. ದೊಡ್ಡ ಯಂತ್ರಗಳಿಗೆ ಬೇಕಾಗುವ ಸಣ್ಣ ಯಂತ್ರಸಾಧ ನಗಳೂ ಕಾರಖಾನೆಗಳಲ್ಲಿಯೇ ತಯಾರಾಗಬಲ್ಲವು. ಡಿಯಾಳ, ರೇಡಿಯೊ, ಸಿನೆಮಾ, ಉಗಿಬಂಡಿ, ಮೋಟಾರ, ವಿಮಾನದ ಕಾರಖಾನೆಗಳು ಯಂತ್ರ ಳಿಂದಲೇ ಸಾಧ್ಯ. ಶಾಸ್ತ್ರೀಯ ವಿಷಯದ ಅಭ್ಯಾಸಕ್ಕೆ ನೇಕ ಪ್ರಕಾರದ ಉಪಕರಣ ಳು ಬೇಕಾಗುವವು. ವು ಯಂತ್ರಗಾರಿಕೆಯಿಂದಲೇ ಸಾಧ್ಯ. ಮನುಷ್ಯನ ನಾನಾಬಗೆಯ ರೋಗರುಜೆಗಳ ಚಿಕಿತ್ಸೆಗಾಗಿ ಯಂತ್ರ ಳು ಬೇಕು. ಯುದ್ಧದಲ್ಲಿ ಬೇಕಾಗುವ ತೋಫು, ಮಾನ, ಟ್ಯಾಂಕು, ಜಲಂತರ್ಗಾಮಿ, ಬಾಂಬುಗಳು ಮುಂತಾದ ಶಸ್ತ್ರಾಸ್ತ್ರಗಳಿಗೂ ಯಂತ್ರಗಾರಿಕೆಯೇ ಮೂಲ. ಆದರೆ ಯಂತ್ರಗಾರಿಕೆಯಲ್ಲಿ ದೇಶದ ಜನರ ೇಡಿಕೆಗಿಂತ ಎಷ್ಟೋ ಹೆಚ್ಚು ಪಟ್ಟು ಒಂದೇ ವಿಧವಾದ ಾಮಾನುಗಳು ತಯಾರಾಗುವದರಿಂದ ಅವುಗಳಿಗೆ ತರ ದೇಶಗಳ ಜನರು ಗಿರಾಕಿಗಳಾಗಬೇಕು. ಅಥವಾ ವರು ತಯಾರು ಮಾಡುವ ಸಾಮಾನುಗಳಿಗಿಂತ ಡಿಮೆ ಬೆಲೆಗೆ ಅವನ್ನು ನಾವು ಮಾಡಬೇಕು. ಇದಕ್ಕೆ ರಡನೇ ದೇಶದ ಜನರು ಕೆಲಮಟ್ಟಿಗೆ ಪರಾವಲಂಬಿ ಳಾಗಬೇಕು ಎಂದರೆ ಅವರ ದುರ್ಬಲತೆಯ ಲಾಭ ನ್ನು ನಾವು ಪಡೆಯಬೇಕಾಗುವದು. ಇಲ್ಲವೆ ಜಪಾನಿ ನರಂತೆ ನಮ್ಮ ಜೀವನದ ಮಟ್ಟವನ್ನು ಕನಿಷ್ಠಕ್ಕಿಳಿಸಿ ಡಿಮೆ ಬೆಲೆಗೆ ನಮ್ಮ ಕೈಗಾರಿಕೆಗಳನ್ನು ಸ್ಪರ್ಧೆಯಿಂದ ದೇಶದವರಿಗೆ ಮಾರಬೇಕಾಗುವದು. ಇವಲ್ಲದೆ ಯಂತ್ರಗಾರಿಕೆಯಿಂದ ಅಸಂಖ್ಯ ಜನರು ನಿರುದ್ಯೋಗಿ ಳಾಗುವರು. ಹೊಸ ಯಂತ್ರಗಳ ಶೋಧವಾಗಿ ಇದ ಲ್ಲಿ ಕೆಲವರಿಗೆ ಉದ್ಯೋಗವು ಸಿಕ್ಕುವದು. ಯಂತ್ರ ಂದ ನಿರುದ್ಯೋಗ, ಇದನ್ನು ನಿವಾರಿಸಲಿಕ್ಕೆ ಮತ್ತೆ ಷ್ಟಿನ ಯಂತ್ರಗಳು, ಅವುಗಳಿಂದ ಇನ್ನೂ ಹೆಚ್ಚು ರುದ್ಯೋಗ. ಹೀಗೆ ಈ ಅನಿಷ್ಟ ಪರಂಪರೆಯು ಬೆನ್ನು ಹತ್ತಿದ್ದೇ. ಯಂತ್ರದಿಂದ ಹುಟ್ಟಿದ ನಿರುದ್ಯೋಗ ಸಮಸ್ಯೆಯು ಪ್ರಪಂಚದೊಳಗಿಂದ ಪೂರ್ತಿಯಾಗಿ ಮಾಯವಾಗುವ ಲಕ್ಷಣವಿಲ್ಲ.

ಯಂತ್ರಗಳ ಅನಿರ್ಬಂಧ ಬೆಳವಣಿಗೆಯು ಕೆಲಸದಲ್ಲಿ ಪ್ರೀತಿ ಆನಂದಗಳನ್ನು ಕಡಿಮೆಮಾಡಿ ಮಾನವ ಜೀವನ ವನ್ನು ಕೂಡ ಒಂದು ಯಂತ್ರದ ಭಾಗದಂತೆ ಮಾಡಿ ಬಿಟ್ಟಿದೆ. ಮನುಷ್ಯನು ತನ್ನ ಸೃಜನಾತ್ಮಕ ಬುದ್ಧಿಶಕ್ತಿ ಯಿಂದ ಇಡಿಯ ಸಾಮಾನುಗಳನ್ನು ತನ್ನ ಕೈಗಳಿಂದ ಮಾಡಿ ನೋಡಿ ಅದರಿಂದ ಪಡೆಯುವ ಆನಂದ ಅಭಿ- ಮಾನಗಳಿಗೆ ಎರವಾಗಿದ್ದಾನೆ. ಆತನು ತನ್ನ ಆಯು- ಷ್ಯವನ್ನೆಲ್ಲ ಒಂದೇ ಒಂದು ಬಗೆಯ ಅತ್ಯಲ್ಪವಾದ ಅರ್ಥವಿಲ್ಲದ ಕೃತಿಯಲ್ಲಿ ಕಳೆಯಬೇಕಾಗುತ್ತದೆ. ಯಂತ್ರಗಳು ಹೆಚ್ಚು ಹೆಚ್ಚು ವಿಲಾಸದ ಸೌಕರ್ಯ ಗಳನ್ನು ಮಾನವನಿಗೆ ಸೂಚಿಸುತ್ತವೆ. ಹೀಗಾಗಿ ಮನು ಷ್ಯನು ಬಾಳುವೆಯ ಶ್ರೇಷ್ಠ ಪ್ರಯೋಜನದತ್ತ ವಿಮುಖ ನಾಗುವ ಗಂಡಾಂತರವೊಂದಿದೆ. ಯಂತ್ರಗಳ ಪರಿಮಿತ ವಾದ ಬೆಳವಣಿಗೆಯಿಂದ ಮನುಷ್ಯನಿಗೆ ಲಾಭವಾಗಿದೆ ಎಂಬ ಬಗ್ಗೆ ವಾದವಿಲ್ಲ. ಆದರಿಂದಲೇ ಈ ದಿನ ನಮ್ಮ ವಿಜ್ಞಾನ, ಕಲೆ, ಸಾಹಿತ್ಯ ಇವು ಹೇಳಿಕೊಳ್ಳುವಂಥ ಒಂದು ಮಾನವ ಸಂಸ್ಕೃತಿಯ ಲಕ್ಷಣಗಳಾಗಿ ಬೆಳಗು ತ್ತಿವೆ. ಆದರೆ ಅವುಗಳ ಅನಿಯಮಿತ ಬೆಳವಣಿಗೆಯಿಂದ ಅವು ಸಾಮ್ರಾಜ್ಯಲಾಲಸೆ, ಬಂಡವಲಶಾಹಿಕೆ ಹೆಚ್ಚಿಸುವ ವಲ್ಲದೆ ವರ್ಗಕಲಹಕ್ಕೆ ದಾರಿಯಾಗಿವೆ.

ಈ ಅನಿಷ್ಟ ಪ್ರವೃತ್ತಿಗೆ ತಡೆಹಾಕುವ ಕಾಲವು ಈಗ ಬಂದಿದೆ. ದೊಡ್ಡ ಪ್ರಮಾಣದಿಂದ ನಡೆಯುವ ಯಂತ್ರದ ಉದ್ಯೋಗಗಳು ಕೆಲವೊಂದು ಪರಿಮಿತಿಗೆ ಒಳಪಟ್ಟಿರಲಿ; ಅವು ಮಾನವೀಯ ಮೂಲಭೂತವಾದ ಒಂದು ಆಕಾಂಕ್ಷೆಯನ್ನು ಪೂರೈಸುತ್ತವೆ. ಹೆಚ್ಚಿನ ಧ್ಯೇಯ ಸಾಧನೆಗಾಗಿ ಮನುಷ್ಯನ ಪರಿಶ್ರಮಕ್ಕೆ ಅವಕಾ ಶವನ್ನು ಒದಗಿಸುವವು. ಇದೇ ನಾಗರಿಕತೆಯ ಮುಖ್ಯ ಲಕ್ಷಣ. ಆದರೆ ಯಂತ್ರಗಾರಿಕೆಯ ಉತ್ಪಾದನೆಗೆ ಕೆಲ ವೊಂದು ನಿಯಂತ್ರಣವನ್ನು ಹಾಕಿದರೆ ಮಾತ್ರ ಆದ ರಿಂದಾಗುವ ಅನಿಷ್ಟ ಪರಿಣಾಮಗಳನ್ನು ಬಹುಮಟ್ಟಿಗೆ ಕಡಿಮೆ ಮಾಡಬಹುದು.

ಪ್ರಾಥಮಿಕ ಶಿಕ್ಷಣ

ನಮ್ಮ ದೇಶವು ಹಳ್ಳಿಗಳ ನಾಡು ಹಾಗೂ ಒಕ್ಕಲತನವು ಹಳ್ಳಿಗರ ಮುಖ್ಯ ಉದ್ಯೋಗ. ನಮ್ಮ ಸಂಸ್ಕೃತಿಯು ಹಳ್ಳಿಯ ಜೀವನದ ಸ್ವಾತಂತ್ರ್ಯದ ಮೇಲೆ ಬಹು ...ವಸದಿಂದ ಊರಿ ನಿಂತಿದೆ. ಗಾಂಧೀಜಿಯವರ ಅರ್ಥಶಾಸ್ತ್ರ ವಿಚಾರಗಳು ಈ ಮೌಲಿಕ ಸಂಗತಿಗಳನ್ನು ಲಕ್ಷೀಕರಿಸುತ್ತವೆ. ಭಾರತ ಸಾಮ್ರಾಜ್ಯದಲ್ಲಿ ಹಳ್ಳಿಗಳ ಸ್ವಾಯತ್ತತೆ ಹಾಗು ಸ್ವಾವಲಂಬನ ಯಾವಾಗಲೂ ಕ್ಷೀಸಲ್ಪಟ್ಟಿವೆ. ಈ ಪುರಾತನ ನಾಡು ಒಂದರ ಹಿಂದೊಂದು ...ಷ್ಟೋ ಸಾಮ್ರಾಜ್ಯಗಳ ಆಳಿಕೆಗೆ ಒಳಪಟ್ಟಿದ್ದರೂ ಈ ಇಪ್ಪತ್ತನೆಯ ಶತಮಾನದಲ್ಲಿ ಕೂಡ ಹಳ್ಳಿಯ ಜೀವನವು ಮೂಲತಃ ಬದಲಾಗಿಲ್ಲ. ಇದರ ಕಾರಣವೇನೆಂದರೆ ಹಿಂದಿನ ರಾಜ್ಯಪರಿಪಾಲನೆಯ ಮುಖ್ಯಕರ್ತವ್ಯಗಳು ದೇಶವನ್ನು ಹೊರಗಿನ ಹಾಗು ಒಳಗಿನ ಗಂಡಾಂತರದಿಂದ ಸಂರಕ್ಷಣೆ ಮಾಡುವದು, ಕೆರೆ ಕಾಲುವೆ, ಧರ್ಮಶಾಲೆ ಮುಂತಾದ ಲೋಕೋಪಯೋಗಿ ಕೆಲಸಗಳನ್ನು ಕೈಕೊಳ್ಳುವದು ದೇಶದ ಕೈಗಾರಿಕೆಗಳಿಗೆ, ವ್ಯಾಪಾರೋದ್ಯೋಗಗಳಿಗೆ ಪ್ರೋತ್ಸಾಹನವೀಯುವದು, ಇಷ್ಟೇ ಆಗಿದ್ದವು. ಉಳಿದ ಕಾರ್ಯಗಳನ್ನು ಗ್ರಾಮ ಪಂಚಾಯತಿ ಮೊದಲಾದ ಸಂಘಗಳೇ ನಡೆಸುತ್ತಿದವು. ...ವು ಹಳ್ಳಿಯ ಸ್ವಾಯತ್ತತೆಯ ಆಡಳಿತವನ್ನು ಕೆಡಿಸುತ್ತಿರಲಿಲ್ಲ. ಇದರಿಂದ ಇಜಿಪ್ತ, ಚೀನ ಮುಂತಾದ ಉಳಿದ ಪುರಾತನ ಸಂಸ್ಕೃತಿಗಳು ನಾಮಶೇಷವಾಗಿ ಹೋಗಿದ್ದರೂ ಭಾರತೀಯ ಸಂಸ್ಕೃತಿಯು ಇನ್ನೂ ಜೀವಧಾರಣೆ ಮಾಡಿಕೊಂಡು ನಿಂತಿದೆ. ಹಳ್ಳಿಗಳ ಸ್ವಸಂಪೂರ್ಣತೆಗೆ ಆದಷ್ಟು ಧಕ್ಕೆ ಬರದಂತೆ ಆ ದೇಶದ ಆರ್ಥಿಕ ಯೋಜನೆಯನ್ನು ಮಾಡುವದೇ ಗಾಂಧಿಯವರ ಮುಖ್ಯ ತತ್ವವೆಂದು ಹೇಳಬಹುದು. ಹಳ್ಳಿಗರ ಮುಖ್ಯ ಉದ್ಯೋಗವು ಕೃಷಿಯಾದ್ದರಿಂದ ವರ್ಷದಲ್ಲಿ ಕೆಲವೊಂದು ದಿನಗಳಲ್ಲಿ ಅವರಿಗೆ ಪೂರ್ಣ ಕೆಲಸವಿರುವದಿಲ್ಲ. ಗ್ರಾಮಸ್ಥರು ತಮಗೆ ಬೇಕಾಗುವ ಧಾನ್ಯದವಸಗಳನ್ನು ತಾವೇ ಬೆಳೆಯಬೇಕು. ತಮ್ಮ ಬಟ್ಟೆಗಳನ್ನು ತಾವೇ ನೇಯಬೇಕು. ಒಕ್ಕಲತನಕ್ಕೆ ಉಪಕಾರಿಯಾದ ಬಡಿಗತನ, ಕಮ್ಮಾರಿಕೆ, ನೇಕಾರಿಕೆ ಮುಂತಾದ ಕೈಗಾರಿಕೆಯ ವ್ಯವಸಾಯಗಳು ಅವ್ಯಾಹತವಾಗಿ ಅಲ್ಲಿ ನಡೆಯಬೇಕು. ಸರಳಜೀವನ ಹಾಗೂ ನಿರ್ಮಲಾಂತಃಕರಣ ಇವು ಹಳ್ಳಿಗರ ಬಾಳುವೆಯ ಗುಣಗಳಾಗಿದ್ದವು. ಬಾಳುವೆಯ ಈ ಮಟ್ಟವು ಈಗ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣದಿಂದ ಬಹಳ ಕೆಳಕ್ಕೆ ಇಳಿದಿದೆ. ಪೌರ್ವಾತ್ಯ ಪಾಶ್ಚಾತ್ಯ ಸಂಸ್ಕೃತಿಗಳೊಳಗಿನ ಗುಣಗಳನ್ನಷ್ಟೇ ಸ್ವೀಕರಿಸಿ ನಮ್ಮದೇಶಕ್ಕೆ ಒಗ್ಗುವಂತಹ ಹೊಸದೊಂದು ಸಂಸ್ಕೃತಿಯನ್ನು ನಾವು ನಿರ್ಮಿಸಬೇಕಾಗಿದೆ. ಇದಕ್ಕಾಗಿ ಕೆಲವು ಉದ್ಯೋಗಗಳ ವಿಕೇಂದ್ರೀಕರಣವಾಗಬೇಕು. ಹಳ್ಳಿಗಳೆಲ್ಲ ನಷ್ಟವಾಗಿ ದೊಡ್ಡ ಶಹರಗಳು ಬೆಳೆಯುವದಕ್ಕೆ ದಾರಿಯಾಗಬಾರದು. ಹಳ್ಳಿಗಳ ಜೀವನವು ಸ್ವಯಂಪೂರ್ಣವಾದವರೆಯೇ ಭಾರತೀಯ ಸಂಸ್ಕೃತಿಯು ಪುನಃ ಜಗತ್ತಿಗೆ ತನ್ನ ಬೆಳಕನ್ನು ತೋರಬಹುದು. ಹಳ್ಳಿಯ ಕೈಗಾರಿಕೆಗಳಿಗೆ ಅವುಗಳ ಹಿಂದಿನ ವೈಭವದ ಸ್ಥಾನವು ಪುನಃ ದೊರೆಕಬೇಕು ಇನ್ನು ಈ ಗ್ರಾಮಗಳ ಸ್ವಯಂಪೂರ್ಣತೆಯನ್ನು ಆಚರಣೆಯಲ್ಲಿ ತರುವದಕ್ಕೆ ಕೆಲವು ವ್ಯವಹಾರಿಕ ಅಡಚಣಿಗಳು ಇವೆ ಉದಾಹರಣೆ-ಎಲ್ಲ ಆಹಾರ ಪದಾರ್ಥಗಳು ಅಥವಾ ಇತರ ಕಚ್ಚಾ ಮಾಲು ಎಲ್ಲ ಪ್ರದೇಶಗಳಲ್ಲಿ ಬೆಳೆಯುವದಿಲ್ಲ. ಬೆಳೆಯದಿದ್ದ ಗ್ರಾಮಗಳು ಸ್ವಯಂಪೂರ್ಣವಾಗುವ ಬಗೆ ಹೇಗೆ ? ಇಂಥ ಪರಿಸ್ಥಿತಿಯಲ್ಲಿ ಗ್ರಾಮವು ತನ್ನಲ್ಲಿ ಸಹಜವಾಗಿ ಬೆಳೆಯುವ ಬೆಳೆಯನ್ನೇ ಹೆಚ್ಚಾಗಿ ಬೆಳೆದು ಹಳ್ಳಿಗೆ ಪೂರೈಕೆಯಾಗಿ ಹೆಚ್ಚಾದುದನ್ನು ಬೇರೆ ಗ್ರಾಮಕ್ಕೆ ವಿನಿಮಯದಿಂದ ಕೊಡಬೇಕು. ಹೀಗೆ ಹಲವಾರು ಗ್ರಾಮಗಳು ಪರಸ್ಪರ ಸಹಕಾರ-ತತ್ವದ ಮೇಲೆ ಒಂದು ಸ್ವಯಂಪೂರ್ಣ ಕ್ಷೇತ್ರವನ್ನು ಮಾಡಿಕೊಳ್ಳಬೇಕು. ದೊಡ್ಡ ಪ್ರಮಾಣದಿಂದ ನಡೆಯುವ ಯಂತ್ರಗಾರಿಕೆಯ ಉದ್ಯೋಗಗಳು ಗ್ರಾಮ ಕೈಗಾರಿಕೆಗಳನ್ನು ನಿರ್ನಾಮ ಮಾಡಿ ಬೆಳೆಯಬಾರದು. ಈ ಗ್ರಾಮ ಕೈಗಾರಿಕೆಗಳಲ್ಲಿ ಎರಡು ಪ್ರಕಾರಗಳು—ಒಂದು ಹಳ್ಳಿಯ ಆಗತ್ಯದ ಬೇಡಿಕೆಗಳನ್ನು ಹಳ್ಳಿಗಷ್ಟೇ ಪೂರೈಸುವ ಉದ್ಯೋಗಗಳು; ಎರಡು ಗಾಳಿ ವಿದ್ಯುತ್ತುಗಳ ಶಕ್ತಿಯನ್ನು ಉಪಯೋಗಿಸಿ ಹೊರಗಿನ ಗ್ರಾಮಗಳ ಕ್ಷೇತ್ರಕ್ಕೆ ಪೂರೈಕೆ ಮಾಡುವ ಉದ್ಯೋಗಗಳು- ಈ ಎರಡಕ್ಕೂ ಸಾಕಷ್ಟು ಉತ್ತೇಜನವಿರತಕ್ಕದ್ದು. ಉದ್ಯೋಗಗಳ ವಿಕೇಂದ್ರೀಕರಣ ಧೋರಣವು ಎಂದರೆ ಹಲವು ಅನಿವಾರ್ಯವಾದ ದೊಡ್ಡ ದೊಡ್ಡ ಉದ್ಯೋಗಗಳು ದೊಡ್ಡ ದೊಡ್ಡ ಶಹರಗಳಲ್ಲಿ ಕೇಂದ್ರೀ-

ಕೃತವಾದರೂ ಉಳಿದ ಅಸಂಖ್ಯ ಸಣ್ಣದೊಡ್ಡ ಉದ್ಯೋಗಗಳು ದೇಶದಲ್ಲಿ ಎಲ್ಲ ಕ್ಷೇತ್ರದಲ್ಲಿಯೂ ಹಬ್ಬಬೇಕು—ಎಂಬ ಧೋರಣದಿಂದ ಹಳ್ಳಿಯಲ್ಲಿ ಸುಖಶಾಂತಿಗಳು ನೆಲಿಸುವವು. ಗ್ರಾಮಜೀವನದ ಪುನರ್ಘಟನೆಗೆ ಇದೊಂದೇ ಮಾರ್ಗವು. ಇದರಿಂದ ಭಾರತೀಯ ಸಂಸ್ಕೃತಿಯ ಪರಂಪರೆಯು ನಶಿಸದೆ ಅದಕ್ಕೆ ನವ ಚೈತನ್ಯ ಶಕ್ತಿಯು ಬರುವದು. ಅದು ಭೂಮಂಡಲದ ದೇಶಗಳಿಗೆ ತನ್ನ ಸನಾತನ ಸಂದೇಶವನ್ನು ಬೀರಲು ಸಮರ್ಥವಾಗುವದು. ಪ್ರಗತಿಯ ಚಕ್ರವನ್ನು ಹಿಂದೆ ತಿರಿಸುವ ಪ್ರಶ್ನೆಯೇ ಇಲ್ಲ. ಗತ್ತರ ಕಾಲದಲ್ಲಿ ನಡೆಯುವಂತೆ ಈಗಿನ ನಮ್ಮ ಉದ್ಯೋಗಗಳು, ಜನಜೀವನವು ನಡೆಯಬೇಕೆಂದು ಯಾರೂ ಅನ್ನುವದಿಲ್ಲ. ಜೀವನವು ನಿಂತ ನೀರಲ್ಲ, ಮುಂದೆ ಹರಿಯತಕ್ಕದ್ದೇ. ಆದರೆ ಇಷ್ಟೇ, ಪ್ರಗತಿ ಎಂದು ಹೇಳುವ ಸಂಗತಿ ನಿಜವಾದ ಪ್ರಗತಿ ಯಾಗಿರಲಿ; ಮಾನವ ಜೀವನದ ಆದರ್ಶಗಳಾದ ಸತ್ಯ ಸೌಂದರ್ಯ, ಕಲ್ಯಾಣಗಳ ಆರಾಧನೆಯಿಂದಾಗಿ ಸಾಮಾಜಿಕ ಜೀವನದ ಮಟ್ಟವು ಉತ್ಕ್ರಾಂತಿ ಹೊಂದಲಿ. ಯಂತ್ರಗಳ ವಿಸ್ತಾರವು ಪ್ರಾಯಶಃ ತುಟ್ಟತುದಿಗೆ ಮುಟ್ಟಿ ಒಂದು ಕ್ರಾಂತಿಯ ಕಾಲವು ಸಮೀಪಿಸುತ್ತಲಿದೆ. ಯಂತ್ರಯುಗದಿಂದಾದ ಅನಿಷ್ಟಗಳನ್ನು ತಿದ್ದುವಮಟ್ಟಿಗಾದರೂ ಯಂತ್ರೀಕರಣದ ಆಂದೋಲನವು ತನ್ನ ದಿಶೆಯನ್ನು ಸ್ವಲ್ಪಮಟ್ಟಿಗೆ ಬದಲಿಸಬೇಕಾದೀತು. ಗಾಂಧಿಯವರ ಅರ್ಥಶಾಸ್ತ್ರ ವಿಚಾರಗಳನ್ನು ಶ್ರೀ. ಜೆ. ಸಿ. ಕುಮಾರಪ್ಪನವರು ಚನ್ನಾಗಿಯೂ ಸತ್ಯವಾಗಿಯೂ ತಮ್ಮ ಪುಸ್ತಕಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಸರ್ವೋದಯ ಸಮಾಜದ ಆದರ್ಶಗಳಿಂದಲೂ ಗಾಂಧೀಜಿಯವರ ಅಭಿಲಾಷೆಯು ಹೇಗಿತ್ತೆಂಬುದು ತಿಳಿಯುವದು.

ಸಮಾಜದ ಆರ್ಥಿಕ ಪುನರ್ಘಟನೆಯು ಈ ತತ್ತ್ವದ ಮೇಲೆ ಆಗಬೇಕಾದರೆ ಜೀವನ-ಶಿಕ್ಷಣವು ಗ್ರಾಮಗಳ ಪುನರ್ಘಟನೆಯ ತತ್ತ್ವದ ಮೇಲೆ ನಿಲ್ಲಬೇಕು. ಅದೇ ಜೀವನ ಶಿಕ್ಷಣದ ಆತ್ಮವೆಂದು ಹೇಳಬಹುದು. ಅಖಂಡ ಗ್ರಾಮವಾಸಿಗಳು ಈ ವಿಚಾರ ಪ್ರಣಾಲಿಯಲ್ಲಿ ಕಾರ್ಯಕ್ಷಮವಾಗಿಯೂ ನಿಜವಾಗಿಯೂ ಅಕ್ಷರಸ್ಥರಾಗಬೇಕು. ಇಡಿಯ ಮಾನವ ವ್ಯಕ್ತಿತ್ವದ ಸಾಕ್ಷರತೆಯು ಸಾರ್ವತ್ರಿಕವೂ ಕಡ್ಡಾಯದ್ದೂ ಆಗಬೇಕಾಗಿದೆ. ನಮ್ಮ ದೇಶದ ಈಗಿನ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ಜೀವನ ಶಿಕ್ಷಣವೊಂದೇ ಕಡ್ಡಾಯ ಶಿಕ್ಷಣದ ಸಾಧನವೆಂದು ಪರಿಗಣಿಸಲಾಗಿದೆ ಎಂಬದನ್ನು ನಾವು ಮರೆಯಬಾರದು.

ಸರಕಾರದವರಿಂದ ಮಂಜೂರಾಗಿದೆ !

ನೂತನ ಗಣಿತ

೧೯೪೭ನೆಯ ಅಭ್ಯಾಸ ಪತ್ರಿಕೆಯಂತೆ !!!
ಪ್ರಾಥಮಿಕ ಶಾಲೆಗಳಿಗಾಗಿ

- ಎರಡನೆಯ ವರ್ಗಕ್ಕಾಗಿ ೦—೮—೦
- ಮೂರನೆಯ ವರ್ಗಕ್ಕಾಗಿ ೦—೧೦—೦
- ನಾಲ್ಕನೆಯ ವರ್ಗಕ್ಕಾಗಿ (ಅಚ್ಚಿನಲ್ಲಿ)

೧೯೪೯ರ ಸುಧಾರಿಸಿದ ಅಭ್ಯಾಸ ಪತ್ರಿಕೆಯಂತೆ !!!
ಪ್ರಾಥಮಿಕ ಮಾಧ್ಯಮಿಕ ಶಾಲೆಗಳಿಗಾಗಿ

- ಐದನೆಯ ವರ್ಗಕ್ಕಾಗಿ ೧—೦—೦
- ಆರನೆಯ ವರ್ಗಕ್ಕಾಗಿ ೧—೪—೦
- ಏಳನೆಯ ವರ್ಗಕ್ಕಾಗಿ ೧—೨—೦

ಹೊಸ ಕಾಲಕ್ಕೆ ಬೇಕಾದ ಹೊಸ ಉಪಕ್ರಮದ ಗಣಿತಗಳು !
ಉತ್ಸಾಹೀ ಶಿಕ್ಷಕರಿಗೂ ವ್ಯಾಪಾರಿಗಳಿಗೂ ಧಾರಾಳವಾದ ಕಮೀಶನ್ !!!

ಆಕಳವಾಡಿ ಬುಕ್ ಡಿಪೋ, ವಿಜಯ ರೋಡ ಧಾರವಾಡ

ಜೀವನ ಶಿಕ್ಷಣ

ಭಾಷಣಕಾರರು: ಆಚಾರ್ಯ ಭಾಗವತ

ಕರ್ನಾಟಕ ಭಾಗದ ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರಗಳ ಮುಖ್ಯಾಧ್ಯಾಪಕರ ವರ್ಗಾಶಿಕ್ಷಣದಲ್ಲಿ ಲಘು ತರಬೇತಿಗಾಗಿ ಧಾರವಾಡದ ಪದವೀಧರರ ಜೀವನಶಿಕ್ಷಣ ಕೇಂದ್ರಕ್ಕೆ ಬಂದಾಗ ತರಬೇತಿಯ ಮುಕ್ತಾಯ ಸಮಾರಂಭದಲ್ಲಿ ಆಚಾರ್ಯ ಭಾಗವತರು ಮಾಡಿದ ಮುಕ್ತಾಯ ಭಾಷಣದ ಸಂಕ್ಷಿಪ್ತ ವಿವರ. ಸಂಗ್ರಹಿಸಿದವರು: ಶ್ರೀ. ಸೀ. ರೇ. ಹಿರೇಮಠ, ಅಸಿಸ್ಟಂಟ ಲೆಕ್ಚರರ, ಜೀವನ-ಶಿಕ್ಷಣ ಕೇಂದ್ರ, ಧಾರವಾಡ.

ತಮ್ಮ ಉಪನ್ಯಾಸದ ಭಾಷೆಯ ಬಗೆಗೆ ಆಚಾರ್ಯ ಭಾಗವತರು ಪ್ರಸ್ತಾಪವೆತ್ತಿ ವರ್ತಮಾನಪತ್ರಗಳನ್ನು ಓದಿ ತಿಳಿದುಕೊಳ್ಳುವಷ್ಟು ಕನ್ನಡ ಬರುತ್ತಿದ್ದರೂ ಉಪನ್ಯಾಸ ಕೊಡುವಷ್ಟು ತಮಗೆ ಕನ್ನಡದ ಮೇಲೆ ಪ್ರಭುತ್ವವಿಲ್ಲವೆಂದು ವಿಷಾದ ವ್ಯಕ್ತಮಾಡಿದರು. ಇಂಗ್ಲೀಷು ಪದವೀಧರರಿಗೆಲ್ಲ ತಿಳಿದರೂ ಅದರ ಹಿರಿತನದಿಂದ ಮುಕ್ತರಾಗುವದು ಯೋಗ್ಯವೆಂದೂ ತಾವು ಮರಾಠಿಯಲ್ಲಿಯೇ ಮಾತನಾಡಿದ್ದನ್ನು ಕನ್ನಡಕ್ಕೆ ಅನುವಾದ ಮಾಡಬೇಕೆಂದು ಅಪೇಕ್ಷಿಸಿ ಆ ರೀತಿ ವ್ಯವಸ್ಥೆಯಿಂದ ನಂತರ ಮುಂದುವರೆದರು.

ಭಾಷಾವಾರ ಪ್ರಾಂತರಚನೆ.

ಭಾಷಾವಾರ ಪ್ರಾಂತರಚನೆಯು ಭಾಷೆಯ ವಿಕಾಸಕ್ಕಾಗಿ ಅತ್ಯವಶ್ಯವಾಗಿರಬೇಕು. ಅನ್ಯ ಭಾಷೆಯ ಪರಿಚಯ ಆತ್ಮಗೌರವಕ್ಕೆ ಕುಂದಲ್ಲ. ನೆರೆಹೊರೆಯ ಭಾಷೆಗಳ ಪರಿಚಯ, ಭಿನ್ನ ಸಂಸ್ಕೃತಿಗಳ ಪರಿಚಯದಿಂದ ನಮ್ಮ ದೃಷ್ಟಿ ವಿಶಾಲವಾಗಿ ಬೆಳವಣಿಗೆಗೆ ಹೆಚ್ಚು ಆಸ್ಪದವಾಗುವದು. ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಇತಿಹಾಸಗಳು ಪರಸ್ಪರ ಹಾಸುಹೊಕ್ಕಾಗಿವೆ. ಮಹಾರಾಷ್ಟ್ರದ ಇತಿಹಾಸ ತಿಳಿಯಲು ಮಹಾರಾಷ್ಟ್ರ ವಿಶ್ವವಿದ್ಯಾಲಯದಲ್ಲಿ ಕನ್ನಡದ ಅಧ್ಯಾಪನ ಸ್ಥಾನ (chair) ಕಲ್ಪಿಸಬೇಕಾಗಿದೆ. ಕನ್ನಡದ ಪರಿಚಯದ ವಿನಾ ಮರಾಠಿಯ ಎಷ್ಟೋ ಗಾದೆಮಾತುಗಳು ಅರ್ಥವಾಗದು. ರಾಷ್ಟ್ರಭಾಷೆಯು ಕೇವಲ ಸಂಸ್ಕೃತ ಪ್ರಧಾನವಾದರೆ ಸಾಲದು. ಅದರಲ್ಲಿ ದ್ರಾವಿಡ ಭಾಷೆಗಳ ಸಮಾವೇಶವೂ ಅತ್ಯವಶ್ಯ. ಉತ್ತರ ಮತ್ತು ದ್ರಾವಿಡ ಭಾಷೆಗಳ ಸಂಕ್ರಮಣ ನಮ್ಮ ರಾಷ್ಟ್ರಭಾಷೆಯಲ್ಲಿ ಅವಶ್ಯವಿದೆ.

ಶಿಕ್ಷಣ–ಸಾರ್ವಭೌಮಶಾಸ್ತ್ರ

ಸ್ವಾತಂತ್ರ್ಯ ಸಿಕ್ಕ ಮೇಲೆ ಎರಡು ಸಮಸ್ಯೆಗಳು ನಮ್ಮನ್ನು ಎದುರಿಸುತ್ತಿವೆ. ಒಂದನೆಯದು ಜನತೆಯ ಅಥವಾ ರಾಷ್ಟ್ರದ ಬೆಳವಣಿಗೆ; ಎರಡನೆಯದು ಜಾಗತಿಕ ಅಥವಾ ಅಂತರರಾಷ್ಟ್ರೀಯ ಹಿತಸಂಬಂಧದ ಪ್ರಶ್ನೆ. ಶಿಕ್ಷಣದಲ್ಲಿ ಇವೆರಡೂ ವಿಚಾರಗಳು ಅವಶ್ಯ. ಶಿಕ್ಷಣ ಮತ್ತು ಜೀವನ ಇವುಗಳನ್ನು ಸಂಕುಚಿತ ದೃಷ್ಟಿಯಿಂದ ನೋಡುತ್ತಿದ್ದೇವೆ. ಶಿಕ್ಷಣವು ಒಂದು ಶಾಸ್ತ್ರ ಯೆಂದು ನಾನು ತಿಳಿಯುವದಿಲ್ಲ. "ಆರ್ಥಿಕ, ಪರರಾಷ್ಟ್ರ ರಾಜಕಾರಣ, ಜಾತಿ-ಧರ್ಮದ ಪ್ರಶ್ನೆ ನನ್ನದಲ್ಲ."ಎಂದು ಶಿಕ್ಷಣ ತಜ್ಞರು ಅನ್ನಕೂಡದು. ಶಿಕ್ಷಣ ಶಾಸ್ತ್ರವು ಜೀವನದ ಸಾರ್ವಭೌಮ ಶಾಸ್ತ್ರವಿದೆ. ಅದರ ಆಶ್ರಯದಲ್ಲಿ ಎಲ್ಲ ಶಾಸ್ತ್ರಗಳು ನಡೆಯಬೇಕು. ಇಂಥ ಶಾಸ್ತ್ರವನ್ನು ನಾವು ತಯಾರಿಸದಿದ್ದರೆ ಜೀವನದ ಪ್ರಶ್ನೆ ಬಿಡಿಸಲ್ಪಡಲಾರದು. ಗಾಂಧೀಜಿಯ ವಿಚಾರವೂ ಹೀಗೆಯೇ ಇತ್ತು. ಸಮಾಜದ ಬೇರೆ ಬೇರೆ ಶಾಸ್ತ್ರಗಳ ವಿಶೇಷ ಅಭ್ಯಾಸಿಗಳಿದ್ದರೂ ಎಲ್ಲ ಶಾಸ್ತ್ರಗಳ ಅಭ್ಯಾಸ ಮಾಡಿದ ಒಬ್ಬನಿರದಿದ್ದರೆ ಸಮಾಜದ ಹಿತ ಸಾಧಿಸದು. ಮನುಶಾಸ್ತ್ರವು ಅಥವಾ ಧರ್ಮಶಾಸ್ತ್ರವು ಹಿಂದಿನ ಕಾಲದ ಸಮಗ್ರ ಜೀವನಶಾಸ್ತ್ರವಾಗಿತ್ತು. ಆದರೆ ಬರಬರುತ್ತ ಅದು ಪರಲೋಕದ ವಿಚಾರಕ್ಕೆ ಹೆಚ್ಚಿನ ಸ್ಥಾನಕೊಟ್ಟಿದೆ. ಸಾಯುವ ಪೂರ್ವದ ವಿಚಾರ, ಜೀವನದ ವಿಚಾರ ಬೇಕು ಹುಟ್ಟಿದಂದಿನಿಂದ ಸಾಯುವ ವರೆಗಿನ ಎಲ್ಲ ಪ್ರಶ್ನೆಗಳನ್ನು ಬಿಡಿಸುವದೇ ಶಿಕ್ಷಣದ ಕಾರ್ಯ. ದುರ್ದೈವದಿಂದ ನಮ್ಮ ವಿಚಾರವಂತರು ಮರಣೋತ್ತರ ವಿಚಾರಗಳು

ಆಗಿದ್ದಾರೆ. ಮರಣ ಪೂರ್ವದ ವಿಚಾರ ಅವಿಚಾರಿಗಳ ದಾಗಿದೆ. ಜಗತ್ತಿನಲ್ಲೆಲ್ಲ ಧರ್ಮ ಇದರ ಅರ್ಧ ಸತ್ತಮೇಲಿನ ವಿಚಾರ ಎಂದಾಗಿದೆ.

ಇದರ ವಿರುದ್ಧವಾಗಿ ಯುರೋಪದಲ್ಲಿ ಭಾವಿಕದೃಷ್ಟಿ ಬೆಳೆದಿದೆ. ಭೌತಶಾಸ್ತ್ರ, ನೀತಿಶಾಸ್ತ್ರ, ರಾಜಕಾರಣ ಮುಂತಾದ ವಿಭಾಗಗಳಲ್ಲಿ ವಿಪರೀತವಾದ ವಿಶೇಷವಾದ ಅಭ್ಯಾಸದ ಫಲವಾಗಿ ಪಾಶ್ಚಿಮಾತ್ಯರಲ್ಲಿ ಒಂದು ಶಾಸ್ತ್ರದ ತಜ್ಞರಿಗೆ ಇನ್ನೊಂದರ ದೃಷ್ಟಿ ತಿಳಿಯುವದಿಲ್ಲ. ಅಮೇರಿಕೆಯಲ್ಲಿ ಡಾ. ಡೂಯಿ ಅವರು ಇದರ ವಿರುದ್ಧ ಹೋರಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಹಕ್ಸ್ಲೀ ಅವರ Ends & means ಹೊತ್ತಿಗೆಯೊಳಗಿನ ಶಿಕ್ಷಣದ ಅಧ್ಯಯನವನ್ನು ಅವಶ್ಯ ಓದಿರಿ. ಜೀವನವನ್ನು ಇಡಿಯಾಗಿ ನೋಡುವ ಜನರು ಯುರೋಪದಲ್ಲಿ ಇಲ್ಲದಾಗಿದ್ದಾರೆ. ಮಾನವೀ ಜೀವನ ತತ್ವಗಳನ್ನು ತಿಳಿಯದಿದ್ದರೆ special knowledge (ವಿಶಿಷ್ಟಜ್ಞಾನ) ಘಾತಕವಾದುದು. ತಜ್ಞರು (Specialists) ಜೀವನವನ್ನು ಇಡಿಯಾಗಿ ನೋಡುವದಿಲ್ಲ.

ವರ್ಧಾ ಶಿಕ್ಷಣವು ವ್ಯಾಪಕವಾದುದು

ಈ ಸಂಸ್ಕಾರ ಬೇಕಾದರೆ ಹೊಸ ಶಿಕ್ಷಣಶಾಸ್ತ್ರ ಬೇಕು. ಗಾಂಧೀಜಿ ಪ್ರತಿಪಾದಿಸಿದ ವರ್ಧಾಶಿಕ್ಷಣದ ತತ್ವಗಳು ಇದಕ್ಕೆ ಸರಿಯಾಗಿವೆ. ಗಾಂಧೀಜಿಯವರ ವಿಚಾರಗಳು ದುರ್ದೈವದಿಂದ ಗಾಂಧೀವಾದಿಗಳಿಗೇ ತಿಳಿದಿಲ್ಲ. ಅವರು ಗಾಂಧೀವಾದದ ಪಂಥ ತಯಾರಿಸಲು ಹೊರಟಿದ್ದಾರೆ. ಕರ್ಮಕಾಂಡದಿಂದ ಜೀವನ ಶಿಕ್ಷಣಶಾಸ್ತ್ರ ಹುಟ್ಟುವುದು. ಸದ್ಯಃ ವ್ಯಾಪಕ ಶಾಸ್ತ್ರದ ಅವಶ್ಯಕತೆಯಿದೆ. ಶಿಕ್ಷಣಶಾಸ್ತ್ರವೇ ಈ ವ್ಯಾಪಕ ಶಾಸ್ತ್ರ. ಆದರೆ ಅದು ವಿಶಿಷ್ಟವಾದ ದೃಷ್ಟಿಯಲ್ಲಿ ಮಾರ್ಪಾಡಾಗಬೇಕು.

ಸಂಪೂರ್ಣ ಮಾನವ ಹುಟ್ಟಿಲ್ಲ

ಮಾನವ ಪ್ರವೃತ್ತಿಗಳು ಮೂಲಭೂತ ಶಕ್ತಿ. ಮಾನವನೆಂದರೆ ಯಾರು ? ಇಲ್ಲಿಯ ವರೆಗೆ ನಾವು ತಿಳಿದುಕೊಂಡು ಬಂದ ಮನುಷ್ಯ ಮನುಷ್ಯನೋ ? ೫೦೦೦ ವರುಷಗಳ ಭಾರತೀಯ ಸಂಸ್ಕೃತಿಯ ಅಭ್ಯಾಸದಿಂದ ನೋಡಿದರೆ ಅಂಥ ಮನುಷ್ಯನು ಇನ್ನೂ ಹುಟ್ಟಿಲ್ಲ ಶರೀರ, ಬುದ್ಧಿ ಮತ್ತು ಹೃದಯ ಈ ಮೂರೂ ಶಕ್ತಿಗಳು ವ್ಯವಸ್ಥಿತ ರೀತಿಯಿಂದ ವಿಕಾಸ ಹೊಂದಿದ ಜನ ಎಷ್ಟು ಇದ್ದಾರೆ? ಕೆಲವರಲ್ಲಿ ಶರೀರ ೧೦ ಕ್ಕೆ ೮೦ ಷ್ಟು ವಿಕಾಸ ಹೊಂದಿದ್ದರೆ ಬುದ್ಧಿಯು ವಿಕಾಸಹೊಂದದೇ ಹೋಗಿದೆ. ಕೆಲವರಲ್ಲಿ ಬುದ್ಧಿ ೮೦% ವಿಕಾಸಹೊಂದಿದೆ. ಆದರೆ ಶರೀರ ಬಡವಾಗಿದೆ. ಉತ್ಪಾದಕ ಶಾರೀರಿಕ ಶ್ರಮಕ್ಕೆ ಬುದ್ಧಿ ಬೇಕಿಲ್ಲವೆಂಬ ತಿಳುವಳಿಕೆ ಇದೆ. ಶಬ್ದಗಳಿಂದಲೇ ವ್ಯವಹಾರ ಮಾಡುವವರು ವಿದ್ಯಾವಂತರು, ಸುಶಿಕ್ಷಿತರು. ಒಕ್ಕಲುತನ, ಬಡಿಗತನ, ಮೊಚ್ಚಿಗಾರಿಕೆ ಮುಂತಾದ ಶಾರೀರಿಕಶ್ರಮಮಾಡುವವರೆಲ್ಲ ಅಶಿಕ್ಷಿತರು. ಹೀಗೆ ಶಿಕ್ಷಣದ ವ್ಯಾಖ್ಯೆ ತಪ್ಪಾಗಿದೆ. ಕೇವಲ ಬುದ್ಧಿಯಿಂದ ಕೆಲಸ ಮಾಡುವದು ಇಲ್ಲವೆ ಕೇವಲ ಶರೀರದಿಂದ ದುಡಿಯುವದು ಇನ್ನು ಮುಂದೆ ಸಾಗದು.

ವರ್ಧಾ ಶಿಕ್ಷಣವು ಜೀವನದ ಎಲ್ಲ ಅಂಗಗಳನ್ನೊಳಗೊಂಡ ಶಿಕ್ಷಣವು.

ಹೇಳಿದಷ್ಟು ಕೆಲಸ ಮಾಡುವ ಮನೋವೃತ್ತಿಯ ನೌಕರರ ಶಿಕ್ಷಣ ಇನ್ನು ನಡೆಯದು. ಜೀವನದ ಎಲ್ಲ ಅಂಗಗಳನ್ನು ಒಳಗೊಂಡ ಶಿಕ್ಷಣ ಎಲ್ಲರಿಗೂ ಬೇಕು. ಅದರಿಂದಲೇ ಪ್ರಜಾಪ್ರಭುತ್ವವು ಯಶಸ್ವಿಯಾಗಬಲ್ಲದು. ಸದ್ಯದ ಪ್ರಾಥಮಿಕ ಶಿಕ್ಷಣ ನಿರುಪಯೋಗಿಯಾಗಿದೆ. ಪ್ರತ್ಯಕ್ಷ ಜೀವನದ ಉದ್ಯೋಗಗಳ ಬಗೆಗೆ ಅಭಿರುಚಿ ಹುಟ್ಟಿಸದು. ಒಕ್ಕಲಿಗನ ಮಗ, ಬಡಿಗನ ಮಗ ಕಾರಕೂನ ಇಲ್ಲವೆ ಶಿಕ್ಷಕನಾಗಬೇಕೆಂದು ಬಯಸುತ್ತಾನೆ. (ಒಕ್ಕಲುತನ, ಕೈಕಸಬುಗಳಿಗಿಂತ ಇದು ಗೌರವಯುತವಾದುದೆಂಬ ಭಾವನೆ ಬೇರೂರಿದುದೇ ಇದಕ್ಕೆ ಕಾರಣ.) ಲಕ್ಷಾವಧಿ ಜನರು ಇದಕ್ಕೆ ಬೇಕಾಗಿಲ್ಲ. ಆದರೆ ಉತ್ಪಾದಕ ಕಾರ್ಯಮಾಡುವ ಜನರು ಬೇಕು. ಜನ್ಮದಾರಭ್ಯ ಜಾತಿ ಭೇದ, ಶ್ರೇಷ್ಠ ಕನಿಷ್ಠ ಭಾವನೆ ಇನ್ನು ಸಾಗದು. ಸಮಾಜದಲ್ಲಿ ಎಲ್ಲರಿಗೂ ಅಸೆಂಬ್ಲಿಗೆ ಹೋಗಲಿಕ್ಕೂ ಮತ್ತು ರಾಷ್ಟ್ರಾಧ್ಯಕ್ಷನಾಗುವದಕ್ಕೂ ಅವಕಾಶವಿದೆಯೆಂದಾಗ ಮಾತ್ರ ಒಕ್ಕಲಿಗನ ಮಗ ಒಕ್ಕಲುತನಕ್ಕೆ ಹೋಗುವನು. ಒಕ್ಕಲಿಗನಿಗೆ ಸದ್ಯಃ ಅಂಥ ಶಿಕ್ಷಣವಿಲ್ಲ. ಸುತ್ತಲಿನ ಜ್ಞಾನ, ಜೀವನದ ಎಲ್ಲ ಅಂಗಗಳನ್ನುಒಳಗೊಂಡ ಜ್ಞಾನದಿಂದ ಕೂಡಿಕೊಂಡು ಒಕ್ಕಲುತನ ಮಾಡಲು ಕಲಿತಾಗ ಮಾತ್ರ ಈ ರೀತಿಯ ಶಕ್ತಿ ಒಕ್ಕಲಿಗನಿಗೆ ಬರುವದು. ವರ್ಧಾ ಶಿಕ್ಷಣ

ಕೇವಲ ಔದ್ಯೋಗಿಕ ಶಿಕ್ಷಣವಲ್ಲ. ಜೀವನದ ಎಲ್ಲ ಅಂಗಗಳನ್ನೊಳಗೊಂಡ ಶಿಕ್ಷಣವದು.

ಜಾತಿಭೇದವನ್ನು ಬುದ್ಧಿವಿಕಾಸದಿಂದ ತೆಗೆದುಹಾಕಬಹುದು. ಸ್ಪರ್ಶಾಸ್ಪೃಶ್ಯಭೇದವು ಹೃದಯವಿಕಾಸದಿಂದ ಅಳಿಯಲು ಸಾಧ್ಯವಿದೆ. ನಾನು ಇನ್ನೊಬ್ಬನಿಗಿಂತ ಶ್ರೇಷ್ಠನೆಂಬ ಕಲ್ಪನೆ ಇಲ್ಲದಿರುವದೇ ಹೃದಯಶುದ್ಧಿ. ಜ್ಞಾನಪ್ರಸಾರವೇ ಶಿಕ್ಷಣದ ಕಾರ್ಯ. ಮನುಷ್ಯನನ್ನು ಮನುಷ್ಯನೆಂದು ತಿಳಿಸಬೇಕು—ಜಾತಿ, ಕುಲ, ಕೆಲಸ ಇಲ್ಲವೆ ಕಸಬುಗಳಿಂದಲ್ಲ. ಶಾಕಾಹಾರಿ ಮಾಂಸಾಹಾರಿಗಳೂ ಮನುಷ್ಯರೇ. ಶಾಕಾಹಾರಿಯು ಮಾಂಸಾಹಾರಿಗಳಿಂದ ರೊಟ್ಟಿ ತಿನ್ನದಿರುವದು ಅವಿವೇಕ. "ನನಗೆ ಕೊಟ್ಟ ರೊಟ್ಟಿಯು ನನಗೆ ಯೋಗ್ಯವಾಗಿದೆಯೊ?" ಇದೇ ವಿಚಾರ ನನ್ನದಾಗಿರಬೇಕು. ಇದೇ ಹೃದಯ ಶುದ್ಧಿ. ನಮ್ಮ ಶಿಕ್ಷಣದಲ್ಲಿ ಶರೀರ, ಬುದ್ಧಿ ಮತ್ತು ಹೃದಯ ಈ ಮೂರರ ವಿಚಾರ ಮಾಡಲೇ ಬೇಕು.

ಒಂದು ವಿಶ್ವದ ಕಲ್ಪನೆ

ಸ್ವಾತಂತ್ರ್ಯ ಪಡೆದ ವ್ಯಕ್ತಿ ಅಂತರರಾಷ್ಟ್ರೀಯವ್ಯಕ್ತಿ. ಜಗತ್ತಿನ ಕೂಡ ಅವನು ವಿಚಾರ ಮಾಡಬೇಕು. ಅಲಿಪ್ತನಾದ ಅಶಕ್ಯ ಹಾಗು ಮಾನಸಿಕ ದೃಷ್ಟಿಯಿಂದ ಅಯೋಗ್ಯ. ಜೀವನದ ವಿಚಾರವು ಎಲ್ಲ ಮಾನವ ಕುಟುಂಬಕ್ಕೆ ಸಂಬಂಧಿಸಬೇಕು. ಎರಡು ಬಗೆಯ ವಿಚಾರಗಳು ಜೀವನದಲ್ಲಿ ನಮಗೆ ಕಂಡುಬರುತ್ತವೆ.

೧. ಶ್ರೀಮಂತ ಬಡವ, ಒಡೆಯ ಸೇವಕ ಎಂಬ ತಾರತಮ್ಯಗಳಿಂದ ಕೂಡಿದ್ದು. ೨. ಎಲ್ಲರೂ ತಾವು ಜೀವನಕ್ಕಾಗಿ ಪ್ರಯತ್ನಿಸಬೇಕು. ಎಲ್ಲರಿಗೂ ಸುಖ ದೊರೆಯಬೇಕು. ಇವುಗಳಲ್ಲಿ ಎರಡನೆಯದು ಒಂದು ವಿಶ್ವದ ಕಲ್ಪನೆ. ಇದಕ್ಕೆ ವಿರುದ್ಧವಾಗಿರುವವರಿಗೆಲ್ಲ ಸರಿಯಾದ ಮಾರ್ಗ ಕಲಿಸಬೇಕು. ಲೋಕಶಾಹಿ ಇದರ ಅರ್ಧ ವಿಶ್ವಕುಟುಂಬಿ. ಇದರಲ್ಲಿ ಕೆಲವೆಡೆಯಲ್ಲಿ ವಿಶ್ವಕುಟುಂಬ ಇನ್ನು ಕೆಲವು ಕಡೆಗೆ ಸ್ವಾರ್ಥಿಗಳಾದರೆ ಅದು ಲೋಕಶಾಹಿಯಲ್ಲ. Capitalist Democracy, Economic Democracy, Political Democracy ಇವುಗಳಲ್ಲಿ ತಮಗೆ ಬೇಕಾದುದನ್ನು ತೆಗೆದುಕೊಂಡು ಬೇಡಾದುದನ್ನು ಬಿಟ್ಟ ಉದಾಹರಣೆಗಳಿವೆ. ಪ್ರತಿಯೊಬ್ಬನಿಗೊಂದು ಮತವಿರಬೇಕೆಂಬುದೇ Political Democracy (ರಾಜಕೀಯ ಲೋಕಸತ್ತೆ). ಅಮೇರಿಕೆಯಲ್ಲಿ ಇಂಥ ಲೋಕಶಾಹಿ ಇದೆ. ಆರ್ಥಿಕ ಕ್ಷೇತ್ರದಲ್ಲಿಯೂ ಈ ದೃಷ್ಟಿಯನ್ನಿಡಲು ಅವರಿಗೆ ಮನಸ್ಸಿಲ್ಲ. ಎಲ್ಲರಿಗೂ ಸಮಾನವಾದ ಆರ್ಥಿಕ ಸವಲತ್ತುಗಳಿರಬೇಕೆಂಬುದು Economic Democracy (ಆರ್ಥಿಕ ಲೋಕಶಾಹಿ). ರಶಿಯದಲ್ಲಿ ಈ ರೀತಿಯ ಲೋಕಶಾಹಿ ಇದೆ. ಆದರೆ ಅವರು ರಾಜಕೀಯ ಲೋಕಶಾಹಿಗೆ ವಿರುದ್ಧವಾಗಿದ್ದಾರೆ. ಹೀಗೆ ಲೋಕಶಾಹಿಯಲ್ಲಿ ತಮಗೆ ಬೇಕಾದುದನ್ನು ತೆಗೆದುಕೊಂಡು ಬೇಡಾದುದನ್ನು ಬಿಟ್ಟ ಉದಾಹರಣೆಗಳಿವೆ. ಯುದ್ಧ ಪ್ರೇಮಿ ಜನರಿಂದ ಲೋಕಶಾಹಿ ಬರಲಾರದು. ಯುದ್ಧಪ್ರೇಮಿಗಳೇ ಲೋಕಶಾಹಿಯ ವಿರೋಧಿಗಳು.

ಪರರಾಷ್ಟ್ರ ರಾಜಕಾರಣ

ನಮ್ಮ ಪರರಾಷ್ಟ್ರ ರಾಜಕಾರಣ ಹೇಗಿರಬೇಕು? ಯುದ್ಧದಿಂದ ಜಗತ್ತಿಗೆಂದೂ ಕಲ್ಯಾಣವಾಗಿಲ್ಲ. ತಾಟಸ್ಥ್ಯವೇ ನಮ್ಮ ನೀತಿಯಾಗಬೇಕು. ಒಂದು ವೇಳೆ ನಾವು ಹಾಗೆ ಬಯಸಿದರೂ ಹಿಂದುಸ್ಥಾನವು Military (ಸೈನಿಕ) ರಾಷ್ಟ್ರವಾಗಲಾರದು. ಎಲ್ಲರಿಗೂ ಅನ್ನ ವಸ್ತ್ರಗಳನ್ನು ಸಂಪಾದಿಸುವಲ್ಲಿಯೇ ನಮ್ಮ ಶಕ್ತಿಯಲ್ಲ ವ್ಯಯವಾಗುವದು. ನಮ್ಮ ಸೈನ್ಯ ಆಂತರಿಕ ವ್ಯವಸ್ಥೆಗಾಗಿ ಮಾತ್ರ ಯೋಗ್ಯವಿದೆ. ಅದರಲ್ಲಿ ಪರರಾಷ್ಟ್ರದ ದಾಳಿ ಎದುರಿಸುವ ಸಾಮರ್ಥ್ಯವಿಲ್ಲ. ಅಂಥ ಪ್ರಸಂಗದಲ್ಲಿ ಅಮೇರಿಕೆ ಅಥವಾ ರಶಿಯ ಇವುಗಳಲ್ಲಿ ಒಂದನ್ನು ನಮ್ಮ ಸಹಾಯಕ್ಕೆ ಕರೆಯಬೇಕು. ಆದ್ದರಿಂದ ನಮ್ಮ ಶಿಕ್ಷಣದಲ್ಲಿ ಮಿಲಿಟರಿ ಇಲ್ಲವೆ ಪೋಲೀಸ ಶಿಕ್ಷಣಕ್ಕೆ ಮಹತ್ವ ಬೇಡ. ಉತ್ಪಾದನೆ, ಸಹಕಾರ ಶಾಂತಿಸ್ಥಾಪನೆ ಇವೇ ಜೀವನ ಶಿಕ್ಷಣದ ಧ್ಯೇಯಗಳು. ಅಶಾಂತಿ ಹೇಗೆ ಹುಟ್ಟುವದು? ಯುದ್ಧ ಏಕೆ ಬೇಕು? ಬೇರೆಯವರನ್ನು ಗುಲಾಮರನ್ನಾಗಿ ಮಾಡಿ ಶೋಷಿಸಬೇಕೆಂಬ ಮನೋವೃತ್ತಿಯೇ ಯುದ್ಧದ ಕಾರಣ. ಇನ್ನೊಬ್ಬನನ್ನು ಬಡವನನ್ನಾಗಿಮಾಡಿ ನಾನು ಶ್ರೀಮಂತನಾಗಲಾರೆನೆಂಬ ನಿರ್ಧಾರ ಮಾಡಿದಲ್ಲಿ ಯುದ್ಧಗಳೇ ಜರುಗವು. ಗಾಂಧೀಜಿಯ ವಿಚಾರಗಳು ಈ ರೀತಿಯ ಮಾನವ ಜೀವನದ ವಿಚಾರಗಳು. ಶಿಕ್ಷಕನ ಕಾರ್ಯ

ಶಾಂತಿಸ್ಥಾಪನೆ. ಸೇನಾಪತಿ ನ್ಯಾಯಾಧಿಗಳಿರುವದು ನಮ್ಮ ಅಶಕ್ತತೆಯ ಕುರುಹು. ಪೋಲೀಸರ ಸಂಖ್ಯೆ ಕಡಿಮೆ ಮಾಡುವದೇ ರಾಜ್ಯಪದ್ಧತಿಯು ಸುಧಾರಿಸಿದುದರ ಗುರುಹು. ಪ್ರಜೆಗಳ ಸಮ್ಮತಿಯಿಂದ ರಾಜ್ಯ ನಡೆಸಲು ಪೋಲೀಸರ ಸಂಖ್ಯೆ ತಾನೇ ಕಡಿಮೆಯಾಗುವದು. ಶಿಕ್ಷಕನ ಕೆಲಸ ಪೋಲೀಸನ ಕೆಲಸಕ್ಕಿಂತ ಹೆಚ್ಚಿನದು. ಸಮಾಜದಲ್ಲಿ ಪೋಲೀಸನಿರುವದು ನಮ್ಮ ದುರ್ಬಲತೆಯನ್ನು ತೋರಿಸುತ್ತದೆ. ಆತ್ಮರಕ್ಷಣಾಶಕ್ತಿ ಬೇಕು. ಆದರೆ ಅದಕ್ಕೆ ಮಿಲಿಟರಿ ಶಿಕ್ಷಣಬೇಕೆಂದಲ್ಲ. ಇಪ್ಪತ್ತು ವರುಷ ಒಂದು ಹಳ್ಳಿಯಲ್ಲಿ ಶಾಲೆ ನಡೆದರೂ ಆ ಹಳ್ಳಿಯ ಉತ್ಪಾದಕ ಶಕ್ತಿ ಹೆಚ್ಚಾಗಿಲ್ಲ. ಇದೇ ರೀತಿ ಸಾಗಬೇಕೆ? ಶಿಕ್ಷಕನು ಹಳ್ಳಿಗರಲ್ಲಿ ಸಮರಸವಾಗಿ ಬೆರೆತು, ಮಾರ್ಗದರ್ಶನ ಮಾಡಿ, ಪೇಟೆಯ ದಲ್ಲಾಳಿಗಳಿಂದಾಗುವ ಉಪದ್ರ್ಯವನ್ನು ತಪ್ಪಿಸಿಕೊಳ್ಳುವ ಬುದ್ಧಿವಂತಿಕೆಯನ್ನು ಹಳ್ಳಿಗರಿಗೆ ಕಲಿಸಬೇಕು.

ಶಿಕ್ಷಣದಲ್ಲಿ ಮೂರು ಕ್ರಿಯೆಗಳು ಮುಖ್ಯ. ೧. ಸಫಾಯಿ, ೨. ಉತ್ಪಾದನ, ಮತ್ತು ೩. ಸಾಮುದಾಯಿಕ ಕೆಲಸ. ಶಾಲೆಯು ಮನೆಯ ನೆಲ್ಲಕ್ಕೆ ಕಟ್ಟಿದ್ದರೆ ಅದರ ದುರಸ್ತಿಯಿಂದಲೇ ಶಿಕ್ಷಕರ ಕೆಲಸ ಆರಂಭವಾಗಬೇಕು. ಶಾಲೆಯಲ್ಲಿ ನೂರಿನ್ನೂರು ವಿದ್ಯಾರ್ಥಿಗಳಿದ್ದರೂ ಸಫಾಯಿ ಅಥವಾ ಇನ್ನಿತರ ಕೆಲಸಕ್ಕಾಗಿ ಒಬ್ಬ ಸಿಪಾಯಿ ಬೇಕೆಂಬುದು ನಮ್ಮ ಸಂಕುಚಿತ ದೃಷ್ಟಿಯು. ಸಫಾಯಿ (ಸ್ವಚ್ಛತೆ) ಸಾಮಾಜಿಕ ಕ್ರಾಂತಿಯ ಕೆಲಸ. ಸಮಾಜದಲ್ಲಿ ಭಂಗಿಗಳಿರುವದು ನಮ್ಮ ಶೋಷಕ ಮನೋವೃತ್ತಿಯನ್ನು ಸೂಚಿಸುತ್ತದೆ. ಈಗ ಭಂಗಿಗಳಾಗಿರುವವರು ಹಿಂದೆ ಯುದ್ಧದಲ್ಲಿ ಸೋತ ಜನರು. ಮುಂಬಯಿ ಭಂಗಿಗಳಲ್ಲನೇಕರು ಕ್ಷತ್ರಿಯರಿದ್ದಾರೆ. ಯುದ್ಧದಲ್ಲಿ ಸೋತವರ ಆಸ್ತಿಪಾಸ್ತಿಗಳನ್ನು ಗೆದ್ದವರು ಕಸಿದುಕೊಂಡ ಮೇಲೆ ನಿರ್ಗತಿಕರಾಗಿ ಜೀವನೋಪಾಯವೆಂದು ಭಂಗಿ ಕೆಲಸವನ್ನು ಸೋತವರು ಕೈಕೊಂಡರು. ಭಂಗಿಗಳು ನಮ್ಮ ಆಕ್ರಮಣದ ಕುರುಹಾಗಿದ್ದಾರೆ.

ಮಲಮೂತ್ರ ವಿಸರ್ಜನೆಯಲ್ಲಿ ನಮ್ಮಷ್ಟು ಅವ್ಯವಸ್ಥಿತ ಜನರು ಬೇರಿಲ್ಲ. ಮೂತ್ರಕ್ಕಾಗಿ ಒಂದು ನಿರ್ದಿಷ್ಟ ತಾಣವಿರಬೇಕು ಎನ್ನುವದು ಸೋಜಿಗದ ಮಾತಾಗಿದೆ. "ಮೂತ್ರಕ್ಕೆ ಎಲ್ಲಿ ಹೋಗಬೇಕು" ಎಂದು ಯಾವ ಸದ್ಗೃಹಸ್ಥನನ್ನಾದರೂ ಕೇಳಿದರೆ "ಇದನ್ನು ಕೇಳಬೇಕೇ? ಬೇಕಾದಲ್ಲಿ ಕೂಡ್ರಬಹುದು." ಎಂದು ತನ್ನ ವಿಶಾಲ ಹೃದಯವನ್ನು ತೋರ್ಪಡಿಸುತ್ತಾನೆ. ತನ್ನ ಮಲಮೂತ್ರದ ಸರಿಯಾದ ವಿನಿಯೋಗ ಗೊತ್ತಿರದವನಿಗೆ ಅಂತರರಾಷ್ಟ್ರೀಯ ಸಮಸ್ಯೆಗಳು ತಿಳಿಯುವದೆಂತು? ಸಫಾಯಿಯಲ್ಲಿ ಆರ್ಥಿಕ, ಸಾಮಾಜಿಕ, ಐತಿಹಾಸಿಕ, ಸಾಂಸ್ಕೃತಿಕ ಮತ್ತು ಆರೋಗ್ಯದ ದೃಷ್ಟಿ ಇದೆ. ಅಂತೆಯೇ ಅದು ನಮ್ಮ ಶಾಲೆಯ ಮೊದಲನೆಯ ಕಾರ್ಯವಾಗಬೇಕು.

೨. ಉತ್ಪಾದನ ಕಾರ್ಯ:— ಮೂಲೋದ್ಯೋಗವೆಂದರೆ ಜೀವನದ ಮೂಲ ಕಲೆ. ಉತ್ಪಾದಕ ಶಕ್ತಿಯಿಲ್ಲದವ ಇನ್ನೊಬ್ಬನಿಂದ ಕಸಿದುಕೊಳ್ಳಲು ಕಲಿಯುವನು. ತನಗೆ ಬೇಕಾದ ಅನ್ನ, ವಸ್ತ್ರ, ಮನೆಗಳಿಗಾಗಿ ಪರರನ್ನು ಶೋಷಿಸುವನು. ಜಗತ್ತಿನಲ್ಲಿ ಕೆಲಸಗಾರರೇ ಹೆಚ್ಚಿದ್ದಾರೆ. ಶೋಷಣೆ ನಿಲ್ಲಬೇಕಾದರೆ ಅವರೇ ಸಮಾಜದಲ್ಲಿ ಪ್ರತಿಷ್ಠಿತ ಜನರಾಗಬೇಕು. ಅವರ ಕೈಯಲ್ಲಿಯೇ ಸಮಾಜದ ಎಲ್ಲ ಸೂತ್ರಗಳಿರಬೇಕು.

೩. **ಸಾಮುದಾಯಿಕ ಜೀವನ:—** ಜಗತ್ತಿಗೆ ನಾನು ಸೇವೆ ಸಲ್ಲಿಸಬೇಕೆಂಬ ಭಾವನೆಯೇ ಸಾಮುದಾಯಿಕ ಜೀವನದ ತಳಹದಿ. ಸಹಕಾರದಿಂದ ಆರ್ಥಿಕ ಶೋಷಣೆ ಹೋಗುವದು. ದಲಾಲರೆಂಬ ಶೋಷಕ ವರ್ಗ ತನ್ನಿಂದ ತಾನೇ ಮಾಯವಾಗುವದು. ವ್ಯಾಪಾರ ಗಿರಣಿ ಸಾಮುದಾಯಿಕ ಸ್ವತ್ತಾಗಬೇಕು. ಎಲ್ಲ ಕೆಲಸಗಳೂ ಸಮಾಜದ ಆಧೀನವಿರಬೇಕು. ಸಮಾಜಕ್ಕಾಗಿ ಕೆಲಸವೆಂಬುದೇ ಲೋಕಶಾಹಿಯ ತಳಹದಿ. ಡಾ. ಡೂಯಿ ಅವರು ಪ್ರತಿಪಾದಿಸುವಂತೆ 'ನಾನು' ಎಂಬ ಭಾವನೆ ಹೋಗಿ 'ನಾವು' ಎಂಬ ಭಾವನೆ ಬರಬೇಕು.

ಗ್ರಾಮೋದ್ಯೋಗ ಮತ್ತು ಯಂತ್ರಗಳು

ಯಾವ ಕಷ್ಟವಿಲ್ಲದೆ ಸುಖವಾಗಿರಬೇಕೆಂಬುದೇ ಯಂತ್ರೀಕರಣದ ದೃಷ್ಟಿ. ಆದರೆ ವಿಲಾಸವೃತ್ತಿಯಿಂದ ಸುಖವಾಗುವದೋ? ಮಾನವನ ಸರ್ವಾಂಗೀಣ ವಿಕಾಸಕ್ಕೆ ವಿಲಾಸವೃತ್ತಿಯು ಅಯೋಗ್ಯ. ಯಂತ್ರೀಕರಣವು ಲೋಕಸತ್ತೆಗೆ ವಿರುದ್ಧವಾದುದು. ಯುರೋಪ,

ಅಮೇರಿಕೆ,ರಶಿಯಗಳು ಒಕ್ಕಲುತನ ಬಿಟ್ಟು ಕಾರಖಾನೆಗಳನ್ನು ಹಾಕಿವೆ. ನಮ್ಮ ಹಾಗು ಚೀನರ ಪ್ರಶ್ನೆ ಬೇರೆಯಾಗಿದೆ. ಔದ್ಯೋಗೀಕರಣದ ಫಲವಾಗಿ ಉಂಟಾದ ನಿರುದ್ಯೋಗತನವನ್ನು ಜಗತ್ತು ಎರಡು ರೀತಿಯಿಂದ ಬಗೆಹರಿಸಿದೆ. ನಿರುದ್ಯೋಗಿಗಳನ್ನು ಸೈನ್ಯದಲ್ಲಿ ತುಂಬಿ ಬಲಾಢ್ಯವಾದ ಸೈನ್ಯ ತಯಾರಿಸಿ ಜಪಾನ ಮತ್ತು ಜರ್ಮನಿಗಳಂತೆ ನೆರೆಹೊರೆಯ ರಾಷ್ಟ್ರಗಳ ಮೇಲೆ ಆಕ್ರಮಣ ಮಾಡುವದು ಇಲ್ಲವೆ ಇಂಗ್ಲೆಂಡಿನಂತೆ ನಿರುದ್ಯೋಗಿಗಳಿಗೆ ಡೋಲು ಕೊಡುವದು. ಯಂತ್ರಗಳಿಂದ ಮನುಷ್ಯನ ಕೆಲಸ ಕಸಿದುಕೊಂಡು ಅವನಿಗೆ ಪ್ರತಿಯಾಗಿ ಭಿಕ್ಷುಕನಂತೆ ಡೋಲು ಕೊಡುವದು ಅನ್ಯಾಯ, ಅನಿಷ್ಟ. ಎಲ್ಲ ಜನರಿಗೂ ಕೆಲಸ ಕೊಟ್ಟು ಇನ್ನೂ ಉಳಿದರೆ ಅದಕ್ಕಾಗಿ ಯಂತ್ರಗಳನ್ನು ಅವಶ್ಯವಾಗಿ ತರಬಹುದು. ಸಮಾಜದ ಕೆಲಸಗಳನ್ನೆಲ್ಲ ಒಬ್ಬನ ಕೆಲಸ ಕುಟುಂಬದವರೆಲ್ಲ ಕೂಡಿಮಾಡುವ ಕೆಲಸ, ಹಳ್ಳಿಯ ಜನರೆಲ್ಲ ಕೂಡಿ ಮಾಡುವ ಕೆಲಸವೆಂದು ವಿಂಗಡಿಸುವದು ಅರ್ಥಶಾಸ್ತ್ರದ ದೃಷ್ಟಿಯಿಂದ ಒಳ್ಳೆಯದು ಅದಕ್ಕನುಗುಣವಾದ ಗ್ರಾಮೋದ್ಯೋಗಗಳು ಬೆಳೆಯುವಂತೆ ವ್ಯವಸ್ಥೆಯಾಗಬೇಕು. ಕೇಂದ್ರೀಕೃತ ಉದ್ಯಮಗಳಲ್ಲಿ ಕಂಡುಬರುವಂತೆ ಯಂತ್ರಗಳಿದ್ದಲ್ಲಿ ಜನರೆಲ್ಲ ನೆರೆಯುವ ಜನರಿದ್ದಲ್ಲೆಲ್ಲ ಸಣ್ಣಪುಟ್ಟ ಉದ್ಯಮಗಳನ್ನು ಅಂದರೆ ವಿಕೇಂದ್ರೀಕೃತ ಗ್ರಾಮೋದ್ಯೋಗಗಳನ್ನು ಬೆಳಿಸಬೇಕು.

ಪುಸ್ತಕ ವಿಮರ್ಶೆ :

ನೂಲುವ ಗಣಿತ (ಭಾಗ ೩)

ಲೇಖಕರು : ಶ್ರೀ. ಕೃಷ್ಣದಾಸ ಗಾಂಧಿ
ಅನುವಾದಕರು : ಶ್ರೀ. ಶ್ರೀ. ರಾ. ಸಾವಕಾರ
ಪ್ರಕಾಶಕರು : ಖಾದೀ ಸಾಹಿತ್ಯ ಪ್ರಕಾಶನ, ಕರ್ನಾಟಕ ಚರಖಾ ಸಂಘ, ಹುಬ್ಬಳ್ಳಿ.

ಖಾದೀ ಸಾಹಿತ್ಯ ಪ್ರಕಾಶನದಿಂದ ಪ್ರಕಟಿತವಾದ ನೂಲುವ ಗಣಿತ ಭಾಗ ೧-೨ ವಾಚಕರಿಗೆ ಈಗಾಗಲೇ ಪರಿಚಿತವಿವೆ. ಗಾಂಧೀಜಿಯವರು ಚರಖಾ ಹಾಗು ನೂಲುಗಾರಿಗಯನ್ನು ಪ್ರತಿಯೊಬ್ಬ ಭಾರತೀಯನು ಕೈಕೊಳ್ಳಬೇಕೆಂದೂ ಭಾರತದ ಕಲ್ಯಾಣವು ಚರಖಾದಿಂದಲೇ ಸಾಧಿಸುವದೆಂದೂ ಮನದಂದು ಖಾದಿ ಚಳುವಳಿಯ ಪುರಸ್ಕರ್ತರಾಗಿದ್ದರು. ಅಖಿಲಭಾರತ ಚರಖಾ ಸಂಘವು ಈ ದಿಶೆಯಲ್ಲಿ ಸಾಧಿಸಿದ ಪ್ರಗತಿಯು ಸ್ತುತ್ಯವಾಗಿದೆ. ಯಾವನೇ ನೂಲುಗಾರನು ನೂಲುಗಾರಿಕೆಯಲ್ಲಿ ಅವಶ್ಯವಿರುವ ಪ್ರಾರಂಭಿಕ ಸಂಗತಿಗಳನ್ನು ಅರಿತುಕೊಳ್ಳುವನಲ್ಲದೆ ತನ್ನ ಕೆಲಸದ ಸಿದ್ಧಿಗಾಗಿ ಅತ್ಯಗತ್ಯವಾಗಿರುವ ಹಾಗು ಅದಕ್ಕೆ ಸಹಜಸಂಬದ್ಧವಾದ ನೂಲುವ ಗಣಿತ ವಿಷಯವನ್ನು ಸಕ್ರಿಯವಾಗಿಯೇ ಅರಗಿಸಿಕೊಳ್ಳುವ ಅವಶ್ಯ. ನಿಜವಾಗಿಯೂ ನೂಲುಗಾರಿಕೆಯಲ್ಲಿ ಕೌಶಲ್ಯವೆಂದರೆ ನೂಲುವ ಗಣಿತವನ್ನು ಕರಗತ ಮಾಡಿಕೊಳ್ಳುವದಾಗಿದೆ. ಈ ದೃಷ್ಟಿಯಿಂದ ಈ ವಿಷಯದಲ್ಲಿ ನುರಿತ ಕೆಲಸಗಾರರಾದ ಶ್ರೀ. ಕೃಷ್ಣದಾಸ ಗಾಂಧಿಯವರು ಬರೆದ ನೂಲುವ ಗಣಿತ ಪುಸ್ತಕವು ಕನ್ನಡದಲ್ಲಿ ಅನುವಾದಿತವಾಗಿ ಪ್ರಕಟವಾಗಿರುವದು ಎಲ್ಲ ಕನ್ನಡಿಗರಿಗೂ ಹೆಮ್ಮೆಯ ಮಾತಾಗಿದೆ. ಈ ಪುಸ್ತಕದಲ್ಲಿ ಯೋಜನೆಯಂತೆ ಮೊದಲಿನ ಎರಡು ಭಾಗಗಳಲ್ಲಿ ನೂಲಿನ ಉದ್ದ ಹಾಗು ನೂಲಿನ ನಂಬರು ಈ ವಿಷಯಗಳು ಬಂದಿದ್ದು ಮೂರನೆಯ ಭಾಗದಲ್ಲಿ ಸ್ವಲ್ಪ ಕಠಿಣ ವಿಷಯವಾದ ನೂಲಿನ ವ್ಯಾಸದ ಬಗ್ಗೆ ವಿಷಯವನ್ನು ಚರ್ಚಿಸಿದುದು ಕ್ರಮಪ್ರಾಪ್ತವಾಗಿದೆ. ವಿಷಯವು ಇದು ನೂಲುಗಾರಿಕೆಯ ಕಾರ್ಮಿಕನ ದೃಷ್ಟಿಯನ್ನು ಶೈಕ್ಷಣಿಕ ದೃಷ್ಟಿಯನ್ನು ಸಮನ್ವಯಗೊಂಡಿದೆ ಎನ್ನಬಹುದು. ಪ್ರಾಯೋಗಿಕ ಲೆಕ್ಕಗಳ ಮುಖಾಂತರವಾಗಿಯೇ ತಾತ್ವಿಕ ಭಾಗವನ್ನು ವಿವರಿಸುವದು ಹೊಸ ಶಿಕ್ಷಣದ ತತ್ವಕ್ಕೆ ಹೊಂದಿಕೆಯಾಗಿದೆ. ಆದರೆ ನೆಯ್ಗೆಯ ದೃಷ್ಟಿಯನ್ನಿಟ್ಟುಕೊಂಡಾಗ ವಿಶಿಷ್ಟ ಪ್ರಾತ್ಯಕ್ಷಿಕ ಹಾಗು ನಿಜಾನುಭವದ ಲೆಕ್ಕಗಳು ಬರುವಂತೆ ಮಾಡಿದ್ದರೆ, ಹೆಚ್ಚು ವ್ಯಾವಹಾರಿಕವೂ ಸ್ವಾಭಾವಿಕವೂ ಆಗಬಹುದಾಗಿತ್ತು. ಉರುಳುಗುಂಡು, ಕ್ಷೇತ್ರಭೇದದ ಇವುಗಳ ಆಕೃತಿಗಳೂ ವರ್ತುಲದ ವ್ಯಾಸದ ಉದ್ದಳತೆ ಹಾಗು ಕ್ಷೇತ್ರಫಲದ ಪ್ರಮಾಣ ಇದರ ವಿವರಣೆಯೂ ಇದ್ದರೆ ಒಳಿತಾಗುತ್ತಿತ್ತು. ಒಟ್ಟಾಗಿ, ನೂಲಿನ ವ್ಯಾಸದ ಬಗ್ಗೆ ವಿವಿಧ ಅಂಶಗಳನ್ನು ಸಹಜಕ್ರಮದಲ್ಲಿ ಹೊಂದಿಸಿದೆ. ಶೈಲಿಯು ಸರಳವಾಗಿದೆ. ಪರಿಶಿಷ್ಟಗಳನ್ನು ಜಾಣತನದಿಂದ ಸೇರಿಸಲಾಗಿದೆ. ಅನುಭವಪೂರ್ಣವಾದ ಜ್ಞಾನದಿಂದ ಕೂಡಿದ ಇಂಥ ವಿಷಯದ ಪುಸ್ತಕಗಳು ಅತ್ಯುಪಯುಕ್ತವಾಗಿವೆ, ಕನ್ನಡದಲ್ಲಿ ಹೆಚ್ಚು ಹೆಚ್ಚಾಗಿಯೂ ಹೊಸ ದೃಷ್ಟಿಯುತವಾಗಿಯೂ ಬರಲೆಂದು ಹಾರೈಸುತ್ತೇವೆ.

—ಪಿ. ಎಸ್. ರಾಯಚೂರ

ಸಾಮುದಾಯಿಕ ಜೀವನದ ಸಂಘಟನೆ

ಲೇಖಕರು : ಶ್ರೀ. ಎಸ್. ಡಿ. ಇಂಚಲ ಬಿ. ಎ., ಬಿ. ಟಿ. ಪ್ರಿನ್ಸಿಪಾಲರು
ಕೆ. ಎಲ್. ಇ. ಸೊಸಾಯಿಟಿಯ ಟಿ. ಸಿ. ಎಂ. ಬೆಳಗಾವ.

★

ಭಾರತೀಯರ ಅಮೋಘವಾದ ತ್ಯಾಗ–ಸಾಹಸಗಳ ಅಮೃತಫಲವಾಗಿ ದೊರೆತ ನಮ್ಮ ಸ್ವಾತಂತ್ರ್ಯವು ಶಾಶ್ವತವಾಗಿ, ನಮ್ಮ ಹೆಮ್ಮೆಯ ನಾಡು ಸರ್ವರೀತಿಯಲ್ಲಿ ಸಂಪನ್ನವಾಗಬೇಕೆಂಬುದೇ ನಮ್ಮೆಲ್ಲರ ಬಯಕೆ. ಅದು, ಜಾತಿ ಮತ ಪಂಥ ಭಾಷೆ ಮೊದಲಾದ ವಿವಿಧ ಬಣಗಳ ಹೀಣವಾಗದೆ ಜ್ಞಾನ, ಪ್ರೇಮ ಸಮತೆಗಳ ಸಾಮರಸ್ಯದ ಚಿನ್ನಗಣಿಯಾಗಬೇಕೆಂದು ನಮ್ಮ ಹಿರಿಯರು ತಮ್ಮ ಆದರ್ಶವನ್ನು ಎದುರಿಗಿಟ್ಟಿದ್ದಾರೆ. ಆದರೆ ಜಾಗತಿಕ ಪರಿಸ್ಥಿತಿಯು ವಿಲಕ್ಷಣವಾಗಿದೆ. ರಾಜಕೀಯದ ವಿವಿಧ ಶಕ್ತಿಗಳ ವಿವಿಧಯುಕ್ತಿಗಳ ಎಳೆದಾಟ ಸೆಳೆದಾಟಗಳಲ್ಲಿ ಸಿಲುಕಿ ವಿಶ್ವಶಾಂತಿಯು ಹದಗೆಟ್ಟು ಹೋಗಿ, ಅಶಾಂತಿಯು ಬೀಡು ಬಿಟ್ಟಿದೆ. ಸ್ವಾರ್ಥ ಆಗಸಕ್ಕೆ ಹೆಡೆ ಎತ್ತಿದೆ. ನೀತಿ ದೂರವಾಗುತ್ತಿದೆ. ಇಂಥ ಜಾಗತಿಕ ಇಂದಿನ ವಿಷಮ ಪರಿಸ್ಥಿತಿಯಲ್ಲಿ ಭಾರತವು ಭೂಮ ಸಾಹಸಗೈದು, ಸ್ವತಂತ್ರವಾಗಿ ಶಾಂತಿಸ್ಥಾಪನೆಯ ಮಹಾ ಮಾರ್ಗದ ಹೆಬ್ಬಾಗಿಲಲ್ಲಿ ಬಂದು ನಿಂತಿದೆ. ಅದು ತನ್ನ ಅಂತಃಶಕ್ತಿಯನ್ನು ಸೇಖರಿಸಿಕೊಂಡು, ರಾಷ್ಟ್ರಾಭಿಮಾನವನ್ನು ಚೇತರಿಸಿಕೊಂಡು ಎದ್ದೇಳಬೇಕಾಗಿದೆ. ಬಾಪೂಜಿಯ ಸತ್ಯ–ಅಹಿಂಸೆ, ತ್ಯಾಗ-ಸೇವೆಗಳ ತಳಹದಿಯ ಮೇಲೆ ನಿರ್ಮಾಣವಾಗಲಿರುವ ಭಾರತದ ಭವ್ಯವಾದ ಆ ಕನಸು ಇದೀಗ ನನಸಾಗಬೇಕಾಗಿದೆ. ಗಗನ ಭೇದಿಯಾದ ಗೌರೀಶಂಕರ ಶಿಖರವು ಜಗತ್ತಿಗೆ ಸಂತೃಪ್ತಿಯ ಸಂಗೀತವನ್ನು ಬಿತ್ತರಿಸುವ ಬಾನುಲಿಯ ಕೇಂದ್ರವಾಗಬೇಕಾಗಿದೆ.

ಹೀಗಾಗಲು, ಭಾರತದ ಹೃದಯದ ಪರಿವರ್ತನೆಯಾಗುವದು ಅವಶ್ಯ. ಈ ಬಗೆಯಾದ ನವಭಾರತದ ನಿರ್ಮಾಣಕ್ಕೆ ಆವಶ್ಯಕವಾದ ಸರ್ವಾಂಗಸುಂದರವಾದ ನವಸಮಾಜ ರಚನೆಯ ಕಾರ್ಯಕ್ಕೆ ಮೊದಲುಮಾಡಬೇಕಾಗಿದೆ. ಅಂಥ ಸಮಾಜದ ಘಟಕವಾದ ನಾಗರಿಕನು ತನ್ನ ಭಾಗದ ಹಕ್ಕು-ಹೊಣೆಗಳನ್ನು ಕರ್ತವ್ಯಕರ್ಮಗಳನ್ನೂ ಸಕಾಲದಲ್ಲಿ ಅರಿತು ಆಚರಿಸುವ ನೈತಿಕ, ಬೌದ್ಧಿಕ, ಮತ್ತು ಶಾರೀರಿಕ ಸರ್ವಾಂಗೀಣವಾದ ವಿಕಾಸವನ್ನು ಹೊಂದಿದವನಾಗಿರಬೇಕು. ಪ್ರಜಾಸತ್ತಾತ್ಮಕ ಸಮಾಜದ ಪ್ರತಿಯೊಬ್ಬ ಸದಸ್ಯನು ಸಾಮುದಾಯಿಕ ಜೀವನದ ಮೂಲ ತತ್ವಗಳನ್ನು ಅಂದರೆ–ಕರ್ತವ್ಯದಕ್ಷತೆ, ಐಕ್ಯತೆ, ಸಹಕಾರ, ಸಮಾನತೆ, ಕ್ರಿಯಾತ್ಮಕವಾದ ಶಿಸ್ತು ಮತ್ತು ಸಂಘಟನೆ, ಇವುಗಳನ್ನು ಸರಿಯಾದ ಅರ್ಥಮಾಡಿಕೊಳ್ಳುವದಲ್ಲದೆ, ಅವುಗಳನ್ನು ಅತ್ಯಂತ ನಂಬುಗೆಯಿಂದ, ತನ್ನ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ತನ್ನ ಕೃತಿಗಳಲ್ಲಿ ಬೆಳಗಬೇಕು. ಅಂಥ ನಾಗರಿಕನು ಮಾತ್ರ ತನ್ನ ಸಮಾಜದ ಕಲ್ಯಾಣವನ್ನು ಸಾಧಿಸಿ, ತನ್ನವರಲ್ಲಿ ತನ್ನ ಕಾರ್ಯಕ್ಷೇತ್ರದ ಬಗೆಗೆ ಅತುಲವಾದ ಶ್ರದ್ಧೆಯನ್ನು ಹುಟ್ಟಿಸಬಲ್ಲನು. ಇಂಥ ಸಮಾಜ ಸೇವಕರಿಂದ ತುಂಬಿದ ಸಮಾಜ ವಿವಿಧ ಪುಷ್ಪರಂಜಿತ ಉದ್ಯಾನದಂತೆ ಕಂಗೊಳಿಸುವದು. ಅದು ಒಮ್ಮೆ ನಂದನವನವೂ ಆಗಬಲ್ಲದು. ನಾಗರಿಕನ ಹಕ್ಕುಹೊಣೆಗಳನ್ನು ನಿರ್ವಹಿಸುವ ಶಕ್ತಿಯನ್ನು ಸಮಾಜದ ವ್ಯಕ್ತಿಯು ಸಾಧಿಸಬೇಕಾದರೆ ಅವನಿಗೆ ಆ ಬಗೆಯಾದ ಶಿಕ್ಷಣ ಸೌಕರ್ಯವನ್ನು ಒದಗಿಸುವದು ಅವಶ್ಯ. ಆ ವಿಶಿಷ್ಟವ್ಯಕ್ತಿಗಳ ತರಬೇತಿಯ ಆದರ್ಶ ಸಿದ್ಧಿಗೆ ಪೋಷಕವಾದ ಶಿಕ್ಷಣ ವಿಧಾನಗಳನ್ನು ಬಳಕೆಯಲ್ಲಿ ತಂದರೆ ಮಾತ್ರ ನಮ್ಮ ನಾಡಿನ ಉದ್ಧಾರ ಕಾರ್ಯ ಸಿದ್ಧಿಸುವದು. ಇದಕ್ಕೆ ಸರಿಯಾದ ಶಿಕ್ಷಣ ಮಾರ್ಗವೆಂದರೆ, ಮಗುವಿಗೆ ಶಾಲಾ ಜೀವನದಲ್ಲಿಯೇ

ಸಮಾಜ ಕಾರ್ಯ ಮಾಡುವ ಯೋಗ್ಯವಾದ ಸಾಕಷ್ಟು ಸಂದರ್ಭಗಳನ್ನು ಒದಗಿಸಿಕೊಡುವದು. ಅಲ್ಲದೆ, ಮಗುವು ಸಮಾಜ ಜೀವನದ ವಿವಿಧಾಂಗಗಳಲ್ಲಿ ಪ್ರತ್ಯಕ್ಷವಾಗಿ ಕೆಲಸಮಾಡುತ್ತ ಅನುಭವಪಡೆಯುವಂತೆ ಯೋಜನೆಗಳನ್ನು ಕೈಕೊಳ್ಳಬೇಕು. ಶಾಲಾ ಮಕ್ಕಳ ಮೇಲೆ ಸಂಪೂರ್ಣವಾದ ನೈಜವಾದ ಹೊಣೆಯನ್ನು ಇಡುವದು ಅತ್ಯಂತ ಅವಶ್ಯವು. ಈ ಚಟುವಟಿಕೆಗಳ ಬಗೆಗೆ ನಿರ್ವಹಿಸಲಿರುವ ಹಕ್ಕುಹೊಣೆಗಳನ್ನು ಕುರಿತು ಕೃತಕತೆಯಾಗಲಿ, ಕೃತಕ ಸಂಬುಗೆಯಾಗಲಿ ಇರಕೂಡದು. ಮಗುವು ತನ್ನ ಜೀವನ ಮಾರ್ಗದಲ್ಲಿ ಬರುವ ತನ್ನವೇ ಆದ ಸಮಸ್ಯೆಗಳನ್ನು ಎದುರಿಸುತ್ತ, ತನ್ಮೂಲಕ ಅನುಭವವನ್ನು ಪಡೆಯುತ್ತ ಜೀವನದಲ್ಲಿ ಮುನ್ನಡೆಯಬೇಕು. ಅವನಿಗೆ ಆಗಾಗ ಮಾರ್ಗ ದರ್ಶನ ಮಾಡಲು ಶಿಕ್ಷಕನಿರುವದು ಅವಶ್ಯವೆನಿಸಿದರೂ ಅವನು ಮಗುವಿನ ಕಾರ್ಯದಲ್ಲಿ ಪದೇಪದೇ ಕೈಹಾಕಿ ಅವನ ಅನುಭವ ತರಬೇತಿಯ ಮಹತ್ವದ ಸಂದರ್ಭಕ್ಕೆ ತಡೆಯುಂಟು ಮಾಡಬಾರದು. ಮಗುವು ಚಟುವಟಿಕೆಯಲ್ಲಿ ತೊಡಗಿರುವಾಗ ನಿರೀಕ್ಷಿಸಿದಂತೆ ಜಯವನ್ನು ಪಡೆಯದೆ ಇರಬಹುದು. ಇಲ್ಲವೆ ಅಪಜಯವನ್ನು ಹೊಂದಲೂ ಬಹುದು. ಆದಾಗ್ಯೂ ಶಿಕ್ಷಕನು ಆ ಕಾರ್ಯ ನಿರ್ವಹಣದ ಕಡಿವಾಣಗಳನ್ನು ತನ್ನ ಕೈಯಲ್ಲಿಯೇ ತೆಗೆದುಕೊಳ್ಳುವ ಆತುರಕ್ಕೆ ಬೀಳಬಾರದು. ಯಾಕೆಂದರೆ, ಆ ಜಯಾಪಜಯಗಳು ಮಗುವಿನವಾಗಿರುತ್ತವೆ. ಅವುಗಳ ಮುಖಾಂತರವೇ ಅವನಿಗೆ ನಿಜವಾದ ಅನುಭವ ದರ್ಶನವಾಗುತ್ತದೆ. ಅದುವೇ ನಿಜವಾದ ಶಿಕ್ಷಣ. ಇಂಥಲ್ಲಿ ಮಗುವಿನ ಜಯಾಪಜಯಗಳೂ, ಆಶೆ ನಿರಾಶೆಗಳೂ ಮುಖ್ಯವಲ್ಲ. ಆದರೆ ಮಗುವು ಆ ದಿಶೆಯಲ್ಲಿ ಮಾಡುವ ಪ್ರಾಮಾಣಿಕವಾದ ಪ್ರಯತ್ನವು ಮುಖ್ಯ. ತಾನು ಕೈಕೊಂಡ ಆ ಹೊಣೆಯನ್ನು ಪೂರಯಿಸುವ ಕುರಿತು ಮಾಡುವ ಆ ಸಾಹಸವು ಪ್ರಾಮುಖ್ಯ.

ಜೀವನ ಶಿಕ್ಷಣದ ಈ ಮಾರ್ಗಕ್ರಮಣದಲ್ಲಿ ತಾನು ಮಾಡಿದ ತಪ್ಪನ್ನು ನಿರೀಕ್ಷಿಸಿ ಪರೀಕ್ಷಿಸಿ ಅವಕ್ಕೆ ತಕ್ಕ ಸಮಾಧಾನವನ್ನು ಹುಡುಕಿ ಅದನ್ನು ಸರಿಪಡಿಸಿಕೊಳ್ಳುವ ಸ್ವಾವಲಂಬನ ಪದ್ಧತಿಯನ್ನೂ ಸ್ವಾನುಭವ ರಂಜಿತವಾದ ಸ್ವತಂತ್ರ ವಿಚಾರಶಕ್ತಿಯನ್ನೂ ಮಗು ರೂಢಿಸಿಕೊಳ್ಳುವದು ಅತ್ಯಂತ ಮಹತ್ವದ್ದು. ಅವಶ್ಯವೆನಿಸಿದಾಗ, ತನ್ನವರ ಅರ್ಥಾತ್ ತನ್ನ ಶಾಲಾಸಮಾಜದವರ ನೆರವನ್ನು ಸಹಕಾರವನ್ನೂ ಸಹಾನುಭೂತಿಯನ್ನೂ ಕೋರಿ, ಅವರೊಂದಿಗೆ ಸಮರಸವಾಗಿ ಹೊಂದಿಕೊಂಡು ತನ್ನ ಜೀವನವನ್ನು ವಿಕಾಸ ಪಡಿಸಿಕೊಳ್ಳುತ್ತಾನೆ. ಹೀಗೆ ಮಗುವು ಸಹಜವಾಗಿ ಸಹಕಾರ ಜೀವನ ತತ್ವಗಳನ್ನು ತಿಳಿದುಕೊಂಡು ಸಾಮಾಜಿಕ ಸದ್ಗುಣಗಳನ್ನು ಅಳವಡಿಸಿಕೊಳ್ಳುತ್ತಾನೆ. ತೇಜಸ್ವಿಯಾದ ನಾಗರಿಕನಾಗುತ್ತಾನೆ. ಇಂದು ಶಾಲೆಯ ಸಣ್ಣ ಸಮಾಜದಲ್ಲಿ ಯಶಸ್ವಿಯಾಗಿ ಜೀವಿಸಿದ ಅವನು ನಾಳಿನ ತನ್ನ ವಿಶಾಲವಾದ ಸಮಾಜದಲ್ಲಿ ಸರಿಯಾಗಿ ಬಾಳಿ ತನ್ನ ಮಾನವೀಯತೆಯನ್ನು ಕಾಪಾಡಿಕೊಳ್ಳಬಲ್ಲನು.

ಇಂಥ ನಾಗರಿಕರನ್ನು ತರಬೇತಿಮಾಡುವ ಬಗೆ ಹೇಗೆ ? ಹೊಣೆ ಯಾರ ಮೇಲೆ ? ಮೊದಲಾದ ಪ್ರಶ್ನೆಗಳನ್ನು ಇದೀಗ ವಿಚಾರಿಸುವದು ಅಗತ್ಯವಿದೆ. ನಾಳಿನ ನಾಗರಿಕರಾಗುವ ಇಂದಿನ ಬಾಲಕರನ್ನು ಈ ಹೊಸ ಬಾಳಿಗೆ ಸನ್ನದ್ಧರಾಗುವಂತೆ ತರಬೇತಿಸುವಂತೆ ನಮ್ಮ ಶಿಕ್ಷಣ ಸಂಸ್ಥೆಗಳನ್ನು ಏರ್ಪಡಿಸಿಕೊಳ್ಳಬೇಕು. ನಮ್ಮ ಶಾಲೆ ಸಾಮಾಜಿಕ ಚಟುವಟಿಕೆಗಳ ಕೇಂದ್ರವಾಗಬೇಕು. ಶಾಲೆಯೂ ಒಂದು ಚಿಕ್ಕದಾದ ಮಕ್ಕಳ ಸಮಾಜ. ಮಕ್ಕಳ ದೈನಂದಿನ ಜೀವನದಲ್ಲಿ ಪರಸ್ಪರ ಸಹಕಾರದಿಂದ ಕಾರ್ಯಮಾಡುವ ಸಂದರ್ಭಗಳನ್ನೂ ಸನ್ನಿವೇಶಗಳನ್ನೂ ಒದಗಿಸಿಕೊಡುವಂತೆ ಶಾಲೆಯ ಆಡಳಿತ ಯೋಜಿಸಲ್ಪಟ್ಟಿರಬೇಕು. ಮಾನಸಿಕ ನೈತಿಕ ಮತ್ತು ಸಾಮಾಜಿಕ ಸನ್ನಿವೇಶಗಳನ್ನು ಶಿಕ್ಷಣದಲ್ಲಿ ಸಂಪೂರ್ಣವಾಗಿ ವಿನಿಯೋಗಿಸಿಕೊಳ್ಳಬೇಕು. ಮಗುವು ಆಯಾ ಪರಿಸ್ಥಿತಿಯಲ್ಲಿ ಆಯಾ ಕಾಲದಲ್ಲಿ ಉದ್ಭವಿಸುವ ಅಡೆತಡೆಗಳೊಡನೆ ಹೋರಾಡುತ್ತ ಹೊಂದಿಕೊಳ್ಳುತ್ತ ಪ್ರತ್ಯಕ್ಷವಾದ ಇರುವಿಕೆಯಿಂದ ಜೀವನ ಕಲೆಯನ್ನು ಸಾಧಿಸಬೇಕೆಂಬುದೇ ಹೊಸ ಶಿಕ್ಷಣದ ಧ್ಯೇಯ. ಆದುದರಿಂದ ನಮ್ಮ ಮಕ್ಕಳು ಉದ್ದೇಶ-ಪೂರ್ಣವಾದ ಜೀವಿತಕ್ಕೆ ಪೋಷಕವಾದ, ಸಾರ್ಥಕವಾದ, ಉಪಯುಕ್ತ-

ವಾದ ಹಾಗೂ ಉತ್ಪಾದಕವಾದ ಚಟುವಟಿಕೆಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುತ್ತ ಒಮ್ಮೆ ಪ್ರತಿಭಟಿಸುತ್ತಾ ಒಮ್ಮೆ ಸಹಕರಿಸುತ್ತಾ, ಒಮ್ಮೆ ತಪ್ಪುತ್ತಾ ಮತ್ತೊಮ್ಮೆ ಜಯಶೀಲರಾಗುತ್ತಾ, ತಮ್ಮ ಸಹಜ ಶಕ್ತಿಗಳನ್ನು ವ್ಯಕ್ತಗೊಳಿಸುತ್ತ ತನ್ಮೂಲಕ ಭಾವನಿಮೊಚನೆಯನ್ನು ಮಾಡಿಕೊಳ್ಳುತ್ತಾ, ಜೀವನದ ಬೇಕುಬೇಡಗಳಿಗೂ, ವೈವಿಧ್ಯಪೂರ್ಣವಾದ ವಿಶಿಷ್ಟ ಸಂದರ್ಭಗಳಿಗೂ ಪ್ರಗತಿಪರವಾಗಿ, ಉದಾತ್ತವಾಗಿ ಹೊಂದಿಕೊಳ್ಳುತ್ತಾ, ಸಮಾಜ ಸೇವೆಯ ಮುಖಾಂತರ ಆತ್ಮವಿಕಾಸವನ್ನು ಸಾಧಿಸುವ ವಿಶಾಲಭಾವನೆಯಿಂದ ತುಂಬಿದ ಜೀವನ ಕೇಂದ್ರವಾಗಬೇಕು ನಮ್ಮ ಇಂದಿನ ಶಾಲೆ. ಇಂಥ ಶಾಲೆಯಲ್ಲಿಯೇ ನಮ್ಮ ನವಭಾರತದ ಸರ್ವಾಂಗ ಸುಂದರವಾದ, ಸ್ವಾವಲಂಬಿಯಾದ, ಸ್ವಾಭಿಮಾನ ಯುಕ್ತವಾದ, ನೈತಿಕ ಬಲಶಾಲಿಯಾದ ಸಮಾಜ ನಿರ್ಮಾಣವಾಗುವದು ಖಂಡಿತ. ಸದ್ಗುಣ ಸಂಪನ್ನನಾದ ವ್ಯಕ್ತಿಯನ್ನೂ ಸರ್ವಾಂಗ ಸುಂದರವಾದ ಸಮಾಜವನ್ನೂ ತರಬೇತಿಗೊಳಿಸುವ ಶಿಕ್ಷಣವೇ ನಮಗೆ ಬೇಕಾದ ಶಿಕ್ಷಣ. ಅದುವೇ ರಾಷ್ಟ್ರೀಯ ಶಿಕ್ಷಣ. ಈ ಶಿಕ್ಷಣ ಅಂಗದಲ್ಲಿ ಸಂಘಟಿಸುವ ಶಾಲಾ ಜೀವನದ ವಿವಿಧ ಸಾಮಾಜಿಕ ಚಟುವಟಿಕೆಗಳನ್ನು ಈ ಕೆಳಗೆ ಸಂಗ್ರಹಿಸಲಾಗಿದೆ.

ಮಗುವಿನ ನೈಸರ್ಗಿಕ ಮತ್ತು ಸಾಮಾಜಿಕ ಸನ್ನಿವೇಶಗಳನ್ನು ಅನುಲಕ್ಷಿಸಿ ಅವುಗಳ ಸಾಮುದಾಯಿಕ ಜೀವನ ಸಂವರ್ಧನೆಯ ದೃಷ್ಟಿಯನ್ನು ಗಮನಿಸಿ ಅಂಥ ಚಟುವಟಿಕೆಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಕ್ರೋಢಿಕರಿಸಲಾಗಿದೆ. ಇವು ಸೂಚನೆಗಳು ಮಾತ್ರವಲ್ಲದೆ ಸಂಪೂರ್ಣವಾದ ವಿವರಣೆಗಳಲ್ಲವೆಂಬುದನ್ನು ಲಕ್ಷ್ಯದಲ್ಲಿಡಬೇಕು.

(೧) ರಾಜಕೀಯ, ಸಾಮಾಜಿಕ, ಧಾರ್ಮಿಕಗಳಿಗೆ ಸಂಬಂಧಿಸಿದ ಉತ್ಸವಗಳು ಮಾತ್ರ ಹಬ್ಬಹುಣ್ಣಿವೆಗಳು.

(೨) ಐತಿಹಾಸಿಕ ಪ್ರಸಿದ್ಧ ಸ್ಥಳಗಳಿಗೂ, ಆರ್ಥಿಕ ದೃಷ್ಟಿಯಿಂದ ಮಹತಿಯನ್ನು ಪಡೆದ ಔದ್ಯೋಗಿಕ ಕೇಂದ್ರಗಳಿಗೂ, ಸಾಹಿತ್ಯ, ಸಂಸ್ಕೃತಿ, ಇತರ ಕಲೆಗಳನ್ನು ಪ್ರದರ್ಶಿಸುವ ಮಹತ್ವದ ಸ್ಥಳಗಳಿಗೂ ಶೈಕ್ಷಣಿಕ ಪ್ರವಾಸಗಳನ್ನು ಕೈಕೊಳ್ಳುವದು.

(೩) ರಾಷ್ಟ್ರ ಪುರುಷರ, ಕವಿಗಳ, ವಿಜ್ಞಾನಿಗಳ ಸಾಧುಸಂತರ ಅಲ್ಲದೆ ಮಾನವ ಕಲ್ಯಾಣಕ್ಕೆ ವಿಶ್ವಬಾಂಧವ್ಯಕ್ಕೆ ಹೆಣಗಾಡಿದ ಇತರ ಮಹಾವಿಭೂತಿಗಳ ಜಯಂತ್ಯುತ್ಸವಗಳನ್ನೂ ಪುಣ್ಯ ತಿಥಿಗಳನ್ನು ಆಚರಿಸುವದು.

(೪) ಸ್ನೇಹ ಸಮ್ಮೇಲನ, ಪಾಲಕರ ದಿನ, ಶಾಲಾ ದಿನ, ಸ್ವಚ್ಛತೆಯ ದಿನ (Safai day) ಸಾಂಸರ್ಗಿಕ ರೋಗಗಳ ದಿನ, ಶಾರೀರಿಕ ಶಿಕ್ಷಣದ ದಿನ, ಮುಂತಾದ ಪ್ರತ್ಯೇಕ ದಿನಗಳನ್ನು ಉಚಿತವಾದ ರೀತಿಯಲ್ಲಿ ಆಯಾ ಪರಿಸ್ಥಿತಿಗನುಸರಿಸಿ ಆಚರಿಸುವದು.

(೫) ಕ್ರೀಡಾಸಮ್ಮೇಲನ, ಸ್ಕೌಟ ಸಂಘಟನೆ, ಸಹಕಾರ ಸಂಘ, ಚರ್ಚಾಕೂಟ, ಅಭ್ಯಾಸಕೂಟ, ವಿವಿಧವಿನೋದಾವಳಿಗಳ ಯೋಜನೆ, ಕೈಬರೆಹದ ಪತ್ರಿಕೆ, ಪ್ರದರ್ಶನಗಳು ಮೊದಲಾದವುಗಳನ್ನು ಸಂಘಟಿಸುವದು.

ಈ ಮೊದಲಾದ ಸಾಮುದಾಯಿಕ ಚಟುವಟಿಕೆಗಳನ್ನು ಸಂಘಟಿಸುವ ಬಗೆಗೆ ಶಿಕ್ಷಕರು ಅವಶ್ಯವಾಗಿ ಗಮನಿಸತಕ್ಕ ಕೆಲವು ಮಹತ್ವದ ಸಂಗತಿಗಳನ್ನು ಈ ಕೆಳಗೆ ಅವರ ಅವಗಾಹನೆಗೆ ತರುವದು ಅವಶ್ಯವೆಂದು ತೋರುತ್ತಿದೆ.

(೧) ಇಂಥ ಚಟುವಟಿಕೆಗಳಿಂದ ಸಾಧಿಸಬೇಕಾದ ಗೊತ್ತು ಗುರಿಗಳ ಸಿದ್ಧಿಗೆ ಶಿಕ್ಷಕರು ಮಹತ್ವಕೊಡಬೇಕಲ್ಲದೆ, ಅವುಗಳ ಔಪಚಾರಿಕವಾದ ಆಚರಣೆಯ ಕಡೆಗಾಗಲಿ, ಯಾಂತ್ರಿಕವಾದ ನೀರಸವಾದ ಆಚರಣೆಯ ಕಡೆಗಾಗಲೀ ಶಿಕ್ಷಕರು ಲಕ್ಷ್ಯಪೂರಯಿಸತಕ್ಕದ್ದಲ್ಲ.

(೨) ಈ ಚಟುವಟಿಕೆಗಳು ಮಕ್ಕಳಿಗಾಗಿಯೇ ಮಕ್ಕಳಿಂದಲೇ ಸಂಘಟಿಸಲ್ಪಡಬೇಕು. ಅವುಗಳ ನಿರ್ವಹಣಕಾರ್ಯದಲ್ಲಿ ಹೆಚ್ಚಾಗಿ ಮಕ್ಕಳೇ ಹೊಣೆಯನ್ನು ಹೊರುವಂತೆ ದಕ್ಷತೆ ವಹಿಸಬೇಕು.

(೩) ಅವುಗಳಲ್ಲಿ ವಿಶೇಷವಾದ ಆಸಕ್ತಿ ಅಭಿರುಚಿಗಳನ್ನು ಮಕ್ಕಳೇ ವಹಿಸುವಂತೆ ಶಿಕ್ಷಕರು ಅವರಿಗೆ ಹುರುಪು ಹುಮ್ಮಸ್ಸುಗಳನ್ನು ನೀಡಬೇಕು.

(೪) ಚಟುವಟಿಕೆಗಳು ವ್ಯಕ್ತಿಗತವಾಗಿರದೆ ಸಾಮು-

ವಾಯ ಜೀವನಕ್ಕೆ ಪೋಷಕವಾಗಿರಬೇಕು. ವ್ಯಕ್ತಿಗತ ಚಟುವಟಿಕೆಗಳಿಗೆ ಅವಕಾಶವಿದ್ದರೂ ಅವು ಸಾಂಘಿಕ ಜೀವನಕ್ಕೆ ಅಂಗವಾಗಿರಬೇಕು. ವ್ಯಕ್ತಿಯ ಜಯವು ಸಂಘದ ಜಯವಾಗಿ, ಸಂಘಕ್ಕಾಗಿ ಎಂಬ ವಿಶಾಲವಾದ ಭಾವಬೆಳೆದು ಬರಬೇಕು. ವ್ಯಕ್ತಿಯು ಸಂಘದ ಸಲುವಾಗಿ ತ್ಯಾಗಮಾಡಲು ಸಿದ್ಧನಾಗುವಂತೆ ಪುರಸ್ಕರಿಸಬೇಕು.

(೫) ಬಾಲಕರ ನಿತ್ಯ ಜೀವನಕ್ಕೆ ಹೊಂದಿಕೊಂಡು ವ್ಯವಹಾರಜ್ಞಾನವನ್ನು ಹೆಚ್ಚಿಸಿ, ಅವರ ಜೀವನ ತರ-ಬೇತಿಗೆ ನೆರವಾಗುವಂತೆ ವಿವಿಧ ವಿಷಯಗಳನ್ನು ತಿಳಿದುಕೊಳ್ಳುವಂತೆ ಅಥವಾ ಚಟುವಟಿಕೆಗಳಿಗೆ ಅವು ಸಹಜವಾಗಿ ಅನುಬಂಧಿಸಲ್ಪಡುವಂತೆ ಎಚ್ಚರಪಡಬೇಕು.

(೬) ಸಾಮುದಾಯಿಕ ಜೀವನದಲ್ಲಿ ಹೆಚ್ಚು ಹೆಚ್ಚಾದ ಅಭಿರುಚಿ ಆಸಕ್ತಿಗಳು ಈ ಮಾಸ್ಕಗಳಲ್ಲಿ ಬೆಳೆಯುವಂತೆ ಶ್ರದ್ಧೆ ಸಹಾನುಭೂತಿಗಳು ಆವಿರ್ಭವಿಸುವಂತೆ ಸಮಾಜದ ಅಭಿಮಾನ ಉದಾತ್ತವಾಗಿ ಬೆಳೆಯುವಂತೆ ಈ ಚಟುವಟಿಕೆಗಳು ಸಾಧನವಾಗಬೇಕು.

(೭) ಯಾವದೊಂದು ವಿಶಿಷ್ಟವಾದ ಮತ-ಪಂಥ, ಪಕ್ಷ-ಸಂಗಡ, ಭಾಷೆ-ಭಾವನೆ, ಪ್ರಾಂತ-ಪ್ರದೇಶಗಳಿಗೆ ಕೇವಲ ಸಂಬಂಧಪಟ್ಟಿರದೆ, ಎಲ್ಲರಿಗೂ ಆದರಣೀಯವಾಗುವಂತೆ, ಎಲ್ಲರಲ್ಲಿಯೂ ಜ್ಞಾನ-ಪ್ರೇಮ-ಸಮತೆಗಳನ್ನು ಸ್ಫುರಿಸಿ ಪರಸಹಿಷ್ಣುತೆ ಸಹಜವಾಗಿ ಬೆಳೆಯುವಂತೆ ಸಮಾಜದ ಸಾರ್ವತ್ರಿಕ ಪ್ರಗತಿಗೆ ಪೋಷಕವಾಗುವಂತೆ ಈ ಚಟುವಟಿಕೆಗಳು ಸಂಘಟಿಸಲ್ಪಡುವುದು ಅತ್ಯಂತ ಮಹತ್ವದ್ದು. ಒಟ್ಟಾರೆ ಸಮಾಜದ ಭಿನ್ನತೆಯಲ್ಲಿ ಏಕರೂಪತೆಯನ್ನು, ವಿವಿಧತೆಯಲ್ಲಿ ಐಕ್ಯತೆಯನ್ನು ಸಾಧಿಸುವದು ನಿಜವಾದ ಗುರಿಯು. ಈ ಗುರಿಯತ್ತ ಗಮನವಿರಬೇಕು.

ಸಾರ್ವಜನಿಕರ ಸಹಕಾರ ಮತ್ತು ಸಂಪರ್ಕ :

ಈ ಚಟುವಟಿಕೆಗಳು ಯಶಸ್ವಿಯಾಗಬೇಕಾದರೆ ಸಾರ್ವಜನಿಕರ ಸಹಕಾರ ಸಂಪರ್ಕಗಳು ಅನಿವಾರ್ಯವಾಗಿರುವದರಿಂದ ಅವುಗಳನ್ನು ಪಡೆಯುವದೊಂದು ಸಮಸ್ಯೆಯಾಗಿದೆ. ಸದುದ್ದೇಶದಿಂದ ಪ್ರೇರಿತವಾದ ಪ್ರಾಮಾಣಿಕವಾದ ಪ್ರಯತ್ನಕ್ಕೆ ಎಲ್ಲರ ಸಹಕಾರ ಸಹಾನುಭೂತಿಗಳು ಅವಶ್ಯವಾಗಿ ಸಿಕ್ಕುತ್ತವೆ. ಯಾವ ಪಕ್ಷ ಸಂಗಡಕ್ಕೂ ಜಾತಿಮತಕ್ಕೂ ಅಂಟಿಕೊಳ್ಳದೆ ಜಾತ್ಯ-ತೀತನಾದ ಶ್ರದ್ಧಾವಂತ ಕಾರ್ಯಕರ್ತನಿಗೆ ಹಳ್ಳಿಯ ಸಮಾಜವೇ ಆಗಲಿ ದಿಳ್ಳಿಯ ಸಮಾಜವೇ ಆಗಲಿ ಉತ್ಸಾಹದಿಂದ ಸಹಕಾರವನ್ನು ನೀಡುವದರಲ್ಲಿ ಸಂದೇಹವಿಲ್ಲ. ಆರ್ಥಿಕ ಅವನತಿಯ ಇಂದಿನ ವಿಪರೀತ ಪರಿಸ್ಥಿತಿಯಲ್ಲಿ ದುಂದುಗಾರಿಕೆಗೆ ಕೊಂಚವೂ ಆಸ್ಪದವಿರದಂತೆ ಕಾರ್ಯಕ್ಷೇತ್ರದ ಸ್ಥಾನಿಕ ಪರಿಸ್ಥಿತಿಗೆ ಹೊಂದಿಕೆಯಾಗುವಂತೆ ಪಾಲಕರ ಮೇಲೆ ಆರ್ಥಿಕ ಭಾಗ ವಿಶೇಷವಾಗಿ ಬೀಳದಂತೆ ಈ ಯೋಜನೆಗಳನ್ನು ಕೈಕೊಳ್ಳುವದು ಅವಶ್ಯ. ಈ ಚಟುವಟಿಕೆಗಳ ಶೈಕ್ಷಣಿಕ ಮಹತ್ವವನ್ನು ಸಾರ್ವಜನಿಕರಿಗೆ ಬಿಂಬಿಸುವಂತೆ ಹೇಳಿ, ಅವರ ಸಹಕಾರವನ್ನು ತೋರಿದಲ್ಲಿ ಹೆಚ್ಚಿಗೆ ಅನುಕೂಲವಾಗುವದೆಂದು ನಿರೀಕ್ಷಿಸಬಹುದು.

ಯಾವದೊಂದು ಚಟುವಟಿಕೆಯ ಪ್ರತ್ಯಕ್ಷವಾದ ಕಾರ್ಯಸಂಘಟನೆಯ ವಿವಿಧ ವಿಧಾನಗಳನ್ನು ಕುರಿತು ಇನ್ನು ಮುಂದೆ ಸಂಕ್ಷೇಪವಾಗಿ ವಿವರಿಸುವಾ. ಇಂಥ ಕಾರ್ಯಸಂಘಟನೆಯನ್ನು ಕಾರ್ಯರೂಪಕ್ಕಿಳಿಸುವಾಗ ಸ್ವಯಂಪ್ರೇರಿತವಾದ ಶಿಸ್ತನ್ನು ಕಾಯ್ದುಕೊಳ್ಳುವದು ಮಹತ್ವದ್ದು. ಈ ಬಗೆಯಾದ ಶಿಸ್ತುಪಾಲನೆಯು ಮಗುವಿನ ಶೀಲದಲ್ಲಿ ಸಮರಸವಾಗಬೇಕು. ಈ ಶಿಸ್ತು ನಮ್ಮ ಜೀವನ ಚಕ್ರಕ್ಕೆ ತೈಲವನ್ನು ಉಣ್ಣಿಸಿದಂತೆ ಎಂಬ ಉಕ್ತಿಯನ್ನು ಲಕ್ಷ್ಯದಲ್ಲಿಡಬೇಕು. ಶಿಸ್ತಿನಿಂದ ಮಾಡಲ್ಪಟ್ಟ ಎಲ್ಲ ಕಾರ್ಯಗಳು ಸುಗಮವಾಗಿ ಸಾಂಗವಾಗುವವು. ಆದ್ದರಿಂದ ಸಾಮುದಾಯಿಕ ಚಟು-ವಟಿಕೆಯನ್ನು ಒಂದು ಕ್ರಮಬದ್ಧವಾಗಿ ನೆರವೇರಿಸುವಂತೆ ರೂಢಿ ಮಾಡಿಸಬೇಕು. ಅದರಲ್ಲಿ ಸಾಮಾನ್ಯವಾಗಿ ನಾಲ್ಕು ಹಂತಗಳನ್ನು ಕಲ್ಪಿಸಬಹುದು. ೧. ಕಾರ್ಯಪ್ರೇರಣೆ, ೨. ಕಾರ್ಯಯೋಜನೆ, ೩. ಕಾರ್ಯನಿರ್ವಹಣೆ, ೪. ಕಾರ್ಯಪರಿಶೀಲನೆ.

ಕಾರ್ಯಪ್ರೇರಣೆ : ಇಡಿಯ ತಿಂಗಳಲ್ಲಿ ಕೈಕೊಳ್ಳಬೇಕಾಗಿರುವ ಕಾರ್ಯಕ್ರಮಗಳನ್ನು ಮುಖ್ಯಾಧ್ಯಾಪಕರೂ, ಉಪಶಿಕ್ಷಕರೂ ಕೂಡಿ, ಚರ್ಚಿಸಿ, ಪೂರ್ವದಲ್ಲಿಯೇ ಆಲೋಚಿಸಿ ಅಂಥ ಒಂದು ಅಂದಾಜುಪತ್ರಿಕೆ-

ಯನ್ನು ತಯಾರಿಸಿಕೊಳ್ಳಬೇಕು. ಅವುಗಳ ಅವಶ್ಯಕತೆ, ಮಹತ್ವಗಳನ್ನು ಕುರಿತು ಮಕ್ಕಳೆಲ್ಲರಿಗೆ ಒಂದು ಸಭೆಯಲ್ಲಿ ಮನದಟ್ಟಾಗುವಂತೆ ವಿವರಿಸಿ ಆ ದಿಶೆಯಲ್ಲಿ ಅವರ ಕುತೂಹಲವನ್ನು ಕೆರಳಿಸಿ ಅವರನ್ನು ಕಾರ್ಯೋನ್ಮುಖರಾಗುವಂತೆ ಶಿಕ್ಷಕರು ಪ್ರೇರೇಪಿಸಬೇಕು.

ಕಾರ್ಯಯೋಜನೆ : ಚಟುವಟಿಕೆಯನ್ನು ಆರಿಸಿಕೊಂಡ ನಂತರ, ಅದನ್ನು ಕಾರ್ಯರೂಪದಲ್ಲಿ ತರುವ ಕಿಚ್ಚಾದ ಹೊಣೆಯನ್ನು ಶಾಲಾ ಮಕ್ಕಳಿಂದ ಚುನಾಯಿಸಲ್ಪಟ್ಟ ಪ್ರಾತಿನಿಧಿಕ ಕಾರ್ಯಕಾರೀ ಮಂಡಲಕ್ಕೆ ಒಪ್ಪಿಸಬೇಕು. ಆ ಉತ್ಸವದ ಅಥವಾ ಚಟುವಟಿಕೆಯ ಪೂರ್ವಸಿದ್ಧತೆ, ಅತಿಥಿಗಳು, ಆಮಂತ್ರಿಸುವ ಯಾದಿ, ಕಾರ್ಯಯೋಜನೆಯ ಸಂಪೂರ್ಣವಾದ ಕಾರ್ಯಕ್ರಮಪಟ್ಟಿ, ಮನರಂಜನೆಯ ವಿವರ, ಸ್ವಚ್ಛತೆ ಮತ್ತು ಅಲಂಕಾರ, ಸ್ಥಳನಿರ್ದೇಶ ಪ್ರದರ್ಶನ ಮೊದಲಾದ ವಿವಿಧ ಕಾರ್ಯಗಳನ್ನು ಕಾರ್ಯಕಾರೀ ಮಂಡಳವು ಶಿಕ್ಷಕರ ಮಾರ್ಗದರ್ಶಕ್ಕದಲ್ಲಿ ನಿರ್ಧರಿಸಿ, ವಿವಿಧ ಕಾರ್ಯಗಳನ್ನು ಬೇರೆ ಬೇರೆ ಉಪಸಮಿತಿಗಳಿಗೆ ಒಪ್ಪಿಸಿಕೊಡಬೇಕು. ಶಾಲೆಯ ಆಯಾ ವರ್ಗದವರ ವಯಸ್ಸು, ಕರ್ತೃತ್ವಶಕ್ತಿ ಮೊದಲಾದ ಅಂಶಗಳನ್ನು ಅನುಲಕ್ಷಿಸಿ ಈ ಕಾರ್ಯವನ್ನು ವಿಭಜಿಸತಕ್ಕದ್ದು. ಶಾಲೆಯ ಎಲ್ಲ ಮಕ್ಕಳೂ ಎಲ್ಲ ವರ್ಗಗಳೂ ಆ ಸಾಮುದಾಯಕ ಕಾರ್ಯಕ್ರಮದ ಯಶಸ್ಸಿಗಾಗಿ ತಮ್ಮ ತಮ್ಮ ಭಾಗದ ಕರ್ತವ್ಯವನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸುವಂತೆ ಯತ್ನಿಸುವ ರೀತಿಯಲ್ಲಿ ಶಿಕ್ಷಕರು ಮಾರ್ಗದರ್ಶನ ಮಾಡುವದು ಅತ್ಯಂತ ಅವಶ್ಯವು.

ಆರಿಸಿಕೊಂಡ ಚಟುವಟಿಕೆಯು ಒಬ್ಬ ರಾಷ್ಟ್ರೀಯ ಕವಿಯ ಜಯಂತ್ಯುತ್ಸವವೆಂದು, ಉದಾಹರಣೆಗಾಗಿ ಇಟ್ಟುಕೊಂಡರೆ ಅದನ್ನು ಸಂಘಟಿಸುವ ರೀತಿನೀತಿಗಳನ್ನು ಈ ಕೆಳಗೆ ಸಂಕ್ಷೇಪವಾಗಿ ವಿವರಿಸಬಹುದು. ಶಾಲೆಯ ಕಾರ್ಯಕಾರೀ ಮಂಡಳವು ಮೊದಲಿಗೆ ಸಣ್ಣ ಸಣ್ಣ ಸಮಿತಿಗಳನ್ನು ನಿರ್ಮಿಸಬೇಕು. ೧. ಸಂಘಟನಾ ಸಮಿತಿ, ೨. ಕಾರ್ಯಕ್ರಮಗಳನ್ನು ಕೈಕೊಳ್ಳುವ ಸಮಿತಿ, ೩. ಸ್ವಾಗತ ಸಮಿತಿ, ೪. ಸ್ವಯಂಸೇವಕರ ಸಮಿತಿ, ೫. ವಿವಿಧ ವಿನೋದಾವಳಿಗಳ ಸಮಿತಿ...... ಇತ್ಯಾದಿ. ಸಂಘಟನಾ ಸಮಿತಿಯವರು ತಮಗೆ ಯಾವ ರೀತಿಯಿಂದ ಸಹಕಾರ ಸಹಾಯಗಳು ಎಲ್ಲ ವರ್ಗದ ವಿದ್ಯಾರ್ಥಿಗಳಿಂದ ಬೇಕಾಗಿವೆಯೆಂಬುದನ್ನು ವ್ಯವಸ್ಥಿತವಾಗಿ ತಿಳಿಸುವದು. ಆ ರಾಷ್ಟ್ರೀಯ ಕವಿಯ ಜೀವನ ಮತ್ತು ಕಾವ್ಯಗಳಿಗೆ ಸಂಬಂಧಿಸಿದ ಸಾಮಗ್ರಿಯನ್ನು ಸಂಗ್ರಹಿಸುವದು, ಭಾವಚಿತ್ರಗಳನ್ನು ಸಂಗ್ರಹಿಸುವದು, ಅವನ ಕೃತಿಗಳ ಪ್ರದರ್ಶನವನ್ನು ಏರ್ಪಡಿಸುವದು, ಅವನ ಕಾವ್ಯದ ಭಾಗಗಳನ್ನು ಪ್ರೇಕ್ಷಕರ ಮುಂದೆ ಗಮಕ ರೀತಿಯಿಂದ ಹೇಳುವದನ್ನು ರೂಢಿ ಮಾಡಿಸುವದು, ಅವನ ಜೀವನ-ಮತ್ತು ಕೃತಿಗಳ ಬಗ್ಗೆ ಸಣ್ಣ ಸಣ್ಣ ಭಾಷಣಗಳನ್ನೂ, ಲೇಖನಗಳನ್ನೂ, ಕೈಬರೆಹದ ಪತ್ರಿಕೆಯನ್ನು ಸಿದ್ಧಪಡಿಸುವಂತೆ ಯೋಜನೆಗಳನ್ನು ಸಂಘಟಿಸುವದು ಇವೇ ಮೊದಲಾದ ಕಾರ್ಯಗಳನ್ನು ಈ ಸಮಿತಿಯು ಕಾರ್ಯರೂಪದಲ್ಲಿ ತರತಕ್ಕದ್ದು.

ಕಾರ್ಯಸಮಿತಿಯು, ಸಭೆಕೂಡಿಸುವ ಸ್ಥಳವನ್ನು ನಿರ್ಧರಿಸುವದು, ಕೂಡ್ರುವ ಆಸನಗಳ ವ್ಯವಸ್ಥೆ ಮಾಡಿಸುವದು. ಸಭಾಗೃಹವನ್ನು ಮಾವಿನ ತೋರಣ, ತೆಂಗಿನ ಗರಿ, ಇಲ್ಲವೆ ಬಾಳೆಯ ಗಿಡ ಇಲ್ಲವೆ ಗರಿಗಳಿಂದ ಅಲ್ಲದೆ ರಂಗೋಲಿ ಮೊದಲಾದವುಗಳಿಂದ ಅಲಂಕರಿಸುವದು, ಈ ಮೊದಲಾದ ಕಾರ್ಯಗಳನ್ನು ಮಾಡುವದು.

ಸ್ವಾಗತಸಮಿತಿಯು ಯೋಗ್ಯವಾದ ಅತಿಥಿಗೆ ಆಮಂತ್ರಣ ಸಲ್ಲಿಸುವದು; ಆಮಂತ್ರಣ ಪತ್ರಿಕೆಗಳನ್ನು ಮೇಲಿನ ವರ್ಗದ ಹುಡುಗರಿಂದ ಉಚಿತವಾಗಿ ಸುಂದರವಾಗಿ ಬರೆಯಿಸುವದು ಮತ್ತು ಅವೆಲ್ಲವುಗಳನ್ನು ಆಯಾ ಅತಿಥಿಗಳಿಗೆ ಮುಟ್ಟಿಸುವದು. ಸಭೆಯ ದಿನ ಆಮಂತ್ರಿತರನ್ನೂ ಅತಿಥಿಗಳನ್ನೂ ಉಚಿತವಾದ ರೀತಿಯಲ್ಲಿ ಬರಮಾಡಿಕೊಂಡು ಕೂಡ್ರಿಸುವದು.

ಸ್ವಯಂಸೇವಕ ಸಮಿತಿಯು, ಸಭೆಯ ಶಿಸ್ತನ್ನು ಕಾಯುವ ಕುರಿತು ಎಲ್ಲ ಕಾರ್ಯಗಳನ್ನು ಯೋಜನೆಯನ್ನೂ ಕೈಕೊಂಡು ನಿರ್ವಹಿಸುವದು. ವಿವಿಧ-ವಿನೋದಾವಳಿಯ ಸಮಿತಿಯು ತಮ್ಮ ಕಾರ್ಯಕ್ರಮವನ್ನು ಸರಿಯಾಗಿ ಸಿದ್ಧಪಡಿಸಿಕೊಂಡು ಪ್ರದರ್ಶಿಸುವದು. ಹೀಗೆ ವಿವಿಧ ಸಮಿತಿಗಳು ತಮ್ಮ ತಮ್ಮ ಕರ್ತವ್ಯಕರ್ಮಗಳನ್ನು ಹೊಣೆಯರಿತು ಓರಣದಿಂದ ನಿರ್ವಹಿಸುವಂತೆ ಶಿಕ್ಷಕರು ಮಾರ್ಗದರ್ಶನ ಮಾಡುತ್ತಿರಬೇಕು.

ಕಾರ್ಯನಿರ್ವಹಣೆ :

ಶಾಲಾಗೃಹದ ಸ್ವಚ್ಛತೆಯ ಕಾರ್ಯ ಪೂರ್ತಿಗೊಂಡಿರಬೇಕು. ಸಭಾಗ್ರಹವು ತಳಿರು ತೋರಣಗಳಿಂದ, ಉಚಿತ ಆಸನಗಳಿಂದ ಅಲಂಕೃತವಾಗಿರಬೇಕು. ಕಾರ್ಯಕ್ರಮದ ದಿನ ಎಲ್ಲ ಬಾಲಕರು ನಿಯಮಿಸಲ್ಪಟ್ಟ ಕಾರ್ಯಗಳನ್ನು ಮಾಡುವವರಲ್ಲಿ ತೊಡಗಬೇಕು. ಅಂದಿನ ಕಾರ್ಯಕ್ರಮದ ಸ್ಥೂಲವಾದ ರೂಪರೇಷೆಗಳನ್ನು ಈಗ ಹೀಗೆ ವಿವರಿಸಬಹುದು. ೧. ಪ್ರಾರ್ಥನೆ, ಸ್ವಾಗತ ಪದ. ೨. ಅಧ್ಯಕ್ಷರ ಸೂಚನೆ (ಬಾಲಕರಿಂದ). ೩. ಶಾಲೆಯ ಮುಖ್ಯಾಧ್ಯಾಪಕರಿಂದ ಪ್ರಾಸ್ತವಿಕ ಭಾಷಣ. ೪. ವರದಿ ವಾಚನ (ಶಾಲಾ ಪ್ರತಿನಿಧಿಯಿಂದ) ಈ ವರದಿಯಲ್ಲಿ ಆಯಾ ವರ್ಗದವರು ಮಾಡಿದ ಕಾರ್ಯಗಳ ವಿವರಗಳನ್ನು ನಮೂದಿಸಿರಬೇಕು. ೫. ಸಂಕ್ಷಿಪ್ತ ವಿನೋದಾವಳಿಗಳು (ಬಾಲಕರಿಂದ). ಈ ಕಾರ್ಯಕ್ರಮವನ್ನು ಕೊನೆಗೆ ಇಟ್ಟುಕೊಳ್ಳಬಹುದು. ೬. ಮುಖ್ಯ ಅತಿಥಿಗಳ ಭಾಷಣ. ೭. ಆಭಾರಮನ್ನಣೆ (ವಿದ್ಯಾರ್ಥಿಗಳಿಂದ). ಈ ಕಾರ್ಯಕ್ರಮವು ಪೂರ್ತಿಯಾದ ನಂತರ ಶಾಲೆಯಲ್ಲಿ ಏರ್ಪಡಿಸಲಾದ ಪ್ರದರ್ಶನವನ್ನು ಅತಿಥಿ-ಅಭ್ಯಾಗತರು ನೋಡಿಕೊಂಡು ಹೋಗುವಂತೆ ತಿಳಿಸಿರಬೇಕು. ಈ ಕಾರ್ಯಕ್ರಮವನ್ನು ತಮ್ಮ ವಿಶಿಷ್ಟ ಚಟುವಟಿಕೆಯನ್ನು ಅನುಲಕ್ಷಿಸಿ ಸರಿಪಡಿಸಿಕೊಳ್ಳಬಹುದು. 'ಪಾರಿತೋಷಕ ವಿತರಣ' ಸಮಾರಂಭವು ಅವಶ್ಯವೆನಿಸಿದರೆ ಮುಖ್ಯ ಅತಿಥಿಗಳ ಭಾಷಣಕ್ಕಿಂತಲೂ ಪೂರ್ವದಲ್ಲಿ ಇಟ್ಟುಕೊಳ್ಳಬೇಕು.

ಕಾರ್ಯ ಪರಿಶೀಲನೆ :

ಸಾಮಾನ್ಯವಾಗಿ ಮರುದಿನ ಎಲ್ಲ ಸಮಿತಿಯಲ್ಲಿ ಕೆಲಸ ಮಾಡಿದ ಸದಸ್ಯರು ಒಂದೆಡೆಗೆ ಸೇರಿ ಈ ಚಟುವಟಿಕೆಯಲ್ಲಿ ಸಂಭವಿಸುವ ತೊಡಕು ತೊಂದರೆಗಳನ್ನೂ, ಆಕಸ್ಮಿಕ ಘಟನೆಗಳನ್ನೂ ಕುರಿತು ಪರ್ಯಾಲೋಚಿಸಿ ಅವುಗಳನ್ನು ನಿವಾರಿಸುವ ಕುರಿತು ಉಪಾಯಗಳನ್ನು ಶಿಕ್ಷಕರ ಸಹಾಯದಿಂದ ತಿಳಿದುಕೊಳ್ಳುವದು. ಅಲ್ಲದೆ ಸದರೀ ಕಾರ್ಯಕ್ರಮದ ಸಂಕ್ಷಿಪ್ತವರದಿಯನ್ನು ತಯಾರಿಸಿ ಪ್ರಕಟನೆಯ ಸಲುವಾಗಿ ಪತ್ರಿಕೆಗಳಿಗೆ ಕಳಿಸುವದು. ಇಡಿಯ ಕಾರ್ಯಕ್ರಮಕ್ಕೆ ತಗುಲಿದ ಆಯವ್ಯಯದ ವಿವರಗಳನ್ನೊಳಗೊಂಡ ಜಮಾಖರ್ಚನ್ನು ಬರೆದು ಅದನ್ನು ಎಲ್ಲ ವಿದ್ಯಾರ್ಥಿಗಳ ಅವಗಾಹನೆಗೆ ತರುವದು. ಆ ಬಗ್ಗೆ ಬರುವ ಆಕ್ಷೇಪಣೆಗಳಿಗೆ ಪ್ರಾಮಾಣಿಕವಾದ ಯೋಗ್ಯ ಕಾರಣಗಳನ್ನು ಕೊಡುವದು.

ಇಲ್ಲಿಯ ವರೆಗೆ ಇಂಥ ಸಾಮುದಾಯ ಚಟುವಟಿಕೆಗಳನ್ನು ಸಂಘಟಿಸುವ ಕುರಿತು ಕೆಲವು ಸ್ಥೂಲವಾದ ಸೂಚನೆಗಳನ್ನೂ ನಿರ್ದಿಷ್ಟವಾದ ಕಾರ್ಯಕ್ರಮದ ಕೆಲವು ರೂಪುರೇಷೆಗಳನ್ನೂ ವಿವರಿಸಲಾಯಿತು. ಸ್ಥಳಾವಕಾಶದ ಅಭಾವದ ಮೂಲಕ ಎಲ್ಲ ಬಗೆಯಾದ ಚಟುವಟಿಕೆಗಳನ್ನು ಕುರಿತು ಬರೆಯುವದು ಸಾಧ್ಯವಾಗಿಲ್ಲ. ಈ ಬಗೆಯಾದ ಶಿಕ್ಷಣವಿಧಾನವನ್ನು ಪರಿಣಾಮಕಾರಿಯಾಗುವಂತೆ, ನಿಶ್ಚಿತ ಫಲವನ್ನು ಕೊಡುವಂತೆ, ಮಕ್ಕಳಿಗೆ ಜೀವನಶಿಕ್ಷಣದಲ್ಲಿ ನಿಜವಾದ ತರಬೇತಿಯಾಗುವಂತೆ ಕಾರ್ಯಮಾಡುವದೆಂದರೆ ಅದೇನು ಸಣ್ಣ ಮಾತಲ್ಲ. ಇಂಥ ಜೀವನವನ್ನು ಕಾರ್ಯರೂಪದಲ್ಲಿ ತರಲು ಹೆಣಗಾಡುವ ಶಿಕ್ಷಕನಾದ ಕಾರ್ಯಕರ್ತರನು ಎಂಥ ಅರ್ಹತೆಯುಳ್ಳವನಾಗಿರಬೇಕೆಂಬ ಬಗೆಗೆ ಎರಡು ನುಡಿಗಳನ್ನು ಇಲ್ಲಿ ವಿವರಿಸುವದು ಉಚಿತವೆನಿಸುವದು. ಶಾಲಾಜೀವನವು ವಿಶ್ವಕುಟುಂಬದ, ವಿಶಾಲಸಮಾಜದ ಒಂದು ಚಿಕ್ಕ ಮಾದರಿಯಾಗಿರಬೇಕೆಂದ ಮೇಲೆ, ಅಲ್ಲಿ ಹಿರಿಯನಾಗಿ ಮಾರ್ಗದರ್ಶಕನಾಗಿ ಕಾರ್ಯ ಮಾಡುವ ಹೊಣೆಯನ್ನು ಹೊತ್ತ ಶಿಕ್ಷಕನು ಕೌಟುಂಬಿಕ ಜೀವನದಲ್ಲಿರುವಂತೆ, ಅತ್ಯಂತ ಹೊಣೆಯರಿತ ಪಾಲಕನಂತೆ, ತಂದೆಯಂತೆ, ತಾಯಿಯಂತೆ, ಅಣ್ಣನಂತೆ, ಗೆಳೆಯನಂತೆ ಇರಬೇಕಾಗುವದೆಂದು ಬೇರೆ ಹೇಳಬೇಕೆ ? ಕೌಟುಂಬಿಕ ವಾತಾವರಣವನ್ನು ತಂದುಕೊಡುವ ತಂದೆತಾಯಿಗಳ ದಿವ್ಯವಾದ ಪ್ರೇಮ-ತ್ಯಾಗ-ಸೇವೆಗಳನ್ನು ಶಿಕ್ಷಕನಾದವನು ತನ್ನ ವ್ಯೆಮನಗಳಲ್ಲಿ ಆಳವಾಗಿ ಇಳಿಸಿಕೊಂಡವನಿರಬೇಕು, ಶಾಲಾ ಸಮಾಜದ ಘಟಕಗಳಂತಿರುವ, ನಾಳಿನ ನಾಡಬಾಳಿನ ಎಳೆಯ ಸಸಿಗಳಂತಿರುವ ಎಲ್ಲ ಮಕ್ಕಳು ತನ್ನ ಮಕ್ಕಳು, ತನ್ನ ನಾಡಿನ ಮಕ್ಕಳು, ತನ್ನ ನಾಡಿನ ಸಂಪತ್ತು ಎಂಬ ಅರಿವು ಅಭಿಮಾನಗಳು ಈ ಮಹನೀಯ ಶಿಕ್ಷಕನಲ್ಲಿ ರಕ್ತಗತವಾಗಿರಬೇಕು. ಮಕ್ಕಳ ಕಲ್ಯಾಣ ಚಿಂತನೆಯೇ ಶಿಕ್ಷಕನ ಜೀವನದ ಮೂಲಮಂತ್ರವಾಗಿರಬೇಕು. ಪ್ರಪಂಚದಿಂದ ದೂರಿದ್ದೂ, ತನ್ನ ಉಷ್ಣರಶ್ಮಿಗಳಿಂದ

ಪ್ರಪಂಚದ ಜೀವನವನ್ನು ಪೋಷಿಸುವ ಸೂರ್ಯನಂತೆ ಶಾಲಾ ಶಿಕ್ಷಕನು ಶಾಲಾಜೀವನವನ್ನು ದೂಷಿತವನ್ನಾಗಿ ಪಡಿಸುವ ಜಾತಿ-ಮತ ಪಂಥ ಮೊದಲಾದ ನಾನಾಬಗೆಯಿಂದ ತೊಡಕಿನಿಂದ ದೂರದಲ್ಲಿದ್ದುಕೊಂಡು, ತನ್ನ ಮಕ್ಕಳ ಜೀವನ ಕುಸುಮವನ್ನು ಅರಳಿಸುವ ತನ್ನ ಅನುಭವಜನ್ಯವಾದ ಜ್ಞಾನರಶ್ಮಿಗಳನ್ನು ನೀಡುವ ಜ್ಞಾನ ಸೂರ್ಯನಾಗಬೇಕು.

ತನ್ನ ಕಾರ್ಯದಲ್ಲಿ ನಂಬುಗೆ, ಅಭಿಮಾನ, ಆಸಕ್ತಿಗಳನ್ನು ಅಚಲವಾದ ರೀತಿಯಲ್ಲಿ ಇಟ್ಟುಕೊಂಡು ನವಸಮಾಜದ ಪ್ರೇರಕ ಮತ್ತು ಪೋಷಕಶಕ್ತಿ ವಿಶೇಷಗಳನ್ನು ಉದಾತ್ತಗೊಳಿಸುತ್ತ, ಉಜ್ವಲಗೊಳಿಸುತ್ತ, ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಅಮೋಘವಾದ ಸೇವೆ ಸಲ್ಲಿಸುವ ದಿವ್ಯವಾದ ವ್ಯಕ್ತಿಯನ್ನು ಬೆಳಗಿಕೊಂಡವನಿರಬೇಕು. ಹೆಚ್ಚಾಗಿ, ಇಂಥ ತರಬೇತಿ ಕೇಂದ್ರದ ಶಿಕ್ಷಕನು ತನ್ನ ನಡೆ-ನುಡಿಗಳನ್ನು ಉದಾತ್ತಪಡಿಸಿಕೊಂಡು ವಿಕಾಸಪಡಿಸಿಕೊಂಡು ಮಕ್ಕಳ ಮಮತೆಯ ಪುಣ್ಯ ದೇವತೆಯಂತೆ, ಉಜ್ವಲ ತಪಸ್ವಿಯಂತೆ ತೇಜಸ್ವಿಯಾಗಿರಬೇಕು. ಜೀವನ ಶಿಕ್ಷಣ ಕೇಂದ್ರದ ಆದರ್ಶ ಶಿಕ್ಷಕನ ಸಮಗ್ರವಾದ ಸುಂದರವಾದ ರಮಣೀಯ ಚಿತ್ರವಿದು! ಇಂಥ ಶಿಕ್ಷಕನೇ ನಾಡನ್ನು ಪ್ರಗತಿಪಥದಲ್ಲಿ ಮುನ್ನಡಿಸಬಲ್ಲನು. ಅಂಥ ಅರ್ಹತೆಯನ್ನು ನಮ್ಮ ಇಂದಿನ ಎಲ್ಲ ಶಿಕ್ಷಕ ಬಾಂಧವರು ಅಳವಡಿಸಿಕೊಳ್ಳಲು ಪ್ರಾರಂಭಮಾಡಿದ ದಿನವೇ ನಿಜವಾದ ಸ್ವಾತಂತ್ರ್ಯ ಸೂರ್ಯನ ಉದಯದ ಸುದಿನವೆಂದು ಹೇಳಬಹುದು. ಈ ಧ್ಯೇಯಸಾಧನೆಯೇ ನಮ್ಮ ಶಿಕ್ಷಕರ ಧರ್ಮವಾಗಲಿ! ಜೀವನದ ಮೂಲ ಮಂತ್ರವಾಗಲಿ!

— ಜಯ ಹಿಂದ —

ಚಿ. ಶ್ರೀ. ಕುಲಕರ್ಣಿಯವರ ಕಥೆಯ ಪುಸ್ತಕಗಳು

೧. ಭಕ್ತ ಧ್ರುವ	೦	೨	೦	೧೪. ಭಕ್ತ ಪ್ರಲ್ಹಾದ	೦	೨	೦
೨ ಶನಿ ಮಹಾತ್ಮೆ	೦	೨	೦	೧೫. ಗಜೇಂದ್ರ ಮೋಕ್ಷ	೦	೨	೦
೩. ಮೊದಲನೇ ತರಗತಿಯ ಕಥೆ	೦	೩	೦	೧೬. ಎರಡನೇ ತರಗತಿಯ ಕಥೆ	೦	೪	೦
೪. ಸುದಾಮ ಚರಿತ್ರ	೦	೪	೦	೧೭. ಮೂರನೇ ತರಗತಿಯ ಕಥೆ	೦	೫	೦
೫. ಮಹಾತ್ಮಾ ಗಾಂಧಿ	೦	೪	೦	೧೮. ಜವಾಹರಲಾಲ ನೆಹರು	೦	೪	೬
೬. ಸುಭಾಷಚಂದ್ರ ಭೋಸ	೦	೪	೯	೧೯. ಶ್ರೀ ರಾಮರ[illegible]	೦	೫	೦
೭. ಕುಮಾರ ರಾಮಣ್ಣ	೦	೬	೦	೨೦. ಕುಮಾರ ಕಿಟ್ಟಣ್ಣ	೦	೪	೦
೮. ಭಕ್ತ ಹನುಮಾನ	೦	೬	೦	೨೧. ರಾಮಕೃಷ್ಣ ನೀತಿಯ ಕಥೆ	೦	೬	೦
೯. ಶ್ರೀ ಕೃಷ್ಣ ಚರಿತ್ರೆ	೦	೮	೦	೨೨. ಪುರಂದರ ಪದಗಳು	೦	೮	೦
೧೦. ಬದರೀ ಚರಿತ್ರೆ	೦	೮	೦	೨೩. ಸತ್ಯವಾನ ಸಾವಿತ್ರಿ	೦	೮	೦
೧೧ ೪ನೇ ತರಗತಿಯ ಕಥೆ	೦	೬	೦	೨೪. ರಾಷ್ಟ್ರೀಯ ಮಹಾಪುರುಷರು	೦	೧೦	೦
೧೨ ಸಂಧ್ಯಾವಂದನೆ	೦	೩	೦	೨೫. ಶಂಕರಾಚಾರ್ಯ	೦	೬	೦
೧೩. ಚಿತ್ತೂರ ಪದ್ಮಿನಿ	೦	೩	೦				

(೧ರೂಪಾಯಿಗಿಂತಕಡಿಮೆಕಿಮ್ಮತ್ತಿನ ಪುಸ್ತಕಗಳನ್ನು ವ್ಹಿ. ಪಿ. ಮಾಡಲಾಗುವುದಿಲ್ಲ.)

— ಕೆ.ಎಸ್. ಕುಲಕರ್ಣಿ ಬುಕ್ ಡಿಪೋ, ಹುಬ್ಬಳ್ಳಿ —

ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜಗಳ ಮುಖ್ಯಾಧ್ಯಾಪಕರಿ

ಮೂಲ ಶಿಕ್ಷಣದಲ್ಲಿ ನಾಲ್ಕು ವಾರಗಳ ತರಬೇತಿ

(೮—೧೦—೧೯೫೦ ರಿಂದ ೬—೧೧—೧೯೫೦)

ಪ್ರಾಸ್ತಾವಿಕ :

ಶಿಕ್ಷಣದ ಹೊಸ ಧೋರಣೆಗೆ ಅನುಸರಿಸಿ ಪದವೀಧರರ ತರಬೇತಿಗೆ ಮುಂಬಯಿ ಸರಕಾರದವರು ಧಾರವಾಡ, ಅಹಮ್ಮದಾಬಾದ ಮತ್ತು ಬೋರ್ಡಿಗಳಲ್ಲಿ ಮೂರು ಕೇಂದ್ರಗಳನ್ನು ತೆಗೆದಿದ್ದಾರಷ್ಟೆ ? ಈ ಕೇಂದ್ರಗಳಿಂದ ಪ್ರತಿವರ್ಷ ಯೋಜನಾಬದ್ಧವಾಗಿ ಪದವೀಧರರು ಶಿಕ್ಷಣ ಪಡೆದು ಹೊರಬೀಳುತ್ತಲೂ ಇದ್ದಾರೆ. ಇನ್ನು ಹೀಗೆ ಕ್ರಮಬದ್ಧನಾದ ಒಂದು ವರ್ಷದ ಶಿಕ್ಷಣ ಪಡೆಯುವದು ಟ್ರೇನಿಂಗ ಕಾಲೇಜುಗಳ ಕೆಲ ಮುಖ್ಯಾಧ್ಯಾಪಕರಿಗೆ ಅವರ ವಯಸ್ಸಿನ ಮೂಲಕವಾಗಿಯೋ ಅಥವಾ ಬೇರಾವ ಅನಾನುಕೂಲತೆಗಳ ಮೂಲಕವೋ ಸಾಧ್ಯವಿಲ್ಲ. ಆದರೆ ಶಿಕ್ಷಣ ಕ್ರಮದ ಸುಗಮತೆಯ ದೃಷ್ಟಿಯಿಂದ ಈ ವೃತ್ತಿ ಮೂಲಶಿಕ್ಷಣದ ಸ್ಥೂಲದರ್ಶನವಾದರೂ ಇವರಿಗೆ ಆಗುವದು ಅಗತ್ಯವೆಂದು ವಿದ್ಯಾಶಾಖೆಯವರಿಗೆ ತೋರಿತು. ಆ ಪ್ರಕಾರ ಇಂಥವರಿಗೋಸ್ಕರವಾಗಿ ಈ ಲಘು ಶಿಕ್ಷಣಕ್ರಮವನ್ನು ಏರ್ಪಡಿಸಿ ಅದನ್ನು ಇದೇ ವರ್ಷ ಕಾರ್ಯಾಚರಣೆಯಲ್ಲಿ ತರಲಾಯ್ತು. ಈ ಪ್ರಕಾರ ಧಾರವಾಡದಲ್ಲಿ ಪದವೀಧರರ ಜೀವನ ಶಿಕ್ಷಣ ಕೇಂದ್ರದಲ್ಲಿ ಈ ಲಘು ಶಿಕ್ಷಣದ ಯೋಜನೆ ಜರುಗಿತು. ಕರ್ನಾಟಕದಲ್ಲಿ ೫ ಸರಕಾರಿ ಟ್ರೇನಿಂಗ ಕಾಲೇಜಗಳೂ ೧೩ ಖಾಸಗೀ ಟ್ರೇನಿಂಗ ಕಾಲೇಜಗಳೂ ಹೀಗೆ ೧೮ ಇದ್ದು ಎಲ್ಲ ಕಾಲೇಜಗಳ ಮುಖ್ಯಾಧ್ಯಾಪಕರು ತರಬೇತಿಗಾಗಿ ಆಗಮಿಸಿದ್ದರು. ಇವರಲ್ಲಿ ಒಬ್ಬರು ಸ್ತ್ರೀ ಮುಖ್ಯಾಧ್ಯಾಪಿಕೆಯರಾಗಿದ್ದರು.

ಅಕ್ಟೋಬರ ೮ನೇ ತಾರೀಖಿನ ದಿನ ಸಂಜೆಗೆ ಇವರೆಲ್ಲ ಬಂದು ಧಾರವಾಡ ಟ್ರೇನಿಂಗ ಕಾಲೇಜಿನ ವಸತಿಗೃಹ ಬೀಡಾರ ಬಿಟ್ಟರು. ಧಾರವಾಡದ ಸರಕಾರಿ ಟ್ರೇನಿಂಗ ಕಾಲೇಜ ಇದು ವೃತ್ತಿ ಮೂಲ ಶಿಕ್ಷಣವನ್ನು ಕಾರ್ಯಾಚರಣೆಯಲ್ಲಿ ಇಳಿಸುವದರಲ್ಲಿ ಮೊಟ್ಟಮೊದಲಿನ ಸಂಸ್ಥೆ. ಆದ್ದರಿಂದ ಈ ಸಂಸ್ಥೆಯಲ್ಲಿ ನಡೆಯುವ ಸಮವಾಯ ಪದ್ಧತಿಯ ಮೇಲೆ ಪಾಠ ಕ್ರಮ, ಕೌಟುಂಬಿಕ ಜೀವನ, ಮೂಲೋದ್ಯೋಗ ಇವೇ ಮೊದಲಾದ ಚಟುವಟಿಕೆಗಳನ್ನು ಅಭ್ಯಸಿಸಲು ಹಾಗು ನಿರೀಕ್ಷಿಸಲು—ಇದರಂತೆ ಕರ್ನಾಟಕದಲ್ಲೆಲ್ಲ ಮೂಲ ಶಿಕ್ಷಣದ ಪ್ರಸರಣಕ್ಕೆ ತಾಯ್ಬೇರಾಗಿ ದುಡಿವ ಸರಕಾರೀ ಜೀವನ ಶಿಕ್ಷಣ ಕೇಂದ್ರವ ಕಳೆದ ಮೂರು ವರ್ಷಗಳ ಕೆಲಸದ ಹೆಜ್ಜೆಗಳನ್ನು ಅರಿಯಲು ಬಂದ ಮುಖ್ಯಾಧ್ಯಾಪಕರು ತಾ. ೯, ೧೦ ಹೀಗೆ ೨ ದಿನ ಕಳೆದರು. ಮುಂದೆ ಮುಂದೆ ೧೫ನೆಯ ತಾರೀಖಿನವರೆಗೆ ಏ. ಓ. ಡಿ. ಎಸ್. ಬಿ. ಧಾರವಾಡ ಇವರು ಮುಖ್ಯಾಧ್ಯಾಪಕರಿಗೆಲ್ಲ (Compact Area) ಪ್ರಾಯೋಗಿಕ ಕ್ಷೇತ್ರದೊಳಗಿನ ಮೂಲೋದ್ಯೋಗ ಶಾಲೆಗಳನ್ನೆಲ್ಲ ತೋರಿಸಿಕೊಂಡು ಬಂದರು.

ಜೀವನ ಶಿಕ್ಷಣ ಕೇಂದ್ರದಲ್ಲಿ ತಾ. ೧೬ ರಿಂದ ತರಬೇತಿ ಪ್ರಾರಂಭವಾಯ್ತು. ಆ ದಿನ ಕುಲಪತಿಗಳೂ ಇನ್ನುಳಿದ ಪ್ರಾಧ್ಯಾಪಕ ವರ್ಗದವರೂ ತಮ್ಮ ತಮ್ಮ ವಿಷಯಗಳ ಬಗ್ಗೆ ವಿವರವಾಗಿ ಚರ್ಚಿಸಿ ಬಂದವರಿಗೆ ಆಯಾ ವಿಭಾಗದ ಸ್ಥೂಲ ಆದರೂ ಸಮಗ್ರ ಕಲ್ಪನೆಯನ್ನು ಉಂಟು ಮಾಡಿಕೊಟ್ಟರು. ಮರುದಿನದಿಂದ ಈ ಮುಖ್ಯಾಧ್ಯಾಪಕರಿಗಾಗಿ ಸಿದ್ಧಪಡಿಸಿದ ಅಭ್ಯಾಸ ಕ್ರಮವನ್ನೆ ಅನುಸರಿಸಿ, ಕೌಟುಂಬಿಕ ಜೀವನ, ಮೂಲೋದ್ಯೋಗ, ಮೂಲಶಿಕ್ಷಣದ ಬಗ್ಗೆ ಊಹಾಪೋಹ, ಸಮವಾಯ ಪಾಠಗಳು, ಪ್ರವಾಸ, ಸಂದರ್ಶನ, ಮನರಂಜನ ಇವೇ ಮೊದಲಾದವನ್ನು ಯಥಾಸಾಂಗ ಪೂರೈಸಿ ಈ ಲಘು ತರಬೇತಿ ವರ್ಗವನ್ನು ಮುಕ್ತಾಯಗೊಳಿಸಲಾಯ್ತು. ಮೊದಲದಿನ ಜೀವನ ಶಿಕ್ಷಣ ಕೇಂದ್ರದ ಪ್ರಾಧ್ಯಾಪಕರೆಲ್ಲ ಕೂಡಿ ಈ ಮುಖ್ಯಾಧ್ಯಾಪಕರುಗಳಿಗೆ ಸಮೀಚೀನ ಅಲ್ಪೋಪಹಾರ ಏರ್ಪಡಿಸಿ ಅವರನ್ನು ಸ್ವಾಗತಿಸಿದ್ದರೆ ಸಮಾರೋಪದ ದಿನ ಮುಖ್ಯಾಧ್ಯಾಪಕರೆಲ್ಲ ಕೂಡಿ ಸಮೃದ್ಧ ಸಿಹಿಯೂಟ

ವ ಊಸ ಅಧ್ಯಾಪಕರನ್ನೆಲ್ಲ ಆಮಂತ್ರಿಸಿ ಮುಖ್ಯ ನುಷ್ಟಿಸಿದರು. ಈ ಅಡಿಗೆ ಮಾಡುವಲ್ಲಿ ೧೫ ಜನರ ಕೈಗಳೂ ಕೆಲಸ ಮಾಡಿದ್ದವಾದರೂ ಪಾಕ ಹದಗೆಟ್ಟಿರಲಿಲ್ಲ. ಕೊನೆಯ ದಿನದ ವೈಶಿಷ್ಟ್ಯವೆಂದರೆ ಆಚಾರ್ಯ ಭಾಗವತರು ಪೀಠಕ್ಕೂ ಊಟಕ್ಕೂ ಕೂಡಿಯೇ ಬಂದುದು.

ಈ ತರಬೇತಿಯ ಒಂದೊಂದು ಚಟುವಟಿಕೆಯ ಬಗ್ಗೆಯೂ ಸಂಗ್ರಹವಾಗಿ ಕೆಳಗೆ ಮಾಹಿತಿಯನ್ನು ಕೊಡಲಾಗಿದೆ.

ಕೌಟುಂಬಿಕ ಜೀವನ :

೧೫-೧೦-೫೦ ರಂದು ಮುಖ್ಯಾಧ್ಯಾಪಕರೆಲ್ಲ ಜೀವನ ಶಿಕ್ಷಣಕೇಂದ್ರದಲ್ಲಿ ಸಭೆ ಸೇರಿದರು. ಆಗ ಅವರಿಗೆ ಜೀವನದ ಕಾರ್ಯಕ್ರಮದ ರೀತಿ, ಕಟ್ಟುನಿಟ್ಟು, ಆವಶ್ಯಕತೆ ಇವುಗಳ ಬಗ್ಗೆಯೂ ಶಿಕ್ಷಣದಲ್ಲಿ ಕುಟುಂಬಭಾವ ಹೇಗೆ ಬೆಳೆದು ಬರುವದು, ಬರುತ್ತದೆ, ಬರಬೇಕು ಎಂಬ ಬಗ್ಗೆಯೂ ಈ ಕಾರಣಕ್ಕಾಗಿಯೇ ಇದಕ್ಕೆ ಜೀವನ ಶಿಕ್ಷಣವೆಂದು ಕರೆಯಲಾಗಿದ್ದು ಅದು ಹೇಗೆ ಯಥಾರ್ಥ ಎಂಬ ಬಗ್ಗೆಯೂ ಸಾಂಗೋಪಾಂಗವಾಗಿ ತಿಳಿಸಿ ಹೇಳಲಾಯ್ತು. ಅನಂತರ ಇಲ್ಲಿ ತರಬೇತಿಗೆಂದು ಬಂದವರೆಲ್ಲರೂ ಈಗ ಈ ಹೊಸ ಕುಟುಂಬದ ಘಟಕರಾಗಿದ್ದ ಕಾರಣ ಅದು ಸುಗಮವಾಗಿ ಸಾಗಬೇಕಾದರೆ ತಮ್ಮ ತಮ್ಮ ಪಾಲಿಗೆ ಬಂದ ಕುಟುಂಬದ ನಾನಾ ಕಾರ್ಯಗಳನ್ನು ಹಂಚಿಕೊಳ್ಳಬೇಕಾದುದು ಕ್ರಮಪ್ರಾಪ್ತವೆಂಬುದು ಅವರಿಗೆಲ್ಲ ಸ್ವಯಂಸ್ಪಷ್ಟವೆನ್ನಿಸಿ ಹಾಗೆ ಅವರು ಕೌಟುಂಬಿಕ ಜೀವನದ ಕಾರ್ಯ ವಿವರವನ್ನು ಚರ್ಚಿಸಿದ್ದಲ್ಲದೆ ಕಸಗೂಡಿಸುವದು, ಕಾಯಿಪಲ್ಯ ಹೆಚ್ಚುವದು ಮೊದಲು ಮಾಡಿ—ಸ್ನಾನಕ್ಕೆ ನೀರು ಕಾಯಿಸುವದು ಹಾಗೂ ಪೇಟೆಯಿಂದ ಸಾಮಾನುಗಳನ್ನು ತರುವದೇ ಮೊದಲಾದ ಎಲ್ಲ ಕೆಲಸಗಳ ಪಟ್ಟಿಯನ್ನು ಮಾಡಿ ಒಬ್ಬೊಬ್ಬ ಒಂದೊಂದು ಕೆಲಸವನ್ನು ಹಂಚಿಕೊಂಡರು. ಎಲ್ಲ ಕಾರ್ಯನಿರ್ವಾಹದ ಸುಗಮತೆ ಹಾಗು ಶಿಸ್ತಿಗಾಗಿ ಇಬ್ಬರು ಅಧಿಕಾರಿಗಳನ್ನು ಆರಿಸಿಕೊಂಡರು. ಒಬ್ಬ ಅಧಿಕಾರಿಯನ್ನು ಆಹಾರ ಶಾಖೆ ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳ ಮೇಲ್ವಿಚಾರಣೆಯ ಬಗ್ಗೆಯೂ ಇನ್ನೊಬ್ಬ ಅಧಿಕಾರಿಯನ್ನು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಎಲ್ಲ ಕೆಲಸಗಳ ಮೇಲ್ವಿಚಾರಣೆಯ ಬಗ್ಗೆಯೂ ನಿಯುಕ್ತಗೊಳಿಸಿದರು. ಈ ಇಬ್ಬರಲ್ಲದೆ ಇವರಿಗೆ ಮಾರ್ಗದರ್ಶನ ಮಾಡಲು ಮೂವರ ಒಂದು ಮಂತ್ರಣ ಮಂಡಲವನ್ನೂ ಏರ್ಪಡಿಸಿಕೊಂಡರು.

ನೀರಿನಲ್ಲಿಯ ಭಾರ ಎತ್ತಿದ ಹಾಗೆ ಕುಟುಂಬ ಜೀವನ ಹಗುರಾಗಿ ಸಾಗಬೇಕಾದರೆ ಬಳಗದ ಜನರಲ್ಲೆಲ್ಲ ಒಂದು ಬಗೆಯ ಸಾಮೂಹಿಕ ಸದ್ಭಾವ, ಸದಭಿಪ್ರಾಯ, ಪ್ರೇಮಾದರ ಇವು ದಿನದಿನ ತಾವಾಗಿ ಉಂಟಾಗಿ, ದಿನದಿನವೂ ಬೆಳೆದು ಬರಬೇಕಾಗುವದು. ಇವು ಒತ್ತಾಯದಿಂದ ಅಥವಾ ಕೇವಲ ನೀತಿಯ ಗುಳಿಗೆಗಳಿಂದ ಬರತಕ್ಕವುಗಳಲ್ಲ. ಇವು ಬೆಳೆದು ಬರಲು ತಕ್ಕ ಪರಿಸ್ಥಿತಿಯನ್ನು ಒದಗಿಸಿಬಿಟ್ಟರೆ ಪರಸ್ಪರರ ಬಗ್ಗೆ ಈ ಸದ್ಭಾವ-ಸದಭಿಪ್ರಾಯಗಳೂ ಪ್ರೇಮಾದರಗಳೂ ತಿಳಿಯದೆ ತಾವಾಗೆ ದಿನದಿನವೂ ಬೆಳೆದು ಬರುವವು. ಈ ಪರಿಸ್ಥಿತಿಯನ್ನು ಉಂಟುಮಾಡುವ ಸುಲಭ ಉಪಾಯವೆಂದರೆ ಕುಟುಂಬದಲ್ಲಿ ಒಂದು ಕ್ರಮ, ಒಂದು ವ್ಯವಸ್ಥೆ ಹಾಗೂ ಶ್ರಮವಿಭಾಗಯೋಜನೆ ಇವು ವ್ಯಾಘಾತವಿಲ್ಲದೆ ನೆಲೆಗೊಳ್ಳುವಂತೆ ಮಾಡಿ ಬಿಡುವದು. ಇದರಿಂದಾಗಿ ದೈನಂದಿನದ ಕುಟುಂಬ ಜೀವನ ಸುಸೂತ್ರವಾಗಿ ಸಾಗುವದು. ಈ ಮಾತನ್ನು ಮಕ್ಕಳ ಮನದ ಮೇಲೆ ಮೂಡಿಸುವ ಜೊತೆಜೊತೆಗೆ ಇನ್ನೊಂದು ದೊಡ್ಡ ಸಂಗತಿಯನ್ನು ಬಾಲ ಮನಸ್ಸು ಶಿಕ್ಷಣದುದ್ದಕ್ಕೂ ಆಕಲನ ಮಾಡಿಕೊಳ್ಳುತ್ತಿರುತ್ತದೆ. ಅದೆಂದರೆ ಒಂದು ರಾಜ್ಯದ ಆಡಳಿತದ ವಿಚಾರ. ರಾಜ್ಯವೆಂಬುದು ಒಂದು ವಿಸ್ತಾರವಾದ ಕುಟುಂಬ. ಕುಟುಂಬ ಚಾಲನೆಗೆ ಒಬ್ಬಿಬ್ಬರು ಹೊಣೆಗಾರರಾದರೆ ರಾಷ್ಟ್ರಚಾಲನೆಗೆ ಹತ್ತಾರು ಜನರ ಹೊಣೆಗಾರಿಕೆ ಬೇಕಾಗಬಹುದು ಅಷ್ಟೇ ಎಂಬ ಈ ಭಾವನೆಗೆ ಮಕ್ಕಳು ಚಿಕ್ಕಂದಿನಿಂದಲೇ ಪಳಗಿಬಿಟ್ಟರೆ ಮುಂದೆ ಅವರು ಗಾಬರಿಗೊಳ್ಳದೆ ನಾಡಿನ ತೂಕ ತಪ್ಪದಂತೆ ವಿಚಾರದ ತಕ್ಕಡಿಯ ದಂಡಿಗೆಯನ್ನು ನೇರವಾಗಿ ಹಿಡಿಯಬಲ್ಲರು. ಈ ಹದ ಅವರಿಗೆ ಆಗ ತಾನಾಗಿ ಗೊತ್ತಾಗಿಬಿಡುವದು. ಇದಕ್ಕೆಂದೇ ಈ ಕುಟುಂಬ ಜೀವನದಲ್ಲಿ ಸಹ (ಈ ಶಿಕ್ಷಣ ಕ್ರಮದಲ್ಲಿ) ಮಂತ್ರಿಮಂಡಲ ಅವರಿಗೆ ಮತ್ತೆ ಮಂತ್ರಣಮಂಡಲ ಹೀಗೆ

ಮೊದಲಾಗಿ ಎತ್ತುಗಡೆ ಮಾಡಿ ಆಡಳಿತೆಗಳನ್ನು ಅವರಿಂದೇ ಆಟವಾಗಿ ಆಡಿಸಿ ತೋರಿಸಲಾಗುತ್ತದೆ.

ಈ ನಿಯಮಕ್ಕನುಸರಿಸಿಯೇ ತರಬೇತಿಗೆ ಬಂದ ಮುಖ್ಯಾಧ್ಯಾಪಕರು ತಮ್ಮ ಕೌಟುಂಬಿಕ ಜೀವನದ ಅಂಗವೆಂದು ವೈಯಕ್ತಿಕ ಕೆಲಸಗಳಲ್ಲಿ ಸ್ವಾವಲಂಬನವನ್ನೂ ಸಾಮೂಹಿಕ ಕೆಲಸಗಳಲ್ಲಿ ಶ್ರಮವಿಭಾಗದ ತತ್ವವನ್ನೂ ಒಪ್ಪಿಕೊಂಡು ಕಾರ್ಯೋನ್ಮುಖರಾದರು.

ಸಾಮೂಹಿಕ ಕೆಲಸಗಳ ವಿವರ :

೧ ಕಾಯಿಪಲ್ಲೆ ಹೆಚ್ಚುವದು.
೨ ಧಾನ್ಯ-ಸ್ವಚ್ಛತೆ ಹರಳಾರಿಸುವದು ಇತ್ಯಾದಿ.
೩ ಬಿಸಿನೀರಿನ ವ್ಯವಸ್ಥೆ.
೪ ಊಟಕ್ಕೆ ಬಡಿಸುವದು.
೫ ಪೇಟೆಯಿಂದ ಸಾಮಾನು ತರುವದು.
೬ ಕಾರ್ಯಕ್ರಮಗಳನ್ನು ಸೂಚಿಸುವ ಗಂಟೆ ಬಾರಿಸುವದು. ತರಬೇತಿಯ ಕಾಲದಲ್ಲಿ ಅನುಸರಿಸಲಾದ ಒಂದು ಕಾಲಾನುಕ್ರಮವೂ ಕಾರ್ಯಾನುಕ್ರಮವೂ ಕೆಳಗಿನಂತಿವೆ.

೫—೩೦		ಏಳುವದು.
೫—೩೦	೬—೦	ಪ್ರಾತರ್ವಿಧಿಗಳು.
೬—೪೫	೮—೦	ಪ್ರಾರ್ಥನೆ.
೮— ೦	೮—೩೦	ಉಪಹಾರ, ಧಾನ್ಯ ಸ್ವಚ್ಛತೆ, ಕಾಯಿಪಲ್ಲೆ ಹೆಚ್ಚುವದು.
೯— ೦	೯—೩೦	ಮೌನ-ಕತಾಯಿ.
೯—೩೫	೧೧—೪೫	ಚರ್ಚೆಗಳು.
೧೧—೪೫	೧೨—೩೦	ಊಟ.
೧೨—೩೦	೩	ವಿರಾಮ.
೩—೦	೫—೧೫	ಚರ್ಚೆ ಮತ್ತು ಕೈತೋಟ.
೬—೦	೬—೪೫	ಊಟ.
೧೦		ಮಲಗುವದು.

ಒಟ್ಟಿನಲ್ಲಿ ತರಬೇತಿಗೆ ಬಂದ ಮುಖ್ಯಾಧ್ಯಾಪಕರೆಲ್ಲರೂ ಪರಸ್ಪರ ಸೌಹಾರ್ದ ಸಹಕಾರದಿಂದ ಕೆಲಸ ಮಾಡಿ ಕೌಟುಂಬಿಕ ಜೀವನವನ್ನು ವೈಯಕ್ತಿಕ ಸ್ವಾವಲಂಬನವನ್ನೂ ಮನಃಪೂರ್ವಕ ಆಚರಿಸಿದ್ದಲ್ಲದೆ, ಇಷ್ಟು ಜನ ಮುಖ್ಯಾಧ್ಯಾಪಕರು ಏಕಕಾಲಕ್ಕೆ ಒಂದು ಕಡೆಯಲ್ಲಿ ಒಂದುಗೂಡಿರುವ ಈ ಯೋಗಾಯೋಗವು ಅಪೂರ್ವವೆಂದೂ ಅಮೌಲ್ಯವಾದದ್ದೆಂದೂ ಉದ್ಗಾರ ತೆಗೆದರು.

ಕೈತೋಟ :

ಮುಖ್ಯಾಧ್ಯಾಪಕರೆಲ್ಲರೂ ಈ ಅಲ್ಪಾವಧಿಯ ಕೈತೋಟದ ಕೆಲಸಗಳನ್ನು ಒಳ್ಳೆ ಹುರುಪಿನಿಂದಲೂ ಹಾಗೂ ಆಸ್ಥೆಯಿಂದಲೂ ಸಾಗಿಸಿದರು. ಅವರು ಕಳೆ ತೆಗೆಯುವದು, ಮಡಿಗಳಿಗೆ ನೀರು ಹಾಕುವದು, ಕೃತ್ರಿಮ ಗೊಬ್ಬರ ಹಾಕುವದು, ಕಾಯಿಪಲ್ಲೆ ಕೊಯ್ಯುವದು ಮತ್ತು ಕಿತ್ತುವದು, ಹಣ್ಣಿನ ಗಿಡಗಳ ಸುತ್ತಲೂ ಅಗಿದ ಪೊಳ್ಳು ಮಾಡುವದು ಇತ್ಯಾದಿ ಕೆಲಸಗಳನ್ನು ಮಾಡಿದರು.

ಇನ್ನು ಕೈತೋಟದ ಬಗ್ಗೆ ಸಾಮಾನ್ಯ ಮಾಹಿತಿಯನ್ನು ತಾತ್ವಿಕದೃಷ್ಟಿಯಿಂದ ಹೇಳಿಕೊಡಲಾಯಿತು ಈ ತಾತ್ವಿಕ ವಿಷಯಗಳಲ್ಲಿ ಮಾದರಿಯ ಕೈತೋಟ ಹಾಗೂ ಈ ಕೈತೋಟವನ್ನು ಟ್ರೇನಿಂಗ ಕಾಲೇಜ ಮತ್ತು ಪ್ರಾಕ್ಟೀಸಿಂಗ ಸ್ಕೂಲುಗಳಲ್ಲಿ ಹೇಗೆ ಯಶಸ್ವಿಯಾಗಿ ನಡೆಸಿಕೊಂಡು ಹೋಗಬೇಕು ಎಂಬುವೇ ಮೊದಲಾದ ವಿಷಯಗಳನ್ನು ಚರ್ಚಿಸಲಾಯಿತು.

೨ ನೂಲುವದು ನೇಯುವದು :

ಉದ್ಯೋಗದ ವಿವಿಧ ಅಂಗೋಪಾಂಗಗಳನ್ನು ತಿಳಿಯಪಡಿಸಲು ದ್ವಿಮುಖ ಕಾರ್ಯಕ್ರಮವನ್ನು ಕೈಕೊಳ್ಳಲಾಯಿತು. (೧) ಕೆಲಸಗಳನ್ನು ಮಾಡುವದು ಮತ್ತು (೨) ಪ್ರಾತ್ಯಕ್ಷಿಕೆಗಳನ್ನು ನಿರೀಕ್ಷಿಸಿ ಅವುಗಳ ಬಗ್ಗೆ ಕೆಲವು ಸಂಗತಿಗಳನ್ನು ತಿಳಿದುಕೊಳ್ಳುವದು.

(ಅ) ಕೆಲಸವನ್ನು ಮಾಡುವದು—ಪ್ರತಿದಿವಸ ಅರ್ಧತಾಸಿನಂತೆ ಒಟ್ಟು ೮ ದಿವಸ ಕೆಲಸ ಮಾಡಿ ಕುಡಪಲಿಯಿಂದ ಹತ್ತಿಯನ್ನು ಅರೆದು ಬಿಲ್ಲಿನಿಂದ ಹಿಂಜಿಕೊಂಡ ತಕಲಿಯಿಂದ ನೂತು ಜೋಡಿಳೆ ದಾರವನ್ನು ತಯಾರಿಸುವವರೆಗಿನ ಎಲ್ಲ ಕೆಲಸಗಳನ್ನು ಮಾಡಿದ್ದಲ್ಲದೆ ಅವುಗಳಲ್ಲಿ ಅಡಕವಾದ ವೈಜ್ಞಾನಿಕ ತತ್ವಗಳನ್ನೂ ಚರ್ಚಿಸಿದರು. ೧೬ ಮಂದಿ ಕೂಡಿ ೧೭ ಪೌಂಡು ಹತ್ತಿಯನ್ನೂ ೧೧ ತೊಲಿ ಹಂಜಿಯನ್ನು ಉಪಯೋಗಿಸಿ ೨/೧೦. ನಂಬರಿನ ೨೧ ತೊಲಿ ತೂಕದ ೨೪ ಗುಂಡಿ ದಾರವನ್ನೂ ೯.೩ ನಂಬರಿನ ೩ ತೊಲೆ ತೂಕದ ೨೪ ಲಟಿ ನೂಲನ್ನೂ

ತಯಾರಿಸಿದರು. ಅದರ ಶಕ್ತಿ ೪೫.|. ಕಸರು ಮತ್ತು ಜಿಡಿಮೆಯ ನೂರರ ಪ್ರಮಾಣವು ೧೧.೭.

(ಬ) **ಪ್ರಾತ್ಯಕ್ಷಿಕೆಗಳು :** ನೇಯುವದು, ಹಾಸು ಕೊಯ್ಯುವದು, ಹುರಿಹಾಕಿ ದಾರ ತಯಾರಿಸುವದು, ಸೂಲುವದು, ಹಿಂಜುವದು ಮತ್ತು ಅರೆಯುವದನ್ನು ವಿವಿಧ ಸಾಧನಗಳಿಂದ ಹೇಗೆ ಮಾಡಬೇಕೆಂದು ತೋರಿಸಲಾಯಿತು—ವಿವಿಧ ಸಾಧನಗಳು ಕೆಲಸ ಮಾಡುವ ತತ್ವ, ಅವುಗಳಲ್ಲಿಯ ಪ್ರಕಾರಗಳು ಮತ್ತು ಅವುಗಳನ್ನು ಸಜ್ಜುಗೊಳಿಸುವ ರೀತಿಯ ಬಗ್ಗೆ ತಿಳಿಸಿ ಕೊಡಲಾಯಿತಲ್ಲದೆ ಕೊಳ್ಳಬಹುದಾದ ಸಂಖ್ಯೆ ಸ್ಥಳಾವಕಾಶ ಮತ್ತು ಬೇಕಾಗುವ ಕಚ್ಚಾ ಸಾಮಗ್ರಿಯ ಬಗ್ಗೆಯೂ ಮಾಹಿತಿ ಕೊಟ್ಟಿತು. ಪ್ರತಿಯೊಂದು ಚಟುವಟಿಕೆಯನ್ನು ನಿರ್ಣಯಿಸುವ ರೀತಿಯನ್ನು ವಿವರಿಸಲಾಯಿತು—

(೩) ರಟ್ಟಿನ ಕೆಲಸ ಮತ್ತು ಕಟ್ಟಿಗೆಯ ಕೆಲಸ. ಪದವೀಧರರ ಜೀವನ ಶಿಕ್ಷಣ ಕೇಂದ್ರವು ಬೆಳಗಾಂವಿಯಲ್ಲಿ ಪ್ರಾರಂಭವಾದಂದಿನಿಂದ ಇದಿನವರೆಗೂ ನಡೆದು ಬಂದ ರೀತಿ ಮತ್ತು ಇಲ್ಲಿ ಕಲಿಸತಕ್ಕಂಥ ಕಾಗದ ಮತ್ತು ರಟ್ಟಿನ ಕೆಲಸ, ಕಟ್ಟಿಗೆಯ ಕೆಲಸ ಇವುಗಳನ್ನು ಯಾವ ಪದ್ಧತಿಯಲ್ಲಿ ಮತ್ತು ಹೇಗೆ ಇಲ್ಲಿ ಕಲಿಸಲ್ಪಡುತ್ತವೆಯೆಂಬ ಬಗ್ಗೆ ಸವಿಸ್ತಾರವಾಗಿ ತಿಳಿಸಲಾಯಿತು.

ಕೈಯಿಂದ ತಯಾರಿಸುವ ಅಮೃತ ಶಿಲೆಯ ಕಾಗದ (Hand marbling papers) ಗಳ ಉಪಯೋಗ ಮತ್ತು ಅವುಗಳನ್ನು ಮಕ್ಕಳಿಂದ ತಾವು ಹೇಗೆ ತಯಾರು ಮಾಡಿಸಬೇಕು ಎಂಬದನ್ನು ತಿಳಿಸಿ ಹೈಮಾರ್ಬಲ್ ಕಾಗದಗಳನ್ನು ತಯಾರಿಸುವ ವಿಧವಿಧದ ಪದ್ಧತಿಗಳನ್ನು ತೋರಿಸಿ ಅವರಿಂದ ಮಾಡಿಸಲಾಯಿತು.

ತಗಡಿನ ತಟ್ಟೆಯ ಸಹಾಯದಿಂದ ತಯಾರಾದ ಅಮೃತಶಿಲೆಯ ಕಾಗದ (Tray marbling papers)ಗಳ ಉಪಯೋಗ ಮತ್ತು ಅವುಗಳನ್ನು ತಯಾರಿಸುವ ರೀತಿಯನ್ನು ತಿಳಿಸಿ ಪ್ರಯೋಗ ಮಾಡಿ ತೋರಿಸಿದ್ದಲ್ಲದೆ ಈ ಮಾರ್ಬಲ್ ಕಾಗದಗಳನ್ನು ತಯಾರಿಸುವಲ್ಲಿ ಇರುವಂಥ ಮಕ್ಕಳ ಬುದ್ಧಿಯ ಬೆಳವಣಿಗೆಯ ಆಸ್ಪದವನ್ನು ತಿಳಿಸಿ ಎಷ್ಟು ಕಡಿಮೆ ಬೆಲೆಯಲ್ಲಿ ನಾವು ಇವುಗಳನ್ನು ತಯಾರಿಸಬಹುದೆಂಬದನ್ನು ಹೇಳಲಾಯಿತು.

ವಿವಿಧ ರೀತಿಗಳ ಬಣ್ಣವನ್ನು ಸಿಂಪಡಿಸಿ ಅಲಂಕರಿಸುವದು (Spray work) ಇದರ ಉಪಯೋಗ ಮತ್ತು ಮಹತ್ವವನ್ನು ತಿಳಿಸಿದ್ದಲ್ಲದೆ ಅದನ್ನು ಮಾಡುವ ರೀತಿಯನ್ನು ತಿಳಿಸಿ ಪ್ರಯೋಗ ಮಾಡಿ ತೋರಿಸಿದ್ದಲ್ಲದೆ ಕೆಲವರಿಂದ ಸ್ಪ್ರೇ ಕೆಲಸವನ್ನೂ ಮಾಡಿಸಲಾಯಿತು.

ಮೂಲ ಶಿಕ್ಷಣದ ಅಭ್ಯಾಸ ಪತ್ರಿಕೆಯಲ್ಲಿ ರಟ್ಟಿನ ಕೆಲಸಕ್ಕಿರುವ ಸ್ಥಾನಮಾನವನ್ನು ತಿಳಿಸಿ ಅದರಿಂದ ಮಕ್ಕಳಿಗೆ ಸಿಗತಕ್ಕಂಥ ಜ್ಞಾನವನ್ನು ತಿಳಿಸಿ ಪ್ರಯೋಗಕ್ಕಾಗಿ ಒಂದು ಭಾವಚಿತ್ರಗಳನ್ನಿಡುವ ಚೌಕಟ್ಟನ್ನು (Photo frame) ಅದರ ಎಲ್ಲ ಕ್ರಮಗಳ (Steps) ಮುಖಾಂತರ ಅಂದರೆ ರಟ್ಟು ಕತ್ತರಿಸುವದು, ಕಾಗದ ಕತ್ತರಿಸುವದು, ಅಂಟು ಹಚ್ಚುವದು ವಗೈರೆ ಎಲ್ಲ ಕ್ರಮಗಳೊಂದಿಗೆ ಪ್ರಯೋಗ ಮಾಡಿ ತೋರಿಸಲಾಯಿತು. ಅವರಲ್ಲಿ ಕೆಲವರು ತಾವಾಗಿಯೇ ಮುಂದೆ ಬಂದು ಒಂದೊಂದು ಫೋಟೋ ಫ್ರೇಮನ್ನು ತಯಾರಿಸಿದರು.

ಚಿತ್ರಕಲೆಯಿಂದ ಮನೆಗಳನ್ನು ಯಾವ ಯಾವ ರೀತಿ ಅಲಂಕರಿಸಲು ಬರುವದೆಂಬದನ್ನು ಸಾಮೂಹಿಕ ಊಟದ ಸಮಯದಲ್ಲಿ ರಂಗವಲ್ಲಿಗಳನ್ನು ಎಷ್ಟು ಸುಲಭವಾಗಿ ಮತ್ತು ಚಂದವಾಗಿ ಹಾಕಲು ಸಾಮಾನ್ಯರಿಗೂ ಕೂಡ (ಚಿತ್ರ ಕಲೆಯಲ್ಲಿ ನಿಪುಣರಿಲ್ಲದವರಿಗೂ ಕೂಡ) ಸಾಧ್ಯವಿದೆ ಎಂಬದನ್ನು ರಂಗವಲ್ಲೀ ಹಾಕಿ ತೋರಿಸಲಾಯಿತು. ಅದರಲ್ಲಿ ಕೆಲವು ಪ್ರಿನ್ಸಿಪಾಲರೂ ಕೂಡ ಭಾಗವಹಿಸಿದ್ದರು.

ರಟ್ಟಿನ ಕೆಲಸದ ಮತ್ತು ಕಟ್ಟಿಗೆಯ ಕೆಲಸದ ಆಯುಧಗಳು ಹಾಗೂ ಸಾಧನಸಾಮಗ್ರಿಗಳ ಪರಿಚಯ, ಮತ್ತು ಅವುಗಳನ್ನು ಉಪಯೋಗ ಮಾಡುವ ರೀತಿಯನ್ನು ತಿಳಿಸಲಾಯಿತು.

ಸಾಲ್ವತ್ತು ಶಿಕ್ಷಕ ವಿದ್ಯಾರ್ಥಿಗಳ ಒಂದು ಟ್ರೇನಿಂಗ ಕಾಲೇಜಿಗೆ ಕಾಗದ, ರಟ್ಟಿನ ಕೆಲಸ, ಮತ್ತು ಕಟ್ಟಿಗೆಯ ಕೆಲಸಗಳಿಗೆ ಬೇಕಾಗುವ ಕಚ್ಚಾ ಮಾಲು ಮತ್ತು ಆಯುಧಗಳ ಯಾದಿಯನ್ನು ಅಂದರೆ ಅವುಗಳ ಸಂಖ್ಯೆ ದರ, ಒಟ್ಟು ಹಣ, ಅವು ಸಿಗತಕ್ಕ ಸ್ಥಳ ಇತ್ಯಾದಿಯಾಗಿ ತಯಾರಿಸಿ ಸೈಕಲೋಸ್ಟಾಯಿಲ ಮಾಡಿಸಿ ಪ್ರತಿಯೊಬ್ಬ ಪ್ರಿನ್ಸಿಪಾಲರಿಗೂ ಒಂದೊಂದು ಪ್ರತಿಯನ್ನು ಕೊಡಲಾಯಿತು.

ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳ ಪ್ರಿನ್ಸಿಪಾಲರುಗಳ ಅಲ್ಪಾವಧಿ ತರ-
ಬೇತಿಯ ವರ್ಗಕ್ಕೆ ಸಂದರ್ಶನವೀಯಲು ಬಂದಾಗ ಧಾರವಾಡದ
ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಜೋಳದ
ಹೊಲ ನೋಡಿಕೊಂಡು ಶ್ರೀಮತಿ ಎಸ್. ಪಾಣಂದೀಕರ,
ಡಿ.ಡಿ.ಪಿ.ಆಯ್. ಅವರು ಹಿಂತಿರುಗುವಾಗಿನ ನೋಟ.

ಎಡದಿಂದ ಬಲಕ್ಕೆ:—(೧) ಶ್ರೀ. ಪಾಣಂದೀಕರ (೨) ಶ್ರೀ ಕೆ. ಜಿ. ಕುರ್ತಕೋಟಿ, ಪ್ರಿನ್ಸಿಪಾಲ್ ಟಿ. ಸಿ. ಎಂ, ಧಾರವಾಡ (೩) ಶ್ರೀ. ಬಿ. ಎಂ. ಮೀಮಾಂಸಿ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ.

ನಾಲ್ವರು ಪ್ರಿನ್ಸಿಪಾಲರು ಜೀವನ ಶಿಕ್ಷಣದ ಕೇಂದ್ರದ ತೋಟದಲ್ಲಿ
ಕಾಯಿ ಪಲ್ಯೆಗಳಿಗೆ ನೀರು ಹಾಕುತ್ತಿರುವ ದೃಶ್ಯ.



(೧) ಶ್ರೀ. ಅರವಿಂದ ಜೋಶಿ. (೨) ಶ್ರೀ. ಎಸ್. ಆರ್. ಜೋಶಿ
(೩) ಶ್ರೀ. ಹುನಗುಂದ. (೪) ಶ್ರೀ. ಎಚ್. ಎಂ. ಕಾಳೆ.

ಐವರು ಪ್ರಿನ್ಸಿಪಾಲರು ಜೀವನ ಶಿಕ್ಷಣ ಕೇಂದ್ರದ ತೋಟದಲ್ಲಿ
ಮೆಣಶಿನಕಾಯಿಗಳನ್ನು ಹರಿಯುತ್ತಿರುವ ನೋಟ.

ಎಡದಿಂದ ಬಲಕ್ಕೆ : (೧) ಶ್ರೀ. ಬ್ಯಾಹಟ್ಟಿ. (೨) ಶ್ರೀ. ರಾಯಣ್ಣ
ನವರ. (೩) ಶ್ರೀ. ಹಾಚಿನಾಳ. (೪) ಶ್ರೀ. ಯಮುನಾಬಾಯಿ
ನಾಡಕರ್ಣಿ. (೫) ಎಸ್. ಆರ್. ತಟ್ಟಿ.

ಲ್ವರು ಪ್ರಿನ್ಸಿಪಾಲರು ಜಿವನ ಶಿಕ್ಷಣ ಕೇಂದ್ರದ ತೋಟದಲ್ಲಿ
ಸಸಿಗಳಿಗೆ ನೆಲ ಮಿದುವು ಮಾಡುತ್ತಿರುವ ದೃಶ್ಯ.

ಎಡದಿಂದ ಬಲಕ್ಕೆ: (೧) ಶ್ರೀ. ಇಂಚಲ. (೨) ಶ್ರೀ. ಮೇಂಚ.
(೩) ಶ್ರೀ. ನರಸಾಪೂರ. (೪) ಶ್ರೀ. ಕುಲಕರ್ಣಿ.

ಈ ಮೇಲೆ ಬರೆದ ವಿಷಯಗಳ ಮೇಲೆ ಇದ್ದ ಪುಸ್ತಕಗಳು, ಅವುಗಳ ಬೆಲೆ, ಮತ್ತು ಅವು ಸಿಗತಕ್ಕ ಸ್ಥಳ ಇತ್ಯಾದಿಗಳನ್ನು ಸಾಯಕಲೋಸ್ಟಾಯಿಲ ಹೊಡೆದು ಒಂದೊಂದು ಪ್ರತಿಯನ್ನು ಕೊಡಲಾಯಿತು—

ಚರ್ಚೆಗಳು : ಎಣ್ಣೆ ಇಲ್ಲದೆ ದೀಪ ಉರಿಯದು ಎಂಬ ಮಾತನ್ನು ಬೇರೆ ಹೇಳಬೇಕಾಗಿಲ್ಲ. ತಾತ್ವಿಕ ಎಂಬುದು ಅನುಭವದ ಮತ್ತು ಜ್ಞಾನದ ದೀಪಕ್ಕೆ ಎಣ್ಣೆ ಇದ್ದ ಹಾಗೆ. ಶಿಕ್ಷಣವಿರಲಿ ಅಥವಾ ಇನ್ನು ಯಾವ ವಿಷಯವೇ ಇರಲಿ, ಎಲ್ಲ ವಿಷಯಗಳ ಅಂತರ್ಭೂತವಾಗಿ ಆಯಾ ಸಂಗತಿಗೆ ಸಂಬಂಧಪಟ್ಟ ಅಂತಸ್ಸತ್ವ ಎಂದರೆ ತತ್ವ ಎಂಬುದು ಇದ್ದೇ ಇರುವದು. ಇದನ್ನು ಹಿಂಜಿ ತೆಗೆದಾಗಲೇ ಆ ಸಂಗತಿ, ಆ ವಿಷಯ ಸುಸ್ಪಷ್ಟವಾಗಿ ಹೃದಯಂಗಮವಾಗಿ ಆಕಲನ ಯೋಗ್ಯವಾಗುವದು. ಈ ತತ್ವದ ಪ್ರಕಾಶವು ಚರ್ಚಾಮೂಲಕವಾಗಿ ಆಯಾ ವಿಷಯದ ಸುತ್ತೂ ಬಿದ್ದು ಆ ವಿಷಯ ಪ್ರುಸ್ಫುಟವಾಗುವದು. ಈ ದೃಷ್ಟಿಯಿಂದ ಇಲ್ಲಿ ತರಬೇತೀ ಹೊಂದಲು ಬಂದವರು ಪರಿಣಿತಮತಿಗಳು, ಪರಿಣತ ವಯಸ್ಕರು ಹಾಗೂ ಅನುಭವ ಸಂಪನ್ನರು ಆಗಿದ್ದರೂ ಅವರಿಗೆ ಹೊಸ ದೃಷ್ಟಿಕೋನದಿಂದ ನೋಡಿದ ಈ ಹೊಸಪ್ರಣಾಲಿಯ ಬಗ್ಗೆ ವಿಧವಿಧದ ಚರ್ಚೆ ಹಾಗೂ ಊಹಾಪೋಹಗಳ ಅವಶ್ಯಕತೆ ಇದ್ದೇ ಇತ್ತು ಎಂದೇ ಬೇರೆ ಬೇರೆ ವಿಷಯಗಳನ್ನು ಕುರಿತಾಗಿ ಬೇರೆ ಬೇರೆ ಚರ್ಚೆಗಳನ್ನು ಏರ್ಪಡಿಸಲಾಗಿತ್ತು ಈ ಚರ್ಚೆಗಳನ್ನು ನಡೆಸಲು ಜೀವನ ಶಿಕ್ಷಣ ಕೇಂದ್ರದ ಪ್ರಾಧ್ಯಾಪಕರಲ್ಲದೆ ಹೊರಗಿನ ಕೆಲ ವಿದ್ವಾಂಸರನ್ನೂ ಆಮಂತ್ರಿಸಿತು. ವಿವರ ಕೆಳಗಿನಂತಿದೆ :

ಆಮಾಂತ್ರಿತರಾದವರು :

೧) ಶ್ರೀಮತಿ ಪಾಣಂದೀಕರ.

೨) ಶ್ರಿ. ವ್ಹಿ. ಆರ್. ಮುಧೋಳಕರ.

೩) ಆಚಾರ್ಯ ಭಾಗವತ.

೪) ಶ್ರೀ. ಎಸ್. ಕೆ. ಕಲ್ಲಾಪೂರ.

೫) ಡಾ. ಎನ್. ಪಿ. ಪಾಟೀಲ.

ಇವರೇ ಮೊದಲಾದವರು.

ಚರ್ಚಿಸಿದ ವಿಷಯಗಳು :

(೧) ವೃತ್ತಿಮೂಲ ಶಿಕ್ಷಣದ ಧ್ಯೇಯವಾದ ಮತ್ತು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮಸ್ಯೆಗಳ ಸಂಬಂಧ.

(೨) ವೃತ್ತಿಮೂಲ ಶಿಕ್ಷಣವು ರಾಷ್ಟ್ರೀಯ ಶಿಕ್ಷಣದ ಕ್ರಮಪ್ರಾಪ್ತ ಬೆಳವಣಿಗೆಯೇ ಆಗಿದೆ.

(೩) ವೃತ್ತಿಮೂಲ ಶಿಕ್ಷಣದ ಇತಿಹಾಸ ಹಾಗೂ ಬೆಳವಣಿಗೆ.

(೪) ವೃತ್ತಿಮೂಲ ಶಿಕ್ಷಣದ ತತ್ವಗಳು.

(೫) ಸಮವಾಯ ಅಧ್ಯಾಪನಕ್ರಮದ ತಂತ್ರ ಮತ್ತು ವಿಧಾನ.

(೬) ಸಮವಾಯದ ಮುಪ್ಪುರಿಗಳ—

I ಪ್ರಾಕೃತಿಕ ಪರಿಕರ.

II ಸಾಮಾಜಿಕ ಪರಿಕರ.

III ವೃತ್ತಿ ಅಥವಾ ಕೈಗಾರಿಕೆಗಳೂ ಶಿಕ್ಷಣ ಕ್ರಮದಲ್ಲಿ ಅವುಗಳ ಬಳಕೆಯೂ.

(೭) ವೃತ್ತಿಮೂಲ ಶಿಕ್ಷಣ ಶಾಲೆಗಳಲ್ಲಿ ಮತ್ತು ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜಗಳಲ್ಲಿ ಕೌಟುಂಬಿಕ ಜೀವನದ ಚಟುವಟಿಕೆಗಳ ಅಗತ್ಯತೆ ಮತ್ತು ಸಂಘಟನೆ.

(೮) ವೃತ್ತಿಮೂಲ ಶಿಕ್ಷಣಿ ಶಾಲೆ ಮತ್ತು ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜುಗಳ ಸರ್ವತೋಮುಖ ಸಂಘಟನೆ.

(೯) I ಕೆಳಗೆ ಕಾಣಿಸಿದ ಅಭ್ಯಾಸಕ್ರಮಗಳ ತುಲನೆ.

(ಅ) ಮುಂಬಯಿ ಪ್ರಾಂತದ ವೃತ್ತಿಮೂಲ ಶಿಕ್ಷಣದ ತರಬೇತಿ ಸಂಸ್ಥೆಗಳ ಅಭ್ಯಾಸ ಕ್ರಮ.

(ಆ) ಹಿಂದುಸ್ತಾನಿ ತಾಲೀಮಿ ಸಂಘದವರು ಶಿಕ್ಷಕರಿಗಾಗಿ ಸಿದ್ಧಪಡಿಸಿದ ಅಭ್ಯಾಸ ಕ್ರಮ.

(ಇ) ಮುಂಬಯಿಯ ಪದವೀಧರ ಜೀವನ ಶಿಕ್ಷಣ ಕೇಂದ್ರಗಳ ಅಭ್ಯಾಸಕ್ರಮ.

(೧೦) II ಮುಂದೆ ಕಾಣಿಸಿದ ಅಭ್ಯಾಸಕ್ರಮಗಳ ತುಲನೆ—

(ಅ) ವೃತ್ತಿಮೂಲ ಶಾಲೆಗಳ ಅಭ್ಯಾಸಕ್ರಮ ಮುಂಬಯಿ.

(ಆ) ವೃತ್ತಿಮೂಲ ಶಾಲೆಗಳ ಅಭ್ಯಾಸಕ್ರಮ, ಹಿಂದುಸ್ತಾನಿ ತಾಲೀಮಿ ಸಂಘ.

(೧೧) ವೃತ್ತಿಮೂಲ ಶಿಕ್ಷಣವೂ ಸಾಮಾಜಿಕ ಶಿಕ್ಷಣದ ಯೋಜನೆಯೂ.

(೧೨) ಶಿಕ್ಷಣ ಮತ್ತು ಗ್ರಾಮ ಸುಧಾರಣೆಯ ಮೇಲೆ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮದ ಪ್ರಭಾವ.

(೧೩) ಔದ್ಯೋಗೀಕರಣದ ಸಮಸ್ಯೆಗಳೂ ಮೂಲ ಕೈಗಾರಿಕೆಗಳ ಆರ್ಥಿಕ ವಿವರಗಳೂ.

(೧೪) ಗ್ರಾಮಪರಿಶೀಲನೆಯ ಮಹತ್ವ ಮತ್ತು ವಿಧಾನ.

(೧೫) ಮುಂಬಯಿ ಪ್ರಾಂತದಲ್ಲಿ ವೃತ್ತಿಮೂಲ ಶಿಕ್ಷಣದ ಆಡಳಿತೆ.

I ವೃತ್ತಿಮೂಲ ಶಿಕ್ಷಣದ ಯೋಜನೆ ಮತ್ತು ಧೋರಣೆ.

II ವೃತ್ತಿಮೂಲ ಶಾಲೆಗಳ ಆಡಳಿತೆ.

III ವೃತ್ತಿಮೂಲ ಶಾಲೆಗಳ ಮೇಲ್ವಿಚಾರಣೆ ಮತ್ತು ಪರೀಕ್ಷಣೆ.

IV ಶಿಕ್ಷಕರ ತರಬೇತಿಯ ಯೋಜನೆ.

(ಅ) ಕೈಗಾರಿಕೆಗಳ ತರಬೇತಿ.

(ಆ) ವೃತ್ತಿಮೂಲ ಶಿಕ್ಷಣದಲ್ಲಿ ತರಬೇತಿ.

(೧೬) ವೃತ್ತಿಮೂಲ ಶಿಕ್ಷಣದ ಬಗ್ಗೆ ಸರಕಾರಕ್ಕೆ ತಗಲುವ ವೆಚ್ಚ.

(ಅ) ಕೈಗಾರಿಕೆಗಳ ತರಬೇತಿಯ ವೆಚ್ಚ.

(ಆ) ಕೈಗಾರಿಕೆಗಳ ಉಪಕರಣಗಳೇ ಮೊದಲಾದವನ್ನು ಅಣಿಗೊಳಿಸಲು ತಗಲುವ ವೆಚ್ಚ.

(ಇ) ಕೈಗಾರಿಕೆಗಳ ಬಗ್ಗೆ ಆಗುವ ಆವರ್ತ ವೆಚ್ಚ.

(ಈ) ವಸತಿ ಸೌಕರ್ಯದ ಬಗ್ಗೆ ಆಗುವ ವೆಚ್ಚ.

(ಉ) ಹೆಚ್ಚಿನ ಶಿಕ್ಷಕರ ಬಗ್ಗೆ ಆಗುವ ವೆಚ್ಚ.

(ಊ) ಮೇಲ್ವಿಚಾರಣೆ ಮತ್ತು ಪರೀಕ್ಷಣೆಗೆ ತಗಲುವ ಹೆಚ್ಚಿನ ವೆಚ್ಚ.

(೧೭) ವೃತ್ತಿಮೂಲ ಶಿಕ್ಷಣದ ಸಲಹಾ ಸಮಿತಿಯೂ ಅದರ ಕಾರ್ಯವೂ.

(೧೮) ಜೀವನ ಶಿಕ್ಷಣ ಕೇಂದ್ರದ ಶಿಕ್ಷಕ ವಿದ್ಯಾರ್ಥಿಗಳ ಕಾರ್ಯಗಳ ಕೂಲಂಕಷ ನಿರೀಕ್ಷಣೆ.

(೧೯) ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳಿಗೂ ವೃತ್ತಿಮೂಲ ಶಿಕ್ಷಣ ಶಾಲೆಗಳಿಗೂ ಸಂಬಂಧಿಸಿದ ವಿಷಯಗಳ ಚರ್ಚೆ.

V ಸಮವಾಯ ಪದ್ಧತಿಯ ಪಾಠಗಳು :

ತರಬೇತಿಗೆ ಬಂದ ಮುಖ್ಯಾಧ್ಯಾಪಕರು ಸಮವಾಯ ಪದ್ಧತಿಯ ಪಾಠಕ್ರಮಗಳನ್ನು ಸರಕಾರಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಪ್ರಾಕ್ಟೀಸಿಂಗ ಸ್ಕೂಲಿನಲ್ಲಿ ಆಗಲೇ ನೋಡಿಬಂದಿದ್ದರು. ಆದರೂ ಅವರಿಗೆ ಈ ಬಗ್ಗೆ ಇನ್ನಷ್ಟು ಸ್ಪಷ್ಟ ಕಲ್ಪನೆ ಬರಲೆಂದು ಗುಲಗಂಜಿ ಕೊಪ್ಪದ ಜೀವನ ಶಿಕ್ಷಣ ಕೇಂದ್ರದ ಪ್ರಾಕ್ಟೀಸಿಂಗ ಸ್ಕೂಲಿನಲ್ಲಿ ಇನ್ನೊಂದು ಪಾಠವನ್ನು ಏರ್ಪಡಿಸಿತ್ತು. ಇದನ್ನು ಕೇಂದ್ರದಲ್ಲಿ ಶಿಕ್ಷಕ ವಿದ್ಯಾರ್ಥಿಗಳಾಗಿದ್ದ ಶ್ರೀ. ಎಸ್. ಜಿ. ಗೋಕಾವಿ ಇವರು ನಡೆಸಿದರು. ಈ ಪಾಠಾನಂತರ ಪಾಠದ ಬಗ್ಗೆ ಕೂಲಂಕಷ ವಿಮರ್ಶೆ ಮತ್ತು ಚರ್ಚೆ ನಡೆದಿತು.

VI ಸಂದರ್ಶನ ಮತ್ತು ಪ್ರವಾಸ :

ಧಾರವಾಡದ ಬಾನುಲಿಕೇಂದ್ರಕ್ಕೆ ಮತ್ತು ಸರಕಾರಿ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ ಮತ್ತು ಅಲ್ಲಿಯ ಪ್ರಾಕ್ಟೀಸಿಂಗ ಸ್ಕೂಲಿಗೆ ಸಂದರ್ಶನ ಏರ್ಪಡಿಸಲಾಗಿತ್ತು. ಮುಖ್ಯಾಧ್ಯಾಪಕರಿಗಾಗಿ ಆಯಾ ಸಂಸ್ಥೆಯವರು ಅಲ್ಲಿಯ ಕಾರ್ಯವಿವರಗಳನ್ನು ತಿಳಿಸಿ ಹೇಳಿದರಲ್ಲದೆ ಅಡ್ಡಾಡಿಸಿ ಎಲ್ಲವನ್ನೂ ತೋರಿಸಿದರು. ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನ ಪ್ರಾಕ್ಟೀಸಿಂಗ ಸ್ಕೂಲಿನ ಮಕ್ಕಳು ಮನರಂಜನ ಕಾರ್ಯಕ್ರಮವನ್ನೂ ಏರ್ಪಡಿಸಿದ್ದರು.

ತಾ. ೩೦-೧೦-೫೦ಕ್ಕೆ ಅರವಟಿಗೆಯ ಸರ್ವೋದಯ ಕೇಂದ್ರಕ್ಕೆ ಎಲ್ಲ ಮುಖ್ಯಾಧ್ಯಾಪಕರನ್ನೂ ಕರೆದುಕೊಂಡು ಹೋಗಲಾಗಿತ್ತು. ಅಲ್ಲಿ ಸರ್ವೋದಯ ಕೇಂದ್ರದ ಸಂಚಾಲಕರಲ್ಲೊಬ್ಬರಾದ ಶ್ರೀ. ಕೇಸರಕೋಡಿ ಅವರು ತಮ್ಮ ಕೇಂದ್ರದ ವಿವಿಧ ಚಟುವಟಿಕೆಗಳನ್ನು ತೋರಿಸಿದರು. ಗಾಂಧೀಜಿಯ ವಿಧಾಯಕ ಕಾರ್ಯಕ್ರಮಗಳನ್ನು ಈ ಕೇಂದ್ರದಲ್ಲಿ ಬಹುಮಟ್ಟಿಗೆ ಕಾರ್ಯರೂಪದಲ್ಲಿ ತಂದದ್ದನ್ನು ಎಲ್ಲರೂ ಮನಗಂಡರು.

ಕೊನೆಯ ದಿನ ತಾ. ೪-೧೧-೫೦ರಂದು ಆಚಾರ್ಯ ಭಾಗವತರ ನೇತೃತ್ವದಲ್ಲಿ ಈ ತರಬೇತಿ ವರ್ಗ-ಮುಕ್ತಾಯ ಸಮಾರಂಭವಾಯಿತು. ಆಚಾರ್ಯ ಭಾಗವತರು ಸಮಯೋಚಿತವಾಗಿ ಮಾಡಿದ ಉದ್ಬೋಧಕ ಭಾಷಣದ ಸಾರಾಂಶವನ್ನು ಇದೇ ಸಂಚಿಕೆಯಲ್ಲಿ ಬೇರೆಡೆ ಕಾಣಬಹುದು. ಈ ದಿನದ ಸಮಾರಂಭದ ಕಾಲಕ್ಕೆ ಈ ಕೇಂದ್ರದ ಕುಲಪತಿಗಳೂ ತರಬೇತಿ ವರ್ಗಕ್ಕೆ ಬಂದ ಮುಖ್ಯಾಧ್ಯಾಪಕರೂ ತಮ್ಮ ತಮ್ಮ ಪರವಾಗಿ ನಿರೋಪದ ಭಾಷಣಗಳ ಮೂಲಕ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದರು.

ಪ್ರಾಥಮಿಕ ಜೀವನ ಶಿಕ್ಷಣ

ಲೇಖಕರು : **ಶ್ರೀ. ವ್ಹಿ. ಸಿ. ಬ್ಯಾಹಟ್ಟಿ** ಬಿ. ಎ., ಬಿ. ಟಿ. ಪ್ರಿನ್ಸಿಪಾಲ ಬಸವೇಶ್ವರ ಗಂ.ಟ್ರೇ.ಕಾ. ಬಾಗಲಕೋಟ.

ಪ್ರಚಲಿತವಿದ್ದ ಶಿಕ್ಷಣವು ಕೇವಲ ಪುಸ್ತಕಗಳ ಮೂಲಕ ದೊರಕಿಸುವವಿದ್ಯೆ ಯಾಗಿದೆ. ಈ ಶಿಕ್ಷಣದಿಂದ ಯಾವ ಉತ್ಪಾದಕ ಶಕ್ತಿಯೂ ವಿದ್ಯಾರ್ಥಿಗಳಲ್ಲಿ ಉಂಟಾಗುವದಿಲ್ಲ. ಓದು ಬರಹಗಳ ದ್ವಾರ ಗ್ರಂಥಗಳ ಜ್ಞಾನ ಸಂಗ್ರಹದಿಂದ ಸಾಂಸ್ಕೃತಿಕ ಶಿಕ್ಷಣವು ಮಾತ್ರವಾಗಿ ಕೇವಲ ಸೇವಕ ವೃತ್ತಿಯಿಂದ ಪರಾವಲಂಬಿಗಳಾಗಿ ಸ್ವಂತ ವಿಚಾರಗಳಿಂದ ಏನನ್ನೂ ಉತ್ಪಾದಿಸುವ ಶಕ್ತಿ ಇಲ್ಲದೆ ಪರಶೋಷಣದಿಂದ ಉಪಜೀವಿಸುವ ವ್ಯಕ್ತಿಗಳ ಸಮಾಜವನ್ನು ನಿರ್ಮಿಸುತ್ತದೆ, ಎಂದು ಬಹು ಜನರ ಮತವಾಗಿದೆ. ಆದ್ದರಿಂದ ಇಂಥ ಬೌದ್ಧಿಕ ಶಿಕ್ಷಣವನ್ನು ರಾಷ್ಟ್ರ ಪೋಷಕವಾಗುವಂತೆ ಜೀವನೋಪಯೋಗಿ ವಸ್ತುಗಳನ್ನು ನಿರ್ಮಿಸುವ ಶಕ್ತಿಯುಳ್ಳ, ವಿದ್ಯಾರ್ಥಿಗಳ ಸರ್ವ ಶಕ್ತಿವರ್ಧಕ ಸ್ವಾವಲಂಬಿ ಸಮನ್ವಯ ಶಿಕ್ಷಣವನ್ನಾಗಿ ಮಾರ್ಪಡಿಸಬೇಕೆಂದು ಶಿಕ್ಷಣ ಪ್ರೇಮಿಗಳು ವಿಚಾರ ಮಾಡತೊಡಗಿದರು. ಆದರೆ ಶಿಕ್ಷಣದಲ್ಲಿ ಬದಲಾವಣೆ ಮಾಡುವದು ಸುಲಭ ಸಾಧ್ಯವಲ್ಲ.ಶಿಕ್ಷಣ ಕ್ಷೇತ್ರದಲ್ಲಿಯ ಮಾರ್ಪಾಡು ಇಡೀ ರಾಷ್ಟ್ರವನ್ನೇ ಬದಲಾಯಿಸುವದರಿಂದ ಶಿಕ್ಷಣ ತಜ್ಞರು ಸಾಕಷ್ಟು ವಿಚಾರ ಮಾಡಿ ಯೋಗ್ಯವಾದ ರಾಷ್ಟ್ರೀಯ ಶಿಕ್ಷಣದ ಅಂತಿಮ ಧ್ಯೇಯವನ್ನು ಗೊತ್ತುಪಡಿಸಿ ಆ ಧ್ಯೇಯಕ್ಕನುಸಾರವಾದ ಶಿಕ್ಷಣ ಕ್ರಮವನ್ನು ಪ್ರಯೋಗದಿಂದ ಯಶಸ್ವಿಯಾಗುವದೆಂದು ತಿಳಿದು ಆರಂಭಿಸಬೇಕಾಗುವದು. ಈ ದೃಷ್ಟಿಯಿಂದ ರಾಷ್ಟ್ರ ಹಿತೈಷಿಗಳು ಜೀವನ ಧ್ಯೇಯವನ್ನು ಸ್ಥಿತಪ್ರಜ್ಞನ ಜ್ಞಾನದಿಂದ ಕಂಡು ರಾಷ್ಟ್ರೀಯ ಶಿಕ್ಷಣವು ಯಾವ ಬಗೆಯದಿರಬೇಕೆಂಬದನ್ನು ನಿರ್ಣಯಿಸುವದು ಅವಶ್ಯ. ಆ ರೀತಿಯಾಗಿ ವರ್ಧಾ ಯೋಜನೆಯ ಮೂಲ ಜೀವನ ಶಿಕ್ಷಣವು ಸ್ಥಿತಪ್ರಜ್ಞರಾದ ಗಾಂಧಿಜಿ ಹಾಗೂ ಝಕೀರ ಹುಸೇನ ಕಮಿಟಿಯವರ ಪರಿಶ್ರಮದ ಫಲವಾಗಿ ಮೂಲ ಶಿಕ್ಷಣ ಅಥವಾ ಜೀವನ ಶಿಕ್ಷಣವು ಶೋಷಣರಹಿತ, ಸ್ವಾವಲಂಬಿ ಅಹಿಂಸಾತ್ಮಕ ಮೂಲೋದ್ಯೋಗ ಮೂಲಕ ಕೊಡಲ್ಪಡುವ ಶಿಕ್ಷಣವೆಂದು ನಿರ್ಣಯಿಸಲ್ಪಟ್ಟಿದೆ.

ಆದರೆ ಇಂಥ ಮೂಲೋದ್ಯೋಗ ಶಿಕ್ಷಣವು ಕೇವಲ ಬೌದ್ಧಿಕ ಶಿಕ್ಷಣದಿಂದ ಬೆಳೆದಂಥ ಈಗಿನ ಶಿಕ್ಷಕ ಬಂಧುಗಳಿಗೆ ಒಗ್ಗುವದು ಕಠಿಣವಾಗಿದೆ. ಆದ್ದರಿಂದ ಮೂಲೋದ್ಯೋಗ ಶಿಕ್ಷಣವನ್ನು ರಾಷ್ಟ್ರೀಯ ಶಿಕ್ಷಣವನ್ನಾಗಿ ಪ್ರಚಾರ ಮಾಡಿ ಪ್ರಾರಂಭಿಸುವ ಕಾರ್ಯವು ವಿಲಂಬವಾಗತೊಡಗಿದೆ. ಆ ಕಾರ್ಯಕ್ಕೆ ಮೊದಲು ಶಿಕ್ಷಣ ಖಾತೆಯ ಅಧಿಕಾರಿಗಳಿಗೂ ಟ್ರೇನಿಂಗ ಕಾಲೇಜದ ಶಿಕ್ಷಕರಿಗೂ ಮತ್ತು ತರಬೇತಿ ಹೊಂದುವ ವಿದ್ಯಾರ್ಥಿಗಳಿಗೂ ಈ ಮೂಲೋದ್ಯೋಗ ಶಿಕ್ಷಣದ ಮೀಮಾಂಸೆಯನ್ನು ತಿಳಿಸಿಕೊಟ್ಟು ಆ ಶಿಕ್ಷಣದಿಂದ ಪರಶೋಷಣರಹಿತ, ಸ್ವಾವಲಂಬಿ ಅಹಿಂಸಾತ್ಮಕ ಶಾಂತಿ ತುಷ್ಟಿ ಪುಷ್ಟಿಯುಳ್ಳ ಸಮಾಜ ಹೇಗೆ ನಿರ್ಮಾಣವಾಗಬಲ್ಲದೆಂಬದನ್ನು ಶಿಕ್ಷಕರಿಗೆ ಮನಗಾಣಿಸಿಕೊಟ್ಟಲ್ಲಿ ಅವರು ತಮ್ಮ ವಿದ್ಯಾರ್ಥಿಗಳಿಗೆ ಆ ಬಗೆಯ ನಿರ್ದೋಷವಾದ ಆದರ್ಶ ಸಮಾಜ ರಚಿಸುವ ಶಿಕ್ಷಣವನ್ನು ಕೊಡಬಲ್ಲರೆಂದು ತಿಳಿದು ಆ ಕ್ರಮಕ್ಕನುಸರಿಸಿ ಟ್ರೇನಿಂಗ ಕಾಲೇಜ ಮುಖ್ಯಾಧ್ಯಾಪಕರ ಒಂದು ತಿಂಗಳ ಅವಧಿಯ ಜೀವನ ಶಿಕ್ಷಣ ತರಬೇತಿ ವರ್ಗವನ್ನು ನಡೆಯಿಸಿ ಸಿಂಹಾವಲೋಕನದಿಂದ ಆ ಶಿಕ್ಷಣದ ಮೀಮಾಂಸೆಯನ್ನು ಚನ್ನಾಗಿ ಸಾಕ್ಷಾತ್ ಪ್ರಯೋಗದಿಂದ ಮನಗಾಣಿಸಿ ಕೊಡುವದರಲ್ಲಿ ಬಂದಿತು.

ಈ ಜೀವನ ಶಿಕ್ಷಣದಲ್ಲಿ ಮುಖ್ಯವಾಗಿ ಸಫಾಯಿ, (ಸ್ವಚ್ಛತೆ) ಉದ್ಯೋಗಪ್ರೇಮ, ಸಮಾಜಸೇವೆ,ಜಾತ್ಯಾತೀತ ಐಕ್ಯ ಭಾವನೆ, ನಿಃಸ್ವಾರ್ಥ ಸಹಕಾರ, ಅಹಿಂಸಾತ್ಮಕ ಶಾಂತಿ ಮುಂತಾದ ಗುಣಗಳ ವೃದ್ಧಿಗೆ ಆಸ್ಪದ ಕೊಡುವ ಕಾರ್ಯಕ್ರಮಕ್ಕೆ ಪ್ರಾಶಸ್ತ್ಯ ಕೊಡಲ್ಪಟ್ಟಿದೆ.

ಈ ಗುಣಗಳ ಸಾಫಲ್ಯಕ್ಕೆ ಸ್ಥಿತಪ್ರಜ್ಞನ ದೈವೀಬುದ್ಧಿಯೇ ಆಧಾರವಾಗಿದೆ ಎಂಬದನ್ನು ಆಚಾರ್ಯ ಭಾಗವತರು ತಮ್ಮ ಅಲ್ಪಾವಧಿ ವರ್ಗದ ಮುಕ್ತಾಯ ಸಮಾರಂಭದ ಭಾಷಣದಲ್ಲಿ ಮುಖ್ಯಾಧ್ಯಾಪಕರಿಗೆ ಮನಗಾಣಿಸಿ ಕೊಟ್ಟರು.

ಈ ಅಲ್ಪಾವಧಿಯಲ್ಲಿ ಮೂಲ ಶಿಕ್ಷಣ ಶಾಲೆಗಳನ್ನು ಸಂದರ್ಶಿಸಿ ಅಲ್ಲಿ ನಡೆದ ಚಟುವಟಿಕೆಗಳನ್ನೂ ವಿದ್ಯಾರ್ಥಿಗಳು ಸಾಧಿಸಿದ ಪ್ರಗತಿಯನ್ನೂ ಕಂಡು ಪ್ರಾಧ್ಯಾಪಕರು ಮೂಲಶಿಕ್ಷಣಕ್ಕೆ ಒಳ್ಳೇ ಮಹತ್ವವಾದ ಭವಿತವ್ಯ ಉಂಟೆಂದು ಭಾವಿಸಿದರು. ಆದಾಗ್ಯೂ ಇದು ಈ ಮೂಲ ಶಿಕ್ಷಣದ ಪ್ರಾರಂಭಾವಸ್ಥೆ ಇದ್ದು ಸಾಧಿಸತಕ್ಕ ಪ್ರಗತಿಗೆ ಸಾಕಷ್ಟು ಅವಕಾಶವುಂಟು; ಅಲ್ಲದೆ ಇದರ ಯಶಾಪಯಶಗಳು ಶಾಲೆಯ ಕಟ್ಟಡಗಳು, ಕಲಿಸುವ ಉತ್ಸಾಹಿ ಶಿಕ್ಷಕರು, ಆರ್ಥಿಕ ಸಹಾಯ ಮತ್ತು ಶಿಕ್ಷಣ ತಜ್ಞರ ಪರಿಶ್ರಮಗಳ ಮೇಲೆ ಅವಲಂಬಿಸಿವೆ ಎಂದು ಹೇಳಬಹುದು.

ಈ ಮೂಲೋದ್ಯೋಗ ಶಿಕ್ಷಣವು ರಾಷ್ಟ್ರೀಯವೆಂದು ಗಣಿಸಲ್ಪಡಲಿಕ್ಕೆ ಬೌದ್ಧಿಕ ಶಿಕ್ಷಣಪ್ರೇಮಿಗಳು ಮುಂದು ಮಾಡುವ ಅಥವಾ ಎತ್ತುವ ಆಕ್ಷೇಪವೇಂದರೆ ಈ ಜೀವನ ಶಿಕ್ಷಣದಲ್ಲಿ ಮೂಲೋದ್ಯೋಗಕ್ಕೆ ಹೆಚ್ಚು ವೇಳೆ ಮತ್ತು ಪ್ರಾಶಸ್ತ್ಯ ಕೊಡುವದರಿಂದ ಬೌದ್ಧಿಕ ಬೆಳವಣಿಗೆಗೆ ಇಲ್ಲವೆ ಜ್ಞಾನಾರ್ಜನೆಗೆ ಸಾಕಷ್ಟು ವೇಳೆ ಮತ್ತು ಮಹತ್ವ ದೊರೆಯುವದಿಲ್ಲವೆಂಬದು. ಈ ಆಕ್ಷೇಪವು ಸತ್ಯದ್ದರ್ಶನಕ್ಕೆ ಮಹತ್ವದ್ದೆಂದು ಕಂಡುಬಂದಾಗ್ಯೂ ಒಪ್ಪೇ ವ್ಯಾವಹಾರಿಕವಾಗಿ ಈ ಕೆಳಗಿನ ರೀತಿಯಿಂದ ನಿವಾರಿಸಲ್ಪಟ್ಟಿದೆ.

ಹಿಂದುಸ್ಥಾನವು ೭೦ ಲಕ್ಷ ಹಳ್ಳಿಗಳ ದೇಶವು. ಇವುಗಳಲ್ಲಿ ಬಹುಭಾಗ ಹಳ್ಳಿಗಳಲ್ಲಿ ಕೇವಲ ಪ್ರಾಥಮಿಕ ೪ ಇಯತ್ತೆಗಳ ಅಭ್ಯಾಸ ನಡೆಯುವದು. ಹಳ್ಳಿಗಳಲ್ಲಿಯ ವಿದ್ಯಾರ್ಥಿಗಳು ೧೦೦ಕ್ಕೆ ೭೦–೮೦ರಷ್ಟು ಬಾಲಕರುಪ್ರಾಥಮಿಕ ವಿದ್ಯಾಭ್ಯಾಸ ಮಟ್ಟಕ್ಕೇ ತಮ್ಮ ವಿದ್ಯಾರ್ಜನೆಯನ್ನು ನಿಲ್ಲಿಸುತ್ತಾರೆ. ಆದ್ದರಿಂದ ಇಂಥವರಿಗೆ ಪ್ರಾಥಮಿಕ ವಿದ್ಯಾಭ್ಯಾಸವು ಅವರ ಜೀವನಕ್ಕೆ ಮತ್ತು ಹಳ್ಳಿಯ ಪರಿಸ್ಥಿತಿಗೆ ಹೊಂದಿಕೊಂಡು ಸಾಗುವದು ಅವಶ್ಯ. ಆದ್ದರಿಂದ ಅವರ ಶಿಕ್ಷಣಕ್ರಮವು ಗ್ರಾಮದ ಆರ್ಥಿಕ ಸಾಮಾಜಿಕ ಮತ್ತು ನೈಸರ್ಗಿಕ ಪರಿಸ್ಥಿತಿಗೆ ಹೊಂದಿಕೊಂಡು ಬಾಲಕರ ಜೀವನ ಶಿಕ್ಷಣವೇ ಆಗುವದು ಹೆಚ್ಚು ಫಲಕಾರಿಯು. ಈ ಶಿಕ್ಷಣವು ಕೇವಲ ಪುಸ್ತಕೀಯವಾಗದೆ ಅನುಭವಾತ್ಮಕವೂ ಗ್ರಾಮೋದ್ಯೋಗಗಳಿಗೆ ಸಂಬಂಧಪಟ್ಟಿದ್ದೂ ಆಗಿ ಮನೆ ಮತ್ತು ಶಾಲೆಗಳಲ್ಲಿಯ ಸಂಸ್ಕಾರ ಮತ್ತು ಪರಿಸ್ಥಿತಿಗಳು ಪರಸ್ಪರ ವಿರೋಧಿಗಳಾಗದೆ ಪೂರಕ ಮತ್ತು ಪೋಷಕವಾಗುವಂತೆ ಸಾಧಿಸುವದು ಯೋಗ್ಯವಾದದ್ದು. ಈ ದೃಷ್ಟಿಯಿಂದ ಹಳ್ಳಿಯ ಮೂಲೋದ್ಯೋಗದ ಮುಖಾಂತರ ಕಾರ್ಯಮಾಡಿ ಅದಕ್ಕೆ ಸಂಬಂಧಪಟ್ಟ ಜ್ಞಾನವನ್ನು ಸಮನ್ವಯ ಮಾಡಿ ಶಿಕ್ಷಣ ಸಾಗಿಸುವದೇ ಸರ್ವಸಮ್ಮತವಾಗುವದು. ಶಿಕ್ಷಣವು ಹಳ್ಳಿಯ ವಾತಾವರಣಕ್ಕೆ ವಿಸಂಗತವಂತೂ ಆಗದೆ ಅದಕ್ಕೆ ಹೊಂದಿಕೊಂಡು ಸಾಗತಕ್ಕದ್ದು. ಬಾಲಕರು ಕೃತಿಪ್ರೇಮಿಗಳು. ಆದ್ದರಿಂದ ಪಾಠಗಳು ಚಟುವಟಿಕೆಗಳ ಮುಖಾಂತರ ಅದರಲ್ಲಿಯೂ ಮೂಲೋದ್ಯೋಗ ಚಟುವಟಿಕೆಗಳ ಮುಖಾಂತರ ಸ್ವಾಭಾವಿಕವಾಗಿ ಆರ್ಥಿಕ, ನೈಸರ್ಗಿಕ ಹಾಗೂ ಸಾಮಾಜಿಕ ಪರಿಸ್ಥಿತಿಗೆ ಹೊಂದಿಕೊಂಡು ಸಮವಾಯ ರೀತಿಯಿಂದ ಸಾಗಿ ಬಾಲಕರಿಗೆ ಸಹಜವಾಗಿ ಅನುಭವಗಮ್ಯವಾಗುವಂತೆ ಕೆಲವು ಅಭ್ಯಾಸಪತ್ರಿಕೆಯ ವಿಷಯಗಳನ್ನು ಜೋಡಿಸಿ ಜ್ಞಾನವೃದ್ಧಿಗೊಳಿಸಬೇಕು. ಚಟುವಟಿಕೆಗೆ ಸಹಜವಾಗಿ ಸಮವಾಯವಾಗುವಷ್ಟೇ ವಿಷಯಗಳನ್ನು ಜೋಡಿಸಿ ಹಾಗೆ ಬಾರದ ವಿಷಯಗಳನ್ನು ಸ್ವತಂತ್ರವಾಗಿ ತೆಗೆದುಕೊಂಡು ಅಭ್ಯಾಸಪತ್ರಿಕೆಯ ವಿಷಯಗಳನ್ನು ಮುಗಿಸಬಹುದು. ಇಲ್ಲವೆ ಹಳ್ಳಿಯ ಪರಿಸ್ಥಿತಿಗೆ ಒಗ್ಗದ ವಿಷಯಗಳನ್ನು ಬಿಟ್ಟೂಬಿಡಬಹುದು. ಈ ರೀತಿಯಾಗಿ ಬರಬರುತ್ತ ಕ್ರಮೇಣ ಅಭ್ಯಾಸಪತ್ರಿಕೆಯನ್ನು ಬದಲಿಸಿ ಮೂಲೋದ್ಯೋಗ ಜೀವನ ಶಿಕ್ಷಣಕ್ಕೆ ಸರಿಯಾಗುವಂತೆ ಮಾರ್ಪಡಿಸಬಹುದು. ಅಂತೂ ಬಾಲಕರ ಶಿಕ್ಷಣವು ಅವರ ಪರಿಸ್ಥಿತಿ ಹಾಗೂ ಬಾಲ್ಯಾವಸ್ಥೆಯ ಜೀವನಕ್ಕೆ ಎಲ್ಲ ವಿಧದಿಂದಲೂ ಒಪ್ಪುವಂತೆ ಸಾಗಬೇಕು. ಹೀಗೆ ವರ್ಧಾ ಯೋಜನೆಯ ಶಿಕ್ಷಣವು ಬಾಲಕರ ಜೀವನ ಶಿಕ್ಷಣವಾಗಲು ಒಂದು ನೈಜವಾದ ಪ್ರಯತ್ನವಾಗಿದೆ. ಸಫಾಯಿ (ಸ್ವಚ್ಛತೆ), ಮೂಲೋದ್ಯೋಗದ ಚಟುವಟಿಕೆ ಇಲ್ಲವೆ ಹಳ್ಳಿಯ ಪರಿಸ್ಥಿತಿಗೆ ಒಪ್ಪುವ ಇತರ ಚಟುವಟಿಗೆಗಳು ಹಾಗೂ ಸಹಕಾರ, ಸಂಘಜೀವನ, ಮತ್ತು ಜಾತ್ಯಾತೀತ ಐಕ್ಯಭಾವನೆ, ಪ್ರೇಮ ಇವೇ ಈ ಜೀವನ ಶಿಕ್ಷಣದ ವೈಶಿಷ್ಟ್ಯಗಳು ಎಂಬದು ನಮ್ಮೀ ಅಲ್ಪಾವಧಿಯ ಟ್ರೇನಿಂಗ ಕಾಲೇಜಗಳ ಪ್ರಾಧ್ಯಾಪಕರ ತರಬೇತಿ ಸಮಯದಲ್ಲಿ ಕಂಡುಬಂದದ್ದಾಯಿತು. ಈ ಶಿಕ್ಷಣ ಮೀಮಾಂಸೆಯ ಆಧಾರಬಲದಿಂದ ಟ್ರೇನಿಂಗ ಕಾಲೇಜಗಳ ತರಬೇತಿ ಶಿಕ್ಷಣವು ಸಾಗಬೇಕಾಗಿದೆ.

★ ಅಂಧಃಕಾರದ ನಂದಾದೀಪ ★

ಲೇಖಕರು :
ಶ್ರೀ. ಎಚ್. ಎಂ. ಕಾಳೆ,
ಪ್ರಿನ್ಸಿಪಾಲ ಗಂ. ಟ್ರೇ. ಕಾ.
ಕಾರವಾರ.

ಜೀವನದ ಜಂಜಾಟವನ್ನು ಎದುರಿಸದೆ ಅದಕ್ಕಂಜಿ ಓಡಿಹೋಗುವದು ಸನ್ಯಾಸವಲ್ಲ; ಹೇಡಿತನ. ಜೀವಿಗಳನ್ನು ಕೊಂದು ಜೀವಿಸುವದು ಬದುಕಲ್ಲ; ಸಾವು. ಜೀವಕ್ಕೆ ಜೀವ ಕೊಟ್ಟು ಬಾಳುವದು ಬದುಕು. " ಈಸಬೇಕು ಇದ್ದು ಜಯಿಸಬೇಕು " ಇದು ನಮ್ಮ ಜೀವನದ ಮಹಾಮಂತ್ರ. ಮೊದಲು ನೀರಿನಲ್ಲಿ ಬೀಳಬೇಕು. ನೀರಿನಲ್ಲಿ ಬಿದ್ದರೆ ಥಂಡಿ ಹತ್ತುವದೆಂದು ದಂಡೆಯಲ್ಲಿಯೇ ನಿಂತರೆ ಇದ್ದು ಜಯಿಸುವದಂತೂ ದೂರವೇ ಉಳಿಯಿತು. ಈಜು ಕೂಡ ಹರದಾರಿ ದೂರ. ನಮ್ಮ ಸ್ಥಿತಿ ಹೀಗೆಯೇ ಆಗಿದೆ. ಜೀವನ ಪ್ರವಾಹದ ಒಂದು ದಂಡೆಗೆ ನಿಂತುಕೊಂಡಿದ್ದೇವೆ. ಮುಂದಿನ ದಂಡೆಯೂ ಕಾಣುತ್ತಿದೆ. ಅದನ್ನು ಮುಟ್ಟುವ ಕನಸು ಕಾಣುತ್ತಿದ್ದೇವೆ. ಈಜುವ ಸಾಹಸ ಮಾತ್ರ ಶೂನ್ಯ. ನಿಂತಲ್ಲಿಯೇ ನಿಂತು ಬಿಟ್ಟಿದ್ದೇವೆ, ಕೊಳಚಿ ನೀರಿನಂತೆ. ಅಂದಮೇಲೆ ಪ್ರಗತಿ ಎಲ್ಲಿಂದ ?

ಮಾನವೀಯ ಪ್ರಗತಿ ಮಾನವನ ಅಂತರದೃಷ್ಟಿಯನ್ನವಲಂಬಿಸಿದೆ. ಪ್ರತಿಯೊಬ್ಬನು ಇನ್ನೊಬ್ಬನನ್ನು ಮಾನವನೆಂದು ಗುರುತಿಸುವ ಸೌಜನ್ಯ ಬರುವ ವರೆಗೆ ಪ್ರಗತಿ ಶಬ್ದಕ್ಕೆ ಅರ್ಥವೇ ಇಲ್ಲ. ಈ ಮಾನವೀಯತೆಯ ದೃಷ್ಟಿಯನ್ನೊದಗಿಸಿಕೊಡಬೇಕಾದುದು ನಮ್ಮ ಬಾಳಿನ ಮೊದಲು ದಿನಗಳಲ್ಲಿಯೇ, ಎಳೆ ವಯಸ್ಸಿನ ಹದವಾದ ಮನಸ್ಸಿನ ಕಾಲದಲ್ಲಿಯೇ. ಈ ಸಂಸ್ಕಾರ ಬರುವದು ಬರಿಯ ಓದಿನಿಂದಲ್ಲ. ಬರೆಹದಿಂದಲೂ ಅಲ್ಲ. ಆ ರೀತಿಯ ಬಾಳು ಬಾಳುವದರಿಂದ. ಜೀವನದ ದುರ್ದಮ್ಯವಾದ ಜಾಲದಿಂದ ಸಹಜವಾಗಿ, ಲೀಲಾಮಯವಾಗಿ ಬಿಡುಗಡೆಯಾಗುವ ರೀತಿ-ನೀತಿಗಳು ನಮಗೆ ವೇದ್ಯವಾಗುವದು ಅಗತ್ಯ. ನಮ್ಮ ಶಿಕ್ಷಣ ಜೀವನ ಪ್ರವಾಹದ ಏರಿಳಿತಗಳಿ[ಗೆ] ಹೆದರದ ಎದೆಗಾರರನ್ನು ನಿರ್ಮಿಸ[ಬೇ]ಕಾಗಿದೆ. ಇದೇ ಜೀವನ ಶಿಕ್ಷಣದ ತಳಹದಿ.

ಮಾನವನು ಸಮಾಜ ಜೀವಿ. ಒಂಟಿಯಾಗಿ, ಏಕಾಂತದಲ್ಲಿದ್ದು ತನ್ನ ವೈಯಕ್ತಿಕ ಮೇಲ್ಮೆಯನ್ನು ಸಾಧಿಸುವ ಕಾಲವೀಗ ಸಂದುಹೋಗಿದೆ. ಅವನ ಸಾಮಾಜಿಕತೆ ಕುಟುಂಬದಿಂ[ದ] ಮೊದಲುಗೊಂಡು ವಿಶ್ವ ಸಮಾಜದ ವರೆಗೆ ಹರಡಿಕೊಂಡಿದೆ. ವ್ಯಕ್ತಿ ಇಂದು ಬರಿಯ ವ್ಯಕ್ತಿಯಾಗ[ದೆ] ಸಮಾಜದ ಒಂದು ಮುಖ್ಯ ಘಟಕವಾಗಿದ್ದಾನೆ. ವ್ಯಕ್ತಿಯ ಏಳುಬೀಳುಗಳು ಇಡೀ ಸಮಾಜದ ಮೇಲೆಯ[ೂ] ಪ್ರಭಾವ ಬೀರುತ್ತಿವೆ. ವ್ಯಕ್ತಿ ಸಮಾಜವನ್ನು ಬಿಟ್ಟು ಜೀವಿರಲಾರ. ಸಮಾಜದ ಉನ್ನತಿಯನ್ನು ಯಾರು ತಾನೆ ಅಪೇಕ್ಷಿಸಲಾರರು ? ಆದರೆ ಆ ಉನ್ನತಿಯ ಸುಸಂಸ್ಕೃತ ಸಮಾಜ ನಿರ್ಮಾಣದ ಸಂಪೂರ್ಣ ಹೊಣೆ ಅದರ ಘಟಕಗಳಾದ ವ್ಯಕ್ತಿಗಳ ಮೇಲೆಯೇ. ಪ್ರತಿಯೊಬ್ಬನು ತನ್ನ ವೈಯಕ್ತಿಕ ಸುಖ ಸೌಲಭ್ಯಗಳ ಜೊತೆ[ಗೆ] ತನ್ನ ನೆರೆಹೊರೆಯವರ ಸುಖ ಸೌಲಭ್ಯಗಳನ್ನು ಗಮನಿಸಬೇಕು. 'ನನ್ನ', ತನವನ್ನು 'ಸಮಾಜ', ತನದಲ್ಲಿ ಸಂಪೂರ್ಣವಾಗಿ ತೇಲಿಸಿ ಸಮಾಜದೊಡನೆ ಸಾಮರಸ್ಯ ಹೊಂದಬೇಕು. ಈ " ಸಮರಸವೇ ಜೀವನ " ಈ ಜೀವನ ಸಾಮರಸ್ಯವನ್ನು ಜೀವನದ ಮೊದಲ ಮೆಟ್ಟಲಿನಿಂದಲೇ ದೊರಕಿಸಿ ಕೊಡಲು ಬದ್ಧಕಂಕಣವಾಗಿದೆ ಜೀವನ ಶಿಕ್ಷಣ. ಸಾಂಘಿಕ ಜೀವನ ಜೀವನ ಶಿಕ್ಷಣದ ಹೃದಯವಾಗಿದೆ. ಜೀವನ ಶಿಕ್ಷಣದಲ್ಲಿ ಶಾಲಾ ಜೀವನ, ಬಾಹ್ಯಜೀವನಗಳೆಂಬ ಭೇದವೇ ಇಲ್ಲ. ಬಾಹ್

ಪ್ರಪಂಚದಲ್ಲಿ ನಡೆಯುವ ಸಾಮಾಜಿಕ ಜೀವನವನ್ನೇ ಶಾಲೆಯಲ್ಲಿಯೂ ಅನುಸರಿಸಲಾಗುತ್ತದೆ. ಅಂತೆಯೇ ಜೀವನ ಶಿಕ್ಷಣದಲ್ಲಿ ತರಬೇತು ಹೊಂದಿದ ಬಾಲಕ ಬಾಹ್ಯ ಪ್ರಪಂಚವನ್ನು ನೋಡಿ ಎಡೆಗುಂದಿ ಕಣ್ಣು ಪಿಳಿಪಿಳಿ ಬಿಡುವ ಭಯವೇನೂ ಇಲ್ಲ. ಯಾಕಂದರೆ ಇದು ಜೀವನ ಸಿದ್ಧತೆಯ ಶಿಕ್ಷಣ.

ನೂತನ ರಾಷ್ಟ್ರೀಯ ವಾತಾವರಣಕ್ಕನುಗುಣವಾಗಿ ಚೇತನಾಭರಿತರಾದ ಸುಸಂಸ್ಕೃತ ನಾಗರಿಕರ ನಿರ್ಮಾಣ ಆಧುನಿಕ ರಾಷ್ಟ್ರದ ಸಮಸ್ಯೆಯಾಗಿದೆ. ಇಂದಿನ ಮಗು ನಾಳಿನ ನಾಗರಿಕ. ಈ ನಾಳಿನ ನಾಗರಿಕನಾಗುವವನು ತನ್ನ ಹೊಣೆ, ಹಕ್ಕು ಬಾಧ್ಯತೆಗಳನ್ನರಿಯುವದು ಅವಶ್ಯವಾಗಿದೆ. ಹೆಚ್ಚೆಚ್ಚು ಹಕ್ಕು ಬಾಧ್ಯತೆಗಳು ದೊರಕಿದಂತೆ ಹೊಣೆ ಕೂಡ ಅದೇ ಪ್ರಮಾಣದಲ್ಲಿ ಹೆಚ್ಚುತ್ತದೆಂಬುದನ್ನೂ ಅರಿಯಬೇಕು. ಪ್ರಜಾಸತ್ತೆ ಸಫಲವಾಗಬೇಕಾದರೆ ಹೊಣೆಯರಿತ ಜನರು ಅವಶ್ಯ. ತನ್ನ ಜನರ ಹಿತಾಹಿತಗಳನ್ನರಿಯುವ ಸಹಾನುಭೂತಿಪ ವಾದ ವಿಶಾಲ ಹೃದಯ ಅವಶ್ಯ. ಅಂತೆಯೇ ಜೀವನ ಶಿಕ್ಷಣವು ಬಾಲಕರನ್ನು ಬರಿಯ ಹಿಂದಾಳುಗಳಷ್ಟೇ ಅಲ್ಲ ಮುಂದಾಳುಗಳೆಂದು ಮನ್ನಿಸುತ್ತದೆ. ಶಾಲೆಯ ವಿವಿಧ ಸಾಂಘಿಕ ಚಟುವಟಿಕಗಳಿಗೆಲ್ಲ ಬಾಲಕರೇ ಹೊಣೆಗಾರರು. ಅವರದೇ ಪ್ರಧಾನಪಾತ್ರ. ಯೋಜನೆ ಅವರದೇ. ಕಾರ್ಯನಿರ್ವಹಣೆಯ ಹೊಣೆ ಅವರದೇ, ಅದರ ಯಶಾಪಯಶಸ್ಸು ಅವರದೇ. ಶಿಕ್ಷಕನು ರಂಗದ ಹಿಂದೆ ನಿಂತು ಸಹಾನುಭೂತಿಪೂರ್ವಕವಾಗಿ ಎಡವಿದಲ್ಲಿ ಸೂಚನೆ ಕೊಡುವ, ಕೈಹಿಡಿದೆಬ್ಬಿಸುವ ನಿರ್ದೇಶಕ ಮಾತ್ರ. ಈ ಸ್ವಾನುಭವ ಬಾಲಕನ ಬೌದ್ಧಿಕ ವಿಕಾಸಕ್ಕೆ ಸಹಾಯವಾಗುವದಲ್ಲದೆ ಮುಂಬರುವ ಜೀವನದ ಭದ್ರ ತಳಹದಿಯಾಗುತ್ತದೆ. ಪುಸ್ತಕೀಯ ಜ್ಞಾನಕ್ಕಿಂತ ಅನುಭವಜನ್ಯ ಜ್ಞಾನ ಹೆಚ್ಚು ಮೌಲಿಕವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಅಂತೆಯೇ 'ಮಾಡುತ್ತ ಕಲಿ', ಎಂಬುದು ಜೀವನ ಶಿಕ್ಷಣದ ಮೂಲ ಸೂತ್ರವಾಗಿದೆ.

ಆರ್ಥಿಕ ಸಮಸ್ಯೆ ಇಂದು ಪ್ರತಿಯೊಬ್ಬನ ಜೀವನವನ್ನೂ ಅಲುಗಾಡಿಸುತ್ತಿದೆ. ಆರ್ಥಿಕ ಸ್ಥಿರತೆಯಿಲ್ಲದೆ. ಮಾನವನ ಜೀವನ ಸ್ಥಿರವಾಗಿ ನಿಲ್ಲಲಾರದು. ಈ ಆರ್ಥಿಕ ಮುಗ್ಗಟ್ಟು ಎಲ್ಲಿಯ ವರೆಗೆ ನಮ್ಮ ಜೀವಿತದಲ್ಲಿ ಹೊಕ್ಕು ಬಿರುಗಾಳಿಯನ್ನೆಬ್ಬಿಸುತ್ತದೆಯೋ ಅಲ್ಲಿಯ ವರೆಗೆ ಜೀವನದ ಅಮೌಲ್ಯ ತತ್ವಗಳು ಬರಿಯ ಕನಸಿನ ಗಂಟು. ಭಾರತದಂತಹ ವಿಶಾಲವಾದ ಒಕ್ಕಲುತನದ ಮತ್ತು ಹಳ್ಳಿಗಳ ನಾಡಿನಲ್ಲಿ ಯಾವದೇ ಒಂದು ವೃತ್ತಿಯಲ್ಲಿಯ ಪರಿಣತಿ ನಮ್ಮ ಆರ್ಥಿಕ ಸಮಸ್ಯೆಯನ್ನು ಬಗೆಹರಿಸಲು ಸಾಕಷ್ಟು ಸಹಾಯಕಾರಿಯಾಗುತ್ತದೆ. ಅದೂ ಅಲ್ಲದೆ ಬೇರೆ ಬೇರೆ ವೃತ್ತಿಗಳಲ್ಲಿನ ಮೇಲು ಕೀಳೆಂಬ ನಮ್ಮ ಈಗಿನ ವಿಷಮ ಭಾವನೆ ಅಳಿಸಿ ಹೋಗಿ ಎಲ್ಲ ವೃತ್ತಿಗಳೂ ಒಂದೇ, ಎಲ್ಲರೂ ಶ್ರಮಜೀವಿಗಳೇ, ಎಲ್ಲರೂ ಸಮಾಜದ, ರಾಷ್ಟ್ರದ ಹಿತಕ್ಕಾಗಿ ದುಡಿಯುವವರೇ ಎಂಬ ಸಮತಾ ಭಾವನೆ ನೆಲೆಯೂರಬೇಕು. ಇದರಿಂದ ಮಾತ್ರ ನಮ್ಮನ್ನು ಅಂಜಿಸುತ್ತಿರುವ ಭಯಾನಕ ವಾತಾವರಣ ತಿಳಿಯಾಗಬಹುದು. ಮೂಲ ಶಿಕ್ಷಣದಲ್ಲಿ ಉದ್ಯೋಗಕ್ಕೆ ಅತಿ ಮಹತ್ವದ ಸ್ಥಾನ ಕಲ್ಪಿಸಲಾಗಿದೆ. ಯಾಕಂದರೆ ಉದ್ಯೋಗ ಬರಿಯ ಜೀವನೋಪಾಯದ ಸಾಧನವಲ್ಲ; ಆದರೆ ಅದು ಶಿಕ್ಷಣದ ಮಾಧ್ಯಮವಾಗಿದೆ. ಬಾಲಕ ತನ್ನ ಪಾಠಗಳನ್ನು ಕಲಿಯುವದು ಪುಸ್ತಕ ಪ್ರಪಂಚದ ಮುಖಾಂತರವಾಗಿಯಲ್ಲ, ಉದ್ಯೋಗ ಮಾಡುವವರಿಂದುಂಟಾಗುವ ಸ್ವಾನುಭವದ ಮುಖಾಂತರ ಈ ಸ್ವಾನುಭವದಲ್ಲಿ ಬಾಲಕನಿಗೆ ಹಿರಿಯ ಹೆಮ್ಮೆ, ಅಮಿತ ಆನಂದ. ತಾನು ಮಾಡಿದ ಕೆಲಸ ತನ್ನ ಕ್ರಿಯಾಶಕ್ತಿಯ ದ್ಯೋತಕ. ಅಷ್ಟೇ ಅಲ್ಲದೆ ಒಂದು ದೃಷ್ಟಿಯಿಂದ ಸಮಾಜದ ಸ್ವಾಸ್ಥ್ಯಕ್ಕಾಗಿ ತಾನು ಕೂಡ ದುಡಿಯಬಲ್ಲನೆಂಬ ಅಭಿಮಾನ.

ಒಟ್ಟಿನಲ್ಲಿ ಜೀವನ ಶಿಕ್ಷಣ ತನ್ನ ವಿಶಿಷ್ಟ ದೃಷ್ಟಿಯ ಮೂಲಕ, ಭಾರತೀಯ ಸಂಸ್ಕೃತಿಯ ಪರಂಪರೆಯ ಪ್ರತೀಕವಾಗಿ ನಿಂತಿದೆ. ಕಳೆದ ಒಂದೂವರೆ ಶತಮಾನದಿಂದ ಭಾರತವನ್ನು ಗಾಢವಾಗಿ ಆವರಿಸಿದ ಕತ್ತಲೆ ಮೆಲ್ಲಮೆಲ್ಲನೆ ಜಾರಿ ಹೋಗುತ್ತಿರುವಾಗ ನೂತನ ಭಾರತವನ್ನು ಬೆಳಗಲು ಜ್ವಾಜ್ವಲ್ಯಮಾನವಾದ ಜ್ಯೋತಿಯ ಕಿರಣಗಳು ಅವಶ್ಯವಾಗಿವೆ. ಅದಕ್ಕೆ ಬೇಕಾದ ತೈಲವೇ ಜೀವನ ಶಿಕ್ಷಣ. ಈ ಜ್ಯೋತಿಯನ್ನು ಪ್ರಕಾಶಮಾನವಾಗಿ ಮಾಡಿ ಚಿರಂತನವಾಗಿ ಮಾಡುವ ಹೊಣೆ ಮಾತ್ರ ಶಿಕ್ಷಕರದು. ಇಲ್ಲದಿದ್ದರೆ

"ಅಸತೋ ಮಾಂ ಸದ್ಗಮಯ
ತಮಸೋ ಮಾಂ ಜ್ಯೋತಿರ್ಗಮಯ
ಮೃತ್ಯೋರ್ಮಾಂ ಅಮೃತಂ ಗಮಯ"

ಎಂಬುದು ಬರಿಯ ಬಯಕೆಯಾಗಿಯೇ ಉಳಿದೀತು. "ಆಡಿ ಮಾಡದವ ಅಧಮ" ಎಂಬ ಬಿರುದಂಕಮಲ್ಲರಾಗಬೇಕಾದೀತು.

ಶಿಕ್ಷಣದಲ್ಲಿ ಮೂಲೋದ್ಯೋಗ

ಭಾಷಣಕಾರರು : ಶ್ರೀಮತಿ ಸುಲಭಾ ಪಾಣಂದೀಕರ, ಡಿ. ಡಿ. ಪಿ. ಆಯ್. ಪುಣೆ.

[ಶ್ರೀಮತಿ ಸು. ಪಾಣಂದೀಕರ, ಡಿ. ಡಿ. ಪಿ. ಆಯ್ ಪುಣೆ ಅವರು ಜೀವನ ಶಿಕ್ಷಣ ಕೇಂದ್ರ, ಧಾರವಾಡದಲ್ಲಿ ನಡೆದ ಕರ್ನಾಟಕದ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜುಗಳ ಮುಖ್ಯಾಧ್ಯಾಪಕರ ಅಲ್ಪಾವಧಿ ತರಬೇತಿಯ ಕಾಲಕ್ಕೆ ೨೭ ಮತ್ತು ೨೮-೧೦-೧೯೫೦ರಂದು ಮಾಡಿದ ಭಾಷಣಗಳ ಸಾರಾಂಶ ವನ್ನು ಶ್ರೀ. ನೀ. ರೇ. ಹಿರೇಮಠ, ಪ್ರಾಧ್ಯಾಪಕರು ಜೀವನ ಶಿಕ್ಷಣ ಕೇಂದ್ರ, ಅವರು ಸಂಗ್ರಹಿಸಿದ್ದಾರೆ.]

ವರ್ಧಾ ಶಿಕ್ಷಣದ ಗೊತ್ತುಗುರಿಗಳು ಶಿಕ್ಷಣ ಪ್ರಪಂಚ ಕ್ಕೇನು ಹೊಸವಲ್ಲ. ಅವು ಯುಗಯುಗಗಳಿಂದ ಪ್ರತಿಪಾದಿಸಲ್ಪಟ್ಟಿರುವ ತತ್ವಗಳಾಗಿವೆ. ಗಾಂಧೀಜಿ ಹೇಳಿದಂತೆ " ಸರ್ವತೋಮುಖ ವ್ಯಕ್ತಿವಿಕಾಸವು " ಅಥವಾ "ವ್ಯಕ್ತಿತ್ವದ ಸಾಕ್ಷರತೆಯು" ಹೊಸದಾಗುವದು ಅದರ ಪ್ರತ್ಯಕ್ಷ ಕಾರ್ಯಾಚರಣೆಯ ಆದರ್ಶದಲ್ಲಿದೆ. ಕಾಯಕಷ್ಟದ ಮುಖಾಂತರ ಅಂದರೆ ನೈಸರ್ಗಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿಗೆ ಹೊಂದಿಕೊಂಡು ಮೂಲೋದ್ಯೋಗದ ದ್ವಾರಾ ಸಾಗುವ ಶಿಕ್ಷಣದಲ್ಲಿ ಒಂದು ಹೊಸತನವಿದೆ. ಶಿಕ್ಷಣದ ಗುರಿಯನ್ನು ಸಾಧಿಸುವ ಪದ್ಧತಿಯೂ ಹೊಸದು. ಶೀಲಸಂವರ್ಧನೆಯು ಶಾರೀರಿಕ ಶ್ರಮದ ಮುಖಾಂತರ ಸಾಧಿಸಬೇಕು. ಸತತೋದ್ಯೋಗ, ದೃಢನಿಶ್ಚಯ, ಪ್ರಾಮಾಣಿಕತನಗಳು ಈ ಶಿಕ್ಷಣದ ಅವಿಭಾಜ್ಯ ಘಟಕಗಳಾಗಿವೆ. ಶಾಬ್ದಿಕ ಶಿಕ್ಷಣ ದಲ್ಲಿ ಅಸತ್ಯಕ್ಕೆ, ಅಪ್ರಾಮಾಣಿಕತನಕ್ಕೆ ಆಸ್ಪದವಿದೆ. ಯಾಕಂದರೆ ಒಂದೇ ಶಬ್ದವು ಹಲವು ಬಗೆಯ ಅರ್ಥಗಳನ್ನು ಸೂಚಿಸುವದರಿಂದ ಶಬ್ದಪ್ರಯೋಗ ಮಾಡಿದವನು ತನ್ನ ಇಂಗಿತವನ್ನು ಅರುಹದಂತೆ ಅದನ್ನು ಬೆಳಸಬಹುದು. ಆಡುವವನೊಂದು ಬಗೆದರೆ ಕೇಳುವವರಿಗೆ ಬೇರೊಂದು ಅರ್ಥವಾಗುವ ಸಂಭವವಿದೆ. ಅದೆಲ್ಲ ಅವರವರ ಅನುಭವಗಳ ಮೇಲಿದೆ. ಆದರೆ ಮೂಲೋದ್ಯೋಗದ (ಕಾರ್ಯದ) ಮುಖಾಂತರ ಸಾಗುವ ಶಿಕ್ಷಣದಲ್ಲಿ ಇದಕ್ಕೆ ಆಸ್ಪದವಿಲ್ಲ.

ನೂಲುವ ವೇಗ ಹೆಚ್ಚಿಸಲೆಂದೋ ವರ್ಗದಲ್ಲಿ ಹೆಚ್ಚಿನ ಸ್ಥಾನ ಪಡೆಯಲೆಂದೋ ಹುರಿ ಕಡಿಮೆ ಹಾಕಿ ಸುತ್ತುಗಳ ಸಂಖ್ಯೆ ಬೆಳಿಸಿ ತಾತ್ಪೂರ್ತಿಕವಾಗಿ ಆತ್ಮವಂಚನೆ ಮಾಡಿಕೊಳ್ಳಬಹುದು. ಸುತ್ತುವ ಸಮಯದಲ್ಲಿ ಎಳೆ ಹರಿದು ತನ್ನ ನಿಜಸ್ವರೂಪವನ್ನು ತೋರಿಸುವದು. ಅಲ್ಲಿಯೂ ಜಾಗರೂಕತೆಯಿಂದ ಮೊದಲಿನ ತಪ್ಪನ್ನು ಮರೆಮಾಚುವಂತೆ ಸಾವಕಾಶವಾಗಿ ಸುತ್ತಿದರೂ ನೇಯುವಾಗ ಅದರ ಇತ್ಯರ್ಥವಾಗಿಯೇ ತೀರುವದು. ಹೀಗೆ ತಾನು ಮಾಡಿದ ತಪ್ಪು ಕ್ಷಣಕ್ಷಣಕ್ಕೂ ಸಿಡಿದೆದ್ದು ಬೆಳಕಿನಷ್ಟು ಸ್ಪಷ್ಟವಾಗುವದು. ಅಲ್ಲದೆ ಮೂಲೋದ್ಯೋಗದ ಮುಖಾಂತರ ಸಾಗುವ ಶಿಕ್ಷಣದಲ್ಲಿ ವೈಯಕ್ತಿಕ ಹೊಣೆಗಾರಿಕೆ, ಸಹಕಾರ ಭಾವಗಳೂ ಹಾಸುಹೊಕ್ಕಾಗಿವೆ.

ಕೈಕೆಲಸ ಮತ್ತು ಮೂಲೋದ್ಯೋಗ:

ಪರಂಪರಾಗತ ಶಿಕ್ಷಣದಲ್ಲಿ—ಪಾಶ್ಚಿಮಾತ್ಯಪದ್ಧತಿಗಳಲ್ಲಿ—ಕಂಡುಬರುವ ಕೈಲಕೆಸ ಮತ್ತು ವರ್ಧಾ ಶಿಕ್ಷಣದ ಮೂಲೋದ್ಯೋಗಗಳಲ್ಲಿ ಭೇದವಿದೆ. ಕೈಕೆಲಸದಲ್ಲಿ ಕೇವಲ ಕೆಲಸ ಮಾಡಿದ ಅಥವಾ ಹೊಸ ವಸ್ತುವನ್ನು ರಚಿಸಿದ ಆನಂದ ಮಾತ್ರ ಇದೆ. ಆದರೆ ಅದು ನಿಶ್ಚಿತ ಮಟ್ಟದ್ದಿರಬೇಕು, ಇಲ್ಲವೆ ಉಪಯುಕ್ತತೆಯ ಒರೆಗಲ್ಲಿಗೆ ಬರಬೇಕೆಂಬ ಕಟ್ಟುನಿಟ್ಟುಗಳಿರುವದಿಲ್ಲ. ಮೂಲೋದ್ಯೋಗದ ಮುಖಾಂತರ ತಯಾರಾದ ವಸ್ತುವು ಜೀವನೋಪಯೋಗಿಯಾಗಬೇಕೆಂಬ ಹೊಣೆಗಾರಿಕೆಯಿದೆ. ಒಂದು ವಸ್ತುವಿನ ತಯಾರಿಕೆಯಲ್ಲಿ ಭಾಗ ವಹಿಸಿದವರ ಸಾಮೂಹಿಕ ಹೊಣೆಗಾರಿಕೆಯ ಜೊತೆಗೆ ಸಹಕಾರವೂ ಬೇಕಾಗುತ್ತದೆ. ಕೈಕೆಲಸದಲ್ಲಿ "ಹೊಣೆಗೇಡಿತನ" ಮತ್ತು ಅವ್ಯವಸ್ಥಿತ ಕಾರ್ಯಪದ್ಧತಿಗಳು ಶಿಕ್ಷಣದಲ್ಲಿ ನುಸುಳುವ ಸಂಭವವಿದೆ. ಜೀವನೋಪಯೋಗದ ಅಗ್ನಿಕುಂಡದಿಂದ ಪಾರಾಗಿ ಬರಬೇಕಾದ ವಸ್ತುವಿನ ಉತ್ಪಾದನೆಯಲ್ಲಿ ಸುವ್ಯವಸ್ಥೆ, ಜಾಗರೂಕತೆ, ಹೊಣೆಗಾರಿಕೆ, ಸಹಕಾರ ಭಾವಗಳು ದಿನದಿನವೂ ನೆಲೆಗೊಳ್ಳುತ್ತವೆ.

ಹೊಣೆಗಾರಿಕೆ ಮಕ್ಕಳಿಗೆ ಇಷ್ಟವಾದುದು :

ಈ ಬಗೆಯ ಕೆಲಸವು ಮಕ್ಕಳ ಸಹಜ ಸ್ವಭಾವಕ್ಕೆ ವಿರುದ್ಧವಾದುದೆಂದು ತಿಳಿಯುವದು ಮಕ್ಕಳಿಗೆ ಅನ್ಯಾಯ ಬಗೆದಂತೆ. ಪ್ರತಿಯೊಂದು ಮಗುವೂ ತನ್ನ ಕುಟುಂಬದ,

ಶಿಕ್ಷಣದಲ್ಲಿ ಮೂಲೋದ್ಯೋಗ

ತನ್ನ ಸುತ್ತಲಿನ ಚಿಕ್ಕ ಸಮಾಜದ ಗಣ್ಯ ವ್ಯಕ್ತಿಯೆಂದೂ ಹೊಣೆಗಾರ ವ್ಯಕ್ತಿಯೆಂದೂ ಪರಿಗಣಿಸಲ್ಪಡಬೇಕೆಂದು ಬಯಸುತ್ತದೆ. ಮಕ್ಕಳಿಗೆ ಕಲ್ಪನಾ ಸಾಮ್ರಾಜ್ಯವು ಇಷ್ಟವಾದರೂ ಯಾವಾಗಲೂ ಅದರಲ್ಲಿಯೇ ಇರುವದು ಅವರಿಗೆ ಸರಿದೋರದು. ಪ್ರತ್ಯಕ್ಷ ಜೀವನದಲ್ಲಿ ಭಾಗ ವಹಿಸಿ ಉಪಯುಕ್ತ ಕೆಲಸಗಳನ್ನು ಮಾಡುವದರಲ್ಲಿಯೂ ಅವರಿಗೆ ಆನಂದವಿದೆ. ಮನೆಯಲ್ಲಿಯ ಮಕ್ಕಳು ಮಾಡುವ ಕೆಲಸಗಳ ನಿರೀಕ್ಷಣೆಯಿಂದ ಇದು ಸ್ಪಷ್ಟ ವಾಗುವದು. ಸಮಾಜಕ್ಕೆ ಉಪಯೋಗ ಬೀಳುವ ವಸ್ತುಗಳನ್ನು ನಿರ್ಮಾಣ ಮಾಡಿ ಸಮಾಜದ ಸುಖದಲ್ಲಿ ಪಾಲುಗಾರನಾಗಬೇಕೆಂಬುದೇ ಸಾಮಾಜಿಕ ಭದ್ರತೆಯ ಅಡಿಗಲ್ಲು. "ತಮ್ಮ ಹಳ್ಳಿಗಳ ಬಗ್ಗೆ ಮಕ್ಕಳಲ್ಲಿ ಪ್ರೀತಿ–ಯನ್ನು ಹುಟ್ಟಿಸುವದು ವರ್ಧಾ ಶಿಕ್ಷಣದ ಆದರ್ಶಗಳಲ್ಲಿ ಒಂದು " ಎಂದು ಗಾಂಧೀಜೀ ಹೇಳಿದ್ದಾರೆ. ಸಾಮಾಜಿಕ ಗುಣಗಳ ಬೆಳವಣಿಗೆಗೆ ಮೂಲೋದ್ಯೋಗವು ಒಂದು ಉತ್ತಮ ಶೈಕ್ಷಣಿಕ ಸಾಧನವಾಗಿದೆ.

ಕು. ಓಲಿವ್ಹರ ಅವರ ಪ್ರಯೋಗ :

ವರ್ಧಾ ಶಾಲೆಗಳ ಮಕ್ಕಳು ಓದು, ಬರೆಹ, ಸಾಮಾನ್ಯ ಜ್ಞಾನ, ಗಣಿತ ಮುಂತಾದ ಪರಂಪರಾಗತ ವಿಷಯಗಳಲ್ಲಿ ಮಾಡಿದ ಪ್ರಗತಿಯನ್ನು ಡಾ. ಕಾಮತ, ಪ್ರೊ. ಎಸ್. ಸಿ. ಚಟರ್ಜಿ ಮೊದಲಾದವರು ಅಳೆಯಲು ಮತ್ತು ಇತರ ಶಾಲೆಗಳ ಮಕ್ಕಳ ಪ್ರಗತಿಯೊಂದಿಗೆ ತುಲನೆ ಮಾಡಲು ಯತ್ನಿಸಿದ್ದಾರೆ. ಆದರೆ ವರ್ಧಾ ಶಿಕ್ಷಣದ ಜೀವಾಳದಂತಿರುವ ಶೀಲವು (ಸಾಮಾಜಿಕ ಗುಣಗಳು) ನೆಲೆಗೊಂಡುದನ್ನು ಮೊದಲಬಾರಿ ಪರೀಕ್ಷಿಸಿದವರು ಕು. ಓಲಿವ್ಹರ, ಸೆಂಟ ಕ್ರಿಸ್ಟಾಫರ ಟ್ರೇನಿಂಗ ಕಾಲೇಜ, ಮದ್ರಾಸ, ಅವರು. ಅವರು ಚುರುಕುತನ, ಪ್ರಾಮಾಣಿಕತನ, ನಾಯಕತ್ವ, ಸಹಕಾರಭಾವ, ವಿಶ್ವಾಸಾರ್ಹತೆ, ಸ್ಥಾನಿಕಜ್ಞಾನ ಮತ್ತು ಪ್ರತಿಭಾಶಕ್ತಿ (originality)ಗಳನ್ನು ಪರೀಕ್ಷಿಸುವ ಪ್ರಥಮ ಪ್ರಯತ್ನ ಮಾಡಿದ್ದಾರೆ. "ಚುರುಕುತನವನ್ನು ಅಥವಾ ಬುದ್ಧಿಮತ್ತೆಯನ್ನು ಅಳೆಯುವದು ಈ ಸಂಶೋಧನೆಯ ಉದ್ದೇಶವಲ್ಲವಾದರೂ ಅಳೆಯಲಾಗಿದೆ. ಹೆಚ್ಚು ಬುದ್ಧಿವಂತರಾದವರು ಶೀಲದಲ್ಲಿಯೂ ಹೆಚ್ಚಿನವರಾಗಿರುತ್ತಾರೆಂಬ ಮಾನಸ ಶಾಸ್ತ್ರಜ್ಞರ ಅಭಿಪ್ರಾಯವನ್ನು ಒರೆಗೆ ಹಚ್ಚಲು ಹಾಗೆ ಮಾಡಲಾಗಿದೆ. ಹಳ್ಳಿಗಾಡಿನ ವರ್ಧಾ ಶಾಲೆಗಳ ಮಕ್ಕಳು ಪೇಟೆಯ ಮಕ್ಕಳಿಗಿಂತ ಕಡಿಮೆ ಬುದ್ಧಿವಂತರೆಂದು ಪರೀಕ್ಷೆಯಲ್ಲಿ ಕಂಡುಬಂದಿತು. ಇದಕ್ಕೆ ಕಾರಣವೂ ಇರಬಹುದು. ಬುದ್ಧಿಮಾಪನ ಕ್ರಮದ ಪರೀಕ್ಷೆಗಳು ಹಳ್ಳಿಗಾಡಿನ ವರ್ಧಾ ಶಾಲೆಗಳಲ್ಲಿ ಮೇಲಿಂದ ಮೇಲೆ ಜರುಗದೆ ಇರುವದರಿಂದ, ಎಂದಾದರೊಮ್ಮೆ ಬಳಸುವ ಪ್ರಶ್ನೆಗಳಿಂದ ಸರಿಯಾದ ಫಲದೊರೆಯದು. ಆದಾಗ್ಯೂ ಸಾಮಾನ್ಯ ಶಾಲೆಗಳ ಮಕ್ಕಳಿಗಿಂತ ವರ್ಧಾ ಶಾಲೆಗಳ ಮಕ್ಕಳ ಶೀಲವು ಚನ್ನಾಗಿ ಬೆಳೆಯುತ್ತದೆ. ಯಾಕಂದರೆ ಅವರಿಗೆ ಹೆಚ್ಚು ಯೋಗ್ಯ ವಾತಾವರಣವಿದೆ " ಎಂದಿದ್ದಾರೆ.

ಈ ಪರೀಕ್ಷಾ ಪದ್ಧತಿಯಲ್ಲಿಯ ಗುಣದೋಷಗಳ ಬಗೆಗೆ ನಾನೇನೂ ಹೆಚ್ಚಿಗೆ ಹೇಳಲಾರೆ. ನೀವಾದರೂ ಈ ತರಹದ ಪರೀಕ್ಷೆಗಳನ್ನು ಏರ್ಪಡಿಸಿ ಅದರ ಸತ್ಯತೆಯನ್ನು ಕಾಣಬಹುದು.

ತಮ್ಮ ಭಾಷಣದ ಕೊನೆಯಲ್ಲಿ ಕು. ಪಾಣಂದೀಕರ ಅವರು ಪ್ರಶ್ನೆಗಳನ್ನು ಕೇಳಲು ಅವಕಾಶ ಕೊಡಲು ಮುಖ್ಯಾಧ್ಯಾಪಕರಲ್ಲಿ ಒಬ್ಬರು ''ಜ್ಞಾನ ಸಂಪಾದನೆಗಾಗಿ ಚಟುವಟಿಕೆಗಳಿರಬೇಕೋ?'' ಎಂದು ಕೇಳಿದರು.

''ಜೀವನಕ್ಕಾಗಿರುವ ಶಿಕ್ಷಣದಲ್ಲಿ ಕಾರ್ಯವೆಲ್ಲವೂ ಜೀವನಕ್ಕಾಗಿಯೇ ಇರುವದರಿಂದ ಆ ಕಾರ್ಯವನ್ನು ಸರಿಯಾಗಿ ಸಾಗಿಸಲು ಜ್ಞಾನದ ಅವಶ್ಯಕತೆಯಿದೆ. ಆದ್ದರಿಂದ ಜೀವನ ಚಟುವಟಿಕೆ ಮೊದಲು, ಅವಕ್ಕಾಗಿಯೇ ಜ್ಞಾನ ಬೇಕು.'' ಎಂದರು.

ಮರುದಿನ ಮುಂಜಾನೆ ಇದೇ ಪ್ರಶ್ನೆಯ ಹಿನ್ನೆಲೆಯಲ್ಲಿ ಅಭ್ಯಾಸಪತ್ರಿಕೆ ಮತ್ತು ಸಮವಾಯ ಪದ್ಧತಿಗಳ ಬಗೆಗೆ ಒಂದು ಗಂಟೆಯ ವರೆಗೆ ತಮ್ಮ ಅಸ್ಖಲಿತ ವಾಣಿಯಿಂದ ತಮ್ಮ ವಿಚಾರ ನಿರೂಪಿಸಿದರು. ಅದರ ಸಾರಾಂಶವಿಂತಿದೆ.

''ಶ್ರೀ. ಕಾಕಾ ಕಾಲೇಲಕರ ಮತ್ತು ಆಶಾದೇವಿಯವರು ಮಗುವಿಗೊಂದು ಅಭ್ಯಾಸಪತ್ರಿಕೆ ಇರಬಹುದೆಂಬ ಅಭಿಪ್ರಾಯ ಪಟ್ಟಿದ್ದರೆ ಪ್ರತಿಯೊಬ್ಬ ಶಿಕ್ಷಕನಿಗೂ ತನ್ನ ಅಭ್ಯಾಸಪತ್ರಿಕೆಯನ್ನು ಯೋಜಿಸುವ ಸ್ವಾತಂತ್ರ್ಯವಿರಬೇಕು. ಮೂಲಶಿಕ್ಷಣವು ಜೀವನ ಕಲೆಯಾಗಿದೆ. ಅದಕ್ಕೆ ಕಟ್ಟುನಿಟ್ಟುಗಳಿರುವದು ಅಸ್ವಾಭಾವಿಕ. ವ್ಯಕ್ತಿ-ವ್ಯಕ್ತಿಗೂ ಜೀವನದ ದೃಷ್ಟಿ ಬೇರೆಯಾಗಿರುವದರಿಂದ

ಆದನ್ನು ಅನುಭವಿಸುವ ಮತ್ತು ಅರಗಿಸಿಕೊಳ್ಳುವ ವಿಧಾನವೂ ಭಿನ್ನವಾಗಿರುವದು ಸ್ವಾಭಾವಿಕ. "ಜೀವನ ದ್ವಾರಾ ಶಿಕ್ಷಣ, ಶಿಕ್ಷಣದ್ವಾರಾ ಜೀವನ"ವೆಂದು ಕಾಕಾ ಕಾಲೇಲಕರ ಅವರು ಪ್ರತಿಪಾದಿಸಿದ್ದಾರೆ. ಪ್ರೊ. ಸೈದೈನ ಅವರು ಮಾನಸ ಶಾಸ್ತ್ರದ ದೃಷ್ಟಿಯಿಂದ ಅಭ್ಯಾಸ ಕ್ರಮವನ್ನು ರಚಿಸಬೇಕೆಂದು ಪ್ರತಿಪಾದಿಸುವಲ್ಲಿಯೂ ಇದೇ ಅಭಿಪ್ರಾಯವಿದೆ. ಆದರೆ ಅವರು ಸುವ್ಯವಸ್ಥಿತ ವಾದ ಜ್ಞಾನವನ್ನು ಬೆಳಿಸಬೇಕೆಂದಿದ್ದಾರೆ.

ಎಲ್ಲ ಶಿಕ್ಷಕರಲ್ಲಿಯೂ ಈ ಎರಡೂ ಶಕ್ತಿಗಳು ಇರುವದು ವಿರಳ. ಆದ್ದರಿಂದ ಅಭ್ಯಾಸಪತ್ರಿಕೆಯು ಬೇಕು. ಅದು ಮಾರ್ಗದರ್ಶನಕ್ಕಾಗಿ ಇರಬೇಕೇ ವಿನಃ ಅಕ್ಷರಶಃ ಅನುಸರಿಸಲಿಕ್ಕಲ್ಲ. ಮಕ್ಕಳ ಮನೋರಂಗವನ್ನು ಬಲ್ಲವರು ಯಾವ ಯಾವ ಸಂಗತಿಗಳು ಮಕ್ಕಳ ಮನಸ್ಸನ್ನು ಹಿಡಿಯಬಲ್ಲವು ಮತ್ತು ಅವರ ವ್ಯಕ್ತಿತ್ವವನ್ನು ಅರಳಿಸಬಲ್ಲವು ಎಂದು ತಮ್ಮ ಅನುಭವಗಳಿಂದ ಹೇಳುವ ಪಟ್ಟಿ ಅದು. ಅವರ ಅನುಭವಗಳ ಆಧಾರದ ಮೇಲೆ ಶಿಕ್ಷಕನು ತನ್ನ ಶಾಲೆಗೆ—ಸುತ್ತಲಿನ ನೈಸರ್ಗಿಕ ಮತ್ತು ಸಾಮಾಜಿಕ ವಾತಾವರಣಕ್ಕೆ—ತಕ್ಕುದಾದ ರೀತಿಯಲ್ಲಿ ಅದನ್ನು ಮಾರ್ಪಡಿಸಿಕೊಳ್ಳಬೇಕು.

ಸಮವಾಯ ಪದ್ಧತಿಯಲ್ಲಿಯ ಮಾನಸಶಾಸ್ತ್ರದ ದೃಷ್ಟಿ.

ಮಗುವಿನ ಚಟುವಟಿಕೆಗೆ ಅವಶ್ಯವಾದ ಜ್ಞಾನವು ಮಗುವಿಗೆ ರಕ್ತಗತವಾಗುವದು. ಚಿಕ್ಕವರಲ್ಲಿ ಜ್ಞಾನಕ್ಕೆ ಯಾವಾಗಲೂ ಒಂದು ನಿಶ್ಚಿತ ಅರ್ಥವಿರುತ್ತದೆ. ಆದ್ದರಿಂದ ಶೈಕ್ಷಣಿಕ ಚಟುವಟಿಕೆಗಳು ಮಗುವಿನ ವಾತಾವರಣದೊಳಗಿನವಿರಬೇಕು. ಜ್ಞಾನವು ಆನುಷಂಗಿಕವಾಗಿ ಬರಬೇಕು. ಅದೇ ಕ್ಷಣಕ್ಕೆ ಅದನ್ನು ಸುವ್ಯವಸ್ಥಿತಗೊಳಿಸುವದು ಕಾರ್ಯದ ಮಹತ್ವವನ್ನು ಇಲ್ಲವೆ ಅದರಲ್ಲಿರುವ ಮಕ್ಕಳ ಅಭಿರುಚಿಯನ್ನು ಹದಗೆಡಿಸುವದು. ಜ್ಞಾನದ ಸಂಘಟನೆಯು ಹಿಂದಿನಿಂದ ಬರಬೇಕು. ಮಗುವಿನ ಜೀವನಕ್ಕೆ ಸಂಬಂಧಿಸಿದ ವಿಷಯಗಳನ್ನು ಒತ್ತಾಯದಿಂದ ಯಾವುದಾದರೊಂದು ಚಟುವಟಿಕೆಯೊಡನೆ ಸಂಬಂಧಿಸಕೂಡದು. ಈ ದೃಷ್ಟಿಯಿಂದ ನಮ್ಮ ಶಾಲೆಗಳಲ್ಲಿರುವ ಇತಿಹಾಸದ ಅಭ್ಯಾಸ ಪತ್ರಿಕೆಯು ತೀರ ಅವಶ್ಯಕವೆಂದು ಶ್ರೀ ವಿನೋಬಾಜಿಯು ಅಭಿಪ್ರಾಯ. ಗಾಂಧೀಜಿ ಪ್ರತಿಪಾದಿಸಿದ ಶಿಕ್ಷಣದ ವಸ್ತು ಹಾಗು ಪದ್ಧತಿಗಳು ನೈಸರ್ಗಿಕವಾಗಿವೆ. ಪರಂಪರಾಗತ ಶಾಲೆಗಳ ವಸ್ತು ಹಾಗು ಪದ್ಧತಿಗಳು ಜೀವನದಿಂದ ಸಿಡಿದುಹೋದುವೂ ಅನೈಸರ್ಗಿಕವೂ ಆಗಿವೆ. ಸಮವಾಯ ಪದ್ಧತಿಯೂ ಕಲಿಯುವ ನೈಸರ್ಗಿಕ ಪದ್ಧತಿಯಾಗಿದೆ. ಗಾಂಧೀಜಿಯ ಉದ್ದೇಶವು ಈ ರೀತಿ ಶಿಕ್ಷಣವನ್ನು ನೈಸರ್ಗಿಕವಾಗಿ ಮಾಡುವದಾಗಿತ್ತು. ಜ್ಞಾನವು ದೃಢವಾಗುವದು ಅದರ ಸತತ ಉಪಯೋಗದಿಂದ ಕೇವಲ ಕಂಠಪಾಠ ಮಾಡುವದರಿಂದಲ್ಲ ಇದಕ್ಕೆ ಒಂದು ಒಳ್ಳೆಯ ಉದಾಹರಣೆಯೆಂದರೆ ಗಡಿಯಾರ ನೋಡಿ ಹೊತ್ತು ಹೇಳುವದು. ಬೋರ್ಡಿಯ ಪ್ರಾಕ್ಟಿಸಿಂಗ ಸ್ಕೂಲಿನಲ್ಲಿ ೨ನೆಯ ವರ್ಗದ ಮಕ್ಕಳಿಗೆ ವೇಳೆ ಹೇಳುವ ಪಾಠ ಕಲಿಸಿ ಪ್ರಯೋಗಿಸಲಾಯಿತು. ಎಂಟು ದಿವಸಗಳ ಸತತ ಪ್ರಯತ್ನದಿಂದ ಕಲಿಸಿದ ನಂತರವೂ ಅರ್ಧಕ್ಕಿಂತ ಹೆಚ್ಚು ಹುಡುಗರಿಗೆ ಬರದೆ ಹೋಯಿತು. ವಿವಿಧ ಕೆಲಸಗಳು ನಡೆದಾಗ ಗಡಿಯಾರದ ಉಪಯೋಗ ಮಾಡುತ್ತ ಹೋಗಲು ಕೆಲವು ತಿಂಗಳ ನಂತರ ಅನೇಕ ಬಾಲಕರಿಗೆ ಅದು ತಾನೇ ಬರಹತ್ತಿತು. ಬಳಿಕೆಯಿಂದಲೇ ಜ್ಞಾನವು ದೃಢವಾಗುತ್ತದೆ.

ನೂಲುವಾಗ ತಕಲಿಯ ಭಾಗಗಳನ್ನು ಹೇಳುವದು ಇಲ್ಲವೆ ಮಗುವು ಆಕಳನ್ನು ನೋಡಿದಾಕ್ಷಣ ಅದರ ಅವಯವಗಳ ಪರಿಚಯ ಮಾಡಿಕೊಡುವದು ಸಮವಾಯ ಜ್ಞಾನವಾಗಲಾರದು. ಅದರ ಬೇಡಿಕೆ ಮಗುವಿಗೆ ಅನಿಸದು. ಮಕ್ಕಳು ಶಿಕ್ಷಕರಿಗೆ 'ಏಕೇ' 'ಹೇಗೆ?' ಎಂಬ ಪ್ರಶ್ನೆಗಳನ್ನು ಕೇಳಿ ತಮಗೆ ಬೇಕಾದ ಸಂಗತಿಗಳನ್ನು ತಿಳಿದುಕೊಳ್ಳುವರು. ಸಂಬಂಧಿಸಿದ ಜ್ಞಾನದಲ್ಲಿ ಮಕ್ಕಳಿಗಿರುವ ಅಭಿರುಚಿಯ ಪರೀಕ್ಷೆಯೇ ಅವರು ಕೇಳುವ ಪ್ರಶ್ನೆಗಳೆಂದರೆ ತಪ್ಪಾಗದು."

ಜೀವನ ಶಿಕ್ಷಣ ಕೇಂದ್ರದ ಪ್ರಧಾನ ಪ್ರಾಧ್ಯಾಪಕರಾದ ಶ್ರೀ, ತೇರಗಾಂವಕರ ಅವರು ಸಮವಾಯಪದ್ಧ-ಪದ್ಧತಿಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುತ್ತ "It is a relation between the Ends and Means'' (ಗುರಿ ಮತ್ತು ಸಾಧನಗಳ ನಡುವಿನ ಸಂಬಂಧವೆಂದು) ಮಾರ್ಮಿಕವಾಗಿ ಹೇಳಿದರು.

ತ್ವರೆ ಮಾಡಿರಿ ! ಮುಲ್ಕೀ ವಿದ್ಯಾರ್ಥಿಗಳಿಗೆ ಸುಸಂಧಿ! ಇಂದೇ ಬರೆಯಿರಿ !

ಮುಲ್ಕೀ ಪರೀಕ್ಷೆಯನ್ನು ಪಾಸಾಗಲು ಊರುಗೋಲಾದ ಬಹುಜನ ವಿದಾರ್ಥಿ ವ ಶಿಕ್ಷಕರಿಂದ ಮನ್ನಣೆ ಪಡೆದ ಕೆಳಗಿನ ಬುಕ್ಕುಗಳನ್ನು ಇಂದೇ ಸಂಗ್ರಹಿಸಿರಿ

ನೂತನ ಪ್ರಶ್ನೋತ್ತರಮಾಲೆ

(೧) **ಇತಿಹಾಸ** ೧—೦—೦ (೩) **ಭೂಮಿತಿ** ೧—೦—೦

(೨) **ಭೂಗೋಲ** ೧—೦—೦ (೪) **ಭಾಷಾಭ್ಯಾಸ ಕೈಪಿಡಿ** ೧—೦—೦

ನೂತನ ಕಿಸೆಯ ಕೈಪಿಡಿಮಾಲೆ

(೧) **ಆರೋಗ್ಯಶಾಸ್ತ್ರ** ೦—೬—೦ (೨) **ಶಾಸ್ತ್ರೀಯವಿಷಯ** ೦—೬—೦

ಅಲ್ಲದೆ

(೧) **ಸಚಿತ್ರ ಶಾಸ್ತ್ರೀಯವಿಷಯ** ೦—೧೨—೦ (೨) **ಸಾ. ವಿಜ್ಞಾನಸಾರ** ೦—೬—೦

ಅಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಬಗೆಯ ಹಿಂದೀ, ಇಂಗ್ಲೀಷ, ಕನ್ನಡ ಬುಕ್ಕುಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಆಕಳವಾಡಿ ಬುಕ್ಕಡಿಪೋ, ಧಾರವಾಡ

ವಿಜಯ ರೋಡ.

ಆದರ್ಶ ಚಿತ್ರಕಲಾ

(IDEAL DRAWING)

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ಅತ್ಯುತ್ತಮವಾದ ಪುಸ್ತಕವು

ಕಡೆಗಣಿಸಲ್ಪಟ್ಟ ೧೦೦ **ಗುಣ**ಗಳ ವಿಷಯ.

ಲೇಖಕರು : **ಶ್ರೀ. ಎಸ್. ಕೆ. ಜೋಶಿ**

ಡ್ರಾಯಿಂಗ ಶಿಕ್ಷಕರು, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧುಳಿಯಾ.

- ಈ ಪುಸ್ತಕದಲ್ಲಿ ಅಬ್ಜಕ್ಟ, ಮೆಮರಿ, ಡಿಝೈನು, ನೇಚರ ಮತ್ತು ದೃಷ್ಟಾಂತ ರೇಖನಕಲೆಯ ಒಂದು ಸಾವಿರಕ್ಕಿಂತ ಹೆಚ್ಚು ಚಿತ್ರಗಳಿವೆ. ಬಣ್ಣಗಳ ಮಿಶ್ರಣವನ್ನು ತೋರಿಸುವದಕ್ಕಾಗಿ ಮೂರು ಬಣ್ಣದ ನಾಲ್ಕು ಚಿತ್ರಗಳು. ನಾನಾಬಗೆಯ ಚಿತ್ರಗಳನ್ನು ಚಿತ್ರಿಸುವ ದಾರಿಯನ್ನು ವರ್ಣಿಸುವ ಪದ್ಧತಿಗಳು.
- ಈ ಪುಸ್ತಕವು ಪ್ರಾಥಮಿಕ ಶಾಲೆಗಳ ಮೇಲಿನ ತರಗತಿಗಳ, ಹೈಸ್ಕೂಲುಗಳ ಮತ್ತು ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳಿಗೂ. ಶಿಕ್ಷಕರಿಗೂ ಅತ್ಯುಪಯುಕ್ತವಾಗಿದೆ. ಎಲಿಮೆಂಟರಿ ಮತ್ತು ಇಂಟರಮಿಜಿಯೆಟ್ ಡ್ರಾಯಿಂಗ ಪರೀಕ್ಷೆಗಳ ವಿದ್ಯಾರ್ಥಿಗಳಿಗಂತೂ ಇದು ವಿಶೇಷ ಉಪಯುಕ್ತವಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ನಡೆದ ವಿವಿಧ ಡ್ರಾಯಿಂಗ ಪರೀಕ್ಷೆಗಳ ಪ್ರಶ್ನಪತ್ರಿಕೆಗಳೂ ಇದರಲ್ಲಿ ಕೊಡಲ್ಪಟ್ಟಿವೆ
- ಬೆಲೆ: ೦-೧೨-೦ ಅಂಚೆವೆಚ್ಚ ೦-೪-೦ ಅಂಚೆಯಿಂದ. ವ್ಹಿ. ಪಿ. ಯಿಂದ ೧-೪-೦. ನಿಮ್ಮ ಸಮೀಪದ ಪುಸ್ತಕ ವ್ಯಾಪಾರಿಗಳಿಂದ ತರಿಸಿಕೊಳ್ಳಿರಿ; ಅಥವಾ ಕೆಳಗಿನವರಿಗೆ ಬರೆದು ತರಿಸಿ ಕೊಳ್ಳಿರಿ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾಪೇಟೆ, ಪುಣೆ ೨.

Regd. No. B. 5375

ಸನ್ ೧೯೪೭---೪೮ ನೆಯ ಸಾಲಿನಲ್ಲಿ ಹೊರಟ ಹೊಸ ಅಭ್ಯಾಸಪತ್ರಿಕೆಗೆ ಅನುಸರಿಸಿ ಬರೆದ ನಮ್ಮ ಪ್ರಕಟನೆಗಳು.

೪ನೆ ಇಯತ್ತೆಗಾಗಿ.

ಭೂಮಂಡಲ ಪರಿಚಯ ಭಾಗ ೧

ಬೆಲೆ ೦—೧೨—೦

ಇದರಲ್ಲಿ ಮುಂಬಯಿಕರ್ನಾಟಕ, ಮಹಾರಾಷ್ಟ್ರ, ಗುಜರಾತ, ಕೊಂಕಣ ಮೊದಲಾದವುಗಳಲ್ಲಿಯ ಜನರ ಜೀವನ ಕ್ರಮವನ್ನು ಹವೆ ಮಳೆ, ಬೆಳೆ ಮೊದಲಾದವುಗಳನ್ನು ವಿವರವಾಗಿ ವರ್ಣಿಸಲ್ಪಟ್ಟಿದೆ; ಅಲ್ಲದೆ ವಿಶಾಲಕರ್ನಾಟಕದ ಸಂಕ್ಷಿಪ್ತ ಮಾಹಿತಿಯನ್ನು ಕೊಟ್ಟಿರುತ್ತದೆ. ವಿಲೀನೀಕೃತ ವಿಜಾಪುರ ಬೆಳಗಾಂವ ಜಿಲ್ಲೆಯ ನಕಾಶ ಹಾಗು ವಿಶಾಲ ಕರ್ನಾಟಕದ ನಕಾಶವನ್ನು ಸೇರಿಸಲಾಗಿದೆ. ಸುಮಾರು ೬೦ ಚಿತ್ರ ನಕಾಶಗಳು ಇರುತ್ತವೆ.

ಕನ್ನಡ ನಾಡಿನ ಚರಿತೆ

ಬೆಲೆ ೦—೧೪—೦

ಇದರಲ್ಲಿ ಕರ್ನಾಟಕದಲ್ಲಿ ಆಗಿಹೋದ ಶೂರ ಅರಸರ, ಕವಿಗಳ, ಧರ್ಮಗುರುಗಳ, ವೀರ ರಮಣಿಯರ ಜೀವನ ಚರಿತ್ರವನ್ನು ಸುಲಭ ಭಾಷೆಯಲ್ಲಿ ಕಥಾರೂಪವಾಗಿ ವಿವರಿಸಲಾಗಿದೆ.

ಸಾಮಾನ್ಯ ಜ್ಞಾನ

ಬೆಲೆ ೦-೮—೦

ಇದರಲ್ಲಿ ಮನೆಯಲ್ಲಿ ಸಾಕುವ ಪ್ರಾಣಿಗಳು, ಮುಖ್ಯ ಬೆಳೆಗಳು, ಬೇನೆಗಳು, ಹಳ್ಳಿಯ ಹಾಗೂ ನಗರದ ಆಡಳಿತೆ, ಪಂಚಾಗ ಮೊದಲಾದವುಗಳ ವಿಷಯವಾಗಿ ಸವಿಸ್ತಾರ ವರ್ಣನೆ ಇದೆ. ಅನೇಕ ಚಿತ್ರಗಳು.

೫ನೆ ಇಯತ್ತೆಗಾಗಿ ಸಂಯುಕ್ತ ಅಭ್ಯಾಸ ಪತ್ರಿಕೆಗನುಸರಿಸಿ,

ಸಾಮಾನ್ಯ ವಿಜ್ಞಾನ ಭಾಗ ೧

ಬೆಲೆ ೦—೧೨—೦

ಇದರಲ್ಲಿ ಮಾನವನ ಹಾಗೂ ಪ್ರಾಣಿಗಳ ಶ್ವಾಸೋಚ್ಛ್ವಾಸ, ಪೋಷಣ, ಚಲನೆ, ಜ್ಞಾನಗ್ರಹಣ, ನೀರು ಹಾಗು ಪಂಚಾಂಗಗಳ ವಿಷಯ ಸವಿಸ್ತರವಾಗಿ ವರ್ಣಿಸಲಾಗಿದೆ.

ಭೂಮಂಡಲ ಪರಿಚಯ ಭಾಗ ೨

ಬೆಲೆ ೧—೨—೦

ಇದರಲ್ಲಿ ಪೃಥ್ವಿಯ ಆಕಾರ. ಪ್ರಾಯೋಗಿಕ ಹಾಗು ನಿರೀಕ್ಷಣೆಯ ಕೆಲಸ ಹಿಂದುಸ್ತಾನದ ಹವಾಮಾನ ಹಾಗು ಜಗತ್ತಿನ ಹವಾಮಾನದ ಮುಖ್ಯ ಪ್ರಕಾರಗಳ ವಿಷಯಕ್ಕೆ ವಿಶದವಾಗಿ ವರ್ಣಿಸಲ್ಪಟ್ಟಿದೆ.

ಇದೇ ಪ್ರಕಾರ ೬ ನೆಯತ್ತೆಯ **ಸಾಮಾನ್ಯ ವಿಜ್ಞಾನ ೦—೧೨—೦ ಭೂಮಂಡಲ ಪರಿಚಯ ಭಾಗ ೩ ಬೆಲೆ ೧—೮—೦**

ಅಲ್ಲದೆ ಪ್ರಾಥಮಿಕ ಪ್ರಮಾಣಪತ್ರ ಅಭ್ಯಾಸ ಪತ್ರಿಕೆಯಂತೆ **ಸಾಮಾನ್ಯ ವಿಜ್ಞಾನ ಬೆಲೆ ರೂ ೧—೪—೦ ಭೂಮಂಡಲ ಪರಿಚಯ ಭಾಗಗಳ ಬೆಲೆ ರೂ ೨—೦—೦**

ಮೇಲೆ ಕಾಣಿಸಿದ ಎಲ್ಲ ಪುಸ್ತಕಗಳು ಎಲ್ಲ ವ್ಯಾಪಾರಸ್ಥರಲ್ಲಿ ದೊರೆಯುತ್ತವೆ.

ಇಲ್ಲವಾದರೆ

ಪ್ರಕಾಶಕರು:

ರಾಮಾತ್ರಯ ಬುಕ್ ಡಿಪೊ ಧಾರವಾಡ

ಇವರಿಗೆ ಇಂದೇ ಪತ್ರ ಬರೆಯಿರಿ.

Printed by M. A. Kamat B. Sc. at Jai Hind Art Press, Javlipeth, Dharwar. Edited and Published by K. C. Kurtkoti, B. M. Shintri, S. R. Tatti, & Y. D. Nadkarni jointly at the Kannada Prathamik Shikshan Office Govt Training College for Men, Dharwar

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಕೆ. ಜೀ. ಕುರ್ತಕೋಟಿ

ವಾ. ಚಂ. ೪—೦—೦] ಜನೆವರಿ ೧೯೫೧ [ಬಿಡಿ ಸಂಚಿಕೆ ೦—೬—೦

ದಿವಂಗತ ಸರದಾರ ವಲ್ಲಭಭಾಯಿ ಪಟೇಲ

—ಕಡಿಯಚು. ಜಯಕರ್ನಾಟಕದ ಕೃಪೆಯಿಂದ

ಪುಟ ೨೬೫ ಬೆಲೆ ೨ ರೂ. ೧೨ ಆ.

ಕೈನೇಯಿಗೆಯ ಮಾರ್ಗದರ್ಶಿಕೆ

ಲೇಖಕರು : ಎಂ. ಡಿ. ಮೋಲಗಿರಿ

ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ್,
ಧಾರವಾಡ ಭಾಗ, ಧಾರವಾಡ, ಅವರ ಪತ್ರ
ನಂ. ೯೭೭೭/೩೦—೮-೫೦ ಅನ್ವಯ
ಟ್ರೇ. ಕಾ.ದ ೧ನೆಯ ಹಾಗು ೨ನೆಯ
ವರ್ಷದ ವಿದ್ಯಾರ್ಥಿಗಳಿಗೆ "ಪೂರಕ ಓದು"
ಎಂದು ಸರಕಾರದಿಂದ ಮಂಜೂರಾಗಿದೆ
ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ.

— ಎಸ್. ಕೆ. ಮೋಲಗಿರಿ —
ಕಮಲಾಪುರ ಭಾಗ,
(ಈಶ್ವರದೇವರ ಗುಡಿ ಓಣಿ)
ಧಾರವಾಡ.

ಪುಟ ೨೨೫ ಬೆಲೆ ೨ ರೂ. ೪ ಆ.

ಕೈ ನೂಲು

ಲೇಖಕರು : ಎಂ. ಡಿ. ಮೋಲಗಿರಿ.
(ಮೂಲೋದ್ಯೋಗ ಶಿಕ್ಷಕ, ಕ. ಗಂ. ಸರಕಾರಿ
ಟ್ರೇನಿಂಗ ಕಾಲೇಜ, ಧಾರವಾಡ)

ಈ ಪುಸ್ತಕದಲ್ಲಿ ಪ್ರಾಥಮಿಕ ಶಾಲೆಗಳ ಎಲ್ಲ ವರ್ಗಗಳ ಹಾಗು ಟ್ರೇನಿಂಗ ಕಾಲೇಜುಗಳ ೧ನೆಯ ವರ್ಷದ ಹೊಸ ಅಭ್ಯಾಸಪತ್ರಿಕೆಯಂತೆ ನೂಲುಗಾರಿಕೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಂಗ್ರಹಿಸಿದೆ. ಹತ್ತಿಯ ಬಿತ್ತಿಗೆಯನ್ನು ನೋದಲುಗೊಂಡು ನೂಲು ಸಿದ್ಧವಾಗುವವರೆಗಿನ ಎಲ್ಲ ಸಂಗತಿಗಳನ್ನು ಸಮಯೋಜಿತ ಚಿತ್ರಗಳಿಂದಲೂ ಉಧಾಹರಣೆಗಳಿಂದಲೂ ತಾಂತ್ರಿಕ ವಿವರಣೆಗೆ, ನೂಲಗಾರಿಕೆಗೆ ಸಂಬಂಧಿಸಿದ ಗಣಿತ ಹಾಗು ಲೆಕ್ಕಪತ್ರಗಳನ್ನೂ ಸೇರಿಸಿದೆ. ನೂಲುವ ವರ್ಗಗಳನ್ನು ಸ್ವತಂತ್ರವಾಗಿ ನಡೆಯಿಸುವ ಬಗ್ಗೆ ಶಿಕ್ಷಕ ಶಿಕ್ಷಕಿಯರಿಗೂ ಖಾದೀ ಕಾರ್ಯಕರ್ತರಿಗೂ ತುಂಬಾ ಉಪಯುಕ್ತವಾಗಿದೆ.

— ಎಸ್. ಕೆ. ಮೋಲಗಿರಿ —
ಕಮಲಾಪುರ ಭಾಗ, ಈಶ್ವರದೇವರ ಗುಡಿ ಓಣಿ,
— — ಧಾರವಾಡ — —

ಸರಕಾರದಿಂದ ಟ್ರೇನಿಂಗ ಕಾಲೇಜುಗಳಿಗೆ '**ಪೂರಕವಾಚನ**'ವೆಂದು ಮಂಜೂರಾಗಿದೆ.

' ಶಾರೀರಿಕ ಶಿಕ್ಷಣ '

ಲೇಖಕರು :	ಪ್ರಕಾಶಕರು
ಶ್ರೀ. ಭೀ. ಸ. ಮುಣ್ಣೂರ	**ಶ್ರೀ. ಜಿ. ಬಿ. ನವಲೂರ**
ಪ್ರ್ಯಾಕ್ಟಿಸಿಂಗ್‌ಸ್ಕೂಲ, ಟ್ರೇ. ಕಾಲೇಜ, ಧಾರವಾಡ.	ಫಿಜಿಕಲ್ ಟೀಚರ, ಬಾಸೆಲ್‌ಮಿಶನ್ ಹಾಯಸ್ಕೂಲ, ಧಾರವಾಡ.

ಶಾರೀರಿಕ ಶಿಕ್ಷಣದ ಹೊಸ ಅಭ್ಯಾಸಕ್ರಮಕ್ಕನುಸರಿಸಿ ಬರೆದ,
ನೂರಾರು ಚಿತ್ರಗಳಿಂದ ಕೂಡಿದ, ಸುಂದರ ಪುಸ್ತಕವು.

ಎಲ್ಲ ಶಿಕ್ಷಕರೂ ಇದರ ಲಾಭವನ್ನು ಪಡೆಯಲೇಬೇಕು.

ಬೆಲೆ : ೨—೦—೦

ಪುಸ್ತಕ ದೊರೆಯುವ ಸ್ಥಳ :

ರಾಮಾಶ್ರಯ ಬುಕ್-ಡಿಪೋ, ಧಾರವಾಡ.

ಭಾರತ ಬುಕ್-ಡಿಪೋ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ



ಸಂಪಾದಕ ಮಂಡಲ

ಸಂಚಾಲಕರು. ಶ್ರೀ ಬಿ. ಎನ್. ಮೀಮಾಂಸಿ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ.
ಪ್ರಧಾನ ಸಂಪಾದಕರು: **ಶ್ರೀ. ಕೆ. ಜಿ. ಕುರ್ತಕೋಟಿ,** ಬಿ.ಎ.,ಬಿ.ಟಿ. ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ,ಧಾರವಾಡ.

ಸಹಸಂಪಾದಕರು :

ಶ್ರೀ. ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೦	ಜನೆವರಿ ೧೯೫೧	ಸಂಚಿಕೆ ೮

ಪರಿವಿಡಿ

೧. ಶಿಕ್ಷಣದ ಒಂದು ಸುಂದರ ಕಲ್ಪನೆ — ಶ್ರೀ. ಹ. ಗ. ಜೋಶಿ — ೨
೨. ಸಂಪಾದಕೀಯ — ೩
೩. ಮನವ ಶೋಧಿಸಬೇಕು — ಶ್ರೀ. ಪುರಂದರದಾಸರು — ೪
೪. ಕಾಶ್ಮೀರಿ ಜನರ ಸಂಸ್ಕೃತಿ — ಶ್ರೀ. ಗುರುನಾಥ ಜೋಶಿ — ೫
೫. ಪ್ರಾದೇಶಿಕ ಟ್ರೇನಿಂಗ ಕಾಲೇಜುಗಳ ಅವಶ್ಯಕತೆ — ಶ್ರೀ. ರತ್ನಾಕರ ಹಾವೇರಿ — ೧೧
೬. ಪ್ರಾಥಮಿಕ ಶಾಲೆಗಳಲ್ಲಿ ಬಹುವರ್ಗಗಳನ್ನು ಕಲಿಸುವ ಸಮಸ್ಯೆ — ಶ್ರೀ. ವಿ. ಬ. ಜವಣ್ಣವರ — ೧೪
೭. ಪಕ್ಷಿ ಮಡಿಯಿತೆ ! — ಶ್ರೀ. ನೇ. ಭೀ ವಾಸಣ್ಣವರ — ೧೭
೮. ಶೈಕ್ಷಣಿಕ ಸಮಾಚಾರ — ೧೮
೯. ಇತಿಹಾಸವನ್ನು ಕಲಿಸುವ ಬಗೆಗಳು — ಶ್ರೀ. ಶಿಂತ್ರಿ ಬಸಪ್ಪನವರು — ೨೧
೧೦. ಸಮಾಜ ಜೀವನಕ್ಕಾಗಿ ಶಿಕ್ಷಣ — ಡಾ. ವಿ. ಕೋ. ಜವಳಿ — ೨೫

[ಸೂಚನೆ:— ಕೊನೆಯ ಎಂಟು ಪುಟಗಳ ಸಂಖ್ಯೆ ಸರಿಪಡಿಸಿಕೊಂಡು ಓದಬೇಕಾಗಿ ಬಿನ್ನಹ.]

ಶಿಕ್ಷಣದ ಒಂದು ಸುಂದರ ಕಲ್ಪನೆ

ಶಿಕ್ಷಣವು ಒಂದು ಚೇತನಾರೂಪವು. ಆ ಚೇತನೆಯು ವ್ಯಕ್ತಿಗತ ಹಾಗು ಸಾಮಾಜಿಕ ಬೆಳವಣಿಗೆಯನ್ನೊಳಗೊಂಡಿರುತ್ತದೆ.

ಶಿಕ್ಷಣದಲ್ಲಿ ಕೇವಲ ಅಂಕಿ ಸಂಖ್ಯೆಗಳ ಪ್ರಾಮುಖ್ಯಕ್ಕಿಂತಲೂ, ಬೆಳವಣಿಗೆಯ ಹಾಗು ಸಿದ್ಧಿಯ ಕ್ರಮ ಹಾಗು ಅವ್ಯಾಹತವಾದ ಊರ್ಧ್ವಗಾಮಿ ಸುಧಾರಣೆಯು ಹೆಚ್ಚು ಮಹತ್ವದ್ದಾಗಿರುತ್ತದೆ.

ಕುಶಲತೆಯನ್ನು ದೊರಕಿಸುವುದು. ಜ್ಞಾನವನ್ನು ಸ್ವಾಧೀನ ಪಡಿಸಿಕೊಳ್ಳುವುದು, ಸಂಸ್ಕೃತಿಯ ಸಂವರ್ಧನೆಗಳು—ಇವೇ ಕೊನೆಯವಲ್ಲ. ಅವು ಬೆಳವಣಿಗೆಯ ಅಳತೆಗೋಲುಗಳು ಹಾಗು ಗುರುತುಗಳಾಗಿವೆ ಅವು ಅದರ ಮುಂದುವರಿಯುವಿಕೆಯ ಸಾಧನಗಳು ಮಾತ್ರ.

ಬೆಳೆಯುವ ಜೀವನ ಮಾರ್ಗದರ್ಶನಕ್ಕಾಗಿರುವ ಸತ್ಯ ಸಂಗತಿಗಳು. ಹಠೋಕ್ತಿಗಳಾಗಿರದೆ, ನಿರೀಕ್ಷಣೆ ಜಿಜ್ಞಾಸೆ, ಪ್ರಯೋಗ ಹಾಗು ಪರ್ಯಾಲೋಚನೆ, ಮುಂತಾದ ಪದ್ಧಗಳಿಂದ ವೈಯಕ್ತಿಕ ಮಾನಸಿಕ ಶಕ್ತಿಯಿಂದ ದೊರಕಿದವುಗಳಾಗಿರುತ್ತವೆ.

ಬುದ್ಧಿವಂತ ಆಯ್ಕೆ, ಮುತ್ಸದ್ದಿತನದ ನಿರ್ಣಯ ಕೊಡುವಿಕೆಗಳ ಶಕ್ತಿಯ ಬೆಳವಣಿಗೆಗೆ ತಾದ್ರೂಪ್ಯವಾಗಿಯೂ ಸಮಾಂತರವಾಗಿಯೂ ನೈತಿಕ ಬೆಳವಣಿಗೆ ಇರುತ್ತದೆ.

ಶೈಕ್ಷಣಿಕ ಕಾರ್ಯಕ್ರಮವು ಒಂದರ ಹಿಂದೊಂದು ಚಟುವಟಿಕೆಗಳನ್ನು ಪೂರೈಸುವಂತೆ, ಸಂಘಟಿತವಾಗಿರಬೇಕು. ಚಟುವಟಿಕೆಗಳು ಅನುಭವದ ಸಂತತವಾದ ಪುನರ್ಘಟನೆಯನ್ನು ರೂಪಿಸುವವು. ಏಕೆಂದರೆ ಅನುಭವವು ಕೃತಿಯ ಪ್ರಾಮುಖ್ಯವಾದ ಕೆಲಸವು. ಯಾವ ಚಟುವಟಿಕೆಯು ಬುದ್ಧಿವಂತ ಆಯ್ಕೆಯ ಸಂಘಟನೆಯ ಶಕ್ತಿಯನ್ನು ಹೆಚ್ಚಿಸುತ್ತದೆಯೋ, ಯಾವುದು ಪರಿಸ್ಥಿತಿಗನುಸರಿಸಿ ವ್ಯಕ್ತಿಯನ್ನು ಸಾಮಾಜಿಕ, ನೈತಿಕ ಪರಿಸ್ಥಿತಿಗಂಟಿಕೊಳ್ಳಲು ಅವಕಾಶ ಕಲ್ಪಿಸಿಕೊಡುವುದೋ, ಅದು ನಿಜವಾಗಿಯೂ ಶೈಕ್ಷಣಿಕ ಚಟುವಟಿಕೆಯು.

ಶಿಕ್ಷಣದ ಧ್ಯೇಯವು ಸ್ವಾತಂತ್ರ್ಯವು. ಅದು ಬುದ್ಧಿವಂತ ಪ್ರಾರಂಭಿಕ ಸ್ವತಂತ್ರ ನಿರೀಕ್ಷಣೆಯ ಹಾಗು ಹಾಗು ವ್ಯಕ್ತಿಯ ದೂರದರ್ಶಿತ್ವದಿಂದ ಬೆಳೆದು ಬಂದುದುದಾಗಿರಬೇಕು. ಅಂಥ ಸ್ವಾತಂತ್ರ್ಯದ ಮಾನಸಿಕ ಒಲವು ವ್ಯಕ್ತಿಯು ಯಾವ ಒಂದು ಸಾಮಾಜದ ಘಟಕನಾಗಿರುವನೋ, ಅಂಥ ಸಮಾಜದ ಅಭಿರುಚಿಗಳಿಗನುಸಾರವಾಗಿ ನಿಶ್ಚಿತವಾಗಿರುತ್ತದಲ್ಲದೆ ಸಮಾಜದ ಮಾರ್ಗದರ್ಶನದಲ್ಲೇ ಬೆಳೆದು ಬರುತ್ತದೆ.

ಶಿಕ್ಷಣದಲ್ಲಿ ಸ್ವಾತಂತ್ರ್ಯದಿಂದ ಉದ್ಭವಿಸುವ ಹೊಸ ಹೊಸ ವಿಚಾರಗಳು ಸಮಾಜ ಜೀವನದಲ್ಲಿ ಆವಿರ್ಭವಿಸುವವಲ್ಲದೆ, ಕಲ್ಪಕತೆಯ ದರ್ಶನದಲ್ಲಿ, ಜೀವನದ ಉತ್ತಮ ಕಲೆಯಲ್ಲಿ ಪರಿವರ್ತಿತಗೊಳುತ್ತವೆ.

ಶಾಲೆಯು ಪ್ರಾಮುಖ್ಯವಾಗಿ ಒಂದು ಸಾಮಾಜಿಕ ಸಂಸ್ಥೆಯು. ಅದು ಮನೆಯಾಗಿ, ಕುಟುಂಬವಾಗಿ ಹಾಗು ಇನ್ನಿತರ ಸಾಮಾಜಿಕ ಕರ್ತಾರವಾಗಿ ಭಾಗಿಯಾಗುವದು; ಒಂದು ಸುಸಂಘಟಿತ ಮನದ ಮುಖಾಂತರ ಶೈಕ್ಷಣಿಕ ಶಕ್ತಿಗಳೆಲ್ಲವನ್ನೂ ಅನ್ಯೋನ್ಯವಾಗಿ ಬಂಧಿಸುವುದು.

ಸಮಾಜ-ನಿಯತಿಯ ಸಮಸ್ಯೆಗಳ ಪರಿಹಾರವು ಪುನರ್ಘಟಿತ ಹಾಗು ಸಂಘಟಿತ ಅಂದಿನ ಅನುಭವವನ್ನು ಇಂದಿನ ಅನುಭವದೊಂದಿಗೆ ಸೇರಿಸುವದರಿಂದ, ಉಂಟಾಗುತ್ತದೆ; ಅಂದಿನದಕ್ಕೆ ಪ್ರಯೋಜನ ಹಾಗು ಅರ್ಥಗಳು ಪ್ರಾಪ್ತವಾಗುವವಲ್ಲದೆ, ಭವಿಷ್ಯತ್ತಿನೆಡೆಗೆ ನಡಿಸಿಕೊಂಡು ಹೋಗುವ, ಸಮಾಧಾನದ ನಿರ್ಣಯಕ್ಕೆ ಬರುವಂತೆ ಸಾಧ್ಯಾಸಾಧ್ಯತೆಗಳನ್ನು ತೆರೆದಿಡುವದು; ವಿಧಾಯಕ ಹಾಗು ವಿಮರ್ಶಾತ್ಮಕ ಮುಂದಿನ ಬೆಳವಣಿಗೆಗೂ ಕಾರಣೀಭೂತವಾಗುವದು.

ಸುವರ್ಣಯುಗವು ನಮ್ಮ ಮುಂದಿದೆಯೇ ಹೊರತು, ಹಿಂದಲ್ಲ.

ಹೀಗೆ ಮೇಲ್ಕಾಣಿಸಿದ ಎಲ್ಲ ಮಾತುಗಳಲ್ಲಿಯೂ ನಮ್ಮ ದೃಢವಾದ ನಂಬುಗೆಯಿದೆ

[The progress of Education' ದಿಂದ ಭಾಷಾಂತರಿಸಿದುದು. ಹ. ಗ. ಜೋಶಿ]

ಸಂಪಾದಕೀಯ

ಸರದಾರ ವಲ್ಲಭಭಾಯಿ ಪಟೇಲರ ಶೋಚನೀಯ ನಿಧನ

ಭಾರತ ಗಣರಾಜ್ಯದ ಉಪಪ್ರಧಾನರಾದ ಸರದಾರ ವಲ್ಲಭಭಾಯಿ ಪಟೇಲರು ದಿನಾಂಕ ೧೫-೧೨-೧೯೫೦ ಶುಕ್ರವಾರ ದಿನ ಮುಂಬಯಿಯಲ್ಲಿ ಬಿರ್ಲಾ ಭವನದಲ್ಲಿ ಮುಂಜಾನೆ ೯-೩೭ಕ್ಕೆ ಎದೆನೋವಿನ ಪ್ರಹಾರದಿಂದ ನಿಧನ ಹೊಂದಿದರು. ಸರದಾರ ವಲ್ಲಭಭಾಯಿಯವರ ನಿಧನದ ವಾರ್ತೆ ತಿಳಿದೊಡನೆ ಇಡಿ ರಾಷ್ಟ್ರವೇ ಶೋಕ-ಸಾಗರದಲ್ಲಿ ಮುಳುಗಿತು. ಜಗತ್ತು ಈ ಅಪ್ರತಿಮ ದೇಶಪ್ರೇಮಿಯ ಅಂತರ್ಧಾನದ ಬಗೆಗೆ ಕಂಬನಿ ಸುರಿಸಿತು. ಭಾರತದ ಎಲ್ಲ ಸರಕಾರಿ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಏಳು ದಿನಗಳ ವರೆಗೆ ಧ್ವಜಸ್ತಂಭದ ಅರ್ಧಕ್ಕೇರಿಸಲಾಯಿತು. ಹೀಗೆ ರಾಷ್ಟ್ರವು ಒಂದು ಸಪ್ತಾಹವನ್ನು ಶೋಕದಲ್ಲಿ ಸೂತಕವೆಂದು ಕಳೆಯಿತು. ಬಡವರ ಬಂಧು, ರೈತರ ಕೈವಾರಿ, ರಾಷ್ಟ್ರದ ರಕ್ಷಕ, ಬಾಪೂಜಿಯ ಬಲಗೈಯಂತಿದ್ದ, ಅಹಿಂಸಾ ಪರಶುರಾಮರಂತಿದ್ದ ಸರದಾರ ಪಟೇಲರ ನಿಧನದಿಂದ ರಾಷ್ಟ್ರಕ್ಕೂ ಸರದಾರರ ಕುಟುಂಬದವರಿಗೂ ಆದ ದುಃಖದಲ್ಲಿ ನಮ್ಮ ಸಂಪಾದಕ ಮಂಡಳವೂ ಸಮಭಾಗಿಯಾಗಿದೆ ಮತ್ತು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ. ಸರದಾರರ ನಿಧನದಿಂದ ರಾಷ್ಟ್ರಕ್ಕೆ ತುಂಬಿಬಾರದಂತಹ ಹಾನಿಯಾಗಿದೆಯೆಂದೂ ಅಭಿಪ್ರಾಯ ಪಡುತ್ತದೆ.

ಸರದಾರ ವಲ್ಲಭಭಾಯಿಯವರ ಜೀವನವು ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರಿಗೂ ಆದರ್ಶಮಯವಾಗಿದೆ. ಅವರಂತೆ ನಮ್ಮ ನಾಡಿನ ಮಕ್ಕಳು ಧೀಮಂತರೂ ಧೀರರೂ ರಾಷ್ಟ್ರಪ್ರೇಮಿಗಳೂ ಸತತೋದ್ಯೋಗಿಗಳೂ ಆಗಲೆಂದು ಸಬೇಕೆಂದು ನಾವು ಸೂಚಿಸುತ್ತೇವೆ. ಸರದಾರ ವಲ್ಲಭಭಾಯಿಯವರ ಜೀವನದ ಸಂಕ್ಷಿಪ್ತ ವಿವರವು ಇಂತಿದೆ:—

೩೧-೧೦-೧೮೭೫ ಕರಮುಸದ (ಕೈರಾ ಜಿಲ್ಲೆ) ಹಳ್ಳಿಯಲ್ಲಿ ಜನನ.

೧೮೯೭ ನಡಿಯಾದ ಹೈಸ್ಕೂಲಿನಿಂದ ಮ್ಯಾಟ್ರಿಕ್.

೧೯೦೦ ವಕೀಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಗೋಧ್ರಾದಲ್ಲಿ ವಕೀಲಿ. ಬಳಿಕ ಇಂಗ್ಲಂಡಿಗೆ ಬ್ಯಾರಿಸ್ಟರ ಆಗಲು ಪ್ರಯಾಣ.

೧೯೧೩ ಮಿಡಲ್‌ಟೆಂಪಲ್‌ದಲ್ಲಿ ಅಧ್ಯಯನ ಮಾಡಿ ಬ್ಯಾರಿಸ್ಟರ ಪರೀಕ್ಷೆಯಲ್ಲಿ ಸರ್ವ ಪ್ರಥಮ ಉತ್ತೀರ್ಣರಾದರು. ಬಂಗಾರದ ಪದಕವನ್ನು ಮೆಚ್ಚುಗೆಯಾಗಿ ಪಡೆದರು. ಇದೇ ವರುಷ ಮರಳಿ ಅಹಮದಾಬಾದಕ್ಕೆ ಬಂದು ವಕೀಲಿ ವ್ಯವಸಾಯ ಪ್ರಾರಂಭಿಸಿದರು.

೧೯೧೮ ಮಹಾತ್ಮಾಜಿಯವರ ಸತ್ಯಾಗ್ರಹ ಸಂಗ್ರಾಮದ ಪ್ರಭಾವಕ್ಕೊಳಗಾದರು.

೧೯೨೨ ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದರು.

೧೯೨೮ ಬಾರ್ಡೋಲಿಯಲ್ಲಿ ಸತ್ಯಾಗ್ರಹಾಶ್ರಮ ಸ್ಥಾಪಿಸಿದರು. ರೈತರನ್ನು ಕರನಿರಾಕರಣೆಗೆ ಸಿದ್ಧಮಾಡಿ ಸಂಗ್ರಾಮ ಹೂಡಿ ಯಶಸ್ವಿಯಾದರು. ಬಾರಡೋಲಿ ಕರನಿರಾಕರಣೆಯ ಅಪ್ರತಿಮ ಮಾರ್ಗದರ್ಶನಕ್ಕಾಗಿ ಮಹಾತ್ಮಾಜಿಯವರು ಇವರಿಗೆ ಸರದಾರ ಎಂಬ ಬಿರುದು ಕೊಟ್ಟರು.

೧೯೩೦ ಸೆರೆಮನೆವಾಸ.

೧೯೩೧ ಕರಾಚಿಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದರು. ಅಂದಿನಿಂದ ಅಖಿಲ ಭಾರತ ಕಾಂಗ್ರೆಸ ಕಮೀಟಿ ಮತ್ತು ವರ್ಕಿಂಗ ಕಮೀಟಿಯ ಸದಸ್ಯರಾಗಿದ್ದರು.

೧೯೪೦ ಮಹಾತ್ಮಾಜಿಯವರು ವೈಯಕ್ತಿಕ ಸತ್ಯಾಗ್ರಹ ಪ್ರಾರಂಭಿಸಿದಾಗ ಸರದಾರ ಪಟೇಲರು ಸೆರೆಹಿಡಿಯಲ್ಪಟ್ಟಿದ್ದರು. ಅನಾರೋಗ್ಯದ ಕಾರಣದಿಂದ ಹತ್ತು ತಿಂಗಳ ನಂತರ ಬಿಡಲ್ಪಟ್ಟರು.

೧೯೪೨ ಪುನಃ ಬಂಧಿಸಲ್ಪಟ್ಟರು ಮತ್ತು ಸೆರೆಮನೆಯಲ್ಲಿಡಲ್ಪಟ್ಟರು—'ಭಾರತದಿಂದ ಇಂಗ್ಲಿಷರೇ ತೊಲಗಿರಿ' ಎಂಬ ಚಳವಳಿಯ ಕಾಲದಲ್ಲಿ.

೧೯೪೫ ಸೆರೆಮನೆಯಿಂದ ಬಿಡಲ್ಪಟ್ಟರು. ಲಾರ್ಡ ವೇವೆಲ್ಲರ ಸಿಮ್ಲಾ ಪರಿಷತ್ತಿನಲ್ಲಿ ಭಾಗ ವಹಿಸಿದರು.

೧೯೪೬ ನಡುಗಾಲ ಸರಕಾರದಲ್ಲಿ ಗೃಹ ಮತ್ತು ಬಾನುಲಿ ಹಾಗು ಸುದ್ದಿ ಶಾಖೆಯ ಮಂತ್ರಿ-

ಗಳಾದರು. ಇದೇ ವರುಷ ಅಗಸ್ಟ ೧೫ರಿಂದ ಸ್ವತಂತ್ರ ಭಾರತದ ಉಪಪ್ರಧಾನ ಮಂತ್ರಿಗಳೂ ಆದರು.

ಸರದಾರ ಪಟೇಲರು ಸಂಸ್ಥಾನ ಖಾತೆಯನ್ನೂ ತಮ್ಮ ವಶಕ್ಕೆ ತೆಗೆದುಕೊಂಡು ದೂರದರ್ಶಿತ್ವ ಹಾಗೂ ಚಾಣಾಕ್ಷತೆಯಿಂದ ಸುಮಾರು ೬೦೦ ಕ್ಕೆ ಮಿಕ್ಕಿದ ಸಂಸ್ಥಾನಗಳನ್ನು ಭಾರತದ ಗಣರಾಜ್ಯಕ್ಕೆ ಜೋಡಿಸಿದರು. ಹೈದರಾಬಾದದ ಸಮಸ್ಯೆಯನ್ನು ಬಗೆಹರಿಸಿದರು. ಸರದಾರರು ತಾವು ಅತ್ಯಂತ ಸಮರ್ಥ ಆಡಳಿತಗಾರರೆಂಬುದನ್ನೂ ದೃಢ ನಿರ್ಧಾರಿಗಳೆಂಬುದನ್ನೂ ಜಗತ್ತಿಗೆ ತೋರಿಸಿದರು.

೧೫-೧೨-೧೯೫೦ ಮುಂಬಯಿಯಲ್ಲಿ ಬಿರ್ಲಾ ಭವನದಲ್ಲಿ ಮುಂಜಾನೆ ೯-೩೭ಕ್ಕೆ ಸರ್ದಾರ ದೇಹವನ್ನು ತ್ಯಜಿಸಿದರು.

ಮನವ ಶೋಧಿಸಬೇಕು

●

ಮನವ ಶೋಧಿಸಬೇಕು ನಿಚ್ಚಾ ದಿನ ।
ದಿನ ಮಾಡುವ ಪಾಪ ಪುಣ್ಯದ ವೆಚ್ಚಾ ॥ ಪ ॥

ಧರ್ಮ ಅಧರ್ಮ ವಿಂಗಡಿಸಿ ಅ ।
ಧರ್ಮದ ನರಗಳ ಬೇರ ಕತ್ತರಿಸಿ ।
ನಿರ್ಮಲಾಚಾರದಿ ಚರಿಸಿ ಪರ ।
ಬ್ರಹ್ಮ ಮೂರುತಿ ಆ ಪಾದ ಕಮಲವ ಭಜಿಸಿ ॥ ೧ ॥

ಮನವ ಖಂಡಿಸಿ ಬ್ರಹ್ಮ ಮಾಣೋ ನಿನ್ನ ।
ತನುವ ದಂಡಿಸಿ ಪರಮಾತ್ಮನ ಕಾಣೋ ।
ಕೊನೆಗೆ ನಿನ್ನೊಳಗೆ ನೀ ಜಾಣೋ ಮುಕ್ತಿ ।
ನಿನಗೆ ದೂರಿಲ್ಲವೋ ಒಂದೇ ಗೇಣೋ ॥ ೨ ॥

ಆತನವರಿಗೆ ಕೇಡಿಲ್ಲ ಅವ ।
ಪಾತಕ ಪತಿತ ಸಂಗವ ಮಾಳ್ಪನಲ್ಲ ।
ನೀ ಆವಂತರು ಕೇಳಿರಿಲ್ಲ ನಮ- ।
ಗಾತನೇ ಗತಿ ಈವ ನಮ್ಮ ಪುರಂದರ ವಿಠಲಾ ॥ ೩ ॥

ಕಾಶ್ಮೀರಿ ಜನರ ಸಂಸ್ಕೃತಿ

[೭—೧೨—೧೯೫೦ ಗುರುವಾರ ದಿನ, ಧಾರವಾಡ ಬಾನುಲಿ ಕೇಂದ್ರದಲ್ಲಿ ಮಾಡಿದ ಭಾಷಣ]

ಭಾಷಣಕಾರರು : **ಶ್ರೀ. ಗುರುನಾಥ ಜೋಶಿ.**

(ಸೂಚನೆ:—ಸಮಯದ ನಿರ್ಬಂಧನೆಯ ಮೂಲಕ [ ] ಈ ಗುರುತು ಮಾಡಿದ ವಿಷಯವನ್ನು ಬಿಡಲಾಯಿತು. ಧಾರವಾಡ ಬಾನುಲಿ ಕೇಂದ್ರದ ಅಧಿಕಾರಿಗಳ ಕೃಪೆಯಿಂದ ಪ್ರಕಟಿಸಲಾಗಿದೆ.)

★

ನಂದನವನದ ಪ್ರೇಮಿಗಳೇ,

ನೀಲ ಗಗನ, ಮನೋಹರ ಮುಂಜಾವು-ಮುಚ್ಚಂಜೆ, ನಕ್ಷತ್ರಗಳಿಂದ ಮಿನುಗುವ ರಾತ್ರಿ, ಸುಳಿದಾಡುವ ತಂಗಾಳಿ, ಹಿಮಾಚಲದ ತುತ್ತತುದಿಯಲ್ಲಿ ಹೊಳೆಯುವ ಹಿಮದ ರಾಶಿ, ಎರಡು ಬೆಟ್ಟಗಳನ್ನು ಕೂಡಿಸುವ ಹಿಮದ ಪೂಲುಗಳು, ಹಿಮಾಚ್ಛಾದಿತ ಶೈಲಶೃಂಗಗಳಿಂದ ಪರಿವೇಷ್ಟಿತವಾದ ನಿರ್ಮಲ ಸರೋವರಗಳು, ಉತ್ತುಂಗ ಪೈನ್ ವೃಕ್ಷಗಳ ಸಾಲುಗಳು, ನಯನ ಮನೋಹರ ತೋಟಗಳು, ಸದಾ ನಸುನಗುತ್ತಿರುವ ಸುಂದರ ಸುಮನಗಳು, ನಿರಂತರ ಪುಟಿಯುವ ಬುಗ್ಗೆಗಳು, ಮೇಘಗಳ ಗರ್ಜನೆ, ಮಳೆಯ ಸೆಳಕು, ಸರಿತೆ-ಝರಿಗಳ ತರಂಗನಾದ, ಹಕ್ಕಿಗಳ ಇಂಚರ ಮುಂತಾದ ಅಪೂರ್ವ ಸೃಷ್ಟಿ ಸೌಂದರ್ಯದ ಕಣಿಯಾದ ಕಾಶ್ಮೀರದ ಮಹಿಮೆಯನ್ನು ಅನೇಕ ಪ್ರಾಚೀನ ಹಾಗು ಅರ್ವಾಚೀನ ಕವಿಗಳು ಕೊಂಡಾಡಿದ್ದಾರೆ.

[ಕಾಶ್ಮೀರದಷ್ಟು ರತ್ನಗರ್ಭಾ ಧರಿತ್ರಿ ಮೂಲೋಕದಲ್ಲಿ ಮತ್ತೊಂದಿಲ್ಲವೆಂದು ಕಲ್ಹಣನೂ, ಸದಾಕಾಲ ವಸಂತವಿರುವ ವಾಟಿಕೆಯೆಂದರೆ ಕಾಶ್ಮೀರ, ಚಕ್ರವರ್ತಿಗಳ ವಿಲಾಸವನ್ನು ವರ್ಧಿಸುವ ಹೂದೋಟವೆಂದರೆ ಕಾಶ್ಮೀರ, ತಪಸ್ವಿಗಳ ಮನಸ್ಸನ್ನು ಪ್ರಫುಲ್ಲಿತಗೊಳಿಸುವ ಏಕಾಂತ ಪ್ರದೇಶವೆಂದರೆ ಕಾಶ್ಮೀರ ಎಂದು ಜಹಾಂಗೀರನೂ ಪ್ರಕೃತಿಯ ಸರ್ವಸುಂದರ ಹಾಗು ರಮ್ಯರೂಪಗಳ ದರ್ಶನ ಮಾಡಿಕೊಂಡು ಮಾನವನಿಗೆ ಆನಂದದಿಂದ ಜೀವಿಸುವದಕ್ಕೂ ಸಾಯುವದಕ್ಕೂ ಪಾವನವಾದ ದೇವಲೋಕವೆಂದರೆ ಕಾಶ್ಮೀರ ಎಂದು ಸಾಯರಿಯೂ ಹಕ್ಕಿಗಳ ಕಲರವಪ್ರವಾಹದಿಂದ ತರಂಗಿತವಾಗುತ್ತಿರುವ ಮುಂಜಾವಿನ ಶಾಂತಿಯ ಸಮುದ್ರ, ದಾರಿಯ ಇಕ್ಕೆಲಗಳಲ್ಲಿ ನಗುತ್ತಿರುವ ಸುಮನ ಸಮೂಹ, ಚಿನ್ನದ ಸಿರಿಯಿಂದ ಕಂಗೊಳಿಸುವ ಗಹನ ಮೇಘಮಾಲೆಯ ತಾಣವೆಂದರೆ ಕಾಶ್ಮೀರ ಎಂದು ರವೀಂದ್ರನಾಥ ಠಾಕೂರರೂ ತಂಬೂರಿಯನ್ನು ಮೀಂಟುತ್ತಿರುವಂತೆ ಕಂಗೊಳಿಸುವ ಬುಗ್ಗೆಗಳಿಂದ ಹಾಗು ಮಲ್ಹಾರ ರಾಗವನ್ನು ಹಾಡುವ ಹವೆಯಿಂದ ಶೋಭಿತವಾದ ಸ್ಥಲವೆಂದರೆ ಕಾಶ್ಮೀರ ಎಂದು ಸ್ವಾಮಿರಾಮತೀರ್ಥರೂ ಪೃಥ್ವಿಯ ಮೇಲೆ ಎಲ್ಲಾದರೂ ಸ್ವರ್ಗವಿದ್ದರೆ ಅದು ಕಾಶ್ಮೀರದಲ್ಲಿಯೆ ಇದೆಯೆಂದು ಫಾರಸೀ ಕವಿ ಉರಫಿಯೂ ಸೌಂದರ್ಯದ ನಿವಾಸ-ಭೂಮಿಯೆಂದರೆ ಕಾಶ್ಮೀರ, ಚೇತನಾಶಕ್ತಿಯಲ್ಲಿ ಕಂಡಾಗ ಮೋಹಿನಿ ಮಂತ್ರವನ್ನು ಹಾಕಬಲ್ಲ ನಾಡೆಂದರೆ ಕಾಶ್ಮೀರ ಎಂದು ಪಂಡಿತ ಜವಾಹರಲಾಲರೂ ನಂದನವನವನ್ನು ಹೊಗಳಿ ತಮ್ಮ ಲೇಖನಿಯನ್ನು ಅಮರಗೊಳಿಸಿಕೊಂಡಿದ್ದಾರೆ.]

ಇಂತು ವರ್ಣಿತವಾದ ಕಾಶ್ಮೀರದ ಉತ್ತರ-ಪೂರ್ವದಲ್ಲಿ ಚೀನೀ ತುರ್ಕಸ್ತಾನವೂ ಉತ್ತರದಲ್ಲಿ ರಶಿಯದ ತುರ್ಕಸ್ತಾನವೂ ಹಾಗೂ ಅಫಗಾನಿಸ್ತಾನವೂ ಪಶ್ಚಿಮದಲ್ಲಿ ಪಾಕಿಸ್ತಾನವೂ ದಕ್ಷಿಣದಲ್ಲಿ ಪಾಕಿಸ್ತಾನ ಮತ್ತು ಭಾರತಗಣರಾಜ್ಯವೂ ಇವೆ. ಇದರ ಕ್ಷೇತ್ರಫಲವು ಲಕ್ಷ

ಗಳಾದರು. ಇದೇ ವರುಷ ಅಗಸ್ಟ ೧೫ರಿಂದ ಸ್ವತಂತ್ರ ಭಾರತದ ಉಪಪ್ರಧಾನ ಮಂತ್ರಿ-ಗಳೂ ಆದರು.

ಸರದಾರ ಪಟೇಲರು ಸಂಸ್ಥಾನ ಶಾಹಿ-ಯನ್ನೂ ತಮ್ಮ ವಶಕ್ಕೆ ತೆಗೆದುಕೊಂಡು ದೂರದರ್ಶಿತ್ವ ಹಾಗೂ ಚಾಣಾಕ್ಷತೆಯಿಂದ ಸುಮಾರು ೬೦೦ ಕ್ಕೆ ಮಿಕ್ಕಿದ ಸಂಸ್ಥಾನಗಳನ್ನು ಭಾರತದ ಗಣರಾಜ್ಯಕ್ಕೆ ಜೋಡಿಸಿದರು. ಹೈದರಾಬಾದದ ಸಮಸ್ಯೆಯನ್ನು ಬಗೆಹರಿಸಿದರು. ಸರದಾರರು ತಾವು ಅತ್ಯಂತ ಸಮರ್ಥ ಆಡಳಿತಗಾರರೆಂಬುದನ್ನೂ ದೃಢ ನಿರ್ಧಾರಿಗಳೆಂಬುದನ್ನೂ ಜಗತ್ತಿಗೆ ತೋರಿಸಿದರು.

೧೫-೧೨-೧೯೫೦

ಮುಂಬಯಿಯಲ್ಲಿ ಬಿರ್ಲಾ ಭವನದಲ್ಲಿ ಮುಂಜಾನೆ ೯-೩೭ಕ್ಕೆ ನಶ್ವರ ದೇಹವನ್ನು ತ್ಯಜಿಸಿದರು.

ಮನವ ಶೋಧಿಸಬೇಕು

ಮನವ ಶೋಧಿಸಬೇಕು ನಿಚ್ಚಾ ದಿನ ।
ದಿನ ಮಾಡುವ ಪಾಪ ಪುಣ್ಯದ ವೆಚ್ಚಾ ॥ ಪ ॥

ಧರ್ಮ ಅಧರ್ಮ ವಿಂಗಡಿಸಿ ಅ ।
ಧರ್ಮದ ನರಗಳ ಬೇರ ಕತ್ತರಿಸಿ ।
ನಿರ್ಮಲಾಚಾರದಿ ಚರಿಸಿ ಪರ ।
ಬಮ್ಮ ಮೂರುತಿ ಆ ಪಾದ ಕಮಲವ ಭಜಿಸಿ ॥ ೧ ॥

ಮನವ ಖಂಡಿಸಿ ಒಮ್ಮೆ ಮಾಣೋ ನಿನ್ನ ।
ತನುವ ದಂಡಿಸಿ ಪರಮಾತ್ಮನ ಕಾಣೋ ।
ಕೊನೆಗೆ ನಿನ್ನೊಳಗೆ ನೀ ಜಾಣೋ ಮುಕ್ತಿ ।
ನಿನಗೆ ದೂರಿಲ್ಲವೋ ಒಂದೇ ಗೇಣೋ ॥ ೨ ॥

ಆತನವರಿಗೆ ಕೇಡಿಲ್ಲ ಅವ ।
ಪಾತಕ ಪತಿತ ಸಂಗವ ಮಾಳ್ಪನಲ್ಲ ।
ನೀ ಆವಂತರು ಕೇಳಿರೆಲ್ಲ ನಮ- ।
ಗಾತನೇ ಗತಿ ಈವ ನಮ್ಮ ಪುರಂದರ ವಿಠಲಾ ॥ ೩ ॥

ಕಾಶ್ಮೀರಿ ಜನರ ಸಂಸ್ಕೃತಿ

[೭—೧೨—೧೯೫೦ ಗುರುವಾರ ದಿನ, ಧಾರವಾಡ ಬಾನುಲಿ ಕೇಂದ್ರದಲ್ಲಿ ಮಾಡಿದ ಭಾಷಣ]

ಭಾಷಣಕಾರರು : ಶ್ರೀ. ಗುರುನಾಥ ಜೋಶಿ.

(ಸೂಚನೆ:—ಸಮಯದ ನಿರ್ಬಂಧನೆಯ ಮೂಲಕ [ ] ಈ ಗುರುತು ಮಾಡಿದ ವಿಷಯವನ್ನು ಬಿಡಲಾಯಿತು. ಧಾರವಾಡ ಬಾನುಲಿ ಕೇಂದ್ರದ ಅಧಿಕಾರಿಗಳ ಕೃಪೆಯಿಂದ ಪ್ರಕಟಿಸಲಾಗಿದೆ.)

★

ನಂದನವನದ ಪ್ರೇಮಿಗಳೇ,

ನೀಲ ಗಗನ, ಮನೋಹರ ಮುಂಜಾವು-ಮುಚ್ಚಂಜೆ, ನಕ್ಷತ್ರಗಳಿಂದ ಮಿನುಗುವ ರಾತ್ರಿ, ಸುಳಿದಾಡುವ ತಂಗಾಳಿ, ಹಿಮಾಚಲದ ತುತ್ತತುದಿಯಲ್ಲಿ ಹೊಳೆಯುವ ಹಿಮದ ರಾಶಿ, ಎರಡು ಬೆಟ್ಟಗಳನ್ನು ಕೂಡಿಸುವ ಹಿಮದ ಪೂಲುಗಳು, ಹಿಮಾಚ್ಛಾದಿತ ಶೈಲಶೃಂಗಗಳಿಂದ ಪರಿವೇಷ್ಟಿತವಾದ ನಿರ್ಮಲ ಸರೋವರಗಳು, ಉತ್ತುಂಗ ಪೈನ್ ವೃಕ್ಷಗಳ ಸಾಲುಗಳು, ನಯನ ಮನೋಹರ ತೋಟಗಳು, ಸದಾ ನಸುನಗುತ್ತಿರುವ ಸುಂದರ ಸುಮನಗಳು, ನಿರಂತರ ಪುಟಿಯುವ ಬುಗ್ಗೆಗಳು, ಮೇಘಗಳ ಗರ್ಜನೆ, ಮಳೆಯ ಸೆಳಕು, ಸರಿತೆ-ಝರಿಗಳ ತರಂಗನಾದ, ಹಕ್ಕಿಗಳ ಇಂಚರ ಮುಂತಾದ ಅಪೂರ್ವ ಸೃಷ್ಟಿ ಸೌಂದರ್ಯದ ಕಣಿಯಾದ ಕಾಶ್ಮೀರದ ಮಹಿಮೆಯನ್ನು ಅನೇಕ ಪ್ರಾಚೀನ ಹಾಗು ಅರ್ವಾಚೀನ ಕವಿಗಳು ಕೊಂಡಾಡಿದ್ದಾರೆ.

[ಕಾಶ್ಮೀರದಷ್ಟು ರತ್ನಗರ್ಭಾ ಧರಿತ್ರಿ ಮೂಲೋಕದಲ್ಲಿ ಮತ್ತೊಂದಿಲ್ಲವೆಂದು ಕಲ್ಹಣನೂ, ಸದಾಕಾಲ ವಸಂತವಿರುವ ವಾಟಿಕೆಯೆಂದರೆ ಕಾಶ್ಮೀರ, ಚಕ್ರವರ್ತಿಗಳ ವಿಲಾಸವನ್ನು ವರ್ಧಿಸುವ ಹೂದೋಟವೆಂದರೆ ಕಾಶ್ಮೀರ, ತಪಸ್ವಿಗಳ ಮನಸ್ಸನ್ನು ಪ್ರಫುಲ್ಲಿತಗೊಳಿಸುವ ಏಕಾಂತ ಪ್ರದೇಶವೆಂದರೆ ಕಾಶ್ಮೀರ ಎಂದು ಜಹಾಂಗೀರನೂ ಪ್ರಕೃತಿಯ ಸರ್ವಸುಂದರ ಹಾಗು ದಿವ್ಯರೂಪಗಳ ದರ್ಶನ ಮಾಡಿಕೊಂಡು ಮಾನವನಿಗೆ ಆನಂದದಿಂದ ಜೀವಿಸುವದಕ್ಕೂ ಸಾಯುವದಕ್ಕೂ ಪಾವನವಾದ ದೇವಲೋಕವೆಂದರೆ ಕಾಶ್ಮೀರ ಎಂದು ಪಾಯರಿಯೂ ಹಕ್ಕಿಗಳ ಕಲರವಪ್ರವಾಹದಿಂದ ತರಂಗಿತವಾಗುತ್ತಿರುವ ಮುಂಜಾವಿನ ಶಾಂತಿಯ ಸಮುದ್ರ, ದಾರಿಯ ಇಕ್ಕೆಲಗಳಲ್ಲಿ ನಗುತ್ತಿರುವ ಸುಮನ ಸಮೂಹ, ಚಿನ್ನದ ಸಿರಿಯಿಂದ ಕಂಗೊಳಿಸುವ ಗಹನ ಮೇಘಮಾಲೆಯ ತಾಣವೆಂದರೆ ಕಾಶ್ಮೀರ ಎಂದು ರವೀಂದ್ರನಾಥ ಠಾಕೂರರೂ ತಂಬೂರಿಯನ್ನು ಮೀಂಟುತ್ತಿರುವಂತೆ ಕಂಗೊಳಿಸುವ ಬುಗ್ಗೆಗಳಿಂದ ಹಾಗು ಮಲ್ಹಾರ ರಾಗವನ್ನು ಹಾಡುವ ಹವೆಯಿಂದ ಶೋಭಿತವಾದ ಸ್ಥಲವೆಂದರೆ ಕಾಶ್ಮೀರ ಎಂದು ಸ್ವಾಮಿ ರಾಮತೀರ್ಥರೂ ಪೃಥ್ವಿಯ ಮೇಲೆ ಎಲ್ಲಾದರೂ ಸ್ವರ್ಗವಿದ್ದರೆ ಅದು ಕಾಶ್ಮೀರದಲ್ಲಿಯೆ ಇದೆಯೆಂದು ಫಾರಸೀ ಕವಿ ಉರಫಿಯೂ ಸೌಂದರ್ಯದ ನಿವಾಸ-ಭೂಮಿಯೆಂದರೆ ಕಾಶ್ಮೀರ, ಚೇತನಾಶಕ್ತಿಯಲ್ಲಿ ಕಂಡಾಗ ಮೋಹಿನಿ ಮಂತ್ರವನ್ನು ಹಾಕಬಲ್ಲ ನಾಡೆಂದರೆ ಕಾಶ್ಮೀರ ಎಂದು ಪಂಡಿತ ಜವಾಹರಲಾಲರೂ ನಂದನವನವನ್ನು ಹೊಗಳಿ ತಮ್ಮ ಲೇಖನಿಯನ್ನು ಅಮರಗೊಳಿಸಿಕೊಂಡಿದ್ದಾರೆ.]

ಇಂತು ವರ್ಣಿತವಾದ ಕಾಶ್ಮೀರದ ಉತ್ತರ-ಪೂರ್ವದಲ್ಲಿ ಚೀನೀ ತುರ್ಕಸ್ತಾನವೂ ಉತ್ತರದಲ್ಲಿ ರಶಿಯದ ತುರ್ಕಸ್ತಾನವೂ ಹಾಗೂ ಅಫಗಾನಿಸ್ತಾನವೂ ಪಶ್ಚಿಮದಲ್ಲಿ ಪಾಕಿಸ್ತಾನವೂ ದಕ್ಷಿಣದಲ್ಲಿ ಪಾಕಿಸ್ತಾನ ಮತ್ತು ಭಾರತಗಣರಾಜ್ಯವೂ ಇವೆ. ಇದರ ಕ್ಷೇತ್ರಫಲವು ೮೪

ಸಾವಿರ ೪ನೂರಾ ೭೧ ಚೌರಸ ಮೈಲು ಇದೆ. ಇದರಲ್ಲಿ ಸುಮಾರು ೪೦ಲಕ್ಷ ೩೧ ಸಾವಿರ ೬ನೂರಾ ೧೫ಜನರು ವಾಸಿಸುತ್ತಾರೆ. ಇವರಲ್ಲಿ ನೂರಕ್ಕೆ ೭೭·೧೧ ಮುಸಲ್ಮಾನರೂ ೨೦·೧೨ ಹಿಂದುಗಳೂ ೨.೭೭ ಬೌದ್ಧ ಹಾಗು ಸಿಖ್ಖರೂ ಇದ್ದಾರೆ. ಜಮ್ಮೂ-ಶ್ರೀನಗರದ ಭಾಗಗಳಲ್ಲಿ ಹಿಂದೂಗಳು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಈ ಕಾಶ್ಮೀರಿ ಜನತೆ ಹಳ್ಳಿಗಳಲ್ಲಿ ಹರಡಿಕೊಂಡಿದೆ. ಚಳಿಗಾಲದಲ್ಲಿ ಒಂದು ಕಡೆಯವರ ಸಂಪರ್ಕವು ಇನ್ನೊಂದು ಕಡೆಯವರಿಗಿರುವುದಿಲ್ಲ. ಇವರ ಸಂಸ್ಕೃತಿಯು ಕಾಶ್ಮೀರದ ಮೇರೆಗಳಲ್ಲಿ ಇರುವ ಜನರ ಆಗಮನದಿಂದಲೂ ಕಾಶ್ಮೀರದ ಭೂ-ಜಲ-ವಾಯುಗುಣಗಳ ಹಾಗೂ ಅರಸರ ಪ್ರಭಾವದಿಂದಲೂ ರೂಪುಗೊಳ್ಳುತ್ತ ಬಂದಿದೆ ಯಾವರೂ ಕಾಶ್ಮೀರಿಗಳಲ್ಲಿ ಹಿಂದೂ ಸಂಸ್ಕೃತಿಯೆ ವಿಶೇಷವಾಗಿ ಕಂಡುಬರುತ್ತಿದೆಯೆಂದು ಕಾಶ್ಮೀರದ ಇತಿಹಾಸ ಹಾಗು ಸಾಹಿತ್ಯದಿಂದ ಹೇಳಬಹುದಾಗಿದೆ. ಏಕೆಂದರೆ ಸಾಹಿತ್ಯವು ಜನಜೀವನದ ಪ್ರತಿಬಿಂಬವಾಗಿದೆ, ಸಂಸ್ಕೃತಿಯ ಭಾಂಡಾರವಾಗಿದೆ.

ಧರ್ಮ.

ಮಹಾಭಾರತ ಕಾಲಕ್ಕಿಂತ ಮುಂಚೆಯೆ ಕಾಶ್ಮೀರವು ಪ್ರಸಿದ್ಧಿಯನ್ನು ಪಡೆದಿತ್ತು. ಸುಮಾರು ೬೦೦ವರುಷಗಳ ಹಿಂದಿನ ವರೆಗೂ ಆರ್ಯ-ಸಂಸ್ಕೃತಿಯ ನಾಡಾಗಿತ್ತು. ಹಿಂದೂ ಧರ್ಮದ ಬೀಡಾಗಿತ್ತು. ಆದರೆ ಶಕ ಜಾತಿಯ ಸಿಕಂದರನೆಂಬ ಒಬ್ಬ ಕಾಶ್ಮೀರದ ಅರಸನ ಕಾಲದಲ್ಲಿ ಒಬ್ಬ ಹಿಂದೂ ಪಂಡಿತನ ತಪ್ಪಿನಿಂದಲೂ ಔರಂಗಜೇಬನ ಧಾರ್ಮಿಕ ನೀತಿಯಿಂದಲೂ ಸುಮಾರು ಮುಕ್ಕಾಲು ಪಾಲು ಕಾಶ್ಮೀರದ ಜನತೆ ಇಸ್ಲಾಂ ಧರ್ಮವನ್ನು ಸ್ವೀಕರಿಸಬೇಕಾಯಿತು. ತುರುಷ್ಕ ಕನಿಷ್ಕ ರಾಜನ ಕಾಲದಲ್ಲಿ ಬೌದ್ಧಧರ್ಮವನ್ನೂ ಅಶೋಕನೆಂಬ ಜೈನ ಅರಸನ ಕಾಲದಲ್ಲಿ ಜೈನಧರ್ಮವನ್ನೂ ರಣಜಿತಸಿಂಹನ ಕಾಲದಲ್ಲಿ ಸಿಖ್ಖ ಧರ್ಮವನ್ನೂ ಕೆಲವರು ಅಂಗೀಕರಿಸಿದರು. ಇದೆಲ್ಲಕ್ಕೂ ಪರಿಹಾಸಪುರ, ಜಮ್ಮೂ-ಶ್ರೀನಗರ ಮುಂತಾದ ಕಡೆಗಳಲ್ಲಿ ಸಿಕ್ಕುವ ಧಾರ್ಮಿಕ ಕುರುಹುಗಳೇ ಸಾಕ್ಷಿಯಾಗಿವೆ. ದಾಮೋದರನೆಂಬ ಅರಸನ ಕಾಲದಲ್ಲಿ ಶೈವ ಸಂಪ್ರದಾಯದ ಪ್ರಚಾರವು ಹೆಚ್ಚಾದುದರಿಂದ ಕಾಶ್ಮೀರಿ ಹಿಂದೂಗಳು ವಿಶೇಷತಃ ಶಿವಭಕ್ತರೇ ಆಗಿದ್ದಾರೆ. ಕಾಳಿ, ಕ್ಷೀರಭವಾನಿ, ಶಂಕರನಾಥ, ಅಮರನಾಥ, ಶಂಕರಾಚಾರ್ಯರಿಂದ ಸ್ಥಾಪಿತ ಶಿವಲಿಂಗೇಶ್ವರನನ್ನು ಪೂಜಿಸುತ್ತಾರೆ. ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾದ ಅಮರನಾಥನ ಜಾತ್ರೆಯು ಶ್ರಾವಣಪೂರ್ಣಿಮೆಗೂ ಗಂಧರ್ಬಲದ ಕ್ಷೀರಭವಾನಿಯ ಜಾತ್ರೆಯು ಆಷಾಢದಲ್ಲಿಯೂ ಆಗುತ್ತವೆ. ಈ ಜಾತ್ರೆಗಳಿಗೆ ಅನೇಕ ಹಿಂದೂಗಳು ಹೋಗಿ ಹೋಮ-ಹವನ ಯಜ್ಞಯಾಗ, ದೇವತಾರ್ಚನೆ ಮಾಡುತ್ತಾರೆ.

ನಾನಾ ಧರ್ಮಗಳ ತಿಕ್ಕಾಟದ ಫಲವಾಗಿ ಜರ್ಜರವಾಗಿದ್ದ ಕಾಶ್ಮೀರದ ಜನತೆ ಜಯಾಪೀಡ, ಅವಂತಿವರ್ಮ, ಜೈನುಲ್ ಆಬ್ದೀನರ ಕಾಲದಲ್ಲಿ ವಾಸ್ತುಶಿಲ್ಪ-ಲಲಿತ ಕಲೆಗಳಲ್ಲಿ ಮೇಲ್ಮೆಯನ್ನು ಪಡೆದ ಧಾರ್ಮಿಕ ಸ್ವಾತಂತ್ರ್ಯ ಸುಖವನ್ನು ಅನುಭವಿಸಿತು. ಜೈನುಲ್ ಆಬ್ದೀನನು ಧರ್ಮದ ಹೆಸರಿನಲ್ಲಿ ರಾಕ್ಷಸೀ ಕೃತ್ಯಮಾಡುವವರನ್ನು ಕಠೋರವಾಗಿ ದಂಡಿಸಿದನು. ತನ್ನ ಕಾಯಿಲೆಯನ್ನು ಗುಣಪಡಿಸಿದ ಶ್ರೀ. ಭಟ್ಟನೆಂಬ ವೈದ್ಯನನ್ನು ತನ್ನ ಅಮಾತ್ಯನನ್ನಾಗಿ ಮಾಡಿಕೊಂಡನು. ಆಗ ಯಜ್ಞಯಾಗಾದಿಗಳು ಮಂದಿರಗಳಲ್ಲಿ ಪೂಜೆಗಳು ನಡೆಯತೊಡಗಿದವು ಮುಸ್ಲಿಮರು ಹಿಂದುಗಳ ಆಸ್ತಿಯನ್ನು ತಿರುಗಿಕೊಟ್ಟರು ಇದರಿಂದಾಗಿ ಕಾಶ್ಮೀರದಲ್ಲಿ ಹಿಂದೂ ಸಂಸ್ಕೃತಿಯು ಪುನರುಜ್ಜೀವನಗೊಂಡು ಇಂದಿಗೂ ಬಾಳಿದೆ. ಹಿಂದೂ-ಮುಸ್ಲಿಮರು ಸಖ್ಯದಿಂದ ಇದ್ದು ತಮ್ಮತಮ್ಮ ಧರ್ಮಾಚರಣೆಯಲ್ಲಿ ನಿರತರಾಗಿದ್ದಾರೆ. ಇಂದಿಗೂ ಅಲ್ಲಿ ಧಾರ್ಮಿಕ ಸ್ವಾತಂತ್ರ್ಯವಿದೆ. ಶುದ್ಧಿ-ಸಂಘಟನೆಯ ಕಾರ್ಯಗಳೂ ನಡೆಯುತ್ತಿವೆ. ಏಕೆಂದರೆ ಇಂದು ಕಾಶ್ಮೀರಿಗಳು ಶೇಖ್ ಅಬ್ದುಲ್ಲಾರವರಲ್ಲಿ ಜೈನುಲ್ ಆಬ್ದೀನನನ್ನು ಕಾಣುತ್ತಿದ್ದಾರೆ.

ಇತರ ಕಡೆಗಳಲ್ಲಿರುವಂತೆ ಕಾಶ್ಮೀರಿಗಳಲ್ಲೂ ನಾವು ಆಗಾಗ್ಗೆ ಅನೇಕ ಅಂಧಶ್ರದ್ಧೆಗಳನ್ನು ಕಾಣುತ್ತೇವೆ. ಶ್ರೀನಗರದ ಬಳಿ ಒಂದು ಬೆಟ್ಟದ ಮೇಲಿರುವ ಪರಿಮಹಲಿನಲ್ಲಿ ದೇವತೆಗಳೂ ದೇವಕನ್ಯೆಯರೂ ವಾಸಿಸುತ್ತಿದ್ದಾರೆಂದು ಕೆಲವರು ನಂಬಿದರೆ, ಅಲ್ಲಿ ಆದಿಶೇಷನ ಬಳಗವೇ ಇದೆ ಎಂದು ಕೆಲವರು ನಂಬುತ್ತಾರೆ. ಅಹಮ್ಮದಶಾಹನು ಕಟ್ಟಿಸಿದ ಕಟ್ಟಿಗೆಯ ಮಸೀದೆಯನ್ನು ದೇವರಲ್ಲಿ ವಿಶ್ವಾಸವಿಲ್ಲದವರು ಪ್ರವೇಶಿಸಿದರೆ ಕುರುಡರಾಗಿ ನರಕಕ್ಕೆ ಹೋಗುತ್ತಾರೆಂದೂ ನಂಬುಗೆಯಿದೆ.

ಶ್ರೀನಗರದಲ್ಲಿ ನೂರಜಹಾನಳು ಒಂದು ಮಸೀದೆಯನ್ನು ಕಟ್ಟಿಸಿದ್ದಾಳೆ. ಅದು ಸ್ತ್ರೀ ನಿರ್ಮಿತವಾದುದರಿಂದ ನಮಾಜಿಗೆ ಯೋಗ್ಯವಾದುದಲ್ಲವೆಂದೂ ಭಾವಿಸುತ್ತಾರೆ.

ಸಾಹಿತ್ಯ.

ಸಂಸ್ಕೃತ ಸಾಹಿತ್ಯಕ್ಕೆ ಕಾಶ್ಮೀರವು ಕೊಟ್ಟ ಕಾಣಿಕೆಯು ಅಪೂರ್ವವಾಗಿದೆ. ಕಲ್ಹಣನು ರಾಜತರಂಗಿಣಿಯಲ್ಲಿ ಕಾಶ್ಮೀರದ ವಿದ್ವತ್ತೆ, ಶಿಕ್ಷಣ ಪದ್ಧತಿ ಮುಂತಾದವು ಸ್ವರ್ಗದಲ್ಲಿಯೂ ಸಿಕ್ಕುವುದು ಅಪರೂಪವೆಂದು ಬರೆದಿದ್ದಾನೆ. ಆದುದರಿಂದಲೇ ಕಾಶ್ಮೀರವು ಶಾರದಾ ಪೀಠವೆಂದು ಪ್ರಸಿದ್ಧಿಯನ್ನು ಪಡೆದಿದೆ. ಇದು ಸಾಹಿತ್ಯ ನಿರ್ಮಾಣಕ್ಕೆ ಬೇಕಾದ ಸೃಷ್ಟಿಯ ಬೆಡಗು, ಏಕಾಂತಸ್ಥಾನ, ನಿರ್ಮಲನೀರು ಮುಂತಾದುವನ್ನು ಕೊಡುತ್ತದೆ. ಅಂತೆಯೇ ಕಾಶ್ಮೀರದಲ್ಲಿ ಶ್ರೇಷ್ಠ ಸಾಹಿತಿಗಳೂ ಮೇಧಾವಿಗಳೂ ಜನಿಸಿದ್ದಾರೆ. ಅಪೂರ್ವ ಸಾಹಿತ್ಯವನ್ನು ನಿರ್ಮಿಸಿದ್ದಾರೆ.

ಪ್ರತ್ಯಭಿಜ್ಞಾ-ದರ್ಶನವು ಕಾಶ್ಮೀರದಲ್ಲಿಯೆ ಹುಟ್ಟಿ ಬೆಳೆಯಿತು. ಶೈವಾದ್ವೈತದ ದುಂದುಭಿಯು ಮೊಳಗಿತು. ತ್ರಿಪುರಸುಂದರಿಯ ಕೂಡ ಸಂಬಂಧವಿರುವ ತಂತ್ರಗಳ ಗ್ರಂಥಗಳು ನಿರ್ಮಾಣವಾದುವು. ಕಾವ್ಯಶಾಸ್ತ್ರದ ಬಗೆಗೆ ಇಲ್ಲಿ ನಿರ್ಮಾಣವಾದಷ್ಟು, ಸಾಹಿತ್ಯ ಇನ್ನೆಲ್ಲಿಯೂ ಆಗಿಲ್ಲ. ಭೌಮಿಕ ಭಟ್ಟನು 'ರಾವಣಾರ್ಜುನ' ಮಹಾಕಾವ್ಯವನ್ನು ಬರೆದರೆ ರತ್ನಾಕರನು 'ಹರವಿಜಯ' ಎಂಬ ಮಹಾಕಾವ್ಯವನ್ನು ಬರೆದನು. ಕ್ಷೇಮೇಂದ್ರನು 'ಕವಿಕಂಠಾಭರಣ' 'ಔಚಿತ್ಯವಿಚಾರ ಚರ್ಚಾ' ರಚಿಸಿದರೆ ಕಲ್ಹಣನು 'ರಾಜತರಂಗಿಣಿ' ಎಂಬ ಪ್ರಸಿದ್ಧ ಐತಿಹಾಸಿಕ ಕಾವ್ಯವನ್ನು ರಚಿಸಿದನು. 'ಕಥಾಸರಿತ್ಸಾಗರ'ವನ್ನು ಸೋಮದೇವನು ರಚಿಸಿದರೆ ಭಾಹಮನು 'ಕಾವ್ಯಾಲಂಕಾರ'ವನ್ನು ರಚಿಸಿದನು. ಅಲಂಕಾರಗಳಿಗೆ ಸ್ತ್ರೀಯ ರೂಪಗೊಟ್ಟ ಉದ್ಭಟ, ಶ್ರವ್ಯಕಾವ್ಯದಲ್ಲಿ ರಸದ ಮಹತ್ವವನ್ನು ಅರುಹಿದ ರುದ್ರಟ, ಅಲಂಕಾರ ಶಾಸ್ತ್ರದ ಪ್ರಕಾಂಡ ಪಂಡಿತನಾದ ಮಮ್ಮಟ, 'ನ್ಯಾಯಮಂಜರಿ'ಯನ್ನು ರಚಿಸಿದ ಜಯಂತ ಭಟ್ಟ, ವೈಯಾಕರಣಿಯಾದ ಕೈಯಟ ಕಾಶ್ಮೀರಿಗಳೇ ಆಗಿದ್ದರು. ಮಹಾಕವಿ ಕಾಲಿದಾಸನು ಬರೆದ ಹಿಮಾಲಯದ ವರ್ಣನೆಯನ್ನು ನೋಡಿ ಆತನೂ ಕಾಶ್ಮೀರಿಯೆ ಆಗಿರಬೇಕೆಂದು ಕೆಲವರು ಹೇಳುತ್ತಾರೆ. ಪಾತಂಜಲಿ, ಚರಕ, ಭಾಸ್ಕರಾಚಾರ್ಯ, ಆರ್ಯಭಟ್ಟ, ಕೋಕ ಮುಂತಾದ ಹೆಸರಾಂತ ಸಾಹಿತ್ಯವಿಶಾರದರೂ ಕಾಶ್ಮೀರಿಗಳೇ ಆಗಿದ್ದಾರೆ. ಕರ್ನಾಟಕಕ್ಕೆ ಬಂದು ನೆಲಸಿ 'ವಿಕ್ರಮಾಂಕದೇವ ಚರಿತ'ವನ್ನು ಬರೆದ ಬಿಲ್ಹಣನೂ ಕಾಶ್ಮೀರದವನೇ. ಇಂತು ಕಾಶ್ಮೀರಿಗಳು ಸಂಸ್ಕೃತ ಸಾಹಿತ್ಯಕ್ಕೆ ಕೊಟ್ಟ ಕಾಣಿಕೆಗಾಗಿ ಭಾರತವು ಅವರಿಗೆ ಚಿರ ಋಣಿಯಾಗಿರಬೇಕಾಗಿದೆ. ಇಂದಿಗೂ ಮಹಮ್ಮದ ತಾಹೀರ ಗನೀ, ಶೇಖನೂರುದ್ದೀನ, ಮುನ್ಶಿ ಭವಾನಿದಾಸ, ಲಾಲದೇವ ಮುಂತಾದ ಪ್ರಸಿದ್ಧ ಕವಿಗಳನ್ನೂ ಪಂಡಿತ ಹೃದಯನಾಥ ಕುಂಜರು, ದಿ| ತೇಜ ಬಹಾದ್ದೂರ ಸಪ್ರು, ಮಾನ್ಯ ಕೈಲಾಸನಾಥ ಕಾಟಜೂ, ಡಾ|| ಕಿಚಲೂ ಮತ್ತು ಮಾನ್ಯ ಶ್ರೀ. ಜವಾಹರಲಾಲ ನೆಹರು ಮುಂತಾದ ಮೇಧಾವಿಗಳನ್ನು ಭಾರತಕ್ಕೆ ಕೊಟ್ಟ ನಾಡೂ ಕಾಶ್ಮೀರವೇ.

ಮೊದಲು ಕಾಶ್ಮೀರದ ಭಾಷೆ ಸಂಸ್ಕೃತವಾಗಿತ್ತು. ಅದರಿಂದ ಕಾಶ್ಮೀರಿಭಾಷೆಯೊಂದು ಜನ್ಮ ತಾಳಿತು. ಗಶ್ ಎಂದರೆ ಗಚ್ಛ, ಮಗ ಎಂದರೆ ಮಾರ್ಗ, ಪೋಶ್ ಎಂದರೆ ಪುಷ್ಪ ಮುಂತಾದ ಶಬ್ದಗಳು ಕಾಶ್ಮೀರಿ ಭಾಷೆಯು ಸಂಸ್ಕೃತ-ಜನ್ಯವಾದುದು ಎಂಬುದಕ್ಕೆ ಪ್ರಮಾಣವಾಗಿವೆ. ಅದರಲ್ಲಿಯೂ ಇಂದು ಸಾಹಿತ್ಯ ನಿರ್ಮಾಣವಾಗತೊಡಗಿದೆ. ಇಂದು ಕಾಶ್ಮೀರದ ರಾಜಭಾಷೆ ಉರ್ದು ಆಗಿದ್ದರೂ ಅಲ್ಲಿ ಕಾಶ್ಮೀರಿ, ಡೋಂಗರಿ, ಹಿಂದೀ, ಪಾಲೀ, ಪಾರದೀ, ಪಂಜಾಬೀ ಭಾಷೆಗಳು ಬಳಕೆಯಲ್ಲಿವೆ. ಅವುಗಳಲ್ಲಿಯೂ ಒಳ್ಳೆಯ ಸಾಹಿತ್ಯವು ನಿರ್ಮಾಣವಾಗತೊಡಗಿದೆ.

[ಉದ್ಯೋಗ.

ಕಾಶ್ಮೀರದಲ್ಲಿ ನೀರಿನ ಕೊರತೆ ಇಲ್ಲ. ಸರೋವರಗಳ ಕೊರತೆ ಇಲ್ಲ. ನದಿಗಳ ಅಭಾವವಿಲ್ಲ. ಕಾಶ್ಮೀರಿಗಳು ನದಿಗಳ ಹಾಗೂ ಸರೋವರಗಳ ಉಪಯೋಗವನ್ನು ಸರಿಯಾಗಿ ಮಾಡಿಕೊಂಡಿದ್ದಾರೆ. ಜೇಲಂ ನದಿಯಿಂದ ಕಾಲುವೆ ತೆಗೆದುಕೊಂಡು ಅದರ ಎರಡೂ ದಂಡೆಗಳ ಮೇಲೆ ಶ್ರೀನಗರವನ್ನು ನಿರ್ಮಿಸಿಕೊಂಡಿದ್ದಾರೆ. ನದಿಗಳ

ಹಾಗು ಶಾಲುವೆಗಳ ಮುಖಾಂತರವಾಗಿ ವ್ಯಾಪಾರವನ್ನು ಮಾಡುತ್ತಾರೆ. ಪುರುಷರು ಮೀನುಗಾರಿಕೆ, ದ್ರಾಕ್ಷಿ ದಾಳಿಂಬ ಅಖರೋಟ ಆಲೂಬುಖಾರಾ ಮುಂತಾದ ಫಲಗಳ ತೋಟಗಾರಿಕೆ, ಕುರಿಸಾಕುವಿಕೆ, ಉಣ್ಣೆಬಟ್ಟೆ ನೇಯುವಿಕೆ, ಕಟ್ಟಿಗೆಯ ಕೆತ್ತನೆಯ ಕೆಲಸ, ಕೇಸರಿ ಬತ್ತ ಗೋವಿನಜೋಳದ ಕೃಷಿ ಮುಂತಾದ ಉದ್ಯೋಗಗಳನ್ನು ಮಾಡುತ್ತಾರೆ. ಡಲ್ ಸರೋವರದಲ್ಲಿ ದೋಣಿಯಲ್ಲಿ ಹುಲ್ಲು, ಅದರ ಮೇಲೆ ಮಣ್ಣು ಹಾಕಿ ಅದರಲ್ಲಿ ಕಾಯಿಪಲ್ಯಗಳನ್ನು ಬೆಳೆಸುವ ರೀತಿಯು ಅಚ್ಚರಿಯನ್ನುಂಟುಮಾಡುತ್ತದೆ. ಇವಕ್ಕೆ ತೇಲಾಡುವ ತೋಟಗಳೆನ್ನುತ್ತಾರೆ. ಮಾನ್ಯ ಜಯರಾಮದಾಸ ದೌಲತರಾಮರೊಡನೆ ಕಾಶ್ಮೀರದಲ್ಲಿ ಪ್ರವಾಸ ಮಾಡುತ್ತಿರುವಾಗ ಈ ತೋಟಗಳಿಂದ ನಮಗೆ ಸೌತೇಕಾಯಿಗಳು ತಿನ್ನಲು ದೊರಕಿವೆ. ಕೆಲವರು ಇವುಗಳನ್ನು ಕದ್ದು ತಮ್ಮ ತೋಟಗಳಿಗೆ ಜೋಡಿಸಿಕೊಂಡ ಕತೆಗಳು ಸೋಜಿಗವಾಗಿರುತ್ತವೆ. ಕೇಸರಿಯ ಕೃಷಿಯು ಪಾಮಪುರದಲ್ಲಿ ಮಾತ್ರ ನಡೆಯುತ್ತದೆ. ಇದು ಬಹಳ ಕಷ್ಟ ಪಾರ್ಯವಾದುದು. ಕೇಸರಿಯನ್ನು ಬೆಳೆಯಬೇಕಾದರೆ ಎಂಟು ಬಾರಿ ಭೂಮಿಯನ್ನು ಊಳಿ ಮಣ್ಣನ್ನು ಹಂಜಿಯಂತೆ ಮಾಡಬೇಕಾಗುತ್ತದೆ. ಮಾರ್ಚದಲ್ಲಿ ಕೃಷಿಯು ಆರಂಭವಾಗುತ್ತದೆ. ನವಂಬರದಲ್ಲಿ ಹೂಗಳು ದೊರೆಯುತ್ತವೆ. ಈ ಹೂವುಗಳನ್ನು ಆಯುವ ಬಾಲೆಯರಿಗೆ ಕುಂಗ್‌ಪೋಶ್ ಎನ್ನುವರು. ಕುಂಗ ಎಂದರೆ ಕೇಸರಿ, ಪೋಶ್ ಎಂದರೆ ಪುಷ್ಪ.

ಕಾಶ್ಮೀರಿ ಪುರುಷರಂತೆಯೇ ಕಾಶ್ಮೀರಿ ಲಲನೆಯರೂ ಸದಾ ಉದ್ಯೋಗದಲ್ಲಿ ತೊಡಗಿರುತ್ತಾರೆ. ಅವರು ಮನೆಯಲ್ಲಿ ಉಣ್ಣೆಯನ್ನು ನೂಲುತ್ತಾರೆ, ಪುರುಷರು ನೆಯ್ದ ಶಾಲುಗಳ ಮೇಲೆ ಕಸೂತಿಯನ್ನು ಹಾಕುತ್ತಾರೆ. ಒಂದೊಂದು ಶಾಲು ಜೋಡಿಯ ಬೆಲೆಯು ಎರಡು ಸಾವಿರ ರೂಪಾಯಿಗಳಿಗೆ ಮಿಕ್ಕಿರುತ್ತದೆ. ಕಾಶ್ಮೀರದ ಉಣ್ಣೆಯ ಬಟ್ಟೆಗಳಲ್ಲಿ ಪಶ್ಮೀನಾ, ಲುಯಿ, ಪಟ್ಟೂ, ರತ್ನಗಂಬಳಿಗಳು ಕೂಡ ಪ್ರಸಿದ್ಧವಾಗಿವೆ. ತಂದೆ ತಾಯಂದಿರು ತಮ್ಮ ಮಕ್ಕಳಿಗೂ ಉದ್ಯೋಗವೊಂದನ್ನು ಕಲಿಸುತ್ತಾರೆ. ಕಾಶ್ಮೀರದ ರೇಶ್ಮೆಯ ಉದ್ಯೋಗವೂ ಉತ್ತಮವಾಗಿದೆ. ಕಾಶ್ಮೀರಿಗಳು ಸದಾ ಉದ್ಯೋಗಶೀಲರಾಗಿರುತ್ತಾರೆ. ಅವರನ್ನು ಕಾಶ್ಮೀರದ ಸಮಸ್ತ ಸೌಂದರ್ಯವು ನಿಷ್ಕ್ರಿಯರನ್ನಾಗಿ ಉಳಿಯಲೀಗೊಡುವುದಿಲ್ಲ.]

ನಡತೆ-ನಡಾವಳಿ.

ಬೆಟ್ಟಗಳಲ್ಲಿ ವಾಸಿಸುವವರು ಸಾಮಾನ್ಯವಾಗಿ ಕುಳ್ಳರಿರುತ್ತಾರೆ. ಆದರೆ ಕಾಶ್ಮೀರಿಗಳು ಹಾಗಿರುವುದಿಲ್ಲ. ಅವರು ಕಟ್ಟಿಗೆಯ ಮನೆಗಳಲ್ಲಿಯೂ ಗೃಹನೌಕೆಗಳಲ್ಲಿಯೂ ವಾಸಿಸುತ್ತಾರೆ. ಸ್ತ್ರೀಪುರುಷರು ಹೆಗಲಿನಿಂದ ಮೀನಗಂಡದವರೆಗೆ 'ಫಿರನ್' ಎಂಬ ನಿಲುವಂಗಿಯನ್ನು ಧರಿಸುತ್ತಾರೆ. ಅವರ ಬಣ್ಣ ಕೆಂಪು, ಅವರ ನೀಳವಾದ ಮೂಗು ಆರ್ಯರ ನೆನಹು ತಂದು ಕೊಡುತ್ತದೆ. ಪಂಡಿತರು ತಲೆಗೆ ರುಮಾಲು ಸುತ್ತುತ್ತಾರೆ. ಗಂಧವು ಭವ್ಯವಾಗಿ ಅವರ ಹಣೆಯ ಮೇಲೆ ಶೋಭಿಸುತ್ತಿರುತ್ತದೆ. ಕಾಶ್ಮೀರಿ ಲಲನೆಯರು ಬಹು ಸುಂದರಿಯರು. ಅವರ ಮೈಕಟ್ಟು, ನಡಿಗೆ ಮೋಹಕ. ಕೊಕ್ಕೋಟಕನು ರತಿರಹಸ್ಯದಲ್ಲಿ ಕಾಶ್ಮೀರಿ ವನಿತೆಯರು ಅತ್ಯಂತ ರೂಪವತಿಯರು ಸುಂದರ ವಸನಧಾರಿಗಳು ಸ್ವಚ್ಛರು ಆಗಿರುವರೆಂದು ವರ್ಣಿಸಿದ್ದಾನೆ. ಹಿಂದೂ ರಮಣಿಯರು ಹಣೆಗೆ ಕುಂಕುಮ ಹಚ್ಚಿಕೊಳ್ಳುತ್ತಾರೆ. ಕರ್ಣಾಭರಣಗಳನ್ನೂ ಬಳೆಗಳನ್ನೂ ಧರಿಸುತ್ತಾರೆ. ನಮ್ಮಲ್ಲಿಯ ಲಮಾಣಿಗಳಂತೆ ಕೂದಲನ್ನು ಬಾಚಿಕೊಂಡಿರುತ್ತಾರೆ. ಫಿರನ್ನದ ಮೇಲೆ ಒಂದು ತೆಳುವಾದ ಉಪ್ಪರಣೆಯನ್ನು ಧರಿಸುತ್ತಾರೆ.

ಕಾಶ್ಮೀರಿಗಳು ಉದ್ಯೋಗಶೀಲರು. ಆದರೆ ಕಾಶ್ಮೀರಿ ಪಂಡಿತರು ತಮ್ಮ ಕೈಯಿಂದ ಕೆಲಸ ಮಾಡುವದು ಒಳಿತಲ್ಲವೆಂದು ತಿಳಿಯುತ್ತಾರೆ. ನೌಕರಿ ಮಾಡುವದೇ ಅವರಿಗೆ ಇಷ್ಟವಾದುದು. ವ್ಯಾಪಾರ, ಉದ್ಯೋಗವನ್ನು ಮಾಡುವ ಸಿರಿವಂತ ಕಾಶ್ಮೀರಿ ಬ್ರಾಹ್ಮಣನ ಮದುವೆ ಬೇಗ ಆಗುವದಿಲ್ಲ, ಆದರೆ ಒಂದು ಅಂಗಡಿಯಲ್ಲಿ ನೌಕರಿ ಮಾಡುವ ಬ್ರಾಹ್ಮಣ ತರುಣನ ಮದುವೆಯು ಬೇಗ ಆಗುತ್ತದೆ. ಕಾಶ್ಮೀರಿ ಪಂಡಿತರಲ್ಲಿ ರಾಜಯಕ್ಷ್ಮರೋಗವು ಬೆಳೆದು ಅವರಲ್ಲಿ ಸಂತಾನೋತ್ಪತ್ತಿ ಶಕ್ತಿಯು ಕುಗ್ಗುವದರಿಂದ ಅವರ ಸಂಖ್ಯೆಯು ದಿನದಿನಕ್ಕೆ ಕಡಿಮೆಯಾಗುತ್ತಲಿದೆ. ಕಾಶ್ಮೀರಿ ಬ್ರಾಹ್ಮಣ ಒಬ್ಬ ಪಂಜಾಬೀ ಹಿಂದೂ ಮುಟ್ಟಿದ ಮತ್ತು ತಯಾರಿ-

ದನೆ ಆಹಾರವನ್ನು ಸೇವಿಸುವುದಿಲ್ಲ ಆದರೆ ಕಾಶ್ಮೀರಿ ಮುಸಲ್ಮಾನನ ಕೈಯಿಂದ ನೀರನ್ನು ಕುಡಿಯುತ್ತಾನೆ, ಒಲೆಯನ್ನು ಹೊತ್ತಿಸಿಕೊಳ್ಳುತ್ತಾನೆ, ಕೊಟ್ಟಿಯನ್ನು ಲಟ್ಟಿಸಿಕೊಳ್ಳುತ್ತಾನೆ. ಹೀಗೇಕೆ ? ಎಂದು ಅವನನ್ನು ಕೇಳಿದರೆ ಅವನು ಉತ್ತರಿಸುತ್ತಾನೆ. 'ಮುಸಲ್ಮಾನನಾದರೇನಾಯಿತು ? ಅವನು ನನ್ನ ಸೋದರನೆ ಅಲ್ಲವೆ ?' ಎಂದು ನಿಜ ಕೆಲಸಮಯದ ಹಿಂದಿನ ತನಕ ಕಾಶ್ಮೀರದ ಹಿಂದೂ–ಮುಸ್ಲಿಮರು ಸಹೋದರರಂತೆ ಇದ್ದರು. ಆದರೆ ಪಾಕಿಸ್ತಾನಿಗಳ ಪ್ರಚಾರದಿಂದಾಗಿ ಮುಸಿಂ ಬಾಲಕರೂ ಹಿಂದೂ ಮುಟ್ಟಿದ ಆಹಾರವನ್ನು ತಿನ್ನುತ್ತಿದ್ದಿಲ್ಲ ಆದರೆ ಈ ನಡತೆಯು ಇದೀಗ ಅಳಿದಿದೆ. ಕಾಶ್ಮೀರದ ಹಿಂದೂಗಳೂ ಮುಸ್ಲಿಮರೂ ಮಾಂಸಾಹಾರಿಗಳಾಗಿದ್ದಾರೆ. ಮೀನ, ಅನ್ನ ಅವರ ಮುಖ್ಯ ಆಹಾರ ವೈಷ್ಣವ ಸಂಪ್ರದಾಯದಲ್ಲಿ ವಿಶ್ವಾಸವುಳ್ಳವರು ಮಾಂಸಾಹಾರವನ್ನು ಮಾಡುವದಿಲ್ಲ. ಶ್ರೀನಗರದಲ್ಲಿ ವೈಷ್ಣವರ ಹೋಟಲು ಒಂದೇ ಇದೆ. ಅಲ್ಲಿಮಾಂಸದ ಅಡಿಗೆ ಮಾಡುವುದಿಲ್ಲ. ಇತರ ಹಿಂದೂ ಹೊಟಲುಗಳಲ್ಲಿ ಶಾಕಾಹಾರ ಮತ್ತು ಮಾಂಸಾಹಾರ ತಯಾರಿಸುತ್ತಾರೆ. ಕಾಶ್ಮಿರಿಗಳು ಹಾಲು ತುಪ್ಪ, ಜೇನುತುಪ್ಪ, ಹಣ್ಣು ಹಂಪಲಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ತೀರ ಬಡಜನರು ಬರೀ ಅನ್ನ ಮತ್ತು ಮೀನದಮೇಲೆ ಜೀವಿಸುತ್ತಾರೆ.

ಕಾಶ್ಮೀರಿಗಳು ಅಥಿತಿ ಸತ್ಕಾರದಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ನೀವು ಕಾಶ್ಮಿರದಲ್ಲಿ ಯಾರದೇ ಮನೆಗೆ ಹೋಗಿರಿ, ಅವರು ನಿಮ್ಮನ್ನು ಆದರಿಸಿ ಸತ್ಕರಿಸುತ್ತಾರೆ. ಆನುದರಿಂದಲೇ ಅಕಬರನ ನವರತ್ನಗಳಲ್ಲಿ ಒಬ್ಬನಾದ ಫೈಜಿಯು ಕಾಶ್ಮೀರದ ಧೂಳಿಯು ಕಣ್ಣಿಗೆ ಔಷಧವನ್ನೂ ಹುಲ್ಲು ಆತ್ಮಕ್ಕೆ ಸಂಜೀವನಿಯನ್ನೂ ಕೊಡುತ್ತದೆಂದು ಬರೆದಿದ್ದರೆ ಕಾಶ್ಮಿರಿಗಳೇ ಆಗಿದ್ದ ಪಂಡಿತ ಬ್ರಜನಾರಾಯಣ ಚಕಬಸ್ತ ಎಂಬ ಕವಿಗಳು ಕಾಶ್ಮಿರದ ಒಂದೊಂದ ಕಣವು ಅತಿಥಿಗಳನ್ನು ಸ್ವಾಗತಿಸುವಲ್ಲಿ ಅದ್ವಿತೀಯವಾಗಿರುತ್ತದೆ. ಕಲ್ಲುಗಳು ನೀರನ್ನು ಕುಡಿಸುತ್ತ ಎಂದ ಬಳಿಕ ಕಾಶ್ಮೀರಿ ಜನರ ಅತಿಥಿ ಸೇವೆಯನ್ನು ಎಷ್ಟೆಂದು ಬಣ್ಣಿಸೋಣ ಎಂದು ಉದ್ಗಾರ ತೆಗೆದಿದ್ದಾರೆ.

ಕಾಶ್ಮಿರಿ ಹಳ್ಳಿಗರ ಜೀವನವು ಕನಿಕರ ಬರುವಂತಹದಾಗಿರುತ್ತದೆ. ಅವರಿಗೆ ವಾಸಿಸಲು ಒಳ್ಳೆಯ ಮನೆಗಳು ಇಲ್ಲ. ದನಕರುಗಳನ್ನು ಕಟ್ಟಲು ಒಳ್ಳೆಯ ಕೊಟ್ಟಿಗೆಗಳಿಲ್ಲ. ಕೊಟ್ಟಿಗೆಗಳಿಂದ ಸದಾ ದುರ್ಗಂಧವು ಬರುತ್ತಿರುತ್ತದೆ. ಆರೋಗ್ಯ ವರ್ಧಕ ಪ್ರದೇಶದಲ್ಲಿ ಆರೋಗ್ಯ ನಾಶಕ ಕಟ್ಟಿಗೆಯ ಮನೆಗಳು! ಈ ಹಳ್ಳಿಗರಲ್ಲಿ ಅಂಜಿಕೆಯು ಮನೆ ಮಾಡಿದೆ. ಇದೆಲ್ಲವೂ ನಿರ್ಧನತೆ ಹಾಗು ಅವಿದ್ಯೆಯ ಪರಿಣಾಮ ಇಡಿ ಕಾಶ್ಮೀರದಲ್ಲಿಯ ಬಡತನವು ತುಂಬಿದೆ. ಇದರಲಾಭವನ್ನು ಸಿರಿವಂತರು ಪಡೆದುಕೊಂಡು ಕಾಶ್ಮೀರಿಗಳ ರಕ್ತ ಶೋಷಣೆಯನ್ನು ಮಾಡುತ್ತಾರೆ. ಇದರಿಂದಾಗಿ ಈ ನಂದನ ವನದಲ್ಲಿಯ ಒಂಚೆಡೆ ನರಕವೂ ಗೋಚರಿಸುತ್ತದೆ.

ಕಾಶ್ಮೀರದಲ್ಲಿ ಮದುವೆಯ ಕಾಲದಲ್ಲಿ ಮದಮಗಳಿಗೆ ಒಂದು ಚರಖಾ ಕಾಣಿಕೆ ಕೊಡುವ ರೂಢಿ ಇದೆ.] ಏಕೆಂದರೆ ಚರಖಾ ಕಾಶ್ಮೀರಿ ಲಲನೆಯರಿಗೆ ಸೌಭಾಗ್ಯ ಸೌಖ್ಯಲಕ್ಷ್ಮಿಯ ಮೂರ್ತಿಯಾಗಿದೆ. ಪತಿಯು ಪರಊರಿಗೆ ಹೋಗುವಾಗ ಶಾಲುಗಳನ್ನು ಮಾರಲು ಹೋದಾಗ ವಿಯೋಗ ದುಃಖವನ್ನು ಮರೆಯುವ ಸುಂದರ ಸಾಧನವಾಗಿದೆ.] ಆದುದರಿಂದ ಕಾಶ್ಮೀರದ ಅಂಗಡಿಗಳಲ್ಲಿ ನಾನಾ ಆಕಾರದ ಬಣ್ಣ ಬಣ್ಣದ ಚರಖಾಗಳನ್ನು ಮಾರಾಟಕ್ಕಿಟ್ಟಿರುವುದು ಗೋಚರಿಸುತ್ತದೆ.

ಯಾವ ಭೂಮಿಯ ಶಾಸನ ಪದ್ಧತಿಯು ಕಠಿಣವಾಗಿರುವುದೋ ಅದೇ ಕಾಶ್ಮೀರ ಉಣಾದಿ ಕೋಶದಲ್ಲಿ ಹೇಳಲಾಗಿದೆ. ಅನೇಕ ರಾಜರ ಕಠಿಣ ಶಾಸನಗಳನ್ನೂ ಧರ್ಮಗಳ ತಿಕ್ಕಾಟವನ್ನೂ ಕಾಶ್ಮೀರಿಗಳು ಸಹಿಸಿಕೊಂಡು ಒಂದೆಡೆಗ ಜೀವಿಸುತ್ತ ಬಂದಿದ್ದರೆ ಇದಕ್ಕೆ ಕಾರಣವನ್ನು ಫೈಜಿಯು ಹೀಗೆ ಕೊಟ್ಟಿದ್ದಾನೆ—ಕಾಶ್ಮೀರದ ಹವೆಯಲ್ಲಿ ಸಮಭಾವವಿದೆ: ಎಲ್ಲ ಮಾತುಗಳು ಸಮವಾಗಿವೆ. ಮಾಘ, ವೈಶಾಖ, ಫಾಲ್ಗುಣಗಳಲ್ಲಿ ಯಾವ ಅಂತರವೂ ಇಲ್ಲ ಒಂದೇ ಕಡೆಯಲ್ಲಿ ಒಂದೇ ಕಾಲದಲ್ಲಿ ವಸಂತ, ಗ್ರೀಷ್ಮ ವರ್ಷ ಶರತ್ ಋತುಗಳು ಕೂಡಿರುತ್ತವೆ. ಸಾವಿರಾರು ವರ್ಗಗಳನ್ನು ಒಂದುಗೂಡಿಸುವ ಆಕರ್ಷಣ ಕಾಶ್ಮೀರದ ಹವೆಯಲ್ಲಿದೆ. ಇದೂ ಅಲ್ಲದೆ ಹಿಂದೂ ಸಂಸ್ಕೃತಿಯ ವೈಶಿಷ್ಟ್ಯಗಳಾದ ಸಹನಶೀಲತೆ ಹಾಗೂ ಸರ್ವಗ್ರಾಹಕತೆಯ ರಕ್ತವು ಕಾಶ್ಮೀರಿಗಳ ಧಮನಿಗೂ ಹರಿದಾಡುತ್ತಿದೆ. ಅಂತೆಯೇ

ಮಹಾತ್ಮಾ ಗಾಂಧಿಯವರು ಕಾಶ್ಮೀರದ ಪ್ರವಾಸವನ್ನು ಮುಗಿಸಿಕೊಂಡು ಬರುವಾಗ ವಾಹ ಎಂಬಲ್ಲಿ 'ಕಾಶ್ಮೀರದಲ್ಲಿ ಹಿಂದು-ಮುಸ್ಲಿಂ ಎಂಬ ಪ್ರಶ್ನೆಯೆ ಇಲ್ಲ. ಭಾಷೆ ಹಾಗು ಸಂಸ್ಕೃತಿಯಿಂದ ಅವರು ಒಂದೇಯಾಗಿ ಕಾಣುತ್ತಾರೆ. ಇದ್ದೂ ಇದ್ದಾರೆ. ಆದುದರಿಂದ ಅವರ ಶಾಸನವೂ ಅವರ ಇಚ್ಛೆಯ ಪ್ರಕಾರ ಅವರ ಕೈಯಲ್ಲಿಯೇ ಇರಬೇಕು ಎಂದು ಹೇಳಿದ್ದರು.

ಇಂದು ಕಾಶ್ಮೀರದ ಜನರಲ್ಲಿ ಶೇಖ ಅಬ್ದುಲ್ಲಾರವರು ನವಚೈತನ್ಯವನ್ನು ತುಂಬಿದ್ದಾರೆ. [ಅಂಜಿಕೆಯನ್ನು ಹೊಡೆದೋಡಿಸಿದ್ದಾರೆ. ಶಿಕ್ಷಣ, ಉದ್ಯೋಗ ಮುಂತಾದ ಕ್ಷೇತ್ರಗಳಲ್ಲಿ, ಶಾಸನ ಪದ್ಧತಿಯಲ್ಲಿ ಕ್ರಾಂತಿಕಾರಕ ಪರಿವರ್ತನೆಯನ್ನು ಮಾಡಿದ್ದಾರೆ. ಬಡತನವನ್ನು ದೂರ ಓಡಿಸಲು ಯತ್ನಿಸುತ್ತಿದ್ದಾರೆ. ಆದುದರಿಂದ ಹಿಂದೂ, ಮುಸ್ಲಿಂ, ಸಿಖ್, ಬೌದ್ಧರು ಸಖ್ಯಭಾವದಿಂದ ಇದ್ದು ಕಾಶ್ಮೀರದ ಉದ್ಧಾರಕ್ಕಾಗಿ ಕಂಕಣಬದ್ಧರಾಗಿದ್ದಾರೆ.] ಕಾಶ್ಮೀರಿಗಳು ಯಾವ ಧರ್ಮದವರೇ ಇರಲಿ ಅವರಲ್ಲಿ ಆರ್ಯ-ಹಿಂದೂ ಸಂಸ್ಕೃತಿಯ ರಕ್ತವು ಹರಿದಾಡುತ್ತಿದೆ. ಆದ್ದರಿಂದಲೇ ಅವರ ಒಲವು ಭಾರತದ ಕಡೆಗೆ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಅದೇನೇ ಇರಲಿ, ಕಾಶ್ಮೀರಿಗಳು ಹಿಂದೂ-ಮುಸ್ಲಿಂ ಹಾಗೂ ಇತರ ಸಂಸ್ಕೃತಿಗಳ ಸುಂದರ ಸಮನ್ವಯವನ್ನು ಜಗತ್ತಿನ ಮುಂದೆ ಇಟ್ಟು ವಿಶ್ವಬಾಂಧವ್ಯದ ಸ್ಥಾಪನೆಗೆ ದಾರಿ ತೋರುವಲ್ಲಿ ಸಮರ್ಥರಾಗಲಿ ಎಂದು ಹಾರೈಸೋಣ.

ಜಯ್ ಹಿಂದ್!

ವಿಮರ್ಶೆ:

ಕಣ್ಬೆಳಕು

(ಕವನ ಸಂಗ್ರಹ)

ಬರೆದವರು: **ಶ್ರೀ. ಉಡುಪಿ ಭೀಮರಾವ ಬೀಡಿ**

ಬೆಲೆ: ೦—೮—೦

'ಕಣ್ಬೆಳಕು' ೨೭ ಕವನಗಳ ಸಂಗ್ರಹ. ಶ್ರೀ. ಬೀಡಿ ಅವರು ವಿವಿಧ ವಿಷಯಗಳನ್ನು ಕುರಿತು ಸುಂದರವಾದ ಕವನಗಳನ್ನು ಹಾಡಿದ್ದಾರೆ. 'ನಸುಕಿನ ಗಾಳಿ' ವಿಜಯ ಧ್ವಜ, ಕವಿ, ತಾಯ ಹರಕೆ, ಸೇವೆ, ಮಹಾರಾಟೆ, ಗಿಳಿ-ನುಡಿ' ಮೊದಲಾದ ಅನೇಕ ವಿಷಯಗಳನ್ನು ಕುರಿತು ಕವಿಗಳು ಕವನಗಳ ಮುಖಾಂತರ ತಮ್ಮ ಭಾವನೆಗಳನ್ನು ವ್ಯಕ್ತಗೊಳಿಸಿದ್ದಾರೆ. "ಜೀವನದಲ್ಲಿಯ ಸಮಸ್ಯೆ-ಗಳನ್ನು ತಿಳುವಳಿಕೆಯ ದೃಷ್ಟಿಯಿಂದ ನೋಡಿದಾಗ, ಆದ ಪರಿಣಾಮವನ್ನು, ಕಷ್ಟವನ್ನು ಮರೆತು ಸೃಷ್ಟಿಯ ಬೆಡಗಿನ ಕಡೆಗೆ ಹೊರಳಿದಾಗ ಅರಳಿದ ಭಾವನೆಗಳನ್ನು ನಿತ್ಯದ ಮಾತಿನಲ್ಲಿಯ ಅನಿತ್ಯದ ಹೃದಯ ಮಿಡಿತವನ್ನು ಒಂದೆಡೆಯಲ್ಲಿ ಸಂಗ್ರಹಿಸಿದ್ದೇನೆ" ಎಂದು ಕವಿಗಳೇ ತಮ್ಮ ಅರಿಕೆಯಲ್ಲಿ ಹೇಳಿದ್ದಾರೆ. ಶ್ರೀ. ಸಾಲಿ ರಾಮ-ಚಂದ್ರರಾಯರು ಬೀಡಿಯವರನ್ನು ಆಶೀರ್ವದಿಸುತ್ತ "ಅವನ ಪದ್ಯದಲ್ಲಿ ಕಾವ್ಯವು ಸ್ಫುರಿಸುತ್ತದೆ. ಶೈಲಿ ಸುಲಭವಾದುದು. ಭಾಷೆಯಲ್ಲಿ ಒಂದು ಬಗೆಯ ಮಾರ್ದವವಿದೆ. ಉಡಪೀರಾಯನ ಕೃತಿಗಳಲ್ಲಿ ಕೃತ್ರಿಮ-ತೆಗೆ ಅವಕಾಶವಿಲ್ಲ. ತನ್ನ ಅನುಭವವನ್ನು ತಿಳಿಯಾದ ಭಾಷೆಯಲ್ಲಿ ವ್ಯಕ್ತಗೊಳಿಸಿರುವನು" ಎಂದು ಹೇಳಿದ್ದಾರೆ. ಶ್ರೀ. ಬೀಡಿ ಅವರ ಕವನ-ಸಂಗ್ರಹವನ್ನು ಕನ್ನಡಿಗರು ಓದಿ ತಣಿಯಲಿ. ಕವಿಗಳು ಕನ್ನಡ ಕಾವ್ಯದೇವಿಗೆ ಇನ್ನೂ ಅನೇಕ ಕವನ-ಪುಷ್ಪಗಳನ್ನು ಅರ್ಪಿಸಲಿ.

—ವೀರೇಶ ಹಿರೇಮಠ.

ಪ್ರಾದೇಶಿಕ ಟ್ರೇನಿಂಗ ಕಾಲೇಜುಗಳ ಯೋಜನೆಯ ಅವಶ್ಯಕತೆ

ಲೇಖಕರು : ಶ್ರೀ. ರತ್ನಾಕರ ಹಾವೇರಿ, ಜಮಖಂಡಿ

[ಈ ಲೇಖನದಲ್ಲಿ ಒಂದು ಸಮಸ್ಯೆಯನ್ನು ಎತ್ತಲಾಗಿದೆ. ಈ ಸಂಬಂಧದಲ್ಲಿ ಬರುವ ಯೋಗ್ಯ ಲೇಖನಗಳಿಗೆ ಸ್ವಾಗತವಿದೆ. ಇದರಲ್ಲಿಯ ವಿಚಾರಗಳಿಗೆ ಸಂಪಾದಕರು ಹೊಣೆಗಾರರಲ್ಲ. —ಸಂಪಾದಕರು.]

★

ಕಾಲೇಜುಗಳ ಸ್ಥಳಾಂತರ :

ಮುಂಬಯಿ ಸರಕಾರದವರು ಶಹರಗಳಲ್ಲಿರುವ ಟ್ರೇನಿಂಗ ಕಾಲೇಜುಗಳನ್ನು ಹಳ್ಳಿಗಳಿಗೆ ವರ್ಗಾಯಿಸಬೇಕೆಂದು ಮಾಡಿದ ನಿರ್ಣಯವು ಸ್ವಾಗತಾರ್ಹವಾಗಿದೆ. ಯಾಕಂದರೆ ಈ ಕಾಲೇಜುಗಳಲ್ಲಿ ತರಬೇತು ಹೊಂದಿದ ಬಹು ಜನ ಶಿಕ್ಷಕರು ಹಳ್ಳಿಗಳಲ್ಲಿಯೇ ಕೆಲಸ ಮಾಡಬೇಕಾಗುತ್ತದೆ. ಹಳ್ಳಿಯ ವಾತಾವರಣದಲ್ಲಿಯೇ ಅವರು ತರಬೇತಿ ಹೊಂದಿದ್ದಾದರೆ, ಈ ಕೆಲಸವನ್ನು ಯಶಸ್ವಿಯಾಗಿ ಸಾಗಿಸಲು ನಿಃಸಂಶಯವಾಗಿ ಸಹಾಯವಾಗುವುದು. ಆದರೂ ಈ ನಿರ್ಣಯವನ್ನು ಜಾರಿಯಲ್ಲಿ ತರುವಾಗ ಇನ್ನೊಂದು ದೃಷ್ಟಿಯಿಂದ ಈ ಸಮಸ್ಯೆಯನ್ನು ಪರಿಶೀಲಿಸುವುದು ಅವಶ್ಯ.

ಶಿಕ್ಷಕರ ಕಾರ್ಯಕ್ಷಮತೆ :

ಪ್ರಾಥಮಿಕ ಶಿಕ್ಷಣ ಪ್ರಸಾರದ ಹೊಣೆ—ಅದು ಸಾಂಪ್ರದಾಯಿಕ ಶಿಕ್ಷಣವೇ ಇರಲಿ, ಜೀವನ ಶಿಕ್ಷಣವೇ ಇರಲಿ—ಸಂಪೂರ್ಣವಾಗಿ ಪ್ರಾಥಮಿಕ ಶಿಕ್ಷಕರ ಕಾರ್ಯಕ್ಷಮತೆಯನ್ನೇ ಅವಲಂಬಿಸಿದೆಯೆಂಬ ಮಾತು ಅನುಭವ ಸಿದ್ಧವಾಗಿದೆ. ಶಿಕ್ಷಕರ ಅನುಕೂಲತೆಗಳನ್ನು ಅನುಲಕ್ಷಿಸಿ ಅವರು ವಾಸವಾದ ಹಳ್ಳಿ ಇಲ್ಲವೆ ಆಯಾ ತಾಲೂಕಿನ ಶಾಲೆಗಳಲ್ಲಿಯೇ ನಿಯಮಿಸಿ ಅವರಿಂದ ಕೆಲಸ ತೆಗೆದುಕೊಳ್ಳುವದಾದರೆ, ಶಿಕ್ಷಕರು ಮನಸ್ಸಿನಿಂದ ದುಡಿದು ಶಿಕ್ಷಣಪ್ರಸಾರ ಕಾರ್ಯದಲ್ಲಿ ಹುರುಪಿನಿಂದ ಕೆಲಸಮಾಡುವದು ಸ್ವಾಭಾವಿಕ. ಈ ತತ್ವವನ್ನಿಟ್ಟುಕೊಂಡೇ ಶಾಳಾಖಾತೆ ತನ್ನ ಆಡಳಿತೆಯನ್ನು ಸಾಗಿಸಲು ಯತ್ನಿಸುತ್ತದೆ. ಜೀವನ ಶಿಕ್ಷಣ ಶಾಲೆಗಳಲ್ಲಿಯೇ ಈ ತತ್ವವನ್ನನುಸರಿಸುವದು ಅತಿ ಮಹತ್ವದ ವಿಷಯವಾಗಿದೆ. ಯಾಕಂದರೆ ಅಲ್ಲಿಯ ಶಿಕ್ಷಕರಿಗೆ ತಮ್ಮ ಸುತ್ತಲಿನ ವಾತಾವರಣದ, ಆರ್ಥಿಕ ಮತ್ತು ಸಾಮಾಜಿಕ ಜೀವನದ, ರೀತಿ-ನೀತಿಗಳ ಸರಿಯಾದ ಜ್ಞಾನವಿರಬೇಕು; ಅವುಗಳನ್ನುತಿದ್ದುವದರಲ್ಲಿ ಸಾಕಷ್ಟು ಆಸ್ಥೆಯೂ ಇರಬೇಕು. ಇಂಥ ಶಿಕ್ಷಕರಿಂದಲೇ ಜೀವನ ಶಿಕ್ಷಣವು ನಿಜವಾಗಿ ಜನ ಶಿಕ್ಷಣವಾಗಬಲ್ಲುದು. ಈ ವಿವೇಚನೆಯಿಂದ ಶಿಕ್ಷಣವು ಯಶಸ್ವಿಯಾಗಬೇಕಾದರೆ ಆಯಾ ಭಾಗದ ಶಿಕ್ಷಕರು ಆಯಾ ಭಾಗಗಳಲ್ಲಿಯೇ ದುಡಿಯುವದು ಸಾಧುವೆಂದು ಮನಗಂಡಂತಾಯ್ತು. ಆದ ಕಾರಣ ಆಯಾ ಭಾಗದ ಶಿಕ್ಷಕರಿಗೆ ಮಾರ್ಗದರ್ಶನವಾಗುವಂಥ ತರಬೇತಿಯನ್ನು ಕೊಡುವದು ಅವಶ್ಯವೆಂಬ ಮಾತನ್ನು ಬೇರೆ ಬೇರೆ ಹೇಳುವ ಕಾರಣವೇ ಇಲ್ಲ. ಇದಕ್ಕಾಗಿಯೇ ಪ್ರಾದೇಶಿಕ ಟ್ರೇನಿಂಗ ಕಾಲೇಜುಗಳನ್ನು ತೆಗೆಯುವ ಯೋಜನೆಯನ್ನು ಇಟ್ಟುಕೊಳ್ಳುವದು ಅವಶ್ಯ.

ಪ್ರಾದೇಶಿಕ ವಿಭಾಗಗಳು :

ಪ್ರಾದೇಶಿಕ ವಿಭಾಗಗಳ ಅಭ್ಯಾಸವನ್ನು ಚರ್ಚಿಸು--

ವಾಗ ನಮಗೆ ನಿಕಟವಾಗಿ ಸಂಬಂಧಿಸಿದ ಧಾರವಾಡ ವಿಭಾಗ (Division)ವನ್ನೇ ತೆಗೆದುಕೊಳ್ಳೋಣ. ಈ ವಿಭಾಗದಲ್ಲಿ ಕೆಳಗಿನ ಮುಖ್ಯ ಪ್ರಾದೇಶಿಕ ವಿಭಾಗ ಗಳನ್ನು ನಾವು ಕಾಣಬಹುದು.

(೧) ಮಲೆನಾಡು.
(೨) ಬೆಳವಲ.
(೩) ಗಡಿನಾಡು.

ಮುಂಬಯಿ ಸರಕಾರದವರು ಜೀವನ ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಆಸ್ಥೆಯುಳ್ಳವರಿದ್ದಾರೆ. ಸಾಧ್ಯವಿದ್ದಷ್ಟು ಬೇಗನೆ ಜೀವನ ಶಿಕ್ಷಣ ಶಾಲೆಗಳನ್ನು ಪ್ರಾಂತದಲ್ಲೆಲ್ಲ ತೆರೆಯಬೇಕೆಂದು ನಿರ್ಧರಿಸಿಯೂ ಇದ್ದಾರೆ. ಆದ ಕಾರಣ ಈ ವಿಭಾಗಗಳನ್ನು ಅಭ್ಯಸಿಸುವದು ಉಚಿತ.

ಮಲೆನಾಡು ಪ್ರದೇಶ :

ಈ ಪ್ರದೇಶದಲ್ಲಿ ಕಂಡುಬರುವ ಗುಡ್ಡ, ಅಡವಿ ಮತ್ತು ಅತಿ ಮಳೆಯ ಮೂಲಕ ಇಲ್ಲಿಯ ಜನಜೀವನ, ಉದ್ಯೋಗಗಳು, ರೋಗರುಜಿನ ಮುಂತಾದವುಗಳು ಉಳಿದ ವಿಭಾಗಗಳಿಗಿಂತ ಭಿನ್ನವಾಗಿರುವದು ಸ್ವಾಭಾವಿಕ. ಇಲ್ಲಿಯ ಶಾಲೆಗಳಲ್ಲಿ ಕಾರ್ಯಮಾಡುವ ಶಿಕ್ಷಕರಿಗೆ ಈ ಎಲ್ಲ ಸಮಸ್ಯೆಗಳ ಅರಿವು ಇರಲೇಬೇಕು. ಯಾಕಂದರೆ ಜೀವನ ಶಿಕ್ಷಣವು ಸುತ್ತುಮುತ್ತಲಿನ ಜೀವನದೊಡನೆ ನಿಕಟವಾದ ಸಂಬಂಧವುಳ್ಳದ್ದಾಗಿರುತ್ತದೆ. ಈ ಶಾಲೆಗಳಲ್ಲಿ ಶಿಕ್ಷಣವು ಸ್ವಾಭಾವಿಕ, ಸಾಮಾಜಿಕ ಮತ್ತು ಔದ್ಯೋಗಿಕ ವಾತಾವರಣದ ಮೂಲಕವೇ ಸಾಗಬೇಕಾಗುವದರಿಂದ ಈ ಸಂಬಂಧವು ಇನ್ನೂ ಹೆಚ್ಚು ನಿಕಟವೂ ಜೀವಾಳದ್ದೂ ಆಗಿದೆ. ಹವಾಮಾನ ಪರಿಸ್ಥಿತಿಗಳಿಗೆ ಅನುಸರಿಸಿ ಇಲ್ಲಿಯ ಆಚಾರ-ವಿಚಾರ ಗಳೂ ಮನರಂಜನೆಯ ಸಾಧನಗಳೂ ವಿಶಿಷ್ಟವಾಗಿವೆ. ಇಲ್ಲಿಯ ಸಮಸ್ಯೆಗಳ ಪೂರ್ಣ ಜ್ಞಾನವನ್ನು ಮಾಡಿಕೊಡುವ ಮತ್ತು ಅವುಗಳನ್ನು ಪರಿಹಾರ ಮಾಡುವ ವಿಧಾನಗಳಲ್ಲಿ ಶಿಕ್ಷಕರನ್ನು ತರಬೇತು ಮಾಡುವದು ಅತಿ ಮಹತ್ವದ ಸಮಸ್ಯೆಯಾಗಿದೆ. ಈ ರೀತಿಯಿಂದ ಶಿಕ್ಷಕರನ್ನು ಸಜ್ಜುಗೊಳಿಸುವದು ಶಿಕ್ಷಣ ಸಂಘಟನೆಯ ಕಾರ್ಯದಲ್ಲಿ ಒಂದು ಸಮಂಜಸವಾದ ಹೆಜ್ಜೆ !

ಸೈನ್ಯಖಾತೆಯನ್ನು ನೋಡಿರಿ. ಗುಡ್ಡ-ಗಾಡು ಪ್ರದೇಶ ದಲ್ಲಿ ಹೋರಾಡಬೇಕಾದ ಸೈನಿಕರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡದೆ ಆ ಭಾಗಕ್ಕೆ ಕಳುಹಿಸುವದಿಲ್ಲ ಸೈನ್ಯ ತಜ್ಞರಿಗೆ ಅದೊಂದು ಮಾನವಶಕ್ತಿಯ ಹ್ರಾಸ ವೆಂಬ ಸಂಗತಿಯ ಅರಿವು ಚೆನ್ನಾಗಿರುತ್ತದೆ. ಈ ವಿಶಿಷ್ಟ ಶಿಕ್ಷಣವು ಆ ಭಾಗದಲ್ಲಿ ಕಾದಾಡುವ ಸೈನಿಕರಲ್ಲಿ ಆತ್ಮ ವಿಶ್ವಾಸವನ್ನು ಹುಟ್ಟಿಸಲು ಸಹಾಯಕಾರಿಯಾಗಬಲ್ಲುದು ಶಿಕ್ಷಣರಂಗದಲ್ಲಿ ಹೋರಾಡುವ ಶಿಕ್ಷಕರಿಗೂ ಈ ಆತ್ಮ ವಿಶ್ವಾಸವು ಅವಶ್ಯವಲ್ಲವೇ ? ಆದುದರಿಂದ ಶಿಕ್ಷಣದ ಮುನ್ನಡೆಗೆ ಈ ತರಬೇತು ಪ್ರಥಮ ಹೆಜ್ಜೆ

ಆಡಳಿತೆಯ ದೃಷ್ಟಿಯಿಂದ :

ಈ ತರಬೇತು ಆಡಳಿತೆಯ ದೃಷ್ಟಿಯಿಂದಲೂ ಅನುಕೂಲವಾದದ್ದು. ಮಲೆನಾಡಿನ ಶಿಕ್ಷಕರು ತಮ್ಮದೇ ಆದ ಭಾಗದಲ್ಲಿ ಕೆಲಸ ಮಾಡಬೇಕಾಗುವದರಿಂದ ವಿಶೇಷ ಅಡಚಣಿಗಳು ಬರಲಾರವು. ಪ್ರಾದೇಶಿಕ ಅಭಿಮಾನವೂ ಅನುಕೂಲತೆಗಳೂ ಸ್ವಲ್ಪಮಟ್ಟಿಗೆ ಶಿಕ್ಷಣದ ಪ್ರಗತಿಗೆ ಸಹಾಯವಾಗಬಲ್ಲವು. ಬೆಳವಲದ ಶಿಕ್ಷಕರನ್ನು ಅಲ್ಲಿ ಹಾಕುವದರಿಂದ ಅನೇಕ ಅಡೆ-ತಡೆ ಗಳು ಉದ್ಭವಿಸುತ್ತವೆ. ಈ ಶಿಕ್ಷಕರಲ್ಲಿ ಹವಾಮಾನದ ಬದಲಾವಣೆಯಿಂದ ರೋಗ-ರುಜಿನುಗಳಿಗೆ ತುತ್ತಾಗಿ ಕಾರ್ಯಕ್ಷಮತೆ ಕಡಿಮೆಯಾಗುವದು. ಅಲ್ಲದೆ ಸುತ್ತಲಿನ ವಾತಾವರಣದ ಪರಿಚಯ ಮಾಡಿಕೊಳ್ಳುವದರಲ್ಲಿಯೇ ಕೆಲವು ದಿವಸಗಳು ನಿರರ್ಥಕವಾಗಿ ಕಳೆದು ಹೋಗಬಹುದು. ಈ ತೊಂದರೆಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ವರ್ಗಾವರ್ಗಿಯ ಪ್ರಯತ್ನದಲ್ಲಿಯೇ ತಮ್ಮ ಶಕ್ತಿಯನ್ನೆಲ್ಲ ವೆಚ್ಚ ಮಾಡುವಂತಾಗಬಹುದು. ಈ ಎಲ್ಲ ಅಡೆ-ತಡೆಗಳನ್ನು ನಿವಾರಿಸಲು ಪ್ರಾದೇಶಿಕ ಟ್ರೇನಿಂಗ ಕಾಲೇಜುಗಳು ಉತ್ತಮ ಸಾಧನಗಳಾಗಬಹುದು. ಮಲೆನಾಡಿನ ಭಾಗದ ಅಥವಾ ಮಲೆನಾಡಿನಲ್ಲಿ ದುಡಿಯಲು ಇಚ್ಛಿಸುವ ಶಿಕ್ಷಕರಿಗೆ ಮಾತ್ರ ಇಂಥ ಕಾಲೇಜುಗಳಲ್ಲಿ ಪ್ರವೇಶ ಸಿಗುವದರಿಂದ ಈ ತೊಂದರೆಗಳು ಸುಲಭವಾಗಿ ತಪ್ಪಿಹೋಗಬಹುದು.

ಪದವೀಧರ ಜೀವನ ಶಿಕ್ಷಣ ಕೇಂದ್ರ ಮತ್ತು ಪ್ರಾದೇಶಿಕ ಟ್ರೇನಿಂಗ ಕಾಲೇಜುಗಳು.

ಧಾರವಾಡದ ಪದವೀಧರರ ಜೀವನ ಶಿಕ್ಷಣ ಕೇಂದ್ರವು ಕರ್ನಾಟಕದಲ್ಲಿ ಜೀವನ ಶಿಕ್ಷಣದ ಬಗೆಗೆ

ಹೊಸ ಬೆಳಕನ್ನು ತೋರುವ ಕೇಂದ್ರವೆಂದು ಹೇಳಬಹುದು. ಯಾಕಂದರೆ ಇಲ್ಲಿ ತರಬೇತಿ ಹೊಂದಿದ ಶಿಕ್ಷಕರು ಟ್ರೇನಿಂಗ ಕಾಲೇಜು ಮತ್ತು ಡೆಪುಟಿ ಆಫೀಸಿನ ಮುಖಾಂತರ ಜೀವನ ಶಿಕ್ಷಣ ಪ್ರಸಾರ ಮತ್ತು ಪ್ರಚಾರ ಕಾರ್ಯದಲ್ಲಿ ತೊಡಗಬೇಕಾಗುತ್ತದೆ. ಈ ಸಂಸ್ಥೆಯಲ್ಲಿ ಮೂರು ಜೀವನಾವಶ್ಯಕ ಉದ್ಯಮಗಳನ್ನು ಮತ್ತು ಅವುಗಳ ಮುಖಾಂತರ ಸಮವಾಯ ಶಿಕ್ಷಣ ಕೊಡುವ ರೀತಿ-ನೀತಿಗಳನ್ನು ಕಲಿಸುವ ಏರ್ಪಾಡಿದೆ. ಈ ಉದ್ಯಮಗಳು ಕೆಳಗಿನಂತಿವೆ :

(೧) ನೂಲುವದು ಮತ್ತು ನೇಯುವದು.
(೨) ಕೃತೋಟ (ಒಕ್ಕಲುತನ).
(೩) ರಟ್ಟಿನ ಕೆಲಸ ಮತ್ತು ಬಡಿಗತನ.

ಈ ಸಂಸ್ಥೆಯಲ್ಲಿ ತರಬೇತಿ ಹೊಂದುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಯು ಮೊದಲನೆಯ ಅಥವಾ ಮೂರನೆಯ ಉದ್ಯಮದಲ್ಲಿ ಸಾಕಷ್ಟು ಪ್ರವೀಣತೆಯನ್ನೂ ಮತ್ತು ಉಳಿದ ಎರಡು ಉದ್ಯಮಗಳಲ್ಲಿ ಪ್ರಾಥಮಿಕ ಜ್ಞಾನವನ್ನೂ ಸಂಪಾದಿಸುವ ಯೋಜನೆಯನ್ನು ಮಾಡಲಾಗಿದೆ.

ಈ ಯೋಜನೆಯಲ್ಲಿ ಈ ಪ್ರಾದೇಶಿಕ ತತ್ವದ ವಿಚಾರವು ಸಮಾವೇಶವಾಗಿರುವದನ್ನು ಸಹಜವಾಗಿ ಕಂಡು ಹಿಡಿಯಬಹುದು. ಒಕ್ಕಲುತನವು ಎಲ್ಲ ವಿಭಾಗಗಳಿಗೆ ಒಗ್ಗುವಂಥ ಉದ್ಯಮವಾಗಬಹುದಾದರೂ ಬಡಿಗತನದ ಬಗ್ಗೆ ಈ ಮಾತನ್ನು ಹೇಳಲು ಬಾರದು. ಬಡಿಗತನಕ್ಕೆ ಬೇಕಾಗುವ ಕಟ್ಟಿಗೆ ಸುಲಭವಾಗಿ ಸ್ವಾಭಾವಿಕವಾಗಿ ಸಿಗುವದು ಮಲೆನಾಡಿನ ಪ್ರದೇಶಗಳಲ್ಲಿ. ಆದಕಾರಣ ಮಲೆನಾಡಿನ ಶಾಲೆಗಳಲ್ಲಿ ರಟ್ಟಿನ ಕೆಲಸ ಮತ್ತು ಬಡಿಗತನದ ಮುಖಾಂತರವಾಗಿ ಶಿಕ್ಷಣ ಸಾಗುವದು ಪದವೀಧರ ಶಿಕ್ಷಣ ಕೇಂದ್ರವಲ್ಲಿ ದೊರಕಿಸಿದ ತರಬೇತಿನ ಸದುಪಯೋಗವು ಆಗಬಹುದು. ಈ ಉದ್ಯಮದ ಪ್ರಚಾರವು ಉರ್ದೂ ಶಾಲೆಗಳಲ್ಲಿ ಮಾತ್ರ ಹೆಚ್ಚಾಗಿ ಕಂಡುಬರುತ್ತದೆ. ಇದೇ ಸ್ಥಿತಿಯು ಉಳಿಯಲು ಈಗ ವಿಶಿಷ್ಟ ಕಾರಣಗಳಿಲ್ಲ.

ಕಾಲೇಜುಗಳ ಸಂಖ್ಯೆ :

ಇಂಥ ಒಂದು ವಿಶಿಷ್ಟ ಪ್ರದೇಶಕ್ಕೆ ಎಷ್ಟು ಕಾಲೇಜುಗಳು ಬೇಕೆಂಬುದು ಆ ಪ್ರದೇಶದ ವಿಶಾಲತೆಯನ್ನು ಅವಲಂಬಿಸಿದೆ. ಮಲೆನಾಡಿನ ಪ್ರದೇಶಕ್ಕೆ ಎರಡು ಕಾಲೇಜುಗಳು ಸಾಕಾಗಬಹುದು. ಅವುಗಳಲ್ಲಿ ಒಂದು ಹೆಣ್ಣುಮಕ್ಕಳ ಕಾಲೇಜು. ಇನ್ನೊಂದು ಗಂಡುಮಕ್ಕಳ ಕಾಲೇಜು ಇರಬಹುದು. ಇಲ್ಲವೆ ಸಾಮೀಪ್ಯದ ದೃಷ್ಟಿಯಿಂದ ಪದವೀಧರರ ಶಿಕ್ಷಣ ಕೇಂದ್ರದಂತೆ ಹೆಣ್ಣು ಮಕ್ಕಳಿಗೂ ಕೂಡ ಗಂಡುಮಕ್ಕಳ ಕಾಲೇಜಿನಲ್ಲಿಯೇ ಸ್ಥಾನ ಕೊಡಬಹುದು. ಸ್ತ್ರೀ-ಪುರುಷರಿಗೆ ಸಮಾನ ಹಕ್ಕುಗಳಿರಬೇಕೆಂಬ ಈ ಕಾಲದಲ್ಲಿ ಈ ರೀತಿಯ ಸಂಘಟನೆಗೆ ವಿಶೇಷ ವಿರೋಧವು ಕಂಡುಬರಲು ಕಾರಣವಿಲ್ಲ.

ವಿದ್ಯಾರ್ಥಿಗಳ ಸಂಖ್ಯೆ:

ಈ ಕಾಲೇಜುಗಳಲ್ಲಿ ತರಬೇತಿಗಾಗಿ ಆರಿಸುವ ವಿದ್ಯಾರ್ಥಿಗಳ ಸಂಖ್ಯೆಯ ಬಗೆಗೆ ಧಾರವಾಡದ ಪದವೀಧರರ ಶಿಕ್ಷಣ ಕೇಂದ್ರವನ್ನು ಆದರ್ಶವಾಗಿಟ್ಟುಕೊಳ್ಳುವದು ವಿಹಿತ. (ಈ ಸಂಸ್ಥೆಯಲ್ಲಿ ೩೦ ಪದವೀಧರರಿಗೆ ಮಾತ್ರ ಪ್ರವೇಶವಿದೆ.) ಯಾಕಂದರೆ ಆಡಳಿತೆಯ ದೃಷ್ಟಿಯಿಂದಲೂ ತರಬೇತಿಯ ದೃಷ್ಟಿಯಿಂದಲೂ ವಿಶಿಷ್ಟ ಅನುಕೂಲತೆಗಳು ಒದಗಿ ಬರುವದರಿಂದ ತರಬೇತು ಸಮರ್ಪಕವಾಗಿ ಸಿಕ್ಕು, ವಿದ್ಯಾರ್ಥಿ-ಶಿಕ್ಷಕರಲ್ಲಿ ಶಾಸ್ತ್ರೀಯ ದೃಷ್ಟಿಯನ್ನು ಬೆಳೆಯಿಸಲು ಹೆಚ್ಚು ಅನುಕೂಲವಾಗುವದು. ಇಂಥ ಕೇಂದ್ರಗಳಲ್ಲಿ ತರಬೇತು ಹೊಂದಿದ ಶಿಕ್ಷಕರು ತಮ್ಮ ಸ್ವಂತ ಅನುಭವದ ಲಾಭ ಪಡೆದುಕೊಂಡು ಹೊಸ ಸಂಶೋಧನೆಗೂ ಕೈಹಾಕಬಹುದೆಂದು ಆಶಿಸಬಹುದು. ಇದು ಬಹು ಖರ್ಚಿನದೆಂದು ಎನಿಸಿದರೆ ೩೦ ವಿಧ್ಯಾರ್ಥಿಗಳ ಎರಡು ವರ್ಗಗಳಿಗೆ ಮಾತ್ರ ಪ್ರವೇಶ ಸಿಗುವದು ಉಚಿತ.

ಉರ್ದೂ ಶಾಲೆಗಳು :

ಇಂಥ ವಿಭಾಗದಲ್ಲಿಯ ಉರ್ದೂ ಶಾಲೆಗಳು ಬಹಳೇ ಕಡಿಮೆಯಿರಬಹುದು. ಈ ಶಾಲೆಗಳ ಶಿಕ್ಷಕರು ಪ್ರಾದೇಶಿಕ ಭಾಷೆಯ ಮುಖಾಂತರ ಪಾಠಗಳನ್ನು ಸಾಗಿಸಿ ಉರ್ದೂ ಭಾಷೆಯ ಶಿಕ್ಷಣಕ್ಕೆ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದು. ಹೀಗಾದಲ್ಲಿ ಈ ಶಿಕ್ಷಕರಿಗೂ ಈ ಕಾಲೇಜುಗಳಲ್ಲಿಯೇ ಪ್ರವೇಶ ಕೊಡಬಹುದು ಇಲ್ಲವೆ ಬೇರೆ ಯೋಗ್ಯ ಯೋಜನೆಯನ್ನು ಮಾಡಬಹುದು.

(೧೭೩ನೆಯ ಪುಟಕ್ಕೆ ಮುಂದುವರಿದಿದೆ.)

ಪ್ರಾಥಮಿಕ ಶಾಲೆಗಳಲ್ಲಿ ಬಹು ವರ್ಗಗಳನ್ನು ಕಲಿಸುವ ಸಮಸ್ಯೆ

ಲೇಖಾಂಕ ೧

ಲೇಖಕ : ಶ್ರೀ. ವಿ. ಬ. ಚವಣ್ಣವರ

★

ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಒಬ್ಬ ಶಿಕ್ಷಕನು ಬಹು ವರ್ಗಗಳನ್ನು ಸಾಗಿಸಿಕೊಂಡು ಹೋಗುವದು, ಶಿಕ್ಷಣ ತತ್ವಕ್ಕೆ ಎಷ್ಟೇ ವಿರುದ್ಧವಾಗಿದ್ದರೂ, ಅದು ಒಂದು ಬಿಡಿಸಲಿಕ್ಕೆ ಬಾರದ ಸಮಸ್ಯೆಯಾಗಿದೆ; ಅನಿವಾರ್ಯವಾದ ಒಂದು ತೊಂದರೆಯಾಗಿದೆ. ಆಡಳಿತೆಯ ದೃಷ್ಟಿಯಿಂದ ಅದಕ್ಕೆ ಹೊಂದಿಕೊಳ್ಳದೆ ಗತ್ಯಂತರವಿಲ್ಲದಾಗಿದೆ. ನಮ್ಮ ದೇಶವು ಚಿಕ್ಕ ಚಿಕ್ಕ ಹಳ್ಳಿಗಳ ದೇಶವಾಗಿರುವದು. ಅಂಥ ಹಳ್ಳಿಗಳ ಜನಸಂಖ್ಯೆಯು ಕಡಿಮೆ. ಅಂಥಲ್ಲಿ ಒತ್ತಾಯದ ಸಾರ್ವತ್ರಿಕ ಶಿಕ್ಷಣವನ್ನು ರೂಢಿಯಲ್ಲಿ ತಂದಾಗ್ಯೂ ಕೂಡ ಪ್ರತಿಯೊಂದು ವರ್ಗಕ್ಕೆ ಒಬ್ಬ ಶಿಕ್ಷಕನಿರುವಷ್ಟು ಮಕ್ಕಳು ಪ್ರತಿಯೊಂದು ವರ್ಗದಲ್ಲಿ ಇರುವದಿಲ್ಲ. ಅಷ್ಟೇ ಅಲ್ಲ; ಎಲ್ಲ ವರ್ಗಗಳ ಮಕ್ಕಳನ್ನು ಒಟ್ಟುಗೂಡಿಸಿದರೆ ಒಬ್ಬನೇ ಒಬ್ಬ ಶಿಕ್ಷಕನಿಗೆ ಮಾತ್ರ ಪೂರ್ತಿಯಾಗುವಷ್ಟು ಇರುವ ಹಳ್ಳಿಗಳೇ ಬಹಳ. ಈ ಅಡಚಣಿಯ ಮೂಲಕ ೨-೩-೪ ವರ್ಗಗಳಿಗೆ ಒಬ್ಬ ಶಿಕ್ಷಕನಿರುವದು ಹಳ್ಳಿಗಳಲ್ಲಿ ಸಾಮಾನ್ಯವಾಗಿದೆ ಹಾಗೂ ವ್ಯಾವಹಾರಿಕವಾಗಿದೆ. ಇಲ್ಲವಾದರೆ ಆರ್ಥಿಕ ದೃಷ್ಟಿಯಿಂದ ಇಂಥ ಹಳ್ಳಿಗಳಲ್ಲಿಯ ಶಿಕ್ಷಣವು ಲಾಭದಾಯಕವಾಗಲಾರದು. ಆದ್ದರಿಂದ ಬಹು ವರ್ಗಗಳು ಅನಿವಾರ್ಯವೆಂದು ಗ್ರಹಿಸಿಕೊಂಡೇ ಅವುಗಳನ್ನು ನಡೆಯಿಸುವಾಗ ಬರುವ ತೊಂದರೆಗಳನ್ನು ದೂರಮಾಡುವ ವಿಚಾರ ಮಾಡಬೇಕಾಗಿದೆ.

ಇನ್ನು ಬಹು ವರ್ಗಗಳನ್ನು ಕಲಿಸುವ ಶಾಲೆಗಳೇ ಬಹಳ. ಅವನ್ನು ಸ್ಥೂಲವಾಗಿ ಎರಡು ಪ್ರಕಾರಗಳಲ್ಲಿ ಎಣಿಸಬಹುದು. ಒಂದನೆಯ ಪ್ರಕಾರದವು ಒಬ್ಬ ಶಿಕ್ಷಕನು ಮಾತ್ರ ಇರುವ ಶಾಲೆಗಳು. ಇಂಥ ಶಾಲೆಗಳಲ್ಲಿ ಸಾಮಾನ್ಯವಾಗಿ ೧-೪ ವರ್ಗಗಳಿದ್ದು ಅವುಗಳನ್ನೆಲ್ಲ ಒಬ್ಬ ಶಿಕ್ಷಕನು ಮಾತ್ರ ನೋಡಿಕೊಂಡು ಹೋಗುತ್ತಾನೆ. ಇವುಗಳ ಸಂಖ್ಯೆಯಾದರೂ ಉಳಿದವುಗಳಿಗಿಂತ ಹೆಚ್ಚಿಗಿರುವದು. ಇವು ಮುಖ್ಯತಃ ಗಾವಠೀ ಶಾಲೆಗಳಾಗಿರುವವು. ಆದರೆ, ಜಿಲ್ಹಾ ಲೋಕಲ್-ಬೋರ್ಡಿನ ಆಡಳಿತಕ್ಕೆ ಒಳಪಟ್ಟ ಇಂಥ ಒಬ್ಬ ಶಿಕ್ಷಕನ ಸಾಲೆಗಳೂ ಉಂಟು. ಇನ್ನು ಎರಡನೆಯ ಪ್ರಕಾರದವುಗಳಲ್ಲಿ, ಇಬ್ಬರು, ಮೂವರು, ನಾಲ್ವರು ಹೀಗೆ ಒಬ್ಬರಿಗಿಂತ ಹೆಚ್ಚು ಶಿಕ್ಷಕರಿದ್ದು, ಪ್ರತಿಯೊಬ್ಬನು, ೨-೩-೪ ವರ್ಗಗಳನ್ನು ಸಾಗಿಸುವಂಥ ಸಾಲೆಗಳು ಬರುವವು. ಇಂಥ ಸಾಲೆಗಳು ಸಾಮಾನ್ಯವಾಗಿ ಜಿಲ್ಹಾ ಲೋಕಲ್ ಬೋರ್ಡಿನ ಸಾಲೆಗಳಾಗಿರುವವು. ಈ ಒಬ್ಬ ಶಿಕ್ಷಕನಿರುವ ಹಾಗು ಇಬ್ಬರು ಮೂವರು ಶಿಕ್ಷಕರಿದ್ದು ಬಹು ವರ್ಗಗಳನ್ನು ನಡೆಯಿಸುವ ಸಾಲೆಗಳ ಸಮಸ್ಯೆಗಳು ಒಂದೇ ತರವಾಗಿಲ್ಲ. ಯಾಕಂದರೆ ಓರ್ವ ಶಿಕ್ಷಕನಿರುವ ಸಾಲೆಗಳ ಸಮಸ್ಯೆಗಳು ಅತಿ ಕ್ಲಿಷ್ಟತರವಿದ್ದು ಅಲ್ಲಿಯ ತೊಂದರೆಗಳ ನಿವಾರಣೋಪಾಯವು ಬಲು ಕಷ್ಟದ ಮಾತಾಗಿದೆ. ಆದರೆ, ಇಬ್ಬರು, ಮೂವರು ಶಿಕ್ಷಕರಿರುವ ಸಾಲೆಗಳ ಮಾತು ಹಾಗಲ್ಲ. ಕೆಲಮಟ್ಟಿಗಾದರೂ ಇಂಥ ಶಾಲೆಗಳಲ್ಲಿಯ ಸಮಸ್ಯೆಗಳನ್ನು ಪರಿಹರಿಸಬಹುದು. ಆದುದರಿಂದ ಒಬ್ಬ ಶಿಕ್ಷಕನಿರುವ ಸಾಲೆಗಳ ಸಮಸ್ಯೆಯು ಬಹು ಮಹತ್ವಾಗಿದ್ದು ಅವು-

ಗಳಲ್ಲಿಯ ಶಿಕ್ಷಣಕ್ರಮ, ವಿಧಾನ, ತೊಂದರೆಗಳ ಪರಿಹಾರ ಮುಂತಾದವರ ಬಗ್ಗೆ ಪ್ರತ್ಯೇಕವಾಗಿ ವಿವೇಚಿಸುವದದು ಅಗತ್ಯವಾಗಿದೆ. ಆದರೆ ಬಹು ವರ್ಗಗಳನ್ನು ನಡೆಯಿಸುವ ಕೆಲವೊಂದು ಸಾಮಾನ್ಯ ಕ್ರಮಗಳಿವೆ; ಪದ್ಧತಿಗಳಿವೆ. ಅವುಗಳನ್ನು ವಿವೇಚಿಸಿದ ಬಳಿಕ ಒಬ್ಬ ಶಿಕ್ಷಕನ ಸಾಲೆಗಳ ಬಗ್ಗೆ ಪ್ರತ್ಯೇಕವಾಗಿ ವಿಚಾರಿಸೋಣ.

ಸಾಮಾನ್ಯವಾಗಿ ಹೇಳುವದಾದರೆ, ಬಹು ವರ್ಗಗಳನ್ನು ಸಾಗಿಸುವದೆಂದರೆ ಶಾಲೆಯ ವೇಳೆಯಲ್ಲಿ ಸಾಧ್ಯವಿದ್ದಷ್ಟು ಎಲ್ಲ ವರ್ಗಗಳ ಮಕ್ಕಳನ್ನು ಯಾವದಾದರೊಂದು ಕೆಲಸದಲ್ಲಿ—ಶೈಕ್ಷಣಿಕ ಚಟುವಟಿಕೆಯಲ್ಲಿ—ಅದು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಉಪಯುಕ್ತವಾಗುವಂತೆ, ತೊಡಗಿಸುವದು. ಇದನ್ನು ಎರಡು ವಿಧವಾಗಿ ಸಾಧಿಸಬಹುದು. (i) ಮೊದಲನೆಯದೆಂದರೆ ಎಲ್ಲ ವರ್ಗಗಳ ಮಕ್ಕಳನ್ನು ಸಾಮೂಹಿಕವಾಗಿ ಕೆಲವೊಂದು ಚಟುವಟಿಕೆಯಲ್ಲಿ ತೊಡಗಿಸುವದು. ಉದಾ:- ಎಲ್ಲ ಮಕ್ಕಳನ್ನು ಒಟ್ಟುಗೂಡಿಸಿ, ಪ್ರಾರ್ಥನೆ, ಸ್ತೋತ್ರ, ಶಾರೀರಿಕ ಚಟುವಟಿಕೆಗಳು, ಆಟಗಳು, ಪ್ರವಾಸ ಇತ್ಯಾದಿ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸುವದು. (ii) ಎರಡನೆಯ ಬಗೆಯೆಂದರೆ, ಶಿಕ್ಷಕನು ತನ್ನ ಚಾತುರ್ಯದಿಂದ ಬೇರೆ ಬೇರೆ ವರ್ಗಗಳನ್ನು ಬೇರೆ ಬೇರೆ ಕೆಲಸದಲ್ಲಿ ತೊಡಗಿಸಿ, ಯೋಗ್ಯ ಕಾಲ ವಿಭಜನೆಯ ಪ್ರಕಾರ ಎಲ್ಲ ವರ್ಗಗಳ ಮೇಲ್ವಿಚಾರಣೆಯನ್ನು ಮಾಡುವದು. ಆಗ ಅವನು ಯಾವದೇ ವರ್ಗವು ಅಲಕ್ಷಿಸಲ್ಪಡದಂತೆ ತನ್ನ ಪಾತ್ರವನ್ನು ವಹಿಸತಕ್ಕದ್ದು. ಇದರಲ್ಲಿಯೇ ಶಿಕ್ಷಕನ ಜಾಣ್ಮೆಯುಂಟು. ಇಂಥ ಸಮಯದಲ್ಲಿ ಶಿಕ್ಷಕನು ಬೇರೆ ಬೇರೆ ವರ್ಗಗಳ ಅಭ್ಯಾಸಕ್ರಮವನ್ನು ಅವು ಇನ್ನಿತರ ವರ್ಗಗಳ ಕಾರ್ಯಕ್ಕೆ ಅಡ್ಡಿಯಾಗದಂತೆ ಆರಿಸಬೇಕಾಗುವದು. ಅದು ಹೇಗೆಂದರೆ, ಒಂದು ವರ್ಗದ ಕೆಲಸದಲ್ಲಿ ಶಿಕ್ಷಕನ ಪಾತ್ರವು ಮುಖ್ಯವಾಗಿದ್ದರೆ, ಇನ್ನುಳಿದ ವರ್ಗಗಳಲ್ಲಿ ಕೇವಲ ಮಕ್ಕಳ ಪಾತ್ರವೇ ಮುಖ್ಯವಾಗಿರಬೇಕು. ಅಂದರೆ ಮಕ್ಕಳು ತಮ್ಮಷ್ಟಕ್ಕೆ ತಾವೇ ಚಟುವಟಿಕೆಯನ್ನು ಸಾಗಿಸುವಂಥಹದು ಇರಬೇಕು. ಕೆಲವೊಂದು ಅವಧಿಯ ನಂತರ, ಶಿಕ್ಷಕನ ಪಾತ್ರವು ಇನ್ನೊಂದು ವರ್ಗದಲ್ಲಿ ಪ್ರಾಮುಖ್ಯವಾಗಿದ್ದಾಗ ಇನ್ನು ಉಳಿದ ವರ್ಗಗಳಲ್ಲಿ ಮಕ್ಕಳು ತಮ್ಮ ಕೆಲಸದಲ್ಲಿ ನಿರತರಾಗಿರಬೇಕು. ಆದರೆ ಕಿಂಚಿತ್ ವೇಳೆಯಾದರೂ ಮಧ್ಯದಲ್ಲಿ ವ್ಯಯವಾಗದೆ, ಯಾಂತ್ರಿಕವಾಗಿ ಎಲ್ಲ ಚಟುವಟಿಕೆಗಳು ಏಕಕಾಲಕ್ಕೆ ಸಾಗಬೇಕೆಂದು ಇದರ ಅರ್ಥವಲ್ಲ. ಮುಖ್ಯವಾಗಿ ಆದಷ್ಟು ಮಟ್ಟಿಗೆ ಮಕ್ಕಳನ್ನು ಶೈಕ್ಷಣಿಕ ಚಟುವಟಿಕೆಗಳಲ್ಲಿ ಅವರಿಗೆ ಅವು ತೀರ ಬೇಸರಾಗದಂತೆ ತೊಡಗಿಸಬೇಕು.

ಇನ್ನು ಸಾಮೂಹಿಕ ಶೈಕ್ಷಣಿಕ ಚಟುವಟಿಕೆಗಳಲ್ಲಿ ಶಿಕ್ಷಕನು ತನ್ನ ಗೊತ್ತುಗುರಿಗಳ ಬಗ್ಗೆ ಒಳ್ಳೇ ನಿಚ್ಚಳ ಹಾಗು ನಿರ್ದಿಷ್ಟ ದೃಷ್ಟಿಯುಳ್ಳವನಾಗಿರಬೇಕು. ಹೇಗೆಂದರೆ, ಎಲ್ಲ ಮಕ್ಕಳನ್ನು ಶಾರೀರಿಕ ಚಟುವಟಿಕೆಗಳಲ್ಲಿ ತೊಡಗಿಸಿದಾಗ, ಅವರೆಲ್ಲರಿಗೂ ಓರಣ, ಸ್ವಚ್ಛತೆ, ಅಚ್ಚುಕಟ್ಟುತನ, ಶಿಸ್ತು, ಕ್ರಮ, ಪದ್ಧತಿ ಮುಂತಾದ ಶೀಲಸಂವರ್ಧನೆಯ ಅಂಗಗಳು ಬೆಳೆದು ಬರುವಂತೆ, ಹಾಗು ಮಕ್ಕಳಲ್ಲಿಯ ಕುತೂಹಲ, ಅನುಕರಣ, ಆತ್ಮಪ್ರತಿಷ್ಠೆ, ಸಾಂಘಿಕಪ್ರವೃತ್ತಿ ಮುಂತಾದವುಗಳೂ ಬೆಳೆದು ಬರುವಂತೆ ನೋಡಿಕೊಳ್ಳುವದು ಮಹತ್ವದ್ದಾಗಿರುವದು. ಪ್ರಾತಃಕಾಲದ ಪ್ರಾರ್ಥನೆ, ಸ್ತೋತ್ರ ಮುಂತಾದವುಗಳ ಸಮಯದಲ್ಲಿ ಮಕ್ಕಳಲ್ಲಿ ಪೂಜ್ಯಭಾವನೆ, ನಂಬಿಗೆ, ಭಕ್ತಿ ಮೊದಲಾದ ಗುಣಗಳು ಕ್ರಮೇಣ ಅಂಕುರಿಸಿ ಬೆಳೆಯುವಂತೆ ಲಕ್ಷ್ಯಗೊಡುವದು ಅವಶ್ಯ. ಅದರಂತೆ ಮಕ್ಕಳನ್ನು ಆಟದಲ್ಲಿ ಸಾಮೂಹಿಕವಾಗಿ ತೊಡಗಿಸಿ ಅದರ ಮೂಲಕ ಕಥೆ, ಇತಿಹಾಸ, ಭಾಷೆ-ವಿಷಯಗಳನ್ನು ಬಹು ಮನರಂಜನವಾಗುವಂತೆ ಕಲಿಸುವದು ಸಾಧ್ಯ. ಮಕ್ಕಳ ಒಂದು ಗುಂಪು ಆಟದಲ್ಲಿ ಪ್ರತ್ಯಕ್ಷ ಭಾಗ ವಹಿಸಿದರೆ, ಇನ್ನೊಂದು ಗುಂಪು ಹೊರಗೆ ನಿಂತು ಕೇವಲ ನಿರೀಕ್ಷಣೆಯಿಂದ ಅಷ್ಟೇ ಉತ್ಸಾಹ, ಧೈರ್ಯ ಆನಂದ ಪಡೆಯಬಹುದು. ಇದಲ್ಲದೆ, ತಕ್ಕ ಕೈಕೆಲಸಗಳ ಮೂಲಕ ಅನೇಕ ವರ್ಗಗಳ ಮಕ್ಕಳನ್ನು ಏಕಕಾಲಕ್ಕೆ ಕೆಲಸದಲ್ಲಿ ತೊಡಗಿಸಿ, ಕೇವಲ ಶಿಕ್ಷಕನ ಪ್ರತ್ಯಕ್ಷಕ್ಕೆ, ಸ್ಥೂಲವಾದ ಸೂಚನೆಗಳು ಹಾಗು ಮೇಲ್ವಿಚಾರಣೆಗಳಿಂದಷ್ಟೇ ಮಕ್ಕಳಲ್ಲಿ ಹುದುಗಿದ ಅನೇಕ ಸುಪ್ತಶಕ್ತಿಗಳನ್ನು ಬಯಲಿಗೆ ತರುವಂತೆ ಏರ್ಪಾಟು ಮಾಡಲು ಸಾಧ್ಯ. ಈ ರೀತಿಯ ಚಟುವಟಿಕೆಗಳಲ್ಲಿ ತೊಡಗಿದ ಮಕ್ಕಳ ಅಸಾಮಾನ್ಯ ಕೈಕುಶಲತೆ, **ರಚನಾಪ್ರವೃತ್ತಿ**, ಕಲ್ಪನಾಪ್ರವೃತ್ತಿ ಮತ್ತು ಸ್ನಾಯುಗಳ **ತರಬೇತಿ**

ಮುಂತಾದ ಶೈಕ್ಷಣಿಕ ಮಹತ್ವದ ಬೆಳವಣಿಗೆ ಆಗುವುದರಲ್ಲಿ ಸಂದೇಹವಿಲ್ಲ. ಇದಲ್ಲದೆ, ಮಕ್ಕಳು ತಮ್ಮ ಶಾಲೆಯಲ್ಲಿ ವೇಳೆಯನ್ನು ಒಳ್ಳೇ ಆನಂದದಿಂದ ಕಳೆಯುವರು. ಇದರಂತೆ ಚತುರ ಶಿಕ್ಷಕನು ಇನ್ನೂ ಅನೇಕ ವಿಧವಾಗಿ ಸಾಮೂಹಿಕ ರೀತಿಯಿಂದ ಬಹು ವರ್ಗಗಳ ಕೆಲಸ ಸಾಗಿಸಬಹುದು. ಅವೆಲ್ಲವನ್ನೂ ಇಲ್ಲಿ ನಿರೂಪಿಸುವದು ಅನವಶ್ಯಕ.

ಆದರೆ ಬೇರೆ ಬೇರೆ ವರ್ಗಗಳನ್ನು ಬೇರೆ ಬೇರೆ ಚಟುವಟಿಕೆಗಳಲ್ಲಿ ತೊಡಗಿಸುವದು ಸುಲಭಸಾಧ್ಯವಲ್ಲ. ಅದಕ್ಕೆ ಶಿಕ್ಷಕನಿಗೆ ಶೈಕ್ಷಣಿಕ ಸಲಕರಣೆಗಳಿದ್ದಷ್ಟು ಸುಲಭ. ಉದಾ:– ಕರೇ ಹಲಿಗೆ, ಚಿತ್ರಪಟಗಳು, ನಕಾಶಗಳು, ವಿದ್ಯಾರ್ಥಿ ವಾಚನಾಲಯ ಮುಂತಾದವುಗಳು ಶಿಕ್ಷಕನಿಗೆ ಒಳ್ಳೇ ಉಪಯುಕ್ತವಾಗಿರುವವು. ಇಂಥ ಸಲಕರಣೆಗಳು ಶಿಕ್ಷಕನ ಶ್ರಮವನ್ನು ಬಹುಮಟ್ಟಿಗೆ ಉಳಿಸುವವು. ಕರೇ ಹಲಿಗೆಯಂತೂ ಬಹು ವರ್ಗಗಳನ್ನು ಕಲಿಸುವಾಗ ಶಿಕ್ಷಕನಿಗೆ ಪ್ರತಿ ಶಿಕ್ಷಕನಂತೆ ಸಹಾಯಕವಾಗುವದು. ಅವನು ಅದನ್ನು ಅನೇಕ ರೀತಿಯಿಂದ ಉಪಯೋಗಿಸಬಹುದು. ಅದನ್ನು ಶಿಕ್ಷಕನ ಪ್ರತ್ಯಕ್ಷಿಕೆಗಾಗಿ ಉಪಯೋಗಿಸಬಹುದು. ತನ್ನ ವೇಳೆಯ ಉಳಿತಾಯಕ್ಕೆ ಮುಂಚಿತವಾಗಿ ಏನನ್ನಾದರೂ ಬರೆದು ತರಲಿಕ್ಕೆ ಉಪಯೋಗಿಸಬಹುದು. ತಾನು ಕಲಿಸಿದ ವಿಷಯದ ಟಿಪ್ಪಣೆಗಾಗಿ ಉಪಯೋಗಿಸಬಹುದು. ಒಬ್ಬ ವಿದ್ಯಾರ್ಥಿಯು ಅದರ ಮೇಲೆ ಯಾವದೊಂದು ವಿಷಯವನ್ನು ಬರೆದರೆ, ಅದನ್ನು ಉಳಿದ ಮಕ್ಕಳೂ ಕಲಿಯಲು ಉಪಯೋಗಿಸಬಹುದು. ಅದರಂತೆಯೇ ಮಕ್ಕಳನ್ನು ಚಿತ್ರಪಟ, ನಕಾಶ ಮುಂತಾದವುಗಳನ್ನು ನಿರೀಕ್ಷಿಸಿ ಅಭ್ಯಸಿಸಲಿಕ್ಕೆ ತೊಡಗಿಸಿ ಶಿಕ್ಷಕನು ತನ್ನ ವೇಳೆಯನ್ನು ಉಳಿಸಿಕೊಳ್ಳಬಹುದು. ಆದುದರಿಂದ ಶಿಕ್ಷಕನು ಬಹುವರ್ಗದ ತೊಂದರೆಗಳನ್ನು ಕಡಿಮೆ ಮಾಡಿಕೊಳ್ಳಬೇಕಾದರೆ ಆದಷ್ಟು ಮಟ್ಟಿಗೆ ಇಂಥ ಉಪಯುಕ್ತ ಸಲಕರಣೆಗಳನ್ನು ದೊರಕಿಸುವದು ಅತ್ಯವಶ್ಯ. ದುರ್ದೈವದಿಂದ ನಮ್ಮ ಎಲ್ಲ ಒಬ್ಬ ಶಿಕ್ಷಕನಿರುವ ಶಾಲೆಗಳಲ್ಲಿ, ವಿಶೇಷವಾಗಿ, ಗಾವಠೀ ಶಾಲೆಗಳಲ್ಲಿ ಇಂಥ ಉಪಕರಣಗಳ ಅಭಾವ ಹೇಳತೀರದು. ಎಷ್ಟೋ ಶಾಲೆಗಳಲ್ಲಿ ಕರೇ ಹಲಿಗೆಯೂ ಕೂಡ ಇರುವದಿಲ್ಲ.

ಎರಡನೆಯ ಮಹತ್ವದ ಸಂಗತಿಯೆಂದರೆ ಶಿಕ್ಷಕನು ಆದಷ್ಟು ಮಟ್ಟಿಗೆ ಮಕ್ಕಳ ಶಿಕ್ಷಣಕ್ರಮದಲ್ಲಿ ತನ್ನ ಸ್ಥಾನವನ್ನು ಕ್ರಮೇಣ ಕಡಿಮೆಯಾಗುವಂತೆ ಮಾಡಿ ಅವರು ತಮ್ಮಷ್ಟಕ್ಕೆ ತಾವೇ ಕಾರ್ಯಪ್ರವೃತ್ತರಾಗುವಂತೆ ಹವಣಿಸತಕ್ಕದ್ದು. ಮಕ್ಕಳು ತಾವೇ ಮಾಡುವ ಭಾಗವು ಹೆಚ್ಚುವಂತೆ ಮಾಡಿ ಅವರಿಗೆ ಶಿಕ್ಷಕನು ಕೇವಲ ಮಾರ್ಗದರ್ಶನ ಮಾಡುವ ಪಾತ್ರವನ್ನಷ್ಟೇ ವಹಿಸಿಕೊಳ್ಳುವದು, ಬಹು ವರ್ಗಗಳನ್ನು ಕಲಿಸುವ ಪದ್ಧತಿಯಲ್ಲಿ ಮಹತ್ವದ ತತ್ವವು. ಕಥನಪದ್ಧತಿ ಹಾಗೂ ಪ್ರಶ್ನೋತ್ತರ ಪದ್ಧತಿಗಳಿಗೆ ಆದಷ್ಟು ಕಡಿಮೆ ಸ್ಥಾನವನ್ನು ಕೊಟ್ಟು ಸ್ವಾಧ್ಯಯನದ ಪದ್ಧತಿಯನ್ನು ಬಹುಮಟ್ಟಿಗೆ ಬಳಿಕೆಯಲ್ಲಿ ತರಬೇಕಾಗುವದು. ಅದು ಹೇಗಂದರೆ–ಓದು ಬರೆಹಗಳನ್ನು ಮಾಡಿಸುವಾಗ ವರ್ಗದಲ್ಲಿ ಮಕ್ಕಳು ಅದನ್ನು ತಾವೇ ವೈಯಕ್ತಿಕವಾಗಲೀ ಅಥವಾ ವರ್ಗದ ಎಲ್ಲ ಮಕ್ಕಳು ಕೂಡಿಯಾಗಲಿ ಸಾಗಿಸುವಂತೆ ನೋಡಿಕೊಳ್ಳಬೇಕು. ಮಕ್ಕಳು ತಮ್ಮ ತಮ್ಮ ಕುಂದು-ಕೊರತೆಗಳನ್ನು ತಮ್ಮ-ತಮ್ಮೊಳಗೆ ತಾವೇ ಕಂಡುಹಿಡಿದು ಪ್ರಗತಿಯನ್ನು ಪಡೆಯಬಹುದು. ಬಹಳವಾದರೆ ಮುಂದುವರಿದ ಒಬ್ಬೊಬ್ಬ ಮಕ್ಕಳ ಕಡೆಯಿಂದಲಾದರೂ ಕಲಿತುಕೊಳ್ಳಬಹುದು. ಹೀಗೆ ಶಿಕ್ಷಣಕ್ರಮವು ಸ್ವಲ್ಪ ಸಾವಕಾಶವಾಗಿ ಸಾಗಿದರೂ, ಅದರ ಜೊತೆಗೆ ಮಕ್ಕಳಲ್ಲಿ ಆತ್ಮವಿಶ್ವಾಸ, ಆತ್ಮಪ್ರತಿಷ್ಠೆ, ಪ್ರಾಮಾಣಿಕತೆ, ಸಹಕಾರ ಮುಂತಾದವು ಬೆಳೆಯುವವು ಮತ್ತು ಅವರು ಯಾವ ತರದ ಬಾಹ್ಯನಿಯಮ ನಿರ್ಬಂಧ, ಕಟ್ಟಳೆ ಮೊದಲಾದ ಅಡ್ಡಿಆತಂಕಗಳಿಲ್ಲದೆ, ಸ್ವಯಂಪ್ರೇರಿತರಾಗಿ, ಸ್ವೇಚ್ಛಾರೀತಿಯಲ್ಲಿ ತಮ್ಮ ಆತ್ಮವಿಕಾಸಕ್ಕೆ ಅನುಗುಣವಾದ ವಾತಾವರಣದಲ್ಲಿ ಬೆಳೆಯುವರು. ಒಟ್ಟಿನ ಮೇಲೆ ಹೇಳುವದೆಂದರೆ, ಶಿಕ್ಷಕನು ಮಕ್ಕಳಿಗೆ ಕಲಿಸುವದಕ್ಕಿಂತ ಮಕ್ಕಳು ತಾವೇ ಕಲಿಯುವದಕ್ಕೆ ಪ್ರೋತ್ಸಾಹವನ್ನೀಯಬೇಕು.

ಇನ್ನೊಂದು ಒಳ್ಳೇ ಉಪಯುಕ್ತ ಸೂಚನೆಯೆಂದರೆ—ಶಿಕ್ಷಕನು ತನ್ನನೆರವಿಗೆ ಶಾಲೆಯ ಬೇರೊಬ್ಬ ವ್ಯಕ್ತಿಯನ್ನು ತೆಗೆದುಕೊಂಡು, ತನ್ನ ಕಾರ್ಯವನ್ನು ಅವನು ನಿರ್ವಹಿಸುವಂತೆ ಏರ್ಪಡಿಸುವದು. ಒಂದು ವರ್ಗದಲ್ಲಿ, ಅದೇ ವರ್ಗದ ಒಬ್ಬ ಯೋಗ್ಯತೆಯುಳ್ಳ

ವಿದ್ಯಾರ್ಥಿಯು ಶಿಕ್ಷಕನ ಪಾತ್ರವನ್ನು ವಹಿಸಿಕೊಂಡು, ಶಿಕ್ಷಕನು ಒಪ್ಪಿಸಿಕೊಟ್ಟ ಕೆಲಸವನ್ನು ತೆಗೆದುಕೊಳ್ಳುವದು. ಅಥವಾ ಒಂದು ವರ್ಗದ ಮಕ್ಕಳ ಮೇಲ್ವಿಚಾರಣೆಯ ಕೆಲಸವನ್ನು ಅವಕ್ಕಿಂತ ಹೆಚ್ಚಿನ ವರ್ಗದ ಯಾವನೊಬ್ಬ ವಿದ್ಯಾರ್ಥಿಗೆ ಒಪ್ಪಿಸುವದು. ಇಂಥ ವ್ಯವಸ್ಥೆಯಿಂದ ವಿದ್ಯಾರ್ಥಿಗಳೇ ಶಿಕ್ಷಕನಿಗೆ ಬಹುಮಟ್ಟಿಗೆ ಸಹಾಯಕರಾಗಬಲ್ಲರು. ಆದರೆ ಶಿಕ್ಷಕನು ಈ ಕಾರ್ಯಕ್ಕೆ ಹಂಬಲಿಸುವ ಎಲ್ಲ ವಿದ್ಯಾರ್ಥಿಗಳಿಗೂ ಕ್ರಮವಾಗಿ ಅನುವು ಮಾಡಿಕೊಡಬೇಕು. ಇಲ್ಲವಾದರೆ ಹಲವು ಮಕ್ಕಳು ನಿರಾಶರಾಗಿ ತಮ್ಮ ಯೋಗ್ಯತಾಯೋಗ್ಯತೆಯ ಬಗ್ಗೆ ತಾವೇ ಸಂದೇಹವುಳ್ಳವರಾಗಬಹುದು. ಇಷ್ಟೊಂದು ಜಾಗರೂಕತೆಯಿಂದ ಮಕ್ಕಳಿಗೆ ಶಿಕ್ಷಕನ ಸ್ಥಾನವನ್ನು ಕಲ್ಪಿಸಿಕೊಡುವದರಿಂದ ಅವರಲ್ಲಿ, ನಾಯಕತ್ವ, ಸಾಹಸ, ಸಂಘಟನಾಶಕ್ತಿ, ಕಾರ್ಯತತ್ಪರತೆ ಮೊದಲಾದ ಸಮಾಜೋನ್ನತಿಯ ಗುಣಗಳು ಬೆಳೆದು ಅವರು ಒಳ್ಳೆಯ ನಾಗರಿಕತೆಯ ತರಬೇತಿಯನ್ನು ಪಡೆಯುವರು.

ಹೀಗೆ ಸ್ಥೂಲವಾಗಿ ಬಹುವರ್ಗಗಳನ್ನು ನಡೆಯಿಸುವ ತತ್ವಗಳನ್ನು ಹೇಳಿದ್ದಾಯಿತು. ಆದರೆ ಪ್ರತ್ಯಕ್ಷವಾಗಿ ಬಹು ವರ್ಗಗಳನ್ನು ಮೇಲ್ವಾಣಿಸಿದ ಎರಡೂ ತರದ ಸಾಲೆಗಳಲ್ಲಿ ಹೇಗೆ ನಡೆಯಿಸಬೇಕೆಂಬ ಬಗ್ಗೆ ನಿರ್ದಿಷ್ಟ ಕಾರ್ಯಕ್ರಮ ಹಾಗೂ ಸೂಚನೆಗಳನ್ನು ಮತ್ತು ಬಹು ವರ್ಗಗಳನ್ನು ಕಡಿಮೆಮಾಡುವ ಯೋಜನೆಗಳನ್ನು ಮುಂದಿನ ಲೇಖದಲ್ಲಿ ವಿವೇಚಿಸಲಾಗುವದು.

ಪಕ್ಷಿ ಮಡಿಯಿತೇ !

ಲೇಖಕ : ಶ್ರೀ. ನೇ. ಭೀ. ಪಾಸಣ್ಣವರ

[ಪ್ರೋತ್ಸಾಹನೆಗಾಗಿ ಇವನ್ನು ಪ್ರಕಟಿಸಲಾಗಿದೆ. —ಪ್ರ. ಸಂ.]

ಪಕ್ಷಿ ಮಡಿಯಿತೇ !
ಸತ್ಯವಂತ ಪಕ್ಷಿ ಮಡಿಯಿತೇ ? ‖ ಪಲ್ಲ ‖
  ಶಾಂತಿ-ಪಕ್ಷಿ ಮಡಿಯಿತೇ ? ।
  ಪಕ್ಷಿ ಕಾಣದಾಯಿತೇ ?
  ಪಕ್ಷಿ ಹಾರಿ ಹೋಯಿತೇ ? ।
  ಪಕ್ಷಿ ದೇವರೊಡನೆ ಕೂಡಿತೇ ? ‖ ೧ ‖
ಹರಿಜನ ಗುಡಿಸಲಿನ ಪಕ್ಷಿ ಮಡಿಯಿತೇ ? ।
ಕಟ್ಟುಕಡೆವ ಪಕ್ಷಿ ಮಡಿಯಿತೇ ? ‖
ಸೆರೆಮನೆಯ ಕಂಡ ಪಕ್ಷಿ ಮಡಿಯಿತೇ ?
ದಿವ್ಯ ಪಕ್ಷಿ ಮಡಿಯಿತೇ ? ‖ ೨ ‖
  ಸಗ್ಗದರವನೆಯುಗಿಳಿಯಾಯಿತೇ ।
  ಹಿಂದ ದೇಶದ ಪಕ್ಷಿ ಇಂದು ಇಂದ್ರ-
  ಲೋಕ ಸೇರಿತೇ ? ‖
  ವಿಶ್ವವನೆ ವ್ಯಾಪಿಸಿದ ಪಕ್ಷಿ ಮಡಿಯಿತೇ? ।
  ಕೋಲ್ ಪಿಡಿದ ಪಕ್ಷಿ ಮಡಿಯಿತೇ? ‖ ೩ ‖

(೧೩೬ನೆಯ ಪುಟದಿಂದ ಬಂದುದು)

ಕೊನೆಯ ಮಾತು :

ಇದೇ ಪ್ರಕಾರದ ಚರ್ಚೆಯನ್ನು ಉಳಿದ ವಿಭಾಗಗಳ ಬಗೆಗೂ ಮಾಡಬಹುದು. ಆದರೆ ಶಹರದ ಪ್ರದೇಶದ ಬೇಡಿಕೆಗಳು ಭಿನ್ನವಾಗಿರುವದರಿಂದ ಶಹರಗಳಿಗಾಗಿಯೇ ಶಿಕ್ಷಕರನ್ನು ತರಬೇತುಗೊಳಿಸುವ ಒಂದೆರಡು ಸಂಸ್ಥೆಗಳಿರುವದು ಉಚಿತ.

ಈ ತತ್ವಗಳನ್ನು ಮನ್ನಿಸಿ ಟ್ರೇನಿಂಗ ಕಾಲೇಜುಗಳ ಸ್ಥಳಾಂತರ ಮಾಡುವದಾದರೆ ಶೈಕ್ಷಣಿಕ ದೃಷ್ಟಿಯಿಂದ ಬಹಳ ಲಾಭವಾಗುವದೆಂದು ನಿರೀಕ್ಷಿಸಬಹುದು.

★ ಶೈಕ್ಷಣಿಕ ಸಮಾಚಾರ ★

ಗದಗ ಬೆಟಗೇರಿಯಲ್ಲಿ ಗ್ರಾಮ-ಸುಧಾರಣ ಸಪ್ತಾಹ

ಗದಗಬೆಟಗೇರಿ ೧೨-೧೦-೧೯೫೦

ಗದಗ-ಬೆಟಗೇರಿ ನಗರಸಭೆಯು ಯಾವತ್ತು ಪ್ರಾ. ಶಾಲೆಗಳ ಪರವಾಗಿ ಪೂಜ್ಯ ಗಾಂಧಿಯವರ ಜನ್ಮ ದಿನದ ನಿಮಿತ್ತವಾಗಿ ದಿ. ೨-೧೦-೫೦ರಿಂದ ೧೧-೧೦-೫೦ರ ವರೆಗೆ ಗ್ರಾಮ ಸುಧಾರಣಾ ಸಪ್ತಾಹವು ಒಳ್ಳೇ ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ಸ್ಥಾನಿಕ ಪ್ರಾ. ಶಾಲೆಗಳ ಆಡಳಿತಗಾರರಾದ ಶ್ರೀಮಾನ್ ಎಮ್. ಬಿ ಅರಬಟ್ಟಿಯವರು ಸಪ್ತಾಹವಲ್ಲಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ನಗರದ ಬೇರೆ ಬೇರೆ ಭಾಗಗಳಲ್ಲಿ ಗೊಬ್ಬರಗುಂಡಿಗಳನ್ನು ರಚಿಸುವದು, ಸಮಾಜ ಶಿಕ್ಷಣ ವರ್ಗಗಳನ್ನು ಆರಂಭಿಸುವದು, ಜಾತೀಯ ಐಕ್ಯ ಸಾಧನೆಯ ಉಪಾಯಗಳನ್ನು ಪ್ರಚಾರ ಮಾಡುವದು, ಸಮೀಪ ಗ್ರಾಮಗಳಾದ ಮಲಸಮುದ್ರ, ಅಸುಂಡಿ, ಕಳಸಾಪೂರ, ಚಿಕ್ಕೊಪ್ಪ ಮೊದಲಾದ ಹಳ್ಳಿಗಳಲ್ಲಿ ಗ್ರಾಮ ಜೀವನದ ಮಾಹಿತಿ ಸಂಗ್ರಹಿಸುವದು ಹಾಗೂ ಗಿಡ ನೆಡುವ ರಾಷ್ಟ್ರ ರಚನಾತ್ಮಕ ಕಾರ್ಯದ ವಿಚಾರಗಳನ್ನು ಸಾರ್ವಜನಿಕ ಸಭೆಗಳಲ್ಲಿ ಪ್ರಚಾರ ಮಾಡುವ ಕಾರ್ಯಗಳನ್ನು ಪರಿಣಾಮದಾಯಕವಾಗಿ ಮಾಡಿರುವರು.

ಗ್ರಾಮ ಸುಧಾರಣಾ ಸಪ್ತಾಹದಲ್ಲಿ ಬೆಟಗೇರಿಯಲ್ಲಿ ಎರಡು ಸಾಮಾಜಿಕ ಶಿಕ್ಷಣ ವರ್ಗಗಳು ಪ್ರಾರಂಭವಾಗಿವೆ. ಬೇರೆ ಬೇರೆ ಶಾಲೆಗಳ ಕಂಪೌಂಡುಗಳಲ್ಲಿ ಏಳು ಗೊಬ್ಬರ ಕುಣಿಗಳನ್ನು ತೋಡಿಸಿ,ಗೊಬ್ಬರ ಸಂಗ್ರಹಿಸುವ ವ್ಯವಸ್ಥೆಯಾಗಿದೆ. ಪ್ರಾಥಮಿಕ ಶಾಲೆಗಳ ಪ್ರೌಢ ವರ್ಗಗಳಲ್ಲಿಯ ವಿದ್ಯಾರ್ಥಿಗಳಿಗಾಗಿ ಮಹಾತ್ಮಾಜಿಯವರ ಜೀವನ ಚರಿತ್ರೆ, ವಿಧಾಯಕ ಕಾರ್ಯಗಳ ಮಹತ್ವ, ಅಸ್ಪೃಶ್ಯತಾ ನಿವಾರಣೆ, ಹಿಂದುಳಿದ ಸಮಾಜಗಳ ಉದ್ಧಾರ, ಖಾದಿಯ ಉಪಯೋಗ, ಪಾನಪ್ರತಿಬಂಧ, ಜಾತೀಯ ಐಕ್ಯ ಮುಂತಾದ ವಿಷಯಗಳನ್ನು ಕುರಿತು ನಿಬಂಧ, ಭಾಷಣ, ಹಾಗೂ ಕಾವ್ಯಗಾಯನಗಳ ಸ್ಪರ್ಧೆಗಳು ಏರ್ಪಡಿಸಲ್ಪಟ್ಟಿದ್ದವು.

ದಿ. ೧೧-೧೦-೫೦ನೇ ದಿನ ಯಾವತ್ತೂ ಶಾಲೆಗಳ ಪರವಾಗಿ, ಗದಗ ಸರಸ್ವತಿ ಥಿಯೇಟರಿನಲ್ಲಿ ಸಾಯಂಕಾಲ ೩-೩೦ಕ್ಕೆ ಸ್ಕೂ. ಬೋ. ಚೇಅರಮನ್ನರಾದ ಶ್ರೀಮಾನ್ ನಾಗಯ್ಯನವರು ಶಿವಪ್ಪಯ್ಯನಮಠ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಕೂಡಿತ್ತು. ಸಭೆಗೆ ನಗರದ ಅನೇಕ ನಾಗರಿಕರೂ ಸ್ಕೂ. ಬೋ. ಸದಸ್ಯರೂ ಬಂದಿದ್ದರು. ಭಾಷಣ, ಕಾವ್ಯಗಾಯನ, ನಿಬಂಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಅಧ್ಯಕ್ಷರ ಹಸ್ತದಿಂದ ಇನಾಮುಗಳ ವಿತರಣ ಮಾಡಿಸಲಾಯಿತು. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ, ಗದಗ ಬೆಟಗೇರಿಯ ಅನೇಕ ಸಭ್ಯಗ್ರಹಸ್ಥರು ೧೮೦ ರೂಪಾಯಿಗಳಷ್ಟು ದೇಣಿಗೆಯನ್ನು ಉದಾರವಾಗಿ ಕೊಟ್ಟು, ಪ್ರೋತ್ಸಾಹಿಸಿದರು.

ಶೈಕ್ಷಣಿಕ ಗ್ರೂಪ್ ಸಮ್ಮೇಲನ, ಹೊರ್ತಿ ಜಿಲ್ಲಾ ವಿಜಾಪುರ

ದಿನಾಂಕ ೨೯-೧೦-೫೦ನೇ ದಿವಸ ಹೊರ್ತಿ ಗ್ರೂಪಿನ ೨೫ ಶಾಲೆಗಳ ಶಿಕ್ಷಕರೂ ಹಾಗೂ ಕೆಲವು ವಿದ್ಯಾರ್ಥಿಗಳೂ ಈ ಸಮ್ಮೇಲಕ್ಕೆ ಆಗಮಿಸಿದ್ದರು.

ಮುಂಜಾನೆ ೭॥ ಗಂಟೆಗೆ ಕಾರ್ಯಕ್ರಮಗಳು ಆರಂಭವಾದವು. ಮ. ಜಿ. ಜೆ. ಗುಂಜೀಕರ, ಎ.ಓ. ಆಫೀಸರ, ಸಾ॥ ಮ. ಎಸ್. ಕೆ. ಗಡ, ಪರ್ಸನಲ್ ಎ. ಓ. ಸಾ. ಮ. ಕೆ.ಎಸ್. ಕುಲಕರ್ಣಿ ಕ್ರಾಫ್ಟ ಎ.ಡಿ.ಇ. ಆಯ್, ಮ. ಜಿ. ಎಸ್. ಯಕ್ಕುಂಡಿ. ಬೀಟ ಆಫೀಸರರು, ಮ. ಎನ್. ಎಸ್. ವಾಲಿ ಅಟೆಂಡನ್ಸ ಆಫೀಸರರು ಇವ-

ರೊಂದಿಗೆ ಧ್ವಜವಂದನೆ, ಪ್ರಾರ್ಥನೆಯಾಗಿ ಕಾರ್ಯಕ್ರಮಗಳು ಪ್ರಾರಂಭವಾದವು. ಅದೇ ಬೈಲಿನಲ್ಲಿ ಬಾಲ ಬಲಕಿಯರ ಶಾರೀರಿಕ ಚಟುವಟಿಕಗಳ, ಪಂದ್ಯಾಟಗಳು ಜರುಗಿದವು.

ಗ್ರಾಮ ಭವನದಲ್ಲಿ ಬಂದ ಅಥಿತಿಗಳ ಸ್ವಾಗತವಾದ ನಂತರ ಮೆ. ಎ. ಓ. ಸಾಹೇಬರ ಅಧ್ಯಕ್ಷತೆಯಲ್ಲಿ ಶ್ರೀ. ಗು. ನೀ. ಅಕ್ಕಸ್ತಿ ಉ. ಶಿ. ಹೊರ್ತಿ, ಶ್ರೀ. ಅನರಾದಿ, ಉ. ಶಿ. ನಿಂಬಾಳ, ಶ್ರೀ. ಕೃ. ಪಿ. ಕುಲಕರ್ಣಿ ಹೆ। ಮಾ। ಬಸವನಾಳ, ಶ್ರೀ. ಯಾಗಂಚಿ ಹೆ। ಮಾ। ಇಂಚಗೇರಿ ಇವರು ಮಾದರಿ ಪಾಠಗಳನ್ನು ಕಲಿಸಿದರು.

ಮಧ್ಯಾಹ್ನ ೨॥ ಗಂಟೆಗೆ ಶಿಕ್ಷಕ ಬಾಂಧವರು ಅಧ್ಯಕ್ಷರಿಗೆ ತಮ್ಮ ಅಡಚಣೆಗಳನ್ನು ದೂರಿಕೊಂಡು ಉತ್ತರ ಪಡಕೊಂಡರು. ಆ ನಂತರ ಚಿಕ್ಕ ಮಕ್ಕಳ ವಿನೋದಪರವಾದ ಸಂಭಾಷಣೆ, ಲಾವಣಿಪದ, ಕಾವ್ಯಗಾಯನ, ಜನಪದ ಹಾಡುಗಳು, ಡಪ್ಪಿನ ಪದಗಳು ಒಳ್ಳೇ ಮನೋಹರವಾಗಿ ಸಾಗಿದವು. ಅನೇಕ ಮಹನೀಯರು ಶಿಕ್ಷಣದ ಮಹತ್ವದ ಬಗ್ಗೆ ಜನರಿಗೆ ತಿಳಿಸಿ ಹೇಳಿದರು.

ಕನ್ನಡ ಶಾಲಾ ಮಂದಿರದಲ್ಲಿ ಶೈಕ್ಷಣಿಕ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಶ್ರೀ. ದು. ಭೀ. ಹೊಸಮನಿ, ಉ. ಶಿ. ಹೊರ್ತಿ ಇವರು ಪ್ರದರ್ಶನದಲ್ಲಿ ಅವಿಶ್ರಾಂತ ಪರಿಶ್ರಮ ವಹಿಸಿ ಒಳ್ಳೇ ಯಶಸ್ವಿಯಾಗಿ ತೋರಿಸಿದರು. ಐತಿಹಾಸಿಕ, ಭೌಗೋಲಿಕ ಮಾಡೆಲ್ಲುಗಳನ್ನು ಹಾಕಲಾಗಿತ್ತು. ಅನೇಕ ತರದ ಹುಲ್ಲಿನಿಂದ ಕೈಗಾರಿಕೆ ವಸ್ತುಗಳನ್ನು, ರಟ್ಟಿನ ವಸ್ತುಗಳನ್ನು ತಯಾರಿಸಿ ಪ್ರದರ್ಶನಕ್ಕೆ ಇಡಲಾಗಿತ್ತು.

ರಾತ್ರಿ ೮ ಗಂಟೆಗೆ 'ಪಾನಪ್ರತಿಬಂಧ' ಮತ್ತು 'ರಾಷ್ಟ್ರಧ್ವಜ' ಎಂಬ ಏಕಾಂಕ ನಾಟಕಗಳು ಆದವು.

ಕೊನೆಗೆ ಅಧ್ಯಕ್ಷರ ಹಸ್ತದಿಂದ ಪಾರಿತೋಷಕ ಸಮಾರಂಭವು ಜರುಗಿ ಕಾರ್ಯಕ್ರಮಗಳು ಮುಕ್ತಾಯವಾದವು ಎಂದು ಗ್ರಾಮ ಸಮ್ಮೇಲನದ ಗೌರವ ಕಾರ್ಯದರ್ಶಿಗಳಾದ ಶ್ರಿ. ನ. ಯಜುರ್ವೇದಿ ಹೆ। ಮಾ। ಹೊರ್ತಿ ಇವರು ತಿಳಿಸುವರು.

೭ನೆಯ ಇಯತ್ತೆ ಅಥವಾ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗಾಗಿ ಅತ್ಯುಪಯೋಗಿ ಪುಸ್ತಕಗಳು

೧	ಗಣಿತ ಸಂಗ್ರಹ	೧	೦	೦
೨	ಪ್ರಶ್ನೋತ್ತರ ಸಂಗ್ರಹ	೧	೦	೦
೩	ಪ್ರಬಂಧ ಬರೆಹ	೧	೦	೦
೪	ಮಾದರಿಯ ನಿಬಂಧಗಳು	೦	೮	೦
೫	ಗುಣವಿವೇಚನೆ	೦	೮	೦
೬	ಪ್ರಶ್ನೋತ್ತರ ಭಾಷಾಭ್ಯಾಸ	೧	೦	೦
೭	ಪೌರನೀತಿ	೦	೬	೦
೮	ಇತಿಹಾಸ ಪ್ರಶ್ನೋತ್ತರಮಾಲೆ	೧	೦	೦
೯	ಭಾರತ ರಾಜ್ಯಘಟನೆಯ ಕರಡು	೦	೪	೦
೧೦	ಭೂಗೋಲ ಪ್ರಶ್ನೋತ್ತರಮಾಲೆ	೧	೦	೦

೧೧	ಭೂಮಿತಿ ಪ್ರಶ್ನೋತ್ತರಮಾಲೆ	೧	೦	೦
೧೨	ಜಮಾಖರ್ಚು ಪ್ರಶ್ನೋತ್ತರಮಾಲೆ	೧	೦	೦
೧೩	ಸಾಮಾನ್ಯ ವಿಜ್ಞಾನ ಪ್ರಶ್ನೋತ್ತರ ಮಾಲೆ	೦	೧೨	೦
೧೪	ಆರೋಗ್ಯ ವಿಜ್ಞಾನ ಪ್ರಶ್ನೋತ್ತರ ಮಾಲೆ	೦	೯	೦
೧೫	ವಿಜ್ಞಾನ ಪ್ರಶ್ನೋತ್ತರಮಾಲೆ	೧	೦	೦
೧೬	ಶಾಸ್ತ್ರೀಯವಿಷಯ ಪ್ರಶ್ನೋತ್ತರ ಮಾಲೆ	೦	೯	೦
೧೭	ಹೊಸ ಗಣಿತ	೧	೮	೦

ಇವಲ್ಲದೆ ನಮ್ಮಲ್ಲಿ ಎಲ್ಲ ಪ್ರಕಾರದ ಶಾಲೋಪಯೋಗಿ ಪುಸ್ತಕಗಳೂ, ಎಕ್ಸರಸಾಯಿಜ ಬುಕ್, ಪಾಟಿ ಇತ್ಯಾದಿ ಸ್ಟೇಶನರಿ ಸಾಮಾನುಗಳೂ ಠೋಕಾಗಿಯೂ ಚಿಲ್ಲರೆಯಾಗಿಯೂ ಸಿಗುತ್ತವೆ.

ಕೆ. ಎಸ್. ಕುಲಕರ್ಣಿ ಬುಕ್ ಡಿಪೋ, ಹುಬ್ಬಳ್ಳಿ

ಇತಿಹಾಸವನ್ನು ಕಲಿಸುವ ಬಗೆಗಳು

ಲೇಖಾಂಕ ೧.

ಲೇಖಕರು :

ಶ್ರೀಯುತ ಶಿಂತ್ರಿ ಬಸಪ್ಪನವರು, ಬಿ.ಎ.ಬಿ.ಟಿ. ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣ ಭಾಗ ಧಾರವಾಡ.

ಮೊದಲ ಮಾತು

ಶಿಕ್ಷಣಕ್ಷೇತ್ರವು ದಿನದಿನಕ್ಕೆ ಬಲಿಯಹತ್ತಿದೆ. ಒತ್ತಾಯದ ಪ್ರಾಥಮಿಕ ಶಿಕ್ಷಣವು ಅಮಲಿನಲ್ಲಿ ಬಂದಾಗಿನಿಂದಂತೂ ಮಿಂಚಿನ ವೇಗದಿಂದ ಬೆಳೆಯತೊಡಗಿದೆ. ಕ್ಷೇತ್ರವು ಬೆಳೆದಂತೆ ಸಾಹಿತ್ಯವೂ ಬೆಳೆಯಬೇಕಲ್ಲವೇ? ರಾಗಕ್ಕೆ ತಕ್ಕ ತಾಳದ ಮೇಳವಿದ್ದರೆ ಅದು ಸಂಗೀತವೆನಿಸುವದು; ರುಚಿಸುವದು; ಕಿವಿ-ಮನಗಳಿಗೆ ಆಹ್ಲಾದವನ್ನುಂಟುಮಾಡುವದು; ಎಲ್ಲರೂ ಕಿವಿಕೊಟ್ಟು ಕೇಳುವರು. ಆ ಮೇಳವು ಇಲ್ಲದೆ ಹೋದರೆ, ಅದು ಅಪಸ್ವರವಾಗುವದು. ಅದರಂತೆಯೇ ಶಿಕ್ಷಣದ ಕ್ಷೇತ್ರವು ಬೆಳೆದಂತೆ ಸಾಹಿತ್ಯವು ಬೆಳೆಯಬೇಕೆಂಬುದು ಸುಸ್ಪಷ್ಟವೇ ಇದೆ. ಇನ್ನು ನಮ್ಮ ತಾಯ್ನುಡಿಯ ಸಾಹಿತ್ಯದ ಕಡೆಗೆ ನಮ್ಮ ದೃಷ್ಟಿಯನ್ನು ಹೊರಳಿಸಿ ನೋಡಿದರೆ, ಅದು ಬೆಳೆದಿಲ್ಲವೆಂಬ ಮಾತನ್ನು ದುಃಖದಿಂದ ಹೇಳಬೇಕಾಗಿದೆ. ಅದರಲ್ಲಿಯೂ ಇತಿಹಾಸವನ್ನು ಕಲಿಸುವ ಹೊಸ ಪದ್ಧತಿಗಳ ಬಗೆಗೆ ಹೊತ್ತಿಗೆಗಳೇ ಇಲ್ಲ. ಮೊನ್ನೆ ಮೊನ್ನೆ ಬೆಳಗಾವಿಯ ಮಾಧ್ಯಮಿಕ ಶಿಕ್ಷಕರ ಕಾಲೇಜದ ಪ್ರಾಧ್ಯಾಪಕರಾದ ಶ್ರೀಯುತ ಚ. ಸ. ಬೆನ್ನೂರರವರು 'ಇತಿಹಾಸ ಶಿಕ್ಷಕ' ಎಂಬ ಹೆಸರಿನ ಹೊತ್ತಿಗೆಯೊಂದನ್ನು ಪರಿಶ್ರಮಪಟ್ಟು ಹೊರಡಿಸಿ ಇತಿಹಾಸಕ್ಕೂ ಮತ್ತು ಆ ವಿಷಯವನ್ನು ಕಲಿಸುವ ಶಿಕ್ಷಕ-ಶಿಕ್ಷಕಿಯರಿಗೂ ಸೇವೆ ಸಲ್ಲಿಸಿ ಉಪಕಾರವನ್ನು ಮಾಡಿದ್ದಾರೆ. ಸರಕಾರದವರು 'ಕನ್ನಡ ಪ್ರಾಥಮಿಕ ಶಿಕ್ಷಣ'ದ ಸಂಪಾದಕ ಮಂಡಲದ ಸರಕಾರೇತರ ಸದಸ್ಯನನ್ನಾಗಿ ನನ್ನನ್ನು ನಿಯಮಿಸಿದಂದಿನಿಂದ ಈ ವಿಷಯದ ಬಗೆಗಿದ್ದ ನನ್ನ ವಿಚಾರಗಳನ್ನು ಶಿಕ್ಷಕ-ಶಿಕ್ಷಕಿಯರಿಗೆ ಈ ಮಾಸಿಕದ ಮುಖಾಂತರ ಅರುಹಬೇಕೆಂಬ ಹೆಬ್ಬಯಕೆಯು ನನ್ನಲ್ಲಿ ಒಡಮೂಡಿ ದಿನದಿನಕ್ಕೆ ಬಲಿಯಹತ್ತಿತು. ಆ ನನ್ನ ವಿಚಾರ ತರಂಗಗಳನ್ನೇ ಈ ಲೇಖದಲ್ಲಿಯೂ ಮತ್ತು ಮುಂದೆ ಕೊಡಬಹುದಾದ ಕೆಲವು ಲೇಖಗಳಲ್ಲಿಯೂ ಸ್ಥೂಲಮಾನದಿಂದ ಸಾದರಪಡಿಸುತ್ತೇನೆ. ನಮ್ಮ ತಾಯ್ನಾಡಿನ ಮೂಲೆ ಮೂಲೆಗಳಲ್ಲಿರುವ ಹಳ್ಳಿಗಳಲ್ಲಿ ಕೆಲಸ ಮಾಡುವ ಶಿಕ್ಷಕ-ಶಿಕ್ಷಕಿಯರಿಗೆ ಇತ್ತೀಚಿಗಿನ ಶಿಕ್ಷಣದ ಬಗೆಗೆ ಗ್ರಂಥಗಳನ್ನು ಓದಲು ಶಕ್ಯವಾಗಲಿಲ್ಲ. ಅಂತಹವರಿಗೆ ಓದಲು ಅನುಕೂಲವಾಗಲೆಂಬುದು ಈ ಲೇಖಗಳ ಉದ್ದೇಶವು. ತರಬೇತಿಯನ್ನು ಹೊಂದಿದ ಶಿಕ್ಷಕ-ಶಿಕ್ಷಕಿಯರು ದೂರ ದೂರದ ಹಳ್ಳಿಗಳಲ್ಲಿ ವಾಸವಾಗಿರುವದರಿಂದ ಕೆಲ ಕಾಲ ಗತಿಸಿದನಂತರ ಕೆಲ ಸಂಗತಿಗಳನ್ನು ಮರೆತಿರುವ ಸಂಭವವಿರುತ್ತದೆ. ಅಂತಹವರ ಕಿಂಚಿತ್ ಮಸಕಾದ ಜ್ಞಾಪಕಶಕ್ತಿಯು ಈ ಲೇಖಗಳಿಂದ ಮಸೆದಂತಾಗಿ ಪುನಃ ಹದನಾಗಿರಬಲ್ಲದು ಮತ್ತು ಇತ್ತಿತ್ತಲಾಗಿ ಹೊಸದಾಗಿ ಹೊರಟ ಹೊಸ ಪದ್ಧತಿಗಳನ್ನು ಓದಿ ಅರಗಿಸಿಕೊಂಡು ಹೊಸ ವಾತಾವರಣಕ್ಕೆ ಹೊಂದಿಕೊಂಡು ಹೋಗಲು ಅವರು ತಕ್ಕವರಾಗಬಲ್ಲರು. ತರಬೇತಿಯನ್ನು ಹೊಂದದ ಶಿಕ್ಷಕ-ಶಿಕ್ಷಕಿಯರಿಗೆ ಈ ಲೇಖಗಳು ಮಾರ್ಗದರ್ಶಕವಾಗಬಲ್ಲವು. ಒಟ್ಟಾರೆ, ಎಲ್ಲ ಶಿಕ್ಷಕ-ಶಿಕ್ಷಕಿಯರಿಗೆ ಈ ಲೇಖಗಳು ಕೈಗನ್ನಡಿಯಾಗಲೆಂದು ನನ್ನ ಹಿರಿಯಾಸೆ.

'ಇತಿಹಾಸ' ಅಂದರೇನು ?

ಈ ಶಬ್ದದ ಮೊದಲನೆಯ ಪದವಾದ 'ಇತಿ'ಯನ್ನು ನೋಡಿದೊಡನೆ ಇದು ಸಂಸ್ಕೃತ ಶಬ್ದವೆಂದು ಥಟ್ಟನೆ ಹೊಳೆಯುತ್ತದೆ. ಇದರ ಪದಗಳನ್ನು ಬಿಡಿಬಿಡಿಯಾಗಿ ಹೇಳುವದಾದರೆ, ಅದು ಇತಿ+ಹ+ಆಸ ಎಂದು ಆಗುತ್ತದೆ. ಇದರ ಶಬ್ದಶಃ ಅರ್ಥವು 'ಈ ಪ್ರಕಾರ ಇತ್ತು' ಇಲ್ಲವೆ 'ಹೀಗೆ ಆಯಿತು' ಎಂದಾಗುತ್ತದೆ. ಈ ಅರ್ಥದ ಪ್ರಕಾರ ಇತಿಹಾಸವೆಂದರೆ ಆಗಿಹೋದ ಇಲ್ಲವೆ ಜರುಗಿದ ಸಂಗತಿಗಳ ನಿರೂಪಣೆ ಇಲ್ಲವೆ ವಿವರಣೆ ಎಂದಂತಾಯಿತು. ನಮ್ಮ ಕಣ್ಣಿಗೆ ಕಾಣುವ ಸೂರ್ಯ, ಚಂದ್ರ, ನಕ್ಷತ್ರ, ಗ್ರಹ ಮೊದಲಾದವುಗಳಿಂದ ಕೂಡಿದ ವಿಶಾಲವಾದ ಸೃಷ್ಟಿಯು ಹೇಗೆ ಹುಟ್ಟಿತು. ನಮ್ಮ ಪೃಥ್ವಿಯ ಜನ್ಮವು ಹೇಗೆ ಆಯಿತು, ಅದು ಮಾರ್ಪಾಡುಗಳನ್ನು ಹೊಂದುತ್ತ ಹೊಂದುತ್ತ ಈಗಿನ ಮಟ್ಟಕ್ಕೆ ಹೇಗೆ ಬಂದು ಮುಟ್ಟಿತು, ಇವೆಲ್ಲ ಸಂಗತಿಗಳು ಇತಿಹಾಸಕ್ಕೆ ಸಂಬಂಧಿಸಿದವುಗಳಾದವು. ನಮ್ಮ ಸುತ್ತಲೂ ನಿಸರ್ಗದಲ್ಲಿ ಕಾಣುವ ಪ್ರತಿಯೊಂದು ವಸ್ತುವಿಗೂ ಇತಿಹಾಸವಿದೆ. ಗಿಡ, ಕಲ್ಲು, ಮಣ್ಣು, ಮನುಷ್ಯ, ಕ್ರಿಮಿ-ಕೀಟಕ, ಹುಳಹುಪ್ಪಡಿ, ಪಶುಪಕ್ಷಿ ಮೊದಲಾದ ಪ್ರತಿಯೊಂದಕ್ಕೂ ಇತಿಹಾಸವಿದೆ. ಕಣ್ಣಿದ್ದವರಿಗೆ ಮಾತ್ರ ಅದು ಗೋಚರವಾಗುತ್ತದೆ. ದೇವರಿಲ್ಲದ ವಸ್ತುವು ಈ ಸೃಷ್ಟಿಯಲ್ಲಿ ಒಂದೂ ಇಲ್ಲವೆಂದು ಹೇಗೆ ಅನ್ನುವೆವೋ ಹಾಗೆಯೇ ಇತಿಹಾಸವಿಲ್ಲದ ವಸ್ತುವು ಈ ನಿಸರ್ಗದಲ್ಲಿ ಒಂದೂ ಇಲ್ಲವೆಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅದರ ಅರ್ಥವು ಇಷ್ಟು ವ್ಯಾಪಕವಾದದ್ದಾಗಿದೆ. ಈ ವ್ಯಾಪಕಾರ್ಥದಲ್ಲಿ ನಮ್ಮ ಅಭ್ಯಾಸ ಪತ್ರಿಕೆಯೊಳಗಿನ ಬೇರೆ ಬೇರೆ ವಿಷಯಗಳೆಲ್ಲ ಇತಿಹಾಸದಲ್ಲಿ ಅಡಕವಾಗುತ್ತವೆ. ಆದರೆ, ಈ ವ್ಯಾಪಕಾರ್ಥದಲ್ಲಿ ಅದನ್ನು ಈಗ ಯಾರೂ ಉಪಯೋಗಿಸುವದಿಲ್ಲ. ಅದರ ಅರ್ಥವು ಈಗ ಮರ್ಯಾದಿತವಾಗಿದೆ. ಈಗ ಇತಿಹಾಸವೆಂದರೆ ಮಾನವನ ಪ್ರಗತಿಯ ವೃತ್ತಾಂತವು. ಮಾನವನು ಕಾಡುಮನುಷ್ಯ ಇಲ್ಲವೆ ಗವಿ ಮನುಷ್ಯನಿದ್ದಾಗಿನಿಂದ ಸುಧಾರಿಸುತ್ತ ಸುಧಾರಿಸುತ್ತ ಈಗಿನ ಮಟ್ಟಕ್ಕೆ ಹೇಗೆ ಬಂದು ಮುಟ್ಟಿದನೆಂಬದನ್ನು ವರ್ಣಿಸುವದೇ ಇತಿಹಾಸದ ಈಗಿನ ಗುರಿಯು. ಕೆಲ ಕಾಲದ ಹಿಂದೆ ಅದರ ಗುರಿಯು ಬೇರೆ ತೆರನಾಗಿದ್ದಿತು. ಅರಸು-ಅರಸಿಯರ ಜನ್ಮಸ್ಥಳ, ಅವರು ಹುಟ್ಟಿದ ಇಸವಿ, ಎಷ್ಟು ಯುದ್ಧಗಳನ್ನು ಮಾಡಿದರು, ಎಷ್ಟರಲ್ಲಿ ಸೋತರು, ಎಷ್ಟರಲ್ಲಿ ಗೆದ್ದರು, ಅವುಗಳಲ್ಲಿ ಎಷ್ಟು ಜನರು ಮಡಿದರು, ಗೆದ್ದ ರಾಜ್ಯಗಳೆಷ್ಟು ಅವರು ಸತ್ತ ಇಸವಿಗಳು, ಇಂತಹ ಕೆಲಸಕ್ಕೆ ಬಾರದ ಸಂಗತಿಗಳ ಬಗೆಗೆ ಹೇಳಿಬಿಟ್ಟರೆ ಅದು ಇತಿಹಾಸವಾಗುತ್ತಿತ್ತು. ಈ ಹಳೆ ವಿಚಾರವು ಈಗ ಬಯಲಾಗಿಬಿಟ್ಟಿದೆ. ಈಗಿನ ಹೊಸ ಶಿಕ್ಷಣದಲ್ಲಿ ಇತಿಹಾಸದ ಗುರಿಯು ಇಲ್ಲವೆ ಅರ್ಥವು ಮೇಲೆ ಹೇಳಿದಂತೆ ಮಾನವನ ಪ್ರಗತಿಯ ವರ್ಣನೆಯಾಗಿದೆ. ಈಗ ನಾವು ಅರಸು-ಅರಸಿಯರ ಎಲ್ಲ ಚಟುವಟಿಕೆಗಳನ್ನು ಗಣನೆಗೆ ತಕ್ಕೊಳ್ಳುವದಿಲ್ಲ. ಕೆಲಸಕ್ಕೆ ಬಾರದ ಯುದ್ಧಗಳಿಗೂ, ಪುಂಡಾಟಿಕೆಗಳಿಗೂ, ಪ್ರಾಣಹಿಂಸೆಗಳಿಗೂ ಮಹತ್ವ ಕೊಡುವದಿಲ್ಲ. ಮಾನವನ ಸಂಸ್ಕೃತಿಯನ್ನು ಬೆಳೆಯಿಸಲು ಇಲ್ಲವೆ ಪ್ರಜರ ಸುಖಸಂಪತ್ತುಗಳನ್ನು ಹೆಚ್ಚಿಸಲು ತ್ರಿಕರಣಪೂರ್ವಕವಾಗಿ ಹೆಣಗಾಡಿದ ಅರಸು-ಅರಸಿಯರ ಚರಿತ್ರಗಳಿಗೆ ಮಾತ್ರ ಈಗಿನ ನಮ್ಮ ಇತಿಹಾಸದಲ್ಲಿ ಸ್ಥಾನವಿದೆ. ಇದುವೇ ಇತಿಹಾಸದ ಈಗಿನ ಹೊಸ ದೃಷ್ಟಿಯು. ಅರಸು-ಅರಸಿಯರ ಯೋಗ್ಯತೆಯನ್ನು ಕಂಡುಹಿಡಿಯಲು ಈ ಹೊಸ ದೃಷ್ಟಿಯು ಉತ್ತಮವಾದೊಂದು ಅಳತೆಗೋಲಾಗಿದೆ. ಈ ಅಳತೆಗೋಲನ್ನು ಐತಿಹಾಸಿಕ ಪುರುಷರಿಗೆ ಇಲ್ಲವೆ ಸ್ತ್ರೀಯರಿಗೆ ಹಚ್ಚಿ ನೋಡಿ ಅವರ ಯೋಗ್ಯತೆಯನ್ನು ಕಂಡುಹಿಡಿಯುವದೇ ಈಗಿನ ಇತಿಹಾಸದ ಮೂಲೋದ್ದೇಶವು.

ಇತಿಹಾಸವು ಶಾಸ್ತ್ರವೋ ಕಲೆಯೋ ?

ಅರಸು-ಅರಸಿಯರ ಇಲ್ಲವೆ ಐತಿಹಾಸಿಕ ನರ-ನಾರಿಯರ ಯೋಗ್ಯತೆಯನ್ನು ಕಂಡುಹಿಡಿಯಲು ಇತಿಹಾಸದ ಈಗಿನ ಹೊಸ ದೃಷ್ಟಿಯ ಅಳತೆಗೋಲನ್ನು ಉಪಯೋಗಿಸಬೇಕೆಂದು ಮೇಲೆ ಹೇಳಿದೆಯಲ್ಲವೆ ? 'ಅಳತೆಗೋಲು' ಇದು ಶಾಸ್ತ್ರದ ಮುಖ್ಯ ಲಕ್ಷಣವಲ್ಲವೇ ? ಶಾಸ್ತ್ರವು ನಿರ್ದಿಷ್ಟಪಡಿಸಿದ ಕ್ರಮ-ನಿಯಮಗಳಿಂದಲೂ ಕಟ್ಟು-ನಿಟ್ಟುಗಳಿಂದಲೂ ಬಿಗಿಯಲ್ಪಟ್ಟಿರುತ್ತದೆ. ಆದರೆ, ಈ ನಮ್ಮ ಇತಿಹಾಸದಲ್ಲಿ ನಾವು ಉಪಯೋಗಿಸುವ ಅಳತೆಗೋಲಿಗೂ ಗಣಿತ-ಭೂಮಿತಿ-ವಿಜ್ಞಾನ ಮೊದಲಾದ ಅಚ್ಚುಕಟ್ಟಿನ ಶಾಸ್ತ್ರಗಳ ಅಳತೆಗೋಲಿಗೂ,

ಅಂತರವಿದೆ. ಗಣಿತ, ಭೂಮಿತಿ, ವಿಜ್ಞಾನ, ಮೊದಲಾದ ಶಾಸ್ತ್ರಗಳಲ್ಲಿಯ ಅಳತೆಗಳು ನಿರ್ದಿಷ್ಟಪಡಿಸಿದವುಗಳಾಗಿವೆ. ಉದಾಹರಣಾರ್ಥವಾಗಿ, ಒಂದು ಯಾರ್ಡಿಗೆ ಮೂರು ಫೂಟುಗಳು, ಒಂದು ಫೂಟಿಗೆ ಹನ್ನೆರಡು ಇಂಚುಗಳು ಎಂದು ನಿಷ್ಕರ್ಷಿಸಲ್ಪಟ್ಟಿದೆ. ಇತಿಹಾಸದಲ್ಲಿಯ ಅಳತೆಗೋಲು ಇಂತಿಷ್ಟೇ ಅಳತೆಯದೆಂದು ನಿಷ್ಕರ್ಷಿತವಾದುದಲ್ಲ. ಯಾಕಂದರೆ, ಈ ಅಳತೆಗೋಲು ಮಾನವನ ಚಟುವಟಿಕೆ, ರೀತಿ-ನೀತಿ, ಆಚಾರ,-ವಿಚಾರಗಳಿಗೆ ಸಂಬಂಧಿಸಿದ್ದಾಗಿದೆ. ಆದುದರಿಂದ, ಇತಿಹಾಸವು ಶಾಸ್ತ್ರವಲ್ಲವೆಂಬ ಗ್ರಹಿಕೆಯಾಗುವದು ಸ್ವಾಭಾವಿಕ. ವಸ್ತುಸ್ಥಿತಿಯು ಮಾತ್ರ ಹಾಗಿಲ್ಲ. ಇತಿಹಾಸದಲ್ಲಿ ಕಾರಣಗಳಿಂದ ಪರಿಣಾಮುವನ್ನು ಕೆಲ ಸಂದರ್ಭಗಳಲ್ಲಿ ಕಂಡುಹಿಡಿಯಲು ಶಕ್ಯವಿದೆ. ಪರಿಣಾಮದಿಂದ ಕಾರಣಗಳನ್ನು ಕಂಡುಹಿಡಿಯಲು ಬರುವದು. ಎಷ್ಟೋ ಐತಿಹಾಸಿಕ ಸಂಗತಿಗಳಿಗೆ ಸಮಾನವಾದ ಕಾರಣಗಳು ಮತ್ತು ಪರಿಣಾಮಗಳು ಇದ್ದುದು ಕಂಡು ಬರುತ್ತದೆ. ಉದಾಹರಣಾರ್ಥವಾಗಿ, ನಮ್ಮ ದೇಶದ ಸ್ವಾತಂತ್ರ್ಯದ ಯುದ್ಧ, ಇಂಡೋನೇಶಿಯದ ಸ್ವಾತಂತ್ರ್ಯದ ಯುದ್ಧ, ಬ್ರಹ್ಮದೇಶದ ಸ್ವಾತಂತ್ರ್ಯದ ಯುದ್ಧ, ಅಮೇರಿಕದ ಸ್ವಾತಂತ್ರ್ಯದ ಯುದ್ಧ ಇತ್ಯಾದಿ. ಅನೈಕ್ಯದಿಂದಾದ ದುಷ್ಪರಿಣಾಮಗಳು ರಜಪೂತರ ಕಾಲಕ್ಕೂ ಜರುಗಿದವು. ಬಹಮನಿ ರಾಜ್ಯದಲ್ಲಿಯೂ ಸಂಭವಿಸಿದವು, ವಿಜಯನಗರದಲ್ಲಿಯೂ ಉಂಟಾದವು ಮತ್ತು ಮರಾಠರಲ್ಲಿಯೂ ಆವಿರ್ಭವಿಸಿದವು. ಇವೆಲ್ಲ ಶಾಸ್ತ್ರದ ಲಕ್ಷಣಗಳಲ್ಲವೇ? ಇತಿಹಾಸದಲ್ಲಿ ಸಂಗತಿಗಳ ಪುನರಾವೃತ್ತಿಯಾಗುವದು (History repeats itself) ಶಾಸ್ತ್ರದ ಲಕ್ಷಣವಲ್ಲದೆ ಮತ್ತೇನು? ಯಾವದಾದರೊಂದು ಸಂಗತಿಯ ಪುನರಾವೃತ್ತಿಯಾಯಿತೆಂದರೆ ಅದರ ಕಾರಣಗಳೂ ಪರಿಣಾಮಗಳೂ ಒಂದೇ ತೆರನಾಗಿರುವವಲ್ಲವೇ? ಆದುದರಿಂದಲೇ ನಾವು ಆ ಸಂಗತಿಯ ಪುನರಾವೃತ್ತಿಯಾಯಿತೆಂದು ನಿರ್ಣಯ ಕೊಡುವೆವಲ್ಲವೇ? ಇದುವೆ ಶಾಸ್ತ್ರದ ಮುಖ್ಯ ಲಕ್ಷಣವು. ಮೇಲಾಗಿ, ಇತಿಹಾಸದಲ್ಲಿ ಸಂಶೋಧನವೊಂದು ದೊಡ್ಡ ವಿಭಾಗವಿದೆ. ಸಂಶೋಧನದ ಚಟುವಟಿಕೆಗಳೆಲ್ಲವೂ ಕ್ರಮಬದ್ಧವಾಗಿವೆ; ಶಾಸ್ತ್ರಬದ್ಧವಾಗಿವೆ. ಗಣಿತ, ಭೂಮಿತಿ ಮೊದಲಾದ ನಾಮಾಂಕಿತ ಶಾಸ್ತ್ರಗಳಂತೆ ಸಂಶೋಧನವೂ ಕ್ರಮನಿಯಮಾವಳಿಗಳಿಂದಲೂ ಕಟ್ಟು-ನಿಟ್ಟುಗಳಿಂದಲೂ ಚೆನ್ನಾಗಿ ಬಿಗಿಯಲ್ಪಟ್ಟಿದೆಯೆಂಬ ಮಾತು ಎಲ್ಲರಿಗೂ ಗೊತ್ತಿರಲು ಸಾಕು. ಆದುದರಿಂದ, ಇತಿಹಾಸವು ಸಂಪೂರ್ಣವಾಗಿರದಿದ್ದರೂ ಕೆಲ ಮಟ್ಟಿಗಾದರೂ ಶಾಸ್ತ್ರವಿದೆಯೆಂಬುದನ್ನು ನಾವೆಲ್ಲರೂ ಒಪ್ಪಲೇಬೇಕು.

ಇನ್ನು ಕಲೆಯ ಬಗ್ಗೆ ವಿಚಾರಿಸೋಣ. ಇತಿಹಾಸದಲ್ಲಿ ವರ್ಣನೆಯ ಮಹತ್ವವು ಅಷ್ಟಿಷ್ಟಲ್ಲ. ವರ್ಣನೆಯು ಚಿತ್ತಾಕರ್ಷಕವಿದ್ದಷ್ಟು ಇತಿಹಾಸಕ್ಕೆ ಕಳೆ ಏರುತ್ತ ಹೋಗುತ್ತದೆ. ಐತಿಹಾಸಿಕ ಸಂಗತಿಗಳನ್ನು ನೀರಸವಾಗಿಯೂ ಸಪ್ಪಗಾಗಿಯೂ ವಿವರಿಸಿದರೆ, ಅವುಗಳನ್ನು ಯಾರೂ ಓದುವದಿಲ್ಲ. ಅವೇ ಸಂಗತಿಗಳಲ್ಲಿ ಜೀವದ ಕಳೆ ತುಂಬಿ ಮನರಂಜನವಾಗುವಂತೆ ಹೇಳಿದರೆ, ಎಲ್ಲರೂ ಪ್ರೀತಿಯಿಂದಲೂ ಆಸ್ಥೆಯಿಂದಲೂ ಓದುವರು. ಸಾಲೆಯಲ್ಲಿ ಮಕ್ಕಳಿಗೆ ಅರಸು-ಅರಸಿಯರ ಚರಿತ್ರವನ್ನು ಹೇಳಿದರೆ ಅವರು ಅಷ್ಟೊಂದು ಲಕ್ಷ್ಯಗೊಟ್ಟು ಕೇಳುವದಿಲ್ಲ. ಅದೇ ಚರಿತ್ರವನ್ನು ಕಥೆಯ ರೂಪದಿಂದ ಹಾವಭಾವ ಮಾಡುತ್ತ ಹೇಳಿದರೆ ಮಕ್ಕಳು ಎಷ್ಟು ಅಕ್ಕರತೆಯಿಂದಲೂ ಏಕಾಗ್ರಚಿತ್ತದಿಂದಲೂ ಕೇಳುತ್ತಾರೆಂಬ ಮಾತನ್ನು ಶಿಕ್ಷಕ-ಶಿಕ್ಷಕಿಯರಿಗೆ ಹೇಳುವದೇ ಬೇಡ. ಮಕ್ಕಳ ಅವಧಾನವೆಲ್ಲವೂ ಶಿಕ್ಷಕ-ಶಿಕ್ಷಕಿಯರ ಕೈಯಲ್ಲಿ ಸಿಕ್ಕು ಬಿಡುತ್ತದೆ! ಇದು ಕಲೆಯಲ್ಲದೆ ಮತ್ತೇನು? ಕವಿ ಕಾದಂಬರಿಕಾರರ ಹಾಗೆ ಇತಿಹಾಸಕಾರನು ಓದುಗರಿಗೆ ರುಚಿಸುವಂತಹ ಚಿತ್ತಾಕರ್ಷಕವಾದ ಶೈಲಿಯಿಂದ ವರ್ಣಿಸುವ ಕಲೆಯನ್ನು ಅರಿತಿರಬೇಕು. ಅದರಂತೆಯೇ ಈ ವಿಷಯವನ್ನು ಕಲಿಸುವ ಶಿಕ್ಷಕ-ಶಿಕ್ಷಕಿಯರೂ ಈ ಕಲೆಯ ಸ್ವಾಮಿತ್ವವನ್ನು ಪಡೆದವರಿರಬೇಕು. ರೂಢಿಯಿಂದ ಈ ಕಲೆಯು ಕೈವಶವಾಗಲು ಶಕ್ಯವಿದೆಯೆಂಬ ಮಾತನ್ನು ಎಷ್ಟು ಒತ್ತಿ ಹೇಳಿದರೂ ಕಡಿಮೆಯೇ. ಇತಿಹಾಸಕಾರನಿಗೂ ಮತ್ತು ಕವಿ-ಕಾದಂಬರಿಕಾರರಿಗೂ ಇರುವ ಭೇದವಿಷ್ಟೇ. ಕವಿಗಳೂ ಕಾದಂಬರಿಕಾರರೂ ಕಲ್ಪನಾ ಸಾಮ್ರಾಜ್ಯದಲ್ಲಿ ಮುಳುಗೇಳುತ್ತಾರೆ. ಆದರೆ, ಇತಿಹಾಸಕಾರನು ನಿಜ ಸಂಗತಿಗಳನ್ನಷ್ಟೇ ವರ್ಣಿಸುತ್ತಾನೆ; ವರ್ಣಿಸುವ ಕಲೆಯಲ್ಲಿ ಮೇಲೆ ಹೇಳಿದಂತೆ ವೈವುಂಡವನು ಮಾತ್ರ ಇರಬೇಕು. ಇವೆಲ್ಲವುಗಳ

ಮೇಲಿಂದ ಇತಿಹಾಸವು ಶಾಸ್ತ್ರವೂ ಅಹುದು ಕಲೆಯೂ ಅಹುದು ಎಂಬ ಮಾತು ಸುಸ್ಪಷ್ಟವೇ ಇದೆ.

ಇತಿಹಾಸದ ಉಪಯುಕ್ತತೆ

ಇತಿಹಾಸವನ್ನು ಕಲಿಯುವದರಿಂದ ನಮಗೆ ಏನು ಪ್ರಯೋಜನ, ಅದನ್ನು ಏಕೆ ಕಲಿಯಬೇಕು, ನಮ್ಮ ಅಭ್ಯಾಸ ಪತ್ರಿಕೆಯಲ್ಲಿ ಅದಕ್ಕೇಕೆ ಸ್ಥಾನವೀಯಬೇಕು, ಈ ಮೊದಲಾದ ಪ್ರಶ್ನೆಗಳು ಏಳುವದು ಸ್ವಾಭಾವಿಕ. ಈ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕೊಡಲೇ ಬೇಕು. 'ಮನುಷ್ಯನು ಅನುಭವದಿಂದ ಕಲಿಯುತ್ತಾನೆ' (Man learns by experience) ಎಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಅನುಭವವು ಎರಡು ತೆರನಾಗಿದೆ. ಸ್ವಂತದ ಅನುಭವ, ಪರರಿಂದ ಬಂದ ಅನುಭವ. ಸ್ವಂತದ ಅನುಭವವು ಯಾವಾಗಲೂ ಹೆಚ್ಚಿನದು ಮತ್ತು ಒಳ್ಳೇ ಪರಿಣಾಮಕಾರಿಯಾದದ್ದೆಂಬ ಮಾತು ಮನಃಶಾಸ್ತ್ರವನ್ನೋದಿಕೊಂಡವರಿಗೆಲ್ಲ ವಿದಿತವೇ ಇದೆ. ಪರರಿಂದ ಬಂದ ಅನುಭವವು ಅಷ್ಟು ಪರಿಣಾಮಕಾರಿಯಾಗದಿದ್ದರೂ ಒಳ್ಳೇ ಹಿತಕಾರಿಯೂ ಮಾರ್ಗದರ್ಶಕವೂ ಆಗಿದೆ. 'ಚಿಕಿತ್ಸೆಗಿಂತ ಪ್ರತಿಬಂಧೋಪಾಯವು ಮೇಲು' (Prevention is better than cure) ಎಂಬಂತೆ ಪರರಿಂದ ಬಂದ ಅನುಭವದ ಉಪಯೋಗವನ್ನು ನಾವು ಚನ್ನಾಗಿ ಮಾಡಿಕೊಂಡರೆ ನಮಗೆ ಒದಗಬಹುದಾದ ತೊಂದರೆ ತಾಪತ್ರಯಗಳನ್ನು, ಅಡ್ಡಿ-ಆತಂಕಗಳನ್ನು, ಇಕ್ಕಟ್ಟು-ಬಿಕಟ್ಟುಗಳನ್ನು ಇಲ್ಲವೆ ಎಡರು-ತೊಡರುಗಳನ್ನು ಅನಾಯಾಸವಾಗಿ ನೀಗಿಸಿಕೊಳ್ಳಬಲ್ಲೆವು. ಸ್ವಂತದ ಅನುಭವದ ಸಲುವಾಗಿ ಅವುಗಳಲ್ಲಿ ಸಿಲುಕಿ ಒದ್ದಾಡುವದಕ್ಕಿಂತ ಪರರ ಅನುಭವಗಳ ಸದುಪಯೋಗದ ಬಲದಿಂದ ಆ ಕಷ್ಟಕಾರ್ಪಣ್ಯಗಳು ನಮಗೆ ತಗಲದಂತೆ ಅವುಗಳನ್ನು ದೂರಿಡುವದು ಲೇಸಲ್ಲವೇ ? ಈ ಜಗತ್ತಿನಲ್ಲಿ ಪ್ರತಿಯೊಂದು ಸಂಗತಿಯನ್ನು ಸ್ವಂತ ಅನುಭವದಿಂದ ಕಲಿತುಕೊಳ್ಳುವದು ಶಕ್ಯವಿಲ್ಲ ಮತ್ತು ಕೆಲವುಗಳನ್ನು ಹಾಗೆ ಕಲಿತುಕೊಳ್ಳುವದು ಇಷ್ಟವಿಲ್ಲ. ಹೀಗಾಗಿ, ಪರರಿಂದ ಬಂದ ಅನುಭವಗಳ ಸಹಾಯದಿಂದಲೇ ನಾವು ಬಹುತರ ನಮ್ಮೆಲ್ಲ ಜ್ಞಾನಾರ್ಜನೆಯನ್ನು ಮಾಡಿಕೊಳ್ಳಬೇಕಾಗಿದೆ. ಇತಿಹಾಸವೆಂದರೆ ಮಾನವನ ಪ್ರಗತಿಯ ವರ್ಣನೆಯೆಂದು ಮೇಲೆ ಹೇಳಿದೆ. ಪ್ರಗತಿಯಾಗುವದು ಅನುಭವಗಳ ಸಹಾಯದಿಂದಲ್ಲವೇ ? ಹಾಗಾದರೆ, ಇತಿಹಾಸವೆಂದರೆ ಮಾನವನ ಅನುಭವಗಳ ವೃತ್ತಾಂತವೆಂದಂತಾಯಿತು. ಪರರ ಅನುಭವಗಳಿಂದ ಬಹುತರ ನಮ್ಮೆಲ್ಲ ಜ್ಞಾನವನ್ನು ನಾವು ಸಂಪಾದಿಸಿಕೊಳ್ಳಬೇಕಾಗಿರುವದರಿಂದ, ಇತಿಹಾಸದ ಜ್ಞಾನವು ನಮಗೆ ಅವಶ್ಯವು. ನಮ್ಮ ನಾಡಿನ ಐತಿಹಾಸಿಕ ಪುರುಷರ ಮತ್ತು ಸ್ತ್ರೀಯರ ಆದರ್ಶ ಜೀವನವು ನಮ್ಮ ಕಣ್ಣುಗಳ ಮುಂದೆ ಯಾವಾಗಲೂ ಇರಬೇಕಲ್ಲವೇ ? ನಮ್ಮ ನಾಡಿನ ಸಂಸ್ಕೃತಿಯನ್ನು ಅವರು ಹೇಗೆ ಹೆಚ್ಚಿಸಿದರೆಂಬುದು ನಮಗೆ ಗೊತ್ತಾಗಬೇಕಲ್ಲವೇ ? ಹಕ್ಕು-ಬಾಧ್ಯತೆಗಳ ಸಲುವಾಗಿ ಅವರು ಹೇಗೆ ಹಗಲಿರುಳೂ ಬಡಿದಾಡಿದರೆಂಬದನ್ನು ನಾವು ತಿಳಿಯಬೇಕಲ್ಲವೇ ? ಸ್ವದೇಶಾಭಿಮಾನವು ಅವರಲ್ಲಿ ಹೇಗೆ ತುಂಬಿ ತುಳುಕುತ್ತಿತ್ತೆಂಬದನ್ನು ಕಂಡುಹಿಡಿದು ನಾವೂ ಅವರಂತೆ ಆಗಲು ಪ್ರಯತ್ನಿಸಬೇಕಲ್ಲವೇ ? ಸ್ವಾತಂತ್ರ್ಯದ ಸಲುವಾಗಿ ಅವರು ಹೇಗೆ ಸ್ವಾರ್ಥತ್ಯಾಗವನ್ನು ಮಾಡಿದರೆಂಬನ್ನೂ ಪ್ರಸಂಗ ಬಂದಾಗ ಕೆಲವರು ತಮ್ಮ ಪ್ರಾಣಾರ್ಪಣವನ್ನೂ ಕೂಡಾ ಹೇಗೆ ಮಾಡಿದರೆಂಬದನ್ನೂ ನಾವು ಅರಿಯಬೇಕಲ್ಲವೇ ? ಇವೇ ಮೊದಲಾದವುಗಳು ನಮಗೆ ಸಾಧ್ಯವಾಗಬೇಕಾದರೆ, ನಾವು ಇತಿಹಾಸವನ್ನು ಕಲಿಯಲೇಬೇಕೆಂಬ ಮಾತು ನಿರ್ವಿವಾದವು. ನಮ್ಮ ರಾಜ್ಯಘಟನೆಯು ಪ್ರಜಾಪ್ರಭುತ್ವದ ತತ್ವಗಳಂತೆ ನಡೆದಿದೆಯೋ ಇಲ್ಲವೆ ಏಕತಂತ್ರಾಧಿಕಾರದತ್ತ ಸಾಗಿದೆಯೋ ಪ್ರಜಾಸತ್ತೆಯ ತತ್ವಗಳು ಎಷ್ಟರ ಮಟ್ಟಿಗೆ ಘಟನೆಯಲ್ಲಿ ಸೇರ್ಪಡೆಯಾಗಿವೆ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆಯೋ ಹೇಗೆ, ವ್ಯಕ್ತಿಸ್ವಾತಂತ್ರ್ಯವೆಂದರೇನು, ಪ್ರತಿಯೊಬ್ಬ ವ್ಯಕ್ತಿಯ ಹಕ್ಕು-ಬಾಧ್ಯತೆಗಳಾವವು, ವ್ಯಕ್ತಿ ಸ್ವಾತಂತ್ರ್ಯಕ್ಕೆ ಮೇರೆ ಇದೆಯೋ ಹೇಗೆ, ಮೇರೆಯು ಇದ್ದರೆ ಅದು ಎಷ್ಟರಮಟ್ಟಿಗೆ ಇದೆ ಇವೆಲ್ಲ ಸಂಗತಿಗಳ ತುಲನಾತ್ಮಕ ಅರಿವು ಇತಿಹಾಸವನ್ನು ಚನ್ನಾಗಿ ಓದಿ ಅರಗಿಸಿಕೊಂಡರೇನೇ ಸಾಧ್ಯವಿದೆಯೆಂಬ ಮಾತನು ಬೇಗನೆ ತಿಳಕೊಂಡಷ್ಟು ಒಳಿತು. ಉತ್ತಮ ನಾಗರಿಕರಾಗಬೇಕೆಂದು ನಾವು ನಿಜವಾಗಿ ಬಯಸುತ್ತಿದ್ದರೆ, ನಮಗೆ ಇತಿಹಾಸದ ಜ್ಞಾನವು ಅತ್ಯಗತ್ಯವು. ಈ

ಅಂತರವಿದೆ. ಗಣಿತ, ಭೂಮಿತಿ, ವಿಜ್ಞಾನ, ಮೊದಲಾದ ಶಾಸ್ತ್ರಗಳಲ್ಲಿಯ ಅಳತೆಗಳು ನಿರ್ದಿಷ್ಟಪಡಿಸಿದವುಗಳಾಗಿವೆ. ಉದಾಹರಣಾರ್ಥವಾಗಿ, ಒಂದು ಯಾರ್ಡಿಗೆ ಮೂರು ಫೂಟುಗಳು, ಒಂದು ಫೂಟಿಗೆ ಹನ್ನೆರಡು ಇಂಚುಗಳು ಎಂದು ನಿಷ್ಕರ್ಷಿಸಲ್ಪಟ್ಟಿದೆ. ಇತಿಹಾಸದಲ್ಲಿಯ ಅಳತೆಗೋಲು ಇಂತಿಷ್ಟೇ ಅಳತೆಯದೆಂದು ನಿಷ್ಕರ್ಷಿತವಾದುದಲ್ಲ. ಯಾಕಂದರೆ, ಈ ಅಳತೆಗೋಲು ಮಾನವನ ಚಟುವಟಿಕೆ, ರೀತಿ-ನೀತಿ, ಆಚಾರ,-ವಿಚಾರಗಳಿಗೆ ಸಂಬಂಧಿಸಿದ್ದಾಗಿದೆ. ಆದುದರಿಂದ, ಇತಿಹಾಸವು ಶಾಸ್ತ್ರವಲ್ಲವೆಂಬ ಗ್ರಹಿಕೆಯಾಗುವದು ಸ್ವಾಭಾವಿಕ. ವಸ್ತುಸ್ಥಿತಿಯು ಮಾತ್ರ ಹಾಗಿಲ್ಲ. ಇತಿಹಾಸದಲ್ಲಿ ಕಾರಣಗಳಿಂದ ಪರಿಣಾಮುವನ್ನು ಕೆಲ ಸಂದರ್ಭಗಳಲ್ಲಿ ಕಂಡುಹಿಡಿಯಲು ಶಕ್ಯವಿದೆ. ಪರಿಣಾಮದಿಂದ ಕಾರಣಗಳನ್ನು ಕಂಡುಹಿಡಿಯಲು ಬರುವದು. ಎಷ್ಟೋ ಐತಿಹಾಸಿಕ ಸಂಗತಿಗಳಿಗೆ ಸಮಾನವಾದ ಕಾರಣಗಳು ಮತ್ತು ಪರಿಣಾಮಗಳು ಇದ್ದುದು ಕಂಡು ಬರುತ್ತದೆ. ಉದಾಹರಣಾರ್ಥವಾಗಿ, ನಮ್ಮ ದೇಶದ ಸ್ವಾತಂತ್ರ್ಯದ ಯುದ್ಧ, ಇಂಡೋನೇಶಿಯದ ಸ್ವಾತಂತ್ರ್ಯದ ಯುದ್ಧ, ಬ್ರಹ್ಮದೇಶದ ಸ್ವಾತಂತ್ರ್ಯದ ಯುದ್ಧ, ಅಮೇರಿಕದ ಸ್ವಾತಂತ್ರ್ಯದ ಯುದ್ಧ ಇತ್ಯಾದಿ. ಅನೈಕ್ಯದಿಂದಾದ ದುಷ್ಪರಿಣಾಮಗಳು ರಜಪೂತರ ಕಾಲಕ್ಕೂ ಜರುಗಿದವು. ಬಹಮನಿ ರಾಜ್ಯದಲ್ಲಿಯೂ ಸಂಭವಿಸಿದವು, ವಿಜಯನಗರದಲ್ಲಿಯೂ ಉಂಟಾದವು ಮತ್ತು ಮರಾಠರಲ್ಲಿಯೂ ಆವಿರ್ಭವಿಸಿದವು. ಇವೆಲ್ಲ ಶಾಸ್ತ್ರದ ಲಕ್ಷಣಗಳಲ್ಲವೇ? ಇತಿಹಾಸದಲ್ಲಿ ಸಂಗತಿಗಳ ಪುನರಾವೃತ್ತಿಯಾಗುವದು (History repeats itself) ಶಾಸ್ತ್ರದ ಲಕ್ಷಣವಲ್ಲದೆ ಮತ್ತೇನು? ಯಾವದಾದರೊಂದು ಸಂಗತಿಯ ಪುನರಾವೃತ್ತಿಯಾಯಿತೆಂದರೆ ಅದರ ಕಾರಣಗಳೂ ಪರಿಣಾಮಗಳೂ ಒಂದೇ ತೆರನಾಗಿರುವವಲ್ಲವೇ? ಆದುದರಿಂದಲೇ ನಾವು ಆ ಸಂಗತಿಯ ಪುನರಾವೃತ್ತಿಯಾಯಿತೆಂದು ನಿರ್ಣಯ ಕೊಡುವೆವಲ್ಲವೇ? ಇದುವೆ ಶಾಸ್ತ್ರದ ಮುಖ್ಯ ಲಕ್ಷಣವು. ಮೇಲಾಗಿ, ಇತಿಹಾಸದಲ್ಲಿ ಸಂಶೋಧನವೊಂದು ದೊಡ್ಡ ವಿಭಾಗವಿದೆ. ಸಂಶೋಧನದ ಚಟುವಟಿಕೆಗಳೆಲ್ಲವೂ ಕ್ರಮಬದ್ಧವಾಗಿವೆ; ಶಾಸ್ತ್ರಬದ್ಧವಾಗಿವೆ. ಗಣಿತ, ಭೂಮಿತಿ ಮೊದಲಾದ ನಾಮಾಂಕಿತ ಶಾಸ್ತ್ರಗಳಂತೆ ಸಂಶೋಧನವೂ ಕ್ರಮನಿಯಮಾವಳಿಗಳಿಂದಲೂ ಕಟ್ಟು-ನಿಟ್ಟುಗಳಿಂದಲೂ ಚನ್ನಾಗಿ ಬಿಗಿಯಲ್ಪಟ್ಟಿದೆಯೆಂಬ ಮಾತು ಎಲ್ಲರಿಗೂ ಗೊತ್ತಿರಲು ಸಾಕು. ಆದುದರಿಂದ, ಇತಿಹಾಸವು ಸಂಪೂರ್ಣವಾಗಿರದಿದ್ದರೂ ಕೆಲ ಮಟ್ಟಿಗಾದರೂ ಶಾಸ್ತ್ರವಿದೆಯೆಂಬುದನ್ನು ನಾವೆಲ್ಲರೂ ಒಪ್ಪಲೇಬೇಕು.

ಇನ್ನು ಕಲೆಯ ಬಗ್ಗೆ ವಿಚಾರಿಸೋಣ. ಇತಿಹಾಸದಲ್ಲಿ ವರ್ಣನೆಯ ಮಹತ್ವವು ಅಷ್ಟಿಷ್ಟಲ್ಲ. ವರ್ಣನೆಯು ಚಿತ್ತಾಕರ್ಷಕವಿದ್ದಷ್ಟು ಇತಿಹಾಸಕ್ಕೆ ಕಳೆ ಏರುತ್ತ ಹೋಗುತ್ತದೆ. ಐತಿಹಾಸಿಕ ಸಂಗತಿಗಳನ್ನು ನೀರಸವಾಗಿಯೂ ಸಪ್ಪಗಾಗಿಯೂ ವಿವರಿಸಿದರೆ, ಅವುಗಳನ್ನು ಯಾರೂ ಓದುವದಿಲ್ಲ. ಅವೇ ಸಂಗತಿಗಳಲ್ಲಿ ಜೀವದ ಕಳೆ ತುಂಬಿ ಮನರಂಜನವಾಗುವಂತೆ ಹೇಳಿದರೆ, ಎಲ್ಲರೂ ಪ್ರೀತಿಯಿಂದಲೂ ಆಸ್ಥೆಯಿಂದಲೂ ಓದುವರು. ಸಾಲೆಯಲ್ಲಿ ಮಕ್ಕಳಿಗೆ ಅರಸು-ಅರಸಿಯರ ಚರಿತ್ರವನ್ನು ಹೇಳಿದರೆ ಅವರು ಅಷ್ಟೊಂದು ಲಕ್ಷಗೊಟ್ಟು ಕೇಳುವದಿಲ್ಲ. ಅದೇ ಚರಿತ್ರವನ್ನು ಕಥೆಯ ರೂಪದಿಂದ ಹಾವಭಾವ ಮಾಡುತ್ತ ಹೇಳಿದರೆ ಮಕ್ಕಳು ಎಷ್ಟು ಅಕ್ಕರತೆಯಿಂದಲೂ ಏಕಾಗ್ರಚಿತ್ತದಿಂದಲೂ ಕೇಳುತ್ತಾರೆಂಬ ಮಾತನ್ನು ಶಿಕ್ಷಕ-ಶಿಕ್ಷಕಿಯರಿಗೆ ಹೇಳುವದೇ ಬೇಡ. ಮಕ್ಕಳ ಅವಧಾನವೆಲ್ಲವೂ ಶಿಕ್ಷಕ-ಶಿಕ್ಷಕಿಯರ ಕೈಯಲ್ಲಿ ಸಿಕ್ಕು ಬಿಡುತ್ತದೆ! ಇದು ಕಲೆಯಲ್ಲದೆ ಮತ್ತೇನು! ಕವಿ ಕಾದಂಬರಿಕಾರರ ಹಾಗೆ ಇತಿಹಾಸಕಾರನು ಓದುಗರಿಗೆ ರುಚಿಸುವಂತಹ ಚಿತ್ತಾಕರ್ಷಕವಾದ ಶೈಲಿಯಿಂದ ವರ್ಣಿಸುವ ಕಲೆಯನ್ನು ಅರಿತಿರಬೇಕು. ಅದರಂತೆಯೇ ಈ ವಿಷಯವನ್ನು ಕಲಿಸುವ ಶಿಕ್ಷಕ-ಶಿಕ್ಷಕಿಯರೂ ಈ ಕಲೆಯ ಸ್ವಾಮಿತ್ವವನ್ನು ಪಡೆದವರಿರಬೇಕು. ರೂಢಿಯಿಂದ ಈ ಕಲೆಯು ಕೈವಶವಾಗಲು ಶಕ್ಯವಿದೆಯೆಂಬ ಮಾತನ್ನು ಎಷ್ಟು ಒತ್ತಿ ಹೇಳಿದರೂ ಕಡಿಮೆಯೇ. ಇತಿಹಾಸಕಾರನಿಗೂ ಮತ್ತು ಕವಿ-ಕಾದಂಬರಿಕಾರರಿಗೂ ಇರುವ ಭೇದವಿಷ್ಟೇ. ಕವಿಗಳೂ ಕಾದಂಬರಿಕಾರರೂ ಕಲ್ಪನಾ ಸಾಮ್ರಾಜ್ಯದಲ್ಲಿ ಮುಳುಗೇಳುತ್ತಾರೆ. ಆದರೆ, ಇತಿಹಾಸಕಾರನು ನಿಜ ಸಂಗತಿಗಳನ್ನಷ್ಟೇ ವರ್ಣಿಸುತ್ತಾನೆ; ವರ್ಣಿಸುವ ಕಲೆಯಲ್ಲಿ ಮೇಲೆ ಹೇಳಿದಂತೆ ಸ್ವೈರಪಂಡವನು ಮಾತ್ರ ಇರಬೇಕು. ಇವೆಲ್ಲವುಗಳ

ಮೇಲಿಂದ ಇತಿಹಾಸವು ಶಾಸ್ತ್ರವೂ ಅಹುದು ಕಲೆಯೂ ಅಹುದು ಎಂಬ ಮಾತು ಸುಸ್ಪಷ್ಟವೇ ಇದೆ.

ಇತಿಹಾಸದ ಉಪಯುಕ್ತತೆ

ಇತಿಹಾಸವನ್ನು ಕಲಿಯುವದರಿಂದ ನಮಗೆ ಏನು ಪ್ರಯೋಜನ, ಅದನ್ನು ಏಕೆ ಕಲಿಯಬೇಕು, ನಮ್ಮ ಅಭ್ಯಾಸ ಪತ್ರಿಕೆಯಲ್ಲಿ ಅದಕ್ಕೇಕೆ ಸ್ಥಾನವೀಯಬೇಕು, ಈ ಮೊದಲಾದ ಪ್ರಶ್ನೆಗಳು ಏಳುವದು ಸ್ವಾಭಾವಿಕ. ಈ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕೊಡಲೇ ಬೇಕು. 'ಮನುಷ್ಯನು ಅನುಭವದಿಂದ ಕಲಿಯುತ್ತಾನೆ' (Man learns by experience) ಎಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಅನುಭವವು ಎರಡು ತೆರನಾಗಿದೆ. ಸ್ವಂತದ ಅನುಭವ, ಪರರಿಂದ ಬಂದ ಅನುಭವ. ಸ್ವಂತದ ಅನುಭವವು ಯಾವಾಗಲೂ ಹೆಚ್ಚಿನದು ಮತ್ತು ಒಳ್ಳೇ ಪರಿಣಾಮಕಾರಿಯಾದದ್ದೆಂಬ ಮಾತು ಮನಃಶಾಸ್ತ್ರವನ್ನೋದಿಕೊಂಡವರಿಗೆಲ್ಲ ವಿದಿತವೇ ಇದೆ. ಪರರಿಂದ ಬಂದ ಅನುಭವವು ಅಷ್ಟು ಪರಿಣಾಮಕಾರಿಯಾಗದಿದ್ದರೂ ಒಳ್ಳೇ ಹಿತಕಾರಿಯೂ ಮಾರ್ಗದರ್ಶಕವೂ ಆಗಿದೆ. 'ಚಿಕಿತ್ಸೆಗಿಂತ ಪ್ರತಿಬಂಧಕೋಪಾಯವು ಮೇಲು' (Prevention is better than cure) ಎಂಬಂತೆ ಪರರಿಂದ ಬಂದ ಅನುಭವದ ಉಪಯೋಗವನ್ನು ನಾವು ಚನ್ನಾಗಿ ಮಾಡಿಕೊಂಡರೆ ನಮಗೆ ಒದಗಬಹುದಾದ ತೊಂದರೆ ತಾಪತ್ರಯಗಳನ್ನು, ಅಡ್ಡಿ-ಆತಂಕಗಳನ್ನು, ಇಕ್ಕಟ್ಟು-ಬಿಕಟ್ಟುಗಳನ್ನು ಇಲ್ಲವೆ ಎಡರು-ತೊಡರುಗಳನ್ನು ಅನಾಯಾಸವಾಗಿ ನೀಗಿಸಿಕೊಳ್ಳಬಲ್ಲೆವು. ಸ್ವಂತದ ಅನುಭವದ ಸಲುವಾಗಿ ಅವುಗಳಲ್ಲಿ ಸಿಲುಕಿ ಒದ್ದಾಡುವದಕ್ಕಿಂತ ಪರರ ಅನುಭವಗಳ ಸದುಪಯೋಗದ ಬಲದಿಂದ ಆ ಕಷ್ಟಕಾರ್ಪಣ್ಯಗಳು ನಮಗೆ ತಗಲದಂತೆ ಅವುಗಳನ್ನು ದೂರಿಡುವದು ಲೇಸಲ್ಲವೇ ? ಈ ಜಗತ್ತಿನಲ್ಲಿ ಪ್ರತಿಯೊಂದು ಸಂಗತಿಯನ್ನು ಸ್ವಂತ ಅನುಭವದಿಂದ ಕಲಿತುಕೊಳ್ಳುವದು ಶಕ್ಯವಿಲ್ಲ ಮತ್ತು ಕೆಲವುಗಳನ್ನು ಹಾಗೆ ಕಲಿತುಕೊಳ್ಳುವದು ಇಷ್ಟವಿಲ್ಲ. ಹೀಗಾಗಿ, ಪರರಿಂದ ಬಂದ ಅನುಭವಗಳ ಸಹಾಯದಿಂದಲೇ ನಾವು ಬಹುತರ ನಮ್ಮೆಲ್ಲ ಜ್ಞಾನಾರ್ಜನೆಯನ್ನು ಮಾಡಿಕೊಳ್ಳಬೇಕಾಗಿದೆ. ಇತಿಹಾಸವೆಂದರೆ ಮಾನವನ ಪ್ರಗತಿಯ ವರ್ಣನೆಯೆಂದು ಮೇಲೆ ಹೇಳಿದೆ. ಪ್ರಗತಿಯಾಗುವದು ಅನುಭವಗಳ ಸಹಾಯದಿಂದಲ್ಲವೇ ? ಹಾಗಾದರೆ, ಇತಿಹಾಸವೆಂದರೆ ಮಾನವನ ಅನುಭವಗಳ ವೃತ್ತಾಂತವೆಂದಂತಾಯಿತು. ಪರರ ಅನುಭವಗಳಿಂದ ಬಹುತರ ನಮ್ಮೆಲ್ಲ ಜ್ಞಾನವನ್ನು ನಾವು ಸಂಪಾದಿಸಿಕೊಳ್ಳಬೇಕಾಗಿರುವದರಿಂದ, ಇತಿಹಾಸದ ಜ್ಞಾನವು ನಮಗೆ ಅವಶ್ಯವು. ನಮ್ಮ ನಾಡಿನ ಐತಿಹಾಸಿಕ ಪುರುಷರ ಮತ್ತು ಸ್ತ್ರೀಯರ ಆದರ್ಶ ಜೀವನವು ನಮ್ಮ ಕಣ್ಣುಗಳ ಮುಂದೆ ಯಾವಾಗಲೂ ಇರಬೇಕಲ್ಲವೇ ? ನಮ್ಮ ನಾಡಿನ ಸಂಸ್ಕೃತಿಯನ್ನು ಅವರು ಹೇಗೆ ಹೆಚ್ಚಿಸಿದರೆಂಬುದು ನಮಗೆ ಗೊತ್ತಾಗಬೇಕಲ್ಲವೇ ? ಹಕ್ಕು-ಬಾಧ್ಯತೆಗಳ ಸಲುವಾಗಿ ಅವರು ಹೇಗೆ ಹಗಲಿರುಳೂ ಬಡಿದಾಡಿದರೆಂಬದನ್ನು ನಾವು ತಿಳಿಯಬೇಕಲ್ಲವೇ ? ಸ್ವದೇಶಾಭಿಮಾನವು ಅವರಲ್ಲಿ ಹೇಗೆ ತುಂಬಿ ತುಳುಕುತ್ತಿತ್ತೆಂಬದನ್ನು ಕಂಡುಹಿಡಿದು ನಾವೂ ಅವರಂತೆ ಆಗಲು ಪ್ರಯತ್ನಿಸಬೇಕಲ್ಲವೇ ? ಸ್ವಾತಂತ್ರ್ಯದ ಸಲುವಾಗಿ ಅವರು ಹೇಗೆ ಸ್ವಾರ್ಥತ್ಯಾಗವನ್ನು ಮಾಡಿದರೆಂಬನ್ನೂ ಪ್ರಸಂಗ ಬಂದಾಗ ಕೆಲವರು ತಮ್ಮ ಪ್ರಾಣಾರ್ಪಣವನ್ನೂ ಕೂಡಾ ಹೇಗೆ ಮಾಡಿದರೆಂಬದನ್ನೂ ನಾವು ಅರಿಯಬೇಕಲ್ಲವೇ ? ಇವೇ ಮೊದಲಾದವಗಳು ನಮಗೆ ಸಾಧ್ಯವಾಗಬೇಕಾದರೆ, ನಾವು ಇತಿಹಾಸವನ್ನು ಕಲಿಯಲೇಬೇಕೆಂಬ ಮಾತು ನಿರ್ವಿವಾದವು. ನಮ್ಮ ರಾಜ್ಯಘಟನೆಯು ಪ್ರಜಾಪ್ರಭುತ್ವದ ತತ್ವಗಳಂತೆ ನಡೆದಿದೆಯೋ ಇಲ್ಲವೆ ಏಕತಂತ್ರಾಧಿಕಾರದತ್ತ ಸಾಗಿದೆಯೋ ಪ್ರಜಾಸತ್ತೆಯ ತತ್ವಗಳು ಎಷ್ಟರ ಮಟ್ಟಿಗೆ ಘಟನೆಯಲ್ಲಿ ಸೇರ್ಪಡೆಯಾಗಿವೆ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆಯೋ ಹೇಗೆ, ವ್ಯಕ್ತಿಸ್ವಾತಂತ್ರ್ಯವೆಂದರೇನು, ಪ್ರತಿಯೊಬ್ಬ ವ್ಯಕ್ತಿಯ ಹಕ್ಕು-ಬಾಧ್ಯತೆಗಳಾವವು, ವ್ಯಕ್ತಿಸ್ವಾತಂತ್ರ್ಯಕ್ಕೆ ಮೇರೆ ಇದೆಯೋ ಹೇಗೆ, ಮೇರೆಯು ಇದ್ದರೆ ಅದು ಎಷ್ಟರಮಟ್ಟಿಗೆ ಇದೆ ಇವೆಲ್ಲ ಸಂಗತಿಗಳ ತುಲನಾತ್ಮಕ ಅರಿವು ಇತಿಹಾಸವನ್ನು ಚನ್ನಾಗಿ ಓದಿ ಅರಗಿಸಿಕೊಂಡರೇನೇ ಸಾಧ್ಯವಿದೆಯೆಂಬ ಮಾತನು ಬೇಗನೆ ತಿಳಕೊಂಡಷ್ಟು ಒಳಿತು. ಉತ್ತಮ ನಾಗರಿಕರಾಗಬೇಕೆಂದು ನಾವು ನಿಜವಾಗಿ ಬಯಸುತ್ತಿದ್ದರೆ, ನಮಗೆ ಇತಿಹಾಸದ ಜ್ಞಾನವು ಅತ್ಯಗತ್ಯವು. ಈ

ಮಾತನ್ನು ಎಷ್ಟು ಒತ್ತಿ ಹೇಳಿದರೂ ಕಡಿಮೆಯೇ. ಆದುದರಿಂದ, ಇತಿಹಾಸಕ್ಕೆ ನಮ್ಮ ಅಭ್ಯಾಸ ಪತ್ರಿಕೆಯಲ್ಲಿ ಹೆಚ್ಚಿನ ಸ್ಥಾನವಿರಲೇಬೇಕು.

ಕೊನೆಯ ಮಾತು.

ಮುಂದಿನ ಲೇಖದಲ್ಲಿ ಈ ವಿಷಯವನ್ನು ಕಲಿಸುವ ಪದ್ಧತಿಗಳ ಬಗೆಗೆ ಚರ್ಚಿಸಲಾಗುವದು. ಪದ್ಧತಿಗಳ ಬಲಾಬಲಗಳು ಮತ್ತು ಗುಣಾವಗುಣಗಳು, ಯಾವ ಪದ್ಧತಿಯನ್ನು ಯಾವ ಸಂದರ್ಭದಲ್ಲಿ ಉಪಯೋಗಿಸಿದರೆ ಹೆಚ್ಚು ಪರಿಣಾಮಕಾರಕವಾಗುವದು, ಯಾವ ಪದ್ಧತಿಯನ್ನು ಯಾವ ವರ್ಗಕ್ಕೆ ಕಲಿಸಲು ಉಪಯೋಗಿಸಿದರೆ ಹಿತಕರವು, ಆಯಾಪದ್ಧತಿಯಲ್ಲಿ ತಳಹದಿಯಾಗಿರುವ ಮನಃಶಾಸ್ತ್ರದ ತತ್ವಗಳಾವವು ಇವೇ ಮೊದಲಾದವುಗಳನ್ನರಿಯಲು ಓದುಗರಿಗೆ ಪೂರ್ವ ಜ್ಞಾನದ ಹಿನ್ನೆಲೆಯ ಅವಶ್ಯಕತೆಯಿದೆಯಲ್ಲವೇ? ಆ ಹಿನ್ನೆಲೆಯನ್ನೇ ಈ ಲೇಖದಲ್ಲಿ ಪೂರೈಸಿದ್ದಾಯಿತು. ಇತಿಹಾಸವೆಂದರೇನು, ಅದು ಶಾಸ್ತ್ರವೋ ಕಲೆಯೋ, ಮತ್ತು ಅದರ ಉಪಯುಕ್ತತೆ, ಇವುಗಳ ಅರಿವಿನ ಪೂರ್ವ ತಯಾರಿಯು ಅವಶ್ಯವೆಂದು ತೋರಿದ್ದರಿಂದ, ಈ ಲೇಖವೆಲ್ಲ ಪೂರ್ವ ತಯಾರಿಯಾಗಿ ಪರಿಣಮಿಸಿತು. ಈ ಹಿನ್ನೆಲೆಯ ಸಹಾಯದಿಂದ ಬೇರೆ ಬೇರೆ ಪದ್ಧತಿಗಳ ಉಪಯುಕ್ತತೆಯನ್ನು ಕಂಡುಹಿಡಿಯಲು ಸುಗಮವಾಗುವದೆಂದು ನಮ್ಮ ನಂಬುಗೆ.

(ಮುಂದುವರಿಯುವದು.)

★ ಶಿಕ್ಷಣದ ಕಾರ್ಯ ★

ಯಾವ ಹೊಣೆಗಾರಿಕೆಯಿಂದಲೂ ವಿಜ್ಞಾನವು ಯಾವುದನ್ನು ಮುಟ್ಟಲಾರದೋ ಅದಕ್ಕೆ ನಾವು ಏನೆಂದು ಕರೆಯಬೇಕು? ನಾನು ಅದಕ್ಕೆ ಜೀವನ ಎನ್ನುತ್ತೇನೆ, ಕೆಲವರು ಆತ್ಮ ಅಥವಾ ಅಂತರಾತ್ಮ ಎನ್ನುತ್ತಾರೆ. ಆದರೆ ಅದಕ್ಕೆ ನೀವು ಬೇಕಾದ ಹೆಸರನ್ನು ಕೊಡಿರಿ, ಅದರ ಅಸ್ತಿತ್ವವನ್ನು ಒಪ್ಪಿರಿ ಮತ್ತು ಇದರಲ್ಲಿಯೇ ಮಾನವ ಸಮಾಜದ ಭವಿಷ್ಯವಿದೆ ಎಂದು ಒಪ್ಪಿದರೆ, ಅಷ್ಟೇ ಸಾಕು. ಶಿಕ್ಷಣದ ಕಾರ್ಯವು ಇದೇ.

—ಗಾಂಧೀಜಿ

ಸಾಮಾಜಿಕ ಜೀವನಕ್ಕಾಗಿ ಶಿಕ್ಷಣ*

ಲೇಖಕರು: ಡಾ. ವ್ಹಿ. ಕೋ. ಜವಳಿ

(ಧಾರವಾಡ ರೇಡಿಯೋ ಭಾಷಣ ೨೩–೯–೫೦)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಉದ್ಯೋಗ ಶಿಕ್ಷಣ :

ಮಕ್ಕಳು ೧೧ನೇ ವಯಸ್ಸಿನಿಂದ ೧೬ ಅಥವಾ ೧೮ನೇ ವಯಸ್ಸಿನ ವರೆಗೆ ಮಾಧ್ಯಮಿಕ ಶಾಲೆಗಳಲ್ಲಿ ಇರುತ್ತಾರೆ. ಪ್ರಾಯವು ಸಮೀಸಿದ ಹಾಗೆ ಅವರು ಬುದ್ಧಿಯಿಂದಲೂ ಶರೀರದಿಂದಲೂ, ಉದ್ಯೋಗ ಶಿಕ್ಷಣ ಪಡೆಯಲು ತಕ್ಕವರಾಗುತ್ತಾರೆ. ಮಾಧ್ಯಮಿಕ ಸಾಲೆಗಳ ಮೇಲಿನ ವರ್ಗಗಳಲ್ಲಿ ಸಾಮಾಜಿಕ ವಿಷಯಗಳ ಅಭ್ಯಾಸದ ಜೊತೆಗೆ ಕೆಲವು ಉದ್ಯೋಗಗಳ ಬಗೆಗೆ ಸ್ಥೂಲ ಪರಿಚಯವನ್ನು ಮಾಡಿ ಕೊಡುವದು ಅವಶ್ಯ. ಆದರೆ ಒಂದು ನಿಶ್ಚಿತ ಉದ್ಯೋಗದಲ್ಲಿ ಪ್ರಾವಿಣ್ಯತೆಯನ್ನು ಪಡೆಯಲು ಪ್ರತ್ಯೇಕ ಔದ್ಯೋಗಿಕ ಸಾಲೆಗಳು ಹೆಚ್ಚಾಗಿ ಸ್ಥಾಪಿಸಲ್ಪಡಬೇಕು. ಮಕ್ಕಳು ದೊಡ್ಡವರಾದಮೇಲೆ ತಮ್ಮ ಉಪಜೀವನವನ್ನು ಸಾಗಿಸುವದಕ್ಕೆ ಯಾವದಾದರೊಂದು ಕಾಯಕವನ್ನು ಮಾಡಲೇಬೇಕಾಗುತ್ತದೆ. ಈ ಕಾಯಕ ಅಥವಾ ಉದ್ಯೋಗದ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಒತ್ತಿ ಹೇಳುವದು ಅವಶ್ಯವೆನಿಸುತ್ತದೆ. ವಂಶಪರಂಪರೆಯಿಂದ ಬಂದ ತಂದೆಯ ಉದ್ಯೋಗವನ್ನೇ ಮಗನು ಮಾಡುತ್ತಿರುವ ಪರಿಪಾಠವನ್ನೂ ಅದನ್ನೇ ಮಾಡಬೇಕೆಂಬ ಮೂಢ ನಂಬುಗೆಯ ಜನರನ್ನೂ ನಾವು ಈಗಲೂ ಕಾಣುತ್ತೇವೆ. ಇದು ನಿಃಚೇತನ ಸಮಾಜದ ಲಕ್ಷಣವು. ಇದರ ಪರಿಣಾಮವಾಗಿ ಸಾಮಾಜಿಕ ಜೀವನದಲ್ಲಿ ಪ್ರಗತಿಯು ಉಂಟಾಗುವದಿಲ್ಲ. ಬಡವರು ಬಡವರಾಗಿಯೂ, ಬಲ್ಲಿದರು ಬಲ್ಲಿದರಾಗಿಯೂ ಉಳಿದು ಸಹಿಸಲಾರದ ತಾರತಮ್ಯಗಳು ಸಮಾಜದಲ್ಲಿ ಸ್ಥಿರವಾಗುವವು. ಅದೇ ಒಂದು ಉದ್ಯೋಗವು ಮತ್ತು ಅದಕ್ಕೆ ಸಂಬಂಧಿಸಿದ ಜ್ಞಾನವೂ ಒಂದು ವ್ಯಕ್ತಿಯ ಅಥವಾ ಒಂದು ಮನೆತನದ ಸೊತ್ತಾಗದೆ ಸಾಮಾಜಿಕ ವಿಷಯವಾದಲ್ಲಿ ಆ ಉದ್ಯೋಗವು ಮುಂದುವರಿಯುವದರಲ್ಲಿ ಸಂದೇಹವಿಲ್ಲ. ಈ ಮಾತನ್ನು ಒಂದು ಉದಾಹರಣೆಯಿಂದ ಸ್ಪಷ್ಟಗೊಳಿಸುವೆನು. ಔಷಧ ವಿಜ್ಞಾನದಲ್ಲಿ ಪಾಶ್ಚಾತ್ಯರು ಬಹಳ ಮುಂದುವರಿದಿರುವದು ನಮ್ಮೆಲ್ಲರಿಗೆ ಗೊತ್ತು. ಏಕೆಂದರೆ ಆ ಉದ್ಯೋಗವೂ ಮತ್ತು ಅದರ ವಿಜ್ಞಾನವೂ ಪಾಶ್ಚಾತ್ಯ ದೇಶಗಳಲ್ಲಿ ಸಾಮಾಜಿಕ ವಿಷಯವಾಗಿವೆ; ಭಾರತದಲ್ಲಿಯಂತೆ ಆನುವಂಶಿಕವಾಗಿರುವದಿಲ್ಲ. ಅಲ್ಲಿ ಔಷಧತಜ್ಞರು ಸಹಕರಿಸಿದ ಪ್ರಾಯೋಗಿಕ ದೃಷ್ಟಿಯಿಂದ ಸಂಶೋಧನೆಯನ್ನು ಮಾಡಿ ಹೊಸ ಹೊಸ ಔಷಧಗಳನ್ನೂ, ಶಸ್ತ್ರಕ್ರಿಯೆಗಳ ರೀತಿಗಳನ್ನೂ ಹುಡುಕುತ್ತಾರೆ. ಇದೇಬಗೆಯಾಗಿ ಒಕ್ಕಲತನದ ವ್ಯವಸಾಯವೂ ಪಾಶ್ಚಾತ್ಯರಲ್ಲಿ ಮುಂದುವರಿದಿರುತ್ತದೆ.

ಭಾರತದ ಸಾಮಾಜಿಕ ಜೀವನವು ಚೈತನ್ಯಮಯವೂ ಪ್ರಗತಿಪರವೂ ಆಗಬೇಕಾದರೆ ನಮ್ಮಲ್ಲಿಯ ಉದ್ಯೋಗ

*ಧಾರವಾಡ ರೇಡಿಯೋ ಸ್ಟೇಶನಿನ ಅಧಿಕಾರಿಗಳಿಂದ ಒಪ್ಪಿಗೆ ಪಡೆದು ಅಚ್ಚು ಮಾಡಲ್ಪಟ್ಟಿದೆ.

ವ್ಯವಸಾಯಗಳು ಆನುವಂಶಿಕವಾಗಿ ಪರಿಣಮಿಸದಂತೆ ಶಿಕ್ಷಣದ ಯೋಜನೆಯು ಆಗತಕ್ಕದ್ದು. ಉದ್ಯೋಗ ಸ್ವಾತಂತ್ರ್ಯ ಮತ್ತು ಆರ್ಥಿಕ ಬೆಳವಣಿಗೆಯ ವಿಚಾರಗಳನ್ನು ನಮ್ಮ ಮುಂದಿನ ಪೀಳಿಗೆಯು ಕಲಿಯಲು ಇದಕ್ಕೆ ಅನುಕೂಲವಾಗುವಂತೆ ಬೇರೆ ಬೇರೆ ಪ್ರಕಾರದ ಔದ್ಯೋಗಿಕ ಸಾಲೆಗಳು ಪ್ರಾಂತದ ಎಲ್ಲ ಭಾಗಗಳಲ್ಲಿ ಸ್ಥಾಪಿಸಲ್ಪಡಬೇಕು. ಅಮೇರಿಕೆಯಲ್ಲಿ ವೃತ್ತಿ ಶಿಕ್ಷಣವನ್ನು ಅನೇಕ ವಿಧವಾಗಿ ಕೊಡುತ್ತಿರುವದನ್ನು ನಾನು ಸ್ವತಃ ಕಂಡಿರುವೆನು. ಅದೇ ಬಗೆಯ ಯೋಜನೆಯನ್ನು ಇಲ್ಲಿಯೂ ಕೈಕೊಂಡರೆ ಒಳ್ಳೆಯದಾಗುವದು.

ಹೊಸ ಸಮಾಜ ರಚನೆ

ಶಿಕ್ಷಣವು ಸಮಾಜದಿಂದ ರೂಪಗೊಂಡಿದ್ದರೂ ಅದು ಹೊಸ ಸಮಾಜ ರಚನೆಗೆ ಅಂತಃಸ್ಫೂರ್ತಿಯನ್ನು ಕೊಡುವಂತಹದು ಆಗಿರಬೇಕು. ಸಮಾಜದಲ್ಲಿಯ ಮೂಢ ನಂಬುಗೆಗಳನ್ನೂ ರೂಢಿಗಳನ್ನೂ ಕಿತ್ತೊಗೆಯಲು ಪ್ರೇರಣೆಯನ್ನು ನೀಡುವಂತಹದು ಆಗಿರಬೇಕು. ಸಮಾಜದಲ್ಲಿಯ ಮೂಢಸಮಾಜದ ಪ್ರಗತಿಗೆ ಪ್ರತಿಬಂಧಕವಾದ ಪದ್ಧತಿಗಳನ್ನು ತೆಗೆದೊಗೆಯಲು ಧೈರ್ಯ ಸಾಹಸಗಳನ್ನು ತುಂಬುವಂತಹದಾಗಿರಬೇಕು. ಇಂತಹ ಹೊಸ ಶಿಕ್ಷಣವನ್ನು ಪಡೆದ ಮಕ್ಕಳಿಂದ ಹೊಸ ಸಮಾಜವು ನಿರ್ಮಾಣವಾಗುತ್ತದೆ. ಹೊಸ ಸೃಷ್ಟಿಯ ಪೀಳಿಗೆಯು ಉಂಟಾಗಬೇಕಾದದರೆ ಪ್ರಾಥಮಿಕ ಸಾಲೆಗಳನ್ನು ಮೊದಲು ಮಾಡಿ ಎಲ್ಲ ಶಿಕ್ಷಣ ಸಂಸ್ಥೆಗಳು ಮಕ್ಕಳ ವಿಚಾರಶಕ್ತಿಯನ್ನು ವೈಜ್ಞಾನಿಕ ದೃಷ್ಟಿಯನ್ನೂ ಬೆಳೆಯಿಸಲು ಸಾಧನಗಳಾಗಿರಬೇಕು. ಭಾರತದಲ್ಲಿರುವ ಬೇರೆ ಬೇರೆ ಸಮಾಜಗಳ ಜೀವನಕ್ರಮವನ್ನು ಪರಿಶೀಲಿಸಿ ನೋಡಿದರೆ ವೈಷಮ್ಯವು ಕಂಡುಬರುತ್ತದೆ. ಕೆಲವು ಸಮಾಜಗಳಲ್ಲಿ ವಿದ್ಯಾವಂತರು, ಕೆಲವು ಸಮಾಜಗಳು ಅತಿ ಹಿಂದೆ ಉಳಿದವರೂ ನಿರಕ್ಷರಿಗಳೂ ಇರುತ್ತಾರೆ. ಇವಕ್ಕೆ ಮೂಲಕಾರಣವೇನೆಂದರೆ—ಹಳೆಯ ಕಾಲದಲ್ಲಿ ವಿಚಾರದಲ್ಲಿ ತಂದ ವರ್ಣ ಅಥವಾ ಜನಾಂಗಗಳ ಭೇದ, ಆದರಿಂದ ಹುಟ್ಟಿದ ಜಾತಿಗಳ ಕಲ್ಪನೆ, ವರ್ಣಮೂಲವಾದ ಸಾಮಾಜಿಕ ಪದ್ಧತಿಯಿಂದ ಒಂದು ದ್ವೇಷ, ಆರ್ಥಿಕ ತಾರತಮ್ಯ, ವಿದ್ಯೆಯ ವಿಷಮತೆ ಮೇಲು-ಕೀಳೆಂಬ ವಿಚಾರ, ಅಸಹಕಾರ, ಅಸ್ಪೃಶ್ಯತೆ ಮೊದಲಾದ ಸಮಾಜಘಾತಕ ಶಕ್ತಿಗಳು ಬೆಳೆದವು. ಜಾತ್ಯಾತೀತ ಸಮಾಜ ಕಟ್ಟಲು ಬುದ್ಧ, ಬಸವರು ನಮಗೆ ಹಾದಿಯನ್ನು ತೋರಿಸಿರುವರು. ವರ್ಣವಿಚಾರದಿಂದ ಹುಟ್ಟಿದ ಎಲ್ಲಬಗೆಯ ಅನಿಷ್ಟಗಳನ್ನೂ ವರ್ಣಪದ್ಧತಿಯಿಂದಲೇ ಪುಷ್ಟಿಗೊಂಡ ಆನುವಂಶಿಕ ಹಕ್ಕುಬಾಧ್ಯತೆಗಳನ್ನೂ ಉದ್ಯೋಗದ ಮೇಲು ಕೀಳು ಕಲ್ಪನೆಗಳನ್ನೂ ಸಂಪೂರ್ಣ ನಾಶ ಮಾಡದ ಹೊರತು ಸೋದರಭಾವವೂ, ಬಂಧುಪ್ರೇಮವೂ, ಆರ್ಥಿಕ ಸರಿಸಮಾನತೆಯೂ ವಿದ್ಯಾಸಮಾನತೆಯೂ ನೆಲೆಸುವದಾಗಲಿ ಹೊಸ ಸಮಾಜವು ಹುಟ್ಟುವದಾಗಲಿ ಸಾಧ್ಯವೇ ಇಲ್ಲ.

ಶಿಕ್ಷಣವನ್ನು ಧರ್ಮ ಅಥವಾ ಮತ ತತ್ವಗಳಿಂದ ಬೇರ್ಪಡಿಸಬೇಕು. ಅದೇಕೆ ಸಮಾಜ ವಿಜ್ಞಾನದಿಂದ ಸ್ಪಷ್ಟವಾಗಿ ಬೇರೆ ಮಾಡುವ ಕಾಲವು ಈಗ ಬಂದಿದೆ. ಮನುಷ್ಯ ಮನುಷ್ಯ ಮತ್ತು ಪರ ತತ್ವ ಇವುಗಳ ಸಂಬಂಧವನ್ನು ಮಾತ್ರ ತಿಳಿಸುವದು. ಧರ್ಮ ಇದು ವೈಯಕ್ತಿಕ ವಿಷಯ. ಆದರೆ ಮನುಷ್ಯ ಮನುಷ್ಯ ಸಂಬಂಧವನ್ನು ಹೇಳುವದು ಸಾಮಾಜಿಕ ವಿಜ್ಞಾನ. ಇಲ್ಲಿ ಶಿಕ್ಷಣದ ವಿಷಯ ಬರುವದು. ಧಾರ್ಮಿಕ ಕಾರ್ಯಕ್ರಮಗಳಾದ ಭಜನೆಗಳು, ಗಣಪ್ಪನ ಹಬ್ಬಗಳು, ಲಕ್ಷ್ಮಿ, ಸರಸ್ವತಿ ಪೂಜೆಗಳು, ಜಾತಿ ವಿಚಾರಗಳನ್ನು ಹುಟ್ಟಿಸುವ ಪುರುಷರ ಜಯಂತಿಗಳು ಮೊದಲಾದವು ಸಾಲೆ ಕಾಲೇಜುಗಳಲ್ಲಿ ಜರುಗಕೂಡದು. ಹೊಸ ತತ್ವಗಳ ಮೇಲೆ ನಾವು ಈಗ ಹೊಸ ಸಮಾಜವನ್ನು ಹೊಸ ಶಿಕ್ಷಣ ಪದ್ಧತಿಯನ್ನು ಕಟ್ಟಬೇಕಾಗಿದೆ.

ಶಿಕ್ಷಣವು ಸಮಾಜದಲ್ಲಿಯ ಸ್ಥಾನಮಾನಗಳಿಗೆ ಮಹಾದ್ವಾರವಾಗಿದೆ. ಈಗ ಭಾರತದ ಕೇಂದ್ರ ಮತ್ತು ಪ್ರಾಂತೀಯ ಲೋಕ ಕಾರಣದಲ್ಲಿ (Politics) ಮತ್ತು ಸರಕಾರಿ ನವಕರಿಗಳಲ್ಲಿ ಇರುವವರು ಕಾಲೇಜುಗಳಲ್ಲಿ ಹೆಚ್ಚು ವಿದ್ಯೆ ಕಲಿತವರೇ ಇರುವರು. ಶಿಕ್ಷಣದ ಲಾಭಗಳು ಎಲ್ಲರಿಗೂ ಸಮನಾಗಿ ದೊರೆಯುವಂತೆ ಶಿಕ್ಷಣದ ಯೋಜನೆ ಇರತಕ್ಕದ್ದು. ಕೆಲವು ಸಮಾಜಗಳು ವಿದ್ಯೆಯಲ್ಲಿ ಹಿಂದುಳಿಯಬೇಕಾದರೆ ಅದು ಅನ್ಯಾಯವೇ ಸರಿ. ಈ ಅನ್ಯಾಯವನ್ನು ತೆಗೆದುಹಾಕುವ ರೀತಿಗಳನ್ನು ಕಲ್ಪಿಸದ ಶಿಕ್ಷಣ ಯೋಜನೆಯು ದೋಷಯುಕ್ತವಾಗು

ವದು. ಹಿಂದುಳಿದ ಸಮಾಜಗಳಿಗೆ ಕನಿಷ್ಟ ಹತ್ತು ವರುಷಗಳ ವರೆಗಾದರೂ ವಿಶೇಷ ಅನುಕೂಲತೆಗಳನ್ನು ಒದಗಿಸಿ ಕೊಡುವದು ಸಾಮಾಜಿಕ ನ್ಯಾಯ (Social Justice) ಎನಿಸುವುದು. ಅವರಿಗೆ ಸಾಲಿ ಕಾಲೇಜು ಗಳಲ್ಲಿ ನಾಕಷ್ಟು ಸ್ಥಳಗಳನ್ನು ಕಾದಿಡುವದು ಮತ್ತು ಧಾರಾಳವಾಗಿ ಸ್ಕಾಲರಶಿಪ್ ಹಂಚುವದು ಸರಿ ಎನಿಸು- ವದು. ಇತ್ತಕಡೆ ದೇಶದ ಬದುಕಿಗೆ ಕಾರಣವಾಗುವ ಬೇರೆಬೇರೆ ಸಮಾಜಗಳಲ್ಲಿ ಕಂಡುಬರುವ ಭಿನ್ನತೆ ಮತ್ತು ಪ್ರತ್ಯೇಕತೆಯ ಭಾವವು ಕ್ರಮೇಣ ಇಲ್ಲದಂತಾಗುವ ಯೋಜನೆಗಳನ್ನೂ ನಾವು ಕೈಕೊಳ್ಳಬೇಕು. ಊಟದ ಮನೆ, ವಿಶ್ರಾಂತಿಗೃಹ, ಚಹಾದ ಅಂಗಡಿ, ಸಾಲೆ, ಕಾಲೇಜು, ನೊಸಾಯಿಟಿ, ಸಂಘ ಮುಂತಾದ ಸಾಮಾ- ಜಿಕ ಸಂಸ್ಥೆಗಳು ಜಾತೀಯ ತಳಹದಿಯ ಮೇಲೆ ಏರ್ಪಡ ಬಾರದು. ಅವುಗಳಲ್ಲಿ ಜಾತಿಸೂಚಕ ಹಲಗೆಗಳನ್ನು ಇಡಕೂಡದು. ಭಾರತವು ಧರ್ಮಾತೀತ ರಾಷ್ಟ್ರ (Secular State) ವಾಗಬೇಕಾದರೆ ಶಿಕ್ಷಣವು ಮತಾತೀತ (Secular education)ವಾಗಿರಬೇಕು.

ಒಟ್ಟಿನಲ್ಲಿ ಹೇಳಬೇಕಾದರೆ ಭಾರತದ ಪ್ರಗತಿಯನ್ನು ತಡೆಗಟ್ಟುವ ಆಚಾರವಿಚಾರಗಳ ಕೋಲಾಹಲವಾಗ ಬೇಕು. ದಷ್ಟರು ಜಾಣರೆಂದು, ಜಾತಿ ಮತಗಳಿಗೆ ಸಂಬಂಧಿಸಿ ಮೇಲು ಕೀಳುಯೆಂದು ಉದ್ಯೋಗ ಕಸಬು ಗಳಿಗೆ ಸಂಬಂಧಿಸಿ ಹೇಳುವ ಅವಿವೇಕದ ಮಾತುಗಳು ತೊಲಗಬೇಕು. ಅನುಕೂಲ ಪರಸ್ಥಿತಿಯನ್ನು ಒದಗಿಸಿ ಕೊಟ್ಟರೆ ಬಡವರೂ ಬಲ್ಲಿದರಾಗುವರೆಂಬ ನಂಬುಗೆ ಬಲಗೊಳ್ಳಬೇಕು. ಶಿಕ್ಷಣವು ಸಮಾಜದಲ್ಲಿರುವ ಕುಂದು ಕೊರತೆಗಳನ್ನು ನಿವಾರಿಸುವ ದಿವ್ಯ ಔಷಧವು. ಶಿಕ್ಷಣ ಪಡೆದವರು ಸಮಾಜಸೇವಕರಾಗಿ, ಸಮಾಜ ಸುಧಾರಕ ರಾಗಿಹೊಸ ಸಮಾಜ ನಿರ್ಮಾಣಕ್ಕಾಗಿ ಮುಂದೆ ಬರು ವಂತೆ ಶಿಕ್ಷಣ ಸಂಸ್ಥೆಗಳು ಪ್ರಯತ್ನಿಸಬೇಕು. ಸಾಮಾ ಜಿಕ ಸುಖಜೀವನವನ್ನು ಉಂಟುಮಾಡುವದೇ ಶಿಕ್ಷ ಣದ ಹೆಗ್ಗುರಿ!

ಚಿ. ಶ್ರೀ. ಕುಲಕರ್ಣಿಯವರ ಕಥೆಯ ಪುಸ್ತಕಗಳು

೧.	ಭಕ್ತ ಧ್ರುವ	೦	೨	೦
೨.	ಶನಿ ಮಹಾತ್ಮೆ	೦	೨	೦
೩.	ಮೊದಲನೇ ತರಗತಿಯ ಕಥೆ	೦	೩	೦
೪.	ಸುದಾಮ ಚರಿತ್ರೆ	೦	೪	೦
೫.	ಮಹಾತ್ಮಾ ಗಾಂಧಿ	೦	೪	೦
೬.	ಸುಭಾಸಚಂದ್ರ ಭೋಸ	೦	೪	೯
೭.	ಕುಮಾರ ರಾಮಣ್ಣ	೦	೬	೦
೮.	ಭಕ್ತ ಹನುಮಾನ	೦	೬	೦
೯.	ಶ್ರೀ ಕೃಷ್ಣ ಚರಿತ್ರೆ	೦	೮	೦
೧೦.	ಬದರೀ ಚರಿತ್ರೆ	೦	೮	೦
೧೧.	೪ನೇ ತರಗತಿಯ ಕಥೆ	೦	೬	೦
೧೨.	ಸಂಧ್ಯಾವಂದನೆ	೦	೩	೦
೧೩.	ಚಿತ್ತೂರ ಪದ್ಮಿನಿ	೦	೩	೦
೧೪.	ಭಕ್ತ ಪ್ರಲ್ಹಾದ	೦	೨	೦
೧೫.	ಗಜೇಂದ್ರ ಮೋಕ್ಷ	೦	೨	೦
೧೬.	ಎರಡನೇ ತರಗತಿಯ ಕಥೆ	೦	೪	೦
೧೭.	ಮೂರನೇ ತರಗತಿಯ ಕಥೆ	೦	೫	೦
೧೮.	ಜವಾಹರಲಾಲ ನೆಹರು	೦	೪	೬
೧೯.	ಶ್ರೀ ರಾಮರಕ್ಷೆ	೦	೫	೦
೨೦.	ಕುಮಾರ ಕಿಟ್ಟಣ್ಣ	೦	೪	೦
೨೧.	ರಾಮಕೃಷ್ಣ ನೀತಿಯ ಕಥೆ	೦	೬	೦
೨೨.	ಪುರಂದರ ಪದಗಳು	೦	೮	೦
೨೩.	ಸತ್ಯವಾನ ಸಾವಿತ್ರಿ	೦	೮	೦
೨೪.	ರಾಷ್ಟ್ರೀಯ ಮಹಾಪುರುಷರು	೦	೧೦	೦
೨೫.	ಶಂಕರಾಚಾರ್ಯ	೦	೬	೦

(೧ ರೂಪಾಯಿಗಿಂತ ಕಡಿಮೆ ಕಿಮ್ಮತ್ತಿನ ಪುಸ್ತಕಗಳನ್ನು ವ್ಹಿ. ಪಿ. ಮಾಡಲಾಗುವುದಿಲ್ಲ.)

— ಕೆ. ಎಸ್. ಕುಲಕರ್ಣಿ ಬುಕ್ ಡಿಪೋ, ಹುಬ್ಬಳ್ಳಿ —

ಪುಟ ೨೭೫ ಬೆಲೆ ೨ ರೂ. ೧೨ ಆ.

ಕೈನೇಯಿಗೆಯ ಮಾರ್ಗದರ್ಶಿಕೆ

ಲೇಖಕರು : ಎಂ. ಡಿ. ಮೇಲಗಿರಿ

ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ್,
ಧಾರವಾಡ ಭಾಗ, ಧಾರವಾಡ, ಅವರ ಪತ್ರ
ನಂ. ೯೭೭೭/೩೧-೮-೫೦ ಅನ್ವಯ
ಟ್ರೇ. ಕಾ.ದ ೧ನೆಯ ಹಾಗು ೨ನೆಯ
ವರ್ಷದ ವಿದ್ಯಾರ್ಥಿಗಳಿಗೆ "ಪೂರಕ ಓದು"
ಎಂದು ಸರಕಾರದಿಂದ ಮಂಜೂರಾಗಿದೆ.
ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ.

— ಎಮ್. ಕೆ. ಮೇಲಗಿರಿ —
ಕಮಲಾಪುರ ಭಾಗ,
(ಈಶ್ವರದೇವರ ಗುಡಿ ಓಣಿ)
ಧಾರವಾಡ.

ಪುಟ ೨೨೫ ಬೆಲೆ ೨ ರೂ. ೪

ಕೈ ನೂಲು

ಲೇಖಕರು : ಎಂ. ಡಿ. ಮೇಲಗಿರಿ.
(ಮೂಲೋದ್ಯೋಗ ಶಿಕ್ಷಕ, ಕ. ಗಂ. ಸರಕಾ
ಟ್ರೇನಿಂಗ ಕಾಲೇಜ, ಧಾರವಾಡ)

ಈ ಪುಸ್ತಕದಲ್ಲಿ ಪ್ರಾಥಮಿಕ ಶಾಲೆಗಳ ಎಲ್ಲ ವರ್ಗ ಹಾಗು ಟ್ರೇನಿಂಗ ಕಾಲೇಜುಗಳ ೧ನೆಯ ವರ್ಷ ಹೊಸ ಅಭ್ಯಾಸಕ್ರಮದಂತೆ ನೂಲುಗಾರಿಕೆಗೆ ಸಂಬ ಸಿದ ಎಲ್ಲ ವಿಷಯಗಳನ್ನು ಸಂಗ್ರಹಿಸಿದೆ. ಹತ್ತಿ ಬಿತ್ತಿಗೆಯನ್ನು ಮೊದಲುಗೊಂಡು ನೂಲು ಸಿದ್ಧವಾಗ ವರೆಗಿನ ಎಲ್ಲ ಸಂಗತಿಗಳನ್ನು ಸಮಯೋಜಿತ ಚಿ ಗಳಿಂದಲೂ ಉಧಾಹರಣೆಗಳಿಂದಲೂ ತಾಂತ್ರಿಕ ರಣೆಗೆ, ನೂಲುಗಾರಿಕೆಗೆ ಸಂಬಂಧಿಸಿದ ಗಣಿತ ಹಾ ಲೆಕ್ಕಪತ್ರಗಳನ್ನೂ ಸೇರಿಸಿದೆ. ನೂಲುವ ವರ್ಗಗಳ ಸ್ವತಂತ್ರವಾಗಿ ನಡೆಯಿಸುವ ಬಗ್ಗೆ ಶಿಕ್ಷಕ ಶಿಕ್ಷಕಿಯರಿಗ ಮಾದಿ ಕಾರ್ಯಕರ್ತರಿಗೂ ತುಂಬಾ ಉಪಯು ವಾಗಿದೆ.

— ಎಮ್. ಕೆ. ಮೇಲಗಿರಿ —
ಕಮಲಾಪುರ ಭಾಗ, ಈಶ್ವರದೇವರ ಗುಡಿ ಓಣಿ,
— — ಧಾರವಾಡ — —

ಸರಕಾರದಿಂದ ಟ್ರೇನಿಂಗ ಕಾಲೇಜುಗಳಿಗೆ '**ಪೂರಕವಾಚನ**'ವೆಂದು ಮಂಜೂರಾಗಿದೆ.

'ಶಾರೀರಿಕ ಶಿಕ್ಷಣ'

ಪ್ರಕಾಶಕರು :

ಶ್ರೀ. ಭೀ. ನ. ಮಣ್ಣೂರ
ಪ್ರ್ಯಾಕ್ಟಿಸಿಂಗ್‌ಸ್ಕೂಲ, ಟ್ರೇ. ಕಾಲೇಜ,
ಧಾರವಾಡ.

ಶ್ರೀ. ಜಿ. ಬಿ. ನವಲೂರ
ಫಿಜಿಕಲ್ ಟೀಚರ, ಬಾಸೆಲ್‌ಮಿಶನ್
ಹಾಯಸ್ಕೂಲ, ಧಾರವಾಡ.

ಶಾರೀರಿಕ ಶಿಕ್ಷಣದ ಹೊಸ ಅಭ್ಯಾಸಕ್ರಮಕ್ಕನುಸರಿಸಿ ಬರೆದ,
ನೂರಾರು ಚಿತ್ರಗಳಿಂದ ಕೂಡಿದ, ಸುಂದರ ಪುಸ್ತಕವು.

ಎಲ್ಲ ಶಿಕ್ಷಕರೂ ಇದರ ಲಾಭವನ್ನು ಪಡೆಯಲೇಬೇಕು.

ಬೆಲೆ : ೨—೦—೦

ಪುಸ್ತಕ ದೊರೆಯುವ ಸ್ಥಳ :

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಭಾರತ ಬುಕ್-ಡಿಪೊ, ಧಾರವಾಡ.

ತ್ವರೆ ಮಾಡಿರಿ !　　ಮುಲ್ಕೀ ವಿದ್ಯಾರ್ಥಿಗಳಿಗೆ ಸುಸಂಧಿ !　　ಇಂದೇ ಬರೆಯಿರಿ !

ಮುಲ್ಕೀ ಪರೀಕ್ಷೆಯನ್ನು ಪಾಸಾಗಲು ಊರುಗೋಲಾದ ಬಹುಜನ ವಿದ್ಯಾರ್ಥಿ ವ ಶಿಕ್ಷಕರಿಂದ ಮನ್ನಣೆ ಪಡೆದ ಕೆಳಗಿನ ಬುಕ್ಕುಗಳನ್ನು ಇಂದೇ ಸಂಗ್ರಹಿಸಿರಿ

ನೂತನ ಪ್ರಶ್ನೋತ್ತರಮಾಲೆ

(೧)	**ಇತಿಹಾಸ**	೧—೦—೦	(೩)	**ಭೂಮಿತಿ**	೧—೦—೦
(೨)	**ಭೂಗೋಲ**	೧—೦—೦	(೪)	**ಭಾಷಾಭ್ಯಾಸ ಕೈಪಿಡಿ**	೧—೦—೦

ನೂತನ ಕಿಸೆಯ ಕೈಪಿಡಿಮಾಲೆ

(೧)	**ಆರೋಗ್ಯಶಾಸ್ತ್ರ**	೦—೬—೦	(೨)	**ಶಾಸ್ತ್ರೀಯವಿಷಯ**	೦—೬—೦

ಅಲ್ಲದೆ

(೧)	**ಸಚಿತ್ರ ಶಾಸ್ತ್ರೀಯವಿಷಯ**	೦—೧೨—೦	(೨)	**ಸಾ. ವಿಜ್ಞಾನಸಾರ**	೦—೬—೦

ಅಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಬಗೆಯ ಹಿಂದೀ, ಇಂಗ್ಲೀಷ, ಕನ್ನಡ ಬುಕ್ಕುಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಆಕಳವಾಡಿ ಬುಕ್ಕಡಿಪೋ, ಧಾರವಾಡ

ವಿಜಯ ರೋಡ.

ಆದರ್ಶ ಚಿತ್ರಕಲಾ

(IDEAL DRAWING)

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ಅತ್ಯುತ್ತಮವಾದ ಪುಸ್ತಕವು

ಕಡೆಗಣಿಸಲ್ಪಟ್ಟ ೧೦೦ ಗುಣಗಳ ವಿಷಯ.

ಲೇಖಕರು : **ಶ್ರೀ. ಎಸ್. ಕೆ. ಜೋಶಿ**

ಡ್ರಾಯಿಂಗ ಶಿಕ್ಷಕರು, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧುಳಿಯಾ.

- ಈ ಪುಸ್ತಕದಲ್ಲಿ ಅಬ್ಜಕ್ಟ, ಮೆಮರಿ, ಡಿಜೈನು, ನೇಚರ ಮತ್ತು ದೃಷ್ಟಾಂತ ರೇಖನಕಲೆಯ ಒಂದು ಸಾವಿರಕ್ಕಿಂತ ಹೆಚ್ಚು ಚಿತ್ರಗಳಿವೆ. ಬಣ್ಣಗಳ ಮಿಶ್ರಣವನ್ನು ತೋರಿಸುವದಕ್ಕಾಗಿ ಮೂರು ಬಣ್ಣದ ನಾಲ್ಕು ಚಿತ್ರಗಳು. ನಾನಾಬಗೆಯ ಚಿತ್ರಗಳನ್ನು ಚಿತ್ರಿಸುವ ಹಾರಿಯನ್ನು ವರ್ಣಿಸುವ ಪದ್ಧತಿಗಳು.
- ಈ ಪುಸ್ತಕವು ಪ್ರಾಥಮಿಕ ಶಾಲೆಗಳ ಮೇಲಿನ ತರಗತಿಗಳ, ಹೈಸ್ಕೂಲುಗಳ ಮತ್ತು ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಅತ್ಯುಪಯುಕ್ತವಾಗಿದೆ. ಎಲಿಮೆಂಟರಿ ಮತ್ತು ಇಂಟರಮಿಜಿಯೆಟ್ ಡ್ರಾಯಿಂಗ ಪರೀಕ್ಷೆಗಳ ವಿದ್ಯಾರ್ಥಿಗಳಿಗಂತೂ ಇದು ವಿಶೇಷ ಉಪಯುಕ್ತವಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ನಡೆದ ವಿವಿಧ ಡ್ರಾಯಿಂಗ ಪರೀಕ್ಷೆಗಳ ಪ್ರಶ್ನಪತ್ರಿಕೆಗಳೂ ಇದರಲ್ಲಿ ಕೊಡಲ್ಪಟ್ಟಿವೆ.
- ಬೆಲೆ : ೦—೧೨—೦ ಅಂಚೆವೆಚ್ಚ ೦—೪—೦ ಅಂಚೆಯಿಂದ, ವ್ಹಿ. ಪಿ. ಯಿಂದ ೨-೪-೦. ನಿಮ್ಮ ಸಮೀಪದ ಪುಸ್ತಕ ವ್ಯಾಪಾರಿಗಳಿಂದ ತರಿಸಿಕೊಳ್ಳಿರಿ; ಅಥವಾ ಕೆಳಗಿನವರಿಗೆ ಬರೆದು ತರಿಸಿ ಕೊಳ್ಳಿರಿ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾಪೇಟೆ, ಪುಣೆ ೨.

Regd. No. B. 5375

ಸನ್ ೧೯೪೭—೪೮ ನೆಯ ಸಾಲಿನಲ್ಲಿ ಹೊರಟ ಹೊಸ ಅಭ್ಯಾಸಪತ್ರಿಕೆಗೆ
ಅನುಸರಿಸಿ ಬರೆದ ನಮ್ಮ ಪ್ರಕಟನೆಗಳು.

೪ನೆ ಇಯತ್ತೆಗಾಗಿ

ಭೂಮಂಡಲ ಪರಿಚಯ ಭಾಗ ೧

ಬೆಲೆ ೦—೧೨—೦

ಇದರಲ್ಲಿ ಮುಂಬಯಿಕರ್ನಾಟಕ, ಮಹಾರಾಷ್ಟ್ರ, ಗುಜರಾತ, ಕೊಂಕಣ ಮೊದಲಾದವುಗಳಲ್ಲಿಯ ಜನರ ಜೀವನ ಕ್ರಮವನ್ನು ಹನಿ ಮಳೆ, ಬೆಳೆ ಮೊದಲಾದವುಗಳನ್ನು ವಿವರವಾಗಿ ವರ್ಣಿಸಲ್ಪಟ್ಟಿದೆ; ಅಲ್ಲದೆ ವಿಶಾಲಕರ್ನಾಟಕದ ಸಂಕ್ಷಿಪ್ತ ಮಾಹಿತಿಯನ್ನು ಕೊಟ್ಟಿರುತ್ತದೆ. ವಿಲೀನೀಕೃತ ವಿಜಾಪುರ ಬೆಳಗಾಂವ ಜಿಲ್ಲೆಯ ನಕಾಶ ಹಾಗು ವಿಶಾಲ ಕರ್ನಾಟಕದ ನಕಾಶವನ್ನು ಸೇರಿಸಲಾಗಿದೆ. ಸುಮಾರು ೬೦ ಚಿತ್ರ ನಕಾಶಗಳು ಇರುತ್ತವೆ.

ಕನ್ನಡ ನಾಡಿನ ಚರಿತ್ರೆ

ಬೆಲೆ ೦—೧೪—೦

ಇದರಲ್ಲಿ ಕರ್ನಾಟಕದಲ್ಲಿ ಆಗಿಹೋದ ಶೂರ ಅರಸರ, ಕವಿಗಳ, ಧರ್ಮಗುರುಗಳ, ವೀರ ರಮಣಿಯರ ಜೀವನ ಚರಿತ್ರವನ್ನು ಸುಲಭ ಭಾಷೆಯಲ್ಲಿ ಕಥಾರೂಪವಾಗಿ ವಿವರಿಸಲಾಗಿದೆ.

ಸಾಮಾನ್ಯ ಜ್ಞಾನ

ಬೆಲೆ ೦—೮—೦

ಇದರಲ್ಲಿ ಮನೆಯಲ್ಲಿ ಸಾಕುವ ಪ್ರಾಣಿಗಳು, ಮುಖ್ಯ ಬೆಳೆಗಳು; ಬೇನೆಗಳು, ಹಳ್ಳಿಯ ಹಾಗೂ ನಗರದ ಆಡಳಿತ, ಪಂಚಾಂಗ ಮೊದಲಾದವುಗಳ ವಿಷಯವಾಗಿ ಸವಿಸ್ತಾರ ವರ್ಣನೆ ಆದೆ. ಅನೇಕ ಚಿತ್ರಗಳು . . .

೫ನೆ ಇಯತ್ತೆಗಾಗಿ ಸಂಯುಕ್ತ ಅಭ್ಯಾಸ ಪತ್ರಿಕೆಗನುಸರಿಸಿ,

ಸಾಮಾನ್ಯ ವಿಜ್ಞಾನ ಭಾಗ ೧

ಬೆಲೆ ೦—೧೨—೬

ಇದರಲ್ಲಿ ಮಾನವನ ಹಾಗೂ ಪ್ರಾಣಿಗಳ ಶ್ವಾಸೋಚ್ಛ್ವಾಸ, ಪೋಷಣ, ಚಲನೆ, ಜ್ಞಾನ ಗ್ರಹಣ, ನೀರು ಹಾಗು ಪಂಚಾಂಗಗಳ ವಿಷಯ ಸವಿಸ್ತರವಾಗಿ ವರ್ಣಿಸಲಾಗಿದೆ.

ಭೂಮಂಡಲ ಪರಿಚಯ ಭಾಗ ೨

ಬೆಲೆ ೧—೨—೦

ಇದರಲ್ಲಿ ಪೃಥ್ವಿಯ ಆಕಾರ. ಪ್ರಾಯೋಗಿಕ ಹಾಗು ನಿರೀಕ್ಷಣೆಯ ಕೆಲಸ ಹಿಂದುಸ್ತಾನದ ಹವಾಮಾನ ಹಾಗು ಜಗತ್ತಿನ ಹವಾಮಾನದ ಮುಖ್ಯ ಪ್ರಕಾರಗಳ ವಿಷಯಕ್ಕೆ ವಿಶದವಾಗಿ ವರ್ಣಿಸಲ್ಪಟ್ಟಿದೆ.

ಇದೇ ಪ್ರಕಾರ ೬ ನೆಯಿಯತ್ತೆಯ ಸಾಮಾನ್ಯ ವಿಜ್ಞಾನ ೦—೧೨—೦ ಭೂಮಂಡಲ ಪರಿಚಯ ಭಾಗ ೩ ಬೆಲೆ ೧—೪—೦.

ಅಲ್ಲದೆ ಪ್ರಾಥಮಿಕ ಪ್ರಮಾಣಪತ್ರ ಅಭ್ಯಾಸ ಪತ್ರಿಕೆಯಂತೆ ಸಾಮಾನ್ಯ ವಿಜ್ಞಾನ ಬೆಲೆ ರೂ ೧—೪—೦ ಭೂಮಂಡಲ ಪರಿಚಯ ಭಾಗಗಳ ಬೆಲೆ ರೂ ೨—೦—೧

ಮೇಲೆ ಕಾಣಿಸಿದ ಎಲ್ಲ ಪುಸ್ತಕಗಳು ಎಲ್ಲ ವ್ಯಾಪಾರಸ್ಥರಲ್ಲಿ ದೊರೆಯುತ್ತವೆ.

ಇಲ್ಲವಾದರೆ

ಪ್ರಕಾಶಕರು:

ರಾಷ್ಟ್ರೀಯ ಬುಕ್ ಡಿಪೋ ಧಾರವಾಡ

ಇವರಿಗೆ ಇಂದೇ ಪತ್ರ ಬರೆಯಿರಿ.

Printed by M. A. Kamat B. Sc at Jai Hind Art Press, Javlipeth, Dharwar. Edited and Published by K. G. Kurtkoti, B. M. Shintr, S. R Tatti, & Y. D. Nadkarni jointly at the Kannada Prathamik Shikshan Office Govt. Training College for Men, Dharwar.

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಕೆ. ಜಿ. ಕುರ್ತಕೋಟಿ

ಶ್ರೀ. ಎಂ. ಗೋವಿಂದ ಪೈ ಅವರು



ಅಧ್ಯಕ್ಷರು, ೩೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಮುಂಬಯಿ (೧೯೫೧)

(ಪಡಿಯಚ್ಚು 'ಮಹಾವೀರ' ಮಾಸಪತ್ರಿಕೆಯ ಕೃಪೆಯಿಂದ)

ಫೆಬ್ರುವರಿ ೧೯೫೧

ಪುಟ ೨೭೫ ಬೆಲೆ ೨ ರೂ. ೧೨ ಆ.

ಕೈನೇಯಿಗೆಯ ಮಾರ್ಗದರ್ಶಿಕೆ

ಲೇಖಕರು : ಎಂ. ಡಿ. ಮೋಲಗಿರಿ

ಮ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ್,
ಧಾರವಾಡ ಭಾಗ, ಧಾರವಾಡ, ಅವರ ಪತ್ರ
ನಂ. ೯೬೧೭/೩೦-೮-೫೦ ಅನ್ವಯ
ಟ್ರೇ. ಕಾ.ದ ೧ನೆಯ ಹಾಗು ೨ನೆಯ
ವರ್ಷದ ವಿದ್ಯಾರ್ಥಿಗಳಿಗೆ "ಪೂರಕ ಓದು"
ಎಂದು ಸರಕಾರದಿಂದ ಮಂಜೂರಾಗಿದೆ
ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ.

— ಎಮ್. ಕೆ. ಮೋಲಗಿರಿ —

ಕಮಲಾಪುರ ಭಾಗ,
(ಈಶ್ವರದೇವರ ಗುಡಿ ಓಣಿ)
ಧಾರವಾಡ.

ಪುಟ ೨೨೫ ಬೆಲೆ ೨ ರೂ. ೪ ಆ.

ಕೈ ನೂಲು

ಲೇಖಕರು : ಎಂ. ಡಿ. ಮೋಲಗಿರಿ.
(ಮೂಲೋದ್ಯೋಗ ಶಿಕ್ಷಕ, ಕ. ಗಂ. ಸರಕಾರಿ
ಟ್ರೇನಿಂಗ ಕಾಲೇಜ, ಧಾರವಾಡ)

ಈ ಪುಸ್ತಕದಲ್ಲಿ ಪ್ರಾಥಮಿಕ ಶಾಲೆಗಳ ಎಲ್ಲ ವರ್ಗಗಳ ಹಾಗು ಟ್ರೇನಿಂಗ ಕಾಲೇಜುಗಳ ೧ನೆಯ ವರ್ಷದ ಹೊಸ ಅಭ್ಯಾಸಪತ್ರಿಕೆಯಂತೆ ನೂಲುಗಾರಿಕೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಂಗ್ರಹಿಸಿದೆ. ಹತ್ತಿಯ ಬಿತ್ತಿಗೆಯನ್ನು ಮೊದಲುಗೊಂಡು ನೂಲು ಸಿದ್ಧವಾಗುವವರೆಗಿನ ಎಲ್ಲ ಸಂಗತಿಗಳನ್ನು ಸಮಯೋಜಿತ ಚಿತ್ರಗಳಿಂದಲೂ ಉದಾಹರಣೆಗಳಿಂದಲೂ ತಾಂತ್ರಿಕ ವಿವರಣೆಗೆ, ನೂಲುಗಾರಿಕೆಗೆ ಸಂಬಂಧಿಸಿದ ಗಣಿತ ಹಾಗು ಲೆಕ್ಕಪತ್ರಗಳನ್ನೂ ಸೇರಿಸಿದೆ. ನೂಲುವ ವರ್ಗಗಳನ್ನು ಸ್ವತಂತ್ರವಾಗಿ ನಡೆಯಿಸುವ ಬಗ್ಗೆ ಶಿಕ್ಷಕ ಶಿಕ್ಷಕಿಯರಿಗೂ ಖಾದಿ ಕಾರ್ಯಕರ್ತರಿಗೂ ತುಂಬಾ ಉಪಯುಕ್ತವಾಗಿದೆ.

— ಎಮ್. ಕೆ. ಮೋಲಗಿರಿ —

ಕಮಲಾಪುರ ಭಾಗ, ಈಶ್ವರದೇವರ ಗುಡಿ ಓಣಿ,
— — ಧಾರವಾಡ — —

ಸರಕಾರದಿಂದ ಟ್ರೇನಿಂಗ ಕಾಲೇಜುಗಳಿಗೆ '**ಪೂರಕವಾಚನ**'ವೆಂದು ಮಂಜೂರಾಗಿದೆ.

'ಶಾರೀರಿಕ ಶಿಕ್ಷಣ'

ಲೇಖಕರು :

ಶ್ರೀ. ಭೀ. ನ. ಮಣ್ಣೂರ
ಪ್ರ್ಯಾಕ್ಟಿಸಿಂಗ್‌ಸ್ಕೂಲ, ಟ್ರೇ. ಕಾಲೇಜ,
ಧಾರವಾಡ.

ಶ್ರೀ. ಜಿ. ಬಿ. ನವಲೂರ
ಫಿಜಕಲ್ ಟೀಚರ, ಬಾಸೆಲ್‌ಮಿಶನ್
ಹಾಯಸ್ಕೂಲ, ಧಾರವಾಡ.

ಶಾರೀರಿಕ ಶಿಕ್ಷಣದ ಹೊಸ ಅಭ್ಯಾಸಕ್ರಮಕ್ಕನುಸರಿಸಿ ಬರೆದ,
ನೂರಾರು ಚಿತ್ರಗಳಿಂದ ಕೂಡಿದ, ಸುಂದರ ಪುಸ್ತಕವು.

ಎಲ್ಲ ಶಿಕ್ಷಕರೂ ಇದರ ಲಾಭವನ್ನು ಪಡೆಯಲೇಬೇಕು.

ಬೆಲೆ : ೨—೦—೦

ಪುಸ್ತಕ ದೊರೆಯುವ ಸ್ಥಳ :

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಭಾರತ ಬುಕ್-ಡಿಪೊ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು :
ಶ್ರೀ. ಕೆ. ಜಿ. ಕುರ್ತಕೋಟಿ

ಬಿಡಿ ಪ್ರತಿ
೦—೬—೦

ಫೆಬ್ರುವರಿ ೧೯೫೧

ವಾರ್ಷಿಕ ಚಂದಾ
೪—೦—೦

ಪರಿವಿಡಿ

ಮೂಲ ಶಿಕ್ಷಣದಲ್ಲಿ ಮುನ್ನಡೆ
ಲೇಖಕರು : ಶ್ರೀ. ಮ. ಗೋ. ಕಟ್ಟಿ ೨

ಸಂಪಾದಕೀಯ

ಕರ್ನಾಟಕ ಸಂಗೀತ
ಲೇಖಕರು : ಶ್ರೀ. ಎಸ್. ಆರ್. ಕಟ್ಟಿ ೫

ಕಾಂಚನಗಂಗಾ
ಲೇಖಕರು : ಹೆಂ. ಟ್ರಿ. ಕಾ. ದಿಂದ ೮

ಪ್ರಾತ್ಯಕ್ಷಿಕ ಶಿಕ್ಷಣ
ಲೇಖಕರು : ಹೆಂ. ಟ್ರಿ. ಕಾ. ದಿಂದ ೧೧

ಇತಿಹಾಸವನ್ನು ಕಲಿಸುವ ಬಗೆಗಳು
ಲೇಖಕರು : ಶ್ರೀ. ಶಿಂತ್ರಿ ಬಸಪ್ಪನವರು ೧೩

ಶ್ರೀ. ಎಸ್. ವ್ಹಿ. ಜೇವೂರ (ಜೀವನ ಪರಿಚಯ)
ಲೇಖಕರು : ಶ್ರೀ. ವೀರೇಶ ಹಿರೇಮಠ ೧೮

ಪ್ರಥಮ ಪದನ್ಯಾಸ (ರೇಡಿಯೊ ಭಾಷಣ)
ಲೇಖಕರು : ಶ್ರೀ. ವೀರೇಶ ಹಿರೇಮಠ ೨೦

ಬಹುವರ್ಗಗಳನ್ನು ಕಲಿಸುವ ಸಮಸ್ಯೆ
ಲೇಖಕರು : ಶ್ರೀ. ವೀ. ಬ. ಚವಣ್ಣವರ ೨೫

ಪುಸ್ತಕ ವಿಮರ್ಶೆ (ಆಹಾರ ವಿಜ್ಞಾನ) ೨೮

ಪ್ರಕಟನೆ

‘ಕನ್ನಡ ಪ್ರಾಥಮಿಕ ಶಿಕ್ಷಣ’ವನ್ನಾಗಲಿ, ಅಭ್ಯಾಸಪತ್ರಿಕೆಗಳನ್ನಾಗಲಿ ನಾವು ವ್ಹಿ. ಪಿ. ಯಿಂದ ಕಳಿಸುವುದಿಲ್ಲ. ಇವು ಬೇಕಾದವರು ಹಣವನ್ನು ಮುಂಗಡವಾಗಿಯೇ ಕಳುಹಿಸಿ ತರಿಸಿಕೊಳ್ಳಬೇಕಾಗಿ ಬಿನ್ನಹ.

ವಾರ್ಷಿಕ ಚಂದಾ: ೪ ರೂಪಾಯಿ
ಬಿಡಿ ಸಂಚಿಕೆ: ಆರಾಣೆ

ಪ್ರಧಾನ ಸಂಪಾದಕರು :
ಕನ್ನಡ ಪ್ರಾಥಮಿಕ ಶಿಕ್ಷಣ, ಗಂಡುಮಕ್ಕಳ ಸರಕಾರಿ ಟ್ರೇನಿಂಗ
ಕಾಲೇಜ, ಧಾರವಾಡ.

ಮೂಲ ಶಿಕ್ಷಣದಲ್ಲಿ ಮುನ್ನಡೆ

ಶ್ರೀ. ಮ. ಗೋ. ಕಟ್ಟಿ ಶಿಕ್ಷಕರು ಗಂ. ಟ್ರೇ. ಕಾ. ಧಾರವಾಡ

ಸರಕಾರಿ ಗಂಡುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ, ಈ ಸಂಸ್ಥೆಯ ಶಿಕ್ಷಕ, ವಿದ್ಯಾರ್ಥಿಗಳು ಟ್ರೇನಿಂಗ ಸಂಸ್ಥೆಗಳ ಹೊಸ ಅಭ್ಯಾಸಪತ್ರಿಕೆಯ ಮೇರೆಗೆ ಹಳ್ಳಿಯ ಶಾಲೆಗಳಲ್ಲಿ ಒಂದು ವಾರ ಸಮವಾಯ ಪಾಠಗಳನ್ನು ಕೊಡುವದಕ್ಕಾಗಿ ಕೈಕೊಂಡ ಯೋಜನೆಯ ವಿವರಣೆಗಳು ಕೆಳಗಿನಂತಿವೆ. ೧೯೫೦ನೆಯ ಇಸ್ವಿಯಿಂದ ಟ್ರೇನಿಂಗ ಸಂಸ್ಥೆಗಳಲ್ಲಿ ತರಬೇತಿ ಪಡೆಯಲು ಬಂದ ಶಿಕ್ಷಕ ವಿದ್ಯಾರ್ಥಿಗಳಿಗೆ ಚಟುವಟಿಕೆಗಳನ್ನು ಸರಿಯಾಗಿ ಹೊಂದಿಸಿಕೊಳ್ಳುವದು, ಆ ಪ್ರಕಾರ ಸಮವಾಯ ಪಾಠಗಳನ್ನು ಕೊಡುವದು, ಮತ್ತು ಆದ ಕಾರ್ಯ ಹಾಗು ಜ್ಞಾನಗಳನ್ನು ನಮೂದಿಸಿಕೊಳ್ಳುವದು ಇತ್ಯಾದಿ ಸಂಗತಿಗಳ ಪ್ರತ್ಯಕ್ಷ ಜ್ಞಾನವು ಕಾರ್ಯತಃ ಆಗಬೇಕೆಂಬ ಹಿರಿಯಾಸೆಯಿಂದ ಸರಕಾರದವರು ಶಿಕ್ಷಕ-ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ಒಂದು ವಾರ ಪಾಠ ಕೊಡಕೊಡಬೇಕೆಂದು ಅಭ್ಯಾಸಪತ್ರಿಕೆಯಲ್ಲಿ ಕಾಣಿಸಿದ್ದಾರೆ. ಆ ಪ್ರಕಾರ ೧೯೫೦ನೆಯ ಡಿಸೆಂಬರ ತಿಂಗಳಿನಲ್ಲಿ ಧಾರವಾಡದ ಸರಕಾರಿ ಗಂಡುಮಕ್ಕಳ ಟ್ರೇನಿಂಗ ಸಂಸ್ಥೆಯ ಮೊದಲನೆಯ ವರ್ಷದ ಶಿಕ್ಷಕ-ವಿದ್ಯಾರ್ಥಿಗಳು ಧಾರವಾಡದ ತಾಲೂಕಿನಲ್ಲಿಯ ವರ್ಧಾರಾಷ್ಟ್ರೀಯ ಶಾಲೆಗಳುಳ್ಳ ಹಳ್ಳಿಗಳಿಗೆ ಹೋಗಿ ಪಾಠಗಳನ್ನು ಕೊಟ್ಟು ಬಂದರು.

೧. ೧ನೆಯ ವರ್ಷ ಬ ೨೧. ನರೇಂದ್ರ ತಾ. ೪-೧೨-೫೦ ರಿಂದ ೧೦-೧೨-೫೦
೨. ೧ನೆಯ ವರ್ಷ ಬ ೨೧. ಅಮ್ಮಿನಭಾವಿ ,, ,,
೩. ೧ನೆಯ ವರ್ಷ ಕ ೧೯. ಕೊಟಬಾಗಿ ೧೧-೧೨-೫೦ ರಿಂದ ೧೫-೧೨-೫೦
೪. ೧ನೆಯ ವರ್ಷ ಕ ೧೯. ಅಮ್ಮಿನಭಾವಿ ೧೧-೨-೫೦ ರಿಂದ ೧೭-೧೨-೫೦
೫. ೧ನೆಯ ವರ್ಷ ಅ ೧೯. ತಡಕೋಡ ೧೮-೧೨-೫೦ ರಿಂದ ೨೪-೧೨-೫೦
೬. ೧ನೆಯ ವರ್ಷ ಅ ೨೦. ಗರಗ ೧೮-೧೨-೫೦ರಿಂದ ೨೪-೧೨-೫೦

ಪ್ರತಿಯೊಂದು ಗುಂಪಿನ ಸಂಗಡ ಇಬ್ಬರು ಶಿಕ್ಷಕರು (ಮೂಲ ಶಿಕ್ಷಣದಲ್ಲಿ ತರಬೇತಿ ಹೊಂದಿದವರು) ಹೋಗಿದ್ದರು. ಪ್ರತಿಯೊಂದು ಗುಂಪಿನಲ್ಲಿ ಮುಖ್ಯಮಂತ್ರಿ, ಆಹಾರಮಂತ್ರಿ, ಆರೋಗ್ಯಮಂತ್ರಿಗಳನ್ನು ಆರಿಸಿ ಅವರಿಗೆ ಅವರವರ ಕಾರ್ಯಗಳ ವಿವರಣೆಯನ್ನು ಗುಂಪಿನಲ್ಲಿ ಮೊದಲೇ ಚರ್ಚಿಸಲಾಯಿತು. ಮುಖ್ಯಮಂತ್ರಿ ಮತ್ತು ಒಬ್ಬ ಶಿಕ್ಷಕರು ೩, ೪ ದಿನ ಮುಂಚಿತವಾಗಿಯೇ ಹಳ್ಳಿಗೆ ಹೋಗಿ ಪೂರ್ವಸಿದ್ಧತೆಯನ್ನು ಮಾಡಿಬಂದರು. ನಂತರ ಅನುಕೂಲತೆಯ ಪ್ರಕಾರ ಮೋಟಾರ-ಚಕ್ಕಡಿ ಮತ್ತು ಕಾಲ್ನಡಿಗೆಯಿಂದ ಗುಂಪಿನವರು ಹಳ್ಳಿಗೆ ಹೋಗಿ ತಮ್ಮ ಕಾರ್ಯವನ್ನು ಉತ್ಸಾಹದಿಂದ ಪ್ರಾರಂಭಿಸಿದರು. ಪ್ರತಿಯೊಂದು ಗುಂಪಿನಲ್ಲಿ ಮೂರು ಭಾಗಗಳನ್ನು ಮಾಡಲಾಗಿತ್ತು. ೧. ಪಾಠಕೊಡುವವರು, ೨. ನಿರೀಕ್ಷಕರು, ೩. ಆಹಾರತಯಾರು ಮಾಡುವವರು.

ಮರುದಿನ ಪಾಠ ಕೊಡುವವರು ಅಡಿಗೆಯ ಮನೆಗೆ, ನಿರೀಕ್ಷಕರು ಪಾಠ ಕೊಡಲು, ಆಹಾರದವರು ನಿರೀಕ್ಷಿಸಲು ಹೋಗಿ ಕಾರ್ಯಗಳಲ್ಲಿ ಬದಲಾವಣೆಯಾಗುತ್ತಿತ್ತು. ಈ ಪ್ರಕಾರ ಎಲ್ಲರಿಗೂ ಎಲ್ಲ ಕಾರ್ಯಗಳ ಸರತಿ ಬರುತ್ತಿತ್ತು. ಪ್ರಾತಃಪ್ರಾರ್ಥನೆಯಿಂದ ಮೊದಲುಗೊಂಡು ಸಾಂಘಿಕ ಜೀವನದ ಎಲ್ಲ ಕಾರ್ಯಗಳನ್ನು ಶಿಕ್ಷಕ-ವಿದ್ಯಾರ್ಥಿಗಳು ಶಿಸ್ತಿನಿಂದಲೂ, ಉತ್ಸಾಹದಿಂದಲೂ ಮಾಡುತ್ತ ಬಂದರು. ಒಂದು ವಾರದ ಅಂದಾಜು ಪತ್ರಿಕೆ, ಚಟುವಟಿಕೆಗಳನ್ನು ಹಂಚುವದು ಪಾಠವನ್ನು ಕ್ರಮಬದ್ಧವಾಗಿ ಟಿಪ್ಪಣಿ ಪುಸ್ತಕದಲ್ಲಿ ಬರೆಯುವದು, ಪಾಠವನ್ನು ಕೊಡುವದು ಈ ಕಾರ್ಯದಲ್ಲಿ ಶಿಕ್ಷಕ-ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದ ಮೇರೆಗೆ ಪ್ರತ್ಯಕ್ಷ ಜ್ಞಾನವನ್ನು ಪಡೆದರು. ನಂತರ ವಾರ್ಷಿಕ ತ್ರೈಮಾಸಿಕ, ಮಾಸಿಕ ಮತ್ತು ವಾರಗಳ ಅಂದಾಜುಪತ್ರಿಕೆಗಳನ್ನು ತಯಾರಿಸುವ ಪದ್ಧತಿಯನ್ನು ವಿವರವಾಗಿ ಆ ಶಿಕ್ಷಕ ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಯಿತು. ಕೆಲವು ಸಾರೆ ರಾತ್ರಿ ಮನರಂಜನ ಕಾರ್ಯಗಳು ಸಾಗಿಸಲ್ಪಟ್ಟವು. ಪ್ರತಿಯೊಂದು ಶಾಲೆಯ ವೈಶಿಷ್ಟ್ಯವನ್ನು ಅರಿತುಕೊಳ್ಳಲಾಯಿತು. ಪ್ರತಿಯೊಂದು ಗುಂಪಿನ ಕಾರ್ಯಗಳನ್ನು ನೋಡಲು ಪ್ರಿನ್ಸಿಪಾಲರು ಒಂದೊಂದು ದಿನ ಆಯಾ ಶಾಲೆಗಳಿಗೆ ಹೋಗಿ ಬಂದರು. ಈ ಯೋಜನೆಯು ಶಿಕ್ಷಣದೃಷ್ಟಿಯಿಂದ ಅತ್ಯಂತ ಉಪಯುಕ್ತವಾಗಿದೆ.

ಕನ್ನಡ ಪ್ರಾಥಮಿಕ ಶಿಕ್ಷಣ



ಸಂಪಾದಕ ಮಂಡಲ

ಂಚಾಲಕರು: **ಶ್ರೀ ಬಿ. ಎನ್. ಮೀಮಾಂಸಿ,** ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ

ಪ್ರಧಾನ ಸಂಪಾದಕರು: **ಶ್ರೀ. ಕೆ. ಜಿ. ಕುರ್ತಕೋಟಿ,** ಬಿ.ಎ.,ಬಿ.ಟಿ. ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ,ಧಾರವಾಡ.

ಸಹಸಂಪಾದಕರು :

ೀ. **ಯಮುನಾಬಾಯಿ ನಾಡಕರ್ಣಿ,** ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ

ೀ. ಬಿ. ಎಂ **ಶಿಂತ್ರಿ,** ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.

ೀ. ಎಸ್. **ಆರ್. ತಟ್ಟಿ,** ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಪುಟ ೯೦ | ಫೆಬ್ರುವರಿ ೧೯೫೧ | ಸಂಚಿಕೆ ೯

ಸಂಪಾದಕೀಯ

●

ಮುಂಬಯಿಯಲ್ಲಿ ಕನ್ನಡದ ಕಹಳೆ

೯೫೦ ಡಿಸೆಂಬರ ತಿಂಗಳಲ್ಲಿ, ಒಂದಾನೊಂದು ಕಾಲ- ಕನ್ನಡ ನಾಡಿನದೇ ಒಂದು ಊರಾಗಿದ್ದ ಂಬಯಿಯಲ್ಲಿ ಎರಡನೆಯ ಸಲ ಕನ್ನಡದ ಕಹಳೆ- ಯಿತು. ಅದರ ಕರೆಗೆ ಇತರ ಭಾಷಾಭಾಷಿಗಳೂ ಟ್ಟು ಬಂದರು. ಸ್ನೇಹದ ಮಾತುಗಳನ್ನಾಡಿದರು. ಕನ್ನಡ ಸಾಹಿತ್ಯಪರಿಷತ್ತಿನ ಮೂವತ್ನಾಲ್ಕನೆಯ ಅಧಿ- ವೇಶನ, ಪತ್ರಿಕಾ ವ್ಯವಸಾಯಗೋಷ್ಠಿ, ಗಮಕಕಲಾ- ಗೋಷ್ಠಿ, ಸಾಹಿತ್ಯಗೋಷ್ಠಿ, ಮಹಿಳಾಗೋಷ್ಠಿ, ಮುಂತಾದವು ಜರುಗಿದವು. ಇವೆಲ್ಲವುಗಳಿಂದ ಕನ್ನ- ಡೇತರರಿಗೆ ಕನ್ನಡ ಸಾಹಿತ್ಯದ ಪರಿಚಯವನ್ನು ಮಾಡಿ- ಕೊಳ್ಳಲು ಅನುವು ದೊರೆಯಿತು. ಮಾನ್ಯ ಶ್ರೀ. ದಿವಾ- ಕರರ ಹೇಳಿಕೆಯಂತೆ ಮರಾಠಿ, ಗುಜರಾತಿ ಮತ್ತು ಹಿಂದೀ ಸಾಹಿತ್ಯಗಳ ಸಂಪರ್ಕ ಕನ್ನಡ ಸಾಹಿತಿಗಳಿಗೆ ದೊರಕಲು ಇದು ಎಡೆಮಾಡಿಕೊಟ್ಟಿತು. ಈ ಸಂದರ್ಭ-

ವನ್ನು ಸಾಧಿಸಿ ಧಾರವಾಡದ ಗಂಡುಮಕ್ಕಳ ಟ್ರೇನಿಂಗ-ಕಾಲೇಜದ ಸುಮಾರು ೫೦ ಶಿಕ್ಷಕ ವಿದ್ಯಾರ್ಥಿಗಳು ಓರ್ವ ಶಿಕ್ಷಕರ ನೇತೃತ್ವದಲ್ಲಿ ಶೈಕ್ಷಣಿಕ ಪ್ರವಾಸವನ್ನು ಕೈಕೊಂಡುದು ಸ್ತುತ್ಯವಾದುದು.

ಮುತ್ತಿನಂತಹ ಮಾತುಗಳು:

ಮುಂಬಯಿಯಲ್ಲಿ ೧೯೫೦ ಡಿಸೆಂಬರ ೨೪ರಂದು ಜರುಗಿದ ಕನ್ನಡ ಸಾಹಿತ್ಯ ಪರಿಷತ್ತಿನ ೩೪ನೆಯ ಅಧಿವೇಶನಕ್ಕೆ ಮಂಜೇಶ್ವರದ ವಯೋವೃದ್ಧರೂ ಜ್ಞಾನವೃದ್ಧರೂ ರಾಷ್ಟ್ರೀಯ ಕವಿಗಳೂ ಪ್ರಸಿದ್ಧ ಕನ್ನಡ ಸಂಶೋಧಕರೂ ಆಗಿರುವ ಶ್ರೀ. ಗೋವಿಂದ ಪೈ ಅವರು ದೊರಕಿದುದು ಸರ್ವರಿಗೂ ಹೆಮ್ಮೆಯ ವಿಷಯವಾಗಿದೆ, ಪರಿಷತ್ತಿನ ಭಾಗ್ಯವಾಗಿದೆ ಎಂದೇ ಹೇಳಬೇಕಾಗಿದೆ. ಶ್ರೀ. ಗೋವಿಂದ ಪೈ ಅವರು ಕನ್ನಡ ಸಾಹಿತ್ಯದ ಪ್ರಾಚೀನತೆ, ಪ್ರಗಲ್ಭತೆ ಮುಂತಾದವುಗಳನ್ನು ಕುರಿತು ಮಾತನಾಡಿದ ನಂತರ ಕೊನೆಯಲ್ಲಿ ಅವರು ಆಡಿದ ಮಾತುಗಳು ಕರ್ನಾಟಕದ ಇಂದಿನ ಸ್ಥಿತಿಯಲ್ಲಿ ಮುತ್ತಿನಂತಹವೂ ಮನನೀಯವೂ ಬೆಳಕುತೋರುವಂತಹವೂ ಆಗಿವೆ. ಅವು ಇಂತಿವೆ:—

ನಾನು ಎರಡು ತಾಯಂದಿರ ಕೂಸು. ಕೊಂಕಣಿ ನನ್ನ ಹೆತ್ತ ತಾಯಿ, ಕನ್ನಡ ಸಾಕು ತಾಯಿ; ನನ್ನ ಸಾಕಿದ ದಾಯಿ. ಕೊಂಕಣಿಯಲ್ಲಿ ಹೆಸರಿಗೆ ತಕ್ಕಷ್ಟು ಸಾಹಿತ್ಯವಿದ್ದರೆ ಸಾಕಿತ್ತು, ಫ್ರಾನ್ಸ ದೇಶದ ಫ್ರೆಡರಿಕ ಮಿಸ್ತ್ರಾಲ ಎಂಬ ಕವಿ ಫ್ರೆಂಚ ಸಾಹಿತ್ಯದಲ್ಲಿ ರಚಿಸದೆ ತನ್ನ ತಾಯ್ನುಡಿಯಾದ ಪ್ರೊವೆಂಸಾಲ ಭಾಷೆಯಲ್ಲಿ ತನ್ನ ಕೃತಿಗಳನ್ನು ರಚಿಸಿದಂತೆ ನಾನೂ ನನ್ನ ತಾಯ್ನುಡಿಯಲ್ಲಿ ತಾನೆ ರಚಿಸುತ್ತಿದ್ದೆನೊ. ಆದರೆ ತಾಯಿಯ ಮೊಲೆಯಲ್ಲಿ ಹಾಲಿಲ್ಲ, ಕೊಂಕಣಿಯಲ್ಲಿ ಸಾಹಿತ್ಯವಿಲ್ಲ ಆಕೆ ಆ ಬಗ್ಗೆ ನನ್ನನ್ನು ಕನ್ನಡದ ಮೊರೆಯಲ್ಲಿ ಹಾಕಿದಳು. ಈ ದಾಯಿಯಾದರೆ ಪಯಸ್ವಿನಿ. ಎಷ್ಟು ಕಾಲದಿಂದ ಎಷ್ಟೋ ಕವಿಗಳನ್ನು ಊಡಿಸಿಯೂ ಮತ್ತು ಬತ್ತದ, ದೇವರ ದಯೆಯಿಂದ ಸರ್ವದಾ ಬತ್ತಬಾರದ ಸದಾಸ್ನುಹಿ. ತನ್ನ ಮೊಲೆಯನ್ನು ಆಕೆ ತಾಯಿಗೂ ಮಿಕ್ಕ ಅಕ್ಕರೆಯಿಂದ ನನಗೆ ಉಣಿಸಿದಳು. ಆಕೆಯ ಆ ಅಕ್ಕರೆಯ ಸಾಲವನ್ನು ಏಳೇಳು ಜನ್ಮಕ್ಕೂ ತೆತ್ತು ತೀರಿಸಲಾರೆ. ತಾಯೀ, ನೀನು ನನ್ನಲ್ಲಿ ಇಟ್ಟ ಮಮತೆಗೂ ನಾನು ನಿನಗೆ ಸಲ್ಲಿಸುತ್ತಿರುವ ಪ್ರತಿ ಮಮತೆಗೂ ಸರ್ವಥಾ ಎಣೆಯಿಲ್ಲ. ನೀನು ನನಗೆ ತರುವಿ ಎಂದರೆ ಅಮೃತದಂಥ ಮೊಲೆ ಹಾಲು. ನಾನು ನಿನಗೆ ತರುವೆನೆಂದರೆ ನಿನ್ನ ಕಾಲುಂಗುಟವನ್ನು ಕೂಡ ತೊಳೆಯ ಸಾಲದ ಕಣ್ಣೀರು. ಬೇರೆ ಏನಿದೆ ನನ್ನಲ್ಲಿ? ಅವ್ವಾ, ಅದರಿಂದ ತಾನೆ ತೃಪ್ತಳಾಗು.

ಪ್ರಾ. ಶಾ. ಪ್ರಮಾಣಪತ್ರ ಪರೀಕ್ಷೆಯ ಹೊಸ ಅಭ್ಯಾಸಪತ್ರಿಕೆ.

ಬೆಲೆ: ಮೂರಾಣೆ (ಅಂಚೆ ವೆಚ್ಚ ಪ್ರತ್ಯೇಕ)

ಶಾರೀರಿಕ ಶಿಕ್ಷಣ ಅಭ್ಯಾಸಪತ್ರಿಕೆ

ಬೆಲೆ: ನಾಲ್ಕಾಣೆ (ಅಂಚೆ ವೆಚ್ಚ ಪ್ರತ್ಯೇಕ)

ಪ್ರಧಾನ ಸಂಪಾದಕರು

ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಕರ್ನಾಟಕ ಸಂಗೀತ

★ ★ ★

ಶ್ರೀ. ಎಸ್. ಆರ್. ಶೆಟ್ಟಿ

ಕರ್ನಾಟಕ ಸಂಗೀತದ ಸ್ವರೂಪದ ವಿಷಯಕ್ಕೆ ಜನರಲ್ಲಿ ತಪ್ಪು ತಿಳಿವಳಿಕೆಯು ರೂಢವಾಗಿದೆ. ಈಗ ಭಾರತದಲ್ಲಿ ಎರಡು ಸಂಗೀತ ಪದ್ಧತಿಗಳು ಬಳಕೆಯಲ್ಲಿವೆ. ಒಂದು, ಹಿಂದುಸ್ತಾನಿ ಸಂಗೀತ ಪದ್ಧತಿ, ಮತ್ತೊಂದು ದಾಕ್ಷಿಣಾತ್ಯ ಸಂಗೀತ ಪದ್ಧತಿ. ಈ ಎರಡನೆಯ ಪದ್ಧತಿಗೇ ಕರ್ನಾಟಕ ಸಂಗೀತ ಪದ್ಧತಿಯೆಂದು ಹೇಳಿಕೊಳ್ಳುವದುಂಟು. ಆದರೆ ಅದು ಕರ್ನಾಟಕ ಸಂಗೀತದ ವಿಕೃತರೂಪವೆಂದು ತಿಳಿಯಬೇಕು. ನಿಜವಾದ ಕರ್ನಾಟಕ ಪದ್ಧತಿಯ ಗುಣಗಳು ಹೆಚ್ಚಾಗಿ ಹಿಂದುಸ್ತಾನಿ ಪದ್ಧತಿಯಲ್ಲಿಯೇ ಉಳಿದಿವೆ. ಕರ್ನಾಟಕದ ಸಂಗೀತವೆಂದು ನಾವು ಹೆಮ್ಮೆಪಡುವದು ಈಗಿನ ಹರಿದು ಹಂಚಿಹೋದ ಕರ್ನಾಟಕದ ಸಂಗೀತವಲ್ಲ; ಆದರೆ ಯಾದವ ಅರಸರ ಕರ್ನಾಟಕ ಅಥವಾ ವಿಜಯನಗರ ಸಾಮ್ರಾಜ್ಯದ ಅರಸರ ಕರ್ನಾಟಕ ಎಂಬುವನ್ನು ನಾವು ಲಕ್ಷ್ಯದಲ್ಲಿಡಬೇಕು. ಕರ್ನಾಟಕ ಸಂಗೀತವೆಂದರೆ ಐತಿಹಾಸಿಕ ಕರ್ನಾಟಕದ ಸಂಗೀತವೆಂಬುವನ್ನು ನಾವು ಮರೆಯಬಾರದು. ಯಾದವರ ಹಾಗು ವಿಜಯನಗರ ಸಾಮ್ರಾಜ್ಯವು ಅಳಿದ ಮೇಲೆ ಕಲೆಗಳಿಗೆ ಉತ್ತೇಜನಕೊಡುವ ಅದರ ಪರಂಪರೆಯು ಮೈಸೂರು ಒಡೆಯರರಿಂದಲೂ ತಂಜಾವೂರ ತುಲಜಾ ಮಹಾರಾಜ ಮುಂತಾದವರಿಂದಲೂ ರಕ್ಷಿಸಲ್ಪಟ್ಟಿತು. ಅಂತೂ ನಾಟಕ ಸಂಗೀತದ ನಿಜವಾದ ವಿಚಾರವು ಹೀಗಿರುವದು: ಮೊದಲು ಭಾರತದಲ್ಲಿ ಎಲ್ಲಿಡೆಯಲ್ಲಿ ಒಂದೇ ಒಂದು ಸಂಗೀತ ಪದ್ಧತಿಯಿತ್ತು. ಸುಮಾರು ಎರಡು ಶತಮಾನಗಳ ವರೆಗೆ ಎಂದರೆ ೧೩೦೦-೧೫೦೦ರ ವರೆಗೆ ಭಾರತದ ಸಂಗೀತ ಕಲೆಯಲ್ಲಿ ಮಹತ್ವದ ಮಾರ್ಪಾಟುಗಳಾದವು. ಈ ಬದಲಾವಣೆಗೆ ಕಾರಣವು ಆ ಕಾಲದ ಕರ್ನಾಟಕದ ಪಂಡಿತರು ಕಲ್ಪಿಸಿದ ವ್ಯವಸ್ಥೆ ಹಾಗು ಅವರು ಬರೆದಿಟ್ಟ ಶಾಸ್ತ್ರವು. ಕ್ರಿಸ್ತಶಕದ ಆರಂಭದ ಸುಮಾರಿಗಿದ್ದ ಭರತನ ನಾಟ್ಯಶಾಸ್ತ್ರವೆಂಬ ಗ್ರಂಥವೇ ಸಂಗೀತಕಲೆಗೂ ಮೊದಲಿನಿಂದ ಆಧಾರವಾಗಿದ್ದಿತು. ಆದ್ದರಿಂದ ೧೩ನೆಯ ಶತಮಾನದ ವರೆಗೆ ನಮ್ಮ ದೇಶದಲ್ಲಿ ಒಂದೇಒಂದಾಗಿದ್ದ ಸಂಗೀತಕ್ಕೆ ಭಾರತೀಯ ಸಂಗೀತವೆಂದು ಹೇಳಬಹುದು. ಆ ಸಂಗೀತ ಪದ್ಧತಿಯನ್ನು ಜಾತಿಮೂರ್ಛನಾ ಪದ್ಧತಿಯೆಂದು ಕರೆಯುವದು. ೧೩ನೆಯ ಶತಮಾನದಲ್ಲಿ ಶಾರ್ಙ್ಗದೇವನೆಂಬ ನೆಂಬ ಸಂಗೀತ ಶಾಸ್ತ್ರ ಪಂಡಿತನು ಸಂಗೀತ ರತ್ನಾಕರವೆಂಬ ಗ್ರಂಥವನ್ನು ರಚಿಸಿದನು. ಅದರಲ್ಲಿ ರಾಗಗಳಿಗೆ ಆತನು ಹೊಸ ಪದ್ಧತಿಯನ್ನು ಹಾಕಿಕೊಟ್ಟನು. ಮೊದಲು ಸಪ್ತಕದಲ್ಲಿ ಏಳೇ ಸ್ವರಗಳಿರುತ್ತಿದ್ದು ಮೂರು ಸಪ್ತಕಗಳ ವರೆಗೆ ಅವುಗಳ ಸಾಧಾರಣ ವ್ಯಾಪ್ತಿಯು ಇತ್ತು. ವಾದ್ಯದ ಮೇಲೆ ಕೋಮಲ ತೀವ್ರ ಸ್ವರಗಳಿಗಾಗಿ ಬೇರೆ ಬೇರೆ ಸ್ಥಾನಗಳಿರಲಿಲ್ಲ. ಆದರೆ ಒಂದೊಂದು ರಾಗಮೇಳವನ್ನು ಒಂದೊಂದು ಬೇರೆ ಬೇರೆ ಸ್ವರದಿಂದ ಆರಂಭ ಮಾಡುವದರಿಂದ ರಾಗವು ಬೇರೆ ಬೇರೆಯಾಗುತ್ತಿತ್ತು. ಇದರ ನಿದರ್ಶನವನ್ನು ನೋಡಬೇಕಾಗಿದ್ದರೆ, ಹಾರ್ಮೋನಿಯಂದ ಬರೇ ಬಿಳಿಯ ಪಟ್ಟಿಗಳನ್ನೇ ಉಪಯೋಗಿಸಿ ೧ನೆಯ ಪಟ್ಟಿಯಿಂದ ೮ನೆಯ ಪಟ್ಟಿಯ ವರೆಗೆ ಎಂಟು ಸ್ವರಗಳನ್ನು ಬಾರಿಸಿದರೆ ಒಂದು ರಾಗವಾಗುವದು, ೨ನೆಯ ಪಟ್ಟಿಯಿಂದ ೯ನೆಯ ಪಟ್ಟಿಯ ವರೆಗೆ ಬಾರಿಸಿದರೆ ಮತ್ತೊಂದು ರಾಗವಾಗುವದು. ಹೀಗೆಯೇ ಮೂರನೆಯ, ೪ನೆಯ, ೫ನೆಯ ಪಟ್ಟಿಗಳಿಂದ ಆರಂಭ ಮಾಡಿದರೆ ಬೇರೆ ಬೇರೆ ರಾಗಗಳು ಹುಟ್ಟುವವು. ಇದೇ ಜಾತಿಮೂರ್ಛನಾ ಪದ್ಧತಿಯ ಲಕ್ಷಣ. ಇದಕ್ಕೆ ಕರಿಯ ಪಟ್ಟಿಗಳು ಬೇಕಾಗುವದಿಲ್ಲ; ಎಂದರೆ ಸಪ್ತಕದಲ್ಲಿ ಕೋಮಲ ತೀವ್ರಗಳೆಂಬ ಬೇರೆ ಬೇರೆ ಸ್ವರಗಳ ಅಗತ್ಯವಿಲ್ಲ. ಮುಂದೆ ಈ ಪದ್ಧತಿಯಲ್ಲಿ ಬದಲಾಗಿ ಶಾರ್ಙ್ಗದೇವನು ಪ್ರತಿಯೊಂದು ರಾಗವನ್ನು ಒಂದೇ ಆಧಾರ

ಸ್ವರದಿಂದ ಪ್ರಾರಂಭಿಸುವಂತೆಯೂ ಶುದ್ಧ ವಿಕೃತ ಸ್ವರಗಳಿಗೆ ಬೇರೆ ಬೇರೆ ಮನೆಗಳನ್ನು ಉಪಯೋಗಿಸುವಂತೆಯೂ ವ್ಯವಸ್ಥೆಗೊಳಿಸಿದನು. ಇದೇ ಐತಿಹಾಸಿಕ ಕರ್ನಾಟಕ ಸಂಗೀತ ಪದ್ಧತಿಯ ಶಾಸ್ತ್ರಾಧಾರ. ೧೩೦೦ ರಿಂದ ೧೫೦೦ರ ವರೆಗೆ ಕರ್ನಾಟಕ ಸಂಗೀತವೆಂಬುದೊಂದೇ ಅಖಂಡ ದೇಶದಲ್ಲಿತ್ತು. ಮುಂದೆ ಮೊಗಲರ ಆಳಿಕೆಯಲ್ಲಿ ಈ ಸಂಗೀತದ ಮೇಲೆ ಫಾರ್ಸೀ ಕಲೆಯ ರೀತಿಯ ವರ್ಚಸ್ಸು ಬಿದ್ದು ಹಿಂದುಸ್ತಾನಿ ಸಂಗೀತವೆಂದು ಒಂದು ಶಾಖೆಯೂ ದ್ರಾವಿಡ ಜನರ ಕಲಾರೀತಿಯ ಪ್ರಭಾವದಿಂದ ದಕ್ಷಿಣಾದಿ ಸಂಗೀತವೆಂದು ಒಂದು ಶಾಖೆಯೂ ಹೀಗೆ ಎರಡು ಶಾಖೆಗಳು ಆದವು. ಆದರೆ ಮುಂದೆ ರಾಮಾಮಾತ್ಯ, ವೆಂಕಟಮುಖಿ ಮುಂತಾದ ಪಂಡಿತರು ಕರ್ನಾಟಕ ಸಂಗೀತದ ಶ್ರುತಿಸ್ವರಗಳ ಸರಿಯಾದ ಸ್ವರೂಪವನ್ನು ತಿಳಿಯಲಾರದೆ ರಾಗಗಳ ಸ್ವರೂಪದಲ್ಲಿ ಅನೇಕ ಅಶಾಸ್ತ್ರೀಯವಾದ ಬದಲಾವಣೆಗಳನ್ನು ಮಾಡಿ ಶುದ್ಧ ಕರ್ನಾಟಕ ಸಂಗೀತವನ್ನು ವಿಕೃತಗೊಳಿಸಿದರು. ಆದರೂ ಶಾಸ್ತ್ರಗ್ರಂಥಗಳನ್ನು ಬರೆದವರೆಲ್ಲರೂ ಕರ್ನಾಟಕದವರೇ ಆಗಿರುವದರಿಂದಲೂ, ಹಾಗು ಮೈಸೂರು—ತಂಜಾವೂರು ಎಂಬ ಕರ್ನಾಟಕದ ಭಾಗಗಳಲ್ಲಿ ರಾಜಾಶ್ರಯದ ಪೋಷಣೆಯಿಂದ ಸಂಗೀತ ಕಲೆಯು ಬೆಳೆದು ಬಂದುದರಿಂದಲೂ ತೆಲುಗರೂ, ತಮಿಳರೂ ಕೂಡ ತಾವು ಹಾಡುವ ಸಂಗೀತಕ್ಕೆ ಕರ್ನಾಟಕ ಸಂಗೀತವೆಂದೇ ಇನ್ನೂ ಮನ್ನಣೆ ಕೊಡುತ್ತಾರೆ. ಇದರಿಂದ ನಮ್ಮ ಶುದ್ಧ ಕರ್ನಾಟಕ ಸಂಗೀತವು ಈ ಜನರಲ್ಲಿ ಉಳಿದಿರುವದೆಂದು ನಾವು ತಿಳಿದುಕೊಳ್ಳಬಾರದು. ಹಿಂದುಸ್ತಾನಿ ಪದ್ಧತಿಯ ಉತ್ಪಾದಕರು ಗ್ರಾಂಥಿಕಶಾಸ್ತ್ರದ ಅನಭಿಜ್ಞರಾಗಿರುವಂತೆ ತೆಲಗು, ತಮಿಳು ಸಂಗೀತಗಾರರೂ ಶಾಸ್ತ್ರವನ್ನು ಅಪಾರ್ಥಮಾಡಿ ಕೆಡಿಸಿದ್ದಾರೆ. ಹೀಗಿದ್ದರೂ ಅವರ ಸಂಗೀತಕಲೆಯ ಶೈಲಿಯು ಒಂದು ಸ್ವತಂತ್ರವಾದ ಪದ್ಧತಿಯ ಮೇಲೆ ಬೆಳೆದುಬಂದಿದೆ. ಸಂಗೀತದ ಪ್ರಾಚೀನ ಪರಂಪರೆಯ ಇತಿಹಾಸವನ್ನು ನಾವು ತಿಳಿಯುಬೇಕಾದರೆ ಎರಡೂ ಸಂಗೀತ ಪದ್ಧತಿಗಳ ಪರಿಚಯವು ನಮಗಿರುವದು ಅವಶ್ಯವಾದದ್ದು. ನಮ್ಮ ಉತ್ತರ ಕರ್ನಾಟಕದಲ್ಲಿ ತೆಲುಗು ತಿಳಿಯುವದಿಲ್ಲವಾದ್ದರಿಂದಲೂ ಹಾಗೂ ಈಗಿನ ಕರ್ನಾಟಕ ಸಂಗೀತದ ವಿದ್ವಾಂಸರು ತ್ಯಾಗರಾಜರ ತೆಲುಗು ಕೀರ್ತನೆಗಳನ್ನೇ ಹೆಚ್ಚಾಗಿ ಹಾಡುವದರಿಂದಲೂ ನಾವು ಅವರಿಂದ ಕರ್ನಾಟಕ ಸಂಗೀತದ ಆಲಾಪನ ಪದ್ಧತಿಯ ಪರಿಚಯ ಮಾಡಿಕೊಳ್ಳುವದು ಕ್ರಮಪ್ರಾಪ್ತವಾಗಿದೆ. ಪೇಶ್ವೆಯರ ಆಳಿಕೆಗೆ ಒಳಪಟ್ಟಿದ್ದರಿಂದ ಮತ್ತು ಮುಂಬಯಿ ಸರಕಾರಕ್ಕೆ ಉತ್ತರ ಕರ್ನಾಟಕವು ಸೇರಿದ ಕಾರಣದಿಂದ ಇಲ್ಲಿ ಹಿಂದುಸ್ತಾನಿ ಸಂಗೀತವನ್ನೇ ನಮ್ಮ ಜನರು ಅಭ್ಯಾಸಮಾಡಬೇಕಾಯಿತು. ಏಕೆಂದರೆ ಕಲೆಯಿಂದ ಉಪಜೀವನ ಸಾಗಬೇಕಾದರೆ ಮುಂಬಯಿ ಇಲಾಖೆಯಲ್ಲಿದ್ದ ಸಂಸ್ಥಾನಿಕರು, ರಾಜರು ಇವರ ಆಶ್ರಯದಿಂದಲೇ ಸಾಗಬೇಕಾಗಿತ್ತು; ಮತ್ತು ಮುಂಬಯಿ, ಪುಣೆ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ತಮ್ಮ ಕಲೆಗೆ ಪ್ರೋತ್ಸಾಹವನ್ನು ಹುಡುಕಬೇಕಾದ್ದರಿಂದಲೂ ಉತ್ತರಕರ್ನಾಟಕದ ಕನ್ನಡಿಗರು ಹಿಂದುಸ್ತಾನಿ ಸಂಗೀತವನ್ನೇ ಕಲಿಯಬೇಕಾಯಿತು, ಹಾಡಬೇಕಾಯಿತು. ಅಭ್ಯಾಸದ ಬಲದಿಂದ ಅದೇ ಶ್ರೇಷ್ಠವಾದ ಶೈಲಿಯೆಂದೂ ಅನಿಸಹತ್ತಿತು. ಕರ್ನಾಟಕ ಸಂಗೀತದಲ್ಲಿ ಮಾಧುರ್ಯವು ಕಡಿಮೆಯೆಂದೂ ಅನ್ನಹತ್ತಿದೆವು. ತೆಲುಗು ತಮಿಳು ಜನರು ಹಾಡುವ ರೀತಿಯಲ್ಲಿ ಸಹಜ ಸುಂದರತೆಯೂ ರೀತಿಗಾಂಭೀರ್ಯವೂ ಕಡಿಮೆ ಇರುವದು ನಿಜ; ಅಲಂಕಾರಪ್ರಿಯತೆಯು ಹೆಚ್ಚು. ಈ ಶೈಲಿಯ ಅಂತರವು ತಿಳಿಯಬೇಕಾದರೆ ದಿಲ್ಲಿಯ ಜುಮ್ಮಾಮಸೀದೆಯ ಕಲಾಕೃತಿಯನ್ನು ಹಳೆಬೀಡಿನ ಗುಡಿಗಳ ಕೆತ್ತನೆಯ ಕಲಾಕೃತಿಯನ್ನು ತುಲನೆಮಾಡಿ ನೋಡಿರಿ. ಶಿಲ್ಪದಲ್ಲಿ ಕಂಡುಬರುವ ಈ ರೀತಿ ವೈಚಿತ್ರ್ಯವೇ ಸಂಗೀತದಲ್ಲಿಯೂ ಕಾಣಿಸಿಕೊಂಡಿದೆ. ಆದರೆ ಪ್ರತಿಯೊಂದರಲ್ಲಿಯ ಒಂದು ಬಗೆಯ ಸೊಬಗು ಇದ್ದೇ ಇದೆ. ಕಾಡಿನಲ್ಲಿ ಅರಳಿದ ಹೂ ಮತ್ತು ಉದ್ಯಾನದಲ್ಲಿ ಬೆಳೆದ ಹೂ ಇವುಗಳ ಸೌಂದರ್ಯದಲ್ಲಿ ಹೆಚ್ಚುಕಡಿಮೆ ಇದ್ದರೆ ಈ ಹಿಂದುಸ್ತಾನೀ ಮತ್ತು ಕರ್ನಾಟಕ ಸಂಗೀತದ ಸೊಬಗಿನಲ್ಲಿ ಹೆಚ್ಚುಕಡಿಮೆ ಇದೆ ಎನ್ನಬಹುದು. ಹಿಂದುಸ್ತಾನಿ ಸಂಗೀತವು ಹೆಚ್ಚು ಹೆಚ್ಚು ಮಾರ್ದವವನ್ನು ವ್ಯಕ್ತಪಡಿಸುವದು. ಈಗಿನ ಕರ್ನಾಟಕ ಸಂಗೀತವು ಹೆಚ್ಚು ಕೆಚ್ಚನ್ನು ತೋರುವುದು.

ಇದಲ್ಲದೆ ಅವುಗಳ ರೀತಿಯಲ್ಲಿ ಇನ್ನು ಒಂದು ಭೇದ-ವಿದೆ. ಹಿಂದುಸ್ತಾನಿ ಖ್ಯಾಲ ಪದ್ಧತಿಯಂತೆ ತಾಳವನ್ನು ಗೌಣ ಸ್ಥಿತಿಯಲ್ಲಿಟ್ಟು, ಅಪ್ರಧಾನವಾಗಿರಿಸಿ ರಾಗಾಲಾಪನೆಯು ಹೆಚ್ಚು ಆಕರ್ಷಕವಾಗುವಂತೆ ತೆಲುಗು ಕೀರ್ತನೆಗಳನ್ನು ಹಾಡುವ ವಿದ್ವಾಂಸರ ಪದ್ಧತಿಯು ಇರುವದಿಲ್ಲ. ಕೀರ್ತನೆಯು ಎಷ್ಟು ವಿಲಂಬಕಾಲದಲ್ಲಿ ಹಾಡಲ್ಪಟ್ಟರೂ ತಾಳದ ಆವರ್ತನಗಳು ಮನಸ್ಸನ್ನು ಸಮವಾಗಿ ಆಕರ್ಷಿಸುತ್ತವೆ. ಇದಲ್ಲದೆ ಹಿಂದುಸ್ತಾನಿ ಪದ್ಧತಿಯ ಆಲಾಪನದಲ್ಲಿ ಮೀಂಡ್ ಅಥವಾ ಮೆಂಡ್ ಅತಿ ಜೀವಜೀವಾಳವಾಗಿ ಬರುವುದು. ಆದರೆ ಕರ್ನಾಟಕ ಸಂಗೀತದ ಆಲಾಪನೆಯಲ್ಲಿ 'ಜಾರು' (ಮೇಂಡ್) ಎಂಬ ಅಲಂಕಾರವು ಉಪಯೋಗಿಸಲ್ಪಟ್ಟರೂ ಅಲ್ಪ ಪ್ರಮಾಣದಲ್ಲಿ. (ಹೀಗೆ ಅವರವರು ಉಪಯೋಗಿಸುವ ಗಮಕಗಳು ಸೌಂದರ್ಯವನ್ನು ಹೆಚ್ಚಿಸುವ ರೀತಿಗಳು) ಎಷ್ಟೋ ಮಟ್ಟಿಗೆ ಭಿನ್ನ ಭಿನ್ನವಾಗಿವೆ. ಇವೇ ಆ ರೀತಿಯನ್ನು ಹಿಡಿದುಕೊಡುಕೊಡುತ್ತವೆ. ದಕ್ಷಿಣದೇಶದಲ್ಲಿ ಉಪಯೋಗಿಸುವ ಪಿಟೀಲು, ವೀಣೆ ಇವುಗಳ ವಾದನದ ಪ್ರಭಾವವು ಅವರ ಸಂಗೀತದ ಮೇಲೆ ಬಹಳವಾಗಿದೆ. ಹಾಗೆಯೇ ಹಿಂದುಸ್ತಾನಿ ಸಂಗೀತಗಾರರ ಮೇಲೆ ಸಾರಂಗಿಯ ಪ್ರಭಾವವು ಹೆಚ್ಚಾಗಿದೆ ಎಂದು ಹೇಳಬಹುದು. ಮೂಲ ಕರ್ನಾಟಕ ಸಂಗೀತದ ಕೆಲವು ಗುಣಗಳು ಹಿಂದುಸ್ತಾನಿ ಪದ್ಧತಿಯಲ್ಲಿವೆ; ಬೇರೆ ಕೆಲವು ಗುಣಗಳು—ಮುಖ್ಯವಾಗಿ ಭಾಷೆಯ ಉಚ್ಚಾರಣೆಯ ರೀತಿಗೆ ಒಗ್ಗುವದು—ಕರ್ನಾಟಕ ಪದ್ಧತಿಯಲ್ಲಿವೆ.

ನಮ್ಮ ಮುಂಬಯಿ ಕರ್ನಾಟಕದಲ್ಲಿ ಎರಡನ್ನೂ ತಿಳಿದವರು ಅನೇಕರು ದೊರೆಯುತ್ತಾರೆ. ಉದಾ: ಕೈಲಾಸವಾಸಿಗಳಾದ ಶ್ರೀ ಪಂಚಾಕ್ಷರಯ್ಯನವರು. ಆದರೆ ಅವರ ಶಿಷ್ಯರು ಮಾತ್ರ ಕರ್ನಾಟಕ ಸಂಗೀತದಲ್ಲಿಯೂ ಪ್ರಾವೀಣ್ಯವನ್ನು ಪಡೆಯಬೇಕೆಂಬ ತಮ್ಮ ಗುರುಗಳ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡಂತೆ ಕಾಣುವದಿಲ್ಲ. ಈಗ ಹಾಗೆ ಮಾಡಬೇಕಾಗಿದೆ. ಎಂದರೆ ಮುಂದೆ ಎರಡೂ ರೀತಿಗಳ ಸುಂದರ ಸಮನ್ವಯವನ್ನು ಮಾಡುವ ಹಾಗು ಸಂಗೀತ ಕಲೆಯ ಮುಂದಿನ ಪ್ರಗತಿಯನ್ನು ಸಾಧಿಸುವ ಭಾಗ್ಯವು ಕರ್ನಾಟಕಕ್ಕೆ ದೊರೆಯುವದು.

ಸದಾಚಾರ-ಶೀಲ

ಸದಾಚಾರಕ್ಕೆ ಶಿಕ್ಷಣದಲ್ಲಿಯೂ ಅತ್ಯಂತ ಮಹತ್ವದ ಸ್ಥಾನವಿದೆ. ಮಕ್ಕಳು ಸದಾಚಾರ ಸಂಪನ್ನರಾಗಬೇಕೆಂದು ಶಿಕ್ಷಣವು ಪ್ರಯತ್ನಿಸುವುದು. ಸದಾಚಾರದಿಂದ ನಡೆವುದಕ್ಕೆ ಶೀಲವೆನ್ನುವರು. ಈ ಸದಾಚಾರ ಶೀಲವನ್ನು ಕುರಿತು ವಚನಕಾರರು ಹೀಗೆ ಅನ್ನುತ್ತಾರೆ :

"ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೊ. ಸತ್ಯವ ನುಡಿವುದೇ ದೇವಲೋಕ. ಅಸತ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ, ಅನಾಚಾರವೇ ನರಕ. ಇದಕ್ಕೆ ನೀವೇ ಪ್ರಮಾಣ ಕೂಡಲಸಂಗಮದೇವಾ.

. . . ಸತ್ಯದಲ್ಲಿ ನಡೆವುದು ಶೀಲ, ಸತ್ಯದಲ್ಲಿ ನುಡಿವುದು ಶೀಲ. ಸಜ್ಜನ ಸದಾಚಾರದಲ್ಲಿ ವರ್ತಿಸಿ ಸತ್ಯವನರಿವುದೇ ಶೀಲ ಕಾಣಿರೊ. ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೆ."

ಕಾಂಚನಗಂಗಾ

[ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ ಅವರಿಂದ ಬಂದುದು.]

★

ವಿಶ್ವದಲ್ಲಿ ಅತ್ಯುನ್ನತವಾಗಿರುವ ಪರ್ವತ-ಶಿಖರಗಳು ಮೂರೇ ಮೂರು. ಇವುಗಳಲ್ಲಿ ಮೊದಲನೆಯದು **ಗೌರೀಶಂಕರ** ಅಥವಾ ಮೌಂಟಎವ್ಹರಸ್ಟವು. ೨೯೧೪೧' ಎತ್ತರವಾಗಿರುತ್ತದೆ. ಎರಡನೆಯದು **ಗುಡ್‌ವಿನ್‌-ಆಸ್ಟನ್**‌ವು..........' ಎತ್ತರವಾಗಿರುತ್ತದೆ. ಮೂರನೆಯದು **ಕಾಂಚನಗಂಗಾ** ೨೮೧೪೬' ಎತ್ತರವಾಗಿರುತ್ತದೆ. ಇವುಗಳಲ್ಲಿ ಕಾಂಚನಗಂಗಾದ ಸೌಂದರ್ಯ ಹಾಗು ವೈಭವಗಳನ್ನು ಕೇಳಿ ಬೆರಗಾದವರಿಗಿಂತ . ಆ ಶಿಖರವನ್ನು ನೋಡಿ ಹೆಚ್ಚು ಮೂಕವಿಸ್ಮಿತರಾದವರು— **ಪರ್ವತಾರೋಹಣ** ಮಾಡಿದ ಸಾಹಸಿಗರು. ಎತ್ತರವಾದ ಶಿಖರಗಳನ್ನು ಏರುವದರಲ್ಲಿ ಕುಶಲರಾಗಿರುವ ಜರ್ಮನ್, ಸ್ವಿಸ್, ಹಾಗು ಬವ್ಹೇರಿಯನ್ ಪ್ರವಾಸಿಗಳ ಅನೇಕ ಪ್ರಯತ್ನಗಳು ಕಾಂಚಗಂಗಾವನ್ನು ಪೂರ್ಣವಾಗಿ ಏರುವದರಲ್ಲಿ ಸಫಲವಾಗಿಲ್ಲ.* ೨೮೧೪೬' ಎತ್ತರವಾಗಿರುವ ಈ ಶಿಖರವನ್ನು ಏರಲು ಇಂದಿನ ವರೆಗೆ ಪ್ರಯತ್ನಪಟ್ಟವರಲ್ಲಿ ಮೊದಲನೆಯವರಾಗಿ ಶ್ರೇಯಸ್ಸು ಪಡೆದವರೆಂದರೆ ೧೯೩೧ರಲ್ಲಿಯ ಬವೇರಿಯನ್ ಪ್ರವಾಸಿಗರು. ಈ ಸುಮಾರು ೨೬೦೦೦' ಮೇಲೆ ಏರಿದ್ದಾರೆ. [ಇ. ಸ. ೧೯೨೪ರಲ್ಲಿ ಲೆ. ಕರ್ನಲ್ ನಾರ್ಟನ್ ಹಾಗು ಡಾ. ಟಿ. ಡಿ. ಸಾಮುವ್ಹೇರ್ ಎಂಬವರು ಗೌರೀಶಂಕರವನ್ನು ೨೮೨೦೦' ಏರಿದ್ದಾರೆ. ಅದರಿಂದ **ಕಾಂಚನಗಂಗಾವನ್ನು ಏರುವದು ಹೆಚ್ಚು ದುರ್ಗಮವಾದುದೂ, ಗಂಡಾಂತರವುಳ್ಳದ್ದೂ ಇರುತ್ತದೆ.**' ಎಂಬ ಮಾತು ಸತ್ಯವಾದುದು.] ಆದರೂ ಹವಾಮಾನವು ಅನುಕೂಲವಾಗಿರುವಾಗ ಒಂದಿಲ್ಲೊಂದು ದಿನ ಈ ಶಿಖರವನ್ನು ಪೂರ್ಣವಾಗಿ ಏರಲು ಸಾಧ್ಯವಾಗಬಹುದೇನೋ ಎಂದು ತೋರುತ್ತದೆ.

ಕಾಂಚನಗಂಗಾವು ಪೂರ್ವಕ್ಕೆ ಸಿಕಿಮ ರಾಜ್ಯದ ಲೆಪಾಚ್ಛಾ ಎಂಬ ಸಂಸ್ಥಾನ ಹಾಗು ಪಶ್ಚಿಮಕ್ಕೆ ನೇಪಾಳ ರಾಜ್ಯ ಇವುಗಳ ನಡುವೆ ಪಸರಿಸಿದ ಶಿಖರಗಳ ಒ ಗುಂಪು. ಕಾಂಚನಗಂಗಾಕ್ಕೆ ಹೋಗಬೇಕಾದರೆ ದ ಲಿಂಗಕ್ಕೆ ಹೋಗಬೇಕು. ಅಲ್ಲಿ ವಿಶ್ವಾಸಿಕರಾದ ತೋರಿಸುವವರು ಇರುತ್ತಾರೆ. ಅವರನ್ನು ಕರಕೊ ಹೋಗಬೇಕು. ವಿಪರೀತ ಚಳಿಯಲ್ಲಿ ಹಿಮದ ವನ್ನು ಏರುವಾಗ ಅವರು ಹೇಳುವ ಎಲ್ಲ ಸಿದ್ಧತೆಗಳ ಮಾಡಿಕೊಳ್ಳಬೇಕು. ದಾರ್ಜಿಲಿಂಗವನ್ನು ಬಿಡುವಾ ಉಣ್ಣೆಯ ಬಟ್ಟೆಗಳನ್ನು ತಲೆಯಿಂದ ಕಾಲುಗಳ ವ ಧರಿಸಿರಬೇಕು. ಜಾರದಂಥ ಬೂಟುಗಳನ್ನು ಧ ಬೇಕು. ಬಡಿಗೆಯು ಬೇಕೇಬೇಕು.

ದಾರ್ಜಿಲಿಂಗ (೭೪೩೨') ೧೬ ಮೈ. ದೂರದಲ್ಲಿರ **ಮಣಿಭಾನಗಂಜ**ಕ್ಕೆ ಬಸ್ಸಿನಿಂದ ಹೋಗಬೇಕ ಅಲ್ಲಿಂದ ೧೫೦ ಮೈ. ಕಾಲುನಡಿಗೆಯಿಂದ ಹಿಮದ ನಡೆಯಬೇಕು. ಇದರಲ್ಲಿ ಸಿಂಘಾಲಿಯಾ ಗುಡ್ಡದ ರುವ **ತೊಂಗಲು**ಕ್ಕೆ (೧೦೫೦೦') ೭ ಮೈಲು ಹಿಮದ ನಡೆದು ಹೋಗಲಿಕ್ಕೆ ನಾಕುಬೇಕಾಗುತ್ತದೆ. ಅ ಬೀಡು ಬಿಡಬೇಕು. ತೊಂಗಲಿನಿಂದ ೧೪ ಮೈ ಮೊಳಕಾಲುದ್ದ ಬಿದ್ದ ಹಿಮದಲ್ಲಿ ನಡೆದರೆ. **ಸಂದಾಕಪ** (೧೧೯೦೦') ಬರುವದು. ಕಾಲುಗಳೆಲ್ಲ ಗುಗ್ಗರಿಗಟ್ ವವು. ದೀವಟಿಗೆಯ ಸಹಾದಿಂದ ಏರಿ ನೋಡಿದ ಹಿಮಾಲಯದ ಹಲಕೆಲವು ಉತ್ತುಂಗವಾದ ಗೋಪುರಾಕಾರದ ಶಿಖರಗಳು ಕಂಗೊಳಿಸುತ್ತವೆ. ಕ್ಷಿತಿಜಪ ಪಶ್ಚಿಮದಿಂದ ಪೂರ್ವಕ್ಕೆ ಅವಿಚ್ಛಿನ್ನವಾಗಿ ಸಾಲು ಸಾಲಾಗಿ ಹಬ್ಬಿ ಬೆಳ್ಳಗೆ ಹೊಳೆಯುತ್ತಿರುವ ಶಿಖರಗಳಿಂದ ಕೆಚ್ಚಿದಂತೆ ಕಾಣುತ್ತದೆ. ಈ ಶಿಖರಗಳ ನಡುವೆ ಉನ್ನತವಾಗಿರುವ ಕಾಂಚನಗಂಗಾ ಶಿಖರಗಳ ಒಂದು ಗುಂಪು ಕಾಣಿಸುತ್ತದೆ. ಪಶ್ಚಿಮಕ್ಕೆ ಅನತಿ ದೂರದಲ್ಲಿ ಗೌರೀಶಂಕರವು (೨೯೧೪೧') ವಿರಾಜಿಸುತ್ತದೆ. ಪೂರ್ವಕ್ಕೆ ಮಂಜು ಕವಿದ ಕ್ಷಿತಿಜದಿಂದ ಕೋಮಲ ಹರಿ (೨೩೯-

೯೭')ಯ ಉನ್ನತವಾದ ಗೋಪುರಾಕಾರದ ಶಿಖರವು ಇಣಿಕಿ ನೋಡುತ್ತದೆ. ಸೂರ್ಯನು ಮೇಲೇರಿದಂತೆಲ್ಲ ಈ ನೋಟವು ಹೆಚ್ಚು ಹೆಚ್ಚು ಮನೋಹರವಾಗುತ್ತಿರು-ತ್ತದೆ. ಆದರೆ ಮಗ್ಗಲಿನ ಕೊಳ್ಳದೊಳಗಿಂದ ಏರಿ ಬರುವ ಮೋಡಗಳು ಮೇಲಿಂದಮೇಲೆ ಈ ನೋಟದ ಮೇಲೆ ತೆರೆಯನ್ನು ಎಳೆಯುತ್ತವೆ.

ಸಂದಾಕಫೂದಿಂದ ತೆಮೂರಕೊಳ್ಳದ ಮಾರ್ಗವಾಗಿ ಸಿಬಿಡವಾದ ಕಾಡಿನೊಳಗಿಂದ ಹೋಗಿರುವ ಇಕ್ಕಟ್ಟಾದ ಹಾಗು ಒಮ್ಮೆಲೆ ಇಳುಕಲಾದ ದಾರಿಗುಂಟ ಹೋದರೆ ಅಲ್ಲಲ್ಲಿ ಹಳೆಯ ನೇತಾಡುವ ಸೇತುವೆಗಳಿರುತ್ತವೆ. ಇವುಗಳನ್ನು ದಾಟಿ ಹಲವು ದಿಬ್ಬಗಳನ್ನು ಏರಿದ ಮೇಲೆ ಕೊಳ್ಳದಲ್ಲಿ **ಅಂಗಭಂಗ** (೩೮೦೦') ಎಂಬ ಹಳ್ಳಿಯು ಬರುತ್ತದೆ. ಇಲ್ಲಿ ಪಾಯಿನ್ ವೃಕ್ಷಗಳಿವೆ. ಭತ್ತದ ಗದ್ದೆಗಳಿವೆ. ಹಳ್ಳಿ ಬಹಳ ಚಂದ ಕಾಣುತ್ತದೆ. ಇಲ್ಲಿ ಬೀಡು ಬಿಡಬೇಕು. ಇಲ್ಲಿಂದ ನೋಡಿದರೆ ಒಂದು ಕಡೆಗೆ ಕುಂಭಕರ್ಣ (೨೫೨೯೫'), ಇನ್ನೊಂದು ಕಡೆಗೆ ಕಬ್ರೂ (೨೪೦೦೨') ಶಿಖರಗಳ ನಡುವೆ ಕಾಂಚನಗಂಗಾ ಶಿಖರದ ವಿಶಾಲವಾದ ನೋಟವು ಮನೋಹರವಾಗಿ ಕಾಣುತ್ತದೆ.

ಅಂಗಭಂಗದಿಂದ ೫ ದಿವಸ ಪ್ರವಾಸ ಮಾಡಲು ನೇಪಾಳದ ಮುಖ್ಯಸ್ಥಳವಾದ **ತಪೇಲಜಂಗ**(೬೦೦೦')ವು ಬರುತ್ತದೆ. ಇಲ್ಲಿ ಲಿಂಬೂ ಎಂಬ ಮೂಲನಿವಾಸಿಗಳಿ-ರುತ್ತಾರೆ. ಸಾಮಾನ್ಯವಾಗಿ ಈ ಜನರು ಒಕ್ಕಲಿಗರು. ಇವರು ನಿರಕ್ಷರಿಗಳಾಗಿರುವರಲ್ಲದೆ ಇವರ ದಾರಿದ್ರ್ಯವು ಕರುಳುಕರಗಿಸುವಂಥಹದಾಗಿರುತ್ತದೆ. ಇವರು ಒಂದು ವಿಶಿಷ್ಟ ಭಾಷೆಯನ್ನು ಆಡುತ್ತಾರೆ. ಇವರ ಸಮಾಜದ ನಡತೆಗಳೂ ಭಿನ್ನವಾಗಿವೆ.

ತೆಮೂರಕೊಳ್ಳದ ಮಾರ್ಗವಾಗಿ **ಮಿಥುಲಿಂಗಕ್ಕೆ** ಹೋಗಬೇಕು. ಆಳವಾಗಿರುವ ತೆಮೂರಕೊಳ್ಳದ ನದಿಯಿಂದ ತಿಬೇಟವ್ಯಾಪಾರದ ದಾರಿಯಲ್ಲಿ ಮೂರು ದಿನಗಳ ವರೆಗೆ ಬಹಳ ಪ್ರಯಾಸದಿಂದ ಮುಂದುವರಿದ ಮೇಲೆ ಆಲ್ಫ್ಸಪ್ರದೇಶಗಳಂತೆ ಹವೆ ಹಾಗು ದೃಶ್ಯಗಳ-ನ್ನೊಳಗೊಂಡಿರುವ ತೆಮೂರಕೊಳ್ಳದ ಮೇಲ್ಭಾಗವು ಬರುವದು. ಇಲ್ಲಿ ಭಾಟಿಯಾ ಜನರು ವಾಸಿಸುತ್ತಾರೆ. ದಾರ್ಜಿಲಿಂಗದಿಂದ ೧೧ ದಿನಗಳ ಪ್ರವಾಸದ ನಂತರ ವ್ಯಾಪಾರದ ಪಡಿಮೂಲೆಯಾಗಿರುವ **ವಾಲಂಗಚಂಗ ಗೋಲಾ** (೧೦,೫೦೦') ಎಂಬ ಸ್ಥಳವು ಇರುವದು. ತಿಬೇಟದ ದಾರಿಯಲ್ಲಿಯ ಕಡೆಯ ಹಳ್ಳಿಯೆಂದರೆ ಇದೇ. ಇದು ತಿಬೇಟ ಹಾಗು ನೇಪಾಳದ ವ್ಯಾಪಾರದ ಪಡಿಮೂಲೆಯು. ಮೇ ತಿಂಗಳಿನಿಂದ ಅಕ್ಟೋಬರ ತಿಂಗಳಿನ ವರೆಗೆ ಈ ಹಳ್ಳಿಯಲ್ಲಿ ಚಟುವಟಿಕೆ ಬಹಳ ಜೋರಿನಿಂದ ನಡೆದಿರುತ್ತವೆ. ಚಳಿಗಾಲದಲ್ಲಿ ಇಲ್ಲಿಯ ಭಾಟಿಯಾ ಜನರು ಬೆಚ್ಚನ್ನ ನಾಡಿಗೆಂದು ದಕ್ಷಿಣಕ್ಕೆ ಹೋಗುತ್ತಾರೆ. ಈ ಹಳ್ಳಿಯೆಲ್ಲ ಹಿಮಾಚ್ಛಾದಿತವಾಗಿರುತ್ತದೆ. ಈ ಹಿಮಾಚ್ಛಾದಿತವಾದ ಕೊಳ್ಳದ ದಾರಿಯನ್ನು ದಾಟುವಾಗ ಭಯಂಕರ ಸಂಕಟಕ್ಕೀಡಾಗಿ ಮರಣಹೊಂದಿದ ಪ್ರವಾಸಿಕರ ದಾರುಣವಾದ ಕಥೆಯನ್ನು ಕೇಳಿ ಎದೆಯು ಝಲ್ಲೆನ್ನುತ್ತದೆ. ನಿಜವಾದ ಕಠಿಣ ಪ್ರವಾಸವು ಗುನಸಾಕೊಳ್ಳದಿಂದ ಆರಂಭವಾಗುತ್ತದೆ. ಹೆಪ್ಪುಗಟ್ಟಿದ ಹಿಮನದಿಯನ್ನು ಬಹು ಪ್ರಯಾಸದಿಂದ ದಾಟಬೇಕಾಗುತ್ತದೆ. ರಾತ್ರಿಯಲ್ಲಿ ಅಲ್ಲಲ್ಲಿ ಬೀಡು ಬಿಡಬೇಕಾಗುವದು. ಒಮ್ಮೊಮ್ಮೆ ರಾತ್ರಿಯೆಲ್ಲ ಗಾಳಿ ಬೀಸಿ ಹಿಮಮಳೆ ಕರೆಯುವದು. ಇಡೀ ರಾತ್ರಿ ಪ್ರಚಂಡವಾದ ಗಾಳಿಗಳು ಕೊಳ್ಳದ ತುಂಬೆಲ್ಲ ಬೀಸಿ ಡೇರೆಗಳು ಹೊಯ್ದಾಡುವವು. ಕಣ್ಣಿಗೆ ಕಣ್ಣು ಹತ್ತುವದಿಲ್ಲ. ಕೆಲವು ಮಾರ್ಗದರ್ಶಕರು ಇದೆಲ್ಲ ದಾರಿಯಲ್ಲಿಯ ಭೂತಗಳ ಚೇಷ್ಟೆ ಎಂದು ತಿಳಿಯುತ್ತಾರೆ.

ಸೂರ್ಯನು ಮೇಲೇರಿ ಹೆಚ್ಚು ಪ್ರಕಾಶಿಸಲು ಅವನ ಶಕೆಯಿಂದ ಬರ್ಫವು ಕರಗಿ ಪ್ರವಾಸಿಕರು ಬರ್ಫಿನಲ್ಲಿ ಸಿಕ್ಕು ಬೀಳುವರು. ಒಂದು ಕಾಲು ಕಿತ್ತಿ ಇನ್ನೊಂದು ಕಾಲು ಊರಲು ಅದೂ ಸಿಕ್ಕು ಬೀಳುವದು. ಒಂದು ಸಾದರೂ ಕೆಲವು ಯಾರ್ಡುಗಳಷ್ಟು ಸಹಿತ ಮಾರ್ಗವು ಸಾಗುವದಿಲ್ಲ. ಆಕಾಶವು ಶುಭ್ರವಾಗಿದ್ದರೂ ವಿಶಾಲವಾದ ಮೋಡಗಳು ಆಕಾಶವನ್ನು ಕ್ಷಣದಲ್ಲಿ ತುಂಬುತ್ತವೆ. ಅದು ನಮ್ಮೆಡೆಗೆ ಸಾಗಿದಂತೆಲ್ಲ ಗಾಳಿ ಬೀಸುವದು ಹೆಚ್ಚಾಗಿ, ಹವೆಯಲ್ಲಿ ಎಲ್ಲ ಕಡೆಗೆ ಹಿಮದ ಗಡ್ಡೆಗಳು ಪಸರಿಸಿ ಪ್ರವಾಸಿಕರ ಮುಖದ ಮೇಲೆ ಬಲವಾಗಿ ಬಡಿಯುತ್ತವೆ. ಆಗ ಪ್ರವಾಸಿಕರು **ಬಲಾ-ಕ್ಲಾವಾ ಟೋಪಿ**ಗಳನ್ನು ಮುಂದಕ್ಕೆ ಮುಖದ ಮೇಲೆ

ಎಳೆದು ಗಾಳಿಗೆ ಬೆನ್ನುಮಾಡಿ ಕುಳಿತುಕೊಳ್ಳಬೇಕಾಗುತ್ತದೆ. ಆ ಮೋಡಗಳು ತಲೆಯ ಮೇಲೆ ಇರುವ ವರೆಗೂ ಹಿಮ ಬಿದ್ದು ಬಿದ್ದು ಪ್ರವಾಸಿಕರು ಹಿಮದಲ್ಲಿ ಮುಚ್ಚಿ ಹೋಗುವದುಂಟು. ಈ ಪ್ರಚಂಡ ಹಿಮದ ಗಾಳಿಗಳು ಬೀಸುವದು ನಿಂತರೂ, ನರನರಗಳನ್ನೆಲ್ಲ ಒತ್ತಿ ಅಲುಗಾಡಿಸಿದಂತೆ ಆಗುತ್ತದೆ. ಅಖಂಡವಾಗಿ ಮೂರು ತಾಸುಗಳವರೆಗೆ ಪ್ರಯತ್ನಪಟ್ಟಮೇಲೆ ಕೊನೆಗೊಪ್ಪಿ ಕಲ್ಲಿನ ಗುಂಡಿಗಳಿಂದಲೂ, ಬಾವುಟಗಳಿಂದಲೂ ಸೂಚಿತವಾಗಿರುವ ಹಿಮದಲ್ಲಿ ಮುಚ್ಚಿಹೋದ ಆ ದಾರಿಯ ತುದಿಯು ಕಾಣುತ್ತದೆ.

ಕಾಡುಗಳಿಂದಲೂ ಬೆಟ್ಟಗಳಿಂದಲೂ ಆವೃತವಾಗಿ, ಹಿಮದಿಂದ ಆಚ್ಛಾದಿತವಾದ ಗುನಸಾ ಹಳ್ಳಿಯ ನೋಟ ಬಹಳ ಸುಂದರವಾದ ಆಶ್ಚರ್ಯಕರ ನೋಟ. ಎತ್ತರವಾದ ಪರ್ವತಗಳು ಉತ್ತರದಿಂದ ಬೀಸುವ ಗಾಳಿಗಳಿಂದ ಇದನ್ನು ರಕ್ಷಿಸುವದರಿಂದ ಇದು ಬೆಳ್ಳಗಾಗಿದೆ. ಇಲ್ಲಿಯ ಸ್ತ್ರೀಯರು ಹೊಲದಲ್ಲಿ ಕೆಲಸ ಮಾಡುತ್ತಾರೆ. ಕಟ್ಟಿಗೆಗಾಗಿ ಬೆಟ್ಟಕ್ಕೆ ಹೋಗುತ್ತಾರೆ ಹಾಗು ಝರಿಗಳಿಂದ ನೀರು ತರುತ್ತಾರೆ. ಸಂಜೆಯ ಮುಂದೆ ಸುಂದರವಾದ ಅರಿವೆಗಳನ್ನು ಧರಿಸಿ, ಆಭರಣಗಳಿಂದ ಭೂಷಿತರಾಗಿ ಹಳ್ಳಿಯ ಸಂಗೀತದ ತಾಳಕ್ಕೆ ಹಳ್ಳಿಯ ಕುಣಿತವನ್ನು ಆಡುತ್ತಾರೆ. ಗುನಸಾದ ಭಾಟಿಯಾ ಜನರು ಹುರುಪಿನವರು. ಹುಲ್ಲುಗಾವಲಿನಲ್ಲಿ ಯಾಕ ಪಶುಗಳನ್ನು ಮೇಯಿಸುತ್ತ ಅವುಗಳ ಉಣ್ಣೆಯಿಂದ ನೂಲುತ್ತಾರೆ. ಬೇಸಿಗೆಯಲ್ಲಿ ಅವರು ದನಗಳಿಗಾಗಿ ಹುಲ್ಲಿನ ಗದ್ದೆಗಳನ್ನು ಹುಡುಕುತ್ತ ಒಮ್ಮೊಮ್ಮೆ "೧೭೦೦೦' ಫೂಟು ಎತ್ತರದ ವರೆಗೂ ಹೋಗುವರು.

ನೂಪ ಹಾಗು ಕಾಂಚನಗಂಗಾ ನದಿಗಳ ಸಂಗಮದಲ್ಲಿ **ಖಾಮಾಚಿನ** ಎಂಬ ಸ್ಥಳವಿದೆ. ಇದು ಗುನಸಾದಿಂದ ೭ ಮೈಲುಗಳ ಮೇಲಿದೆ. ಇಲ್ಲಿಗೆ ವೃಕ್ಷಗಳ ಸಾಲು ಮುಗಿಯುತ್ತದೆ. ಇಲ್ಲಿಂದ ೫ ಮೈಲು ದೂರದಲ್ಲಿ ಕುಂಭಕರ್ಣ ಶಿಖರವು ೧೦,೦೦೦ ಫೂಟುಗಳ ವರೆಗೆ ಹಬ್ಬಿದ ಜಾನೋ ಹಿಮನದಿಯಿಂದ ಮೇಲೆದ್ದಿರುವದು ಸ್ಪಷ್ಟವಾಗಿ ಕಾಣುತ್ತದೆ. ಖಾಮಾಚಿನದಿಂದ ೪ ಮೈಲಿನ ಮೇಲೆ ಕಾಂಚನಗಂಗಾ ಎಂಬ ಹಿಮನದಿಯು ಇರುತ್ತದೆ. ಅದರ ಉತ್ತರಬದಿಯಿಂದ ಹಾದು ಹೋಗಿರುವ ದಾರಿಯನ್ನು ಹಿಡಿದರೆ ೬ ಮೈಲಾದ ಮೇಲೆ **ಥ್ಯೋನಾಕ** ಎಂಬ ಸ್ಥಳಕ್ಕೆ ಬರುತ್ತದೆ. ಥ್ಯೋನಾಕದ ಬಳಿಯಲ್ಲಿ ಇರುವ [illegible]ಹಾವು (೧೬,೫೦೦') ಎತ್ತರವಿದೆ.

ಪಾಂಗ್‌ಲೇನಾದ ಎದುರಿನಲ್ಲಿ, ಕಾಂಚನಗಂಗಾ ಹಿಮನದಿಯ ಆಚೆಗೆ ಒಂದು [illegible] ಬೆಟ್ಟವಿದೆ. ಅದು ಮೇಲೆ ಹೋದಂತೆ ಮೊನೆ ಮೊನೆಯಾಗಿ ಹೋಗಿರುವದರಿಂದ ಅದಕ್ಕೆ ಯಥಾರ್ಥವಾಗಿ ವೆಜ್‌ಪೀಕ್ ಎಂದು ಕರೆಯುತ್ತಾರೆ. ನೀಲೀ ಮೇಘಮಂಡಲಕ್ಕೆ ಎದುರಾಗಿ ೨೨,೧೫೦ ಫೂಟು ಉನ್ನತವಾಗಿ ಎದ್ದಿರುವ ಈ ಶಿಖರವು ಬಹಳ ಬೆರಗುಗೊಳಿಸುವಂಥಹದಾಗಿದೆ. ಕಾಂಚನಗಂಗಾ ಹಿಮನದಿಯು ಒಂದು ಮಣಿತವೇ ವೇಜ್‌ಪೀಕದಿಂದ ಅವಳಿಜವಳಿ ಬೆಟ್ಟಗಳನ್ನು (೨೪,೧೧೬')ಬೇರ್ಪಡಿಸುತ್ತದೆ. ಈ ಎರಡೂ ಅವಳಿಜವಳಿ ಬೆಟ್ಟಗಳಿಂದ ಉಂಟಾದ ವಿಸ್ತಾರವಾದ ಮಹಾದ್ವಾರದಲ್ಲಿ ಉನ್ನತವಾದ ಕಾಂಚನಗಂಗಾ ಶಿಖರವು ಮುಖವೆತ್ತಿದೆ.

ಕಾಂಚನಗಂಗಾ ಹಿಮನದಿಯು ಹೊರಳುವಲ್ಲಿ ನಿಂತು ನೋಡಿದರೆ ಮತ್ತೆ ೩ ಹಿಮನದಿಗಳು ಕಾಂಚನಗಂಗಾಕ್ಕೆ ಬಂದು ಕೂಡುವದು ಕಾಣುತ್ತದೆ. ಜಾಂಗಸಾಂಗ ಎಂಬುದು ಉತ್ತರದಿಂದಲೂ, ಪಿರಾಮಿಡ್ ಹಾಗೂ ನೇಪಾಳಗ್ಯಾಪ್ ಎಂಬವು ಪೂರ್ವದಿಂದಲೂ ಬರುತ್ತವೆ. ಜಾಂಗಸಾಂಗ ಹಿಮನದಿಯು ಹತ್ತರವೇ ೧೯,೫೦೦ ಫೂಟಿನ ವರೆಗೆ ಏರಿ ನೋಡಿದರೆ ಕಾಂಚನಗಂಗಾನದಿಯ ವಿಸ್ತೀರ್ಣವಾದ ನೋಟವೂ, ವೆಜ್‌ಪೀಕವೂ (೨೨,೧೫೦'), ರಾಮಥಾಂಗ ಶಿಖರವೂ (೨೩,೩೨೦') ಕಾಂಬಾಚಿನ್ ಶಿಖರವೂ (೨೫, ೭೮೦') ಕಾಂಚನಗಂಗಾ ಶಿಖರದ ಉತ್ತರಭಾರವೂ (೨೮,೧೪೬'), ಅವಳಿಜವಳಿ ಬೆಟ್ಟಗಳೂ (೨೪,೧೧೬'), ಉನ್ನತವಾದ ಕಾಂಚನಗಂಗಾ ಶಿಖರವೂ (೨೮,೧೪೬'), ನೇಪಾಳಗ್ಯಾಪ್ (೨೦,೧೧೩') ಹಾಗೂ ನೇಪಾಳ ಶಿಖರಗಳೂ ಸ್ಪಷ್ಟವಾಗಿ ಕಾಣುತ್ತವೆ. ಇವೆಲ್ಲ ಕೂಡಿ ಕಾಂಚನಗಂಗಾ ಎಂಬ ಒಂದೇ ಹೆಸರಿನಿಂದ ಕರೆಯಲ್ಪಡುತ್ತವೆ. ಮಾರ್ಚ ತಿಂಗಳಿನಲ್ಲಿ ದಾರ್ಜಿಲಿಂಗದಿಂದ ಹೊರಟರೆ ಕಾಂಚನಗಂಗಾ ನೋಡಿಕೊಂಡು ಬರಲಿಕ್ಕೆ ೨ ತಿಂಗಳು ಬೇಕಾಗುತ್ತದೆ.

ಗೌರೀಶಂಕರ ಶಿಖರವನ್ನೇರಿದ ಪ್ರ್ಯಾಂಕ್. ಎಸ್. ಸ್ಮಿಥ್ ಎಂಬವನು ತನ್ನ 'ಕಮೆಟ್ ಕಾಂಕರಡ (Kamet Conquered) ಎಂಬ ಹೊತ್ತಿಗೆಯಲ್ಲಿ ಹಿಮಾಲಯದ ಬೆಟ್ಟಗಳನ್ನು ಕುರಿತು ಈ ರೀತಿ ಅಭಿಪ್ರಾಯಪಟ್ಟಿದ್ದಾನೆ.

"ಹಿಮಾಲಯದ ಶಿಖರಗಳನ್ನು ಏರುವಾಗ ನಾವು ಬಹಳ ವಿನೀತರಾಗಿರಬೇಕು. ಅವುಗಳ ಸೌಂದರ್ಯ, ವೈಭವ ಹಾಗು ಶಕ್ತಿಗಳಿಗೆ ಆದರದಿಂದ ತಲೆಬಾಗಿದಲ್ಲಿ ನಮ್ಮ ಯೋಗ್ಯತೆಗೆ ತಕ್ಕಷ್ಟು ಫಲ ದೊರೆಯುತ್ತದೆ. ಹುಂಬತನದಿಂದ ಅವುಗಳನ್ನು ಅಸಡ್ಡೆಯಿಂದ ಉಪೇಕ್ಷಿಸಲ್ಲಿ, ಅವುಗಳನ್ನು ಏರುವಾಗ ನಮಗೆ ಮರಣ ತಪ್ಪಿದ್ದಲ್ಲ. ಉಳಿದ ಪರ್ವತಗಳು ಒಮ್ಮೆಯಾದರೂ ನಮ್ಮನ್ನು ಕ್ಷಮಿಸಬಹುದು. ಆದರೆ ಹಿಮಾಲಯದ ಬೆಟ್ಟಗಳು ನಮ್ಮನ್ನು ಕ್ಷಮಿಸುವವೆಂಬುದು ಕನಸಿನ ಮಾತು."

(ಇಲ್‌ಸ್ಟ್ರೇಟೆಡ್ ವೀಕ್ಲಿಯ ಆಧಾರದಿಂದ ಬರೆದದ್ದು).

ಪ್ರಾತ್ಯಕ್ಷಿಕ ಶಿಕ್ಷಣ

(ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ ಅವರಿಂದ ಬಂದುದು)

ಯುದ್ಧದ ಭಯವು ಯಾವಾಗಲೂ ಸುಳಿಯುತ್ತಿದ್ದರೂ, ಸರಕಾರವು ಮಹತ್ವದ ಕೆಲವೊಂದು ಪ್ರಶ್ನೆಗಳನ್ನು (ತೊಡಕುಗಳನ್ನು) ಬಿಡಿಸುವದರಲ್ಲಿ ತೊಡಗಿದ್ದರೂ, ಅಣುಬಾಂಬಿನ ಭಯ ಇದ್ದರೂ, ಮತ್ತಿತರ ಮನಸೆಳೆಯುವಂತಹ ಪ್ರಶ್ನೆಗಳು ಉದ್ಭವಿಸಿದರೂ ರಾಷ್ಟ್ರರಚನೆಯ (ರಾಷ್ಟ್ರನಿರ್ಮಾಣದ) ಕಾರ್ಯವು ಸಾವಧಾನದಿಂದ ಸಾಗತಕ್ಕದ್ದು. ರಾಷ್ಟ್ರವು ತನ್ನ ಗುರುತರವಾದ ಹೊಣೆಯನ್ನರಿತು ದುಡಿಯುವದರಲ್ಲಿ ಹೊಯ್ದಾಡುತ್ತಿದ್ದರೂ ಆಶಿಯಾದ ವಿಷಯಗಳಲ್ಲಿ ಅದಕ್ಕೆ ತಕ್ಕುದಾದ ಪ್ರಥಮ (ಮುಖ್ಯ) ಸ್ಥಾನವು ಸಿಗಬೇಕಾದುದು ಮಹತ್ವವಾದದ್ದು. ಒಳಪಕ್ಷಗಳ ಹೋರಾಟ, ಆರ್ಥಿಕ ಬಂಧನ, ನಿರಕ್ಷರಿಯಾದ ಹೆಚ್ಚು ಜನವಸತಿ ದೇಶದ ಸಾವಿರಾರು ಹಳ್ಳಿಗಳಲ್ಲಿ ಹಂಚಿಹೋಗುವಿಕೆ, ಇವೆಲ್ಲ ತೊಡಕುಗಳು ಇರುವಾಗ ರಾಷ್ಟ್ರೀಯ ಶಿಕ್ಷಣವನ್ನು ಅವಶ್ಯವಾಗಿ ಪ್ರಾರಂಭಿಸಲೇಬೇಕು. ಇದು ಆಹ್ವಾನಿಸುವದರ ಜೊತೆಗೆ ಸುವರ್ಣಸಂಧಿಯನ್ನು ಕಲ್ಪಿಸುತ್ತದೆ (ತರುತ್ತದೆ).

ಈ ವಿಷಯದಲ್ಲಿ ಪ್ರಾತ್ಯಕ್ಷಿಕ ಶಿಕ್ಷಣಕೊಡುವದನ್ನು ಅಲಕ್ಷಿಸತಕ್ಕದ್ದಲ್ಲ. ಯಾಕೆಂದರೆ ಹಳ್ಳಿಗಳನ್ನು ಮುಂದೆ ತರುವದರಲ್ಲಿ ಈ ಸಾಧನದಿಂದ ಹಿಂದುಸ್ತಾನವು ಪ್ರಯತ್ನಪೂರ್ವಕವಾಗಿ ಯಶಸ್ಸನ್ನು ಗಳಿಸಿರುತ್ತದೆ. ಇದರಿಂದ ಶಾಲೆಯು, ಸಮಾಜದ (ಸಂಘದ) ಮತ್ತು ಸಧ್ಯದ ಮಹತ್ವದ ತೊಡಕುಗಳನ್ನೊಳಗೊಂಡ ಆವಶ್ಯಕ ವಿಷಯಗಳ ಸಾಮೂಹಿಕ ಶಿಕ್ಷಣಕ್ಕೆ ಅನುಕೂಲವಾಗುವದು. ಈ ರೀತಿ ಸ್ವಚ್ಛತೆ, ಆರೋಗ್ಯ, ಮಕ್ಕಳ ಹಿತ, ಆರೋಗ್ಯದ ಸಾದಾ ನಿಯಮಗಳು, ಆಹಾರ, ಮಿತವ್ಯಯ, ಪಾನನಿರೋಧದ ವಿಷಯವಾಗಿ ಇರುವ ಸರಕಾರದ ಧೋರಣೆಗಳು, ಗಿಡಗಳನ್ನು ಹಚ್ಚುವದು, ಆಹಾರವನ್ನು ಬೆಳೆಸುವದು ಮೊದಲಾದ ಸೂಚನೆಗಳನ್ನು ಮತ್ತು ಗಿರಣಿಗಳಲ್ಲಿ, ಹೊಲಗಳಲ್ಲಿ ದುಡಿಯುವ ಕೂಲಿಕಾರರಿಗೆ ಯಾಂತ್ರಿಕ ಜ್ಞಾನವನ್ನು ಶೀಘ್ರವಾಗಿ ಕೊಡಬಹುದು. ಶಕ್ಯವಿದ್ದಷ್ಟು ಕಡಿಮೆ ವೇಳೆಯಲ್ಲಿ ೨೫ ಲಕ್ಷ ಪ್ರೌಢರಿಗೆ ಸಮಾಜ ಶಿಕ್ಷಣವನ್ನು ಕೊಡುವದು ಮಹತ್ತರವಾದ ಕೆಲಸವು. ಆದರೆ, ಸಂಬಂಧಪಟ್ಟ ಎಲ್ಲ ಜನರ ಸಹಕಾರದಿಂದ ಈ ಕೆಲಸವನ್ನು ಸಾಧಿಸಬಹುದು. ಈ ವಿಷಯದ ಮೇಲೆ ಶ್ರೀ. ಎಸ್. ಎ. ತಾಹೀರ, ಶಿಕ್ಷಣಾಧಿಕಾರಿ, ಇವರು ಬರೆದ ಒಂದು ಅತ್ಯುತ್ತಮವಾದ ಪುಸ್ತಕವನ್ನು ಮುಂಬಯಿ ಸರಕಾರವು ಪ್ರಸಿದ್ಧಿಸಿದೆ.

ನೋಟದಿಂದ ಶಿಕ್ಷಣ (Education through eyes) ಸಿನೇಮಾಗಳು (ಫಿಲ್ಮಗಳು) ಮನಸ್ಸಿನ ಮೇಲೆ ಅತಿ ತೀವ್ರ ಪರಿಣಾಮವನ್ನುಂಟು ಮಾಡುವ ಸಾಧನಗಳಾಗಿದ್ದರೂ, ವಿದ್ಯುಚ್ಛಕ್ತಿ ಇಲ್ಲದೆ ಇರುವಂತಹ ಸ್ಥಳಗಳಲ್ಲಿ ಮಾಯಾಲಾಂದರ, ಚಿಕ್ಕ ಪಟ, ಪಟ, ಚಿತ್ರ ಮತ್ತು ಆಕೃತಿಗಳ ಉಪಯುಕ್ತತೆಯನ್ನು ನಾವು ಬೇಕಾದಷ್ಟು ಕಾಣಬಹುದು. ಯಾವ ದೇಶದ ಚಿತ್ರಪಟದ ಉದ್ಯಮವು (film industry) ಇಡೀ ಜಗತ್ತಿನಲ್ಲಿ ಎರಡನೆಯ ಅತಿ ದೊಡ್ಡ ಉದ್ಯಮವಾಗಿರುವದೋ ಅಂತಹ ದೇಶದಲ್ಲಿ ಯಾವ ಆತಂಕಕ್ಕೂ ಆಸ್ಪದವಿರ–ತಕ್ಕದ್ದಲ್ಲ; ಗುರಿಯನ್ನು ಸಾಧಿಸುವದು ಕಠಿಣವಾಗ-ತಕ್ಕದ್ದಲ್ಲ; ಆದರೂ ಆ ಯಂತ್ರೋಪಕರಣಗಳು ಇಲ್ಲಿ ತಯಾರಿಸಲ್ಪಡದಿದ್ದುದರಿಂದ ಹಿಂದುಸ್ತಾನವು ಆವಶ್ಯಕ ವಸ್ತುಗಳನ್ನು (ಯಂತ್ರೋಪಕರಣಗಳನ್ನು) ಪೂರೈಸುವ-ದರಲ್ಲಿ ಮುಂದುವರಿದಿಲ್ಲವಾದ್ದರಿಂದಲೂ ಮತ್ತು ಈಗಿನ ನಿರ್ಬಂಧದ ಮೂಲಕ ಅವುಗಳನ್ನು ಪರದೇಶದಿಂದ ತರಿಸುವದು ಕಠಿಣವಾಗುವದರಿಂದಲೂ ಹಿಂದುಸ್ತಾನವು ಈ ವಿಷಯದಲ್ಲಿ ಹಿಂದುಳಿದಿದೆ ಎನ್ನಲು ಅಡ್ಡಿಯಿಲ್ಲ. ಇದೂ ಅಲ್ಲದೆ ಎಲ್ಲ ಜನರನ್ನು ಆಕರ್ಷಿಸುವಂತೆ ಚಿತ್ರಗಳನ್ನು ತೆಗೆಯುವ ಹುಮ್ಮಸಿನಲ್ಲಿ ಅನಾವಶ್ಯಕ-ವಾದ ವೆಚ್ಚ ಕಂಡುಬಂದಿರುವದರಿಂದಲೂ ಶೈಕ್ಷಣಿಕ ಕ್ಷೇತ್ರದಲ್ಲಿ ಇವುಗಳ ಪ್ರಸಾರವನ್ನು ಅತಿ ದೊಡ್ಡ ಪ್ರಮಾಣದಲ್ಲಿ ಮಾಡುವದು ಅಸಾಧ್ಯವಾಗಿದೆ (ಶಕ್ಯ-ವಾಗಿಲ್ಲ). ಈ ಉದ್ಯಮವು ರಾಷ್ಟ್ರಕ್ಕೆ ಸೇವೆಯನ್ನು ಸಲ್ಲಿಸಬೇಕಾದರೆ (ಸಲ್ಲಿಸುವಂತಿದ್ದರೆ ಮತ್ತು ಅದಕ್ಕೆ ಹಿತವಾಗುವಂತೆ ಪೋಷಕವಾಗಬೇಕಾದರೆ (ಪೋಷಕ-ವಾಗುವಂತಿದ್ದರೆ) ಕಡಿಮೆ ದರದಲ್ಲಿ (ಅತಿ ಕಡಿಮೆ ವೆಚ್ಚದಲ್ಲಿ) ಹೆಚ್ಚು ಚಿತ್ರಗಳನ್ನು ತೆಗೆಯುವ ಪ್ರಯತ್ನ ಮಾಡತಕ್ಕದ್ದು.

ಈ ಮೂಲ ತೊಂದರೆಯು ಹೋಗಲಾಗಿ ಪ್ರಾತ್ಯಕ್ಷಿಕ ಶಿಕ್ಷಣದ ಎಲ್ಲ ಖಾತೆಗಳ ಸಂಘಟನೆಯನ್ನೂ ಅವಶ್ಯವಿದ್ದ ಸಲಕರಣೆಗಳನ್ನು ಕೊಳ್ಳಲು ಶಾಲೆಕಾಲೇಜುಗಳಿಗೆ ಉತ್ತೇಜನವನ್ನೂ ಪೂರೈಸಲು ಅವಶ್ಯವಿದ್ದ ಹಣದ ಕೊರತೆಯನ್ನು ನೀಗಿಸುವದನ್ನೂ (Subsidising) ಶಿಕ್ಷಕರ ತರಬೇತಿಗೊಳಿಸುವದನ್ನೂ ಟ್ರೇನಿಂಗ ಕಾಲೇಜದ ಮುಖಾಂತರ ಮಾಡಿಸಲು ಬರುವದು. ಹೀಗಾಗುವದಾದರೆ ಖರ್ಚಿನ ಪ್ರಶ್ನೆಯೊಂದು ಉಳಿಯುವದು. ಅಪೇಕ್ಷಿಸಿದಷ್ಟು ದೊಡ್ಡ ಪ್ರಮಾಣದಲ್ಲಿ ಮೇಲೆ ಹೇಳಿದುದನ್ನು ಪೂರೈಸುವದು ರಾಷ್ಟ್ರದ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಅಶಕ್ಯವಾಗುವದು.

ಪ್ರತಿಯೊಂದು ಮಾಧ್ಯಮಿಕ ಶಾಲೆಗೆ, ಹೇಗಾದರೂ ತನ್ನದೇ ಆದ ಚಿತ್ರಪಟ ಸಂಘವಿರತಕ್ಕದ್ದು; ಮತ್ತು ಚಿತ್ರಪಟ ವಾಚನಾಲಯಗಳನ್ನು ಸ್ಥಾಪಿಸಿ ಬೆಳೆಸ-ತಕ್ಕದ್ದು. ಬೇರೆ ಬೇರೆ ಸಂಘಗಳನ್ನು ಸ್ಥಾಪಿಸಲು ಮತ್ತು ವೈಯಕ್ತಿಕ ಸಂಘವನ್ನು ಸ್ಥಾಪಿಸಲು ಅಶಕ್ಯವಿರುವ ಹಳ್ಳಿಗಳಲ್ಲಿ ತಿರುಗಾಡುವ ಗಾಡಿಗಳು ಆವಶ್ಯಕ-ವಾದುದನ್ನು ಪೂರೈಸತಕ್ಕದ್ದು.

ಅವಶ್ಯವಿಲ್ಲದುದನ್ನು ಬಿಟ್ಟು ಮುಖ್ಯ ತಿರುಳನ್ನು ಪ್ರತ್ಯಕ್ಷ ಪ್ರಮಾಣದಲ್ಲಿ ತೋರಿಸಿದರೆ ಕಣ್ಣು ಆತುರ-ದಿಂದ ನೋಡುತ್ತದೆ; ಮತ್ತು ಮೆದುಳು ತೀವ್ರ ಗ್ರಹಿಸುತ್ತದೆ. ಈಗಿನ ಶಿಕ್ಷಣದ ಲಾಭ ಪಡೆಯದ ಜನರಿಗೆ ಇದರ ನಿಜಾಂಶವು ನಿದರ್ಶನಕ್ಕೆ ಬರುತ್ತದೆ. ಈ ಸಂಗತಿಯ ಲಾಭವನ್ನು ಪಡೆಯುವದೇ ಹಿಂದುಸ್ತಾನದ ಸಾವಿರಾರು ಜನರನ್ನು ನಾಗರಿಕರನ್ನಾಗಿ (ಸುಶಿಕ್ಷಿತರನ್ನಾಗಿ) ಮಾಡುವ ಸುಗಮ ಉಪಾಯವು.

ಇತಿಹಾಸವನ್ನು ಕಲಿಸುವ ಬಗೆಗಳು

ಲೇಖಾಂಕ ೨

ಲೇಖಕರು : ಶ್ರೀಯುತ ಶಿಂತ್ರಿ ಬಸಪ್ಪನವರು ಬಿ. ಎ. ಬಿ. ಟಿ. ರಿಟಾಯರ್ಡ ಆಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣಭಾಗ, ಧಾರವಾಡ

ಮೊದಲ ಮಾತು :

ಒಂದನೆಯ ಲೇಖಾಂಕದಲ್ಲಿ ‘ ಇತಿಹಾಸ ’ ಅಂದರೇನು, ಅದು ಶಾಸ್ತ್ರವೋ ಕಲೆಯೋ, ಅದರ ಉಪಯುಕ್ತತೆ ಮತ್ತು ಹಿರಿಮೆ., ನಮ್ಮ ಅಭ್ಯಾಸದ ಪತ್ರಿಕೆಯಲ್ಲಿ ಅದಕ್ಕೆ ಸಲ್ಲತಕ್ಕ ಸ್ಥಾನಮಾನ, ಇವುಗಳ ಬಗೆಗೆ ಕೂಲಂಕಷವಾಗಿಯೂ ಶಕ್ಯವಿದ್ದ ಮಟ್ಟಿಗೆ ಸ್ವಲ್ಪದರಲ್ಲಿಯೂ ವಿವೇಚಿಸಿದುದು ಓದುಗರ ನೆನಪಿನಲ್ಲಿರಲು ಸಾಕು. ಅದೇ ಲೇಖಾಂಕದಲ್ಲಿ ಈ ವಿಷಯದ ಬಗೆಗೆ ಆ ಲೇಖವು ಪೂರ್ವಪೀಠಿಕೆಯಾಗಿ ಹೇಗೆ ಪರಿಣಮಿಸಿತು ಎಂಬುದನ್ನೂ ಆ ಲೇಖದ ಕೊನೆಯ ಮಾತಿನಲ್ಲಿ ನಿವೇದಿಸಲಾಗಿದೆ. ಪದ್ಧತಿಗಳನ್ನು ವಿವೇಚಿಸುವ ಮೊದಲು ಅವುಗಳಿಗೆ ಅಡಿಗಲ್ಲುಗಳಾಗಿರುವ ಕೆಲವು ಮನಃಶಾಸ್ತ್ರದ ತತ್ವಗಳನ್ನು ನಾವು ಗಮನಿಸುವದೊಳಿತು. ಯಾಕಂದರೆ, ಮನಃಶಾಸ್ತ್ರದ ತತ್ವಗಳೇ ಪದ್ಧತಿಗಳ ತಳಹದಿಗಳಾಗಿವೆ.

ಮನಃಶಾಸ್ತ್ರದ ತತ್ವಗಳು :

(ಅ) ‘ಗೊತ್ತಿದ್ದ ಸಂಗತಿಯಿಂದ ಗೊತ್ತಿಲ್ಲದ ಸಂಗತಿಯ ಕಡೆಗೆ ಸಾಗು’:—ಹೊಸ ಸಂತಿಗಳನ್ನು ಮಕ್ಕಳಿಗೆ ಮೊದಲೇ ಗೊತ್ತಿದ್ದ ಸಂಗತಿಗಳಿಗೆ ಜೋಡಿಸುವದು. ಹೊಸ ಜ್ಞಾನ ಮತ್ತು ಪೂರ್ವಜ್ಞಾನ ಇವೆರಡರ ಜೋಡಣೆಯೇ ಈ ತತ್ವದ ಬೀಜಮಂತ್ರವು. ಮೇಲಿನ ವರ್ಗಗಳಲ್ಲಿ ಇತಿಹಾಸವನ್ನು ಕಲಿಸುವಾಗ ಮಕ್ಕಳಿಗೆ ಗೊತ್ತಿದ್ದ ಸಂಗತಿಗಳಿಂದ ಪ್ರಾರಂಭಮಾಡಿ ಆ ಮೇಲೆ ಹೊಸ ಸಂಗತಿಗಳ ಬಗೆಗೆ ಹೇಳುತ್ತ ಹೋಗಬೇಕು. ಕೆಳಗಿನ ವರ್ಗಗಳಲ್ಲಿ ಮಕ್ಕಳಿಗೆ ಗೊತ್ತಿದ್ದ ಕಥೆಯಿಂದ ಪ್ರಾರಂಭಿಸಿ ಹೊಸ ಕಥೆಯನ್ನು ಹೇಳಬೇಕು. ಇದರಿಂದಾಗುವ ಲಾಭವೆಂದರೆ, ಹೊಸ ಜ್ಞಾನವನ್ನು ಗ್ರಹಣ ಮಾಡಿಕೊಳ್ಳಲು ಮಕ್ಕಳಿಗೆ ಕಷ್ಟವಾಗುವದಿಲ್ಲ. ಇನ್ನೊಂದು ಲಾಭವೆಂದರೆ, ಹೊಸದಾಗಿ ಗ್ರಹಣ ಮಾಡಿಕೊಂಡ ಜ್ಞಾನವು ಮೊದಲಿನದರಲ್ಲಿ ಚನ್ನಾಗಿ ಬೆರೆತು ಮಕ್ಕಳ ಜ್ಞಾಪಕದಲ್ಲಿ ಶಾಶ್ವತವಾಗಿ ಉಳಿಯುವದು.

(ಆ) ‘ಮೂರ್ತದಿಂದ ಅಮೂರ್ತಕ್ಕೆ ಸಾಗು’-ಕಣ್ಣು, ಕಿವಿ ಮೊದಲಾದ ಪಂಚೇಂದ್ರಿಯಗಳಿಗೆ ಗೋಚರವಾಗುವ ವಸ್ತು (ಮೂರ್ತ)ಗಳನ್ನು ಮಕ್ಕಳಿಗೆ ತೋರಿಸಿ, ಯಾವ ಇಂದ್ರಿಯಕ್ಕೂ ಗೋಚರವಾಗದಂತಹ ಮನಸಿಗೆ ಮಾತ್ರ ಹೊಳೆಯುವಂತಹ ಕಲ್ಪನೆ (ಅಮೂರ್ತ) ಗಳನ್ನು ಪರಿಣಾಮಕಾರಕವಾಗಿ ಮಾಡಿಕೊಡುವದೇ ಈ ತತ್ವದ ಸ್ವಾರಸ್ಯವು. ಉದಾಹರಣಾರ್ಥವಾಗಿ, ಕೆಳಗಿನ ಇಯತ್ತೆಗಳಿಗೆ ಐತಿಹಾಸಿಕ ಕಥೆಯೊಂದನ್ನು ಕಲಿಸುವದಿದೆಯೆಂದು ತಿಳಿಯೋಣ. ಕಥಾನಾಯಕ-ನಾಯಕಿಯರ ಚಿತ್ರಗಳು, ಅವರು ತೋರಿಸಿದ ಪರಾಕ್ರಮಗಳ ಚಿತ್ರಗಳು, ನಕಾಶೆಗಳು ಮಾದರಿ (Model)ಗಳು, ಇವೇ ಮೊದಲಾದ ಮೂರ್ತ ವಸ್ತುಗಳನ್ನು ಶಿಕ್ಷಕ-ಶಿಕ್ಷಕಿಯರು ತಮ್ಮ ಪಾಠದಲ್ಲಿ ಶಕ್ಯವಿದ್ದಷ್ಟು ಹೆಚ್ಚಾಗಿ ಉಪಯೋಗಿಸಬೇಕು. ಹೀಗೆ ಮಾಡಿದಲ್ಲಿ, ಅಮೂರ್ತದ ಬಗೆಗೆ ಅಂದರೆ ಕಲ್ಪನೆಗಳ ಬಗೆಗೆ ಶಿಕ್ಷಕ-ಶಿಕ್ಷಕಿಯರು ಮಾಡಿ ಕೊಡಬೇಕಾದ ಜ್ಞಾನವನ್ನು ಗ್ರಹಣಮಾಡಿಕೊಳ್ಳಲು ಮಕ್ಕಳಿಗೆ ಶ್ರಮವೆನಿಸುವದಿಲ್ಲ. ಇತಿಹಾಸದಲ್ಲಿ ಮಕ್ಕಳ ಕಣ್ಣಿಗೆ ಕಾಣದ ಸಂಗತಿ (ಅಮೂರ್ತ) ಗಳನ್ನೇ ಹೆಚ್ಚಾಗಿ ಹೇಳುವದಿದೆಯಾದುದರಿಂದ ಉಪ-

ಕರಣ (ಮೂರ್ತ)ಗಳು ಹೆಚ್ಚಿದಷ್ಟು ಪಾಠಕ್ಕೆ ಕಳೆ ಏರುತ್ತದೆ.

(ಇ) 'ಮಾಡುತ್ತ ಕಲಿ' :—ಸ್ವಂತ ಶ್ರಮದಿಂದ ಇಲ್ಲವೆ ಪ್ರಯತ್ನದಿಂದ ಕಲಿತ ಸಂಗತಿಗಳನ್ನು ಮಗುವು ಎಂದೆಂದಿಗೂ ಮರೆಯುವದಿಲ್ಲ. ಅರಲಿನ ಗೋಡೆ ಯಲ್ಲಿ ಒಗೆದ ಹರಳು ಹೇಗೆ ಸ್ಥಿರವಾಗಿ ಅಲ್ಲಿಯೇ ಉಳಿಯುವದೋ ಹಾಗೆಯೇ ಮಾಡುತ್ತ ಕಲಿತ ಸಂಗತಿಯು ಮಗುವಿನ ಜ್ಞಾಪಕದಲ್ಲಿ ಸ್ಥಿರವಾಗಿ ನೆಲಿಸುವದು. ಮಕ್ಕಳ ಕಡೆಯಿಂದ ಬಾಹ್ಯರೇಷೆಯ ನಕಾಶಗಳಲ್ಲಿ ರಾಜ್ಯವಿಸ್ತಾರವನ್ನು ತುಂಬಿಸುವದು, ದಿಗ್ವಿಜಯಕ್ಕಾಗಿ ಹೋದ ಮತ್ತು ತಿರುಗಿ ಬಂದ ಮಾರ್ಗಗಳನ್ನು ತುಂಬಿಸುವದು, ಯುದ್ಧವ್ಯೂಹಗಳನ್ನು ತೆಗೆಯಿಸುವದು, ಕಾಲರೇಷೆ (Time-chart) ಯನ್ನು ತಯಾರ ಮಾಡಿಸುವದು ಇವೇ ಮೊದಲಾದ ಚಟುವಟಿಕೆಗಳನ್ನು ಇತಿಹಾಸ ದಲ್ಲಿ ಕೊಡಲು ಶಕ್ಯವಿದೆ. ಚಟುವಟಿಕೆಯಲ್ಲಿ ತೊಡಗಿದಾಗ ಅದರಲ್ಲಿ ಮಗ್ನರಾಗುವದರಿಂದ ಮಕ್ಕಳ ಅವಧಾನವು ಸಂಪೂರ್ಣವಾಗಿ ವಿಷಯದ ಕಡೆಗೇ ಇರುತ್ತದೆ. ಆದುದರಿಂದಲೇ ಈ ತತ್ವವು ಮೂಲ ಶಿಕ್ಷಣದ ಜೀವಾಳವಾಗಿದೆ. ಈ ,, ಧಾನ ಪದ್ಧತಿಯ ತಳಹದಿಯು.

(ಈ) 'ಆಡುತ್ತ ಕಲಿ':—ಕ್ರೀಡಾವೃತ್ತಿಯು ಮಕ್ಕಳ ಜನ್ಮಸಿದ್ಧ ಹಕ್ಕು. ಇದರ ಬಗೆಗೆ ಭಿನ್ನಾಭಿಪ್ರಾಯವೇ ಇಲ್ಲ. ಆಟವು ಯಾವ ಮಗುವಿಗೆ ಬೇಡ ? ಆಡುತ್ತ ಮಕ್ಕಳು ಕಲಿಯಬೇಕೆಂಬುದು ಈ ತತ್ವದ ತಿರುಳು. ಈ ತತ್ವವೇ ಕ್ರಿಡಾ ಪದ್ಧತಿಯ ತಳಹದಿ. ಆಟವು ಯಾವಾಗಲೂ ಹರ್ಷದಾಯಕವೂ ಸ್ವಯಂಸ್ಫೂರ್ತಿಯದೂ ಇದ್ದು ಉತ್ಸಾಹದಕ ಶಕ್ತಿಯುಳ್ಳದ್ದೊಂದು ಅಮೌಲ್ಯವಾದ ಚಟುವಟಿಕೆ. ಶಿಕ್ಷಣದಲ್ಲಿ ಅದರ ಪ್ರೌಢಿಮೆಯನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ. ಇತಿಹಾಸದಲ್ಲಿ ಆಡುತ್ತ ಕಲಿಯಲು ಮಕ್ಕಳಿಗೆ ಸಾಕಷ್ಟು ಅವಕಾಶವಿದೆ. ಯುದ್ಧಗಳನ್ನೂ ವಾಗ್ವಾದಗಳನ್ನೂ ಮಕ್ಕಳು ಒಳ್ಳೇ ಆಸ್ಥೆಯಿಂದ ಅಭಿನಯಿಸುತ್ತಾರೆ. ಇತಿಹಾಸದೊಳಗಿನ ಎಷ್ಟೋ ಕಥೆಗಳನ್ನು ಅಭಿನಯಿಸಲು ಶಕ್ಯವಿದೆ. ಗ್ರಾಮ ಪಂಚಾಯತಿ, ಲೋಕಲ್‌ಬೋರ್ಡ, ಮುನಸಿಪಾಲಿಟಿ, ಅಸೆಂಬ್ಲಿ, ಮೊದಲಾದವುಗಳ ಅಣುಕುಗಳನ್ನು ವರ್ಗದಲ್ಲಿ ಮಾಡಿಸಲು ಬರುತ್ತದೆ. ಮಕ್ಕಳಿಗೆ ಅದೊಂದು ಆಟವೂ ಆಗುತ್ತದೆ ಮತ್ತು ಪಾಠವೂ ಆಗುತ್ತದೆ.

ಇಲ್ಲಿಯ ವರೆಗೆ ಪದ್ಧತಿಗಳಿಗೆ ತಳಹದಿಗಳಾಗಿರುವ ಮನಃಶಾಸ್ತ್ರದ ಹಲವು ಮಹತ್ವದ ತತ್ವಗಳನ್ನು ಸ್ವಲ್ಪದ ರಲ್ಲಿ ವಿವರಿಸಿದ್ದಾಯಿತು. ಇನ್ನು ಮೇಲೆ ಪದ್ಧತಿಗಳನ್ನು ಒಂದೊಂದಾಗಿ ವಿವೇಚಿಸೋಣ.

ಕಲಿಸುವ ಪದ್ಧತಿಗಳು:

(ಅ) ಕಥನ ಪದ್ಧತಿ:— ಇದಕ್ಕೆ ಹೇಳುವ ಪದ್ಧತಿಯೆಂದೂ ಕರೆಯುತ್ತಾರೆ. ಕಥನ ಪದ್ಧತಿಯು ಕೆಳಗಿನ ವರ್ಗಗಳಿಗೆ ಸಂಬಂಧಿಸಿದ್ದಾಗಿದೆ. ಹೇಳುವ ಪದ್ಧತಿಯು ಮೇಲಿನ ಇಯತ್ತೆಗಳಿಗೆ ಸಂಬಂಧಿಸಿದೆ. ಇವೆರಡರಲ್ಲಿಯೂ ಶಿಕ್ಷಕ-ಶಿಕ್ಷಕಿಯರು ಹೇಳುವ ಶೈಲಿಯು ಮನಂಬುಗುವಂತಹದಿರಬೇಕು; ಮಕ್ಕಳ ಹೃದಯಕ್ಕೆ ನೇರವಾಗಿ ತಟ್ಟುವಂತಹದಿರಬೇಕು. ಕೆಳಗಿನ ಇಯತ್ತೆಗಳಿಗೆ ಕಥೆಯನ್ನು ಹೇಳುವಾಗ ಹಾವಭಾವವು ಸಾಕಷ್ಟಿರಬೇಕು. ಮಕ್ಕಳ ಬುದ್ಧಿಮತ್ತೆಯನ್ನು ಕಂಡುಕೊಂಡು ಅದಕ್ಕೆ ಅನುರೂಪವಾಗುವಂತೆ ತಮ್ಮ ಶೈಲಿಯನ್ನು ಸರಿಪಡಿಸಿಕೊಳ್ಳಬೇಕು. ಅವರಿಗೆ ಗೊತ್ತಿಲ್ಲದ ಶಬ್ದಗಳನ್ನು ಎಂದೂ ಉಪಯೋಗಿಸಕೂಡದು. ಭಾಷೆಯು ಸುಲಭವಾದದ್ದಿರಬೇಕು. ಶಿಕ್ಷಕ-ಶಿಕ್ಷಕಿಯರು ಕೆಳಗಿನ ಇಯತ್ತೆಗಳಲ್ಲಿ ಉತ್ತಮ ಕತೆಗಾರರಾಗಿರಬೇಕು. ಇದು ಅಂತಹದೇನು ಬಿರಿಯಾದ ಮಾತಲ್ಲ. ರೂಢಿಯಿಂದ ಇದನ್ನು ಸಾಧಿಸಿಕೊಳ್ಳಲು ತರುಣ ಮತ್ತು ಹೊಸ ಶಿಕ್ಷಕ-ಶಿಕ್ಷಕಿಯರಿಗೆಲ್ಲ ಶಕ್ಯವಿದೆ. ಕೆಲ ಕಾಲ ಗತಿಸಿದ ನಂತರ ಈ ಕಲೆಯು ಸ್ವೈವಶವಾಗುವದು ನಿಶ್ಚಿತ. ರೂಢಿಯು ಮಾತ್ರ ತ್ರಿಕರಣಪೂರ್ವಕವಾದದ್ದಿರಬೇಕು. ಮೇಲಿನ ಇಯತ್ತೆಗಳಲ್ಲಿ ಪಾಠಕ್ಕೆ ಬೇಕಾದ ಸಂಗತಿಗಳ ಸಾಕಷ್ಟು ಸಂಗ್ರಹವನ್ನು ಶಿಕ್ಷಕ-ಶಿಕ್ಷಕಿಯರು ಮೊದಲೇ ಮಾಡಿಟ್ಟುಕೊಂಡಿರಬೇಕೆಂಬುದನ್ನು ಇಲ್ಲಿ ಹೇಳುವದು ಅನವಶ್ಯಕ. ವಿಷಯವಿವೇಚನೆಯಲ್ಲಿ ಆ ಸಂಗತಿಗಳನ್ನು ಒಂದೊಂದಾಗಿ ಮುತ್ತು ಪೋಣಿಸುವಂತೆ ಹೇಳುತ್ತ ಹೋಗಬೇಕು; ಹೇಳುವ ಶೈಲಿಯು ಮಾತ್ರ ಮೇಲೆ ಹೇಳಿದಂತಹದೇ ಇರಬೇಕು. ವರ್ಣನಾತ್ಮಕ ಸಂಗತಿಗಳನ್ನು ಮನರಂಜನವಾಗುವಂತೆ ಹೇಳುವಾಗಲೂ ಮಕ್ಕಳಲ್ಲಿ

ಭಾವೋದ್ರೇಕವನ್ನು ಹುಟ್ಟಿಸುವಾಗಲೂ ಈ ಪದ್ಧತಿಯ ಉಪಯೋಗವು ಅತ್ಯಗತ್ಯವು.

(ಆ) ಪ್ರಶ್ನೋತ್ತರ ಪದ್ಧತಿ:—ಪ್ರಶ್ನೋತ್ತರದಿಂದ ಕಲಿಸುವ ಪದ್ಧತಿಗೆ ಪ್ರಶ್ನೋತ್ತರ ಪದ್ಧತಿಯೆಂಬ ಹೆಸರು. ಮೇಲೆ ಹೇಳಿದ ಪದ್ಧತಿಗಿಂತ ಇದು ಹೆಚ್ಚು ಪರಿಣಾಮಕಾರಕವಾದದ್ದು. ಪ್ರಶ್ನೆಗಳನ್ನು ಕೇಳುವದರಿಂದ ಮಕ್ಕಳಲ್ಲಿ ಬೌದ್ಧಿಕ ಚಟುವಟಿಕೆಯುತ್ಪನ್ನವಾಗುತ್ತದೆ. ಚಟುವಟಿಕೆಯುತ್ಪನ್ನವಾಯಿತೆಂದರೆ, ಮಕ್ಕಳ ಅವಧಾನವು ವಿಷಯದತ್ತ ಹೆಚ್ಚಾಗುತ್ತ ಹೋಗುತ್ತದೆ. ಮಕ್ಕಳು ಕೊಡುವ ಉತ್ತರಗಳ ಮೇಲಿಂದ ಅವರ ಬುದ್ಧಿಮಟ್ಟವನ್ನು ಕಂಡು ಹಿಡಿಯಲು ಶಿಕ್ಷಕ-ಶಿಕ್ಷಕಿಯರಿಗೆ ಶಕ್ಯವಾಗುತ್ತದೆ. ಬುದ್ಧಿಮತ್ತೆಯು ಗೊತ್ತಾಯಿತೆಂದರೆ, ಅದಕ್ಕನುಗುಣವಾಗಿ ಪ್ರಶ್ನೆಗಳನ್ನು ಹಾಕಲು ಶಿಕ್ಷಕ-ಶಿಕ್ಷಕಿಯರಿಗೆ ಸಹಾಯವಾಗುತ್ತದೆ. ಮಕ್ಕಳ ಬುದ್ಧಿಮಟ್ಟವನ್ನರಿಯದ ಶಿಕ್ಷಕ-ಶಿಕ್ಷಕಿಯರು ಹಾಕಿದ ಪ್ರಶ್ನೆಗಳಿಗೆ ಮಕ್ಕಳಿಂದ ಉತ್ತರಗಳೇ ಬರುವದಿಲ್ಲ. ಇದರಿಂದ ಅವರು ಮಕ್ಕಳ ಮೇಲೆ ಸುಮ್ಮಸುಮ್ಮನೆ ಸಿಟ್ಟಿಗೇಳುತ್ತಾರೆ ಮತ್ತು ತಾವೂ ನಿರಾಶರಾಗಿ ನಿರುತ್ಸಾಹವನ್ನು ಹೊಂದುತ್ತಾರೆ. ಇದು ನಿಜಕ್ಕೂ ಶೋಚನೀಯ ಪ್ರಸಂಗವಲ್ಲವೇ?—ಈ ಪದ್ಧತಿಯನ್ನು ಮೇಲೆ ಹೇಳಿದಂತೆ ಚನ್ನಾಗಿ ಉಪಯೋಗಿಸಿದಲ್ಲಿ, ಅಂತಹ ಶೋಚನೀಯ ಪ್ರಸಂಗಗಳೇ ಉದ್ಭವಿಸುವದಿಲ್ಲೆಂಬ ಮಾತನ್ನು ಬೇಗನೆ ತಿಳಕೊಂಡಷ್ಟು ನೆಟ್ಟಗೆ. ಹೊಸ ಸಂಗತಿಯನ್ನು ಕಲಿಸುವಾಗ ಈ ಪದ್ಧತಿಯನ್ನು ಉಪಯೋಗಿಸುವದು ಶಕ್ಯವಾಗಲಾರದು. ಯಾಕಂದರೆ, ಮಕ್ಕಳಿಗೆ ಹೊಸ ಸಂಗತಿಯು ಗೊತ್ತಿರುವದಿಲ್ಲ. ವಿಷಯ-ವಿವರಣೆಯ ಮಟ್ಟಿನಲ್ಲಿ ಮಕ್ಕಳಿಗೆ ಗೊತ್ತಿಲ್ಲದ ಹೊಸ ಸಂಗತಿಗಳನ್ನೇ ಹೇಳುವದಿರುತ್ತದೆ. ಆದುದರಿಂದ ಅಲ್ಲಿ ಈ ಪದ್ಧತಿಯ ಉಪಯೋಗವಾಗಲಾರದೆಂದು ಕೆಲವರ ಮತ. ಇಲ್ಲಿಯೂ ಈ ಪದ್ಧತಿಯನ್ನು ಉಪಯೋಗಿಸಲು ಶಕ್ಯವಿದೆ. ವಿಷಯ-ವಿವರಣೆಯಲ್ಲಿ ಹೊಸ ಸಂಗತಿಗಳನ್ನು ಕಲಿಸುವದಿರುತ್ತದೆಂಬ ಮಾತು ನಿಜ. ಆದರೆ, ಇಂಥಲ್ಲಿ ಅನುಮಾನದ ಪ್ರಶ್ನೆಗಳನ್ನು ಶಕ್ಯವಿದ್ದ ಮಟ್ಟಿಗೆ ಅಲ್ಲಲ್ಲಿ ಹಿಟ್ಟಿನಲ್ಲಿ ಉಪ್ಪು ಬೆರಸಿದ ಹಾಗೆ ಹಾಕುತ್ತ ಹೋಗಲು ಶಕ್ಯವಿದೆ. ಹೀಗೆ ಮಾಡುವದರಿಂದ, ಹೊಸ ಸಂಗತಿಯ ಬಗೆಗೆ ಮಕ್ಕಳಲ್ಲಿ ಅಭಿರುಚಿಯೂ ಆಸಕ್ತಿಯೂ ಹುಟ್ಟಿ ವಿಷಯ-ವಿವರಣೆಯು ಮಟ್ಟಿಗೆ ಕಳೆ ಬಂದಂತಾಗಿ ಅದಕ್ಕೆ ಒಂದು ತರಹದ ಮಿರುಗು-ಬೆರಗನ್ನು ಕೊಟ್ಟಂತಾಗುವದಿಲ್ಲವೇ ? ಈ ಸಂದರ್ಭದಲ್ಲಿ ಒಂದು ಎಚ್ಚರಿಕೆಯನ್ನು ವಹಿಸುವದೊಳಿತು. ಅನುಮಾನದ ಪ್ರಶ್ನೆಗಳು ಮಕ್ಕಳ ವ್ಯವಹಾರಜ್ಞಾನ ಮತ್ತು ಅನುಭವಗಳಿಗೆ ಸಿಲುಕುವಂತಹವುಗಳು ಮಾತ್ರ ಇರಬೇಕು.

(ಇ) ಚರ್ಚಾತ್ಮಕ ಪದ್ಧತಿ:—ಇದಕ್ಕೆ ವಿವೇಚನಾಪದ್ಧತಿಯೆಂದರೂ ಸಲ್ಲುವದು. ಮೇಲಿನ ಎರಡೂ ಪದ್ಧತಿಗಳ ಜೋಡಣೆಯಿಂದ ಇಲ್ಲವೆ ಸಂಬೆರಿಕೆಯಿಂದ ಈ ಪದ್ಧತಿಯು ಮೈದೋರಿದೆ. ಇದರಲ್ಲಿ ಹೇಳುವದೂ ನಡೆಯುತ್ತದೆ ಮತ್ತು ಪ್ರಶ್ನಿಸುವದೂ ನಡೆಯುತ್ತದೆ; ಇವೆರಡೂ ಜೊತೆಜೊತೆಯಾಗಿ ನಡೆಯುತ್ತಿವೆ. ಮೇಲಿನ ಇಯತ್ತೆಗಳಲ್ಲಿ ಉಪಯೋಗವು ಹೆಚ್ಚಾಗಿ ಆಗುತ್ತದೆ. ಯಾಕಂದರೆ, ಅಲ್ಲಿ ಮಕ್ಕಳ ಬುದ್ಧಿವಿಕಾಸವು ಬೆಳೆದದ್ದಾಗಿರುತ್ತದೆ. ಮಕ್ಕಳ ಬುದ್ಧಿವಿಕಾಸವು ಬಲಿತ ವರ್ಗಗಳಲ್ಲಿ ಶಿಕ್ಷಕ-ಶಿಕ್ಷಕಿಯರು ಮಕ್ಕಳಗೂಡ ಚರ್ಚೆ ಮಾಡುತ್ತ ಕಲಿಸಬೇಕಾಗುವದು. ಐತಿಹಾಸಿಕ ಸಂಗತಿಗಳ ಬಲಾಬಲಗಳ ಮತ್ತು ಗುಣಾಗುಣಗಳ ಬಗೆಗೆ ತಮ್ಮ ಅಭಿಪ್ರಾಯಗಳನ್ನು ಕೊಡಲು ಅವರು ತಕ್ಕವರಾಗಿರುತ್ತಾರೆ. ವರ್ತಮಾನಪತ್ರಗಳನ್ನೂ ಮಾಸಿಕ ಪುಸ್ತಕ ಮೊದಲಾದವುಗಳನ್ನೂ ಓದಿಕೊಂಡು ತಮ್ಮ ಜ್ಞಾನಸಂಗ್ರಹವನ್ನು ತಾವೇ ಮಾಡಿಕೊಂಡಿರುತ್ತಾರೆ. ಅಂತಹವರಿಗೆ ಕಲಿಸುವಾಗ, ಅವರಗೂಡ ಚರ್ಚೆ ಮಾಡುತ್ತ ಪಾಠವನ್ನು ಸಾಗಿಸುವದೇ ಉತ್ತಮ ಉಪಾಯವು. ಈ ಪದ್ಧತಿಯಿಂದ ಮಕ್ಕಳ ವೈಯಕ್ತಿಕ ಯೋಗ್ಯತೆಯನ್ನು ಕಂಡುಹಿಡಿಯಲು ಶಕ್ಯವಾಗುತ್ತದೆ. ಪಠ್ಯೇತರ ಪುಸ್ತಕಗಳನ್ನು ಓದಿ ಅರಗಿಸಿಕೊಂಡು ತಮ್ಮ ಜ್ಞಾನವನ್ನು ಎಷ್ಟರ ಮಟ್ಟಿಗೆ ಹೆಚ್ಚಿಸಿಕೊಂಡಿರುವರೆಂಬುದನ್ನೂ ಹೊರಗಿನ ವ್ಯವಹಾರಜ್ಞಾನ (ಮೇಲುಬುದ್ಧಿ) ವನ್ನು ಎಷ್ಟರ ಮಟ್ಟಿಗೆ ಪಡೆದಿರುವರೆಂಬುವನ್ನೂ ಗೊತ್ತುಹಚ್ಚಲು ಬರುತ್ತದೆ. ಪರ್ಯಾಯದಿಂದ ವರ್ಗದಲ್ಲಿಯ ಮಕ್ಕಳೆಲ್ಲರ ವೈಯಕ್ತಿಕವಾದ ಬುದ್ಧಿಪರೀಕ್ಷಣವೇ ಆಗಿ ಹೋಗುತ್ತದೆಂದರೂ ಸಲ್ಲುವದು. ವರ್ಗದಲ್ಲಿ ಮೇಧಾವಿಗಳಾರು, ಮಂದಮತಿಗಳಾರು ಮತ್ತು

ಸಾಧಾರಣ ಬುದ್ಧಿಯುವರಾರೆಂಬುದು ಗೊತ್ತಾಗಿ ಅವರಿಗೆ ವೈಯಕ್ತಿಕವಾಗಿ ಹೇಗೆ ಲಕ್ಷ್ಯವನ್ನು ಪೂರಯಿಸಬೇಕೆಂಬುದನ್ನು ಸರಿಪಡಿಸಿಕೊಳ್ಳಲು ಅನುಕೂಲವಾಗುತ್ತಿದೆ. ಒಟ್ಟಿನಲ್ಲಿ, ನಮ್ಮ ಪ್ರಾಥಮಿಕ ಸಾಲೆಗಳ ಮೇಲಿನ ಎರಡು ವರ್ಗಗಳಲ್ಲಿ ಈ ಪದ್ಧತಿಯ ಉಪಯೋಗವು ಚನ್ನಾಗಿ ಆಗುತ್ತದೆಂದು ನಂಬಲಾಗಿದೆ. ಈ ಪದ್ಧತಿಯನ್ನನುಸರಿಸುವದರಿಂದ ನಿಯಮಿತ ಕಾಲಾವಧಿಯೊಳಗಾಗಿ ಅಭ್ಯಾಸಪತ್ರಿಕೆಯೊಳಗಿನ ವಿಷಯಗಳನ್ನೆಲ್ಲ ಮುಗಿಸಲು ಶಕ್ಯವಾಗುವದಿಲ್ಲೆಂಬ ಕೂಗು ಮಾತ್ರ ಏಳುವ ಸಂಭವವಿದೆ. ಸ್ಪೇಶಲ್ ಕ್ಲಾಸುಗಳನ್ನಾದರೂ ಹಾಕಿ ನಿಯಮಿತ ಕಾಲಾವಧಿಯಲ್ಲಿ ಅಭ್ಯಾಸಪತ್ರಿಕೆಯೊಳಗಿನ ವಿಷಯುಗಳನ್ನೆಲ್ಲ ಮುಗಿಸುವದು ಲೇಸೆಂದು ನಮ್ಮ ಮತವು.

(ಈ) ನಟನಾ ಪದ್ಧತಿ:—ಮಕ್ಕಳ ಜನ್ಮಸಿದ್ಧ ಹಕ್ಕಾಗಿದ್ದ ಕ್ರೀಡಾವೃತ್ತಿಯೇ ಈ ಪದ್ಧತಿಯ ತಳಹದಿಯು. ಇದು ಕ್ರೀಡಾವೃತ್ತಿಯ ಒಂದಂಗವು. ಸಂಭಾಷಣೆ ಮತ್ತು ಅದಕ್ಕನುರೂಪವಾದ ಅಭಿನಯ ಇವುಗಳ ಮೂಲಕ ಕಲಿಸುವದಕ್ಕೆ ನಟನಾ ಪದ್ಧತಿಯೆನ್ನುವರು. ಇದರ ಉಪಯೋಗವು ಹೆಚ್ಚಾಗಿ ಕೆಳಗಿನ ವರ್ಗಗಳಲ್ಲಾಗುತ್ತಿದೆ. ಚಿಕ್ಕ ಮಕ್ಕಳು ಐತಿಹಾಸಿಕ ಕಥೆಗಳನ್ನು ಅಭಿನಯಿಸಲು ಒಳ್ಳೇ ಹುರುಪಿನಿಂದಲೂ ಹುಮ್ಮಸದಿಂದಲೂ ಮುಂದೆ ಬರುತ್ತಾರೆ. ತಮಗೆ ಕೊಟ್ಟ ಪಾತ್ರವನ್ನು ಎಳ್ಳಷ್ಟೂ ತಪ್ಪದೆ ಆಸ್ಥೆಯಿಂದ ಆಡಿ ತೋರಿಸಿ ಎಲ್ಲರಿಂದ ಹೊಗಳಿಕೆಯನ್ನು ಪಡೆಯಲು ಹಾತೊರೆಯುತ್ತಿರುತ್ತಾರೆ. ಇತಿಹಾಸದಲ್ಲಿ ಎಷ್ಟೋ ಕಥೆಗಳು ಅಭಿನಯಿಸಲು ಬರುವಂತಿವೆ. ಇಂತಹ ಪಾಠಗಳಲ್ಲಿ ದೃಢೀಕರಿಸುವ ಸಲುವಾಗಿ ಕೊನೆಯ ಮೆಟ್ಟನ್ನು ಅಭಿನಯವೆಂದೇ ಇಟ್ಟುಕೊಳ್ಳುವ ರೂಢಿಯಿದೆ. ಯಾಕಂದರೆ, ಅಭಿನಯಿಸಿದ ಕಥೆಯನ್ನು ಮಕ್ಕಳು ಎಂದೂ ಮರೆಯುವದಿಲ್ಲ; ಕಲಿತ ಸಂಗತಿಯು ಮನದಟ್ಟಾಗುತ್ತದೆ. ಮೇಲಿನ ಇಯತ್ತೆಯವರ ಸಲುವಾಗಿ ಏಕಾಂಕ ನಾಟಕಗಳನ್ನು ತಯಾರಿಸಬೇಕು, ಅಭಿನಯಿಸಲರ್ಹವಾದ ಸಂದರ್ಭಗಳು ಇಲ್ಲವೆ ಸನ್ನಿವೇಶಗಳು ಇತಿಹಾಸದಲ್ಲಿ ಹೆಗ್ಗಳವಾಗಿ ಸಿಕ್ಕುತ್ತಿವೆ. ಇಂತಹ ಸನ್ನಿವೇಶಗಳಿಂದ ಇಲ್ಲವೆ ಸಂದರ್ಭಗಳಿಂದ ಏಕಾಂಕ ನಾಟಕಗಳನ್ನು ರಚಿಸಿ ಮಕ್ಕಳ ಕಡೆಯಿಂದ ಅಭಿನಯ ಮಾಡಿಸಬೇಕು. ಉದಾಹರಣಾರ್ಥವಾಗಿ, ಬಾಬರನು ಮಗನ ಸಲುವಾಗಿ ಪ್ರಾಣ ಕೊಟ್ಟದ್ದು, ಬಿಸಾಟಿ ಬಿಕ್ಕೂಸು ದಿಲ್ಲಿಯ ರಾಣಿಯಾದದ್ದು, ಜಹಾಂಗೀರನ ನ್ಯಾಯದ ಗಂಟೆ, ಬೆಳವಡಿ ಮಲ್ಲಮ್ಮ-ಶಿವಾಜಿಯ ಯುದ್ಧ, ಪಂಜರದೊಳಗಿನ ಪಕ್ಷಿಯು ಹಾರಿಹೋಯಿತು ಇತ್ಯಾದಿ. ಅಭಿನಯವು ಆಟದಂತೆ ಆನಂದಮಯವೂ ಶಕ್ತಿಯುತವೂ ಆದದ್ದೊಂದು ಚಟುವಟಿಕೆಯಾಗಿದೆ. ಇದರಿಂದ ಆಡುವವರಿಗೂ ನೋಡುವವರಿಗೂ ಮನೋರಂಜನವಾಗಿ ಎಲ್ಲರಿಗೂ ಆನಂದವಾಗುತ್ತಿದೆ. ಇದರಿಂದಾಗುವ ಲಾಭಗಳೆಂದರೆ:— (೧) ಅಭಿನಯಿಸಿದ ಐತಿಹಾಸಿಕ ಸಂಗತಿಯು ಎಲ್ಲರಿಗೂ ಮನದಟ್ಟಾಗುತ್ತಿದೆ. (೨) ಆಟದಲ್ಲಿಯಂತೆ ಇಲ್ಲಿಯೂ ಮಕ್ಕಳ ಆತ್ಮಪ್ರಕಾಶಕ್ಕೆ ತುಂಬಾ ಉತ್ತೇಜನವು ಸಿಕ್ಕುತ್ತದೆ. ಯಾಕಂದರೆ ಪಾತ್ರ ವಹಿಸುವ ಪ್ರತಿಯೊಬ್ಬನೂ ತನ್ನ ಭಾಷಣಗಳನ್ನು ಚನ್ನಾಗಿ ಕಂಠಗತ ಮಾಡಿಕೊಳ್ಳುತ್ತಾನೆ, ತನಗೆ ಬೇಕಾದ ವೇಷಭೂಷಣಗಳನ್ನು ದೊರಕಿಸುತ್ತಾನೆ ಬಿಲ್ಲು-ಬಾಣ-ಖಡ್ಗ ಮೊದಲಾದ ಆಯುಧಗಳು ಬೇಕಾಗಿದ್ದರೆ ಕೃತಕ ಆಯುಧಗಳನ್ನು ತಾನೇ ತಯಾರಿಸಿಕೊಳ್ಳುತ್ತಾನೆ, ಇತ್ಯಾದಿ. (೩) ಶಿಕ್ಷಕರಿಗೆ ಬಾಯಿಮಾತಿನಿಂದ ತಿಳಿಸಿ ಹೇಳಲಶಕ್ಯವಾದ ಕೆಲ ಸಂಗತಿಗಳನ್ನು ಅಭಿನಯದಿಂದ ಸ್ಪಷ್ಟಗೊಳಿಸಲು ಶಕ್ಯವಾಗುತ್ತಿದೆ. ಆದುದರಿಂದ, ಶಿಕ್ಷಣದಲ್ಲಿ ಈ ಪದ್ಧತಿಯು ಎಲ್ಲರ ಮೆಚ್ಚುಗೆಯನ್ನು ಪಡೆದಿದೆ. ಸಂಭಾಷಣೆ ಇಲ್ಲದೆ ಬರೇ ಮೂಕ ನಟನೆಯನ್ನಷ್ಟು ಮಾಡಿಸುವದೊಂದು ಯುಕ್ತಿಯಿದೆ. ಇದಕ್ಕೆ ನಾವು ಮೂಕ ಅಭಿನಯವೆಂದು ಕರೆಯುತ್ತೇವೆ. ಇದರಲ್ಲಿ ಮಕ್ಕಳು ತಾವು ಮೊದಲೇ ಅಭ್ಯಾಸ ಮಾಡಿಟ್ಟುಕೊಂಡಿದ್ದೊಂದು ಐತಿಹಾಸಿಕ ಸನ್ನಿವೇಶದೊಳಗಿನ ಪಾತ್ರಗಳಿಗೊಪ್ಪುವ ವೇಷಭೂಷಣಗಳನ್ನು ಧರಿಸಿ ತಮ್ಮ ತಮ್ಮ ಚಟುವಟಿಕೆಗಳನ್ನೆಲ್ಲ ಹಾವಭಾವಗಳಿಂದಲೇ ಮಾಡಿ ತೋರಿಸಿ ಆ ಸನ್ನಿವೇಶದ ವೃತ್ತಾಂತವೆಲ್ಲ ನೋಡುವವರಿಗೆ ಗೊತ್ತಾಗುವಂತೆ ಮಾಡುವದಿರುತ್ತದೆ. ಇದಾದರೂ ಒಳ್ಳೇ ಮನೋರಂಜಕವಾದದ್ದಿರುತ್ತದೆ. ಮಕ್ಕಳಿಗೆ ಆ ಸನ್ನಿವೇಶದ ಸಂಗತಿಗಳು ಮನದಟ್ಟಾಗದ ಹೊರತು ಅವರು ಪಾ-

ಣಾಮಕಾರಕವಾಗಿ ಮೂಕ ಅಭಿನಯವನ್ನು ಮಾಡಿ ತೋರಿಸಲಾರರೆಂಬ ಮಾತನ್ನು ಓದುಗರು ಗಮನಿಸುವದೊಳಿತು. ಈ ಅಭಿನಯಗಳಿಗಿರುವ ಶೈಕ್ಷಣಿಕ ಮಹತ್ವವು ಅಷ್ಟಿಷ್ಟಲ್ಲ. ಇಂತಹ ಮೂಕ ಅಭಿನಯಗಳನ್ನೂ ಏಕಾಂಕ ನಾಟಕಗಳನ್ನೂ ಶಕ್ಯವಿದ್ದಷ್ಟು ಹೆಚ್ಚಾಗಿ ಮಾಡಿಸಬೇಕು ಮತ್ತು ಅವುಗಳಲ್ಲಿ ಉತ್ತಮವೆಂದು ಕಂಡುಬಂದವುಗಳನ್ನಷ್ಟೇ ಶಾಲೆಯ ಹುಟ್ಟು ಹಬ್ಬ, ಮಕ್ಕಳ ದಿನ, ಪಾಲಕರ ದಿನ, ಶಿಕ್ಷಣ-ಸಪ್ತಾಹ, ಮೊದಲಾದ ಶೈಕ್ಷಣಿಕ ಉತ್ಸವಗಳಲ್ಲಿ ಆಡಿ ತೋರಿಸಲು ಅನುಕೂಲವಾಗುತ್ತದೆ.

(ಉ) ಕೃತಿಪ್ರಧಾನ ಪದ್ಧತಿ:— 'ಮಾಡುತ್ತ ಕಲಿ' ಎಂಬ ಮನಃಶಾಸ್ತ್ರದ ತತ್ವವೇ ಈ ಪದ್ಧತಿಯ ತಳಹದಿಯೆಂಬುದನ್ನು ಈ ಮೊದಲೇ ಹೇಳಿದೆ. ಏನಾದರೊಂದು ಕೃತಿಯನ್ನು ಮಾಡುವದು ಮಕ್ಕಳಿಗೆ ಸ್ವಾಭಾವಿಕವಾಗಿ ಸೇರುತ್ತದೆ. ಅದೊಂದು ಅವರ ಸಹಜ ಪ್ರವೃತ್ತಿಯು. ಮಕ್ಕಳಿಗೆ ಒಂದು ಚಟುವಟಿಕೆಯನ್ನು ಕೊಟ್ಟರೆ, ಅದರಲ್ಲಿ ಸ್ವಾಭಾವಿಕವಾಗಿ ಅವರ ಆಸಕ್ತಿಯೂ ಅಭಿರುಚಿಯೂ ಹುಟ್ಟಿ ಅದರಲ್ಲಿಯೇ ತಲ್ಲೀನರಾಗುವದು ಉಂಟು. ಚಟುವಟಿಕೆಯ ಈ ಶೈಕ್ಷಣಿಕ ಮಹತ್ವದ ಲಾಭವನ್ನು ಶಿಕ್ಷಕ-ಶಿಕ್ಷಕಿಯರು ತಮಗೆ ಎಷ್ಟು ಶಕ್ಯವಿದೆಯೋ ಅಷ್ಟು ಹೆಚ್ಚು ತಕ್ಕೊಳ್ಳುವದೊಳಿತು. ಇತಿಹಾಸದಲ್ಲಿ ಈ ಪದ್ಧತಿಯ ಉಪಯೋಗವನ್ನು ಮಾಡಿಕೊಳ್ಳಲು ಶಕ್ಯವಿದೆಯೆಂಬ ಮಾತನ್ನು ಈ ಮೊದಲೇ ಹೇಳಿದ್ದಾಗಿದೆ. ಬಾಹ್ಯರೇಷೆಯ ನಕಾಶೆಗಳಲ್ಲಿ ರಾಜ್ಯ ವಿಸ್ತಾರವನ್ನು ತುಂಬಿಸುವದು, ದಿಗ್ವಿಜಯಕ್ಕಾಗಿ ಹೋದ ಮತ್ತು ತಿರುಗಿ ಬಂದ ಮಾರ್ಗಗಳನ್ನು ತುಂಬಿಸುವದು, ವಂಶಾವಳಿ ಪಟಗಳನ್ನು ಬರೆಯಿಸುವದು, ಕಾಲರೇಷೆಗಳನ್ನು ತಯಾರಿಸುವದು, ಯುದ್ಧವ್ಯೂಹಗಳ ನಕ್ಷೆಗಳನ್ನು ತೆಗೆಯಿಸುವದು, ಆ ನಕ್ಷೆಗಳ ಸಹಾಯದಿಂದ ಎರಡೂ ಕಡೆಯ ಸೈನಿಕರ ಶಿಸ್ತಿನಿಂದ ನಿಂತ ಮಾದರಿ (Model)ಗಳನ್ನು ರಚಿಸುವದು, ಇವೇ ಮೊದಲಾದ ಚಟುವಟಿಕೆಗಳನ್ನು ಕೊಡಲು ಶಕ್ಯವಿದೆ- ಈ ಪದ್ಧತಿಯಿಂದಾಗುವ ಲಾಭಗಳೆಂದರೆ:— (೧) ಕೃತಿಗಳನ್ನು ಮಾಡುವದರಿಂದ ಮಕ್ಕಳ ಅವಧಾನವು ವಿಷಯಕ್ಕೆ ಅಂಟಿಕೊಳ್ಳುತ್ತಿದೆ. (೨) ಕೆಲಸದಲ್ಲಿದ್ದಾಗ ಅವರಿಗೆ ಆಡರುವ ಅಡ್ಡಿ-ಆತಂಕಗಳನ್ನೂ ಎಡರು-ತೊಡರುಗಳನ್ನೂ ಅವರು ಎದುರಿಸಬೇಕಾಗುತ್ತಿದೆ. ಅದರಿಂದ ಅವರಲ್ಲಿ ಕೆಲಸ ಮಾಡುವ ಸಾಮರ್ಥ್ಯವೂ ವ್ಯವಹಾರಜ್ಞಾನವೂ ಬೆಳೆಯುತ್ತಿವೆ. (೩) ಸ್ವಂತ ಅನುಭವದಿಂದ ಜ್ಞಾನವು ಸಿಗುತ್ತಿದೆ. ಅದುವೇ ನಿಜಕೂ ಮಿಗಿಲಾದ ಜ್ಞಾನವು. (೪) ಕೆಲಸ ಮಾಡುತ್ತ ಮಾಡುತ್ತ ನಡೆದಂತೆ ಅವರಲ್ಲಿ ಕುಶಲತೆಯು ಪ್ರಾಪ್ತವಾಗುತ್ತಿದೆ. ಆದುದುದರಿಂದ ಶಿಕ್ಷಕ-ಶಿಕ್ಷಕಿಯರು ಮೇಲೆ ಹೇಳಿದಂತಹ ಚಟುವಟಿಕೆಗಳನ್ನು ಕೊಟ್ಟು ಮಕ್ಕಳ ಕಡೆಯಿಂದ ಮಾಡಿಸಬೇಕು. ಅವುಗಳಲ್ಲಿ ಉತ್ತಮವಾದುವುಗಳನ್ನು ವರ್ಗದ ಕೋಣೆಯಲ್ಲಿ ಮಕ್ಕಳಿಗೆ ನಿಲುಕದ ಹಾಗೆ ತೂಗಹಾಕಬೇಕು. ಇಂತಹವುಗಳನ್ನೆಲ್ಲ ಶೇಖರಿಸಿ ಮೇಲೆ ಹೇಳಿದಂತಹ ಶೈಕ್ಷಣಿಕ ಉತ್ಸವಗಳಲ್ಲಿ ಪ್ರದರ್ಶಿಸಬೇಕು.

[ಮುಂದುವರಿಯುವದು]

ಬರ್ನಾರ್ಡ ಶಾ ಅವರ ವ್ಯಂಗ್ಯ

ನಾನು ತಮಾಷೆ ಮಾಡುತ್ತೇನೆ ಸತ್ಯ ಮಾತಾಡಿ. ಏಕೆಂದರೆ ಸತ್ಯವೇ ಜಗತ್ತಿನ ಎಲ್ಲಕ್ಕಿಂತ ಹೆಚ್ಚು ತಮಾಷೆಯ ವಿನೋದವಾಗಿದೆ.

* * * * * * * *

ಸದ್ಗುಣವಾವುದಾದರೂ ಇದ್ದರೆ ಅದು ಯುದ್ಧಪ್ರಿಯತೆ; ಯಾವುದಾದರೂ ಕೆಟ್ಟದು ಇದರೆ ಅದು ಶಾಂತಿವಾದ, ಇದೇ ಯುದ್ಧದ ಅತ್ಯಂತ ಮಹತ್ವಪೂರ್ಣ ಕಾರಣವಿರುತ್ತದೆ.

* * * * * * * *

ಸಾವಿರಾರು ವರುಷಗಳ ನಂತರ ನಕ್ಷತ್ರಗಳ ಪ್ರಕಾಶವು ನಮ್ಮ ತನಕ ಬಂದು ಮುಟ್ಟುತ್ತದೆ, ಇಷ್ಟು ದೂರ ಅವು ಇವೆಯೆಂದು ಜ್ಯೋತಿಷಿಗಳು ಹೇಳುತ್ತಾರೆ, ಆದರೆ ನನಗೆನಿಸುತ್ತದೆ- ಇದೆಷ್ಟು ದೊಡ್ಡ ಬಿಳಿ ಸುಳ್ಳು! ಮತ್ತು ಅದರಲ್ಲಿ ಇನಿತೂ ಕಲಾತ್ಮಕತೆ ಇಲ್ಲ!!

ಶ್ರೀ. ಎಸ್. ಪಿ. ಜೇವೂರ ಅವರು

(ಜೀವನ-ಪರಿಚಯ)

ಚಿತ್ರಿಸಿದವರು : ಶ್ರೀ. ವೀರೇಶ ಹಿರೇಮಠ

●

ಕನ್ನಡಿಗರಲ್ಲಿ ಉಚ್ಚ, ಶೈಕ್ಷಣಿಕ ಪದವಿಗಳನ್ನು ಪಡೆದು ಮೇಲ್ತರಗತಿಯ ಹುದ್ದೆಗಳನ್ನು ಸಂಪಾದಿಸಿ, ಅಧಿಕಾರ ಸ್ಥಾನದಲ್ಲಿದ್ದವರು ತೀರ ಕಡಿಮೆ. ಇದೀಗ ಕನ್ನಡ ನಾಡಿನ ದೈವವು ತೆರೆದಿದೆಯೆಂದು ಹೇಳಬಹುದು. ಅನೇಕ ಕನ್ನಡಿಗರು ಪಾಶ್ಚಿಮಾತ್ಯ ದೇಶಗಳ, ಶೈಕ್ಷಣಿಕ ಸಂಸ್ಕಾರವನ್ನು ಪಡೆದು, ವಿದೇಶಗಳ ಸಂಚಾರಮಾಡಿ ಕನ್ನಡ ನಾಡಿಗೆ ಮರಳಿ ಬಂದು ಶೈಕ್ಷಣಿಕ ಸೇವೆಯನ್ನು ಸಲ್ಲಿಸುತಿದ್ದಾರೆ.

'ಪ್ರಯತ್ನವೇ ಪರಮಾತ್ಮ'ನೆಂದು ತಿಳಿದ ಶ್ರೀಸಿದ್ಧಲಿಂಗಣ್ಣ ಜೇವೂರವರ ಜೀವನವು ಅತುಲ ಪರಾಕ್ರಮ ಜೀವನವೆಂದು ಹೇಳಬಹುದು. ಅವರ ಜೀವನವು ಒಂದು ರಸಮಯ ಕಾವ್ಯದಂತಿದೆ. ಪರಿಮಳಯುಕ್ತ-ಪುಷ್ಪದಂತಿದೆ. ಅವರ ಕೀರ್ತಿ ಸೌರಭವು ಕನ್ನಡ ನಾಡಿನಲಿ ಪಸರಿಸುತಲಿದೆ. ಶ್ರೀ. ಜೇವೂರವರು, ಇಂದು ದಕ್ಷಿಣ ಭಾಗದ ೧ನೇ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿದ್ದಾರೆ. ಮುಂಬೈ ಸರಕಾರದವರು, ಅವರನ್ನು ೧ನೇ ತರಗತಿ ನೌಕರಿಯಲ್ಲಿ (B. E. S. class 1) ಭರತಿ ಮಾಡಿಕೊಂಡಿದ್ದಾರೆ. ಶ್ರೀ. ಜೇವೂರರವರ ವಯಸ್ಸು ತೀರ ಎಳೆಯದು. ಕನ್ನಡ ನಾಡಿನ ಕ್ಷಾತ್ರ ತೇಜವನ್ನು ಬೀರಿದ, ವೀರ್ಯಯುಕ್ತವಾದ ಬೈಲಹೊಂಗಲ ಸಮೀಪದಲ್ಲಿರುವ, 'ಸುತಗಟ್ಟಿ' ಎಂಬ ಗ್ರಾಮದಲ್ಲಿ ತೀರ ಸಾಧಾರಣ ಮನೆತನದಲ್ಲಿ ೧೯೧೭ನೇ ವರ್ಷದಲ್ಲಿ ಜನ್ಮವೆತ್ತಿದರು. ಶ್ರೀ. ಜೇವೂರವರ ಪ್ರಾಥಮಿಕ ಶಿಕ್ಷಣವು ಬೈಲಹೊಂಗಲದಲ್ಲಿಯೇ ಪ್ರಾರಂಭವಾಗಿ, ಮಾಧ್ಯಮಿಕ ಶಿಕ್ಷಣವು, ಬೆಳಗಾವಿಯ ಸರದಾರ್ಸ್ ಹೈಸ್ಕೂಲಿನಲ್ಲಿ ಕೊನೆಗೊಂಡಿತು. ಉಚ್ಚ ಶಿಕ್ಷಣವನ್ನು ಬೆಳಗಾವಿಯ ಲಿಂಗರಾಜ ಕಾಲೇಜದಲ್ಲಿ ಪಡೆದು, ೧೯೩೯ನೇ ಇಸ್ವಿಯಲ್ಲಿ ಇಂಗ್ಲೀಷ್ ವಿಷಯವನ್ನು ತೆಗೆದುಕೊಂಡು, ಆನರ್ಸ ಶ್ರೇಣಿಯ ಪದವೀಧರರಾದರು. ಬಿ. ಎ. ಆದ ವರ್ಷವೇ, ತಾವು ಕಲಿತ ಶಾಲೆಯಲ್ಲಿ ಶಿಕ್ಷಕರೆಂದು, ಸರಕಾರದವರಿಂದ ನೇಮಿಸಲ್ಪಟ್ಟರು. ೧೯೪೦ರಲ್ಲಿ ಬೆಳಗಾವಿ S. T. ಕಾಲೇಜದಿಂದ ಬಿ. ಟಿ. ಆದ ನಂತರ ಕಾರವಾರ ಗವ್ಹರ್ನಮೆಂಟ ಹೈಸ್ಕೂಲಕ್ಕೆ ವರ್ಗವಾಯಿತು. ಅಲ್ಲಿ ಮ್ಯಾಟ್ರಿಕ್ ವರ್ಗಕ್ಕೆ ಇಂಗ್ಲೀಷು ಕಲಿಸುವದರಲ್ಲಿ, ಅತ್ಯಂತ ಪ್ರವೀಣರೆಂದು, ಇನ್ನೂ ವರೆಗೆ ಕಾರವಾರದಲ್ಲಿ ಖ್ಯಾತಿ ಇದೆ. ನಂತರ ಕಾರವಾರ ಜಿಲ್ಹೆಯಲ್ಲಿಯೇ ಅಸಿಸ್ಟಂಟ-ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾದರು. ಆಮೇಲೆ ಹುಬ್ಬಳ್ಳಿಯ ಆಂಗ್ಲೋ ಉರ್ದು ಹೈಸ್ಕೂಲಿಗೆ ವರ್ಗವಾಯಿತು. ಇಂಗ್ಲಿಷ ಭಾಷೆಯಲ್ಲಿಯ ಇವರ ಪಾಂಡಿತ್ಯ, ಮತ್ತು ಭಾಷಣ ಮಾಡುವ ಶೈಲಿ, ಮೊದಲಾದವುಗಳನ್ನು ಕಂಡು ಸರಕಾರದವರು ೧೯೪೭ರಲ್ಲಿ ವಿಜಾಪೂರ, ಹಾಗೂ ಬೆಳಗಾವಿ ಜಿಲ್ಹೆಗಳಿಗೆ ಇವರನ್ನು ಡಿಸ್ಟ್ರಿಕ್ಟ ಇನಫರಮೇಶನ್ ಆಫೀಸರ (District Information officer) ಎಂದು ನಿಯಮಿಸಿದರು. ಒಂದು ವರ್ಷದ ವರೆಗೆ ಕೆಲಸ ಮಾಡಿದ ನಂತರ ಶ್ರೀ. ಜೇವೂರ ಅವರು ಕರ್ನಾಟಕದಲ್ಲಿಯ 'ಶಿಕ್ಷಣದ ಇತಿಹಾಸ' ಎಂಬ ಸಿದ್ಧಾಂತವನ್ನು thesis ಬರೆದು ಎಂ. ಈಡಿ. (M. Ed.) ಪದವಿಯನ್ನು ದೊರಕಿಸಿದರು. ೧೯೫೮ರಲ್ಲಿ ಸರಕಾರದವರು ಇವರನ್ನು ಬೆಳಗಾವಿಯ ಬಿ. ಟಿ. ಕಾಲೇಜಿನಲ್ಲಿ ಪ್ರೊಫೆಸರರನ್ನಾಗಿ ಮಾಡಿದರು. ಇವರ

ಅನುಪಮ ಪಾಂಡಿತ್ಯ, ಶೈಕ್ಷಣಿಕ ಅನುಭವಗಳನ್ನು ಕಂಡು ಹಿಡಿದು ಸರಕಾರದವರು ೧೯೪೯ರಲ್ಲಿ ಇವರನ್ನು ಮುಂಬೈ ಸೆಕ್ರೆಟೇರಿಯಟ್ (Secretariat)ದ ಎಜ್ಯುಕೇಶನ್ ಅಸಿಸ್ಟಂಟ (Education Assistant) ಎಂದು ನಿಯಮಿಸಿದರು. ೧೯೫೦ರಲ್ಲಿ ಪಬ್ಲಿಕ್ ಸರ್ವೀಸ ಕಮೀಶನದಲ್ಲಿ, ಹುರಿಯಾಳಾಗಿ ನಿಂತ ಮೇಲೆ ಸರಕಾರದವರು ಇವರಿಗೆ ಮುಂಬೈ ಎಜ್ಯುಕೇಶನಲ್ ಡಿಪಾರ್ಟಮೆಂಟದ ೧ನೇ ತರಗತಿಯ ನೌಕರಿಯನ್ನು ದಯಪಾಲಿಸಿ, ದಕ್ಷಿಣಭಾಗದ ೨ನೇ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರರೆಂದು ನೇಮಿಸಿದ್ದಾರೆ.

ಸಾಮಾಜಿಕ ಜೀವನ :

ಶ್ರೀ. ಜೇವೂರವರು ಚಿಕ್ಕಂದಿನಿಂದಲೂ ಉತ್ತಮ ಸಾಹಿತಿಗಳು ಹಾಗೂ ವಾಗ್ಮಿಗಳು. ಹೈಸ್ಕೂಲಿನಲ್ಲಿಯೇ ಆಗಲಿ, ಲಿಂಗರಾಜ ಕಾಲೇಜದಲ್ಲಿಯೇ ಆಗಲಿ, ಅಂತರ-ಕಾಲೇಜುಗಳ ಸ್ಪರ್ಧೆಯಲ್ಲಿಯೇ ಆಗಲಿ, ಉತ್ತಮ ವಾಗ್ಮಿಗಳೆಂದು ಅನೇಕ ಪ್ರಶಸ್ತಿ ಬಹುಮಾನಗಳನ್ನು ಪಡೆದಿದ್ದಾರೆ. ಅನೇಕ ಪತ್ರಿಕೆಗಳಲ್ಲಿ ಮಹಾದೇವಿ ಅಕ್ಕನ ವಚನಗಳನ್ನು ಇಂಗ್ಲೀಷದಲ್ಲಿ ತರ್ಜುಮೆ ಮಾಡಿದ್ದಾರೆ. ಸಂಯುಕ್ತ ಕರ್ನಾಟಕದಲ್ಲಿ, ವಿಶಾಲ-ಕರ್ನಾಟಕದಲ್ಲಿ, ಅನೇಕ ಶೈಕ್ಷಣಿಕ ವಿಚಾರಗಳನ್ನೊಳಗೊಂಡ ಲೇಖನಗಳನ್ನು ಬರೆದಿದ್ದಾರೆ. ಉಜ್ವಲ–ವಾಗ್ಮಿಗಳೂ, ಸರಸ ಸಾಹಿತಿಗಳೂ, ಅನೇಕ ಶೈಕ್ಷಣಿಕ ಪದವಿಗಳನ್ನು ಧರಿಸಿದವರೂ, ಬಿಸಿ ರಕ್ತದ ತರುಣರೂ, ಆದ ಇವರು ಇಂದು ಉಪಶಿಕ್ಷಣಾಧಿಕಾರಿಗಳಾದುದು ಕನ್ನಡ ನಾಡಿನ ಸೌಭಾಗ್ಯ. ಇವರ ವಿದ್ವತ್ತದ ಪರಿಣಾಮವಾಗಿ ಕನ್ನಡ ನಾಡಿನ ಶಿಕ್ಷಣವು ಮುನ್ನಡಿಯಿಡಲಿ. ಪರಮಾತ್ಮನು ಇವರಿಗೆ ಸದಾ ಆನಂದವನ್ನೀಯಲಿ. ಸರ್ವಶಕ್ತಿಗಳನ್ನು ದಯಪಾಲಿಸಲಿ.

(‘ಜಯಕರ್ನಾಟಕ’ದ ಕೃಪೆಯಿಂದ)

೭ನೆಯ ಇಯತ್ತೆ ಅಥವಾ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗಾಗಿ ಅತ್ಯುಪಯೋಗಿ ಪುಸ್ತಕಗಳು

೧	ಗಣಿತ ಸಂಗ್ರಹ	೧	೦	೦	೧೧	ಭೂಮಿತಿ ಪ್ರಶ್ನೋತ್ತರಮಾಲೆ	೧	೦	೦
೨	ಪ್ರಶ್ನೋತ್ತರ ಸಂಗ್ರಹ	೧	೦	೦	೧೨	ಜಮಾಖರ್ಚು ಪ್ರಶ್ನೋತ್ತರಮಾಲೆ	೧	೦	೦
೩	ಪ್ರಬಂಧ ಬರೆಹ	೧	೦	೦	೧೩	ಸಾಮಾನ್ಯ ವಿಜ್ಞಾನ ಪ್ರಶ್ನೋತ್ತರ ಮಾಲೆ	೦	೧೨	೦
೪	ಮಾದರಿಯ ನಿಬಂಧಗಳು	೦	೮	೦	೧೪	ಆರೋಗ್ಯ ವಿಜ್ಞಾನ ಪ್ರಶ್ನೋತ್ತರ	೦	೯	೦
೫	ಗುಣವಿವೇಚನೆ	೦	೮	೦	೧೫	ವಿಜ್ಞಾನ ಪ್ರಶ್ನೋತ್ತರಮಾಲೆ	೧	೦	೦
೬	ಪ್ರಶ್ನೋತ್ತರ ಭಾಷಾಭ್ಯಾಸ	೧	೦	೦	೧೬	ಶಾಸ್ತ್ರೀಯವಿಷಯ ಪ್ರಶ್ನೋತ್ತರ ಮಾಲೆ	೦	೯	೦
೭	ಪೌರನೀತಿ	೦	೬	೦	೧೭	ಹೊಸ ಗಣಿತ	೧	೮	೦
೮	ಇತಿಹಾಸ ಪ್ರಶ್ನೋತ್ತರಮಾಲೆ	೧	೦	೦					
೯	ಭಾರತ ರಾಜ್ಯಘಟನೆಯ ಕರಡು	೦	೪	೦					
೧೦	ಭೂಗೋಲ ಪ್ರಶ್ನೋತ್ತರಮಾಲೆ	೧	೦	೦					

ಇವಲ್ಲದೆ ನಮ್ಮಲ್ಲಿ ಎಲ್ಲ ಪ್ರಕಾರದ ಶಾಲೋಪಯೋಗಿ ಪುಸ್ತಕಗಳೂ, ಎಕ್ಸರಸಾಯಿಜ ಬುಕ್, ಪಾಟಿ ಇತ್ಯಾದಿ ಸ್ಟೇಶನರಿ ಸಾಮಾನುಗಳೂ ಠೋಕಾಗಿಯೂ ಚಿಲ್ಲರೆಯಾಗಿಯೂ ಸಿಗುತ್ತವೆ.

ಕೆ. ಎಸ್. ಕುಲಕರ್ಣಿ ಬುಕ್ ಡಿಪೋ, ಹುಬ್ಬಳ್ಳಿ

ಪ್ರಥಮ ಪದನ್ಯಾಸ

(ಧಾರವಾಡ ಬಾನುಲಿ ಕೇಂದ್ರದಲ್ಲಿ ಮಾಡಿದ ಭಾಷಣ ೪-೧-೫೧)

ಲೇಖಕರು : **ಶ್ರೀ. ವೀರೇಶ ಹಿರೇಮಠ**

[ಶ್ರೀ. ವೀರೇಶ ಹಿರೇಮಠರು, ೫-೬ ವರುಷಗಳಿಂದ ಮೂಲ-ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರು. ಉತ್ತಮ ಸಾಹಿತಿಗಳು, ವಾಗ್ಮಿಗಳೂ ಅಹುದು. ಕಿರಣ, ಶಾಂತಿ-ಸಮರ ಮೊದಲಾದ ಪುಸ್ತಕಗಳನ್ನೂ ಹೊರಡಿಸಿದ್ದಾರೆ ವಿವಿಧ ಪತ್ರಿಕೆಗಳಲ್ಲಿ ಸಾಹಿತ್ಯಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಲೇಖನಗಳನ್ನು ಬರೆದಿದ್ದಾರೆ. ಹಾಗೂ ಬರೆಯುತಲಿದ್ದಾರೆ. ಪ್ರಾಥಮಿಕ ಶಿಕ್ಷಣದ ವಾಚಕರಿಗಂತೂ ಅವರು ತುಂಬಾ ಪರಿಚಿತರು. ಪ್ರಾಥಮಿಕ ಶಿಕ್ಷಣದಲ್ಲಿ ಅವರು ಅನೇಕ ಲೇಖನಗಳನ್ನು ಬರೆದಿದ್ದಾರೆ. ಧಾರವಾಡ ಬಾನುಲಿ ಕೇಂದ್ರದವರು ಹೊಸದಾಗಿ ಯೋಚಿಸಿದ 'ಸೀಮಾ ವಿಕಾಸ' ಎಂಬ ಶೈಕ್ಷಣಿಕ ವ್ಯಾಖ್ಯಾನಮಾಲೆಯು ಶ್ರೀ ವೀರೇಶ ಹಿರೇಮಠರು, ಪ್ರಥಮ-ಪದನ್ಯಾಸ ಎಂಬ ವಿಷಯದ ಮೇಲೆ ಪ್ರಥಮ ಭಾಷಣವನು ೪-೧-೫೧ನೇ ದಿನಾಂಕ ಮಾಡಿದ್ದು, ನಮ್ಮೆಲ್ಲರಿಗೂ ವಿಶೇಷ ಅಭಿಮಾನದ ಸಂಗತಿ. ಧಾರವಾಡ ಬಾನುಲಿ ಕೇಂದ್ರ ಕೃಪೆಯಿಂದ ಪ್ರಕಟಿತವಾಗಿದೆ. —ಸಂಪಾದಕರು]

★

ಹಿರಿಯರೇ, ಸಹೋದರ ಸಹೋದರಿಯರೇ,

ಭಾರತ ವರ್ಷದಲ್ಲಿ, ಹೊಸ ಚೈತನ್ಯವು ತಲೆದೋರಿದೆ. ಹೊಸ ಹುರುಪಿನಿಂದ ಮುಂದ ಸಾಗಿದ ಭಾರತ ವರ್ಷದಲ್ಲಿ, ನಿರಭಿಮಾನದ ಕಾರ್ಗತ್ತಲೆಯು ಅಳಿದು, ಸ್ವಾಭಿಮಾನದ ಸುಪ್ರಭಾತವು ಪಸರಿಸಿದೆ. ಸ್ವಾತಂತ್ರ್ಯ ರವಿಯ ಹೊಂಬಣ್ಣದ ಕಿರಣಗಳು ನಾಡಿನ ಎಲ್ಲಾ ಕ್ಷೇತ್ರಗಳಲ್ಲಿಯೂ ಹರಡಿ, ಹೊಸ ಹುಮ್ಮಸವನ್ನು ತಂದಿವೆ. ಈ ಹೊಸ ಸ್ಫೂರ್ತಿ ಈ ನವಜೀವನ ಶಿಕ್ಷಣ ಪ್ರಪಂಚದಲ್ಲಿಯಂತೂ, ಕ್ರಾಂತಿಯ ಕಿಡಿಗಳನ್ನು ದೈದೀಪ್ಯಮಯವಾಗಿ ಬೆಳಗುವಂತೆ ಮಾಡಿವೆ.

೮-೧೦ ವರ್ಷಗಳ ಹಿಂದಿನ ಶಿಕ್ಷಣ ಪದ್ಧತಿಯು ಅನೇಕ ಬಗೆಗಳಲ್ಲಿ ಅಸಮರ್ಪಕವಾಗಿತ್ತೆಂಬುದು ಈಗ ಸ್ಪಷ್ಟವಾಗಿದೆ. ಶಿಕ್ಷಣವೆಂದರೆ ಕೇವಲ 'ಗಿಳಿಪಾಠ' ಎಂಬ ಕಲ್ಪನೆ ನಾಡಿನಲ್ಲಿ ಆಗ ಮೂಡಿತ್ತು. ಹಲಕೆಲವು ಪುಸ್ತಕಗಳನ್ನು ಓದಿ ತಿಳಿಯಲಿ, ತಿಳಿಯದೆ ಇರಲಿ, ಕೇವಲ ಪ್ರಶಸ್ತಿ-ಪತ್ರಿಕೆಗಳಿಗಾಗಿ ಪುಸ್ತಕ ಹುಳುಗಳಾಗಿ, ತಾರುಣ್ಯದ ಉಜ್ವಲ ಕಾಲಾವಧಿಯನ್ನು, ಹರಣ ಮಾಡುವ ದುರ್ದೈವ ನಮ್ಮ ನಾಡಿನದಾಗಿತ್ತು. ದೇಶದ ಉದ್ಯೋಗಗಳಲ್ಲಿ ಕಲಿತ ಜನರಿಗೆ ಆಸ್ಥೆ ಉಂಟಾಗಲಿಲ್ಲ. ಇಂತಹ ಶಿಕ್ಷಣವು ಜೀವನಕ್ಕೆ ಉಪಯುಕ್ತವಾಗಿ ಪರಿಣಮಿಸಲಿಲ್ಲ. ಶಿಕ್ಷಣದ ಧ್ಯೇಯವು ವ್ಯಕ್ತಿಯಲ್ಲಿ ಹುದುಗಿದ ಸರ್ವಶಕ್ತಿಗಳನ್ನು ಅರಳಿಸುವ ಸಾಧನವೆಂದು ಇದ್ದರೂ ಅದು ವ್ಯಾವಹಾರಿಕ ಜೀವನದಲ್ಲಿ ಸತ್ಯವಾಗಿ ತೋರಲಿಲ್ಲ. ಶಿಕ್ಷಣದಿಂದ ಶೀಲಸಂವರ್ಧನೆಯೂ ಸಾಧಿಸಲಿಲ್ಲ. ಶಿಕ್ಷಣದಿಂದ ರಾಷ್ಟ್ರಾಭಿಮಾನವೂ, ಅಂಕುರಿಸಲಿಲ್ಲ. ಒಟ್ಟಾರೆ ಹೇಳಬೇಕಂದರೆ, ಶಿಕ್ಷಣದಿಂದ ಪರಾವಲಂಬನೆಯ ಬುದ್ಧಿ ಬೆಳೆಯಿತು. ಅಂಧಾನುಕರಣ ಪ್ರವೃತ್ತಿಯು ಹೆಚ್ಚಾಯಿತು. ಸಮಾಜದಲ್ಲಿ ಬೆರೆತುಕೊಂಡು ಸಮಾಜವನ್ನು ಉನ್ನತಾವಸ್ಥೆಗೆ ಒಯ್ಯುವ ಭಾವನೆಯು ಕಲಿತವರಲ್ಲಿ ಬೆಳೆಯಲಿಲ್ಲ, ಕಲಿತವರೂ ಕಲಿಯದವರೂ ಎಂಬ ದ್ವಂದ್ವವು ಮಾತ್ರ ಸಮಾಜದಲ್ಲಿ ಉದ್ಭವಿಸಿತು.

ಶಿಕ್ಷಣದಿಂದ ಮಕ್ಕಳ ಶೀಲಸಂವರ್ಧನೆಯಾಗಬೇಕು. ದೇಹದ ಬೆಳವಣಿಗೆಗೆಯಾಗಬೇಕು. ನೀತಿಯ ನೆಲೆಗಟ್ಟು ಭದ್ರವಾಗಬೇಕು. ಶಿಕ್ಷಣವೂ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಕೈದೀವಟಿಕೆಯಾಗಬೇಕು. ಸಮಾಜದ ಸುಖವನ್ನು ಹೆಚ್ಚಿಸಿ ಸಮಾಜವನ್ನು ಜೀತನಾವಸ್ಥೆಯಲ್ಲಿಡಲು ಸಹಾಯ್ಯಕವಾಗಬೇಕು. ಜೀವನದ ಸರ್ವತೋಮುಖ ಅಭಿವೃದ್ಧಿಗೆ, ಸಾಧನವಾಗಿ, ಪ್ರೋಷಕವಾಗಬೇಕು. ಎಂಬ ಅನೇಕ ಶೈಕ್ಷಣಿಕ ತತ್ವಗಳು ಇಡೀ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಪ್ರಚಾರದಲ್ಲಿ ಬಂದವು.

ಕಾಲಪ್ರವಾಹದಲ್ಲಿ ನಾವು ಹಿಂದಕ್ಕೆ ತೇಲಿ ಹೋದರೆ, ಗತಯುಗಗಳಲ್ಲಿ ಸಂಸ್ಕೃತಿಯನ್ನುಂಟು ಮಾಡಿಕೊಂಡು, ಸುಧಾರಣೆಯ ತುತ್ತತುದಿಯನ್ನೇರಿದ, ದೇಶಗಳನ್ನು ನಾವು ಸಂದರ್ಶಿಸಬಹುದು.

ಯುರೋಪ ದೇಶದಲ್ಲಿ, ಶಿಕ್ಷಣದ ಕ್ರಾಂತಿಯ ಕಿಡಿಗಳೆದ್ದುವು. ಶಿಕ್ಷಣ ಕ್ಷೇತ್ರದಲ್ಲಿ, ವಿಷಯದ ಬದಲು ಮಗುವು ಕೇಂದ್ರವಾಯಿತು. ಶಿಕ್ಷಣವು ವಿಷಯಪ್ರಧಾನವಾಗದೆ ಶಿಶು ಪ್ರಧಾನವಾಯಿತು. ಶಿಶು ಪ್ರಧಾನಕ್ಕೆ ಹೆಣಗಾಡಿದ ಮಹಾ ಪುರುಷರು ಅನೇಕರಾಗಿದ್ದಾರೆ.

ರುಸೋ ಎಂಬ ಶಿಕ್ಷಣತಜ್ಞನು ಶಿಕ್ಷಣ ಕಾರ್ಯದಲ್ಲಿ ನಿಸರ್ಗ, ಹಾಗೂ ಸ್ವಾತಂತ್ರ್ಯಗಳ, ಮಹತ್ವವನ್ನು ಅರುಹಿ, ಶಿಕ್ಷಣದಲ್ಲಿ ಒಂದು ಅದ್ಭುತ ಕ್ರಾಂತಿಯನ್ನೇ ಎಬ್ಬಿಸಿದನು. "ಶಿಕ್ಷಣವು ಕೃತ್ರಿಮವಾದ ಕ್ರಮವಲ್ಲ. ಸಹಜವೂ, ಅವಿಚ್ಛಿನ್ನವೂ ಆದ ಒಂದು ಅನುಭವ ಪ್ರವಾಹ, ಶಿಕ್ಷಣವು ಅಂತರಂಗದಲ್ಲಿ ಉಂಟಾಗುವ ವಿಕಾಸ. ಶಿಕ್ಷಣವು ಕೇವಲ ವಿಷಯದ ಸಂಗ್ರಹವಲ್ಲ ಶಿಕ್ಷಣವು ಜೀವನವೇ ಹೊರತು ಭಾವೀ ಜೀವನದ ಪೂರ್ವ ಸಿದ್ಧತೆಯಲ್ಲ ನಿಸರ್ಗವೇ ಶಿಕ್ಷಣದ ಕೇಂದ್ರ, ನೈಸರ್ಗಿಕ ಸನ್ನಿವೇಶಗಳೇ ಶಿಕ್ಷಣದ ತಳಹದಿ. ಓದಾಳಿಯಾದ ಬಾಲಕನು, ವಿಚಾರ ಮಾಡುವದಿಲ್ಲ. ಕೇವಲ ಓದುತ್ತಾನೆ. ಮಗುವು ಶಿಕ್ಷಣ ಕಾರ್ಯದ ಕೇಂದ್ರ. ಮಗುವಿನ ಸ್ವಭಾವವನ್ನೇ ಅರಿತುಕೊಳ್ಳುವದು ಶಿಕ್ಷಣದ ನೆಲೆಗಟ್ಟು. ಇವೆಲ್ಲ ವಿಚಾರಗಳು ಕ್ರಾಂತಿಕಾರಕ ರೂಸೋನ ಶೈಕ್ಷಣಿಕ ತತ್ವಗಳು. ಅತಿ ಪುರಾತನವಾದ ಹಾಗೂ ಸಾಂಪ್ರದಾಯಕವಾದ ಶಿಕ್ಷಣದಿಂದಾಗುವ ಅನಿಷ್ಟಗಳನ್ನು, ಬಹಿರಂಗವಾಗಿ ಖಂಡಿಸಿದ ಪ್ರಬೋಧಕ ರೂಸೋ, ಆಧುನಿಕ ಶಿಕ್ಷಣದ ಸಮಗ್ರ ವಿಚಾರಗಳ ಉತ್ಪಾದಕನು ರೂಸೋ, ಶೈಕ್ಷಣಿಕ ದೃಷ್ಟಿಯಿಂದ ರೂಸೋ ಆಧುನಿಕ ಯುಗಪುರುಷ. ಬಾಲಕರ ಯುಗವನ್ನು ಪ್ರಾರಂಭಿಸಿದ ಶ್ರೇಯಸ್ಸು ರುಸೋನಿಗೆ ಸಲ್ಲುವದು.

ರುಸೋನ ನಂತರ ಪೆಸ್ಟಲಾಜಿಯು ಪ್ರಯೋಗದ ಮುಖಾಂತರ ಶಿಕ್ಷಣ ಸಾಗಿಸಬೇಕೆಂದು ಪ್ರತಿಪಾದಿಸಿದನು. ಕೆಲಸದ ಮುಖಾಂತರ ಶಿಕ್ಷಣ ನಾಗಿಸಬೇಕೆಂದೂ ಹಾಗೂ ಮಾಡುತ್ತ ಕಲಿ ಎಂಬ ತತ್ವವನ್ನು ಪೆಸ್ಟಲಾಜಿಯು ಬಳಿಕೆಯಲ್ಲಿ ತಂದನು. ಶಿಕ್ಷಣವು ಸಾರ್ವತ್ರಿಕವಾಗಿ ಸಮಾಜ ಸುಧಾರಣೆಯ ಮುಖ್ಯ ಸಾಧನವಾಗಬೇಕೆಂಬುವೇ ಪೆಸ್ಟಲಾಜಿಯ ಅಭಿಪ್ರಾಯ. ಶಿಕ್ಷಣವು ಕೇವಲ ಶಬ್ದಗಳ ಮುಖಾಂತರ ಸಾಗದೆ, ವಸ್ತುಗಳ ಮುಖಾಂತರ, ಚಟುವಟಿಕೆಗಳ ಮುಖಾಂತರ ಸಾಗಬೇಕೆಂದು ಪೆಸ್ಟಲಾಜಿಯು ತಿಳಿಸಿ ಕೊಟ್ಟನು. ಅವನ ವೈಶಿಷ್ಟ್ಯವೇನಂದರೆ ಶಾಲೆಯ ವಾತಾವರಣದಲ್ಲಿ, ಅವನು ಉಂಟುಮಾಡಿದ ಕ್ರಾಂತಿ. ಶಾಲೆಯೆಂದರೆ ಭಯಾನಕ ಹಾಗೂ ಬಲಾತ್ಕಾರ ಜುಗುಪ್ಸೆಗಳಿಂದ ತುಂಬಿದ ಸಂಸ್ಥೆ ಎಂಬ ಭಾವನೆ ಮಕ್ಕಳಲ್ಲಿ ಹರಡಿತ್ತು. ಈ ಭಯಪ್ರೇರಕ ವಾತಾವರಣದ ಬದಲಾಗಿ, ಪ್ರೀತಿ-ವಿಶ್ವಾಸಗಳಿಂದ ಕೂಡಿದ, ಆನಂದದಾಯಕ ಗೃಹ ವಾತಾವರಣವು ಶಾಲೆಯಲ್ಲಿ ವ್ಯಾಪಿಸಬೇಕೆಂದು ಪೆಸ್ಟಲಾಜಿಯು ಪ್ರತಿಪಾದಿಸಿದನು.

ಹರ್ಬಾರ್ಟನು ೧೮ನೇ ಶತತಮಾನದ ಶಿಕ್ಷಣಸುಧಾರಕನು. ಜ್ಞಾನನಿವೇದನ ಕಾಲಕ್ಕೆ, ಮಕ್ಕಳ ಮನಶ್ಶಾಸ್ತ್ರದ ಅರಿವು ಶಿಕ್ಷಕನಲ್ಲಿರುವದು ಅತ್ಯವಶ್ಯವೆಂದು ಹರ್ಬಾರ್ಟನ ಪ್ರತಿಪಾದನೆ. ಇಂದ್ರಿಯಸಂಸ್ಕಾರಗಳಿಂದ ಮನಸ್ಸು ವಿಕಾಸ ಹೊಂದುತ್ತಿರುವದು. ಇಂದ್ರಿಯ ಸಂಸ್ಕಾರಗಳು ಭಾವಸಾಹಚರ್ಯದ ತತ್ವಕ್ಕನುಸರಿಸಿ, ಜೊತೆಗೊಂಡು ಕಲ್ಪನೆಗಳು ರೂಪಗೊಳ್ಳುತ್ತವೆ. ಕಲ್ಪನೆಗಳ ಪರಸ್ಪರ ಕ್ರಿಯೆಯಿಂದ ವಿಚಾರ, ಅನುಮಾನ, ನಿರ್ಣಯ ಮುಂತಾದ ಕಾರ್ಯಗಳು

ಸಾಗುತ್ತವೆ. ಈ ಇಂದ್ರಿಯ ಸಂಸ್ಕಾರಗಳೇ ಮಗುವಿನ ಮನಸ್ಸನ್ನು ವಿಕಾಸಗೊಳಿಸುವ ಮುಖ್ಯ ಸಾಧನಗಳು. ಇಂದ್ರಿಯ ಸಂಸ್ಕಾರಗಳನ್ನು ಪಡೆದು ಬಾಲಕನು ಸುವಿಚಾರಿಯಾಗುವಂತೆ ಮಾಡುವದೇ ಹರ್ಬಾರ್ಟನ ಶೈಕ್ಷಣಿಕ ತತ್ವ. ಮಕ್ಕಳ ಸ್ವಭಾವದಲ್ಲಿ, ಧರ್ಮವನ್ನೂ ನೀತಿಯನ್ನೂ ಬೆರಿಸುವದೇ ಶಿಕ್ಷಣದ ಧ್ಯೇಯವೆಂದು ಹರ್ಬಾರ್ಟನ ಅಭಿಪ್ರಾಯ. ಈ ಧ್ಯೇಯವನ್ನು ಸಾಧಿಸಬೇಕಾದರೆ ಮಕ್ಕಳಲ್ಲಿದ್ದ ಕಲ್ಪನಾ ವಿಲಾಸವನ್ನು ಅವರ ಗ್ರಹಣ ಶಕ್ತಿಯನ್ನು ಚನ್ನಾಗಿ ಅರಿತುಕೊಳ್ಳುವದು ಅವಶ್ಯ. ಮಕ್ಕಳ ಆಸಕ್ತಿಯು ಕೇವಲ ಶಾಲೆಯ ವಿಷಯಗಳಲ್ಲಿ ಇರದೆ, ಜೀವನದಲ್ಲಿ ಸದಾ ಆನಂದವನ್ನು ಈಯಬಲ್ಲ ಹಲವು ಸಾಮಾನ್ಯ ವಿಷಯಗಳಲ್ಲಿಯೂ ಇರಬೇಕು. ಜೀವನದಲ್ಲಿ ಮನರಂಜನೆಯನ್ನು ಮಾಡಬಲ್ಲ ಅನೇಕ ವಿಷಯಗಳಲ್ಲಿ ಅಭಿರುಚಿಯು ಇರಬೇಕು. ಜೀವನದ ಬಗ್ಗೆ ಆಸಕ್ತಿಯು ಬಹು ಮುಖವಾಗಿರಬೇಕು. ಅಂದರೆ ಮಾತ್ರ ಮಕ್ಕಳ ಜೀವನವು ಸರ್ವಾಂಗಸುಂದರವಾಗುವದು.

ಜರ್ಮನಿಯ ಶಿಕ್ಷಣ ತಜ್ಞನಾದ ಫ್ರೊಬೆಲ್ಲನು ೧೯ನೇ ಶತಮಾನದ ಪ್ರಾರಂಭದಲ್ಲಿ, ಕಿಂಡರ ಗಾರ್ಟನ ಎಂಬ ಪದ್ಧತಿಯನ್ನು ಪ್ರಚಾರದಲ್ಲಿ ತಂದನು. ಕಿಂಡರ ಗಾರ್ಟನ ಎಂಬ ಜರ್ಮನ ಶಬ್ದಕ್ಕೆ ಮಕ್ಕಳ ತೋಟವೆಂದರ್ಥ- ಕಿಂಡರಗಾರ್ಟನಕ್ಕೆ ಶ್ರೀ. ಹಂದ್ರಾಳರವರು ಬಾಲೋದ್ಯಾನವೆಂದು ಕರೆದಿರುವರು. ಫ್ರೊಬೆಲ್ಲನು ಬಾಲ್ಯದಿಂದಲೂ ನಿಸರ್ಗಪ್ರೇಮಿಯಾದುದರಿಂದ, ಅವನ ಮನಸ್ಸು ಆಧ್ಯಾತ್ಮಿಕ ವಿಷಯಗಳ ಕಡೆಗೆ ಸಹಜವಾಗಿ ಧಾವಿಸಿತು. ಚಿಕ್ಕ ಮಕ್ಕಳನ್ನು ಎಳೆಯ ಸಸಿಗಳಂತೆ ಅವರ ಸ್ವಭಾವಕ್ಕನುಗುಣವಾಗಿ, ಬೆಳೆಸಬೇಕೆಂಬ ಉದ್ದೇಶವೇ ಅವನ ತತ್ವ. ಶಾಲೆಯೇ ತೋಟ, ಗುರುಗಳೇ ತೋಟಿಗರು, ನೆಲವನ್ನು ಹದಗೊಳಿಸಿ, ಬಿಸಿಲು, ಗಾಳಿ, ನೀರು ಚನ್ನಾಗಿ ಸಸಿಗಳಿಗೆ ಸಿಗುವಂತೆ ಏರ್ಪಡಿಸಿ ಅವಕ್ಕೆ ಸರಿಯಾದ ಗೊಬ್ಬರವನ್ನಿಟ್ಟರೆ ಮುಂದೆ ಆ ಸಸಿಗಳು ಹುಲುಸಾಗಿ ಬೆಳೆದು ಒಳ್ಳೇ ಹೂಗಳನ್ನೂ, ಫಲಗಳನ್ನೂ ಕೊಡುವವು. ಹಾಗೆಯೇ ಪರಮಾತ್ಮನ ಮಹಿಮೆಯನ್ನೂ, ಗೂಢವಾದ ದೈವಿಕ ತತ್ವವನ್ನೂ, ಮಕ್ಕಳು ಅರಿತುಕೊಳ್ಳಲಿಕ್ಕೆ ನಿಸರ್ಗದ ಸಂಪರ್ಕವು ಅತ್ಯಗತ್ಯ. ಮಕ್ಕಳಲ್ಲಿ ಸ್ವಾಭಾವಿಕವಾದ ಶಕ್ತಿಗಳಿಗೆ ತಕ್ಕ ಕೃಷಿಮಾಡಿ ಅವು ಸ್ಫೂರ್ತಿಗೆ ಬರುವಂತೆ ಮಾಡಿದರೆ ಮುಂದೆ ಅವು ತಾವಾಗಿಯೇ ಜ್ಞಾನಾರ್ಜನೆ ಮಾಡಲು ಶಕ್ತರಾಗುವವೆಂದು ಫ್ರೊಬೆಲ್ಲನ ಮತ. ಬಾಲೋದ್ಯಾನ ಕ್ರಮದಲ್ಲಿ ಶಿಕ್ಷಕನು ಮಕ್ಕಳ ಯೋಗ್ಯ ವಿಕಾಸಕ್ಕೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ಅವರು ತಮ್ಮ ಸ್ವಭಾವಕ್ಕೆ ಅನುಸರಿಸಿ ಬೆಳೆಯುವಂತೆ ಸಹಾಯ್ಯಮಾಡಿದನು.

ಬಾಲೋದ್ಯಾನ ಶಾಲೆಯು ೩-೭ ವಯಸ್ಸಿನ ಚಿಕ್ಕ ಮಕ್ಕಳಿಗೆ ಇರುತ್ತದೆ. ಮಕ್ಕಳ ಅಂತಃಶಕ್ತಿಗಳು ವಿಕಾಸ ಹೊಂದುವಂತೆ ಮಾಡಬೇಕಾದರೆ ಮಕ್ಕಳ ಸಹಜಪ್ರವೃತ್ತಿಗಳನ್ನು ಒಲವು ನಿಲವುಗಳನ್ನು ಆಶೆ ಆಕಾಂಕ್ಷೆಗಳನ್ನು ಅನುಸರಿಸಿ ಸಾಗಬೇಕು. ಮಕ್ಕಳು ಸ್ವಾಭಾವಿಕವಾಗಿ ಕೃತಿಪ್ರೇಮಿಗಳು. ಮಕ್ಕಳಿಗೆ ಆಟಗಳೆಂದರೆ ಬಲು ಪ್ರೀತಿ. ಮಕ್ಕಳ ಶಿಕ್ಷಣವು ಆಟಗಳ ಮುಖಾಂತರವೇ ಸಾಗಬೇಕು. ಆಟವೇ ಪಾಠವಾಗಬೇಕು. ಪಾಠವೇ ಆಟವಾಗಬೇಕು. ಆಟಗಳಿಗೆ ಮಾತ್ರ ಒಂದು ನಿರ್ದಿಷ್ಟ ಉದ್ದೇಶವೂ ಹಾಗೂ ಒಂದು ನಿಶ್ಚಿತ ಕ್ರಮವೂ ಇರಬೇಕು. ಆಟಗಳು ಮಕ್ಕಳ ಅವಯವಗಳಿಗೆ ಇಂದ್ರಿಯಗಳಿಗೆ ತರಬೇತಿ ಕೊಟ್ಟು ಬುದ್ಧಿಯನ್ನು ಬಲಿಸಿ ಚುರುಕುತನ ಹೆಚ್ಚಾಗಲು ಸಾಧನವಾಗಬೇಕು. ಮಕ್ಕಳ ಕಲ್ಪನಾ ವಿಕಾಸಕ್ಕೆ, ರಚನಾಕೌಶಲ್ಯಕ್ಕೆ ಆಟವು ಪ್ರೇರಣೆಯನ್ನು ಕೊಡಬೇಕು. ಮಕ್ಕಳ ಶಿಕ್ಷಣದ ಸಾಧನಗಳೆಂದು ಫ್ರೊಬೆಲ್ಲನು ಅನೇಕ ಉಪಕರಣಗಳ ಪಟ್ಟಿಯೊಂದನ್ನು ಸಿದ್ಧಪಡಿಸಿದನು. ಬಣ್ಣದ ಚಂಡುಗಳು, ಭಿನ್ನ ಭಿನ್ನ ಬಣ್ಣದ ಕಾಗದಗಳು, ಕಟ್ಟಿಗೆಯ ಸಿಲಿಂಡರಗಳು, ರಟ್ಟು, ಕಡ್ಡಿ ಬಳೆಗಳು ಮೊದಲಾದ ವಸ್ತುಗಳೇ ಅವನ ಉಪಕರಣಗಳು. ಮಕ್ಕಳು ಈ ಉಪಕರಣಗಳಿಂದ ಆಟವಾಡುವಾಗ ಅವರಿಗೆ ನಾನಾ ತರದ ಬಣ್ಣ, ಆಕೃತಿಗಳ, ಜ್ಞಾನವಾಗುವದು.

ರಟ್ಟನ್ನು, ಕಾಗದವನ್ನು ಕತ್ತರಿಸಿ ನಾನಾತರದ ಆಕೃತಿಗಳನ್ನು ರಚಿಸುವಾಗ ಮಕ್ಕಳು ತಮ್ಮ ರಚನಾ ಕೌಶಲ್ಯವನ್ನೂ, ಶೋಧಕ ಬುದ್ಧಿಯನ್ನೂ, ಬೆಳೆಸಿಕೊಳ್ಳುತ್ತಾರೆ. ಕಾಗದವನ್ನು ಕತ್ತರಿಸುವಾಗ ಮಕ್ಕಳಿಗೆ ತಳ, ರೇಖೆ, ಬಿಂದು, ವ್ಯಾಸ, ಕ್ಷೇತ್ರ ಮೊದಲಾದವು-

ಗಳ ಜ್ಞಾನವಾಗುತ್ತದೆ. ಮಕ್ಕಳಿಗೆ ನಿಸರ್ಗದ ವಸ್ತುಗಳಲ್ಲಿ ಆಸ್ಥೆ ಬಹಳ. ಗಿಡ, ಬಳ್ಳಿ, ಹೂವು, ಕಾಯಿ, ಪಶು, ಪಕ್ಷಿ, ಮಳೆ, ಮೋಡ, ಸೂರ್ಯ, ಚಂದ್ರ, ನಕ್ಷತ್ರ ಮುಂತಾದವುಗಳನ್ನು ನೋಡಿ ಹಿರಿ ಹಿರಿಹಿಗ್ಗದ ಮಕ್ಕಳು ಅತಿ ವಿರಳ. ಮಕ್ಕಳ ಈ ನಿಸರ್ಗ ಪ್ರೇಮವನ್ನು ಬೆಳೆಯಿಸುವದಕ್ಕಾಗಿ ಫ್ರೊಬೆಲ್ಲನು ಪ್ರಕೃತಿವಿಮರ್ಶೆಗೆ ಹೆಚ್ಚಿನ ಪ್ರಾಶಸ್ತ್ಯೆಯನ್ನು ಕೊಟ್ಟಿದ್ದಾನೆ. ವ್ಯವಸಾಯಗಳಲ್ಲಿ ಮಕ್ಕಳ ಅಭಿರುಚಿ ಹೆಚ್ಚಾಗಿರುವದರಿಂದ ಕಾಗದ ಹಾಗೂ ರಟ್ಟುಗಳಲ್ಲಿ ಆಕೃತಿಗಳನ್ನು ಕತ್ತರಿಸುವದು, ಮಣ್ಣಿನಿಂದ ಗೊಂಬೆಗಳನ್ನು ತಯ್ಯಾರ ಮಾಡುವದು. ಕಟ್ಟಿಗೆಗಳಲ್ಲಿ ಚಿತ್ರಗಳನ್ನು ಕೆತ್ತುವದು, ಚಾಪೆ, ಬುಟ್ಟಿ ಮುಂತಾದವುಗಳನ್ನು ಹೆಣೆಯುವದು, ನೂಲುವದು, ನೇಯುವದು, ಕಸೂತಿ ಹಾಕುವದು, ಚಿತ್ರ ತೆಗೆಯುವದು, ಇವೇ ಮೊದಲಾದ ವ್ಯವಸಾಯಗಳನ್ನು ಫ್ರೊಬೆಲ್ಲನು ಕಿಂಡರ ಗಾರ್ಟನ ಪದ್ಧತಿಯಲ್ಲಿ ಪ್ರಚಾರದಲ್ಲಿ ತಂದನು. ಚಿಕ್ಕಮಕ್ಕಳಿಗೆ ಸಂಗೀತ ಹಾಗೂ ಅಭಿನಯದಲ್ಲಿ ಅಭಿರುಚಿ ಇರುವದರಿಂದ ಮಕ್ಕಳು ಆಟವಾಡುವಾಗ ಇಲ್ಲವೆ ಕೈಕೆಲಸ ಮಾಡುವಾಗ ಅವುಗಳಿಗೆ ಸರಿಯಾಗುವಂತೆ ಏರ್ಪಡಿಸಿ ಹಾಡುಗಳನ್ನು ಹಾಡಲು ಅನುವು ಮಾಡಿಕೊಟ್ಟನು. ಫ್ರೊಬೆಲ್ಲನ ಶಿಕ್ಷಣ ತತ್ವವು.ಆಧ್ಯಾತ್ಮಿಕದ ಆಗರವು ಶೀಲಸಂವರ್ಧನೆಯ ಸಾಧನವು.

೧೯ನೇ ಶತಮಾನದ ಆದಿಭಾಗದಲ್ಲಿ ಮೇರಿಯಾ-ಮಾಂಟೇಸರಿಯವರು ಚಿಕ್ಕಮಕ್ಕಳ ಶಿಕ್ಷಣದಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದರು. ದುರ್ಬಲ ಮಕ್ಕಳಿಗಾಗಿಯೂ, ಬಡವರ ಮಕ್ಕಳಿಗಾಗಿಯೂ ಮಕ್ಕಳ ಮನೆ ಎಂಬ ಕಟ್ಟಡಗಳನ್ನು ಕಟ್ಟಿಸಿದರು. ಜೀವನದ ಸಾಮಾನ್ಯವಾದ ಕೆಲಸಗಳನ್ನು ಬಾಲಕರು ತಮ್ಮಷ್ಟಕ್ಕೆ ತಾವೇ ಮಾಡಿಕೊಂಡು ಹೋಗುವಂತೆ ಅವರನ್ನು ಶಕ್ತರನ್ನಾಗಿ ಮಾಡುವದೇ ಮಾಂಟೇಸರಿಯವರಮುಖ್ಯತತ್ವ. ಈ ಪದ್ಧತಿಯಲ್ಲಿ ಇಂದ್ರಿಯಗಳ ಮೂಲಕ ನಡೆಯುವ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದೆ. ಇಂದ್ರಿಯಗಳನ್ನು ತರಬೇತು ಮಾಡುವ ವಿಷಯದಲ್ಲಿ ಒಂದು ಉತ್ಕೃಷ್ಟವಾದ ಉಪಕರಣವನ್ನು ಹುಡುಕಿ ತೆಗೆದರು.

ಈ ಉಪಕರಣದ ಮುಖಾಂತರ ವಸ್ತುವಿನ ಗಾತ್ರ-ಭಾರ,ನುಣುಪು ಮೊದಲಾದವುಗಳ ಕಲ್ಪನೆಯಾಗುವದು. ಬಾಲಕರು ಏನಾದರೂ ತಪ್ಪುಮಾಡಿದರೆ ತಾವು ಮಾಡಿದ ತಪ್ಪನ್ನು ತಾವೇ ಕಂಡುಕೊಳ್ಳಲಿಕ್ಕೆ ಬರುವಂತಿದೆ. ಬಾಲಕರ ಸ್ವಶಿಕ್ಷಣಕ್ಕೆ ಈ ಪದ್ಧತಿಯಲ್ಲಿ ಹೆಚ್ಚಿನ ಪ್ರಾಧಾನ್ಯವಿದೆ. ಮಾಂಟೇಸರಿ ಶಾಲೆಗಳಲ್ಲಿ ಶಿಕ್ಷಕರು ಕಲಿಸುವವರಲ್ಲ, ಕೇವಲ ಮಾರ್ಗದರ್ಶಕರು. ಈ ಪದ್ಧತಿಯಲ್ಲಿ ವರ್ಗ-ಶಿಕ್ಷಣ ಇಲ್ಲವೇ ಇಲ್ಲ. ವ್ಯಕ್ತಿ-ಶಿಕ್ಷಣವು ಸಾಗುವದು.

ಪಾಶ್ಚಿಮಾತ್ಯ ದೇಶದಲ್ಲಿ ಪುಸ್ತಕೀಯ ವಿದ್ಯೆಯನ್ನು ಖಂಡಿಸಿ ವ್ಯವಹಾರಿಕ ಶಿಕ್ಷಣಕ್ಕೆ ಸಾಕಷ್ಟು ಮಹತ್ವವನ್ನು ಕೊಟ್ಟರು. ಹಿಂದುಸ್ಥಾನದಲ್ಲಿ ಮಾತ್ರ ವ್ಯವಹಾರಿಕ ಶಿಕ್ಷಣವು ಪ್ರಾರಂಭವಾಗಲಿಲ್ಲ. ಪರಕೀಯರ ಆಳಿಕೆಯ ಪ್ರಭಾವದಿಂದ ಪರಕೀಯರ ಭಾಷೆಯಲ್ಲಿ ನಮ್ಮ ಶಿಕ್ಷಣವು ಸಾಗಿತ್ತು. ಉತ್ತಮ ಕರಣಿಕರನ್ನು ತಯ್ಯಾರ ಮಾಡುವ ಉದ್ದೇಶದಿಂದ ಬ್ರಿಟಿಷರು ಶಿಕ್ಷಣಪ್ರಚಾರವನ್ನು ಮಾಡಿದರು. ರಾಜಾ ರಾಮಮೋಹನರಾಯರಂಥ ತೇಜಸ್ವಿ ಪುರುಷರುಷರು ಕೂಡ ಬ್ರಿಟಿಷರ ಶಿಕ್ಷಣಕ್ಕೆ ಸ್ವಾಗತವನ್ನಿತ್ತರು. ಈ ಶಿಕ್ಷಣಕ್ಕೆ ಪ್ರತಿಕ್ರಿಯೆಯು ಪ್ರಾಂಭವಾಗದೇ ಉಳಿಯಲಿಲ್ಲ. ಬಂಗಾಲಿಯ ಬ್ರಹ್ಮ ಸಮಾಜದವರೂ, ಪಂಜಾಬದ ಆರ್ಯಸಮಾಜದವರೂ ಅಲೀಗಡದ ಮುಸ್ಲೀಮರೂ, ಅನೇಕ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಿದರು.

ಅದೇ ಕಾಲಕ್ಕೆ ಭಾರತೀಯ ಸಂಸ್ಕೃತಿಯನ್ನು ಪ್ರಚಾರ ಮಾಡುವ ಉದ್ದೇಶದಿಂದ ಕವಿರವೀಂದ್ರರು ಶಾಂತಿನಿಕೇತನ ಹಾಗೂ ಶ್ರೀನಿಕೇತನ ಸ್ಥಾಪಿಸಿದರು. ಭಾರತೀಯ ಶೈಕ್ಷಣಿಕ ದೃಷ್ಟಿಯಿಂದ ೧೯೩೭ನೇ ವರ್ಷವು ಒಂದು ನವಮನ್ವಂತರ. ಯಾವುದಾದರೊಂದು ಕೈಗಾರಿಕೆಯ ಉದ್ಯೋಗದ ಮುಖಾಂತರ ಶಿಕ್ಷಣವನ್ನು ಕೊಡಬೇಕೆಂದು ಮಹಾತ್ಮಾಜಿಯವರು ಪ್ರತಿಪಾದಿಸಿದರು. ಗಾಂಧೀಜಿಯವರ ಮೂಲ ಶಿಕ್ಷಣವು ಅಹಿಂಸೆ ಹಾಗೂ ಆಧ್ಯಾತ್ಮದ ನೆಲೆಯಿಂದ ಪುಟಿಯುತ್ತದೆ. ಶಿಕ್ಷಣದಿಂದ ಮಗುವಿನ ಸಮನ್ವಿತ ವಿಕಾಸವಾಗಬೇಕು. ಸಾಕ್ಷರತೆಯು ಶಿಕ್ಷಣವಲ್ಲ, ಎಂದು ಮಹಾತ್ಮಾಜಿಯವರು ಸಂದೇಶವನ್ನು ಕೊಟ್ಟರು ಹಾಗೂ **ಹರಿಜನ**

ಪತ್ರಿಕೆಯಲ್ಲಿ ರಾಷ್ಟ್ರೀಯ ಶಿಕ್ಷಣದಲ್ಲಿ ಬೌದ್ಧಿಕ ಶಿಕ್ಷಣದ ಸಂಗಾತಿಯಾಗಿ ಕೈಗಾರಿಕೆ ಕಲಿಸಬೇಕೆಂದು ನನ್ನ ಸೂಚನೆ ಅಲ್ಲ. ಕೈಗಾರಿಕೆಯು ಬುದ್ಧಿಯನ್ನು ವಿಕಸಿಸುವ ಸಾಧನವಾಗಬೇಕು. ಉದ್ಯಮವು ಮಕ್ಕಳ ದೈಹಿಕ, ಬೌದ್ಧಿಕ, ನೈತಿಕ, ಶಕ್ತಿಗಳನ್ನು ಸ್ಫೂರ್ತಿಗೊಳಿಸುವ ಸಾಧನವಾಗಬೇಕು. ಶಿಕ್ಷಣವು ಮಾತೃಭಾಷೆಯ ಮುಖಾಂತರವೇ ಸಾಗಬೇಕೆಂದು ಗಾಂಧೀಯವರ ಅಭಿಪ್ರಾಯ. ಉತ್ಪಾದಕ ಉದ್ಯಮವೇ ಶಿಕ್ಷಣದ ಕೇಂದ್ರವಾಗಬೇಕು. ಈ ಶಿಕ್ಷಣವು ನಯೀತಾಲೀಮು ಎಂದು ಪ್ರಸಿದ್ಧಿಯನ್ನು ಪಡೆದಿದೆ. ನಯೀತಾಲೀಮು ಎಂದರೆ ಹೊಸ ಶಿಕ್ಷಣ. ಶಿಕ್ಷಣದಲ್ಲಿ ಹೊಸ ದೃಷ್ಟಿ. ವಿಷಯ ಪ್ರಾಧಾನ್ಯದ ಬದಲಾಗಿ ಶಿಕ್ಷಣವು ಮಗು ಪ್ರಾಧಾನ್ಯವಾಯಿತು. ಮಗುವಿನಲ್ಲಿ ಹುದುಗಿದ ಉತ್ತಮಾಂಶಗಳನ್ನೆಲ್ಲ ಶಾರೀರಿಕ, ಮಾನಸಿಕ, ನೈತಿಕ ಪೋಷಣೆಯ ದೃಷ್ಟಿಯಿಂದ ಬೈಲಿಗೆಳೆಯುವ ವಿಧಾನವೇ ಶಿಕ್ಷಣವು. ಬಾಲಕನ ಸರ್ವಾಂಗೀಣ ವಿಕಾಸವೇ ಶಿಕ್ಷಣದ ಗುರಿ ಎಂದು ಗಾಂಧೀಜಿಯವರು ಸಾರಿದರು. ಈ ಹೊಸ ಶಿಕ್ಷಣವು ಧರ್ಮ, ತತ್ವಜ್ಞಾನ, ನೀತಿಶಾಸ್ತ್ರಗಳ ಮೂಲ ಸೂತ್ರಗಳನ್ನು ತನ್ನ ಮಂದಿರದ ತಳಹದಿಯನ್ನಾಗಿ ಅಳವಡಿಸಿಕೊಂಡಿದೆ. ಡಾಕ್ಟರ ಝಾಕೀರ ಹುಸೇನರ ಅಭಿಪ್ರಾಯದಲ್ಲಿ ಈ ಹೊಸ ಶಿಕ್ಷಣವು ಹೊಸ ಜೀವನದ ಕುರುಹು ಆಗಿದೆ. ಈ ಶಿಕ್ಷಣವು ಶ್ರಮದ ಬೆವರಿನ ಹನಿಯನ್ನು ಮುತ್ತನ್ನಾಗಿ ಮಾಡಬಲ್ಲದು. ಮಕ್ಕಳು ಕೃತಿಗಳನ್ನು ನೆರವೇರಿಸುವಾಗ ಸಾಕಷ್ಟು ಸ್ವಾತಂತ್ರ್ಯ ವೈಯಕ್ತಿಕತೆ ಇದೆ. ವೃತ್ತಿ ಮೂಲಶಿಕ್ಷಣದಿಂದ ಮಕ್ಕಳಲ್ಲಿ ರಚನಾಪ್ರವೃತ್ತಿ ಪ್ರಚೋದನೆಯಾಗಿ ಕಲಾಕೃತಿ ಹೊರಹೊಮ್ಮಿ ನೈಜವಾದ ಆನಂದವು ಮಕ್ಕಳಿಗೆ ದೊರೆಯುವದು. ಜೀವನದ ವಿವಿಧ ಚಟುವಟಿಕೆಗಳ ಮುಖಾಂತರ ಶಿಕ್ಷಣ ಸಾಗುವದರಿಂದ ಜೀವಿಸುವ ಕಲೆಯನ್ನು ಮಕ್ಕಳು ಸ್ವಾಭಾವಿಕವಾಗಿ ಕಲಿಯುವರು. ಕಾಯಕವೇ ಕೈಲಾಸ ಎಂಬ ತತ್ವವನ್ನು ಆಚರಿಸುವ ದುಡಿಮೆಗಾರರನ್ನು ಸಿದ್ಧಪಡಿಸುವದು. ಈ ಶಿಕ್ಷಣದ ಪರಿಣಾಮವಾಗಿ ಕ್ರಿಯಾತ್ಮಕ ಶಿಸ್ತುಳ್ಳ ಸಮಾಜವು ನಿರ್ಮಾಣವಾಗುವದು. ನಿಶ್ಚಿತ. ಈ ಶಿಕ್ಷಣದಿಂದ ಶಾಂತಿಯೋಧರು ನಿರ್ಮಾಣವಾಗುವರೆಂದು ಶ್ರೀ ಹಂದ್ರಾಳರವರು ಅಭಿಪ್ರಾಯಪಡುತ್ತಾರೆ. ತೇಜಸ್ಸುಳ್ಳ ಆತ್ಮವಿಶ್ವಾಸವುಳ್ಳ ಉಜ್ವಲ ರಾಷ್ಟ್ರಾಭಿಮಾನಿಗಳನ್ನು ನಿರ್ಮಾಣ ಮಾಡುವ ಯೋಜನೆಯೇ ಈ ರಾಷ್ಟ್ರೀಯ ಶಿಕ್ಷಣ.

ಜೈ ಭಾರತ

ಆಧಾರ ಗ್ರಂಥಗಳು.

೧. ಐವರು-ಶಿಕ್ಷಣ ಸುಧಾರಕರು ಶ್ರೀ ತಂಬದ ಹಾಗೂ ಶ್ರೀ ಹಂದ್ರಾಳ.

೨. ಮೂಲ-ಶಿಕ್ಷಣ ಶ್ರೀ ಹಂದ್ರಾಳ.

೩. ರಾಷ್ಟ್ರೀಯ ಶಿಕ್ಷಣ ಶ್ರೀ ದಿವಾಕರ.



ಬಹುವರ್ಗಗಳನ್ನು ಕಲಿಸುವ ಸಮಸ್ಯೆ

ಲೇಖಾಂಕ : ೨

ಲೇಖಕರು : ಶ್ರೀ. ವೀ. ಬ. **ಚವಣ್ಣವರ** ಬಿ.ಎಸ್‌ಸಿ.,ಬಿ.ಟಿ.

★

ಬಹು ವರ್ಗಗಳನ್ನು ಕಲಿಸುವ ಸಮಸ್ಯೆಯು ಬಿಡಿಸ-ಲಾರದ ಒಂದು ಸಮಸ್ಯೆಯಾಗಿದೆ; ಮತ್ತು ಅದು ಅನಿ-ವಾರ್ಯವಾದ ತೊಂದರೆಯಾಗಿದೆ ಎಂದು ಹಿಂದಿನ ಲೇಖ-ದಲ್ಲಿ ಹೇಳಲಾಗಿದೆ. ಆದರೆ ಇದಕ್ಕೆ ನಾವು ಎದೆಗುಂದ ಬೇಕಾಗಿಲ್ಲ. ಇದೇನು ನಮ್ಮದಷ್ಟೇ ಸಮಸ್ಯೆಯಲ್ಲ. ಜಗತ್ತಿನಲ್ಲಿ ಒಳ್ಳೇ ಮುಂದುವರಿದ ರಾಷ್ಟ್ರವೆನಿಸಿದ ಅಮೇರಿಕೆಯ ಸಂಯುಕ್ತಸಂಸ್ಥಾನಗಳಲ್ಲಿ ಕೂಡ ನಮ್ಮಷ್ಟೇ ದೊಡ್ಡ ಪ್ರಮಾಣದಲ್ಲಿ ಈ ವಸ್ತುಸ್ಥಿತಿಯು ಕಂಡುಬರುವದು. ಅಮೇರಿಕೆಯಲ್ಲಿ ಕೂಡ ಈ ಚಿಕ್ಕ ಶಾಲೆಗಳು ಸಾಮಾನ್ಯವಾಗಿವೆ. ಅಲ್ಲಿಯೂ ನೂರಕ್ಕೆ ೮೨ರಷ್ಟು ಶಾಲೆಗಳು ಒಬ್ಬ ಅಥವಾ ಇಬ್ಬರು ಶಿಕ್ಷಕರು ಮಾತ್ರ ಕೆಲಸ ಮಾಡುತ್ತಿರುವ ಶಾಲೆಗಳು ಆಗಿರುವವು. ಇದಲ್ಲದೆ ಅಲ್ಲಿ ಇಂಥ ಚಿಕ್ಕ ಸಾಲೆಗಳಲ್ಲಿ ಎಂಟು ವರ್ಗಗಳನ್ನು ಕಲ್ಪಿಸಿಕೊಂಡಿರುವರು. ಹೀಗೆ ಕೆಲವೊಂದು ದೃಷ್ಟಿಯಿಂದ ನಮಗಿಂತಲೂ ಹೆಚ್ಚು ತೊಡಕುಳ್ಳ ಪರಿಸ್ಥಿತಿಯು ಅಲ್ಲಿ ಇದ್ದಾಗ್ಯೂ, ಒಳ್ಳೇ ಸುಗಮ ರೀತಿಯಿಂದ ಶಿಕ್ಷಣವು ಸಾಗುವದು. ಈ ಸಂಗತಿಯು ನಮಗೆ ಧೈರ್ಯ ತಂದುಕೊಡಲು ಸಾಕು. ಈಗ ನಾವು ನಮ್ಮ ತೊಡಕುಗಳಾಗುವವು ಹಾಗು ಅವನ್ನು ನಿವಾರಿಸುವ ಬಗೆಗಳಾವವು ಎಂಬುದನ್ನು ವಿವೇಚಿಸೋಣ.

ಮೊದಲು ಇಬ್ಬರು, ಮೂವರು ಶಿಕ್ಷಕರಿರುವ ಶಾಲೆ-ಗಳ ಸಮಸ್ಯೆಗಳನ್ನು ತೆಗೆದುಕೊಳ್ಳೋಣ. ಇಂಥಲ್ಲಿ ಶಿಕ್ಷಕರು ವರ್ಗಗಳನ್ನು ಹಂಚಿಕೊಳ್ಳುವದೂ ಕೂಡ ತೊಂದರೆದಾಯಕವಾಗಿರುವದು. ಸಾಮಾನ್ಯವಾಗಿ ಅಲ್ಲಿ ೪-೫-೬ ವರ್ಗಗಳು ಇರುವವು ಮತ್ತು ಕೆಳಗಿನ ವರ್ಗ-ಗಳಲ್ಲಿ ಮಕ್ಕಳ ಸಂಖ್ಯೆಯು ಹೆಚ್ಚಿಗೆ ಇರುವದುಂಟು. ಮೇಲಿನ ವರ್ಗಗಳಲ್ಲಿ ಮಕ್ಕಳ ಸಂಖ್ಯೆಯು ಅತಿ ಕಡಿಮೆ ಇರುವದು. ಒಂದನೇ ತರಗತಿಯಲ್ಲಿ ಅಷ್ಟೇ ಸಂಖ್ಯೆಯು ಉಳಿದ ಎಲ್ಲ ವರ್ಗಗಳಲ್ಲಿಯ ಒಟ್ಟು ಮಕ್ಕಳ ಸಂಖ್ಯೆ-ಯಷ್ಟು ಕೂಡ ಇರುವದುಂಟು. ಇಂಥ ಪರಿಸ್ಥಿತಿಯಲ್ಲಿ ಇಬ್ಬರು, ಮೂವರು ಶಿಕ್ಷಕರು ಮಕ್ಕಳ ಸಂಖ್ಯೆಯು ಎಲ್ಲರಿಗೂ ಸ್ಥೂಲವಾಗಿಯಾದರೂ ಸರಿಯಾಗುವಂತೆ ಹಂಚಿಕೊಂಡರೆ, ಒಬ್ಬ ಶಿಕ್ಷಕನಿಗೆ, ಒಂದೇ ವರ್ಗ, ಇನ್ನೊಬ್ಬನಿಗೆ ಉಳಿದ ಎಲ್ಲ ವರ್ಗಗಳು ಬರಬಹುದು; ಇಲ್ಲವಾದರೆ ವರ್ಗಗಳ ಸಂಖ್ಯೆಯು ಸರಿಯಾಗುವಂತೆ ಹಂಚಿದರೆ, ಒಬ್ಬ ಶಿಕ್ಷಕನಿಗೆ ಅತಿ ಬಹಳ ವಿದ್ಯಾರ್ಥಿ-ಗಳೂ ಹಾಗು ಇನ್ನಿತರರಿಗೆ ಕಡಿಮೆ ವಿದ್ಯಾರ್ಥಿಗಳು ಬರ-ಬಹುದು. ಈ ತೊಂದರೆಯು ಕಲ್ಪನೆಯು ಕೆಳಗೆ ಕೊಟ್ಟ ಸಾಲೆಗಳಲ್ಲಿಯ ಮಕ್ಕಳ ಸಂಖ್ಯೆಯನ್ನು ಗಮನಿಸಿದರೆ ಸ್ಪಷ್ಟವಾಗುವದು.

ಶಾಲೆಗಳು	೧ನೇ ವರ್ಗ,	೨ನೇ ವರ್ಗ,	೩ನೇ ವರ್ಗ,	೪ನೇ ವರ್ಗ,	೫ನೇ ವರ್ಗ,	೬ನೇ ವರ್ಗ,	ಒಟ್ಟು	ಶಿಕ್ಷಕರು
೧	೮೭	೩೧	೯	೧೨	೧೫	೯	೧೬೩	೩
೨	೮೮	೨೫	೧೯	೮	೯	—	೧೪೯	೨
೩	೪೪	೨೩	೧೯	೧೧	—	—	೯೭	೨
೪	೨೮	೨೪	೯	೫	೮		೭೪	೨

ಇನ್ನು ಮೇಲೆ ತೋರಿಸಿದ ತೊಂದರೆಗಳನ್ನು ದೂರಮಾಡಲು ೧ನೆಯ+೩ನೆಯ ವರ್ಗಗಳನ್ನು, ೨ನೆಯ+೪ನೆಯ ವರ್ಗಗಳನ್ನೂ, ಅಥವಾ ೧ನೆಯ+೪ನೆಯ ವರ್ಗಗಳನ್ನು ಹೀಗೆ ಹಂಚಿಕೊಂಡರೆ ಒಬ್ಬ ಶಿಕ್ಷಕನ ಕಡೆಗಿರುವ ವರ್ಗಗಳ ಮಕ್ಕಳ ಬೌದ್ಧಿಕ ಹಾಗು ವಯಸ್ಸಿನ ಅಂತರಗಳಲ್ಲಿ ವಿಶೇಷ ಹೆಚ್ಚುಕಡಿಮೆಯಾಗಿ, ಎರಡೂ ವರ್ಗಗಳ ಅಭ್ಯಾಸವನ್ನು ಕೆಲವಂದು ಪ್ರಸಂಗಗಳಲ್ಲಿ ಕೂಡಿ ಸಾಗಿಸಲು ಅನುಕೂಲತೆಯಾಗುವದಿಲ್ಲ. ಅಷ್ಟೇ ಅಲ್ಲ, ಅವರ ಮಾನಸಿಕ ಬೆಳವಣಿಗೆಗೆ ವಿಶೇಷ ಅಡೆತಡೆಗಳು ಬರುವವು. ಹೀಗೆ ನಾನಾರೀತಿಯಿಂದ ವರ್ಗಗಳ ಹಂಚುವಿಕೆ, ಹಾಗು ಬಹುವರ್ಗಗಳನ್ನು ಕಲಿಸುವದು ಬಹು ಕಷ್ಟದ ಮಾತಾಗುತ್ತದೆ. ಆದ್ದರಿಂದ ಇಂಥ ಪ್ರಸಂಗದಲ್ಲಿ ಕೇವಲ ಮಕ್ಕಳ ಸಂಖ್ಯೆಗಾಗಲೀ, ಕೇವಲ ವರ್ಗಗಳ ಸಂಖ್ಯೆಗಾಗಲೀ ವಿಶೇಷ ಮಹತ್ವ ಕೊಡದೆ ಸ್ಥೂಲವಾಗಿ ವರ್ಗಗಳನ್ನು, ಬಹುವರ್ಗಗಳನ್ನು ಸುಲಭವಾಗಿ ಸಾಗಿಸಲು ಅನುಕೂಲವಾಗುವಂತೆ ಹಂಚಿಕೊಳ್ಳುವದು ಹೆಚ್ಚು ವ್ಯವಹಾರಿಕವಾಗುವದು. ಉದಾ:—ಮೂವರು ಶಿಕ್ಷಕರಿದ್ದು ಮೇಲಿನ ವರ್ಗಗಳಿದ್ದಾಗ ಎಲ್ಲ ಮೇಲ್ತರಗತಿಗಳನ್ನು ಒಬ್ಬ ಶಿಕ್ಷಕನು ಹಾಗೂ ಕೆಳಗಿನ ವರ್ಗಗಳನ್ನು ಇನ್ನುಳಿದ ಇಬ್ಬರೂ ಶಿಕ್ಷಕರು ಸ್ಥೂಲವಾಗಿ ಮಕ್ಕಳ ಸಂಖ್ಯೆ ಸರಿಯಾಗುವಂತೆ ಹಂಚಿಕೊಳ್ಳಬಹುದು. ಇಬ್ಬರು ಶಿಕ್ಷಕರಿದ್ದಾಗ ಕೂಡ ಮಕ್ಕಳ ಸಂಖ್ಯೆಯು ಪ್ರತಿಯೊಬ್ಬರಿಗೂ ಸಾಕಾಗುವಂತಿದ್ದಾಗ, ಒಬ್ಬನಿಗೆ, ೧-೨ನೆಯ ವರ್ಗಗಳು, ಇನ್ನೊಬ್ಬನಿಗೆ ಉಳಿದ ವರ್ಗಗಳು ಹೀಗೆ ಹಂಚಿಕೊಳ್ಳುವದು ವಿಹಿತ. ಇಲ್ಲಿ ಇನ್ನೊಂದು ಸೂಚನೆಯೆಂದರೆ ೧ನೆಯ ಹಾಗೂ ೨ನೆಯ ವರ್ಗಗಳಲ್ಲಿಯ ಹಾಜರಿಪಟದ ಮೇಲಿನ ಸಂಖ್ಯೆಯನ್ನು ಎಣಿಸದೆ, ಸಾಮಾನ್ಯವಾಗಿ ಹಾಜರಿರುವ ಮಕ್ಕಳ ಸಂಖ್ಯೆಯನ್ನಷ್ಟೇ ಗಮನಿಸಿ ವರ್ಗಗಳನ್ನು ಹಂಚಬಹುದು. ಯಾಕೆಂದರೆ, ಇತ್ತೀಚೆಗೆ, ಒತ್ತಾಯದ ಶಿಕ್ಷಣವು ಅಮಲಿನಲ್ಲಿ ಬಂದಾಗಿನಿಂದ ೧ನೆಯ ವರ್ಗದಲ್ಲಿ ನಿರರ್ಥಕವಾದ ಮಕ್ಕಳ ಸಂಖ್ಯೆಯು ಬಹು ಕಡೆಗೆ ಕಂಡುಬರುವದುಂಟು.

ಇನ್ನು ಎರಡನೆಯ ಅಡಚಣೆಯೆಂದರೆ, ವೇಳಾಪತ್ರಿಕೆಯು. ಬಹುವರ್ಗಗಳಿದ್ದ ಸಾಲೆಗಳಲ್ಲಿಯೂ ಕೂಡ ಸಾಮಾನ್ಯ ಸಾಲೆಯಲ್ಲಿಯಂತೆ, ಪ್ರತಿಯೊಂದು ವರ್ಗದ ವೇಳೆಪತ್ರಿಕೆಯನ್ನು ಇನ್ನಿತರ ವರ್ಗಗಳ ವೇಳಾಪತ್ರಿಕೆಯಂತೆಯೇ ತಯಾರಿಸುವದುಂಟು. ಒಂದು ವರ್ಗದಲ್ಲಿ ಶಿಕ್ಷಣ ಕೊಡುವ ಕೆಲಸವು ಇನ್ನೊಂದು ವರ್ಗದಲ್ಲಿ ಅದೇ ಅವಧಿಯ ಕೆಲಸದಲ್ಲಿ ತೊಡಕು ಬಾರದಂತೆ ವಿಚಾರಿಸಿ ಮಾಡಲ್ಪಡದೆ, ಕೇವಲ ಯಾಂತ್ರಿಕವಾಗಿ ಅವುಗಳ ಔಚಿತ್ಯದ ಬಗ್ಗೆ ಕಿಂಚಿತ್ತಾದರೂ ವಿಚಾರಿಸದೆ, ಅವನ್ನು ತಯಾರಿಸುವ ಪರಿಪಾಠವುಂಟು. ಅದಲ್ಲದೆ, ಅವನ್ನು ಕೃತಿಯಲ್ಲಿ ಕೂಡ ತರುವದಿಲ್ಲ. ಆದುದರಿಂದ ಇಂಥ ತೊಂದರೆಯನ್ನು ನಾವು ಹೆಚ್ಚು ವ್ಯವಹಾರಿಕರೀತಿಯಿಂದ ಪರಿಹರಿಸುವದು ಅಗತ್ಯ. ಇದಕ್ಕಾಗಿ ಪ್ರತಿದಿವಸ ಎಲ್ಲ ವರ್ಗಗಳ ವೇಳಾಪತ್ರಿಕೆಯಲ್ಲಿ ಕೆಲವೊಂದು ಅವಧಿಗಳನ್ನು ಸಾಮೂಹಿಕ ಚಟುವಟಿಕೆಗಳಿಗೆ ಕಾಯ್ದಿಡಬಹುದು. ಪ್ರತಿದಿನ ಮುಂಜಾನೆ ಎಲ್ಲ ವರ್ಗಗಳ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ, ಅವರ ಸ್ವಚ್ಛತೆ ಓರಣ, ಆರೋಗ್ಯ, ಚಟಗಳು ಇತ್ಯಾದಿಗಳ ಬಗ್ಗೆ ವಿಚಾರಿಸುವ ಕಾರ್ಯಕ್ರಮ, ಆನಂತರ ಪ್ರಾರ್ಥನೆ, ಶಾರೀರಿಕ ಚಟುವಟಿಕೆಗಳು ಮುಂ. ಗಳು ಇರಬಹುದು. ಅದರಂತೆಯೇ ಕಡೆಯ ಅವಧಿಯಲ್ಲಿ ಸಾಮೂಹಿಕ ಆಟಪಾಟಗಳನ್ನು, ಶಾರೀರಿಕ ಶಿಕ್ಷಣದ ಚಟುವಟಿಕೆಗಳನ್ನು, ಸೃಷ್ಟಿನಿರೀಕ್ಷಣೆಯ ಪಾಠಗಳನ್ನು ಹೀಗೆ, ಇಟ್ಟುಕೊಳ್ಳಬಹುದು.

ಇನ್ನುಳಿದ ಅವಧಿಗಳಲ್ಲಿ ಮಕ್ಕಳನ್ನು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸುವದಕ್ಕಾಗಿ ಶಿಕ್ಷಕನು ತಾನು ಸ್ವತಃ ಸಾಗಿಸುವ ವರ್ಗಗಳ ಕಾರ್ಯಗಳ ನಿರ್ದಿಷ್ಟ ವೇಳಾಪತ್ರಿಕೆಯೊಂದು ಬೇರೆ, ಹಾಗು ಮಕ್ಕಳನ್ನು ತಮ್ಮಿಷ್ಟಕ್ಕೆ ತಾವೇ ಕೆಲಸದಲ್ಲಿ ತೊಡಗಿಸುವ ವಿಧಾನಗಳನ್ನು ತೋರಿಸುವ ವೇಳಾಪತ್ರಿಕೆಯೊಂದು ಬೇರೆ, ಹೀಗೆ ಎರಡು ಸ್ಪಷ್ಟವಾದ ಯೋಜನೆಗಳು ಇರಬೇಕಾಗುವದು. ತನ್ನ ಕೆಲಸದ ವೇಳಾಪತ್ರಿಕೆಯಲ್ಲಿ ಶಿಕ್ಷಕನು ಬೇರೆ ಬೇರೆ ವರ್ಗಗಳಲ್ಲಿ ಬೇರೆ ಬೇರೆ ಅವಧಿಗಳಲ್ಲಿ ತಾನು ಮಾಡುವ ಚಟುವಟಿಕೆಗಳನ್ನು ತೋರಿಸಬೇಕಾಗುತ್ತದೆ. ಮತ್ತು ಉಳಿದ ವರ್ಗಗಳನ್ನು ಸಾಮೂಹಿಕವಾಗಿಯಾಗಲೀ ಅಥವಾ ಪ್ರತ್ಯೇಕವಾಗಿಯಾಗಲೀ ತೊಡಗಿಸುವ ಕಾರ್ಯ ಯೋಜನೆ ಬೇಕು. ಇದಕ್ಕಾಗಿ

ಶಿಕ್ಷಕನು ಕೆಲವೊಂದು ಸಂಗತಿಗಳನ್ನು ನೆನಪಿನಲ್ಲಿಡಬೇಕಾಗುವದು. ಪ್ರತಿಯೊಂದು ವರ್ಗಕ್ಕೆ ದಿನಾಲು ೧-೨ ಅವಧಿಗಳಿಗಿಂತ ಹೆಚ್ಚು ವೇಳೆ ತಾನೇ ಕೆಲಸ ಮಾಡಲಾರನು. ಮತ್ತು ಸಾಮಾನ್ಯ ಸಾಲೆಗಳಲ್ಲಿಯಂತೆ ಅವಧಿಗಳಾದರೂ ಚಿಕ್ಕವಿರದೆ ಅವು ದೊಡ್ಡವಿರಬೇಕಾಗುವದು ಅಂದರೆ ಮಕ್ಕಳು ತಮ್ಮ ಕೆಲಸವನ್ನು ತಾವೇ ಮಾಡಬೇಕಾದಾಗ ಸಾವಕಾಶವಾಗಿ ಮಾಡುತ್ತಾರೆ. ಮೂರನೆಯದಾಗಿ ಮಕ್ಕಳೇ ಸಾಗಿಸುವ ಯೋಜನಾಪದ್ಧತಿಯ ಚಟುವಟಿಕೆಗಳನ್ನು ಮಕ್ಕಳು ಅನೇಕ ದಿನಗಳ ಅಥವಾ ವಾರಗಳ ವರೆಗೆ ಸಾಗಿಸಬಹುದು. ಅಂಥ ಕೆಲಸವನ್ನು ಮಕ್ಕಳಿಗೆ ಕೊಡಬಹುದು.

ವೇಳಾಪತ್ರಿಕೆಯಷ್ಟೇ ಮಹತ್ವವುಳ್ಳ ಇನ್ನೊಂದು ಸಾಧನವುಂಟು. ಬಹು ವರ್ಗಗಳ ಶಿಕ್ಷಕನಿಗೆ ಸಪ್ತಾಹಿಕ ಅಥವಾ ಮಾಸಿಕ ಕಾರ್ಯ ಯೋಜನೆಯು ಅತ್ಯಂತ ಅವಶ್ಯವಾಗಿರುವದು. ನಾವು ಈಗಾಗಲೇ ಇದನ್ನು ಅಂದಾಜಪತ್ರಿಕೆಯೆಂದು ಎಲ್ಲ ಸಾಲೆಗಳಲ್ಲಿ ಅನುಸರಿಸುವ ಯೋಜನೆಯೇ ಅದು. ಆದರೆ ಅದಕ್ಕೆ ಬಹು ವರ್ಗಗಳ ಸಾಲೆಗಳಲ್ಲಿ ವಿಶೇಷ ಹೆಚ್ಚಿನ ಮಹತ್ವವುಂಟು. ಯಾಕೆಂದರೆ ಶಿಕ್ಷಕನು ಅನೇಕ ವರ್ಗಗಳನ್ನು ಸಾಗಿಸುವಾಗ ಸಹಜವಾಗಿ, ಕೆಲವೊಂದು ವರ್ಗಗಳ ಪ್ರಗತಿಯು ಅಲಕ್ಷಿಸಲ್ಪಡಬಹುದು. ಅದಕ್ಕಾಗಿ ಪ್ರತಿಯೊಂದು ವರ್ಗಕ್ಕೆ ಪ್ರತಿ ವಾರ ಅಥವಾ ತಿಂಗಳಲ್ಲಿ ತಾನು ಮಾಡಬೇಕಾದ ಕೆಲಸದ ನಿರ್ದಿಷ್ಟ ಯೋಜನೆಯು ಇದ್ದರೆ ಅದು ಒಳ್ಳೇ ಸಹಾಯಕವಾಗುವದು. ಇಂಥ ಯೋಜನೆಯನ್ನು ಅನುಸರಿಸಲು ಪ್ರಯತ್ನಿಸಿದಾಗ; ವೇಳಾಪತ್ರಿಕೆಯಂತೆ ಕಾರ್ಯಸಾಗದೆ ಇದ್ದಾಗ್ಯೂ ಕೂಡ ಅದು ಶಿಕ್ಷಕನಿಗೆ ಮಾರ್ಗದರ್ಶನ ಮಾಡುವದು.

ಕೊನೆಯದಾಗಿ ಬಹುವರ್ಗಗಳನ್ನು ಕಲಿಸುವ ಸಮಸ್ಯೆಯ ಅನಿಷ್ಟ ಪರಿಣಾಮವನ್ನು ಹೇಗೆ ಮಿತಗೊಳಿಸಬಹುದು ಎಂಬುದನ್ನು ಸ್ವಲ್ಪ ಚರ್ಚಿಸೋಣ. ಬಹುವರ್ಗಗಳನ್ನು ಸಂಪೂರ್ಣವಾಗಿ ತೆಗೆದುಹಾಕುವದು ದುಸ್ಸಾಧ್ಯ ಮಾತಾದರೂ ಅವುಗಳನ್ನು ಕಡಿಮೆಮಾಡಲು ಸಾಧ್ಯವದೆ. ಈಗಾಗಲೇ ನಿಮಗೆ ಪರಿಚಿತವಿರುವ 'ಶಿಫ್ಟ' ಯೋಜನೆಯು ಒಂದು ವೇಳೆ ಯಶಸ್ವಿಯಾಗಿ ಸಾಗಬಹುದಾದರೆ ಅದು ಬಹುವರ್ಗಗಳನ್ನು ಕಲಿಸಬೇಕಾಗುವ ಸಮಸ್ಯೆಗಳನ್ನು ಕೆಲಮಟ್ಟಿಗೆ ಕಡಿಮೆಮಾಡಬಹುದು. ಎಲ್ಲಿ ಒಬ್ಬ ಶಿಕ್ಷಕನು ಒಂದೇ ಸಮಯಕ್ಕೆ ನಾಲ್ಕು ವರ್ಗಗಳನ್ನುನೋಡಿಕೊಳ್ಳಬೇಕಾಗುತ್ತದೆಯೋ ಅಲ್ಲಿ ೨-೩ ವರ್ಗಗಳನ್ನು ನೋಡಿಕೊಳ್ಳುವಂತೆ ಅನುಕೂಲವಾಗುವದು. ಅದಲ್ಲದೆ, ಅದು ಸ್ಥಳಸಂಕೋಚದ ಸಮಸ್ಯೆಯನ್ನು ಕೂಡ ಬಿಡಿಸುತ್ತದೆ. ಆದರೆ ಹಳ್ಳಿಗಳಲ್ಲಿಯ ವಾತಾವರಣವನ್ನು—ಪರಿಸ್ಥಿತಿಯನ್ನು ನೋಡಿದರೆ—ಶಿಫ್ಟ ಪದ್ಧತಿಯೇನೋ ಅಯಶಸ್ವಿಯಾದ ಮಾತೆಂದು ನಿದರ್ಶನಕ್ಕೆ ಬಾರದೇ ಹೋಗದು. ಅಲ್ಲಿಯ ಅತಿ ಕಡಿಮೆ ತರಗತಿಯ ಕೌಟುಂಬಿಕ ವಾತಾವರಣ ಹಾಗು ಮಕ್ಕಳು ಅನಿಯಮಿತತನದಿಂದ ಶಾಲೆಗೆ ಹೋಗುವದನ್ನು ಗಣಿಸಿದರೆ ಮಕ್ಕಳ ಶೈಕ್ಷಣಿಕ ಪ್ರಗತಿಯು ಕುಂಠಿತವಾಗುವದರಲ್ಲಿ ಸಂದೇಹವಿಲ್ಲ. ಆದರೆ ದೊಡ್ಡ ದೊಡ್ಡ ಊರುಗಳಲ್ಲಿ ಎಲ್ಲಿ ಬಹುವರ್ಗಗಳನ್ನು ಸಾಗಿಸುವ ಸಮಸ್ಯೆಯು ಉದ್ಭೂತವಾಗುತ್ತದೆಯೋ ಅಂಥಲ್ಲಿಯಾದರೂ ಅದನ್ನು ಬಳಕೆಯಲ್ಲಿ ತರಬಹುದು. ಇನ್ನು ಕೆಲವು ಕಡೆಗಳಲ್ಲಿ ಗಂಡುಮಕ್ಕಳ ಹಾಗು ಹೆಣ್ಣುಮಕ್ಕಳ ಸಾಲೆಗಳು ಪ್ರತ್ಯೇಕವಿದ್ದು ಅವೆರಡೂ ಶಾಲೆಗಳಲ್ಲಿ ೨-೩-೪ ಶಿಕ್ಷಕರಿದ್ದುದು ಉಂಟು. ಅಂಥಲ್ಲಿ ಬಹುವರ್ಗಗಳನ್ನು ಕಲಿಸಬೇಕಾಗುವದು. ಒಂದು ವೇಳೆ ಪ್ರಾಥಮಿಕ ಮಟ್ಟದಲ್ಲಿ ಸಹ-ಶಿಕ್ಷಣವನ್ನು ಮನ್ನಿಸಿದ್ದಾದರೆ, ಇಂಥ ಗಂಡು ಹಾಗು ಹೆಣ್ಣು ಸಾಲೆಗಳನ್ನು ಒಟ್ಟುಗೂಡಿಸಬಹುದು. ಅದರಿಂದ ಎಲ್ಲ ಶಿಕ್ಷಕ-ಶಿಕ್ಷಕಿಯರು ಒಂದೇ ಸಾಲೆಯಲ್ಲಿ ದುಡಿಯಬೇಕಾಗುವದರಿಂದ ಬಹುವರ್ಗಗಳ ಸಮಸ್ಯೆಯು ಮತ್ತಷ್ಟು ಮಟ್ಟಿಗೆ ಪರಿಹಾರವಾಗುವದು ಮತ್ತು ಖೇರ ಕಮೀಟಿಯವರ ರಿಪೋರ್ಟಿನನ್ವಯ ಸಣ್ಣ ಸಣ್ಣ ಹಳ್ಳಿಗಳಲ್ಲಿ ಮೇಲಿನ ವರ್ಗಗಳನ್ನು ಕಲಿಸುವ ಯೋಜನೆಯಿರದೆ, ಅಲ್ಲಲ್ಲಿಗೆ ಕೇಂದ್ರ ಸಾಲೆಗಳನ್ನು ನಿರ್ಮಾಣಿಸಿ ಅವುಗಳಲ್ಲಿಯಷ್ಟೇ ಮೇಲಿನ ವರ್ಗಗಳನ್ನು ಕಲಿಸುವ ಯೋಜನೆಯಾದರೆ, ಹಳ್ಳಿಗಳಲ್ಲಿ ನಿರರ್ಥಕವಾಗಿ ಏನು ಹುರುಳಿಲ್ಲದ ೫-೬-೭ನೆಯ ವರ್ಗಗಳನ್ನು ಇಟ್ಟುಕೊಳ್ಳುವ ಪರಿಪಾಠವು ಕಡಿಮೆಯಾಗುವದು. ಆದರೆ ಈ ಕೇಂದ್ರ ಸಾಲೆಗಳನ್ನು ತೆರೆಯುವದಕ್ಕೂ ಅನೇಕ

ಅಡಚಣಿಗಳಿದ್ದುದು ನಿಜ. ಆದರೂ ಅವು ಅವಶ್ಯವೆಂದು ಬಹು ಜನರ ಮತವಾಗಿದೆ. ಕಡೆಯದಾಗಿ ಸೂಚಿಸಬಹುದಾದ ಮಾರ್ಗವೆಂದರೆ—ಇತ್ತೀಚೆಗೆ ಪ್ರಾ. ಶಾ. ಪ್ರ. ಪ. ಪರೀಕ್ಷೆಯನ್ನು ಪಾಸಾದ, ಹಾಗೂ ಕೆಲವೆಡೆ ತರಬೇತಿಯನ್ನು ಹೊಂದಿ, ಶಿಕ್ಷಕ ವೃತ್ತಿಯಲ್ಲಿ ಸೇರ್ಪಡೆಯಾಗಲು ಇಚ್ಛಿಸುತ್ತಿದ್ದ ಅನೇಕ ತರುಣರು ನಿರುದ್ಯೋಗಿಯಾಗಿರುವನು ಅಲ್ಲಲ್ಲಿ ಕಂಡು ಬರುವದು ಉಂಟು. ಇಂಥ ತರುಣರನ್ನು ಉಮೇದವಾರರನ್ನಾಗಿ ಅವರ ಸ್ಥಳೀಯ ಸಾಲೆಗಳಲ್ಲಿ ಕೆಲವೊಂದು ದಿನ ಕೆಲಸ ಮಾಡಿಸಿಕೊಂಡರೆ ಅನೇಕ ರೀತಿಯಿಂದ ನಮ್ಮ ಕೆಲಸವು ಸುಗಮವಾಗುವದು. ಹಳ್ಳಿಯ ಶಾಲೆಗಳಲ್ಲಿಯ ಬಹುವರ್ಗಗಳನ್ನು ಕಲಿಸುವ ಅಡಚಣಿಯಲ್ಲಿ ಇಂಥ ಉಮೇದವಾರನು ನೆರವಾಗಬಲ್ಲನು. ಅವನು ಸ್ಥಳೀಯ ವ್ಯಕ್ತಿಯಿದ್ದು ಆತನು ಹೆಚ್ಚಿನ ಸಹಾಯವನ್ನು ಕೊಡಬಲ್ಲನು. ಮೇಲಾಗಿ ಆ ತರುಣ ಶಿಕ್ಷಕನಿಗೂ, ನುರಿತ ಶಿಕ್ಷಕನ ಕಡೆಯಿಂದ ಅನೇಕ ವಿಧವಾಗಿ ಮಾರ್ಗದರ್ಶನವಾಗಬಹುದು. ಇಂಥ ಉಮೇದವಾರರೇ ಮುಂದೆ ಶಿಕ್ಷಕರಾಗಲು ಹೆಚ್ಚು ಅರ್ಹರಾಗುವದರಿಂದ ಅವರಿಗೆ ಪ್ರಾಶಸ್ತ್ಯ ದೊರಕುವದು ಸಹಜವಾಗುವದು. ಹೀಗೆ ಅನೇಕ ರೀತಿಯಿಂದ ನಮ್ಮ ಹಳ್ಳಿಯ ಸಾಲೆಗಳ ಸಮಸ್ಯೆಗಳನ್ನು ಪರಿಹರಿಸಬಹುದು.

ಆಹಾರ ವಿಜ್ಞಾನಸಾರ

ಶ್ರೀ. ಎನ್. ಬಿ. ನಾಡಗೀರರು ಬರೆದುದು

ಮಿಂಚಿನ ಬಳ್ಳಿಯವರ ಪ್ರಕಟಣೆ

ಬೆಲೆ: ಒಂದೂಕಾಲು ರೂಪಾಯಿ.

ಭಾರತದ ಇಂದಿನ ಮಹತ್ವದ ಸಮಸ್ಯೆ "ಆಹಾರ ಸಮಸ್ಯೆ". ಬ್ರಿಟಿಷರ ಮುಷ್ಟಿಯಿಂದ ಪಾರಾದರೂ ಈ ಆಹಾರದ ಬಿಕ್ಕಟ್ಟಿನಿಂದಾ "ಭಾರತದ ಕೋಟಿ, ಕೋಟಿ ಜನ ಬಳಲುವಂತಾಗಿದೆ. ಹೆಚ್ಚು ಆಹಾರ ಬೆಳೆಯಿರಿ" ಎಂಬ ಕೂಗು ನಾಡಿನ ನಾಲ್ಕೂನಿಟ್ಟಿನಿಂದ ಕೇಳಿಬರುತ್ತಲಿದೆ. ಇಂತಹ ಸಂಧಿ ಕಾಲದಲ್ಲಿ ನಾಡಗೇರರ 'ಆಹಾರವಿಜ್ಞಾನ ಸಾರ' ಸಮಯೋಚಿತವಾಗಿ ಬಂದಿದೆ

ಭಾರತದಲ್ಲಿ ದಿನದಿನಕ್ಕೂ ದುರ್ಬಲರ ಸಂಖ್ಯೆ ಹೆಚ್ಚಾಗುತ್ತಲಿದೆ. ಇದಕ್ಕೆ ನಾವು ತೆಗೆದುಕೊಳ್ಳುವ ನಿಸ್ಸತ್ವ ಆಹಾರವೇ ಕಾರಣವೆಂಬುದನ್ನು ಲೇಖಕರು ತಿಳಿಸಿ ದಿನಕ್ಕೆ ಎಷ್ಟು ಆಹಾರ ಬೇಕು, ಅದರಲ್ಲಿ ಯಾವ ರೀತಿಯ ಸತ್ವಗಳು ಎಷ್ಟು ಪ್ರಮಾಣದಲ್ಲಿರಬೇಕು ಎಂಬುದನ್ನು ಇದರಲ್ಲಿರುಹಿದ್ದಾರೆ.

ಆಹಾರವಿಜ್ಞಾನದ ಮಹತ್ವ, ಆಹಾರದಲ್ಲಿಯ ಘಟಕಗಳು, ಅವುಗಳ ಕೆಲಸ ಅವು ನಮ್ಮ ಮೇಲೆ ಮಾಡುವ ಪರಿಣಾಮ ಇವುಗಳನ್ನು ಚಿತ್ರಿಸಲಾಗಿದೆ. ಆಹಾರ ಪದಾರ್ಥಗಳಾದ ಅಕ್ಕಿ, ಜೋಳ, ಸಜ್ಜೆ, ಹಣ್ಣುಹಂಪಲ ಇವುಗಳನ್ನು ಯಾವ ತರದಲ್ಲಿಟ್ಟಿರಬೇಕು, ಇವು ಮಾನವನ ಬೆಳವಣಿಗೆಗೆ ಯಾವ ರೀತಿಯ ಸಹಾಯಮಾಡುತ್ತವೆ, ಅಕ್ಕಿಯನ್ನು ಪಾಲಿಶ ಮಾಡುವದರಿಂದ ಯಾವ ರೀತಿಯ ಸತ್ವವನ್ನು ನಾವು ಕಳೆದುಕೊಳ್ಳುತ್ತೇವೆ, ಎನ್ನುವ ಸ್ಪಷ್ಟ ಚಿತ್ರವನ್ನು ನಾವಿಲ್ಲಿ ಕಾಣಬಹುದು. ಇಂದಿನ ಮಹತ್ವದ ಸಮಸ್ಯೆಯಾದ "ಆಹಾರ ಸಮಸ್ಯೆ" ಕುರಿತು ಇದರಲ್ಲಿ ಚರ್ಚಿಸಲಾಗಿದೆ. ನಮ್ಮಲ್ಲಿ ಶಾಂತಿಕಾಲದಲ್ಲಿ ಸಹ ನೂರಕ್ಕೆ ೩೦ರಷ್ಟು ಜನ ಅರೆಹೊಟ್ಟೆಯಿಂದ ಜೀವಿಸುತ್ತಾರಂತೆ. ಇದಕ್ಕೆ ಏನು ಕಾರಣ? ನಮ್ಮಲ್ಲಿಯ ಬಡತನ, ಅಜ್ಞಾನ, ಬೆಳೆಯುತ್ತಿರುವ ಜನಸಂಖ್ಯೆ ಇದಕ್ಕೆ ಹೇಗೆ ಕಾರಣವಾಗಿದೆಯೆಂಬುದನ್ನು ಲೇಖಕರು ವಿವರಿಸಿದ್ದಾರೆ. ಆಹಾರ ಸಮಸ್ಯೆಯನ್ನು ಬಗೆಹರಿಸಲು ಮತ್ತು ಆಹಾರಪದ್ಧತಿಯ ಸುಧಾರಣೆಯ ಬಗ್ಗೆ ಉಪಯುಕ್ತವಾದ ಸಲಹೆ ಕೊಡಲಾಗಿದೆ. ನಮ್ಮ ದೇಶದಲ್ಲಿ ಕೇವಲ ಒಂದು ಎಕರೆಗೆ ೮೦೦ ಪೌಂಡು ಅಕ್ಕಿ ಬೆಳೆಯುತ್ತಿರುವಾಗ ಇಟಲಿಯಂತಹ ದೇಶಗಳಲ್ಲಿ ೩೦೦೦ ಪೌಂಡು ಬೆಳೆಯುವದೆಂದು ಓದಿ ನಾವು ಎಷ್ಟು ಹಿಂದಿರುವೆವೆಂದು ಅರಿವಾಗದಿರದು.

ವಿಜ್ಞಾನದ ಪುಸ್ತಕಗಳು ಕನ್ನಡದಲ್ಲಿ ಕಡಿಮೆ ಎಂದು ಕೂಗೆದ್ದಿರುವ ಸಮಯದಲ್ಲಿ ನಾಡಗೀರರು ಕೊರತೆಯಾದ ಭಾಗವನ್ನು ತಾನು ತುಂಬಿಕೊಡುತ್ತೇನೆಂದು ಕರೆಗೆ 'ಓ'ಗೊಟ್ಟು ಮುಂದೆ ಬಂದು ಈ ಅಮೂಲ್ಯ ವೈಜ್ಞಾನಿಕ ಪುಸ್ತಕ ನೀಡಿದ್ದಾರೆ. ವಿದ್ಯಾರ್ಥಿಗಳಿಗೆ, ಒಕ್ಕಲಿಗರಿಗೆ, ಜನಸಾಮಾನ್ಯರೆಲ್ಲರಿಗೆ ಇದು ಸಹಾಯ ಗ್ರಂಥವಾಗಿದೆ. ಇಂದಿನ ಆಹಾರಸಮಸ್ಯೆಯ ಸರಿಯಾದ ರೂಪ ಇದನ್ನು ಓದಿದರೆ ಗೊತ್ತಾಗುವದು. ಇದನ್ನು ಓದಿ ಪ್ರತಿಯೊಬ್ಬನಿಗೂ ನಮ್ಮ ದೇಶ–ಇತರ ದೇಶ ಹೋಲಿಸಿದಾಗ ಕಳವಳವಾಗದಿರದು. ಅಂಕಿಸಂಖ್ಯೆಗಳಿಂದ ಸರಿಯಾದ ವಿವರವನ್ನು ಲೇಖಕರು ಅರುಹಿದ್ದಾರೆ. ವಿಜ್ಞಾನದ ಪುಸ್ತಕವಾದರೂ ಭಾಷೆ ಅತ್ಯಂತ ಸರಳವಾಗಿದ್ದು ಸಾಮಾನ್ಯರಿಗೂ ಅರ್ಥವಾಗುವಂತಿದೆ. ನಾಡಗೀರರು ಇಂತಹ ಅನೇಕ ಪುಸ್ತಕಗಳನ್ನು ನಾಡಿಗೆ ನೀಡುವಂತಾಗಲಿ.

ತ್ವರೆ ಮಾಡಿರಿ! ಮುಲ್ಕೀ ವಿದ್ಯಾರ್ಥಿಗಳಿಗೆ ಸುಸಂಧಿ! ಇಂದೇ ಬರೆಯಿರಿ!

ಮುಲ್ಕೀ ಪರೀಕ್ಷೆಯನ್ನು ಪಾಸಾಗಲು ಊರುಗೋಲಾದ ಬಹುಜನ ವಿದಾರ್ಥಿ ವ ಶಿಕ್ಷಕರಿಂದ ಮನ್ನಣೆ ಪಡೆದ ಕೆಳಗಿನ ಬುಕ್ಕುಗಳನ್ನು ಇಂದೇ ಸಂಗ್ರಹಿಸಿರಿ

ನೂತನ ಪ್ರಶ್ನೋತ್ತರಮಾಲೆ

(೧) **ಇತಿಹಾಸ** ೧—೦—೦
(೨) **ಭೂಗೋಲ** ೧—೦—೦
(೩) **ಭೂಮಿತಿ** ೧—೦—೦
(೪) **ಭಾಷಾಭ್ಯಾಸ ಕೈಪಿಡಿ** ೧—೦—೦

ನೂತನ ಕಿಸೆಯ ಕೈಪಿಡಿಮಾಲೆ

(೧) **ಆರೋಗ್ಯಶಾಸ್ತ್ರ** ೦—೬—೦
(೨) **ಶಾಸ್ತ್ರೀಯವಿಷಯ** ೦—೬—೦

ಅಲ್ಲದೆ

(೧) **ಸಚಿತ್ರ ಶಾಸ್ತ್ರೀಯವಿಷಯ** ೦—೧೨—೦
(೨) **ಸಾ. ವಿಜ್ಞಾನಸಾರ** ೦—೬—೦

ಅಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಬಗೆಯ ಹಿಂದೀ, ಇಂಗ್ಲೀಷ, ಕನ್ನಡ ಬುಕ್ಕುಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಆಕಳವಾಡಿ ಬುಕ್ಕಡಿಪೋ, ಧಾರವಾಡ
ವಿಜಯ ರೋಡ.

ಆದರ್ಶ ಚಿತ್ರಕಲಾ

(IDEAL DRAWING)

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ಅತ್ಯುತ್ತಮವಾದ ಪುಸ್ತಕವು
ಕಡೆಗಣಿಸಲ್ಪಟ್ಟ ೧೦೦ ಗುಣಗಳ ವಿಷಯ.
ಲೇಖಕರು: **ಶ್ರೀ. ಎಸ್. ಕೆ. ಜೋಶಿ**
ಡ್ರಾಯಿಂಗ ಶಿಕ್ಷಕರು, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧುಳಿಯಾ.

- ಈ ಪುಸ್ತಕದಲ್ಲಿ ಅಬ್ಜಕ್ಟ, ಮೆಮರಿ, ಡಿಜೈನು, ನೇಚರ ಮತ್ತು ದೃಷ್ಟಾಂತ ರೇಖನಕಲೆಯ ಒಂದು ಸಾವಿರಕ್ಕಿಂತ ಹೆಚ್ಚು ಚಿತ್ರಗಳಿವೆ. ಬಣ್ಣಗಳ ಮಿಶ್ರಣವನ್ನು ತೋರಿಸುವದಕ್ಕಾಗಿ ಮೂರು ಬಣ್ಣದ ನಾಲ್ಕು ಚಿತ್ರಗಳು. ನಾನಾಬಗೆಯ ಚಿತ್ರಗಳನ್ನು ಚಿತ್ರಿಸುವ ದಾರಿಯನ್ನು ವರ್ಣಿಸುವ ಪದ್ಧತಿಗಳು.
- ಈ ಪುಸ್ತಕವು ಪ್ರಾಥಮಿಕ ಶಾಲೆಗಳ ಮೇಲಿನ ತರಗತಿಗಳ, ಹೈಸ್ಕೂಲುಗಳ ಮತ್ತು ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಅತ್ಯುಪಯುಕ್ತವಾಗಿದೆ. ಎಲಿಮೆಂಟರಿ ಮತ್ತು ಇಂಟರಮಿಜಿಯೆಟ್ ಡ್ರಾಯಿಂಗ ಪರೀಕ್ಷೆಗಳ ವಿದ್ಯಾರ್ಥಿಗಳಿಗಂತೂ ಇದು ವಿಶೇಷ ಉಪಯುಕ್ತವಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ನಡೆದ ವಿವಿಧ ಡ್ರಾಯಿಂಗ ಪರೀಕ್ಷೆಗಳ ಪ್ರಶ್ನಪತ್ರಿಕೆಗಳೂ ಇದರಲ್ಲಿ ಕೊಡಲ್ಪಟ್ಟಿವೆ.
- ಬೆಲೆ: ೦-೧೨-೦ ಅಂಚೆವೆಚ್ಚ ೦-೪-೦ ಅಂಚೆಯಿಂದ, ವ್ಹಿ ಪಿ ಯಿಂದ ೨-೪-೦. ನಿಮ್ಮ ಸಮೀಪದ ಪುಸ್ತಕ ವ್ಯಾಪಾರಿಗಳಿಂದ ತರಿಸಿಕೊಳ್ಳಿರಿ; ಅಥವಾ ಕೆಳಗಿನವರಿಗೆ ಬರೆದು ತರಿಸಿ ಕೊಳ್ಳಿರಿ.

ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾಪೇಟೆ, ಪುಣೆ ೨.

ಹೊಸ ಆದರ್ಶ! :: ಹೊಸ ಮಾದರಿ!!

ಹಿಂದೀ-ಹಿಂದೀ-ಕನ್ನಡ ರತ್ನಕೋಶ

हिन्दी-हिन्दी-कन्नड़ रत्न कोश

ಸಂಪಾದಕರು :- ಶ್ರೀ. ಜೆ. ಡಿ. ಮೈಸಾಳೆ, ರಾಷ್ಟ್ರಭಾಷಾ ಕೋವಿದ, ಶಿಕ್ಷಕ ಸನದ

ಸುಮಾರು ೧೨೦೦ ಪುಟಗಳು—೩೫೦೦೦ ಶಬ್ದಸಂಗ್ರಹ— ೩ ಲಕ್ಷ ಹಿಂದೀ ಹಾಗೂ ಕನ್ನಡ ಅರ್ಥ ವಿವರಣೆಗಳು—ಪಡೆನುಡಿಗಳು—ಗಾದೆಯ ಮಾತುಗಳು—ರಾಜಕೀಯ, ನ್ಯಾಯ ವಿಧಾಯಕ, ತಾರ, ರೇಡಿಯೋ ಹಾಗೂ ಭಾರತಶಾಸನ ಶಬ್ದಾವಲಿ ಕೋಶ ಅಲ್ಲದೆ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ,ಲೇಖಕರಿಗೆ, ಸಂಪಾದಕರಿಗೆ ಉಪಯುಕ್ತವಾದ ಅನೇಕಾನೇಕ ನೂತನ ವಿಷಯಗಳ ಶಬ್ದ ಸಂಗ್ರಹವನ್ನು ಕೊನೆಯಲ್ಲಿ ಸೇರಿಸಲಾಗಿದೆ.

ಪ್ರತಿಯೊಂದು ಹಿಂದೀ ಶಬ್ದದ ಕೇವಲ ಕನ್ನಡ ಅರ್ಥಗಳಷ್ಟೇ ಅಲ್ಲದೆ ಸುಲಭ ಹಿಂದೀ ಅರ್ಥಗಳನ್ನೂ ಅವುಗಳ ಜೊತೆಗೆ ಸಂಬಂಧಪಟ್ಟ ಪಡೆನುಡಿ (मुहावरे) ಗಳನ್ನೂ ಕೊಡಲಾಗಿದೆ. ಇದರಿಂದ ಹಿಂದೀ ಶಬ್ದಗಳಿಗೆ ಇರುವ ಕನ್ನಡ ಅರ್ಥಗಳೂ, ಸಮಾನಾರ್ಥಕ ಹಿಂದೀ ಶಬ್ದಗಳೂ, ಉಪಯುಕ್ತ ಪಡೆನುಡಿಗಳೂ ಒಂದೆಡೆಗೇ ದೊರೆತು ಸಾಹಿತ್ಯಾಭ್ಯಾಸಿಗಳಲ್ಲಿ ಹಿಂದೀ ಭಾಷೆಯ ಶಬ್ದಸಂಪತ್ತಿಯು ಹೆಚ್ಚಾಗುವದು.

ಬೆಲೆ : ೮—೧೨—೦ (ಅಂಚೆವೆಚ್ಚ ಪ್ರತ್ಯೇಕ ೧೨ ಆಣೆ)

— ಪ್ರಕಾಶಕರು : —

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ಹೊಸ ಅಭ್ಯಾಸಪತ್ರಿಕೆಯಂತೆ ಬರೆದುದು !

ಶಾಲೋಪಯೋಗಿ ಸಚಿತ್ರ ಹಾಗೂ ಸಶಾಸ್ತ್ರ

ಹೊಲಿಗೆಯ ಶಿಕ್ಷಣ

ಭಾಗ ೧ ಮತ್ತು ಭಾಗ ೨

ಪ್ರತಿಯೊಂದು ಭಾಗದ ಬೆಲೆ ೧ ರೂಪಾಯಿ

ಶ್ರೀಮತಿ ಬಿ. ಕಮಲಾಬಾಯಿ,ಎಂ.ಎ.ಬಿ.ಟಿ- ಲೇಡಿ ಸುಪರಿಂಟೆಂಡೆಂಟ, ಕಸ್ತೂರಬಾ ವಿದ್ಯಾಲಯ ಅಮರಗೋಳ ಅವರು ಈ ಪುಸ್ತಕವನ್ನು ತುಂಬ ಪ್ರಶಂಶಿಸಿದ್ದಾರೆ. ಶ್ರೀಮತಿ ಉಮಾಬಾಯಿ ಕುಂದಾಪೂರ ಇವರೂ ಈ ಪುಸ್ತಕವನ್ನು ಹೊಗಳಿದ್ದಾರೆ.

ಹೊಲಿಗೆಯ ಕಲೆಯನ್ನು ಕಲಿಯಬಯಸುವ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೂ ಇತರರಿಗೂ ಅತ್ಯುಪಯುಕ್ತವಾದುದು, ಸಂಗ್ರಾಹ್ಯವಾದುದು.

ರಾಮಾಶ್ರಯ ಬುಕ್ ಡಿಪೋ, ಧಾರವಾಡ

Printed by M. A. Kamat, B.Sc. at Jai Hind Art Press, Javlipeth, Dharwar. Edited and Published by K. G. Kurtkoti, B. M. Shintri, S. R. Tatti, & Y. D. Nadkarni jointly at the Kannada Prathamik Shikshan Office Govt. Training College for Men, Dharwar.

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು: ಕೆ. ಜಿ. ಕುರ್ತಕೋಟಿ

ಶ್ರೀ. ಅರಟಾಳ ರುದ್ರಗೌಡರು

ಪಡಿಯಚ್ಚು 'ಮಹಾವೀರ ಮಾಸಪತ್ರಿಕೆ' ಯ ಕೃಪೆಯಿಂದ

ಡಿ ಪ್ರತಿ
ಆಣೆ

ಮಾರ್ಚ ೧೯೫೧

ವಾರ್ಷಿಕ ಚಂದಾ
೩ ರೂಪಾಯಿ

ಪುಟ ೨೭೫ ಬೆಲೆ ೨ ರೂ. ೧೨ ಆ.

ಕೈನೇಯಿಗೆಯ ಮಾರ್ಗದರ್ಶಿಕೆ

ಲೇಖಕರು : ಎಂ. ಡಿ. ಮೋಲಗಿರಿ

ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ್,
ಧಾರವಾಡ ಭಾಗ, ಧಾರವಾಡ, ಇವರ ಪತ್ರ
ನಂ. ೧೯೭೭/೩.೦-೮-೫೦ ಅನ್ವಯ
ಟ್ರೇ. ಕಾ.ದ ೧ನೆಯ ಹಾಗು ೨ನೆಯ
ವರ್ಷದ ವಿದ್ಯಾರ್ಥಿಗಳಿಗೆ "ಪೂರಕ ಓದು"
ಎಂದು ಸರಕಾರದಿಂದ ಮಂಜೂರಾಗಿದೆ.
ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ.

— ಎಸ್. ಕೆ. ಮೋಲಗಿರಿ —
ಕಮಲಾಪುರ ಭಾಗ,
(ಈಶ್ವರದೇವರ ಗುಡಿ ಓಣಿ)
ಧಾರವಾಡ.

ಪುಟ ೨೨೫ ಬೆಲೆ ೨ ರೂ. ೪ ಆ.

ಕೈ ನೂಲು

ಲೇಖಕರು : ಎಂ. ಡಿ. ಮೋಲಗಿರಿ.
(ಮೂಲೋದ್ಯೋಗ ಶಿಕ್ಷಕ, ಕ. ಗಂ. ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ)

ಈ ಪುಸ್ತಕದಲ್ಲಿ ಪ್ರಾಥಮಿಕ ಶಾಲೆಗಳ ಎಲ್ಲ ವರ್ಗಗಳ ಹಾಗು ಟ್ರೇನಿಂಗ ಕಾಲೇಜುಗಳ ೧ನೆಯ ವರ್ಷದ ಹೊಸ ಅಭ್ಯಾಸಪತ್ರಿಕೆಯಂತೆ ನೂಲುಗಾರಿಕೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಂಗ್ರಹಿಸಿದೆ. ಹತ್ತಿಯ ಬಿತ್ತಿಗೆಯನ್ನು ಮೊದಲುಗೊಂಡು ನೂಲು ಸಿದ್ಧವಾಗುವ ವರೆಗಿನ ಎಲ್ಲ ಸಂಗತಿಗಳನ್ನು ಸಮಯೋಚಿತ ಚಿತ್ರಗಳಿಂದಲೂ ಉದಾಹರಣೆಗಳಿಂದಲೂ ತಾಂತ್ರಿಕ ವಿವರಣೆಗೆ, ನೂಲುಗಾರಿಕೆಗೆ ಸಂಬಂಧಿಸಿದ ಗಣಿತ ಹಾಗು ಲೆಕ್ಕಪತ್ರಗಳನ್ನೂ ಸೇರಿಸಿದೆ. ನೂಲಿನ ವರ್ಗಗಳನ್ನು ಸ್ವತಂತ್ರವಾಗಿ ನಡೆಯಿಸುವ ಬಗ್ಗೆ ಶಿಕ್ಷಕ ಶಿಕ್ಷಕಿಯರಿಗೂ ಖಾದಿ ಕಾರ್ಯಕರ್ತರಿಗೂ ತುಂಬಾ ಉಪಯುಕ್ತವಾಗಿದೆ.

— ಎಸ್. ಕೆ. ಮೋಲಗಿ —
ಕಮಲಾಪುರ ಭಾಗ, ಈಶ್ವರದೇವರ ಗುಡಿ ಓಣಿ,
—— ಧಾ ರ ವಾ ಡ ——

ಸರಕಾರದಿಂದ ಟ್ರೇನಿಂಗ ಕಾಲೇಜುಗಳಿಗೆ 'ಪೂರಕವಾಚನ'ವೆಂದು ಮಂಜೂರಾಗಿದೆ.

'ಶಾರೀರಿಕ ಶಿಕ್ಷಣ'

ಲೇಖಕರು :

ಶ್ರೀ. ಭೀ. ನ. ಮಣ್ಣೂರ
ಪ್ರ್ಯಾಕ್ಟಿಸಿಂಗ್‌ಸ್ಕೂಲ, ಟ್ರೇ. ಕಾಲೇಜ,
ಧಾರವಾಡ.

ಶ್ರೀ. ಜಿ. ಬಿ. ಸವಲೂರ
ಫಿಜಿಕಲ್ ಟೀಚರ, ಬಾಸೆಲ್‌ಮಿಶನ್
ಹಾಯಸ್ಕೂಲ, ಧಾರವಾಡ.

ಶಾರೀರಿಕ ಶಿಕ್ಷಣದ ಹೊಸ ಅಭ್ಯಾಸಕ್ರಮಕ್ಕನುಸರಿಸಿ ಬರೆದ,
ನೂರಾರು ಚಿತ್ರಗಳಿಂದ ಕೂಡಿದ, ಸುಂದರ ಪುಸ್ತಕವು.
ಎಲ್ಲ ಶಿಕ್ಷಕರೂ ಇದರ ಲಾಭವನ್ನು ಪಡೆಯಲೇಬೇಕು.

ಬೆಲೆ : ೨—೦—೦

ಪುಸ್ತಕ ದೊರೆಯುವ ಸ್ಥಳ :

ರಾಮಾಶ್ರಯ ಬುಕ್-ಡಿಪ್ಪೊ, ಧಾರವಾಡ.

ಭಾರತ ಬುಕ್-ಡಿಪ್ಪೊ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ



ಸಂಪಾದಕ ಮಂಡಲ

ಸಂಚಾಲಕರು: **ಶ್ರೀ ಬಿ. ಎಮ್. ಮೀಮಾಂಸಿ**, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ

ಪ್ರಧಾನ ಸಂಪಾದಕರು: **ಶ್ರೀ. ಕೆ. ಜಿ. ಕುರ್ತಕೋಟಿ**, ಬಿ.ಎ.,ಬಿ.ಟಿ. ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ,ಧಾರವಾಡ.

ಸಹಸಂಪಾದಕರು :

ಶ್ರೀ. ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.

ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೪೦	ಮಾರ್ಚ ೧೯೫೧	ಸಂಚಿಕೆ ೧೦

ಪರಿವಿಡಿ

೧. ಸಂಪಾದಕೀಯ ಶಕ್ಕರಬಾಪಾ ೩

೨. ಸಾದರಸ್ವೀಕಾರ ೪

೩. ಇತಿಹಾಸವನ್ನು ಕಲಿಸುವ ಬಗೆಗಳು ... ಶ್ರೀ. ಬ. ಮ. ಶಿಂತ್ರಿ ೫

೪. ವರ್ಗಮೂಲ ತೆಗೆಯುವ ರೀತಿ . .. ಶ್ರೀ. ತಟ್ಟಿ ಶ್ಯಾಮರಾಯರು ೧೧

೫. ನರೇಂದ್ರ ಬಳಗದ ಸಾಪ್ತಾಹಿಕ ವರದಿ ೧೨

೬. ಪುಸ್ತಕ-ವಿಮರ್ಶೆ—ಶಿಕ್ಷಣದರ್ಶನ . ಶ್ರೀ ಕುರ್ತಕೋಟಿ ೧೮

೭. ಮುಂಬಯಿ ಶೈಕ್ಷಣಿಕ ಪ್ರವಾಸ . ಶ್ರೀ. ಸಿಂಬಾಳ ಕಲ್ಯಾಣಪ್ಪನವರು... ೧೯

೮. ಮೂಲಶಿಕ್ಷಣ ಪ್ರಾಯೋಗಿಕಕ್ಷೇತ್ರ(ವರದಿ) ಶ್ರೀ. ಶ್ರೀ. ಗೋ. ಗು. ನಾಡಗೀರ... ... ೨೩

೯. ಮಕ್ಕಳ ಪಾಲನೆ .... ಹೆಂ.ಟ್ರೇನಿಂಗ ಕಾಲೇಜ,ಅವರಿಂದ.. ... ೨೬

ಸಂಪಾದಕೀಯ

ಠಕ್ಕರ ಬಾಪಾ

ಭಾರತದ ಕಷ್ಟಪರಂಪರೆ ಇನ್ನೂ ತಪ್ಪಿಲ್ಲವೆಂಬಂತೆ ತೋರುತ್ತದೆ. ಭಾರತವು ಒಬ್ಬರ ನಂತರ ಒಬ್ಬ ಸುಪುತ್ರರನ್ನು ಕಳೆದುಕೊಳ್ಳುತ್ತಿದೆ. ಸರದಾರ ವಲ್ಲಭ ಭಾಯಿ ಪಟೇಲರ ನಂತರ ಠಕ್ಕರಬಾಪಾ ಅವರು ೧೯-೧-೧೯೫೧ನೆಯ ದಿನ ಭಾವನಗರದಲ್ಲಿ ತೀರಿಕೊಂಡರು. ಶ್ರೀ. ವಿನೋಬಾ ಭಾವೆಯವರು ೨೧ನೆಯ ತಾರೀಖಿನ ದಿನ ಪೌನಾರದ ಪರಂಧಾಮ ಆಶ್ರಮದಲ್ಲಿ ಪ್ರಾರ್ಥನೋತ್ತರ ಭಾಷಣ ಮಾಡುವಾಗ ಠಕ್ಕರ ಬಾಪಾ ಅವರನ್ನು ಕುರಿತು ಇಂತೆಂದರು—ಠಕ್ಕರ ಬಾಪಾ ಅವರು ಧ್ಯಾನಯೋಗಿಗಳೂ ಇರಲಿಲ್ಲ, ಕರ್ಮಯೋಗಿಗಳೂ ಇರಲಿಲ್ಲ. ಆದರೆ ಅವರು ಭಕ್ತಿಯೋಗಿಗಳಾಗಿದ್ದರು. ಅವರ ಜೀವನದ ಪಥ ಭಕ್ತಿಯದಾಗಿತ್ತು. ತುಕಾರಾಮರಂತೆ ಬಡವರ, ಪತಿತರ ಸೇವೆಯನ್ನು ಮಾಡುವ ಶಕ್ತಿಯನ್ನೇ ದೇವರಿಂದ ಬೇಡುತ್ತಿದ್ದರು. ಅವರು ಆ ಶಕ್ತಿಯನ್ನು ಪಡೆದು ಪತಿತರ-ಹರಿಜನರ ಉದ್ಧಾರ ಕಾರ್ಯವನ್ನು ಕೈಕೊಂಡು ತಮ್ಮ ಜೀವನದ ಕೊನೆಯ ಉಸಿರಿನ ವರೆಗೂ ಅದರಲ್ಲಿಯೆ ಲೀನರಾಗಿದ್ದರು. ಅವರ ಜೀವನ ಸೇವಾಜೀವನ. ಸೇವಾಧರ್ಮ ಪರಮ ಗಹನವಾದದ್ದು. ಅದನ್ನೇ ಅವರು ಸಾಧಿಸಿದ್ದರು. ಅವರು ನಮ್ಮ ಮುಂದೆ ಇಟ್ಟ ಸೇವಾಧರ್ಮದ ತಿರುಳನ್ನು ತಿಳಿದುಕೊಂಡು ಪತಿತರ, ಅನಾಥರ, ಅಂತ್ಯಜರ ಸೇವೆಯನ್ನು ನಮ್ಮಿಂದ ಸಾಧ್ಯವಿದ್ದಷ್ಟು ಮಾಡುತ್ತಿರುವುದು ನಮ್ಮ ಧರ್ಮವಾಗಿದೆ. ದೊಡ್ಡವರ ದಾರಿಯನ್ನು ತುಳಿದಲ್ಲಿ ನಮ್ಮ ಜೀವನವೂ ದೊಡ್ಡದಾಗುವದು.

ಠಕ್ಕರ ಬಾಪಾ ಅವರ ಸೇವಾಮಯ ಜೀವನದ ಐತಿಹ್ಯ ಅಪಾರವಾಗಿದೆ. ಅದನ್ನು ಈ ಚಿಕ್ಕ ಸಂಪಾದಕೀಯ ಟಿಪ್ಪಣಿಯಲ್ಲಿ ಅಳವಡಿಸುವುದೆಂದರೆ ಕಡಲನ್ನು ಕೊಡದಲ್ಲಿ ತುಂಬಲು ಹೋದಂತೆಯೇ ಸರಿ. ಆದರೂ ಅವರ ಜೀವನದ ಮುಖ್ಯ ಸಂಗತಿಗಳನ್ನು—ಅವರ ಸೇವೆಯ ಮುಖ್ಯ ಕಾರ್ಯಗಳನ್ನು ನಮ್ಮ ಶಿಕ್ಷಕ ವರ್ಗದ ತಿಳಿವಳಿಕೆಗಾಗಿ ಇಲ್ಲಿ ಕೊಡಲಾಗಿದೆ:—

೨೮-೧೧-೧೮೬೯	ಭಾವನಗರದಲ್ಲಿ ಜನನ. ಇವರ ಹೆಸರು ಅಮೃತಲಾಲ. ಪ್ರೀತಿಯ ಹೆಸರು ಠಕ್ಕರಬಾಪಾ. ತಂದೆಯವರ ಹೆಸರು ವಿಠಲದಾಸ. ವೈಷ್ಣವರು. ತಮ್ಮ ಸಮಾಜಕ್ಕಾಗಿ ಸೇವೆ ಸಲ್ಲಿಸಿದರು.
೧೮೮೬	ಮ್ಯಾಟ್ರಿಕ್ ಪಾಸಾಗಿ ಪುಣೆ ಎಂಜನಿಯರಿಂಗ ಕಾಲೇಜದಲ್ಲಿ ಮೂರು ವರ್ಷ ಅಧ್ಯಯನ ಮಾಡಿ ಎಲ್. ಸಿ. ಇ. ಪದವಿಯನ್ನು ಪಡೆದರು.
೧೮೯೦ರಿಂದ ೧೮೯೯	ಚೀಫ್ ಎಂಜನಿಯರ ಪೋರಬಂದರ ಸಂಸ್ಥಾನ. ಡಾಕ್ಟರ ಎಚ್. ಎಸ್. ದೇವ ಅವರ ಪರಿಚಯ. ಸರ್ವಂಟ್ಸ್ ಆಫ್ ಇಂಡಿಯಾ ಸೊಸಾಯಿಟಿ ಕಡೆಗೆ ಒಲವು.
	ನಂತರ ದಕ್ಷಿಣಆಫ್ರಿಕೆಗೆ ಎಂಜನಿಯರರೆಂದು ಪ್ರಯಾಣ. ಹಿಂದೂ ಧಾರ್ಮಿಕ ಗ್ರಂಥಗಳ ಅಧ್ಯಯನ. ೧೮೯೯-೧೯೦೦ರಲ್ಲಿ ಭಾರತದಲ್ಲಿ ಬಿದ್ದ ಬರಗಾಲದಲ್ಲಿ ತಂದೆಯವರು ಇವರಿಗೆ ತಾವು ಬಡವರಿಗೆ ಅನ್ನನೀಡಿ ಬರಗಾಲ ಪರಿಹಾರಕ್ಕೆ ನೀಡುತ್ತಿದ್ದ ಸೇವೆಯನ್ನು ಕುರಿತು ಬರೆದಪತ್ರಗಳು ಮಂತ್ರೋಪದೇಶ ಮಾಡಿದವು. ಇವರ ಗುರುಗಳು ನಾಲ್ವರು— (೧) ತಂದೆ ವಿಠಲದಾಸ. (೨) ರಾಮಜಿ ಸಿಂಧೆ, (೩) ಶ್ರೀ. ಜಿ. ಕೆ. ದೇವಧರ. (೪) ಶ್ರೀ. ಡಿ. ಕೆ. ಕರ್ವೆ.
೧೯೦೩.	ಭಾರತಕ್ಕೆ ಆಗಮನ. ಮುಂಬಯಿ ಮುನಸಿಪಾಲಟಿಯಲ್ಲಿ ನೌಕರಿ. ಡಾ॥ ದೇವರೊಡನೆ ಸ್ನೇಹ-ಸಂವರ್ಧನೆ. ಚೆಂಬುರದ ರೇಲ್ವೆ ಮಾರ್ಗ

ನಿರ್ಮೂಲನದ ಕಾಲಕ್ಕೆ ಹರಿಜನರ, ಕಸಗೂಡಿಸುವವರ ಜೀವನದ ಪರಿಚಯ, ಅವರ ಜೀವನೋದ್ಧಾರ ಮಾಡುವ ನಿರ್ಧಾರ

೧೯೦೬. ಹೈಸ್ಕೂಲಿನಲ್ಲಿದ್ದಾಗಲೇ ಜೀವ-ಕೋರಿಬಾಯಿಯೊಡನೆ ಬಾಲ-ವಿವಾಹವಾಯಿತು. ಒಂದು ಮಗು ಹುಟ್ಟಿ ೬ನೆಯ ವರುಷದಲ್ಲಿ ತೀರಿತು. ೧೯೦೬ರಲ್ಲಿ ಹೆಂಡತಿ ತೀರಿದಳು. ೧೯೦೮ರಲ್ಲಿ ದಿವಾಳಿಬಾಯಿಯೊಡನೆ ಪುನಃ ಮದುವೆ. ಅವಳೂ ಎರಡೇ ವರುಷಗಳಲ್ಲಿ ತೀರಿದಳು. ಅಂದಿನಿಂದ ಠಕ್ಕರ ಬಾಪಾರವರು ವಿಧುರರಾಗಿಯೇ ಉಳಿದರು. ಇದೇ ಕಾಲದಲ್ಲಿ ನಾಮದಾರ ಗೋಖಲೆಯವರು ಪತಿತೋದ್ಧಾರದ ಕಾರ್ಯ-ಪ್ರಾರಂಭಿಸಿದರು. ವಿಠಲರಾಮಜಿ ಸಿಂಧೆಯವರ ಸ್ನೇಹ ಬೆಳಸಿ ಈ ಪತಿತೋದ್ಧಾರದ ಕಾರ್ಯಕ್ಕೆ ಕೈಹಾಕಿದರು. ಶ್ರೀ. ದೇವ-ಧರ ಮುಂತಾದವರೊಡನೆ ಸ್ನೇಹ ಬೆಳಸಿದರು. ಶ್ರೀ. ಕರ್ವೆಯವರೊಡನೆಯೂ ಗೆಳೆತನ ಬೆಳೆಸಿದರು.

೧೯೧೩. ತಂದೆಯವರ ಮರಣ.

೧೯೧೪. ಮುಂಬಯಿ ಮುನಸಿಪಾಲ್ಟಿಯ ನೌಕರಿಗೆ ರಾಜೀನಾಮೆ. ತಂದೆಯ ಆಜ್ಞೆ ಪಾಲಿಸುವ ಉತ್ಕಂಠತೆ. ಸರ್ವಂಟ್ಸ ಆಫ್ ಇಂಡಿಯಾ ಸೊಸಾಯಿಟಿಯನ್ನು ಸೇರಿದರು.

೧೯೧೫. ಮುಂಬಯಿಯಲ್ಲಿ ಭಂಗಿಗಳ- ಕಸಗುಡಿಸುವವರ ಸಹಕಾರಿಸಂಘಟನೆ.

೧೯೧೬. ಕಚ್ಛದಲ್ಲಿ ಬರಗಾಲ ನಿವಾರಣಾ-ಕಾರ್ಯ.

೧೯೨೦. ಓರಿಸಾದಲ್ಲಿ ಬರಗಾಲ ಅತಿಯಾಗಿತ್ತು. ಗಾಂಧೀಜಿಯವರ ಆಜ್ಞೆಯ ಮೇರೆಗೆ ಓರಿಸಾಕ್ಕೆ ಹೋದರು.

೧೯೨೧. ಕಾಠಿಯಾವಾಡದಲ್ಲಿ ಖಾದಿಯ ಕಾರ್ಯ.

೧೯೨೨. ಪಂಚಮಹಾಲದಲ್ಲಿ ಬರಗಾಲ ನಿವಾರಣ ಕಾರ್ಯ. ಭಿಲ್‌ಸೇವಾ ಮಂಡಳ ಮತ್ತು ಅಂತ್ಯಜರ ಸೇವಾಮಂಡಳದ ಸ್ಥಾಪನೆ.

೧೯೨೫ ರಿಂದ ೨೬ ಮಧ್ಯಪ್ರಾಂತ, ಆಸಾಮು, ಛೋಟಾ ನಾಗಪುರಗಳ ಆದಿವಾಸಿಗಳ ಸಮಸ್ಯೆ ಬಿಡಿಸುವ ಯತ್ನ. ಗುಜರಾತ, ಸೌರಾಷ್ಟ್ರ, ಸಿಂಧ ಓರಿಸಾಗಳಲ್ಲಿ ಬರಗಾಲ ನಿವಾರಣಾ ಕಾರ್ಯ.

೧೯೨೮ ರಿಂದ ೩೧ ಭಾರತೀಯ ಸಂಸ್ಥಾನ ಮತ್ತು-ಶಾಸನ ಸುಧಾರಣೆಯಲ್ಲಿ ಆಸಕ್ತಿ. ಪಟಿಯಾಲಾದ ರಾಜಕೀಯದ ಬಗ್ಗೆ ರಿಪೋರ್ಟ ಬರೆದರು. ಮುಂಬಯಿ ಸರಕಾರವು ಪತಿತರ ಮತ್ತು ಆದಿವಾಸಿಗಳ ಸ್ಥಿತಿ ಮತ್ತು ಅವರ ಸುಧಾರಣೆಯ ಬಗ್ಗೆ ವರದಿ ಮಾಡಲು ನಿಯಮಿಸಿತು. ಕಾಯಿದೆಭಂಗ ಚಳವಳಿಯಲ್ಲಿ ಭಾಗತೆಗೆದುಕೊಂಡರು. ಸರಾಯಿ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ್ದಕ್ಕಾಗಿ ೬ ತಿಂಗಳ ಶಿಕ್ಷೆಯಾಯಿತು. ೨ನೇ ತಿಂಗಳಲ್ಲಿ ಬಿಡುಗಡೆ. ಗಾಂಧೀಜಿಯವರೊಡನೆ ಕಾರ್ಯಪ್ರಾರಂಭ. ಪೂನಾಪ್ಯಾಕ್ಟ ಆಗಲಿಕ್ಕೆ ಬಾಪಾರವರು ಕಾರಣರಾದರು. ಹರಿಜನ ಸೇವಕ ಸಂಘದ ಜನರಲ್ ಸೆಕ್ರೆಟರಿಗಳಾದರು.

೧೯೩೦ ರಿಂದ ೩೬. ೨೨ಪ್ರಾಂತಿಕ ಹರಿಜನ ಸೇವಕ ಸಂಘ ಮತ್ತು ೧೬೮ಜಿಲ್ಲಾಕೇಂದ್ರಗಳನ್ನು ಸ್ಥಾಪಿಸಿದರು.

೧೯೩೭ ರಿಂದ ೪೫ ಕಾಂಗ್ರೆಸ ಸರಕಾರಗಳಿಗೆ ಹರಿಜನೋದ್ಧಾರದಬಗ್ಗೆ ಸಲಹೆಗಾರರು, ಬರಗಾಲನಿವಾರಣೆಗಾಗಿ ದುಡಿದರು. ಕಸ್ತೂರಬಾ ಸ್ಮಾರಕ ನಿಧಿಯ ಕಾರ್ಯದರ್ಶಿಗಳಾದರು. ಮಧ್ಯಪ್ರಾಂತದಲ್ಲಿ ವನವಾಸಿ ಸೇವಾಮಂಡಳ ಸ್ಥಾಪಿಸಿದರು. ಮಹಾದೇವಭಾಯಿ ದೇಸಾಯಿ ಸ್ಮಾರಕ-ನಿಧಿಯ ಕಾರ್ಯದರ್ಶಿಗಳಾದರು.

೧೯೪೬-೪೯. ಆದಿವಾಸಿಗಳ ಉದ್ಧಾರಕ್ಕಾಗಿ ಪಂಚವಾರ್ಷಿಕ ಯೋಜನೆ ಸಿದ್ಧಗೊಳಿಸಿದರು. ನೌಖಾಲಿ,ತಿಪ್ಪೆರಾಗಳಲ್ಲಿ ಗಾಂಧೀಜಿಯವರೊಡನೆ ಕಾರ್ಯ ಮಾಡಿದರು. ೧೯೪೯ಕ್ಕೆ ೮೦ ವರುಷಗಳು ತುಂಬಿದವು. ಇವರ ಹುಟ್ಟುಹಬ್ಬವನ್ನು ಭಾರತವು ಆಚರಿಸಿತು. ಇವರ ಸಂಬಂಧವಾಗಿಒಂದು ಸಂಭಾವನಾಗ್ರಂಥವು ಪ್ರಕಟವಾಯಿತು.

೧೯೫೦-೫೧. ಎದೆನೋವು ಹೆಚ್ಚಾಯಿತು. ಭಾವನಗರಕ್ಕೆ ಹೋದರು. ಆಸಾಮು ಭೂಕಂಪದ ಸುದ್ದಿ ಬಂದಿತು. ಜನತೆಯ ಕಷ್ಟ ಪರಿಹಾರಕ್ಕೆ ಹೋಗುವ ಮನಸ್ಸು. ಸರದಾರ ಪಟೇಲರ ಅಸ್ವಸ್ಥತೆಯ ಸುದ್ದಿಯಿಂದ ದುಃಖ. ಪ್ರಕೃತಿ ಕೆಡುತ್ತ ಹೋಯಿತು. ಸರದಾರರ ಮರಣದ ವಾರ್ತೆ. ಅತ್ಯಂತ ದುಃಖ

೧೯-೧-೧೯೫೧. ಮರಣ.

ಹೊರಟಿದೆ ! ಹೊರಟಿದೆ !

ಶಿಕ್ಷಣ ಪ್ರದರ್ಶನ

ಲೇಖಕರು: **ಶ್ರೀ. ನಾ. ಲ. ಬಾಪಟ**, ಬಿ.ಎ., ಬಿ. ಟಿ. ಮುಖ್ಯಾಧ್ಯಾಪಕರು, ಕರ್ನಾಟಕ ಹೈಸ್ಕೂಲ್ ಮಾಳಮರಡಿ, ಧಾರವಾಡ. ಬೆಲೆ: ೧-೮-೦.

ಟ್ರೇನಿಂಗ ಪಡೆಯುತ್ತಿರುವವರಿಗೂ ಶಿಕ್ಷಕರಿಗೂ ಅತ್ಯುಪಯುಕ್ತವಾದುದು.

ಪುರೋಗಾಮಿ ಶಿಕ್ಷಕ

(ಅಚ್ಚಿನಲ್ಲಿ)

ಗಜೇಂದ್ರಗಡ ಶಾಮರಾಯರು, ಬೇಸಿಕ್ ಹೊಸ ಅಭ್ಯಾಸ ಪತ್ರಿಕೆಯ ಮೇರೆಗೆ ಸುಂದರ ಸಹಜ ಶೈಲಿಯಲ್ಲಿ ಬರೆದಿದ್ದಾರೆ.

ಸ್ಟೂಡೆನ್ಸ್ ಓನ್ ಬುಕ್‌ಡಿಪೊ, ಧಾರವಾಡ

ಸಾದರ ಸ್ವೀಕಾರ

★

ಭಾರತದ ಭವ್ಯ ಸಿದ್ಧತೆ:– ಲೇಖಕರು **ಶ್ರೀ. ಶಿಂಪಿ ಲಿಂಗಣ್ಣ.** ಪ್ರಕಾಶಕರು: **ಕಲ್ಪನಾಗ್ರಂಥ ಪ್ರಕಾಶನ ಸಮಿತಿ,** ಹುಬ್ಬಳ್ಳಿ. ಕ್ರೌನ್ ಅಷ್ಟಪತ್ರದ ೬೩ ಪುಟಗಳು. **ಬೆಲೆ: ೧ ರೂಪಾಯಿ.**

ಯದುಪತಿ: `(ಆತ್ಮವಿಕಾಸ—೧.) ಲೇಖಕರು: **ಶ್ರೀ. ಸಾಲಿ ರಾಮಚಂದ್ರರಾಯರು.** ಮುನ್ನುಡಿ ಲೇಖಕರು : ಶ್ರೀ. ರಂಗಾಚಾರ್ಯ ಜಾಹಗೀರದಾರ, ಉಪಕುಲಪತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪ್ರಕಾಶಕರು: ಕರ್ನಾಟಕ ಪ್ರಾಗತಿಕ ಶಿಕ್ಷಣ ಸಂಘ, ಮುಂಬಯಿ. ಕ್ರೌನ್ ಅಷ್ಟಪತ್ರದ ೧೨೭ ಪುಟಗಳು. **ಬೆಲೆ: ೨ ರೂಪಾಯಿ.**

ಇತಿಹಾಸವನ್ನು ಕಲಿಸುವ ಬಗೆಗಳು

ಲೇಖಾಂಕ ೨

ಲೇಖಕರು :— ಶ್ರೀಯುತ ಬ. ಮ. ಶಿಂತ್ರಿ, ಬಿ.ಎ.ಬಿ.ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ

(ಊ) ಮೂಲಾಧಾರ ಪದ್ಧತಿ:— ಐತಿಹಾಸಿಕ-ಸಂಶೋಧನೆಗೆ ಉಪಯೋಗ ಬೀಳುವಂತಹ ಮೂಲ ವಸ್ತುಗಳಿಗೆ ಮೂಲಾಧಾರಗಳೆನ್ನುವರು. ಯಾಕೆಂದರೆ, ಆ ಮೂಲ ವಸ್ತುಗಳ ಆಧಾರದಿಂದಲೇ ಇತಿಹಾಸದಲ್ಲಿ ಸಂಶೋಧನದ ಕಲಸವು ಸಾಗುವದು. ಅಂತಹ ಮೂಲ ವಸ್ತುಗಳನ್ನು ಆಧಾರವಾಗಿಟ್ಟುಕೊಂಡು ಕಲಿಸುವ ಪದ್ಧತಿಗೆ ಮೂಲಾಧಾರ ಪದ್ಧತಿಯೆಂಬ ಹೆಸರು. ಮೂಲ ವಸ್ತುಗಳು ಕೆಳಗೆ ಕೊಟ್ಟಂತೆ ಆರು ಪ್ರಕಾರದವುಗಳಿರುತ್ತವೆ:—೧. ಆಯಾ ಕಾಲದ ಪ್ರವಾಸಿಕರು, ಬಾಯಭಾರಿಗಳು, ಇತಿಹಾಸಕಾರರು ಇಲ್ಲವೆ ಅರಸರು ಬರೆದಿಟ್ಟ ವೃತ್ತಾಂತಗಳು—ಮೆಗಾಸ್ಥೆನೀಸ, ಹುಯೆನ್-ತ್ಸಾಂಗ,, ನಿಕೋಲೊ ಕೊಂಟಿ, ಅಬ್ದುಲ್‌ರಝಾಕ್, ಮೊದಲಾದವರು ಆಗಿನ ಕಾಲದ ಅರಸರು ಮತ್ತು ಜನ-ಜೀವನದ ಬಗೆಗೆ ಬರೆದಿಟ್ಟ ಲೇಖಗಳು, ಬಾಬರನು ಬರೆದಿಟ್ಟ ಆತ್ಮವೃತ್ತಾಂತ (ಬಾಬರ ನಾಮಾ), ಇತ್ಯಾದಿ; ೨. ತಾಮ್ರಶಾಸನಗಳು ಮತ್ತು ಶಿಲಾಶಾಸನಗಳು; ೩. ಆಯಾ ಕಾಲದ ಹಳೆಯ ಕಾಗದಪತ್ರಗಳು ಮತ್ತು ತಾಡಪತ್ರಿಯ ಓಲೆಗಳು; ೪. ಐತಿಹಾಸಿಕ ಅವಶೇಷಗಳು—ಹಳೆಯ ಕಾಲದ ಕಟ್ಟಡಗಳು; ೫. ಆಯಾ ಕಾಲದ ಪೋಷಾಕುಗಳು, ಆಯುಧಗಳು, ನಾಣ್ಯಗಳು, ಪಾತ್ರೆಗಳು ಮುಂತಾದವುಗಳು; ೬. ಇತ್ತೀಚೆಗೆ ಹೊರಟ ಐತಿಹಾಸಿಕ ಶೋಧಗಳು—ಪಶ್ಚಿಮ ಪಂಜಾಬದಲ್ಲಿಯ ಹರಪ್ಪಾ, ಸಿಂಧಪ್ರಾಂತದೊಳಗಿನ ಲಾರಖಾನಾ ಜಿಲ್ಹೆಯಲ್ಲಿರುವ ಮೋಹೆಂಜೊದಾರೋ. ಧಾರವಾಡದಲ್ಲಿಯ 'ಕನ್ನಡ ಸಂಶೋಧನ ಕೇಂದ್ರ'ದಲ್ಲಿ, ಬೈಲಹೊಂಗಲದೊಳಗಿನ 'ಕಿತ್ತೂರ ಚೆನ್ನಮ್ಮರಾಣಿ ಇತಿಹಾಸಮಂಡಲ'ವೆಂಬ ಹೆಸರಿನ ಸಂಸ್ಥೆಯಲ್ಲಿ ಮತ್ತು ವಿಜಾಪುರದೊಳಗಿನ ಬೋಲಗುಮುಟದ ಎದುರಿಗಿರುವ 'ಪುರಾಣವಸ್ತು-ಸಂಗ್ರಹಾಲಯ'ದಲ್ಲಿ ಐತಿಹಾಸಿಕ ಮೂಲ ವಸ್ತುಗಳು ಹೇರಳವಾಗಿ ಸಿಕ್ಕುತ್ತವೆ. ಇಂತಹವುಗಳನ್ನು ಆಧಾರವಾಗಿಟ್ಟುಕೊಂಡು ಪಾಠಗಳನ್ನು ಕೊಡಲು ಶಕ್ಯವಿದೆ. ಈ ಪಾಠಗಳಿಂದ ಇತಿಹಾಸವೆಂದರೆ ಕಲ್ಪಿತ ಕಥೆಯಲ್ಲವೆಂದೂ ನಿಜವಾಗಿ ಸಂಭವಿಸಿದ ಸಂಗತಿಗಳ ವರ್ಣನೆಯೆಂದೂ ಮಕ್ಕಳಿಗೆ ಮನವರಿಕೆಯಾಗುತ್ತದೆ. ಹಳೆಯ ಕಾಲದ ವಸ್ತುಗಳನ್ನು ನೋಡಲು ಮಕ್ಕಳಲ್ಲಿ ಕುತೂಹಲವುಂಟಾಗುತ್ತದೆ. ಕುತೂಹಲದಿಂದ ಪಾಠದಲ್ಲಿ ಮಕ್ಕಳ ಅಭಿರುಚಿಯೂ ಉಂಟಾಗುತ್ತದೆ. ಆದುದರಿಂದ, ಶಿಕ್ಷಕ-ಶಿಕ್ಷಕಿಯರು ಶಕ್ಯವಿದ್ದಷ್ಟು ಹೆಚ್ಚು ಪಾಠಗಳನ್ನು ಈ ಪದ್ಧತಿಯಂತೆ ಕೊಟ್ಟು ಅದರಿಂದಾಗುವ ಲಾಭಗಳನ್ನು ಪಡೆಯುವದೊಳಿತು.

(ಎ) ಯೋಜನಾ ಪದ್ಧತಿ:— ಉದ್ದೇಶಪೂರ್ವಕವಾದ ಮತ್ತು ರಚನಾತ್ಮಕವಾದ ಚಟುವಟಿಕೆಯೊಂದನ್ನು ಮಕ್ಕಳೇ ಆಯ್ದುಕೊಂಡು, ಕೈಕೊಂಡು, ಅವರೇ ಅದನ್ನು ಪಾರುಗಾಣಿಸುವದಕ್ಕೆ ಯೋಜನಾ ಪದ್ಧತಿಯೆನ್ನುವರು. ಉದ್ದೇಶವಿದ್ದಲ್ಲಿ ಹುರುಪು-ಹುಮ್ಮಸಗಳು ತಲೆದೋರುತ್ತವೆ. ಹುರುಪು-ಹುಮ್ಮಸುಗಳಿದ್ದಲ್ಲಿ ಅಭಿರುಚಿ-ಆಸಕ್ತಿಗಳು ತಾವಾಗಿಯೇ ಉದ್ಭವಿಸುತ್ತವೆ. ಸ್ವಸಂತೋಷದಿಂದ ಅರಿಸಿಕೊಂಡು ಮಾಡುವ ಚಟುವಟಿಕೆಯಿಂದುಂಟಾಗುವ ಜ್ಞಾನವು ಶಿಕ್ಷಣಕ್ರಮದಲ್ಲಿ ಹೆಗ್ಗಳಿಕೆಯದ್ದಾಗಿದೆಯೆಂಬುದನ್ನು ಒತ್ತಿ ಹೇಳಬೇಕೇ? ಸಾಲೆಯ ಕೋಣೆಯಲ್ಲಿ ಕುಳಿತಲ್ಲಿಯೇ ಕುಳಿತು ಕೆಲಸಕ್ಕೆ ಬಾರದ ಪಾಠಗಳ ಕಲಿಯುವದನ್ನು ಬದಿಗಿರಿಸಿ, ಮಕ್ಕಳು ತಮ್ಮಷ್ಟಕ್ಕೆ ತಾವೇ ಕೆಲಸ ಮಾಡುತ್ತಮಾಡುತ್ತ ವ್ಯವಹಾರಜ್ಞಾನದ ಅನುಭವಗಳನ್ನೆಲ್ಲ ಈ ಪದ್ಧತಿಯಿಂದ ಪಡೆಯುತ್ತಾರೆ. 'ಮಾಡುತ್ತ ಕಲಿ' ಎಂಬುದೇ ಈ ಪದ್ಧತಿಯ ತಳಹದಿ. ಇತಿಹಾಸದಲ್ಲಿ ಮಕ್ಕಳಿಗೆ ಕೊಡಲು ಬಹಳಷ್ಟು ಯೋಜನೆಗಳಿವೆಯಾದುದರಿಂದ, ಇಲ್ಲಿಯೂ ಈ ಪದ್ಧತಿಯನ್ನು ಜರುಗಿಸಲು ಶಕ್ಯವಿದೆ. ಉದಾಹರಣಾರ್ಥ

ವಾಗಿ, ಐತಿಹಾಸಿಕ-ಏಕಾಂಕನಾಟಕಗಳು, ಐತಿಹಾಸಿಕ-ಸ್ಥಳಗಳ ಸಂದರ್ಶನಗಳು, ಐತಿಹಾಸಿಕ ಪುರುಷರ ಇಲ್ಲವೆ ಸ್ತ್ರೀಯರ ಜಯಂತಿಗಳು ಅಥವಾ ಪುಣ್ಯತಿಥಿಗಳು ಮುಂತಾದವುಗಳು. ಐತಿಹಾಸಿಕ ಸ್ಥಳದ ಸಂದರ್ಶನವೊಂದನ್ನು ಮಕ್ಕಳು ಆಯ್ದುಕೊಂಡು ಕಲ್ಪಿಸೋಣ. ಪ್ರತಿಯೊಬ್ಬನಿಗೆ ಪ್ರವಾಸದ ಖರ್ಚು ಸುಮಾರು ಎಷ್ಟು ಬರಬಹುದೆಂಬುದನ್ನು ಲೆಕ್ಕ ಮಾಡಿ ನೋಡುವದು, ಅಷ್ಟು ಖರ್ಚನ್ನು ಹೊತ್ತು ಬರಲಿಕ್ಕೆ ತಯಾರಿದ್ದ ಮಕ್ಕಳೆಷ್ಟು, ನಿಶ್ಚಿತ ಸಂಖ್ಯೆಯು ಗೊತ್ತಾದ ಮೇಲೆ ಆ ಊರ ಸಾಲೆಯ ಹೆಡ್‌ಮಾಸ್ತರರಿಗೆ ಎರಡು ದಿನಗಳ ಮಟ್ಟಿಗೆ ಉಳಿದುಕೊಳ್ಳಲು ಸಾಲೆಯಲ್ಲಿ ವ್ಯವಸ್ಥೆಯನ್ನು ಮಾಡಲು ಒಂದು ವಿನಂತಿಪತ್ರವವನ್ನು ತಯಾರ ಮಾಡುವದು, ಕಟ್ಟಡಗಳ ಮೇಲ್ವಿಚಾರಕರಿಗೆ ಅವುಗಳನ್ನು ಸಂದರ್ಶಿಸುವದರ ಸಲುವಾಗಿ ಪರವಾನಿಗೆಯನ್ನು ಕೊಡಲು ವಿನಂತಿ ಪತ್ರವೊಂದನ್ನು ಬರೆಯುವದು, ರೇಲ್ವೆಯಿಂದ ಹೋಗುವದಿದ್ದಲ್ಲಿ ಕನ್ಸೆಶನ್ ಪಾಸನ್ನು ತೆಗೆಯಿಸುವದು, ಮುಂತಾದ ಪ್ರಶ್ನೆಗಳೇಳುವವು. ಈ ಎಲ್ಲ ಸಮಸ್ಯೆಗಳನ್ನು ಮಕ್ಕಳೇ ಬಗೆಹರಿಸಿಕೊಳ್ಳಬೇಕು. ಶಿಕ್ಷಕ-ಶಿಕ್ಷಕಿಯರು ಸಲಹೆ-ಸೂಚನೆಗಳನ್ನು ಅವಶ್ಯವಿದ್ದಲ್ಲಿ ಮಾತ್ರ ಕೊಡುತ್ತಿರಬೇಕು. ಒಂದು ಯೋಜನೆಯೆಂದರೆ ಒಂದು ದೊಡ್ಡ ಸಮಸ್ಯೆಯು. ಆ ದೊಡ್ಡ ಸಮಸ್ಯೆಯಲ್ಲಿ ಮೇಲೆ ಹೇಳಿದಂತಹ ಅವಾಂತರ ಸಮಸ್ಯೆಗಳೆಷ್ಟೋ ಉದ್ಭವಿಸುತ್ತಿವೆ. ಇವುಗಳನ್ನೆಲ್ಲ ಮಕ್ಕಳೇ ಎದುರಿಸಿ ಪರಿಹರಿಸಿಕೊಳ್ಳುವದರಿಂದ ಅವರು ಜೀವನದ ಅನುಭವಗಳನ್ನೆಲ್ಲ ಪ್ರತ್ಯಕ್ಷವಾಗಿಯೂ ಪ್ರಮಾಣಿಕಿಯೂ ಪಡೆಯುತ್ತಾರೆ. ಇದಕ್ಕಿಂತ ಹೆಚ್ಚಿನ ಶಿಕ್ಷಣವು ಯಾವದಿದೆ? ಮೂಲಶಿಕ್ಷಣ (ಜೀವನ ಶಿಕ್ಷಣ)ವು ಈ ಪದ್ಧತಿಯಂತೆಯೇ ಈಗ ಸಾಗುತ್ತಲಿದೆಯಲ್ಲವೇ ?

(ಏ) ಡಾಲ್ಟನ್ ಪದ್ಧತಿ :— ಈ ಪದ್ಧತಿಯಂತೆ ನಡೆಯುವದಾದರೆ, ಸಾಲೆಯಲ್ಲಿ ವರ್ಗದ ಪ್ರಕಾರ ಕೋಣೆಗಳಿರಬೇಕಾಗುವದು. ಆಯಾ ಕೋಣೆಗಳಲ್ಲಿ ಆಯಾ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳು, ನಕಾಶಗಳು-ನಕ್ಷೆಗಳು, ಪಟಗಳು, ಚಿತ್ರಗಳು, ಮಾದರಿಗಳು, ಇವೇ ಮೊದಲಾದ ಎಲ್ಲ ಸಾಮಗ್ರಿಗಳನ್ನು ಕಲೆಹಾಕಿ ಓರಣದಿಂದಲೂ ಕ್ರಮದಿಂದಲೂ ಹೊಂದಿಸಿಟ್ಟಿರಬೇಕು. ಮಕ್ಕಳು ತಮ್ಮ ಮನಸಿಗೆ ಬಂದ ಬೇಕಾದ ವಿಷಯಗಳನ್ನು ಆರಿಸಿಕೊಂಡು ಆಯಾ ಕೋಣೆಗಳಿಗೆ ಹೋಗಿ ತಮ್ಮ ಅಭ್ಯಾಸವನ್ನು ತಾವೇ ಮಾಡಿಕೊಳ್ಳುವರು. ತಮ್ಮ ಅಭ್ಯಾಸವನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಮುಗಿಸುವ ಹೊಣೆಯು ಅವರ ಮೇಲೆಯೇ ಇರುತ್ತದೆ. ಉದಾಹರಣಾರ್ಥವಾಗಿ, ಅವಧಿಯು ಮಾಸಿಕ, ತ್ರೈಮಾಸಿಕ ಇಲ್ಲವೆ ಷಣ್ಮಾಸಿಕವಿರಬಹುದು. ಒಂದು ವಿಷಯದ ಬಗೆಗೆ ಬೇಸರವೆನಿಸಿದರೆ, ಅದನ್ನು ಬಿಟ್ಟುಗೊಟ್ಟು ಮತ್ತೊಂದನ್ನು ಕೈಕೊಳ್ಳಲು ಮಕ್ಕಳು ಪೂರ್ಣಸ್ವತಂತ್ರರು. ಶಿಕ್ಷಕ-ಶಿಕ್ಷಕಿಯರು ಕೇವಲ ಸಲಹೆಗಾರರಾಗಿರಬೇಕು; ಸಲಹೆ ಸೂಚನೆಗಳನ್ನು ಕೊಡುತ್ತ ಮಾರ್ಗದರ್ಶಿಯಾಗಿರಬೇಕು. ವೇಳಾಪತ್ರಿಕೆ-ವರ್ಗಶಿಕ್ಷಣಗಳಿಗೆ ಇಲ್ಲಿಎಡೆಯಿಲ್ಲ. ಮಕ್ಕಳ ವೈಯಕ್ತಿಕ ಪ್ರಗತಿಯನ್ನು ಕಂಡು ಹಿಡಿದು ಪ್ರಗತಿ-ರೇಷೆಯ ಪಟಗಳನ್ನು ಶಿಕ್ಷಕ-ಶಿಕ್ಷಕಿಯರು ಇಟ್ಟಿರುತ್ತಾರೆ. ಮಕ್ಕಳು ತಮ್ಮ ಬುದ್ಧಿಶಕ್ತಿಯ ಸಹಾಯದಿಂದ ಸ್ವತಂತ್ರ ರೀತಿಯಿಂದಲೂ ಸ್ವಂತ ಪ್ರಯತ್ನಗಳಿಂದಲೂ ಜ್ಞಾನಾರ್ಜನೆಯನ್ನು ಮಾಡಿಕೊಳ್ಳಬೇಕೆಂಬುದು ಈ ಪದ್ಧತಿಯ ತಿರುಳು. ಹೀಗೆ ಮಾಡುವದರಿಂದ ಅವರಲ್ಲಿ ಸ್ವಾವಲಂಬನವೂ ಆತ್ಮವಿಶ್ವಾಸವೂ ಬೆಳೆಯುತ್ತಿವೆ. ಇದು ಮೇಲಿನ ವರ್ಗಗಳಿಗೆ ಮಾತ್ರ ಫಲಕಾರಿಯು. ಕೆಳಗಿನ ವರ್ಗಗಳಿಗೆ ಈ ಪದ್ಧತಿಯಿಂದ ಏನೂ ಪ್ರಯೋಜನವಾಗುವದಿಲ್ಲ. ನಮ್ಮ ದೇಶವು ಬಡ ದೇಶವು. ನಮ್ಮ ಸಾಲೆಗಳಿಗೆ ಹೇಳತೀರದಷ್ಟು ಸ್ಥಳಸಂಕೋಚವು. ಮಕ್ಕಳಿಗೆ ಕೂಡ್ರಲು ಸಹ ಸಾಕಷ್ಟು ಸ್ಥಳ ಸಿಗುವದಿಲ್ಲ. ಆದುದರಿಂದಲೇ ಶಿಸ್ತುಪದ್ಧತಿಯು ಅಮಲಿನಲ್ಲಿ ಬಂದಿದೆ. ಎಷ್ಟೋ ಸಾಲೆಗಳು ಗುಡಿ-ಗುಂಡಾರಗಳಲ್ಲಿವೆ. ಅವುಗಳಿಗೆ ಕೀಲಿಹಾಕಿಡಲು ಶಕ್ಯವಿಲ್ಲ. ಪುಸ್ತಕ ಉಪಕರಣಗಳ ಅಭಾವವಂತೂ ವರ್ಣನಾತೀತವಿದೆ. ಇಂಥ ಪರಿಸ್ಥಿತಿಯಲ್ಲಿ ಈ ಪದ್ಧತಿಯನ್ನು ಜಾರಿಯಲ್ಲಿ ತರಲು ಅದು ಹೇಗೆ ತಾನೇ ಸಾಧ್ಯವು? ಆದುದರಿಂದ ಈ ಪದ್ಧತಿಯ ಬಗೆಗೆ ಹೆಚ್ಚು ಬರೆದರೇನು ಫಲ?

ಸಾರಾಂಶ:—ಇಲ್ಲಿಯ ವರೆಗೆ ಪದ್ಧತಿಗಳನ್ನೆ ಕೂಲಂಕಷವಾಗಿ ವಿವರಿಸಿದ್ದಾಯಿತು. ಅವುಗಳ ಬಲಾಬಲ

ಗಳನ್ನು ಮನದಂದು ಸಂದರ್ಭಕ್ಕೆ ತಕ್ಕಂತೆ ತಮಗೆ ಸರಿ ತೋರಿದ್ದನುಸರಿಸುವವರಲ್ಲಿ ಶಿಕ್ಷಕ-ಶಿಕ್ಷಕಿಯರ ಹಿತ ಿದೆ. ಹೊಸ ಶಿಕ್ಷಣದಲ್ಲಿ ವಿಷಯಗಳಿಗೆ ಮಹತ್ವವಿಲ್ಲ. ಮಗುವಿಗೆ ಮಹತ್ವವಿದೆ. ಹೊಸ ಶಿಕ್ಷಣವು ಮಗು ಪ್ರಧಾನವು, ವಿಷಯಪ್ರಧಾನವಲ್ಲ. ಮಗುವಿಗೆ ಮನಂ-ಗುವಂತೆಯೂ ಹೃದಯಂಗಮವಾಗುವಂತೆಯೂ ಲಿಸುವದೇ ಈ ಪದ್ಧತಿಗಳೆಲ್ಲವುಗಳ ಗುರಿಯು. ಆ ಗುರಿಯನ್ನು ಸಾಧಿಸಲು ಮೇಲಿಂದ ಮೇಲೆ ಹೊಸ ಹೊಸ ಪದ್ಧತಿಗಳು ಉದಯವಾಗುತ್ತಲಿವೆ. ಶಿಕ್ಷಣ ಶಾಸ್ತ್ರ ದಲ್ಲಿ ಪದ್ಧತಿಗಳಿಗೆ ಕೊನೆ ಎಂಬುದಿಲ್ಲ. ಈ ಪದ್ಧತಿ ಗಳ ಜಾಲದಲ್ಲಿ ಸಿಲುಕಿ ಶಿಕ್ಷಕ-ಶಿಕ್ಷಕಿಯರು ಒದ್ದಾಡ ಬಾರದು. ಅವರ ಹಿಡಿತದಲ್ಲಿ ಪದ್ಧತಿಗಳಿರಬೇಕು. ಯಾವ ಸಂದರ್ಭದಲ್ಲಿ ಯಾವ ಪದ್ಧತಿಯನ್ನನುಸರಿ ಸಲು ಯೋಗ್ಯವೆಂಬುದನ್ನು ಕಂಡುಹಿಡಿಯುವಷ್ಟು ಜಾಣಾಕ್ಷರಿರಬೇಕು. ಕಲಿಸುವದೊಂದು ಕಲೆಯಿದೆ-ಯಲ್ಲವೇ? ಪ್ರತಿಯೊಬ್ಬ ಶಿಕ್ಷಕನಿಗೆ ಇಲ್ಲವೆ ಶಿಕ್ಷಕಿಗೆ ಕಲಿಸುವದರಲ್ಲಿ ವ್ಯಕ್ತಿತ್ವವಿದೆ, ವೈಶಿಷ್ಟ್ಯವಿದೆ; ತನ್ನದೇ ಆದೊಂದು ವಿಶಿಷ್ಟ ಶೈಲಿಯಿರುತ್ತಿದೆ. ಆ ವಿಶಿಷ್ಟ ಶೈಲಿ-ಯನ್ನೇ ದಿನದಿನಕ್ಕೆ ಹೆಚ್ಚಿಚ್ಚಾಗಿ ರೂಪುಗೊಳ್ಳುತ್ತಲೂ ರೂಪಡಿಸುತ್ತಲೂ ಹೋಗುವದರಲ್ಲಿಯೇ ಶ್ರೇಯವಿದೆ-ಯೆಂಬ ಮಾತನ್ನು ಎಲ್ಲರೂ ನೆನಪಿನಲ್ಲಿಟ್ಟುಕೊಳ್ಳುವ-ದೊಳಿತು.

ಉಪಕರಣಗಳು

ಇವು ಹೆಚ್ಚು ಇದ್ದಷ್ಟು ಪಾಠಕ್ಕೆ ಕಳೆಯೇರುತ್ತಿದೆ. ಇವುಗಳಿಂದ ಮಕ್ಕಳಿಗೆ ಕಲಿಸಬೇಕಾಗಿರುವ ಸಂಗತಿಗಳ ಬಗ್ಗೆ ಸ್ಪಷ್ಟ ಕಲ್ಪನೆಯಾಗುತ್ತಿದೆ. ಪಾಠವು ಮನೋ-ರಂಜಕವಾಗಿ ಮಕ್ಕಳ ಅವಧಾನವು ವಿಷಯದತ್ತ ಸೆಳೆಯಲ್ಪಡುತ್ತಿದೆ. ಆದುದರಿಂದ ಶಿಕ್ಷಣಕ್ರಮದಲ್ಲಿ ಇವುಗಳ ಮಹತಿಯು ಅಷ್ಟಿಷ್ಟಲ್ಲ. ಅವು ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ವಸ್ತುಗಳೆಂದು ಎರಡು ತೆರನಾಗಿವೆ.

(ಅ) ಪ್ರತ್ಯಕ್ಷ ವಸ್ತುಗಳು:— ಆಯಾ ಕಾಲದ ನಾಣ್ಯಗಳು, ಪೋಷಾಕುಗಳು, ಆಯುಧಗಳು, ಹಳೆ ದಿವಪತ್ರಗಳು, ತಾಡಪತ್ರಿಯ ಓಲೆಗಳು, ತಾಮ್ರ-ಶಾಸನಗಳು, ಇವೇ ಮೊದಲಾದವುಗಳು ಪ್ರತ್ಯಕ್ಷ ವಸ್ತುಗಳು. ತಮ್ಮ ಊರಲ್ಲಿಯೇ ಆಗಲಿ ಐತಿಹಾಸಿಕ ಅವಶೇಷಗಳಿದ್ದರೆ ಅವುಗಳನ್ನು ಸಂದರ್ಶಿಸಲು ಚಿಕ್ಕ ದೊಂದು ಪ್ರವಾಸವನ್ನೇರ್ಪಡಿಸಲು ಶಕ್ಯವಿದೆ. ಅವಶೇಷ ಗಳೂ ಪ್ರತ್ಯಕ್ಷ ವಸ್ತುಗಳೇ. ಪ್ರತ್ಯಕ್ಷ ವಸ್ತುಗಳನ್ನು ಕಣ್ಣಾರೆ ಕಂಡು ಪರೀಕ್ಷಿಸುವದರಿಂದ ಮಕ್ಕಳಿಗೆ ಪ್ರತ್ಯಕ್ಷ ಜ್ಞಾನವಾಗುತ್ತಿದೆ. ಅದರಿಂದ ವಿಷಯದಲ್ಲಿ ಅವರ ಅಭಿರುಚಿ-ಆಸಕ್ತಿಗಳು ಹೆಚ್ಚುತ್ತಿವೆ.

(ಆ) ಅಪ್ರತ್ಯಕ್ಷ ವಸ್ತುಗಳು:— ಪ್ರತ್ಯಕ್ಷ ವಸ್ತು-ಗಳನ್ನು ತೋರಿಸುವದು ಐತಿಹಾಸಿಕ ಸ್ಥಳಗಳಿದ್ದ ಊರು ಗಳ ಇಲ್ಲವೆ ಪುರಾಣ ವಸ್ತುಸಂಗ್ರಹಾಲಯಗಳಿದ್ದ ಊರುಗಳ ಇಲ್ಲವೆ ಅವುಗಳ ನೆರೆಹೊರೆಗಳಲ್ಲಿದ್ದ ಊರು ಗಳ ಶಾಲೆಗಳಿಗೆ ಶಕ್ಯವಾಗಬಹುದು. ಉಳಿದ ಊರುಗಳ ಶಾಲೆಗಳಲ್ಲಿ ಚಿತ್ರ, ನಕಾಶ, ನಕ್ಷೆ, ಪಟ, ಮಾದರಿ, ಮೊದಲಾದವುಗಳನ್ನು ತೋರಿಸಬೇಕಾಗುವದು. ಇವೆಲ್ಲ ಪ್ರತ್ಯಕ್ಷ ವಸ್ತುಗಳ ಕಲ್ಪನೆಯನ್ನು ಕೊಡುವ ಅಪ್ರತ್ಯಕ್ಷ ವಸ್ತುಗಳೇ. ಇವಾದರೂ ಪ್ರತ್ಯಕ್ಷ ವಸ್ತುಗಳ ಕೆಲಸವನ್ನೇ ಮಾಡುತ್ತವೆ. ಇವು ವಸ್ತುಗಳ ನಿಜವಾದ ಕಲ್ಪನೆಯನ್ನು ಮಾಡಿಕೊಡುವಂತಹವೂ ಅಂದ ಚಂದವಾದಂತಹವೂ ಮಾತ್ರ ಇರಬೇಕು. ಉದಾಹರಣಾರ್ಥವಾಗಿ, ನರಿಯ ಚಿತ್ರವು ಶುದ್ಧ ನರಿಯಂತೇ ಇರಬೇಕು, ನಾಯಿ ಯಂತೆ ಇರಕೂಡದು; ಮಕ್ಕಳು ನೋಡಿದೊಡೆ ನರಿ ಯೆಂದು ಹೇಳಬೇಕು, ನಾಯಿಯೆಂದು ಹೇಳಬಾರದು.

ಉಪಯೋಗ:— ಪಾಠಕ್ಕೆ ಸಂಬಂಧವಿದ್ದ ಚಿತ್ರ ಗಳನ್ನಷ್ಟೇ ತೋರಿಸಬೇಕು. ಚಿತ್ರವನ್ನು ತೋರಿಸುವ ಮೊದಲೇ ಅದರ ಸಲುವಾಗಿ ಮಕ್ಕಳಲ್ಲಿ ಕುತೂಹಲ ಹುಟ್ಟುವಂತೆ ಅವರ ಮನಸ್ಸನ್ನು ಸಜ್ಜುಗೊಳಿಸಬೇಕು. ಚಿತ್ರವನ್ನು ಇಲ್ಲವೆ ಬೇರೆ ಯಾವದಾದರೂ ಉಪಕರಣ ವನ್ನು ಎಲ್ಲರಿಗೂ ನಿರಾಯಾಸವಾಗಿಯೂ ಸ್ವಚ್ಛ ವಾಗಿಯೂ ಕಾಣುವಹಾಗೆ ಇಡಬೇಕು; ಇಲ್ಲವೆ ತೂಗ ಹಾಕಬೇಕು. ಅದರ ಬಗೆಗೆ ಕೆಲವು ಪ್ರಶ್ನೆಗಳನ್ನು ಕೇಳುವದಿದೆ. ಆದುದರಿಂದ ಅದನ್ನು ಚನ್ನಾಗಿ ನಿರೀ-ಕ್ಷಣ ಮಾಡಿರೆಂದು ಮಕ್ಕಳನ್ನು ಎಚ್ಚರಿಸಬೇಕು. ಇದ ರಿಂದ ಅವರಿಗೆ ಮಾನಸಿಕ ಚಟುವಟಿಕೆ ಸಿಕ್ಕಂತಾಗಿ ಅವರ ಅವಧಾನವು ಅತ್ತಿತ್ತ ಕದಲುವದಿಲ್ಲ. ಪಾಠದಲ್ಲಿ

ಒಂದಕ್ಕಿಂತ ಹೆಚ್ಚು ಉಪಕರಣಗಳನ್ನು ತೋರಿಸುವದಿದ್ದಲ್ಲಿ, ಅವುಗಳ ಕ್ರಮವನ್ನು ಮೊದಲೇ ನಿರ್ಧರಿಸಿ ಆ ಕ್ರಮದಂತೆ ಅವುಗಳನ್ನು ಹೊಂದಿಸಿಟ್ಟುಕೊಳ್ಳಬೇಕು. ಪಾಠ ನಡೆದಾಗ ಅವುಗಳನ್ನು ಕಿತ್ತಾಡಲೂ ಹುಡುಕುತ್ತಲೂ ಕೂಡ್ರಬಾರದು. ಒಂದು ವೇಳೆ ಹಾಗೆ ಮಾಡಿದರೆ, ವೇಳೆಯ ಅಪವ್ಯಯವಾಗುವದು ಮತ್ತು ಇದಕ್ಕೂ ಹೆಚ್ಚಿನ ಹಾನಿಯೆಂದರೆ ವಿಷಯದ ಮೇಲಿನ ಮಕ್ಕಳ ಅವಧಾನವು ಹಾರಿಹೋಗುವದು; ಒಮ್ಮೆ ಹಾರಿಹೋದ ಅವಧಾನವನ್ನು ಪುನಃ ಜಗ್ಗಿ ತರುವದು ಬಲು ಪ್ರಯಾಸದ ಕೆಲಸವು. ಕರೀ ಹಲಿಗೆಯೂ ಒಂದು ಉಪಕರಣವಲ್ಲವೇ? ಅದರ ಬಗೆಗೆ ನಾಲ್ಕು ಮಾತುಗಳನ್ನು ಇಲ್ಲಿ ಹೇಳಿದರೆ ಅಪ್ರಸ್ತುತವಾಗಲಾರದು. ಅದರ ಮೇಲೆ ಚನ್ನಾಗಿ ಬೆಳಕು ಬೀಳುವಂತಹ ಸ್ಥಳದಲ್ಲಿಡಬೇಕು, ಆದರೆ ಮಿಂಚಬಾರದು. ಎಲ್ಲ ಮಕ್ಕಳಿಗೆ ಅದು ಸ್ಪಷ್ಟವಾಗಿ ಕಾಣಿಸಬೇಕು. ಶಿಕ್ಷಕ-ಶಿಕ್ಷಕಿಯರು ಅದನ್ನು ಯಾವಾಗಲೂ ತಮ್ಮ ಎಡಕ್ಕೆ ಮಾಡಿಕೊಂಡು ನಿಲ್ಲಬೇಕು. ಹೀಗೆ ಮಾಡಿದರೆ, ಅದರ ಮೇಲೆ ಬರೆಯುವದು ಮತ್ತು ಮಕ್ಕಳ ಮೇಲೆ ಕಣ್ಣಿಡುವದು, ಇವೆರಡೂ ಒಮ್ಮೆಲೇ ಸಾಧಿಸುತ್ತವೆ. ಬರಹವು ದುಂಡಗಿದ್ದು ಅಚ್ಚುಕಟ್ಟಾಗಿರಬೇಕು ಮತ್ತು ಕೆಳಗಿನ ವರ್ಗಗಳಲ್ಲಿ ದೊಡ್ಡಕ್ಷರಗಳಿದ್ದಷ್ಟು ಒಳಿತು. ಪಾಠ ನಡೆದಾಗ ಮಕ್ಕಳಿಗೆ ಗೊತ್ತಿಲ್ಲದ ಕೆಲ ಸಂಗತಿಗಳ ಬಗೆಗೆ ತಟ್ಟನೆ ನಾಲ್ಕು ಗೆರೆಗಳನ್ನೆಳೆದು ಆಕೃತಿಯ ಸಹಾಯದಿಂದ ತಿಳಿಸಲನುಕೂಲವಾಗುತ್ತದೆ. ಚಿತ್ರಕಲೆಯು ಗೊತ್ತಿದ್ದರಂತೂ ಬಂಗಾರಕ್ಕೆ ಕುಂದಣವನ್ನು ಕೂಡ್ರಿಸಿದಂತೆ. ಕೊನೆಯ ಪಕ್ಷಕ್ಕೆ ಚೂರುಚಾರು ಚಿತ್ರಕಲೆಯು ಗೊತ್ತಿದ್ದರೂ ಸಾಕು. ಘಟೋದ್ಗಜನಂತೆ ಕರೀ ಹಲಿಗೆಯ ಮೇಲೆ ಮಾಯಾಬಜಾರವನ್ನೇ ನಿರ್ಮಿಸಬಹುದು. ಶಿಕ್ಷಕ-ಶಿಕ್ಷಕಿಯರಿಗಾಗುವ ಕರೀ ಹಲಿಗೆಯ ಉಪಯೋಗವನ್ನೆಷ್ಟು ಬಣ್ಣಿಸಿದರೂ ಕಡಿಮೆಯೇ. ನಿಜವಾಗಿ ಅದು ಯಾವಾಗಲೂ ಅವರ ಮಿತ್ರನಂತಿರುತ್ತದೆ.

ಪ್ರಶ್ನೆಗಳು

ಇತಿಹಾಸದಲ್ಲಿ ಪ್ರಶ್ನೋತ್ತರ ಪದ್ಧತಿಯಿಂದಲೂ ಬಹಳಷ್ಟು ಕಲಿಸುವದರಿಂದ ಪ್ರಶ್ನೆಗಳ ಬಗೆಗೆ ಇಲ್ಲಿ ವಿವೇಚಿಸುವದು ಅಗತ್ಯವಿದೆಯೆಂದು ನಮ್ಮ ಮತ. ಶಿಕ್ಷಕ-ಶಿಕ್ಷಕಿಯರ ಯೋಗ್ಯತೆಯು ಅವರು ಪ್ರಶ್ನೆಗಳನ್ನು ಹಾಕುವ ಶೈಲಿಯ ಮೇಲಿಂದ ಕಂಡು ಹಿಡಿಯಲ್ಪಟ್ಟಿರುತ್ತದೆ. ಪ್ರಶ್ನೆಗಳನ್ನು ಹಾಕುವದೊಂದು ಕಲೆಯಿದೆ. ಆ ಕಲೆಯನ್ನು ಪ್ರತಿಯೊಬ್ಬ ಶಿಕ್ಷಕ-ಶಿಕ್ಷಕಿಯು ಸಾಧಿಸುವದೊಳಿತು. ಈ ಉದ್ದೇಶವನ್ನಿಟ್ಟುಕೊಂಡು ದಿನಾಲು ರೂಢಿಯನ್ನು ಮಾಡಿದರೆ, ಆ ಕಲೆಯು ಹಸ್ತಗತವಾಗುವದು ನಿಶ್ಚಿತ. ಅನುಮಾನದ ಪ್ರಶ್ನೆಗಳನ್ನು ಹಾಕಿ ಮಕ್ಕಳ ಮತಗಳನ್ನು ಇಲ್ಲವೆ ನಿರ್ಣಯಗಳನ್ನು ಹೊರಡಿಸಿಕೊಳ್ಳಲು, ಅವರ ವಿಚಾರಶಕ್ತಿಯನ್ನು ಕೆಣಕಿ ಮಾನಸಿಕ ಚಟುವಟಿಕೆಗಳನ್ನು ಹುಟ್ಟಿಸಲು, ಮತ್ತು ವಿಷಯದತ್ತ ಅವರ ಅವಧಾನವನ್ನೆಳೆಯಲು ಪ್ರಶ್ನೆಯಷ್ಟು ಉಪಯೋಗವಾಗುವ ಸಾಧನವು ಬೇರೊಂದಿಲ್ಲವೆಂದು ಧೈರ್ಯದಿಂದ ಹೇಳಬಹುದು. ಇತಿಹಾಸದಲ್ಲಿಯಂತೂ ಅದರ ಪ್ರಯೋಜನವು ಅಷ್ಟಿಷ್ಟೆಂದು ಹೇಳಲಳವಲ್ಲ. ಆದುದರಿಂದ ಅದರ ಬಗೆಗೆ ಇಲ್ಲಿ ನಾಲ್ಕು ಮಾತುಗಳನ್ನು ಹೇಳಬಯಸಲಾಗಿದೆ.

(ಅ) ಪ್ರಶ್ನೆಗಳನ್ನು ಕೇಳುವಾಗ ಪಾಲಿಸತಕ್ಕ ಸೂಚನೆಗಳು:—(೧) ಪ್ರಶ್ನವನ್ನು ಯಾವಾಗಲೂ ಇಡಿಯ ವರ್ಗಕ್ಕೆ ಹಾಕಬೇಕು ಮತ್ತು ವ್ಯಕ್ತಿಗತವಿರಕೂಡದು. ಇಡಿಯ ವರ್ಗಕ್ಕೆ ಹಾಕಿದರೆ, ಮಕ್ಕಳೆಲ್ಲರು ಶಿಕ್ಷಕ-ಶಿಕ್ಷಕಿಯರನ್ನು ಲಕ್ಷ್ಯಗೊಟ್ಟು ಕೇಳುವರು ಮತ್ತು ಎಲ್ಲರ ಅವಧಾನವು ಶಿಕ್ಷಕ-ಶಿಕ್ಷಕಿಯರ ಕೈಯಲ್ಲಿ ಸಿಕ್ಕುಬಿಡುತ್ತದೆ. ವ್ಯಕ್ತಿಗತವಾಗಿತ್ತೆಂದರೆ, ಉಳಿದ ಮಕ್ಕಳು ತಮಗೆ ಸಂಬಂಧವಿಲ್ಲೆಂದು ತಿಳಿದುಕೊಳ್ಳುವರು ಮತ್ತು ಅವರ ಅವಧಾನವು ಬೇರೆಡೆಗೆ ಹೊರಟಿದ್ದು ಹೋಗುವದುಂಟು. ಒಮ್ಮೆ ಕೈಬಿಟ್ಟು ಹೋದ ಅವಧಾನವನ್ನು ಪುನಃ ಸಂಪಾದಿಸುವದು ಬಲು ಕಷ್ಟ. (೨) ಪ್ರಶ್ನಹಾಕಿದ ಮೇಲೆ ಮಕ್ಕಳಿಗೆ ವಿಚಾರಮಾಡಲು ಸಾಕಷ್ಟು ವೇಳೆಯನ್ನು ಕೊಡಬೇಕು. ಒಂದು ವೇಳೆ ಸಾಕಷ್ಟು ವೇಳೆಯನ್ನು ಕೊಡದಿದ್ದರೆ, ಮಕ್ಕಳು ವಿಚಾರ ಮಾಡದೆ ಏನಾದರೊಂದು ಉತ್ತರವನ್ನು ಹೇಳುವ ಸಂಬಂಧವಿರುತ್ತದೆ. (೩) ಉತ್ತರ ಹೇಳಲು ಯಾವನಾದರೊಂದು ಮಗುವನ್ನು ಆರಿಸಬೇಕು. ಆ ಮಗುವು ಒಂದು ವೇಳೆ ತಪ್ಪುಮಾಡಿದ್ದರೆ, ತನ್ನ ತಪ್ಪನ್ನು ತಾನೇ

ಸುಧಾರಿಸಿಕೊಳ್ಳುವದೋ ಹೇಗೋ ಎಂಬುದನ್ನು ಕಂಡು ಕೊಳ್ಳಬೇಕು. ಅದು ಶಕ್ಯವಿಲ್ಲದಿದ್ದರೆ, ಬೇರೆಯುವ-ರನ್ನು ಕೇಳಬೇಕು. (೪) ಯಾವದಾದರೊಂದು ಮಗುವು ಅಲಕ್ಷ್ಯದಿಂದಿದ್ದುದು ಕಂಡು ಬಂದರೆ, ಆ ಮಗುವಿಗೆ ಕೂಡಲೆ ಒಂದು ಪ್ರಶ್ನವನ್ನೊಗೆದು ಆದರ ಅವಧಾನವು ವಿಷಯದತ್ತ ಓಡಿ ಬರುವಂತೆ ಮಾಡಬೇಕು. (೫) ಪ್ರಶ್ನಗಳನ್ನು ವರ್ಗದೊಳಗಿನ ಮಕ್ಕಳಿಗೆಲ್ಲ ಶಕ್ಯವಿದ್ದ ಮಟ್ಟಿಗೆ ಸರಿಯಾಗಿ ಹಂಚಬೇಕು. ದಡ್ಡರಿದ್ದ ಮಕ್ಕಳಿಗೆ ಕೇಳುವದನ್ನು ಬಿಟ್ಟರೆ, ಅವರು ಮತ್ತಷ್ಟು ದಡ್ಡರಾಗುತ್ತಾರೆ. ಸರಿ ಇದ್ದ ಉತ್ತರಗಳನ್ನು ಅವರಿಗೆ ಮತ್ತೊಮ್ಮೆ ಅನ್ನಲು ಕೇಳಬೇಕು. (೬) ಪ್ರಸಂಗ-ವೊದಗಿದಾಗ ಪ್ರಶ್ನಗಳನ್ನು ನಿಂತಕಾಲ ಮೇಲೆಯೇ ಬಟಲಿಸುವ ಕೈಚಳಕವು ಶಿಕ್ಷಕ-ಶಿಕ್ಷಕಿಯರಲ್ಲಿರಬೇಕು. ಇದುವೇ ಶಿಕ್ಷಕ-ಶಿಕ್ಷಕಿಯರ ಯೋಗ್ಯತೆಯನ್ನು ಕಂಡು ಹಿಡಿಯುವ ಒರೆಗಲ್ಲು. (೭) ಪ್ರಶ್ನಗಳನ್ನು ಧೈರ್ಯ-ದಿಂದಲೂ ಆತ್ಮವಿಶ್ವಾಸದಿಂದಲೂ ಶಾಂತತನದಿಂದಲೂ ಕೇಳಬೇಕು.

(ಆ) ಪ್ರಶ್ನಗಳು ಎಂತಹವಿರಬೇಕು :—(೧) ಅವು ಮಕ್ಕಳ ವಿಚಾರಶಕ್ತಿಯನ್ನು ಕೆರಳುವಂತಹವಿರಬೇಕು. ಇದರಿಂದ ಮಕ್ಕಳಲ್ಲಿ ಮಾನಸಿಕ ಚಟುವಟಿಕೆಯುಂಟಾಗಿ, ವಿಷಯದತ್ತ ಅವರ ಅವಧಾನವು ಜಗ್ಗಲ್ಪಡುತ್ತಿದೆ. (೨) ಅವು ಮಕ್ಕಳ ಅನುಭವಕ್ಕೂ ಬುದ್ಧಿಶಕ್ತಿಗೂ ನಿಲುಕುವಂತಹವುಗಳಿರಬೇಕು. ಅವರಿಗೆ ನಿಲುಕದ ಪ್ರಶ್ನೆಗಳನ್ನು ಕೇಳಿದರೆ, ಅವರ ಉತ್ಸಾಹವು ಹೊರ ಬಿದ್ದು ಹೋಗಬಹುದಲ್ಲವೇ? (೩) ಅವು ಸ್ಪಷ್ಟವಾಗಿರ ಬೇಕು. ಮಕ್ಕಳನ್ನು ವಿನಾಕಾರಣ ಗೊಂದಲದಲ್ಲಿ ಹಾಕುವಂತಹವುಗಳಿರಕೂಡದು. ಒಂದೇ ಉತ್ತರ ಹೊರಡುವಂತಹವುಗಳಿರಬೇಕು.

(ಇ) ಪ್ರಶ್ನಗಳು ಎಂತಹವಿರಕೂಡದು:-(೧) ಪ್ರತಿ-ಧ್ವನಿಯ ಪ್ರಶ್ನಗಳಿರಬಾರದು. ಒಂದು ಸಂಗತಿಯನ್ನು ಹೇಳಿದ ಕೂಡಲೆ ಅದರ ಬಗೆಗೆ ಒಂದು ಪ್ರಶ್ನವನ್ನು ಕೇಳುವ ಚಟವು ಕೆಲ ಶಿಕ್ಷಕ-ಶಿಕ್ಷಕಿಯರಲ್ಲಿ ಕಂಡುಬರು ತ್ತಿದೆ. ಉದಾಹರಣಾರ್ಥವಾಗಿ, " ಔರಂಗಜೇಬನು ಕ್ರಿ.ಶ. ೧೭೦೭ರಲ್ಲಿ ತೀರಿಕೊಂಡನು" ಎಂದು ಹೇಳಿದ ಕೂಡಲೆ "ಔರಂಗಜೇಬನು ಎಂದು ತೀರಿಕೊಂಡನು ? " ಎಂದು ಕೇಳುವರು. ಮಕ್ಕಳು " ಅವನು ಕ್ರಿ. ಶ. ೧೭೦೭ರಲ್ಲಿ ತೀರಿಕೊಂಡನು " ಎಂದು ಹೇಳುವರು. ಮೊದಲು ಹೇಳಿದುದರ ಪ್ರತಿಧ್ವನಿಯೆಂದಂತಾಯಿತು. ಇದರಲ್ಲಿ ವಿಚಾರಕ್ಕೆ ಆಸ್ಪದವೇ ಉಳಿಯಲಿಲ್ಲ. ಆದುದ ರಿಂದ, ಇಂತಹ ಪ್ರಶ್ನಗಳನ್ನು ಕೇಳಬಾರದು. (೨) ಅರ್ಧೋಕ್ತಿಗಳನ್ನು ಪೂರ್ಣಮಾಡುವ ಪ್ರಶ್ನೆಗಳಿರಬಾರದು. ಉದಾಹರಣಾರ್ಥವಾಗಿ, "ಹುಮಾಯೂನನು ಬಾಬ-ರನ—ಏನಾಗಿದ್ದನು ?" ಬಸವೇಶ್ವರನು ಬಿಜ್ಜಳನ—ಏನಾಗಿದ್ದನು?" ಇಂತಹ ಪ್ರಶ್ನೆಗಳನ್ನು ಕೇಳುವ ಚಟವು ಕೆಲ ಶಿಕ್ಷಕ-ಶಿಕ್ಷಕಿಯರಿಗೆ ಅಂಟಿಕೊಂಡಿದುದು ಕಂಡು ಬರುತ್ತಿದೆ. ಇಲ್ಲಿಯೂ ಮಕ್ಕಳಿಗೆ ವಿಚಾರ ಮಾಡಲು ಆಸ್ಪದವಿಲ್ಲ. ಆದುದರಿಂದ ಇಂತಹವುಗಳನ್ನು ಕೇಳ ಬಾರದು. (೩) "ಹೌದು" ಅಥವಾ "ಅಲ್ಲ" ಎಂಬ ಉತ್ತರ ಬರುವ ಪ್ರಶ್ನಗಳನ್ನು ಕೇಳಬಾರದು. ಯಾಕಂ-ದರೆ, ಇಲ್ಲಿಯೂ ಮಕ್ಕಳ ವಿಚಾರಕ್ಕೆ ಆಸ್ಪದದೇ ಇಲ್ಲ. ಒಂದು ವೇಳೆ ಕೇಳುವ ಪ್ರಸಂಗ ಒಂದರೆ, ಅದರ ಮುಂದಿನ ಪ್ರಶ್ನವು " ಏಕೆ ? " ಎಂದು ಇರಲೇಬೇಕು. ಉದಾಹರಣಾರ್ಥವಾಗಿ. "ಮುಹಮ್ಮದ ತಘಲಕನು ಹುಚ್ಚು ಅರಸನಲ್ಲವೇ ?'' ಈ ಪ್ರಶ್ನೆಗೆ ''ಹೌದು'' ಎಂದು ಉತ್ತರ ಬಂದ ಕೂಡಲೆ "ಏಕೆ?'' ಎಂಬ ಪ್ರಶ್ನೆ ವನ್ನು ಕೇಳಲಿಕ್ಕೆಬೇಕು. ಯಾಕಂದರೆ, ಈ ಪ್ರಶ್ನದಿಂದ ಮಕ್ಕಳಿಗೆ ಅವನು ಹುಚ್ಚನಿದ್ದುದರ ಕಾರಣಗಳೆಲ್ಲ ಗೊತ್ತಾಗಿದ್ದುದು ಕಂಡುಬರುತ್ತಿದೆ.

ಉತ್ತರಗಳು

ಪ್ರಶ್ನೆಗಳ ಬಗೆಗೆ ಹೇಳಿದ ಮೇಲೆ, ಉತ್ತರಗಳ ಬಗೆಗೂ ನಾಲ್ಕು ಮಾತುಗಳನ್ನು ಹೇಳಬೇಕಾಗುತ್ತಿದೆ-ಯಲ್ಲವೆ ? ಯಾಕಂದರೆ, ಇವೆರಡೂ ಒಂದನ್ನು ಬಿಟ್ಟು ಒಂದು ಇರುವ ಹಾಗಿಲ್ಲ. ಪ್ರಶ್ನೆಗಳನ್ನು ಕೇಳುವದು ಹೇಗೆ ಒಂದು ಕಲೆಯಿದೆಯೋ ಹಾಗೆಯೇ ಮಕ್ಕಳ ಕಡೆ ಯಿಂದ ಸರಿಯಾದ ಉತ್ತರಗಳನ್ನು ತಕ್ಕೊಳ್ಳುವದೂ ಸ್ವೀಕರಿಸುವದೂ ಒಂದು ಕಲೆಯಿದೆ. ಆ ಕಲೆಯನ್ನು ಸಾಧಿಸಿ ಹಸ್ತಗತ ಮಾಡಿಕೊಳ್ಳಲು ಮುಂದಿನ ಕೆಲ ಸೂಚನೆಗಳು ಶಿಕ್ಷಕ-ಶಿಕ್ಷಕಿಯರಿಗೆ ಸಹಾಯಕವಾಗು ವವು. (೧) ಉತ್ತರವು ಪೂರ್ಣ ವಾಕ್ಯದಲ್ಲಿರಬೇಕು.

ಕೆಳಗಿನ ವರ್ಗಗಳಲ್ಲಿ ಇದು ಅತ್ಯವಶ್ಯವು. (೨) ಅದು ಶುದ್ಧ ಭಾಷೆಯಲ್ಲಿರಬೇಕು. ಗ್ರಾಮ್ಯ ಶಬ್ದಗಳನ್ನು ಉಪಯೋಗಿಸಲು ಶಕ್ಯವಿದ್ದಮಟ್ಟಿಗೆ ಕೊಡಬಾರದು. (೩) ಒಮ್ಮೊಮ್ಮೆ ಶಿಕ್ಷಕ-ಶಿಕ್ಷಕಿಯರು ಮನಸ್ಸಿನಲ್ಲಿ ಇಂತಹದೇ ಉತ್ತರ ಬರಬೇಕೆಂದು ಸಂಕಲ್ಪ ಮಾಡಿಕೊಂಡು ಪ್ರಶ್ನೆಯನ್ನು ಕೇಳುತ್ತಾರೆ. ಆದರೆ, ಪ್ರಶ್ನೆಗೆ ಎಷ್ಟೋ ಉತ್ತರಗಳು ಹೊರಡುತ್ತಿರುತ್ತವೆ. ಇವುಗಳ ಕಡೆಗೆ ಅವರ ಗಮನವಿರುವದಿಲ್ಲ. ತಮ್ಮ ಮನಸ್ಸಿನಲ್ಲಿದ್ದ ಉತ್ತರವು ಬರದೆ ಬೇರೆ ಉತ್ತರಗಳು ಬಂದರೆ, ಅವು ಸರಿ ಇದ್ದರೂ ಕೂಡಾ ತಪ್ಪೆಂದು ನಿರ್ಣಯಕೊಟ್ಟು ಮಕ್ಕಳನ್ನು ಇಲ್ಲದ-ಸಲ್ಲದ ಗೊಂದಲದಲ್ಲಿ ನೂಕಿಬಿಡುವದುಂಟು. ಇದು ಶುದ್ಧ ತಪ್ಪು! ಸರಿ ಇದ್ದ ಉತ್ತರಗಳನ್ನೆಲ್ಲ ಶಿಕ್ಷಕ-ಶಿಕ್ಷಕಿಯರು ಸ್ವೀಕರಿಸಲೇಬೇಕು. (೪) ಮಗುವಿನ ತಪ್ಪನ್ನು ಆದಷ್ಟು ಮಟ್ಟಿಗೆ ಆ ಮಗುವಿನ ಕಡೆಯಿಂದಲೇ ತಿದ್ದಿಸಬೇಕು. ಅದು ಶಕ್ಯವಾಗದಿದ್ದರೆ, ಕೊನೆಗೆ ಶಿಕ್ಷಕ-ಶಿಕ್ಷಕಿಯರು ತಿದ್ದಬೇಕು. ಶಿಕ್ಷಣ ಶಾಸ್ತ್ರದಲ್ಲಿ ಇದು ಸ್ವಾಭಾವಿಕ ಕ್ರಮವು. ಈ ಕ್ರಮವನ್ನು ಪಾಲಿಸದೆ, ಶಿಕ್ಷಕ-ಶಿಕ್ಷಕಿಯರು ಒಮ್ಮೊಮ್ಮೆ ತಾವೇ ತಿದ್ದಲು ಆತುರರಾಗಬಾರದು. (೫) ಮಕ್ಕಳ ತಪ್ಪನ್ನು ಅವರ ಮನಸಿಗೆ ಹತ್ತದಂತೆ ಯುಕ್ತಿಯಿಂದ ತಿದ್ದಬೇಕು. ಮೇಲಿನ ವರ್ಗಗಳಲ್ಲಿ ಇದು ಅತ್ಯವಶ್ಯವು. ಒಮ್ಮೆ ಮನಸಿಗೆ ಹತ್ತಿತೆಂದರೆ, ನಿರುತ್ಸಾಹರಾಗಿ ಉತ್ತರಗಳನ್ನೇ ಕೊಡುವದಿಲ್ಲ. (೬) ಸಮರ್ಪಕ ಉತ್ತರಗಳನ್ನು ಕೊಟ್ಟ ಮಕ್ಕಳಿಗೆ ಪ್ರೋತ್ಸಾಹನ ಕೊಡಬೇಕು. ಇದರಿಂದ ಉಳಿದವರೂ ಯೋಗ್ಯ ಉತ್ತರಗಳನ್ನು ಕೊಡಲು ಪ್ರಯತ್ನಿಸುವದುಂಟು. ಕೆಳಗಿನ ವರ್ಗಗಳಲ್ಲಿ ಚಪ್ಪಾಳೆ ಹಾಕಿಸುವ ರೂಢಿಯು ನೆಲಸಿದೆ. ಮೇಲಿನ ವರ್ಗಗಳಲ್ಲಿ 'ವಾಹವ್ವಾ' 'ಶಾಬಾಸ್' ಮುಂತಾದ ಪ್ರಶಂಸನಪರ ಉದ್ಗಾರಗಳನ್ನು ತೆಗೆಯುತ್ತಿರಬೇಕು. ಪಾಠದಲ್ಲಿ ಮಕ್ಕಳ ಸಹಕಾರವು ಅವಶ್ಯವಲ್ಲವೇ? ಚಲೋ ಉತ್ತರಗಳನ್ನು ಹೊಗಳಿದರೆ ಮಕ್ಕಳ ಸಹಕಾರವು ದ್ವಿಗುಣಿತವಾಗುವದೆಂಬ ಮಾತನ್ನು ಇಲ್ಲಿ ಹೇಳುವದೇ ಬೇಡ.

[ಮುಂದುವರೆಯುವದು]

೭ನೆಯ ಇಯತ್ತೆ ಅಥವಾ ಪ್ರಾಥಮಿಕ ಶಾಲಾ
ಪ್ರಮಾಣ ಪತ್ರ ಪರೀಕ್ಷೆಗಾಗಿ ಅತ್ಯುಪಯೋಗಿ ಪುಸ್ತಕಗಳು

೧	ಗಣಿತ ಸಂಗ್ರಹ	೧	೦	೦
೨	ಪ್ರಶ್ನೋತ್ತರ ಸಂಗ್ರಹ	೧	೦	೦
೩	ಪ್ರಬಂಧ ಬರೆಹ	೧	೦	೦
೪	ಮಾದರಿಯ ನಿಬಂಧಗಳು	೦	೮	೦
೫	ಗುಣವಿವೇಚನೆ	೦	೮	೦
೬	ಪ್ರಶ್ನೋತ್ತರ ಭಾಷಾಭ್ಯಾಸ	೧	೦	೦
೭	ಪೌರನೀತಿ	೦	೬	೦
೮	ಇತಿಹಾಸ ಪ್ರಶ್ನೋತ್ತರಮಾಲೆ	೧	೦	೦
೯	ಭಾರತ ರಾಜ್ಯಘಟನೆಯ ಕರಡು	೦	೪	೦
೧೦	ಭೂಗೋಲ ಪ್ರಶ್ನೋತ್ತರಮಾಲೆ	೧	೦	೦
೧೧	ಭೂಮಿತಿ ಪ್ರಶ್ನೋತ್ತರಮಾಲೆ	೧	೦	೦
೧೨	ಜಮಾಖರ್ಚು ಪ್ರಶ್ನೋತ್ತರಮಾಲೆ	೧	೦	೦
೧೩	ಸಾಮಾನ್ಯ ವಿಜ್ಞಾನ ಪ್ರಶ್ನೋತ್ತರಮಾಲೆ	೦	೧೨	೦
೧೪	ಆರೋಗ್ಯ ವಿಜ್ಞಾನ ಪ್ರಶ್ನೋತ್ತರ	೦	೯	೦
೧೫	ವಿಜ್ಞಾನ ಪ್ರಶ್ನೋತ್ತರಮಾಲೆ	೧	೦	೦
೧೬	ಶಾಸ್ತ್ರೀಯವಿಷಯ ಪ್ರಶ್ನೋತ್ತರಮಾಲೆ	೦	೯	೦
೧೭	ಹೊಸ ಗಣಿತ	೧	೮	೦

ಇವಲ್ಲದ ನಮ್ಮಲ್ಲಿ ಎಲ್ಲ ಪ್ರಕಾರದ ಶಾಲೋಪಯೋಗಿ ಪುಸ್ತಕಗಳೂ, ಎಕ್ಸರಸಾಯಿಜ ಬುಕ್, ಪಾಟಿ ಇತ್ಯಾದಿ ಸ್ಟೇಶನರಿ ಸಾಮಾನುಗಳೂ ಠೋಕಾಗಿಯೂ ಚಿಲ್ಲರೆಯಾಗಿಯೂ ಸಿಗುತ್ತವೆ.

ಕೆ. ಎಸ್. ಕುಲಕರ್ಣಿ ಬುಕ್ ಡಿಪೋ, ಹುಬ್ಬಳ್ಳಿ

ವರ್ಗಮೂಲ ತೆಗೆಯುವ ರೀತಿ

ಲೇಖಕರು: ಶ್ರೀ. ತಟ್ಟಿ ಶ್ಯಾಮರಾಯರು

ಅಂಕಗಣಿತದಲ್ಲಿ ವರ್ಗ, ಘನ ಎಂಬ ಶಬ್ದಗಳು ಮಹತ್ವವುಳ್ಳವು. ಅವುಗಳ ಬಳಕೆಯು ಕ್ಷೇತ್ರಫಲ, ಘನಫಲಗಳ ಸೂತ್ರಗಳಲ್ಲಿ ಹೆಚ್ಚಾಗಿ ಇರುವದು. ಒಂದು ಸಂಖ್ಯೆಯನ್ನು ಎರಡುಸಾರೆ ಇಟ್ಟು ಗುಣಿಸಿ ಬಂದ ಫಲವು ಅದರ ವರ್ಗವೆನಿಸುವದು; ಅದನ್ನೇ ಮೂರು ಸಾರೆ, ಇಟ್ಟು ಗುಣಿಸಿದ್ದರೆ ಫಲವು ಘನವೆನಿಸುವದು. ಹೊಸದಾಗಿ ಈ ಮಾತನ್ನು ಕಲಿಯುವವರು ಒಂದು ಸಂಖ್ಯೆಯ ವರ್ಗವೆಂದರೆ ಆ ಸಂಖ್ಯೆಯ ದ್ವಿಗುಣವೆಂದು ಭ್ರಮಿಸಿ ೧೦ರ ವರ್ಗವು ೨೦ ಎಂದೂ ಥಟ್ಟನೆ ಹೇಳುವದುಂಟು. ಅವರಿಗೆ ಎಚ್ಚರವಿರಲಿ.

ಒಂದು ಸಂಖ್ಯೆಯನ್ನು ಎರಡು ಸಾರೆ ಇಟ್ಟು ಕೂಡಿಸುವದು ಬೇರೆ, ಅದನ್ನು ಎರಡುಸಾರೆ ಇಟ್ಟು ಗುಣಿಸುವದು ಬೇರೆ; ೨ನ್ನು ೧೦ ಸಾರೆ ಇಟ್ಟು ಕೂಡಿಸಿದರೆ ೨೦ ಬರುವದು. ೨×೧೦=೨೦; ೨ನ್ನು ೧೦ ಸಾರೆ ಇಟ್ಟು ಗುಣಿಸಿದರೆ ೧೦೨೪ ಬರುವದು. ಇದನ್ನು ಹೀಗೆ ಬರೆದು ತೋರಿಸುತ್ತೇವೆ. $೨^{೧೦}$ =೧೦೨೪. ಇದರಂತೆ ೩×೧೦=೩೦; ಆದರೆ $೩^{೧೦}$= ೫೯೦೪೯.

೧೦೨೪ಕ್ಕೆ ೨ ರ ೧೦ನೆಯ ಘಾತ ಇಲ್ಲವೆ ಮಟ್ಟ ಇಲ್ಲವೆ ಅಂತಸ್ತು ಎಂದು ಹೇಳುವರು. ೨ ರ ೧೦ನೆಯ ಸಂಘಾತವು ೧೦೨೪; ೧೦೨೪ ರ ೧೦ನೆಯ ಮೂಲವು ೨. ಸಂಘಾತಕರಣ ಮೂಲಶೋಧನ ಇವು ಒಂದಕ್ಕೊಂದು ವಿರುದ್ಧವಾದ ಕೃತಿಗಳು. ಸಂಖ್ಯೆಯ ಮಟ್ಟವು ಏರಿದಂತೆ ಗುಣಾಕಾರಕ್ಕೂ ಅದಕ್ಕೂ ಇರುವ ಅಂತರವು ಮಿತಿಮೀರಿ ಹೆಚ್ಚಾಗುವದು. ಉದಾ, ೨×೧೦೦ = ೨೦೦.

ಆದರೆ $೨^{೧೦೦}$= ೧,೨೬೭೬೫೦,೬೦೦೨೨೮,೨೨೯೪೦೧,೪೯೬೭೦೩, ೨೦೫೩೭೬ ಈ ಸಂಘಾತವು ೧೦ ರ ೩೦ನೆಯ ಅಂತಸ್ತನ್ನು ದಾಟಿರುತ್ತದೆ.

ಬೇಕಾದ ಸಂಖ್ಯೆಯ ವರ್ಗವನ್ನು ಮಾಡಬಹುದು; ಆದರೆ ಬೇಕಾದ ಸಂಖ್ಯೆಯ ವರ್ಗಮೂಲವನ್ನು ಸರಿಯಾಗಿ ಹೇಳಲು ಬರುವಂತಿಲ್ಲ. ೪ ರ ವರ್ಗಮೂಲವು ೨; ೧ ರ ವರ್ಗಮೂಲವು ೧. ಆದರೆ ೩ ರ ವರ್ಗಮೂಲವೆಷ್ಟು? ಯಾವ ನಿರ್ದಿಷ್ಟಸಂಖ್ಯೆಯನ್ನು ಅದರಿಂದಲೇ ಗುಣಿಸುವದರಿಂದ ೩ ಬರಲಾರದು. ಆದರೆ ವ್ಯವಹಾರದಲ್ಲಿ ೩ ರ ವರ್ಗಮೂಲವು ಬೇಕಾಗುವದು. ಉದಾ, ಒಂದು ಚೌರಸಿನ ಕರ್ಣವು ಅದರ ಭುಜದ √೨ (ಎರಡರ ವರ್ಗಮೂಲದಷ್ಟು) ಪಟ್ಟು ಆಗುವದು. ಸಮಭುಜತ್ರಿಕೋಣದ ಕ್ಷೇತ್ರಫಲವನ್ನು ತೆಗೆಯುವಾಗ √೩ನ್ನು ಉಪಯೋಗಿಸಬೇಕಾಗುವದು. ಇಂತಹ ಪ್ರಸಂಗಗಳಲ್ಲಿ ಅದನ್ನು ಸಮೀಪದ ಸ್ಥೂಲಮಾನದ ಬೆಲೆಯು ಕೆಲಸಸಾಗಿಸುವದು.

ವರ್ಗಮೂಲ ತೆಗೆಯುವ ರೀತಿಯನ್ನು ಒಂದು ಸಂಖ್ಯೆಯ ವರ್ಗವನ್ನು ಮಾಡುವ ಒಂದು ವಿಶಿಷ್ಟ ರೀತಿಯ ಮೇಲೆ ಕಟ್ಟಿರುತ್ತಾರೆ. ಆ ವರ್ಗಕರಣದ ವಿಶಿಷ್ಟ ರೀತಿಯನ್ನು ನೋಡಲು ನಾವು ಕಲಿತುಕೊಳ್ಳೋಣ. ಎರಡಂಕಿಯ ಒಂದು ಸಂಖ್ಯೆಯ ವರ್ಗದಲ್ಲಿ ನಾಲ್ಕು ಖಂಡಗಳಿರುವವು. ನೋಡಿರಿ - ೪೩ × ೪೩ - ೧೬

೪×೪ = ೧೬;	೧೬೦೦	
೪×೩ = ೧೨;	೧೨೦	+ ೧೨
೩×೪ = ೧೨;	೧೨೦	- ೧೨
೩×೩ = ೯;	೯	- ೦೯
		= ೧೮೪೯

೪೩ × ೪೩ = (೪೦ × ೪೦) + (೪೦ × ೩) + (೩×೪೦) + (೩ × ೩)

= ೧೬೦೦ + ೪೦ ತ್ರಿಕಗಳು + ೪೦ ತ್ರಿಕಗಳು + ೩ ತ್ರಿಕಗಳು

= ೧೬೦೦ + (೪೦ + ೪೦ + ೩) ತ್ರಿಕಗಳು

= ೧೬೦೦ + (೪೦ + ೪೦ + ೩) × ೩. = ೧೬ ನೂರು + ೨೪೯

೪೩ರ ವರ್ಗವನ್ನು ಮಾಡುವ ರೀತಿಯನ್ನು ಹೀಗೆ ಹಚ್ಚಿಕೊಳ್ಳಬಹುದು.

೪. | ೧೬ . . | ೪೩
೪. | ೨೪೯ |
೮೩ | ೧೮೪೯ |

ಆದ್ದರಿಂದ ೪೩ × ೪೩ = ೧೮೪೯.

೧೮೪೯ರ ವರ್ಗಮೂಲವನ್ನು ತೆಗೆಯಬೇಕಾದರೆ ಮೊದಲು ಅದರಲ್ಲಿ ೧೬೦೦ನ್ನು ಕಳೆಯುತ್ತೇವೆ. ೨೪೯ ಉಳಿಯುವದು. ಇದು ೮೩ ಹಾಗೂ ೩ ಇವುಗಳ ಗುಣಾಕಾರವಾಗಿರುತ್ತದೆ; ಆದರೆ ೮೩ರೊಳಗಿನ ೩ ಈ ಅಂಕಿಯು ನಮಗೆ ಗೊತ್ತಿರುವದಿಲ್ಲ. ಆದರೂ ೮೦ರಿಂದ ೨೪೯ಕ್ಕೆ ಭಾಗಿಸಿ ನೋಡಿದರೆ ೩ ಬರುವದು. ವರ್ಗಮೂಲದ ರೀತಿಯನ್ನು ಹೀಗೆ ಹಚ್ಚಿಕೊಳ್ಳುತ್ತೇವೆ.

೧ನೆಯ ಮೆಟ್ಟಿಲು

೪. | ೧೮೪೯ | ೪.
೪. | ೧೬ . . |
೮. | ೨೪೯ |

೨ನೆಯ ಮೆಟ್ಟಿಲು

೪ | ೧೮೪೯ | ೪೩
೪ | ೧೬ |
೮೩ | ೨೪೯ |
| ೨೪೯ |
| . . . |

ವರ್ಗ ಮಾಡುವ ರೀತಿಗೂ ವರ್ಗಮೂಲ ತೆಗೆಯುವ ರೀತಿಗೂ ಇರುವ ಒಡೆದು ಕಾಣುವ ಹೋಲಿಕೆಯು ವಾಚಕರ ಲಕ್ಷ್ಯದಲ್ಲಿ ಬರಲಿ. ಹೀಗೆಯೇ ೨೪೦ರ ವರ್ಗವನ್ನು ಮಾಡಿ ನೋಡಿರಿ. ೨೪೦ = ೨೦೦ + ೪೦.

೨ . . | ೪ . . . . ೨೪.
೨ . . | ೧೭೬ . .
೪೪ . | ೫೭೬ . .

∴ ೨೪೦^{೨} = ೫೭೬೦೦

೨೪೩ ರ ವರ್ಗವನ್ನು ಮಾಡೋಣ. ೨೪೩ = ೨೪೦+೩

ಮೇಲಿನ ನ್ಯಾಸವನ್ನೇ(ಇಟ್ಟುಕೊಳ್ಳುವ ರೀತಿಯನ್ನೇ)ಮುಂದುವರಿಸುವ,

೨ . . | ೪ . . . . ೨೪೩
೨ . . | ೧೭೬ . .
೪೪ . | ೫೭೬ . .
೪ . | ೧೪೪೯
೪೮೩ ೫೯೦೪೯

∴ = ೨೪೩×೨೪೩

= ೫೯೦೪೯

೨೪೩ಕ್ಕೆ ೨೪೩ರಿಂದ ಸರಳ ರೀತಿಯಿಂದ ಗುಣಿಸಿದರೆ ಬರುತ್ತಿರುವಾಗ ಈ ಗೊಂದಲವೇಕೆ ಎಂದು ನೀವು ಕೇಳಬಹುದು. ಅಹುದು, ಗೊಂದಲವು ಬೇಕಾಗಿದ್ದಿಲ್ಲ. ಆದರೆ ೫೯೦೪೯ರ ವರ್ಗಮೂಲ ತೆಗೆಯುವಾಗ ೨೪೩ರ ವರ್ಗವನ್ನು ಅದರಲ್ಲಿ ಕಳೆಯುವದಾದರೂ ೨೪೩ ಎಂಬ ಉತ್ತರದ ಎಲ್ಲ ಅಂಕಿಗಳೂ ಒಮ್ಮೆಲೆ

...ತ್ತಾಗುವದಿಲ್ಲ. ಮೊದಲಿನ ಅಂಕಿ ಎರಡೆಂದು ಮಾತ್ರ ಮೊದಲು ತಿಳಿಯುವದು. ಸ್ವಲ್ಪ ಕೆಲಸಮಾಡಿದ ...ಲೆ ಮುಂದಿನ ಅಂಕಿಯು ೪ ಎಂದು ತಿಳಿಯುವದು. ಇನ್ನೊಂದಿಷ್ಟು ಕೆಲಸವು ಮುಂದುವರಿದ ಮೇಲೆ ...ನೆಯ ಅಂಕಿ ೩ ಎಂದು ಗೊತ್ತಾಗುವದು. ಈ ಪರಿಸ್ಥಿತಿಯಲ್ಲಿ ಸಾದಾ ಗುಣಾಕಾರದ ರೀತಿಯು ಹೇಗೆ ...ಪಯೋಗ ಬೀಳುವದು ? ಅದಕ್ಕಾಗಿ ವರ್ಗಮಾಡುವ ವಿಶಿಷ್ಟರೀತಿಯೊಂದನ್ನು ಶೋಧಿಸಬೇಕಾಯಿತು. ...ಈ ಪತ್ರಿಕೆಯ ಹಿಂದಿನ ಲೇಖಗಳಲ್ಲಿ ಅದನ್ನು ಕೊಟ್ಟಿದೆ, ನೋಡಬಹುದು. ೨೪೩ ರ ವರ್ಗವನ್ನು ...ಡುವ ಈ ವಿಶಿಷ್ಟ ರೀತಿ ಸಂಕ್ಷೇಪದಿಂದ ಹೀಗಿದೆ:

೨೦೦×೨೦೦ = ೪೦೦೦೦; ೨೦೦+೨೦೦ = ೪೦೦; ೪೪೦×೪೦ = ೧೭೬೦೦;

೪೦೦೦೦+೧೭೬೦೦ = ೫೭೬೦೦; ೪೪೦+೪೦ = ೪೮೦; ೪೮೩×೩ = ೧೪೪೯;

೫೭೬೦೦+೧೪೪೯ = ೫೯೦೪೯.

ಕ್ರಮೇಣ ಒಂದೊಂದೇ ಅಂಕಿಯು ದೊರೆತಂತೆ ಸಂಖ್ಯೆಯ ವರ್ಗಮಾಡುವ ರೀತಿ ಇರುವಂತೆ ಕ್ರಮೇಣ ...ಒಂದೊಂದೇ ಅಂಕಿಯು ಗೊತ್ತಾದರೆ ಆ ಸಂಖ್ಯೆಯ ದ್ವಿಗುಣಿತ ಫಲವನ್ನು ತೆಗೆಯುವ ರೀತಿಯು ಹೊಳೆ...ವದು ಉದಾ, ೬೭೫×೨ = ?

೬
೬
೧೨
೭
೧೩೪೫
೫
೧೩೫೦

ರೀತಿಯ ಸ್ಪಷ್ಟೀಕರಣವನ್ನು ವಾಚಕರೇ ಊಹಿಸಲಿ.

ವರ್ಗಮೂಲ ತೆಗೆಯಲಿಕ್ಕೆ ಕಲಿತುಕೊಳ್ಳುವಾಗ ಮೊದಲು ಕೆಳಗಿನ ಕೋಷ್ಟಕವನ್ನು ಪಾಠಮಾಡಿರಬೇಕು:

ಸಂಖ್ಯೆ	ವರ್ಗ	ಸಂಖ್ಯೆ	ವರ್ಗ
೧	೧	೬	೩೬
೨	೪	೭	೪೯
೩	೯	೮	೬೪
೪	೧೬	೯	೮೧
೫	೨೫	೧೦	೧೦೦

ಇದನ್ನು ೨೫ ರ ವರೆಗೆ ಕಲಿಯಲಿಕ್ಕೆ ಸಾಧ್ಯವಾದರೆ ಒಳ್ಳೆಯದು.. ೧೪ ರ ವರ್ಗವು ೧೯೬; ೧೯೬ ರ ...ರ್ಗಮೂಲವೂ ೧೪; ೨೦೦ ರ ವರ್ಗಮೂಲವು ಸರಾಸರಿ ೧೪; ಆದ್ದರಿಂದ ೨.೦೦ ರ ಸರಾಸರಿ ವರ್ಗಮೂಲವು

∴ √೨ = ೧.೪

...ದರಂತೆ ೨೮೯ ರ ವರ್ಗಮೂಲವೂ ೧೭; ೩೦೦ ರ ಸರಾಸರಿ ವರ್ಗಮೂಲವು ೧೭.

ಆದ್ದರಿಂದ √೩ = ೧.೭ (ಸ್ಥೂಲಮಾನದ ಉತ್ತರ)

ಕೆಳಗಿನ ಸಂಖ್ಯೆಗಳ ವರ್ಗಮೂಲಗಳನ್ನು ಥಟ್ಟನೆ ಹೇಳಿರಿ:

(೧) ೪೦೦ (೩) ೧೬೦೦

(೨) ೯೦೦ (೪) ೪೯೦೦

(೫) ೧೧೦೦೦ (೭) ೩೬೦೦೦೦
(೬) ೨೫೦೦೦೦ (೮) ೬೪೦೦೦೦

ಅನೇಕ ಸಲ ಸ್ಥೂಲಮಾನದ ಉತ್ತರಗಳೇ ವ್ಯವಹಾರದಲ್ಲಿ ಹೆಚ್ಚಾಗಿ ಬೇಕಾಗುವವು.

$\sqrt{೧}$ = ೧; $\sqrt{೨}$ = ೧.೪; $\sqrt{೩}$ = ೧.೭; $\sqrt{೪}$ = ೨; $\sqrt{೫}$ = ೨ (ನೋಡಿದಕೂಡಲೇ ಸ್ಥೂಲಮಾನದಿಂದ ತಿಳಿಯುವ ಉತ್ತರ) $\sqrt{೬}$ = ೨; $\sqrt{೭}$ = ೨; $\sqrt{೮}$ = ೨; $\sqrt{೯}$ = ೩; $\sqrt{೧೦}$ = ೩.

೯ ಕ್ಕಿಂತ ಕಡಿಮೆ,		೪ ಕ್ಕಿಂತ ಹೆಚ್ಚು	ಇರುವ	ಎಲ್ಲ ಸಂಖ್ಯೆಗಳ ಸರಾಸರಿವರ್ಗಮೂಲ.	೨
೧೬	,,	೯	,,	,,	೩
೨೫	,,	೧೬	,,	,,	೪
೩೬	,,	೨೫	,,	,,	೫
೪೯	,,	೩೬	,,	,,	೬
೬೪	,,	೪೯	,,	,,	೭
೮೧	,,	೬೪	,,	,,	೮

ಕೆಳಗಿನ ಸಂಖ್ಯೆಗಳ ಸ್ಥೂಲಮಾನದ ವರ್ಗಮೂಲಗಳನ್ನು ಥಟ್ಟನೆ ಹೇಳಿರಿ:—

(೧) ೧೦೦೦ (೫) ೯೮೦೦
(೨) ೯೦೦೦ (೬) ೪೪೦೦
(೩) ೧೧೦೦ (೭) ೪೦೦೦
(೪) ೨೩೦೦ (೮) ೩೦೦೦೦

ಈಗ ಒಂದು ದೊಡ್ಡ ಸಂಖ್ಯೆಯ ವರ್ಗಮೂಲವನ್ನು ಹೇಗೆ ತೆಗೆಯಬೇಕೆಂಬದನ್ನು ಕಲಿಯೋಣ. ಉದಾ, ೧೧೫೫೬ ಇದರ ವರ್ಗಮೂಲವೆಷ್ಟು ? ಭಾಗಾಕಾರದಲ್ಲಿ ಹೇಗೆ ೨೩೪ ಉತ್ತರವಿದ್ದರೆ ಮೊದಲು ೨೦೦ (ಸಮೀಪದ ಸ್ಥೂಲಮಾನ ಬೆಲೆ) ಆ ಮೇಲೆ ೨೩೦ (ಅದಕ್ಕೂ ಸಮೀಪದ ಬೆಲೆ), ಕೊನೆಗೆ ೨೩೪ ಹೇ[ಗೆ] ದೊರೆಯುವದೋ ಹಾಗೆಯೇ ವರ್ಗಮೂಲದಲ್ಲಿ, ಎಂದರೆ ಉತ್ತರವು ೩೩೪ ಇದ್ದರೆ, ಮೊದಲು ಸರಾಸ[ರಿ] ವರ್ಗಮೂಲವು ೩೦೦ ಎಂದು ಗೊತ್ತಾಗುವದು; ಆ ಮೇಲೆ ೩೩೪.

೧೦, ೨೦, ೩೦, ...ಈ ಸಂಖ್ಯೆಗಳ ವರ್ಗಗಳಲ್ಲಿ ಕೊನೆಗೆ ಎಷ್ಟು ಶೂನ್ಯಗಳಿರುವವು ?
೧೦೦,೨೦೦,೩೦೦, ... ,, ,, ,, ,, ?
೧೦೦೦,೨೦೦೦,೩೦೦೦........ ,, ,, ,, ,, ?

ಸಂಖ್ಯೆಯಲ್ಲಿ ೧ ಶೂನ್ಯವಿದ್ದರೆ ವರ್ಗದಲ್ಲಿ ೨ ಶೂನ್ಯಗಳು ಬರುವವು.
,, ೨ ,, ,, ೪ ,, ,,
,, ೩ ,, ,, ೬ ,, ,,

ಆದ್ದರಿಂದ ಕೊಟ್ಟ ಸಂಖ್ಯೆಯ ಮೊದಲನೆ ಸರಾಸರಿ ವರ್ಗಮೂಲವನ್ನು ತಿಳಿದುಕೊಳ್ಳುವದಕ್ಕಾಗಿ ಅದರ ಕೊನೆಯ ಎರಡು, ಇಲ್ಲವೆ ನಾಲ್ಕು, ಇಲ್ಲವೆ ಆರು........ಹೀಗೆ ಅಂಕಿಗಳನ್ನು ತೆಗೆದುಹಾಕಿ ಅವುಗಳ ಸ್ಥಳದಲ್ಲಿ ಶೂನ್ಯಗಳನ್ನು ಬರೆದುಕೊಳ್ಳೋಣ. ೧೧೧೫೫೬ ಇದು ಹೀಗಾಗುವದು; ೧೧,೦೦,೦೦. ೧೧ ರ ಸರಾಸರಿ ವರ್ಗಮೂಲವು ೩ ; ೪ ಶೂನ್ಯಗಳಿರುವದರಿಂದ ಉತ್ತರದಲ್ಲಿ ೩ರ ಮುಂದೆ ೨ ಶೂನ್ಯಗಳು. ಸ್ಥೂಲಮಾನದ ಉತ್ತರವು ೩೦೦. ೧೧, ೧೫, ೫೬ ಹೀಗೆ ಸಂಖ್ಯೆಯಲ್ಲಿ ಬಲಕ್ಕಿನಿಂದ ಎರಡೆರಡು ಅಂಕಿಗಳ ಜೋಡು ಮಾಡುತ್ತ ಹೋಗಿ ಹಿಂದೆ ಉಳಿದ ಸಂಖ್ಯೆಯ ಅಜಮಾಸು ವರ್ಗಮೂಲವನ್ನು ತೆಗೆಯೋಣ. ಬಲಕ್ಕಿನಿಂದ ಜೋಡು ಮಾಡುತ್ತ ಹೋಗುವದರ ಕಾರಣವು ತಿಳಿಯಿತಷ್ಟೇ? ಉತ್ತರದಲ್ಲಿ ಎಷ್ಟು ಅಂಕಿಗಳು ಬರುವವೆಂಬದನ್ನು ಊಹಿಸಲಿಕ್ಕೆ; ಹಾಗು ಮೊದಲನೆಯ ಸ್ಥೂಲಮಾನದ ಉತ್ತರವನ್ನು ಗೊತ್ತುಮಾಡುವದಕ್ಕೆ ಕೆಲವರು ಅದನ್ನು

ಹೀಗೆ ತೋರಿಸುವರು. ೧೧೧೫೫೬ ಅಥವಾ ಹೀಗೆ, ೧೧೧೫೫೬. ನಿಮಗೆ ಸುಲಭವಾಗಿ ತಿಳಿಯುವ ಯಾವದಾದರೂ ರೀತಿಯನ್ನು ಇಟ್ಟುಕೊಳ್ಳಿರಿ.

೩ · ·	೧೧, ೧೫, ೫೬ (೩ · ·	
೩ · ·	೯ · · · ·	೧ನೆಯ ಮೆಟ್ಟು
೬ · ·	೨ ೧೫ · ·	

೬೦ರಲ್ಲಿ ಕೆಲವು ದಶಕಗಳನ್ನು ಕೂಡಿಸಿ ಬಂದದ್ದಕ್ಕೆ ಅಷ್ಟು ದಶಕಗಳಿಂದ ಗುಣಿಸಬೇಕಾಗಿದೆ. (ಹಿಂದೆ ೨೪ರ ವರ್ಗ ಮಾಡಿದ ಕ್ರಮವನ್ನು ನೋಡಿರಿ).

೭ ದಶಕಗಳಿದ್ದರೆ ೬೭೦ಕ್ಕೆ ೭೦ರಿಂದ ಗುಣಿಸಬೇಕಾಗುವದು.

೬ ,, ೬೬೦ಕ್ಕೆ ೬೦ರಿಂದ ,,

೫ ,, ೬೫೦ಕ್ಕೆ ೫೦ರಿಂದ ,, .

ಪ್ರತಿಯೊಂದು ಗುಣಾಕಾರದ ಕೊನೆಗೆ ಎರಡು ಶೂನ್ಯಗಳಂತೂ ಬರುವವು. ದಶಕಗಳ ಅಂಕಿಯು ಗೊತ್ತಿಲ್ಲದ್ದರಿಂದ ೬೦೦ಕ್ಕೆ ಎಷ್ಟು ದಶಕಗಳಿಂದ ಗುಣಿಸಿದರೆ ೨೧೫೦೦ ಬರುವದು—ಎಂಬುದನ್ನು ಗೊತ್ತು ಮಾಡೋಣ.

೬೦೦ × ೧೦ = ೬೦೦೦

೬೦೦ × ೨೦ = ೧೨೦೦೦

೬೦೦ × ೩೦ = ೧೮೦೦೦

೬೦೦ × ೪೦ = ೨೪೦೦೦

ಇವುಗಳಲ್ಲಿ ಯಾವ ಗುಣಾಕಾರವು ೨೧೫೦೦ಕ್ಕೆ ಸಮೀಪವಿರುವದು ?

೬೦೦×೩೦ ಇದು ಸಮೀಪವಿರುವದು; ಏಕೆಂದರೆ ೨೧ ಸಾವಿರವು ೧೮೦೦೦ಕ್ಕಿಂತ ಹೆಚ್ಚು, ೨೪ ಸಾವಿರಕ್ಕಿಂತ ಕಡಿಮೆ ಇರುವುದು. ೬×೩ = ೧೮; ೬×೪ = ೨೪. ೧೮ < ೨೧ < ೨೪. ೩ ಈ ಅಂಕಿಯನ್ನು ನಾವು ಹೇಗೆ ಹುಡುಕಿ ತೆಗೆಯಬಹುದು ? ೬ರ ಮಗ್ಗಿಯನ್ನು ೨೧ ಬರುವ ವರೆಗೆ ಓದಿ ಅಲ್ಲವೇ ?

೩ · ·	೧೧, ೧೫, ೫೬ (೩೩	
೩ · ·	೯	೨ನೆಯ ಮೆಟ್ಟು
೬೩ ·	೨ ೧೫ · ·	
೩ ·	೧ ೮೯ · ·	
೬೬ .	೨೬ ೫೬	

ಈಗ ೩೩ರ ದುಪ್ಪಟ್ಟು ಬಂದಿದೆ. ೬೬೦ರಲ್ಲಿ ಬಿಡಿ ಅಂಕಿಯೊಂದನ್ನು ಕೂಡಿಸಿ ಬಂದದ್ದಕ್ಕೆ ಆ ಬಿಡಿ ಅಂಕಿಯಿಂದ ಗುಣಿಸಬೇಕಾಗಿದೆ. ಆ ಅಂಕಿಯು ಗೊತ್ತಿಲ್ಲ.

೬೬೧ × ೧ = ೬೬೧

೬೬೨ × ೨ = ೧೩೨೪

⋮

೬೬೯ × ೯ = ೬೦೨೧

೪೬೦೦ ಇದು ೬೦೦ × ೭ಕ್ಕಿಂತ ಹೆಚ್ಚಾಗುವದು. ೬೦೦ × ೮ಕ್ಕಿಂತ ಕಡಿಮೆಯಿದೆ. ಕೊನೆಯ ಅಂಕಿಯನ್ನು ಹೇಗೆ ಹುಡುಕಿ ತೆಗೆಯಬಹುದು? ೪೬ಕ್ಕೆ ೬೬ರಿಂದ ಭಾಗಿಸಿಯಲ್ಲವೇ? ಕೊನೆಯ ಅಂಕಿಯು ಅಜಮಾಸು ೭ ಎಂದು ತಿಳಿದ ಮೇಲೆ ೬೬೭ಕ್ಕೆ ೭ರಿಂದ ಗುಣಿಸಿ ನೋಡಿರಿ. ೪೬೬೯ಕ್ಕಿಂತ ಹೆಚ್ಚಾದರೆ ೭ನ್ನು ೬ಕ್ಕೆ ಇಳಿಸಿರಿ.

೬೬೭ × ೭ = ೪೬೬೯ ಸರಿಯಾಗುವದು.

೩	೧೧, ೩೫, ೬೯ (೩೩೭
೩	೯
೬೩	೨ ೩೫
೩	೧ ೮೯
೬೬೭	೪೬೬೯
	೪೬೬೯

೩ನೆಯ ಮೆಟ್ಟು

. . . .

ಕೊಟ್ಟ ಸಂಖ್ಯೆಯಲ್ಲಿ ಮೊದಲು ೩೦೦ರ ವರ್ಗವನ್ನು ಕಳೆದೆವು—೯೦೦೦೦. ಉಳಿದದ್ದರಲ್ಲಿ ೧೮೯೦೦ನ್ನು ಕಳೆದೆವು. ಒಟ್ಟು ೧೦೮೯೦೦ನ್ನು ಕಳೆದೆವು. ಎಂದರೆ ೩೩೦ರ ವರ್ಗವನ್ನು ಕಳೆದಂತಾಯಿತಲ್ಲವೇ? ಇನ್ನುಳಿದದ್ದರಲ್ಲಿ ೪೬೬೯ನ್ನು ಕಳೆದೆವು. ಒಟ್ಟು ೧೦೮೯೦೦ + ೪೬೬೯ } = ೧೧೩೫೬೯ನ್ನು ಕಳೆದೆವು. ಏನೂ ಉಳಿಯಲಿಲ್ಲ. ಆದ್ದರಿಂದ ೩೩೭ರ ವರ್ಗವು ಕೊಟ್ಟ ಸಂಖ್ಯೆಗೆ ಸರಿ ಇರುವದು ವರ್ಗಮೂಲವು ೩೩೭ ಆಯಿತು.

ಇದನ್ನು ಕೆಳಗೆ ತೋರಿಸಿದ ೩೩೭ರ ವರ್ಗವನ್ನು ಮಾಡುವ ರೀತಿಗೆ ಹೋಲಿಸಿ ನೋಡಿರಿ.

೩	. . ೯	೩ ೩ ೭
೩	. ೧ ೮ ೯ . .	
೬೩	. ೧ ೮ ೯ . .	
೭	. ೪ ೬ ೬ ೯	
೬೬೭	೧ ೧ ೩ ೫ ೬ ೯	

ಈ ನೀರಸವಾದ ವಿಷಯದಲ್ಲಿ ಸ್ವಲ್ಪ ಮನಸ್ಸು ರಮಿಸಲೆಂದು ಕೆಳಗಿನ ಸಂಖ್ಯೆಗಳನ್ನು ಅವುಗಳ ವರ್ಗಗಳನ್ನು ನಿರೀಕ್ಷಣೆಗಾಗಿ ಕೊಟ್ಟಿದೆ:

$೩೭^2 = ೧೩೬೯$

$೩೩೭^2 = ೧೧೩೫೬೯$

$೩೩೩೭^2 = ೧೧೧೩೫೫೬೯$

$೩೩೩೩೭^2 = ೧೧೧೧೩೫೫೫೬೯$

ನರೇಂದ್ರ ಬಳಗದ ಸಾಪ್ತಾಹಿಕ ವರದಿ

ಹ. ಗ. ಜೋಶಿ

ಹೊಸ ಅಭ್ಯಾಸಪತ್ರಿಕೆಯಂತೆ ಒಂದು ಸಪ್ತಾಹದ ವರೆಗೆ ಗ್ರಾಮಶಾಲೆಯಲ್ಲಿ ಪಾಠಕ್ರಮವನ್ನು ನಡಿಸಿ ಕೊಂಡುಹೋಗಬೇಕು. ತದನುಸಾರವಾಗಿ ಮೊದಲು ವರುಷದ 'ಬ' ವರ್ಗದಲ್ಲಿ ಎರಡು ವಿಭಾಗಮಾಡಿ ಒಂದು ವಿಭಾಗವನ್ನು ನರೇಂದ್ರಕ್ಕೂ ಇನ್ನೊಂದನ್ನು ಅಮ್ಮಿನ-ಭಾವಿಗೂ ಕಳಿಸುವ ಯೋಜನೆ ಸಿದ್ಧವಾಯ್ತು. ನರೇಂದ್ರ ಮಂಡಲವು ೨೧ ಜನ ಶಿಕ್ಷಕ-ವಿದ್ಯಾರ್ಥಿಗಳನ್ನೊಳ ಗೊಂಡಿತಲ್ಲದೆ ಶ್ರೀಯುತ ಜಿ. ಆರ್. ಹೆರ್ಲೆಕರ ಹಾಗು ಶ್ರೀ. ಎಚ್. ಜಿ. ಜೋಶಿ ಇಬ್ಬರು ಅಧ್ಯಾಪಕ ವರ್ಗದವರು ಮಾರ್ಗದರ್ಶಕರೆಂದು ಮಂಡಲದಲ್ಲಿ ಸೇರಿ-ಕೊಂಡಿದ್ದರು.

ದಿನಾಂಕ ೩ ಡಿಶಂಬರ ದಿನ ಬಳಗವು ತನ್ನ ಎಲ್ಲ ಸಾಧನಗಳೊಂದಿಗೆ ನರೇಂದ್ರ ಗ್ರಾಮವನ್ನು ಹೋಗಿ ಸೇರಿಕೊಂಡಿತು. ಮಂಡಲದಲ್ಲಿ ಒಟ್ಟು ಮೂರು ಗುಂಪುಗಳನ್ನು ಮಾಡಿ ನಿತ್ಯವೂ ಒಂದು ಗುಂಪು ಪಾಠಕೊಡುವುದು, ಇನ್ನೊಂದು ನಿರೀಕ್ಷಣೆ ಹಾಗು ಸಹಾಯ ನೀಡುವುದು, ಮೂರನೆಯದು ಮಹಾಸನದಲ್ಲಿದ್ದುಕೊಂಡು ಸಾಂಘಿಕ ಜೀವನವನ್ನು ನೋಡಿಕೊಂಡು ಹೋಗುವುದು ಹೀಗೆ ಯೋಜಿಸಲಾಗಿತ್ತು. ನಿತ್ಯವೂ ಚಕ್ರ-ನೇಮಿಕ್ರಮೇಣ ಗುಂಪುಗಳು ತಿರುಗುತಲಿದ್ದವು. ಹೀಗೆ ಪ್ರತಿಯೊಬ್ಬ ಶಿಕ್ಷಕ-ವಿದ್ಯಾರ್ಥಿಯೂ ಮೂರು 'ಸಮವಾಯ' ಹಾಗು ರೂಢಿಪಾಠಗಳನ್ನು ಕೊಟ್ಟನಲ್ಲದೆ, ಮೂರು ಸಲ ನಿರೀಕ್ಷಣೆಯನ್ನು ಮಾಡಿದನು. ಬಳಗದ ನಿಯತ-ಕಾಲಿಕೆಯು ಬಿಡುವಿಲ್ಲದಾಗಿತ್ತಲ್ಲದೆ, ಪ್ರಾರ್ಥ-ನೆಯು ವೈಶಿಷ್ಟ್ಯಪೂರ್ಣವಿತ್ತು. ಅದರ ಶ್ರೇಯ ನಮ್ಮ ಸಂಗೀತಶಾಸ್ತ್ರಜ್ಞರಾದ ಶ್ರೀಯುತ ಜಹಗೀರದಾರರಿಗೆ ಸಲ್ಲುವದೆಂದು ಹೇಳದೆ ಇರೆವು.

ಬಳಗವು ಸಾಂಘಿಕ ಜೀವನವನ್ನಂತೂ ತುಂಬಾ ಹುರುಪಿನಿಂದ ನಡಿಸಿಕೊಂಡು ಬಂದಿತು. ಅಡುಗೆಗೆ ನೆರೆ ನೀಡುವದು, ನೀರು ತರುವುದು. ದೈನಂದಿನ ಕಾರ್ಯಕ್ರಮಗಳಾಗಿದ್ದುವಲ್ಲದೆ, ಸಪ್ತಾಹದಲ್ಲಿ ಮೂರು ಸಲ ಹಾಡುಹೇಳುತ್ತ ಬೀಸುವ ಚಟುವಟಿಕೆಯು ಊರ ಹೆಂಗಳೆಯರನ್ನುಕೂಡ ತಲೆ ತಗ್ಗಿಸುವಂತಹದಿತ್ತು. ಭೋಜನವಂತೂ ರಸಭರಿತವಾಗಿರುತ್ತಿತ್ತಲ್ಲದೆ 'ಸಹನೌಭುನಕ್ತು" ಎಂಬ ನುಡಿಯು ಯಥಾರ್ಥವಾಗಿ ಕಾಣಬಹುದಿತ್ತು.

ಸಾಮಾಜಿಕ ಚಟುವಟಿಕೆಯಂದು ನಮ್ಮ ಬಳಗವು ಮನರಂಜನೆಯ ಕಾರ್ಯಕ್ರಮ, ಹನುಮಂತದೇವರ ಕಾರ್ತಿಕಗಳನ್ನು ನೆರವೇರಿಸಿತಲ್ಲದೆ, ಕರ್ನಾಟಕ ವಿಶ್ವ-ವಿದ್ಯಾಲಯದ ವತಿಯಾಗಿ ನಡೆದ ಅಂತರ್ವಿದ್ಯಾಲಯ-ಗಳ ಈಸುವ ಮೇಲಾಟದ ಸಂಪರ್ಧದಲ್ಲಿ ಅಲ್ಲಿಯ ವಿಶಾಲ ಕೆರೆಯ ವ್ಯವಸ್ಥೆಗೆ ಆಗಮಿಸಿದ ಕರ್ನಾಟಕ ಕಾಲೇಜದ ಪ್ರಾಧ್ಯಾಪಕರಿಗೆ ಚಹವನ್ನು ನೀಡುವ ಸಾಹಸವನ್ನು ಮಾಡಿತು. ದಿನಾಂಕ ೭ರಂದು ಸಾಲೆಯ ಅಧ್ಯಾಪಕ ವರ್ಗ ಹಾಗು ಮಕ್ಕಳ ಕೂಡ, ಬಳಗವು ಸೈನಿಕ ದಿನಾಚರಣೆಯನ್ನಾಚರಿಸಿತು. ಶ್ರೀ. ಹೇರ್ಲೆಕರ ಹಾಗು ಶ್ರೀ. ಹ. ಗ. ಜೋಶಿಯವರು ದಿನಾಚರಣೆಯ ಉದ್ದೇಶ ಕುರಿತು ಕೆಲ ಮಾತುಗಳನ್ನಾಡಿದರು. ಬಾಲ-ಕರು ಹಣದ ಸ್ವರೂಪದಿಂದ ತಮ್ಮ ಅಳಿಲಿ ಸೇವೆಯನ್ನು ಸಲ್ಲಿಸಿದರು.

ಹೀಗೆ ಜೀವನದಲ್ಲಿ 'ಎಲೆ ರಸನಿಧಿಯೇ' ಎಂದು ಹಿಗ್ಗುತ್ತಿರುವಾಗಲೆ, 'ಹಾ ಹತ ವಿಧಿಯೇ' ಎಂದು ಕುಗ್ಗುವ ಸಂದರ್ಭವೂ ನಮ್ಮ ಬಳಗಕ್ಕೆ ಬಂದೊದಗಿತು. ಭಾರತದ ಅನರ್ಘ್ಯ ರತ್ನಗಳಲ್ಲೊಂದಾದ ಮಹರ್ಷಿ ಅರವಿಂದರ ನಿರ್ಯಾಣದ ಸುದ್ದಿ ಬಳಗವನ್ನು ಮುಖ ಕ್ಷೀಣಮಾಡಿತು. ಬಳಗವು ಬೆಳಗಿನಲ್ಲಿ ಪ್ರಾರ್ಥನೆಯ ಕಾಲಕ್ಕೆ ಮಹರ್ಷಿಗಳಿಗೆ ತನ್ನ ಶ್ರದ್ಧಾಂಜಲಿಗಳನ್ನರ್ಪಿಸಿ-ತಲ್ಲದೆ, ಆತ್ಮಕ್ಕೆ ಶಾಂತಿಯನ್ನು ಕೋರಿತು.

ಕೊನೆಯ ದಿನ ಕಾಲೇಜ ಪ್ರಿನ್ಸಿಪಾಲರಾದ ಶ್ರೀ. ಕುರ್ತಕೋಟಿಯವರು, ಅಧ್ಯಾಪಕರಾದ ಶ್ರೀ. ಕಟ್ಟಿಯವರು, ಹಾಗು ಶ್ರೀ. ವೀರೇಶ ಹಿರೇಮಠರವರು ಸಂದರ್ಶನವಿತ್ತು ಸಮಾಧಾನ ವ್ಯಕ್ತಮಾಡಿದರು. ರವಿವಾರ

ಸಾಯಂಕಾಲ ಅರಣ್ಯಮಹಾವಿದ್ಯಾಲಯ, ಎತ್ತಿನ ಗುಡ್ಡದ ಶಾಲೆಗಳನ್ನು ಸಂದರ್ಶಿಸಿ ತಾ. ೯-೧೨-೫೦ ರಾತ್ರಿ ತಿರುಗಿ ಧಾರವಾಡಕ್ಕೆ ನೆಮ್ಮದಿಯಾಗಿ ಬಂದು ಸೇರಿಕೊಂಡಿತು. ಬಳಗದವರು ಊರವರಿಗೆ ಚಹ ಕೊಡುವುದು, ಊರವರು ಬಳಗದವರಿಗೆ ಚಹಕೊಡು ವುದು ಸಪ್ತಾಹದಲ್ಲಿ ನಡೆದೇ ಇತ್ತು. ಅಲ್ಲಿಯ ಹೆಡ್ ಮಾಸ್ತರರಾದ ಶ್ರೀ. ಅಣ್ಣಿಗೇರಿಯವರು ತನ್ನ ಅಧ್ಯಾಪಕ ವರ್ಗದವರೊಂದಿಗೆ ನಮ್ಮ ಬಳಗಕ್ಕೆ ಎಲ್ಲ ರೀತಿ ಯಿಂದ ನೆರವು ನೀಡಿದರೆಂಬ ಮಾತನ್ನು ನೆನೆಯದಿದ್ದರೆ ಅನಾಗರಿಕತೆಯಾಗಬಹುದು.

ಬಳಗದ ಇನ್ನೊಂದು ಆದರ್ಶ ವೈಶಿಷ್ಟ್ಯವೆಂದರೆ 'ನರೇಂದ್ರ ದರ್ಶನ'ವೆಂಬ ೧೦೦ ಪುಟದ ಹಸ್ತಪತ್ರಿಕೆ ಯನ್ನು ಹೊರಡಿಸುವ ನಿರ್ಧಾರಮಾಡಿದ್ದು, ಅದರ ಇತಿಹಾಸ, ಭೌಗೋಲಿಕ ಸ್ವರೂಪ, ಆರ್ಥಿಕ ಹಾಗು ಸಾಮಾಜಿಕ ಸ್ಥಿತಿಗತಿಗಳು, ರಸನಿಮಿಷಗಳು ಮುಂತಾದವುಗಳನ್ನು ಕುರಿತು ಈಗಾಗಲೇ ಕೆಲ ಲೇಖನಗಳನ್ನು ಸಂಗ್ರಹಿಸಿದ್ದು ಬೇಗನೇ ಬೆಳಕಿಗೆ ತರಲಿದೆ. ನಕ್ಷೆ, ಚಿತ್ರಗಳನ್ನೂ ಇದು ಒಳಗೊಂಡು ಸಮಗ್ರ ಗ್ರಾಮ-ದರ್ಶನ ಮಾಡಿಸಬಲ್ಲದೆಂಬ ಭರವಸೆ ಮಂಡಲಕ್ಕಿದೆ.

ಮಂಡಲವು ತನ್ನ ಕಾರ್ಯಕ್ರಮಗಳನ್ನೆಲ್ಲ ವಿಶೇಷ ಸದ್ದಿಲ್ಲದೆ, ನಿರಾಡಂಬರವಾಗಿ ಸಾಗಿಸಿಕೊಂಡು ಹೋಯಿತು. ಗಾಂಧೀಜಿಯವರ ಮಾತುಗಳಲ್ಲಿಯೇ ಹೇಳಬೇಕೆಂದರೆ " Our plan to impart primary education to the children at Nareendra was the spear head of silent Social Revolution frought with far more reaching consequences"

ಸಾದರಸ್ವೀಕಾರ ಮತ್ತು ಪುಸ್ತಕ ವಿಮರ್ಶೆ

ಶಿಕ್ಷಣ ದರ್ಶನ: ಬರೆದವರು: ಶ್ರೀ. ನಾ. ಲ. ಬಾಪಟ, ಬಿ.ಎ.,ಬಿ.ಟಿ. (ಮುಖ್ಯಾಧ್ಯಾಪಕರು, ಕ. ಎ. ಬೋರ್ಡ ಹಾಯಸ್ಕೂಲ, ಮಾಳಮರಡಿ, ಧಾರವಾಡ). ಪ್ರಕಾಶಕರು: ಸ್ಟುಡಂಟ್ಸ್ ಓನ್ ಬುಕ್ ಡಿಪೊ, ಧಾರವಾಡ. ಕ್ರೌನ್ ಅಷ್ಟಪತ್ರದ ೧೪೪ ಪುಟಗಳು. ಬೆಲೆ: ೧-೮-೦.

ಶ್ರೀ. ನಾ. ಲ. ಬಾಪಟ ಅವರು ಶಿಕ್ಷಣ ಕ್ಷೇತ್ರದ ಅನುಭಾವಿಗಳಲ್ಲಿ ಒಬ್ಬರು. ಅವರು ಶಿಕ್ಷಣದ ಕ್ಷೇತ್ರದಲ್ಲಿ ದುಡಿಯುತ್ತಿರುವಾಗ ಪಡೆದ ಅನುಭವ ಹಾಗು ಅಭ್ಯಾಸಗಳ ಫಲವಾಗಿ ಈ ಹೊತ್ತಿಗೆಯು ಹೊರಬಿದ್ದಿದೆ. ಇದರಲ್ಲಿ ೩೦ ಪ್ರಕರಣ ಗಳಿವೆ. ನಿಜವಾದ ಶಿಕ್ಷಣವಾವುದು ? ಆದರ್ಶ ಶಿಕ್ಷಣಾಲಯವೆಂತಿರಬೇಕು ? ಶಿಕ್ಷಣದಲ್ಲಿ ಶುಚಿತ್ವ, ಶೀಲಸಂವರ್ಧನೆ, ವ್ಯಾವಹಾರಿಕ ದೃಷ್ಟಿ, ಮಕ್ಕಳ ವ್ಯಕ್ತಿತ್ವ, ಮಾನವ ಸ್ವಭಾವದ ನಿರೀಕ್ಷಣೆ, ಉಪಯುಕ್ತ ಚಟುವಟಿಕೆಗಳು, ಸಹಜ ಪ್ರವೃತ್ತಿ ಗಳು, ಪಾಲಕರ ಕರ್ತವ್ಯ, ವಯಸ್ಕರ ಶಿಕ್ಷಣ, ಪರೀಕ್ಷೆಗಳು, ಕಲಿಸುವ ಪಾಠದ ಟಿಪ್ಪಣಿಗಳು, ಆದರ್ಶ ಶಿಕ್ಷಕ, ಆದರ್ಶ ವಿದ್ಯಾರ್ಥಿ ಮುಂತಾದ ಶಿಕ್ಷಣಕ್ಕೆ ಸಂಬಂಧಿಸಿದ ಸಾಗ್ರ-ಸಮಗ್ರ ವಿಷಯಗಳ ಸುಂದರ ವಿವೇಚನೆಯನ್ನು ಶ್ರೀ. ಬಾಪಟರು ಈ ಪುಸ್ತಕದಲ್ಲಿ ಮಾಡಿದ್ದಾರೆ. ಶೈಲಿಯು ಸುಲಭವಾಗಿದೆ. ಪ್ರತಿಯೊಬ್ಬ ಶಿಕ್ಷಕನೂ ಸಂಗ್ರಹಿಸಬೇಕಾದ ಶಿಕ್ಷಣ ವಿಷಯಕ ಗ್ರಂಥವಿದು. ಲೇಖಕರ ಅನುಭವದ ಫಲ ಗಳು ಇದೇ ರೀತಿಯಾಗಿ ಶಿಕ್ಷಣ ಪ್ರಪಂಚಕ್ಕೆ ದೊರೆಯುತ್ತಿರಲೆಂದು ಹಾರೈಕೆ.

—ಕೆ. ಜಿ. ಕುರ್ತಕೋಟಿ

ನಮ್ಮ ಮುಂಬಯಿ ಶೈಕ್ಷಣಿಕ ಪ್ರವಾಸ

(ವರದಿ)

ಶ್ರೀ. ನಿಂಬಾಳ ಕಲ್ಯಾಣಪ್ಪನವರು,

ಎರಡನೆಯ ವರುಷದ ಶಿ. ವಿದ್ಯಾರ್ಥಿ, ಟಿ. ಸಿ. ಎಮ್. ಧಾರವಾಡ.

ನಮ್ಮ ಪ್ರಯಾಣ

ಅಂದು ಶುಕ್ರವಾರ. (೨೨-೧೨-೫೦) ರಾತ್ರಿ ೧೨ ಗಂಟೆಯ ಸಮಯ. ನಭೋಮಂಡಲದಲ್ಲಿ ತಾರೆಗಳು ಮಿನುಗುತ್ತಿದ್ದವು. ಭೂಮಂಡಲದ ಚುಕ್ಕೆಗಳು (ವಿದ್ಯುದ್ದೀಪಗಳು) ಚಮಕಿಸುತ್ತಿದ್ದವು. ನನ್ನ ಮನವು 'ಚಲೀಜಾವ' ಅಂದಿತು. ನಾನು ಸುಸಜ್ಜಿತನಾಗಿ ಸಾಗಿದೆನು ಸ್ಟೇಶನದತ್ತ. ಸ್ಟೇಶನಕ್ಕೆ ಸರಿಯಾಗಿ ೧೨-೪೫ ಗಂಟೆಗೆ ಮುಟ್ಟಿದೆನು. ಅಲ್ಲಿ ಶ್ರೀ ಜೋಶಿ ನೇತಾಜಿಯವ ರೊಂದಿಗೆ ಗೆಳೆಯರ ಗುಂಪೊಂದು ಆಗಲೇ ಬಂಡಿಯ ದಾರಿ ಕಾಯುತ್ತ ನಿಂತಿತ್ತು.

ಸ್ಟೇಶನ್ ! ಸ್ಟೇಶನ್ ಅಂದಮೇಲೆ ಸಾವಿರಾರು ಸಹೋದರರ ಸದನದಂತೆಯೇ ಸರಿ ! ಜನರ ಓಡಾಟ, ಕೈಬಂಡಿಗಳ ಖಟಖಟಾಟ, ಕಪ್ಪು-ಬಸಿಗಳ ತಾಕಲಾಟ, ಗಾಡಿಗಳ ಓಡಾಟಗಳ ಸ್ವನಗಳೆಲ್ಲವೂ ಒಟ್ಟಾಗಿ ಸೇರಿ ಕಿವಿಗೊಂದು ತಾಲಬದ್ಧವಾದ ನಾದವನ್ನು ಬೀರುತ್ತಲಿದ್ದವು.

ಗಾಡಿ ಸರಿಯಾಗಿ ೧-೧೫ ಗಂಟೆಗೆ ಧಾರವಾಡ ಸ್ಟೇಶನನಿಂದ ಹೊರಟಿತು. ಸುತ್ತಲೆಲ್ಲ ಕತ್ತಲೆಯು ಕವಿದಿದ್ದರಿಂದ ನಮ್ಮ ಮಂಗಚೇಷ್ಟೆಗಳೆಲ್ಲ ನಿಶಾದೇವಿಯ ವಶವಾಗಿದ್ದವು. ಚಲಚಿತ್ರ ಪಟಲದ ಮೇಲೆ ಮೂಡಿ ಮಾಯವಾಗುವ ಬೊಂಬೆಗಳಂತೆ ಸ್ಟೇಶನುಗಳು ಸರಿಯುತ್ತಿದ್ದವು. ಮುಂದಿನ ನಿಲ್ದಾಣ ಮಿರಜ ಬರುವಷ್ಟರಲ್ಲಿಯೇ... ಬಂದಕೂಡಲೇ ಎಲ್ಲರೂ (ಗೆಳೆಯರ ಬಳಗವು) ಪ್ರಾತರ್ವಿಧಿಗಳನ್ನು ಮುಗಿಸಿದರು. ಮುಂಜಾನೆ ೭ ಗಂಟೆಗೆ (೨೩-೧೨-೫೦) ಮಿರಜ ಮುಟ್ಟಿತು ನಮ್ಮ ಗಾಡಿ. ಅಲ್ಲಿ ಅನೇಕರು ತಿಂಡಿತಿನಸುಗಳನ್ನು ತಿಂದರು. ಮುಂದ್ಕೆ ೯-೩೦ ಗಂಟೆಗೆ ಮಿರಜದಿಂದ ಮುಂದುವರಿಯಿತು.

ಈ ವರೆಗೆ ನಿದ್ರಾದೇವಿಯ ಸೆರೆಯಲ್ಲಿ ಸಿಕ್ಕುಬಿದ್ದ ಶಿಕ್ಷಕರು, ಕತ್ತಲೆಯ ಪರದೆಯನ್ನು ಹರಿದ ಸೂರ್ಯನನ್ನು ಸ್ಮರಿಸಿ, ತಮ್ಮ ತಾರುಣ್ಯಕ್ಕೊಪ್ಪುವಂಥ ಬೀಜದ ಮಾತಗಳನ್ನು ಬಿತ್ತಹತ್ತಿದರು. ಆಗ ತಾನೆ ಹೃದಯದಿಂದ ಹಿಗ್ಗಿನ ಹೊಳೆಯೊಂದು ಹೊರಸೂಸಿ ಹರಿಯಹತ್ತಿತು. ನಯನಗಳಿಂದ ಆನಂದ ಬಾಷ್ಪಗಳು ಉದುರಹತ್ತಿದವು. ಭೂಗೋಲದಲ್ಲಿ ಬಾಯಿಪಾಠ ಮಾಡುತ್ತಿದ್ದ, ಕಣಿವೆ ಮಾರ್ಗಗಳೂ, ಘಟ್ಟಗಳೂ, ಸೃಷ್ಟಿಸೌಂದರ್ಯ-ಇಂದು ಪ್ರತ್ಯಕ್ಷ ಕಂಡೆವಲ್ಲ ! ಎಂದು ಮತ್ತಿಷ್ಟು ಆನಂದದ ಅತಿರೇಕವಾಯಿತಲ್ಲದೆ, ಮನಸ್ಸಿನ ಮೇಲೆ ಮುದ್ರೆಯೊತ್ತಿದಂತೆ ಮೂಡುತ್ತಿದ್ದವು. ಮರಾಠರು ನಾಡಗುಡಿಯ ಮೆರೆಯಿಸಿದ ನಾಡಾದ ಪುಣೆಗೆ ಹಗಲು ೪-೧೫ ಗಂಟೆಗೆ ಮುಟ್ಟಿದೆವು.

ಅದೇ ದಿನ ರಾತ್ರಿ ಹಾಗೇ ಮುಂಬಯಿಗೆ ಪ್ರಯಾಣ ಬೆಳೆಸಿದೆವು. ಇಡೀ ರಾತ್ರಿಯಲ್ಲ ಗಾಡಿಯಲ್ಲಿಯೇ ಕಳೆದೆವು. ಬೊರೀಬಂದರದಲ್ಲಿ (V.T.) ನಮ್ಮೆಲ್ಲರ ಸ್ವಾಗತಕ್ಕಾಗಿ ಸಾಹಿತ್ಯ ಸಮ್ಮೇಲನದ ಸ್ವಯಂಸೇವಕರು ಸಿದ್ಧರಾಗಿಯೇ ನಿಂತಿದ್ದರು ಹಾಗೂ ನಮಗಾಗಿಯೇ ಒಂದು ಬಸ್ಸು ಬಂದು ನಿಂತಿತ್ತು. ನಾವೆಲ್ಲ ಗೆಳೆಯರು ಮೋಟಾರಿನಲ್ಲಿ ಮಂಡಿಸುವದೊಂದೇತಡ ಉಳಕೊಳ್ಳುವ ಸ್ಥಳಕ್ಕೆ ನಮ್ಮನ್ನು ಹೊತ್ತುಕೊಂಡು ಹೋಗೇ ಬಿಟ್ಟಿತು.

ಕನ್ನಡ ಸಾಹಿತ್ಯ ಸಮ್ಮೇಲನ

ಮುಂಬಯಿ ಪಟ್ಟಣದಲ್ಲಿ ಕೇವಲ ೩ ಲಕ್ಷ ಜನ ಕನ್ನಡಿಗರು ವಾಸಿಸುವರು. ಇನ್ನುಳಿದ ಜನರೆಂದರೆ, ಗುರ್ಜರರು, ಮರಾಠರು, ಕ್ರಿಶ್ಚಿಯನ್ನರು....ಮುಂತಾದವರು. ಇಂಥ ಅಲ್ಪಸಂಖ್ಯಾಕರಾಗಿದ್ದ ಕನ್ನಡಿಗರು ಮುಂಬಯಿ ನಗರದಲ್ಲಿ ಕ.ಸಾ. ಸಮ್ಮೇಲನ ಸಾಗಿಸಿದ್ದು ಆಶ್ಚರ್ಯದ ಸಂಗತಿಯೇ ಸರಿ! ಈ ಸಮ್ಮೇಲನಕ್ಕೆಅಲ್ಲಿಯ ನಿವಾಸಿಗಳು

ಮಾಡಿದ ಉಪಕಾರಕ್ಕೆ, ಸಹಾಯಕ್ಕೆ, ಪ್ರೋತ್ಸಾಹನೆಗೆ ಎಷ್ಟು ಅಭಿನಂದನೆಗಳನ್ನು ಅರ್ಪಿಸಿದರೂ ಅಲ್ಪವೇ ಸರಿ!

೧೯೫೦ ಡಿಸೆಂಬರ ೨೪-೨೫-೨೬ ನೇ ದಿನಾಂಕಗಳಲ್ಲಿ ಕ.ಸಾ.ಸಮ್ಮೇಲನದ ಕಾರ್ಯಕ್ರಮಗಳು ನಡೆದವು ಎಂಬುದು ತಮ್ಮೆಲ್ಲರಿಗೆ ಗೊತ್ತಿರಲಿಕ್ಕೆ ಸಾಕು! ಅದರಂತೆ ಸಾಹಿತ್ಯಸಮ್ಮೇಲನಕ್ಕೆ ಆಗಮಿಸಿದ ಜನಕ್ಕೆ (ಮೂರು ದಿನಗಳನಷ್ಟಿಗೆ) ಉಳಕೊಳ್ಳುವ ಮತ್ತು ಊಟದ ವ್ಯವಸ್ಥೆ ಮಾಡಿದಲ್ಲದೆ ಸಮ್ಮೇಲನದ ಸಭಾಸ್ಥಳಕ್ಕೆ ಜನರಿಗೆ ಕರೆದೊಯ್ಯಲು ಬಸ್ಸು ಇಟ್ಟಿದ್ದರು.

ಕ.ಸಾ.ಸಮ್ಮೇಲನವು 'ಸರ್ ಕಾವಸಜಿ ಜಹಂಗೀರ ಹಾಲ'ದಲ್ಲಿ ನೆರವೇರಿತ್ತಷ್ಟೆ. ಸಮ್ಮೇಲನದ ಉದ್ಘಾಟನೆಯನ್ನು ಕೇಂದ್ರ ಸರಕಾರದ ಬಾನುಲಿ ಮಂತ್ರಿಗಳಾದ ಶ್ರೀ ದಿವಾಕರರು ಮಾಡಿದರು. ತಾ| ೨೫-೧೨-೫೦ ನೇ ದಿನ ಸಮ್ಮೇಲನದ ಅಧ್ಯಕ್ಷರಾದ 'ರಾಷ್ಟ್ರಕವಿ' ಶ್ರೀ ಮಂ.ಗೋವಿಂದ ಪೈ ಅವರ ಭಾಷಣವನ್ನು ಕೇಳಿದ ಕಿವಿಗಳು ಇಂದಿಗೂ ಧನ್ಯವಾಗಿವೆ. ಕನ್ನಡಮ್ಮನ ಬಗ್ಗೆ, ತಾವು ಸಲ್ಲಿಸಿದ ಸೇವೆ ತೀರ ಅಳಲ ಸೇವೆಯೆಂದೂ ಅವಳ ಉಪಕಾರವು ಅನಂತವಾದುದೆಂದೂ ಅವಳ ಉಪಕಾರಕ್ಕೆ ಪ್ರತ್ಯುಪಕಾರವನ್ನು ಸಲ್ಲಿಸುವದು ತಮ್ಮ ಸಾಮರ್ಥ್ಯವಲ್ಲವೆಂದೂ ಗದ್ಗದಿತ ಕಂಠದಿಂದ ಕಣ್ಣೀರುಗಳನ್ನು ಸುರಿಸಿದರು.

ಸಮ್ಮೇಲನದ ಜೊತೆಗೆ, ಸಾಹಿತ್ಯಗೋಷ್ಠಿ, ಮಹಿಳಾಗೋಷ್ಠಿ, ಕರ್ನಾಟಕ ಪತ್ರಿಕೋದ್ಯಮಿಗಳ ಪರಿಷತ್ತು, ಪ್ರದರ್ಶನ ಮೊದಲಾದವುಗಳು ಒಳ್ಳೇ ವೈಭವದಿಂದ ಜರುಗಿದವು. ಸಾಹಿತ್ಯಗೋಷ್ಠಿಗೆ ಪ್ರ. ವಿ.ಕೃ. ಗೋಕಾಕರವರೂ, ಮಹಿಳಾಗೋಷ್ಠಿಗೆ ಸೊಲ್ಲಾಪೂರದ ಶ್ರೀಮತಿ ಜಯದೇವಿ ಬಾಯಿ ಲಿಗಾಡೆಯವರೂ, ಕ. ಪತ್ರಿಕೋದ್ಯಮಿಗಳ ಪರಿಷತ್ತಿಗೆ ಶ್ರೀ ಮೋಹರೆ ಹನುಮಂತರಾಯರೂ ಅಧ್ಯಕ್ಷರಾಗಿದ್ದರು. ಪ್ರೊ. ಗೋಕಾಕ,ಪ್ರೊ. ಮಾಳವಾಡರವರ ಭಾಷಣವನ್ನು ಕೇಳಿದರೆ ಕನ್ನಡಮ್ಮನ ಬಗ್ಗೆ ಎಷ್ಟು ಹೆಮ್ಮೆಯಿದೆ ಎಂದು ಪ್ರತಿಯೊಬ್ಬನಿಗೆ ಗೊತ್ತಾಗದೆ ಇರದು! ಇದರಂತೆ ಶ್ರೀಮತಿ ಜಯದೇವಿಯವರ ವ್ಯಾಖ್ಯಾನದ ಜಯಮಾಲೆಯನ್ನು ಧರಿಸಿದ ಹೆಣ್ಮಕ್ಕಳು ಧನ್ಯರೆ ಸರಿ! "ಕನ್ನಡತಿಯರು ಅನುಭವಿಗಳೂ ಅನುಬಾವಿಗಳೂ ಇದ್ದಂತೆ ವೀರಾಗ್ರಣಿಗಳೂ ಆಗಿದ್ದಾರೆ. ಸಾಮ್ರಾಜ್ಯವನ್ನು ಕಟ್ಟಿದ್ದಾರೆ. ದೇಶವನ್ನಾಳಿದ್ದಾರೆ. ಇಂದು ನಾವು ಕನ್ನಡನಾಡನ್ನು ಪುನಃ ಕಟ್ಟಬೇಕಾಗಿದೆ." ಎಂದು ಕನ್ನಡಮ್ಮನ ಕುವರಿಯು ಕೋಮಲ ಹೃದಯವನ್ನು ಕಲಕಿಸಿಬಿಟ್ಟರು.

ಸಮ್ಮೇಲನದ ಅಂಗವಾಗಿ ಪ್ರತಿನಿತ್ಯ ಮನರಂಜನೆಯ ಕಾರ್ಯಕ್ರಮಗಳುಒಳ್ಳೇ ಅಟ್ಟಹಾಸದಿಂದ ಜರುಗುತ್ತಿದ್ದವು.

ಸುವ್ಯವಸ್ಥೆ–

ಈ ಪ್ರಕಾರ ಮೂರು ದಿನಗಳು ಮಾಯವಾದವು. ನಾಲ್ಕನೇ ದಿವಸ ಮುಂಬಯಿಪಟ್ಟಣ ಪ್ರವಾಸ ಪ್ರಾರಂಭವಾಯಿತು. ಪ್ರಯಾಣಿಕರ ಸೌಕರ್ಯಗಳಿಗಾಗಿ ಎಷ್ಟು ಸವಲತ್ತುಗಳನ್ನು ಕೊಟ್ಟಿರುವರಲ್ಲಾ! ಕೇವಲ ಒಂದು ಒಂದು ಆಣೆ ಕೊಟ್ಟರೆ ಇಡೀ ಮುಂಬಯಿಪಟ್ಟಣ ತೋರಿಸುವರಲ್ಲಾ! ಟ್ರಾಮಿನವರಂತೂ ಎಷ್ಟು ದಯಾಳುಗಳು! ಎಂದು ನಮ್ಮನಮ್ಮಕ್ಕೆ ನಾವೇ ಅಚ್ಚರಿಗೊಳ್ಳುತ್ತಿದ್ದೆವು. ಬೇರೆ ಟ್ರಾಮುಗಳನ್ನು ಹತ್ತಿದರೂ ಅವರು ಮನಗೆ ಒಳ್ಳೇಮಾರ್ಗದರ್ಶನ ಮಾಡಿಕೊಡುತ್ತಿದ್ದರು. ಬಸ್ಸು, ಟ್ರಾಮುಗಳ ಓಡಾಟಗಳಂತೂ ಹೇಳತೀರದು! ನಮಗಂತೂ ಟ್ರಾಮುಗಳೆಂದರೆ ಆಟದ ಗೊಂಬೆಗಳಂತೆ ಆಗಿದ್ದವು. ಇಷ್ಟು ದೊಡ್ಡ ಪಟ್ಟಣವಿದ್ದಾಗ್ಯೂ ಕೂಡ ಸ್ವಚ್ಛತೆಯ ಕಡೆಗೆ ಎಷ್ಟುಲಕ್ಷಕೊಟ್ಟಿರುವರು! ಪ್ರತಿಯೊಂದುಮಾರ್ಗ, ಮನೆ, ಪಾಯಖಾನೆಗಳನ್ನು ನೋಡಿದರೆ ಬಾಯಿಯಲ್ಲಿ ಬೆರಳಿಟ್ಟುಕೊಳ್ಳಬೇಕು. ಥಳಥಳಿಸುವ ಡಾಂಬರಬೀದಿ, ಪ್ರತಿಬಿಂಬಿಸುವ ಪಾಯಖಾನೆಗಳನ್ನು ಕಂಡರೆ ಅವಾವನಿಗೆ ಆಶ್ಚರ್ಯವಾಗಲಿಕ್ಕಿಲ್ಲ? ಆದರೆ ಒಂದೇ ಒಂದು ತ್ರಾಸು, ಮೂತ್ರಾಲಯದಕೊರತೆ! ಅಪರಿಚಿತ ಜನರಿಗಂತೂ ಎಲ್ಲಿ ಮೂತ್ರ ವಿಸರ್ಜನೆ ಮಾಡಬೇಕೆಂಬುವದೇ ಗೊತ್ತಾಗುವದಿಲ್ಲ.

ಪ್ರೇಕ್ಷಣೀಯ ಸ್ಥಳಗಳು.

೧. ಬೆಸ್ಟ ಮ್ಯುಜಿಯಮ್ (Best Museum) ಇದೊಂದು ವಿವಿಧ ವಸ್ತು ಹಾಗೂ ಸತ್ತ ಪಶು-ಪಕ್ಷಿಗಳ ಸಂಗ್ರಹಾಲಯ. ಲಾರ್ಡ ಕ್ಯಾನಿಂಗನ ಕಲ್ಲಿನ ಕೆತ್ತಿಗೆಯ ಮೂರ್ತಿಯು ಎದುರಿಗೆ ಎದ್ದುಕಾಣುತ್ತದೆ. ಪೂಜ್ಯ ಪಿತಾಜಿ (ಮ. ಗಾಂಧಿ)ಯ ಪ್ರತಿಮೆಯು ಪ್ರಕಾಶಿಸುತ್ತದೆ. ಅಲ್ಲಿಯ ಕಲಾಕೌಶಲ್ಯದ ವಸ್ತುಗಳನ್ನುಕಂಡರೆ,

ಪ್ರಾಚೀನ ಕಾಲದ ಜನರು ಎಷ್ಟು ವಿದ್ವನ್ಮಣಿಗಳಾಗಿದ್ದ ರೆಂಬುದನ್ನು ಬೇರೆ ಹೇಳಬೇಕಾಗಿಲ್ಲ! ಹಾಗೂ ಐತಿಹಾಸಿಕ ಪುಸ್ತಕಗಳನ್ನು ಪಠಿಸುವದು ಬೇಕಿಲ್ಲ. ಆಗಿನ ಅರಸರು ಯುದ್ಧಗಳಲ್ಲಿ ಉಪಯೋಗಿಸಿದ ಕವಚಗಳು, ಕತ್ತಿ, ಢಾಲು, ಕಠಾರಿ, ತೋಫು ಮೊದಲಾದ ಯುದ್ಧೋಪಕರಣಗಳು ಹೃದಯವನ್ನು ಕಲಕಿಸಿಬಿಡು ತ್ತವೆ. ಇವಲ್ಲದೆ, ದಶಾವತಾರದ ಚಿತ್ರಗಳೂ, ತಾಮ್ರ ಪಟಗಳೂ, ನಾಣ್ಯಗಳೂ, ಲಿಪಿಗಳೂ, ತಾಮ್ರ, ಬೆಳ್ಳಿ, ಮೊದಲಾದ ಲೋಹಗಳಲ್ಲಿ ಹಾಗೂ ಪ್ರಾಣಿಗಳ ಕೋಡು ಗಳಲ್ಲಿ ತಯಾರಿಸಿದ ಸುಳುವಿನ ಚಿತ್ರ ವಿಚಿತ್ರವಾದ ನಯನಮನೋಹರನಾದ ಕೈಕೆಲಸದ ಸಾಮಾನುಗಳೂ, ಕಾಶ್ಮೀರಿಶಾಲು,ರತ್ನಗಂಬಳಿಗಳಲ್ಲಿಯ ನಕ್ಷೆಗಳೂ, ಮಣ್ಣಿ ನಲ್ಲಿ ತಯಾರಿಸಿದ ಮಾಡೆಲ್ಲು (ನಕಾಶಿ)ಗಳೂ ಒಳ್ಳೇ ಪ್ರೇಕ್ಷಣೀಯವಾಗಿವೆ. ಸತ್ತಂಥ ಪಶು-ಪಕ್ಷಿಗಳು, ಜೀವ ಕಳೆ ತುಂಬಿದಂತೆ, ನೈಸರ್ಗಿಕವಾದ ಪ್ರಾಣಿಗಳಂತೆ, ಅವುಗಳಿಗನುಗುಣವಾದ ತಾಣಗಳಲ್ಲಿಯೇ ಅವನ್ನು ನಿಲ್ಲಿಸಿ ದ್ದಾರೆ. ಇದೆಲ್ಲವನ್ನು ನೋಡಲಿಕ್ಕೆ ಕನಿಷ್ಠ ನಾಲ್ಕು ತಾಸು ವೇಳೆಯಾದರೂ ಬೇಕು.

ಇನ್ನು **ಜೀವಂತ ಪಶು-ಪಕ್ಷಿ ಸಂಗ್ರಹಾಲಯ** ವನ್ನು ಕಂಡರೆ ಕಣ್ಣುಗಳನ್ನು ಕರುಣೇಶನು ನಾಲ್ಕು ಕೊಡಬಾರದೇಕೆಂದೆನಿಸುತ್ತದೆ. ದೇಶ ವಿದೇಶದ, ನಾನಾ ಪ್ರಕಾರದ ಅನೇಕ ಜಾತಿಯ ಪ್ರಾಣಿ ಪಕ್ಷಿಗಳು ಯಾವ ಪ್ರಕಾರ ನಿಸರ್ಗದಲ್ಲಿ ಸಂಚರಿಸುವವೋ ಅದೇ ಪ್ರಕಾರ ಪ್ರತಿಯೊಂದು ಪ್ರಾಣಿಗೆ ಅನುಕೂಲತೆ ಮಾಡಿಕೊಟ್ಟಿ ದ್ದಾರೆ.

೨. **ಹಿಂದುಸ್ತಾನದ ಹೆಬ್ಬಾಗಿಲು** (Gate way of India)—ಪರದೇಶದಿಂದ ಜಲಮಾರ್ಗವಾಗಿ ಹಿಂದುಸ್ತಾನಕ್ಕೆ ಬರಬೇಕಾದರೆ ಮುಂಬಯಿ ಬಂದರದಿಂದಲೇ ಬರಬೇಕಾಗುವದು. ಅದಕ್ಕಂತೆಯೇ ಹಿಂದುಸ್ತಾನದ ಹೆಬ್ಬಾಗಿಲು ಎಂದು ಕರೆದಿರುವರು. ಇಲ್ಲಿ ನಿಂತು ಸಮುದ್ರ ಸೌಂದರ್ಯವನ್ನು ನಿರೀಕ್ಷಿಸಿದರೆ ಆತ್ಮಕ್ಕೆ ಆಗುವ ಆನಂದಕ್ಕೆ ಪಾರವೇ ಇಲ್ಲ. ಸಾಗರ ತರಂಗಗಳಲ್ಲಿ ತೇಲಾ ಡುವ ಅನೇಕ ದೋಣಿ, ನಾವು, ಹಡಗುಗಳ ಹೊಯ್ದಾಟಗಳಿಗೆ ತೋಲುವಂತೆ, ನಮ್ಮ ಹೃದಯದ ಹೊಳೆಯ್ಲ ಏರಿಳಿತಗಳು ಕಾಣುತ್ತಿದ್ದವು. ಪ್ರತಿಯೊಬ್ಬನು ನಾಲ್ಕಾಣೆ ಕೊಟ್ಟರೆ ತೀರಿತು, ನಾವಿಕರು ನಾಲ್ಕಾರು ಮೈಲು ಜಲಪ್ರಯಾಣ ಮಾಡಿಸಿಯೇ ಬಿಡುವರು!

೩. **ತಾಜಮಹಲ ಹೊಟೇಲ**— ಸಮುದ್ರ ತಟಕ್ಕೆ ತಲ್ಪಿರುವ ಇದೊಂದು ಆಕರ್ಷಕ ಕಟ್ಟಡ. ಸಿರಿವಂತರ ಸ್ವರ್ಗದ ಸದನ! ತಿಂಗಳೊಂದಕ್ಕೆ ಇನ್ನೂರು ಮುನ್ನೂರು ರೂಪಾಯಿ ಕೊಟ್ಟರೆ ಒಳಪ್ರವೇಶ! ಬೇಡಿ ದವರಿಗೆ ಬೇಡಿದ್ದನ್ನು ಬೇಕಾದಷ್ಟು ಕೊಡುವ ಭೂಲೋಕದ ಕಾಮಧೇನು! ಕಲ್ಪವೃಕ್ಷ!! ಇಂದ್ರಭವನ!!!

೪. **ಮಲಬಾರಹಿಲ್ಲು** (Santa cruse)-ಮುಂಬಯಿ ನಗರದ ಅತಿ ಎತ್ತರವಾದ ಸ್ಥಳ. ಕಂಟಿಗಳನ್ನು ಕತ್ತರಿಸಿಯೇ ಅನೇಕ ಪ್ರಾಣಿಗಳನ್ನು ರಚಿಸಿದ್ದಾರೆ. ಕಾರಂಜಿಗಳನ್ನು ಪುಟಿಸಿದ್ದಾರೆ. ಸೌಂದರ್ಯದ ಮಾರ್ಗಗಳನ್ನು ಮಾಡಿದ್ದಾರೆ. ಅಲ್ಲಿಗೆ ಜೋಡಿ ಜೋಡಿಯಿಂದ ಜನರು ವಿಹಾರಕ್ಕಾಗಿ ಬರುವದನ್ನು ಕಂಡೆವು.

ಇಲ್ಲಿ ನಿಂತು ಸುತ್ತಲೆಲ್ಲ ದೃಷ್ಟಿಯನ್ನು ಬೀರಿದರೆ ಒಂದೆಡೆಗೆ ಸಮುದ್ರಸೌಂದರ್ಯ, ಮತ್ತೊಂಡೆಗೆ ಇಡೀ ಮುಂಬಯಿ ನಗರದ ಒಂದು ದೃಶ್ಯ, ಇನ್ನೊಂದೆಡೆಗೆ ಸೃಷ್ಟಿಯ ಸೊಬಗನ್ನು ಬೀರುವ ಒಂದುನೋಟ, ಇವೆಲ್ಲವು ಗಳನ್ನು ಸೂಕ್ಷ್ಮ ದೃಷ್ಟಿಯಿಂದ ವಿಚಾರಿಸಿದರೆ ಒಂದು ಸುಂದರ ಸುರಸದನದಂತೆಯೇ ಹೊಳೆಯುವದು.

೫. **ವಿಮಾನ ನಿಲ್ದಾಣ**(Santa cruse)– ಗ್ರ್ಯಾಂಟ ರೋಡ (Grant Road) ಸ್ಟೇಶನದಿಂದ (B. B. C. I. Rly) ೩ ಆಣೆಕೊಟ್ಟರೆ ತೀರಿತು—ಸಾಂತಾಕ್ರೂಝು ಸ್ಟೇಶನ್ ಬಂದೇಬಿಡುವದು. ಅಲ್ಲಿಂದ ಪುನಃ ಕೇವಲ ೨ ಆ. ಕೊಟ್ಟರೆ ಬಸ್ಸುವಿಮಾನನಿಲ್ದಾಣ(Airodrome)ಕ್ಕೆ ಹೊತ್ತುಕೊಂಡೇ ಹೋಗುವದು.

ಭವ್ಯವಾದ ಶೈಲಿನಲ್ಲಿ ಭವನಗಳು ಇರುತ್ತವೆ. ಅಲ್ಲಿ 'ಒಳಪ್ರವೇಶವಿಲ್ಲ.' (No Admission, No Parking) ಎಂದು ಬೋರ್ಡುಗಳು ಕಾಣಿಸಿಕೊಂಡರೂ ಸಹಿತ ನಾವು ಧೈರ್ಯದಿಂದ ಹಾಗೇ ಒಳಗೆ ಪ್ರವೇಶಿಸಿದೆವು. ಆಹೊತ್ತು ನಮ್ಮ ಸುದೈವ! ರಕ್ಷಕರಾರೂ ಅಲ್ಲಿರಲಿಲ್ಲ. ನಾಲ್ಕಾರು ವಿಮಾನುಗಳು ಬಿಸಲಿನ ಬೇಗೆಗೆ ಬಾಯ್ಬಿಡುತ್ತ, (ಮಿಂಚುತ್ತ) ಸಾಲಾಗಿ ನಿಂತಿದ್ದವು. ನಾಲ್ಕೈದು ಮಿನಿಟುಗಳಲ್ಲಿ ವಿಮಾನ ಸಂಶೋಧಕರಾಗಿಯೆಬಿಟ್ಟೆವು. ಅದರ ಪ್ರತಿಯೊಂದು ಭಾಗಸಹಿತ ಸ್ಪರ್ಶಮಾಡಿ ಪರೀಕ್ಷಿ

ಸಿದೆವು. ನಾನಂತೂ ವಿಮಾನದೊಳಗೆ ಹತ್ತೇಬಿಟ್ಟೆ. ಎಂಥ ಅದ್ಭುತ ಆಕಾರ! ಎಷ್ಟು ನಯನಮನೋಹರವಾದ ಹೊಳಪು!! ಗಗನವಿಹಾರಿಯಾದಾಗ ಎಷ್ಟು ಸಣ್ಣ ಪ್ರಮಾಣದಲ್ಲಿ ಕಾಣುವದಲ್ಲಾ! ಆದರೆ ಹತ್ತರ ಹೋದಂತೆ ಅದು ಅದ್ಭುತ ಆಕಾರದ ಇಮಾರತಿಯೇ (ಹದ್ದಿನ ಆಕಾರ) ಎದ್ದು ಬಂದಂತೆ ಕಾಣುತ್ತದೆ. ಇದೆಲ್ಲವನ್ನು ನಿರೀಕ್ಷಿಸುವದರಲ್ಲಿ ನಮ್ಮನ್ನು ಹೊರದಬ್ಬಲಿಕ್ಕೆ ಓರ್ವನು ಬಂದೇ ಬಿಟ್ಟನು. ನಿರುಪಾಯರಾಗಿ ಹಾಗೇ ನಮ್ಮ ದಾರಿಹಿಡಿದು ವಸತಿಗೃಹಕ್ಕೆ ತೆರಳಿದೆವು!

ಇವಲ್ಲದೆ ಮುಂಬಯಿ ಪಟ್ಟಣದಲ್ಲಿ **ಚೌಪಾಟಿ, ಮಾರ್ಕೇಟು, ಮುಂಬಾದೇವಿ ಗುಡಿ, ಅಮೇರಿಕನ್ ಸಿನೇಮಾ ಥೇಟರ್, ಮೋತಿಬಾಜಾರ, ಕಾಳಾಬಾದೇವಿರೋಡ, ಕೋರ್ಟು, ಯುನಿವ್ಹರ್ಸಿಟಿ, ಬೋರಿಬಂದರ** (V. T.)....ಮುಂತಾದವುಗಳು ಅತಿ ಪ್ರೇಕ್ಷಣೀಯ ಸ್ಥಳಗಳಾಗಿವೆ. ಪ್ರತಿಯೊಂದನ್ನು ವರ್ಣಿಸಲಿಕ್ಕೆ ಆ ಬೃಹಸ್ಪತಿಯೇ ಬರಬೇಕು!

ಮರುಪ್ರಯಾಣ–ಇರಲಿ, ಇಲ್ಲಿಗೆ ನಮ್ಮ ಮುಂಬಯಿ ಪಟ್ಟಣ ಪ್ರವಾಸ ಸುಗಮವಾಗಿ ಸಾಗಿದಂತಾಯಿತು. ದಿನಾಂಕ ೨೮–೧೨-೫೦ ಮುಂಜಾನೆ ೭-೨೦ ಗಂಟೆಗೆ ಗಾಡಿಯು ಮುಂಬಯಿಯಿಂದಾ ಮುಂದವರೆಯಿತು. ಪುಣೆಗೆ ಬರುವ ವರೆಗೆ ಮುಂಬಯಿ ಶಹರದ ಶೋಕಿ ವಿಚಾರವೇ ವಿಚಾರ. ಕೆಲವರಂತೂ ಅರ್ಧ ಪಗಾರದ ಮೇಲೆ ಮುಂಬಯಿ ಪಟ್ಟಣದಲ್ಲೇ ಇರುತ್ತೇವೆಂದು, ಹಲವರು ಹಳ್ಳಿಯೇ ಒಳ್ಳೆಯದೆಂದು, ಈ ಗಾಳಿಗೋಪುರಗಳನ್ನು ಕಟ್ಟುವದರಲ್ಲಿ ೧೧ ಗಂಟೆ ಹೊಡೆಯಿತು; ಪುಣೆ ಬಂದೇಬಿಟ್ಟಿತು.

ಮುಂಚೆ ಗೊತ್ತುಪಡಿಸಿದ ಗೃಹಕ್ಕೆ ಹೋಗಿ ಉಟ ಕೊಂಡೆವು. ಊಟ ತೀರಿಸಿದೆವು. ಅಲ್ಲಿಯ ಮಾದರಿಯ ಸ್ಥಳಗಳಾದ, **ಮರಾಠರ ಆಳಿಕೆಯಲ್ಲಿದ್ದ ವಾಡೆ, ಶಿವಾಜಿ ಪಾರ್ಕ, ಮಂಡೆ ಮಾರ್ಕೆಟು, ಒಕ್ಕ**ಲುತನ **ಕಾಲೇಜ** ಮೊದಲಾದವುಗಳನ್ನು ನಿರೀಕ್ಷಿಸಿ, ಔಂಧಕ್ಯಾಂಪದಲ್ಲಿರುವ '**ಕಾರ್ಪೆಂಟರಿ ಕ್ಲಾಸು,**' ಹಾಗೂ **೨೯ ಉದ್ಯೋಗ ನಡೆಯುವ** ಒಂದು **ರಾಷ್ಟ್ರೀಯ ಆದರ್ಶ ಶಾಲೆ**ಗಳನ್ನು ನೋಡಿಕೊಂಡೆವು. ಇವುಗಳನ್ನು ತೋರಿಸಲು ನಮಗೊಬ್ಬ ಮಿತ್ರರಾದ ವಡಗೇರಿ ಎನ್.ಎಮ್. ಅವರು ಮಾರ್ಗದರ್ಶಕರಾಗಿದ್ದರು. ಅವರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸದೆ ಇದ್ದರೆ ತಪ್ಪಾದೀತು!

ಈ ಪ್ರಕಾರ ನಮ್ಮ ಸುಖದ ಶೈಕ್ಷಣಿಕ ಪ್ರವಾಸವನ್ನು ತೀರಿಸಿಕೊಂಡು ಭಾರವಾದ ಹೃದಯದಿಂದ ಮರಳಿ ಧಾರವಾಡಕ್ಕೆ ಬಂದು ಸೇರಿದೆವು.

ನಮ್ಮ ಮಾದರಿಯ ಶೈಕ್ಷಣಿಕ ಪ್ರವಾಸಕ್ಕೆ ಪ್ರೋತ್ಸಾಹನೆ ಕೊಟ್ಟ ಪೂಜ್ಯ ಪ್ರಿನ್ಸಿಪಾಲರಿಗೂ, ನೇತಾಜಿ ಶ್ರೀ ಹ.ಗ. ಜೋಶಿ ಗುರುಜಿಗೂ, ಇಲ್ಲಿಯ ವರೆಗೆ ಸಹಕಾರ, ಸ್ನೇಹ, ಬಂಧು ಪ್ರೇಮದಿಂದ ವರ್ತಿಸಿದ ಸರ್ವ ಸ್ನೇಹಿತರಿಗೂ, ಕನಸೆಶನ್ ತಿಕೀಟ ಕೊಟ್ಟ ರೇಲ್ವೆ ಕಂಪನಿಯವರಿಗೂ ಆನಂದದಿಂದ ಅಭಿವಂದನೆಗಳನ್ನು ಅರ್ಪಿಸಿ, ನನ್ನೀ ವರದಿಯನ್ನು ಮುಗಿಸುತ್ತೇನೆ.

ಜಯ ಕರ್ನಾಟಕ!

೧೯೫೧ರ ಮುಲ್ಕೀ ಪರೀಕ್ಷೆಯ ಪರಿಣಾಮ

೧೯೫೧ ಎಪ್ರಿಲ್ ತಿಂಗಳದ ಪ್ರಾಥಮಿಕ ಶಿಕ್ಷಣದಲ್ಲಿ ೧೯೫೧ ಜನೇವರಿ ತಿಂಗಳಲ್ಲಿ ಎಲ್ಲ ಕೇಂದ್ರಗಳಲ್ಲಿ ಜರುಗಿದ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀ-ಪರೀಕ್ಷೆಯ ಪರಿಣಾಮವು ಉತ್ತೀರ್ಣರಾದ ಉಮೇದವಾರರ ನಂಬರು, ಹೆಸರು ಪಡೆದ ಗುಣಗಳು, ಪಾಸಾದ ಐಚ್ಛಿಕ ವಿಷಯ ಇವುಗಳೊಂದಿಗೆ ಪ್ರಕಟವಾಗುವುದು. ಒಂದು ಪ್ರತಿಗೆ ಅಂಚೆ ವೆಚ್ಚ ಸೇರಿ ೮ ಆಣೆ. ಕೂಡಲೇ ಬರೆದು ತರಿಸಿಕೊಳ್ಳಿರಿ. ಮುಂಗಡವಾಗಿ ಹಣ ಕಳಿಸತಕ್ಕದ್ದು. ವ್ಹಿ. ಪಿ. ಮಾಡಲಾಗುವುದಿಲ್ಲ.

—ಪ್ರಧಾನ ಸಂಪಾದಕರು

ಕನ್ನಡ ಪ್ರಾಥಮಿಕ ಶಿಕ್ಷಣ, ಗಂಡುಮಕ್ಕಳ ಸರಕಾರಿ ಟ್ರೇನಿಂಗಕಾಲೇಜ, ಧಾರವಾಡ.

ಮೂಲ ಶಿಕ್ಷಣ ಪ್ರಾಯೋಗಿಕ ಕ್ಷೇತ್ರ ಧಾರವಾಡ

ಇಲ್ಲಿಯ ೧೯೫೦-೫೧ನೆಯ ಸಾಲಿನ ಮೊದಲನೆಯ ಷಣ್ಮಾಸದ ಮೂಲ ಉದ್ಯೋಗದ ವರದಿಯು

ಈ ಪ್ರಾಯೋಗಿಕ ಕ್ಷೇತ್ರದಲ್ಲಿ ಒಟ್ಟಿಗೆ ೧೭ ಬೇಸಿಕ್ ಶಾಲೆಗಳಿರುವವು. ಅವುಗಳ ವಿವರ ಇಂತಿದೆ:—

	ಕ. ಗಂ ಶಾಲೆಗಳು.	ಕ. ಹೆ. ಶಾಲೆಗಳು.	ಉ. ಗಂ. ಶಾಲೆಗಳು.	ಒಟ್ಟು
ಪೂರ್ಣ ಪ್ರಾಥಮಿಕ	೭	—	೧	೮
ಕೆಳಗಿನ ಪ್ರಾಥಮಿಕ	೫	೪	—	೯
ಒಟ್ಟು	೧೨	೪	೧	೧೭

ಈ ಕೆಳಗಿನ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಪೂರ್ಣ ಪ್ರಾಥಮಿಕ ಶಾಲೆಗಳ ೧ರಿಂದ ೪ ವರ್ಗಗಳಲ್ಲಿ ನೂಲುವದು ಮೂಲ ಉದ್ಯೋಗವಾಗಿದೆ. ೫ರಿಂದ ೭ನೆಯ ವರ್ಗಗಳ ವರೆಗೆ ಕೆಲವು ಶಾಲೆಗಳಲ್ಲಿ ನೇಯಿಗೆಯು ಮೂಲ ಉದ್ಯೋಗವಾಗಿಯೂ ಕೆಲವುಗಳಲ್ಲಿ ಒಕ್ಕಲುತನವು ಮೂಲ ಉದ್ಯೋಗವಾಗಿಯೂ ಚಟುವಟಿಕೆಗಳು ಸಾಗಿವೆ. ಈ ಪ್ರಕಾರ ನೇಯಿಗೆಯ ಕೆಲಸ ನಡೆವ ಶಾಲೆಗಳು ೫ ಹಾಗೂ ಒಕ್ಕಲುತನದ ಕೆಲಸ ನಡೆವ ಶಾಲೆಗಳು ೩ ಅವೆ. ಉರ್ದು ಗಂಡುಮಕ್ಕಳ ಸಾಲೆ ಒಂದೇ ಇದ್ದು, ಅದರಲ್ಲಿ ಮೇಲಿನ ವರ್ಗಗಳಲ್ಲಿ ನೇಯಿಗೆಯು ನಡೆಯುತ್ತಿದೆ.

ಈ ಶಾಲೆಗಳಲ್ಲಿ ೧೯೫೦ನೆಯ ಮಾರ್ಚದಿಂದ ೧೯೫೦ನೆಯ ಸಪ್ಟಂಬರ ಪೂರ್ಣ ೬ ತಿಂಗಳುಗಳ ವರೆಗೆ ನಡೆದ ಮೂಲ ಉದ್ಯೋಗದ ಸವಿಸ್ತಾರ ವರದಿ ಕೆಳಗಿನಂತಿದೆ—

ಕ್ರಿಯೆಗಳು	ವಿದ್ಯಾರ್ಥಿಗಳ ಸಂಖ್ಯೆ					
	ಪಟದ ಮೇಲೆ			ಸರಾಸರಿ		
	ಗಂ.	ಹೆ	ಒಟ್ಟು	ಗಂ	ಹೆ	ಒಟ್ಟು
ನೂಲುವದು.	೧೭೮೦	೧೨೮೩	೩೦೬೩	೯೦೨	೪೧೪	೧೩೧೬
ನೇಯುವದು.	೧೨೭	೧೨	೧೩೯	೯೭	೧೦	೧೦೭
ಒಕ್ಕಲುತನ	೮೮	೬	೯೪	೭೮	೫	೮೩
ಒಟ್ಟು	೧೯೯೫	೧೩೦೧	೩೨೯೬	೧೦೭೭	೪೨೯	೧೫೦೬

ನೂಲಲಿಕ್ಕೆ ಉಪಯೋಗಿಸಿದ ಹತ್ತಿ:- ೨೧೩೧ ಪೌಂ. ೩೬ ತೊ.
ಬೆಲೆ:- ೭೯ ರೂ. ೮ ಆ. ೦ ಪೈ.

ಹೊರಟ ಕಾಳು:—೧೫೬೬ ಪೌಂ. ೨೫ ತೊ.
ನೂಲು— ೪೨೪ ,, ೩೨....೪೩೨೮ ಗು. ೧೮....೧೦ ಸರಾಸರಿ ನಂಬರು.
ಹಾಳು— ೧೩೦ ,, ೩.......೮.೩%.... ಹಾಳಿನ ಪ್ರಮಾಣ.
ಶಿಲ್ಕು ಹಂಜಿ— ೧೦ ,, ೧೬

ಅಂತೂ ೨೧೩೧—೩೬
ಕಾಳಿನ ಬೆಲೆ— ೧೯೫ ರೂ. ೧೩ ಆ. ೩ ಪೈ.
ನೂಲಿನ ಬೆಲೆ— ೮೭೯ ೨ ೯
ಹಾಳಿನ ಬೆಲೆ— ೪ ೧ ೦
ಶಿಲ್ಕು ಹಂಜಿಯ ಬೆಲೆ— ೧೦ ೬ ೦

ಅಂತೂ ೧೦೮೯ ೭ ೦

ವರ್ಗವಾರ ನೂಲುವ ೧ ತಾಸಿನ ಸರಾಸರಿ ವೇಗವು ಇಂತಿದೆ.

ವರ್ಗಗಳು	ತಕಲಿಯಿಂದ	ರಾಟೆಯಿಂದ
೧	೧೪ ಸುತ್ತುಗಳು....	....
೨	೨೩ ,, ...	....
೩	೩೫ ,, ...	೫೧ ಸುತ್ತುಗಳು
೪	೩೬....	೭೧ ,,
೫	....	೮೬ ,,

ನೇಯಲು ಉಪಯೋಗಿಸಿದ ನೂಲು— ೨೦೮ ಪೌಂ. ೩೦ ತೊಲಿ
ಬೆಲೆ— ೪೧೭ ರೂ. ೮ ಆ. ೦ ಪೈ.

ಅರಿವೆ— ೧೬೮ ಪೌಂ. ೧೬ ತೊಲಿ
ಹಾಳು— ೪೦ ಪೌಂ. ೧೪ ..... ೧೯ % ಹಾಳಿನ ಪ್ರಮಾಣ.

ಅಂತೂ ೨೦೮ ಪೌಂ. ೩೦

ಅ. ನಂ.	ತಯಾರಾದ ಮಾಲಿನ ವಿವರ.	ಸಂಖ್ಯೆ	ಉದ್ದಳತೆ.	ಅಂದಾಜ ಬೆಲೆ. ರೂ.	ಆ.	ಪೈ.
೧	ಕೋಟಿಂಗ.	—	೨೯೭ ವಾರ.	೪೦೮	೬	೦
೨	ಟಾವೆಲ್ಲು.	೬	೩೦"×೨೪"	೭	೮	೦
೩	ಗುಡಾರಪಟ್ಟಿ.	೮	೧೨'×೧'	೧೬	೦	೦
೪	ಹಾಳು.	—	—	೧	೪	
	ಒಟ್ಟು.			೪೩೩	೨	೦

ಮೂಲಶಿಕ್ಷಣ ಪ್ರಾಯೋಗಿಕ ಕ್ಷೇತ್ರ ಧಾರವಾಡ

ಉಪ್ಪಿನಬೆಟಗೇರಿ ಕ. ಗಂ. ಶಾಲೆಯಲ್ಲಿ ತರತರದ ಡಿಝಾಯಿನುಗಳ ಕೋಟಿಂಗ ಅರಿವೆಯನ್ನು ತಯಾರಿಸಿದ್ದಾರೆ.

ಒಕ್ಕಲುತನದ ಬಗ್ಗೆ ವರುಷದ ಕೊನೆಗೆ ಆಯವ್ಯಯದ ಸಂಪೂರ್ಣ ಅಂಕಿಸಂಖ್ಯೆಗಳು ದೊರೆಯುವದರಿಂದ, ಆ ಕಾಲಕ್ಕೆ ಅವುಗಳನ್ನು ಕೊಡಲಾಗುವದು.

ಈ ವರುಷ ಸರಕಾರದವರು ೮ ಕೆಳಗಿನ ಪ್ರಾಥಮಿಕ, ೧ ಪೂರ್ಣ ಪ್ರಾಥಮಿಕ, ಹೀಗೆ ೯ ಶಾಲೆಗಳನ್ನು ಬೇಸಿಕ್ ಶಾಲೆಗಳನ್ನಾಗಿ ಪರಿವರ್ತಿಸಿ, ಅವುಗಳನ್ನು ಈ ಕ್ಷೇತ್ರಕ್ಕೆ ಜೋಡಿಸಿರುವರು. ಉಪಕರಣಗಳು ಇನ್ನೂ ಪೂರೈಸಲ್ಪಡದಿದ್ದುದರಿಂದ ಈ ಶಾಲೆಗಳಲ್ಲಿ ಮೂಲಉದ್ಯೋಗವು ಇನ್ನೂ ಆರಂಭವಾಗಿಲ್ಲ. ೧ ಮತ್ತು ೨ ನೆಯ ವರ್ಗಗಳಲ್ಲಿ ಮಾತ್ರ ಬೇಸಿಕ್ ಶಿಕ್ಷಣವು ಇತರ ಚಟುವಟಿಕೆಗಳ ಮುಖಾಂತರ ಸಾಗಿದೆ.

